ವಂದೇಮಾತರಂ

ಮಲ್ಲಿಕಾ

ವಂದೇಮಾತರಂ

ಮಲ್ಲಿಕಾ

ಜನನೀ ಜನ್ಮ ಭೂಮಿಶ್ಚ ।
ಸ್ವರ್ಗಾದಪಿ ಗರೀಯಸೀ ॥

Vandematharam in Kannada by 'Mallika'
Published by Lakshmi Prakashana,
No. 359, 14th Cross, Sadashivanagara,
Bangalore-560 080.

ಪ್ರಥಮ ಮುದ್ರಣ : ೧೯೭೨
ದ್ವಿತೀಯ ಮುದ್ರಣ : ೧೯೯೫

ಬೆಲೆ : ನೂರೈವತ್ತು ರೂಪಾಯಿ

ಮುದ್ರಕರು :
ನ್ಯೂ ಐಡಿಯಾಸ್
ನಂ. ೩೦, ೩ನೇ ಅಡ್ಡ ರಸ್ತೆ, ಬೈರಸಂದ್ರ ಮುಖ್ಯ ರಸ್ತೆ
ಜಯನಗರ ಒಂದನೆಯ ಪೂರ್ವ ವಿಭಾಗ
ಬೆಂಗಳೂರು–೫೬೦ ೦೧೧

"ಶ್ರೀಭಾರತಮಾತಾಪಾದಾರ್ಪಣಮಸ್ತು"

ವಂದೇಮಾತರಂ

ಮಲ್ಲಿಕಾ

ಲಕ್ಷ್ಮೀ ಪ್ರಕಾಶನ
ನಂ. 359, 14ನೇ ಅಡ್ಡ ರಸ್ತೆ, ಸದಾಶಿವನಗರ
ಬೆಂಗಳೂರು–560 080

ನಿವೇದನೆ

ಯಾವುದೇ ರಾಷ್ಟ್ರದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಬಯಸುವುದು ಪ್ರಜೆಗಳ ಉತ್ಕಟೇಚ್ಛೆ ಮಾತ್ರವಲ್ಲ. ಅದು ಪ್ರಜೆಗಳ ಹಕ್ಕು ಕೂಡ. ತಮ್ಮದೇ ಆದ ರಾಜ್ಯಕೋಶಕ್ಕೆ ತಮ್ಮದೇ ಆದ ಆಡಳಿತ ನಡೆಸಬೇಕೆಂಬುದು ನ್ಯಾಯವೂ ಕೂಡ. ಮನುಕುಲಕ್ಕೆ ಸ್ವಾತಂತ್ರ್ಯದ ಚಿಂತನೆ ಅಂದಿಂದಿಗೂ ಪ್ರಸ್ತುತ. ಮನುಷ್ಯ ಎಂದೂ ಪಂಜರದ ಪಕ್ಷಿಯಾಗಿ ಬಾಳಲಾರ. ಈಸಬೇಕು; ಇದ್ದು ಜೈಸಬೇಕು ಎಂಬುದು ರಕ್ತಕ್ಕಂಟಿದ ಪವಿತ್ರ ಜಾಡ್ಯ. ಪ್ರಜಾರಾಜ್ಯ ಮೂಡಬೇಕು; ಪ್ರಜೆಗಳಿಗೆ ಸ್ವಾತಂತ್ರ್ಯ ದೊರೆಯಬೇಕು; ತಂತಮ್ಮ ಮನಸೇಚ್ಛೆ ರಾಜ್ಯಾಡಳಿತ ನಡೆಯಬೇಕು ಎಂಬುದು ತಲೆಯಲ್ಲಿ ಸುಳಿದಾಗಲೇ ಕ್ರಾಂತಿ ಮನೋಭಾವ ಮೂಡಿದುದು ಸಹಜ. ಭಾರತದಲ್ಲಿ ಬ್ರಿಟಿಷರ ದಬ್ಬಾಳಿಕೆಯ ಹೀನ ಪ್ರವೃತ್ತಿ, ಕೀಳರಿಮೆಯ ಹಿಂಸ್ರಕ ಪ್ರವೃತ್ತಿಯಲ್ಲದೆ, ರಾಷ್ಟ್ರೀಯ ಸಂಪತ್ತಿನ ಲೂಟಿ ಇವುಗಳಿಂದ ಪ್ರಜೆಗಳು ಎಚ್ಚೆತ್ತರು. ಭಾರತ ರಾಷ್ಟ್ರ ಸ್ವಾತಂತ್ರ್ಯ ಚಳವಳಿಗೆ ನಾಂದಿ ಹಾಡಿತು. ಮಹಾತ್ಮಾ ಗಾಂಧೀಜಿಯ ಮುಂದಾಳ್ತನದಲ್ಲಿ ನಡೆದ ಬ್ರಿಟಿಷರೊಡನೆ ಸಂಧಾನ ಅನುಸಂಧಾನಗಳು ಏನೇನೂ ಫಲಿಸದೆ ಇದ್ದಾಗ ಸ್ವಾತಂತ್ರ್ಯ ಚಳವಳಿಗೆ ಕರೆ ಕೊಟ್ಟರು ಗಾಂಧೀಜಿ. ಆಗ ರಾಷ್ಟ್ರದಾದ್ಯಂತ ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿ ಆರಂಭವಾಯಿತು. ಕಾಯಿದೆ ಭಂಗ, ಅಸಹಕಾರ, ಸತ್ಯಾಗ್ರಹ ಇಂತಿಂತಹ ವಿಚಾರಗಳಲ್ಲಿ ತೊಡಗಿದ ಭಾರತೀಯ ಸತ್ಪ್ರಜೆಗಳನ್ನು ಮೂಲೋತ್ಪಾಟನ ಮಾಡುವ ಸಲುವಾಗಿ ಬ್ರಿಟಿಷರು ನಡೆಸಿದ ಗೋಲೀಬಾರಿಗೆ ಲೆಕ್ಕವೇ ಇಲ್ಲ. ಭಾರತ ಭೂಮಿಯೆಲ್ಲಾ ಕೆನ್ನೀರಿನಿಂದ ತೊಯ್ದು ಹೋಯಿತು! ನೇಣುಗಂಬಗಳಲ್ಲಿ ಶವಗಳು ನೇತಾಡಿದುವು. ಹೊಡೆತ ಬಡಿತ ಜೇಲು ನರಕ ಹಿಂಸೆಗಳು ವ್ಯಾಪಕವಾಗಿ ನಡೆದುವು ಅಧಿಕಾರ ಚಲಾಯಿಸಲು ಎಷ್ಟೆಷ್ಟು ಸಾಧ್ಯವೋ ಅಷ್ಟೆಲ್ಲಾ ನಡೆಸಿಯೂ ಸಾಧ್ಯವಾಗದಾಯಿತು. ಒಂದಕ್ಕೆ ಹತ್ತಾಗಿ ನೂರಾಗಿ

ಎದೆಗೊಟ್ಟು ವೀರಾವೇಶದಿಂದ ಮುಂದೆ ನಿಂತರು ಜನ. ಜೇಲುಗಳು ಭರಿಸಲಾರದೇ ಹೋದಾಗ ಬ್ರಿಟಿಷರು ದೂರದೂರದ ಕಾಡುಗಳಲ್ಲಿ ಜನರಾಶಿಯನ್ನು ಬಿಟ್ಟು ಬಂದರು. ರಾಷ್ಟ್ರದಲ್ಲಿ ಅರಾಜಕತೆ ತಾಂಡವವಾಡಿತು. ಬ್ರಿಟಿಷರು ಭಾರತದಂತಹ ಸನಾತನ ಧರ್ಮ ಚರಿತ್ರೆಯುಳ್ಳ ದೇಶವನ್ನು ಆಳುವುದೆಂದರೆ ಧಾರ್ಮಿಕ ಬೆಳವಣಿಗೆಗೆ ದಾರಿಯೇ ಇಲ್ಲ ಎಂಬುದು ನಗ್ನ ಸತ್ಯ. ಆಗಣ ಅಂತಹ ಚಳವಳಿಯ ಸಂದರ್ಭದ ಒಂದು ಚಿಕ್ಕ ಚಿತ್ರ ಈ 'ವಂದೇಮಾತರಂ' ಕಾದಂಬರಿಯ ಕಥಾನಕ. ಇದರ ಹುಟ್ಟುಕೊಡಗು. ರಾಜಕೀಯ ವ್ಯವಹಾರದೊಂದಿಗೆ ಸಾಮಾಜಿಕ ರೂಪುರೇಷೆಯೂ ಆಚಾರ ವ್ಯವಹಾರಗಳೂ ಹಾಸುಹೊಕ್ಕಾಗಿ ಹೆಣೆದುಕೊಂಡಿವೆ. ಆದ್ದರಿಂದ ಇದಕ್ಕೊಂದು ಸುಂದರವಾದ ಚೌಕಟ್ಟಿದೆ. ಭಾರತ ಸ್ವಾತಂತ್ರ್ಯ ಚಳವಳಿಯ ಮಹಾಸಾಗರದಲ್ಲಿ ಇದು ಒಂದು–ಒಂದೇ ಒಂದು ಹನಿ ಮಾತ್ರ. ಇದರಲ್ಲಿ ಬರಬಹುದಾದ ವ್ಯಕ್ತಿಗಳು ಮತ್ತು ಚಳವಳಿಯ ಪ್ರಕರಣ ಎಲ್ಲವೂ ಕಾಲ್ಪನಿಕವೇ ಹೊರತು ಸತ್ಯಚಿತ್ರವಲ್ಲ ಎಂದು ಅತ್ಯಂತ ಸಮರ್ಥನೀಯವಾಗಿ ಶೃತಪಡಿಸಿಕೊಳ್ಳುವುದು ನನ್ನ ಕರ್ತವ್ಯ.

ಇದರ ಪುನರ್ಮುದ್ರಣದಲ್ಲಿ ಕಾದಂಬರಿಯ ಸಾಹಿತ್ಯವನ್ನಾಗಲಿ ಕಥಾಚಿತ್ರವನ್ನಾಗಲೀ ವಿಚಾರ ಸಾಹಿತ್ಯವನ್ನಾಗಲೀ ಏನೇನೂ ಬದಲಾವಣೆ ಮಾಡುವ ಗೋಜಲಿಗೆ ಹೋಗಲಿಲ್ಲ. ಮೊದಲು ಹೇಗಿತ್ತೊ ಹಾಗೆಯೇ ಈಗಲೂ ಉಳಿದುಕೊಂಡು ಬಂದಿದೆ.

ಶ್ರೀ ಯುವನಾಮ ಸಂವತ್ಸರ
ಶ್ರಾವಣ ಅಷ್ಟಮಿ ಶುಕ್ರವಾರ

ಮಲ್ಲಿಕಾ
೪–೮–೧೯೭೫

ವಂದೇಮಾತರಂ

೧

....ಶುಭ್ರ ಶಾಂತ ಶ್ರಾಂತ ವಿಶ್ರಾಂತ ಮಧ್ಯಾಹ್ನ.

ಉತ್ಕಂಠಿತ ತಾಲಚಂಚು ಪಕ್ಷಿಗಳಿಂಡು ಅಲ್ಲಲ್ಲಿ ವಿಶ್ರಮಿಸಿಕೊಳ್ಳುತ್ತಿವೆ. ಆಗೊಮ್ಮೆ ಈಗೊಮ್ಮೆ ಕೊರಳೆತ್ತಿ ಹಾಡುತ್ತಿರುವುದೂ ಸಹ ಕೇಳಿಸುತ್ತದೆ....

ಅದು ಶ್ಲೋಕರೂಪೀ ಗತಜೀವನದ ದುರಂತವೋ ಅಥವಾ ನವಜೀವನದ ಸುಪ್ರಭಾತವೋ ಊಹಿಸುವುದು ಕಷ್ಟವೇ.

ರೈಲು ನಿಲ್ದಾಣದ ಸಾಲುಮರಗಳ ಹಸುರಿನಲ್ಲಿ ಮೇಳೈಸಿದ ವಿಧವಿಧ ಪಕ್ಷಿಗಳ ಕೊರಳುಲಿಯನ್ನು ಆಲೈಸುತ್ತ ವ್ಯಕ್ತಿ ನೈಮಿರೆತ. ಆಗ....ಬಹುಶಃ ಗತ ಜೀವನದ ದುರಂತವನ್ನೇ ವೀತರಾಗದಲ್ಲಿ ಹಾಡುತ್ತಿವೆ ಎಂಬ ಯೋಚನೆ ಮನದಲ್ಲಿ ಹೆಚ್ಚು ತೂಗುತ್ತಿತ್ತೇನೋ....ಅಂತಲೇ ತಾಯ್ನಾಡಿಗೆ ಕಾಲಿಟ್ಟಾಗ ಒದಗಬಹುದಾದ ಸಂತಸ ಧೂಳೀಪಟವಾಗಿ ಗಾಳಿಯಲ್ಲಿ ತೇಲಿಹೋಯಿತು. ಏನೋ ಒಂದು ರೀತಿಯ ನೀರಸ ಭಾವ, ಇನ್ನೇನೋ ಒಂದು ಬಗೆಯ ಉದಾಸೀನ. ಎಷ್ಟೋ ರೀತಿಯಲ್ಲಿ ತನಗೆ ತಾನೇ ಹುರಿದುಂಬಿಸಿಕೊಳ್ಳುತ್ತಾನೆ.... ತನಗೆ ತಾನೇ ಸಮಾಧಾನ ಹೇಳುತ್ತಾನೆ. ಹೆಜ್ಜೆಹೆಜ್ಜೆಗಳೂ ಯೋಧನ ಗತಿಯಲ್ಲೇ ಸಾಗುತ್ತವೆ. ಆದರೂ ಸಹ ಆ ಪ್ರಶಸ್ತವಾದ ಹೆಜ್ಜೆಗಳಲ್ಲಿ ಕ್ಲಿಷ್ಟಯುತವಾದ ಲಘುಕಂಪನ ಮೂಡುತ್ತಿರುವುದು ಗಮನಕ್ಕೆ ಬರುತಿತ್ತು. ಆದರೂ ವಿಧಿಯಿಲ್ಲ; ಅದು ಮಾನವ ಸಹಜ ಗುಣ.

ಹಾ....!

ನೀಳವಾದ ನಿಟ್ಟುಸಿರು ಹರಿದುಬಂತು.

ಒಂದಾನೊಂದು ಕಾಲದಲ್ಲಿ ಆತ ಸುಂದರ ವ್ಯಕ್ತಿಯಾಗಿದ್ದಿರಬಹುದು. ಈಗ ಆ ರೂಪು ಹುಟ್ಟಳಿದು ಹೋಗಿದೆ. ಮುಖದ ಬಲಭಾಗ ಜಜ್ಜಿ, ಹಣೆ ತಲೆ ಕಣ್ಣು ಕಪೋಲ ಮೊದಲ್ಗೊಂಡು ಅತ್ಯಂತ ವಿರೂಪವಾಗಿ ಬೋಂಬೆಯ ಮುಖ ಜಜ್ಜಿದಂತೆ ಜಜ್ಜಿ ಗುಣವಾದ ಗಾಯಗಳ ಭಯಂಕರ ಸ್ವರೂಪ ಗಂಟು ಗಟ್ಟಿ ವಿಕಾರವಾಗಿತ್ತು. ಮುಂದಿನ ಹಲ್ಲುಗಳೆರಡು ಹೊರಚಾಚಿ ತುಟಿಯನ್ನು

ಅತಿಕ್ರಮಿಸಿದ್ದುವು. 'ಕಾಲರ್ ಬೋನ್' ಮುರಿದುದರಿಂದಲೋ ಏನೋ, ಎಡೆ ಭುಜ ತೋಳುಗಳು ವಕ್ರವಕ್ರವಾಗಿದ್ದುವು. ಮುಖದಲ್ಲಿ ಅಲ್ಲಲ್ಲಿ ವಿಕೃತವಾದ ಕುರುಚಲು ಗಡ್ಡ ಮೀಸೆಗಳು....ಬಾಚದ ಕೂದಲು....ಮಾಸಿದ ಬಟ್ಟೆ....ಇನ್ನೂ ಏನೇನೋ....ವರ್ಣಿಸಲು ಬೇಸರವಾಗುವಷ್ಟು ವ್ಯಕ್ತಿಯ ದೈಹಿಕ ಸಂಪತ್ತು ಕ್ಷೀಣಿಸಿತ್ತು. ಮೈಯಲ್ಲಿ ಲವಲವಿಕೆ ಇಲ್ಲ; ಉತ್ಸಾಹವಿಲ್ಲ; ಆಸೆಯೂ ಇಲ್ಲ. ಮಂತ್ರಮುಗ್ಧನಂತೆ ಯಾಂತ್ರಿಕವಾಗಿ ನಡೆಯುತ್ತಾನೆ. ಗಾಢವಾಗಿ ಚಿಂತಿಸುತ್ತಾನೆ.

ಆದರೆ....

ಎದೆಯ ನೆಲೆಯಲ್ಲಿ ಕಳೆದುಳಿದ ಕಿಂಚಿತ್ ಸತ್ವ....ಅದಕ್ಕೆಂದೇ ಮುನ್ನಡೆವ ಇಚ್ಛಾಶಕ್ತಿ ಜೀವನದಲ್ಲಿ ಇದುವರೆಗೂ ಉಳಿದುಕೊಂಡಿದ್ದುವೋ ಏನೋ...

ದೀರ್ಘ ಪಯಣ ಮುಗಿಸಿ, ಬೆಂಗಳೂರನ್ನು ತಲುಪಿದಾಗ ಮಧ್ಯಾಹ್ನ ಎರಡು ಗಂಟೆ....ದಾಕ್ಷಿಣಾತ್ಯ ಊಟ ಪಾನಾದಿಗಳನ್ನು ಕಂಡುಂಡು ಅದೆಷ್ಟು ಕಾಲವಾಗಿತ್ತೋ. ಇಂದಾದರೂ ಒಂದು ಒಳ್ಳೆಯ ಊಟವನ್ನು ಮಾಡೋಣ ಎಂಬಷ್ಟು ಆಸೆಯ ನೀರು ಜಿಹ್ವೆಯಲ್ಲಿ ಮೊಳೆಯಿತು. ಆದರೆ ಒಂದು ದೋಸೆ ತಿನ್ನಬೇಕೆಂದರೂ ಕಿಸೆಯಲ್ಲಿ ಕಾಸುಗಳನ್ನು ಎಣಿಸಿ ನೋಡಬೇಕು. ಇನ್ನು ಊಟವೆಲ್ಲಿ ? ಪರದೇಶದಲ್ಲಿದ್ದಾಗ ಮನಸ್ಸು ಹಾತೊರೆಯುತಿದ್ದುದುಂಟು. ಆದರೆ ಅದನ್ನೀಗ ಖಾದ್ಯದಂಗಡಿಯಲ್ಲಿ ನೋಡುವುದಷ್ಟೆ, ಮುಟ್ಟುವಂತಿಲ್ಲ. ಶ್ರೀಮಂಗಲ ವಸುದೇವ್ ಇಲ್ಲೇ ಇದ್ದುದು ಗೊತ್ತು. ಆಗ ಬಹುಶಃ ಬಸವನಗುಡಿಯಲ್ಲಿದ್ದ ; ಈಗ ಎಲ್ಲಿದ್ದಾನೋ ದೇವರಿಗೇ ಗೊತ್ತು. ಅವನೇ ಏಕೆ? ಕೊಡಗರು ಲೆಕ್ಕವಿಲ್ಲದಷ್ಟು ಮಂದಿ ಇದ್ದಾರೆ, ಎಲ್ಲೆಲ್ಲಿದ್ದಾರೋ....ಅವರನ್ನೆಲ್ಲಾ ಹುಡುಕುತ್ತ ಹೊತ್ತುಕಳೆಯುವಷ್ಟು ವ್ಯವಧಾನವಂತೂ ಈಗ ಇಲ್ಲವೇ ಇಲ್ಲ. ಹುಡುಕುವ ವಿಚಾರ ಇರಲಿ, ಯಾರಾದರೂ ಎದುರಿಗೆ ಸಿಕ್ಕಿದರೆ....? ಛೀ! ಈ ಜೀವಕ್ಕೆ ಏನೆಲ್ಲ ಆಸೆ ಕೊಡುತ್ತಾನೆ ದೇವರು ? ಮುಖ್ಯವಾಗಿ ಸ್ವದೇಶ ತಲ್ಪಿದ್ದಾಯಿತು. ಇನ್ನು ಸ್ವಸ್ಥಳ ಮುಟ್ಟಿದರೆ ಸಾಕು. ಅನಂತರ ಜೀವನ ರೂಪಿಸುವುದು ಬಿಡುವುದು ಭಗವಂತನಿಗೆ ಸೇರಿದ್ದು. ನಾನಂತೂ

ಇನ್ನು ಯಾವುದನ್ನೂ ಕೈಮುಗಿದು ಬೇಡುವುದಿಲ್ಲ. ಆದದ್ದು ಆಗಲಿ.... ಮನೋರಾಜ್ಯದಲ್ಲಿ ಯೋಚನೆಯ ಝರಿ ಅವಿರಳವಾಗಿ ಹರಿಯುತ್ತಲಿತ್ತು.

ವ್ಯಕ್ತಿ ದಿಟ್ಟ ಹೆಜ್ಜೆ ಮುಂದಿಟ್ಟ.

ಮೈಯಲ್ಲಿ ಸೂಕ್ಷ್ಮಡಿಯ ಸೋಲಿದ್ದರೂ ಮನದಲ್ಲಿ ಆತುರ-ಆವೇಗಗಳಿದ್ದುವು. ಈ ದೇಹ ಬಿದ್ದು ಹೋಗುವುದರೊಳಗಾಗಿ ಗಮ್ಯಸ್ಥಾನವನ್ನು ಸೇರಬೇಕೆಂಬುದರ ಹೊರತು ಮತ್ತಾವುದೂ ಚಿತ್ತದ ಬಳಿ ಸುಳಿಯಗೊಡಿಸದಷ್ಟು ದೃಢತೆ ಬಲಿಯಿತು...ಕೈಯ್ಯಲ್ಲೊಂದು ಸಣ್ಣ ಚೀಲ. ಅದರಲ್ಲಿ ಒಂದು ಜೋಡಿ ಬಟ್ಟೆ, ಟವಲು ಇದ್ದಿರಬಹುದು. ಮೈಯ್ಯನ್ನಲಂಕರಿಸಿದ ಮಾಸಿದ ಉಡುಪು, ಕಾಲಿನಲ್ಲಿ ಜೀರ್ಣಿತ ಪಾದರಕ್ಷೆ, ತಲೆಯಲ್ಲಿ ಚಾಪೆಯ ಅಗಲವಾದ ವಿದೇಶೀ ಟೋಪಿ. ಇವಿಷ್ಟು ಆತನ ಅನುಪಮ ಸೊತ್ತು. ದೀರ್ಘ ಪಯಣ ಮುಖ ಮೈಗಳಿಗೆ ಧೂಳು ಮಸಿ ಮೆತ್ತಿ ರೈಲು ಪಯಣದ ಸುಖವನ್ನು ಸಾರಿ ಹೇಳುತಿತ್ತು. ನಿಲ್ದಾಣದಿಂದ ಪೆದ್ದಾರಿಯ ನೇರಕ್ಕೆ ಹೆಜ್ಜೆಗಳು ಅಭ್ಯಾಸ ಬಲದಿಂದ ನಡೆದುವು. ಕೈಯಲ್ಲಿ ಕಾಸಿದ್ದಿದ್ದರೆ ಗಾಡಿಯನ್ನು ಹಿಡಿಯಬಹುದಾಗಿತ್ತು. ಆದರೆ ಗತ್ಯಂತರವಿಲ್ಲ ...ಅಂದರೆ ನಡೆಯಲಾರ ಎಂದೇನಲ್ಲ. ಆ ಹಣವನ್ನು ಮುಂದಿನ ಪಯಣಕ್ಕಾಗಲೀ, ಊಟದ ವೆಚ್ಚಕ್ಕಾಗಲಿ ಬಳಸಬಹುದು ಎಂಬ ಯೋಚನೆ ...ಆಶಾವಾದಿತ್ವ.

ಒಂದು ಕಾಲದಲ್ಲಿ ಈ ದೇಶದಿಂದ ಕಾಲ್ತೆಗೆದಾಗ ಭಾರತ ಇನ್ನೂ ಸ್ವಾತಂತ್ರ್ಯ ಪಡೆದಿರಲಿಲ್ಲ. ರೋಗ ರುಜಿನ ಬಡತನಗಳ ಹಾವಳಿಯಲ್ಲಿ ಜೀರ್ಣವಿದೀರ್ಣವಾಗಿತ್ತು. ಆ ಚಿತ್ರ ಕಲ್ಪನೆಯನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತುತ ಪರಿಸ್ಥಿತಿಯನ್ನು ಪರಿಶೀಲಿಸಿದಾಗ ಬಹಳ ಮಟ್ಟಿಗೆ ಮಾರ್ಪಾಡಾಗಿದ್ದ ನಗರ ಉತ್ತರ ಹೇಳಿರಬಹುದು ..ಆಲೋಚನಾಶೀಲತೆಯಿಂದ ಸುತ್ತಮುತ್ತ ನಿಟ್ಟಿಸುತ್ತ ಮುಂದುವರಿದ. ಆಗ ಭಾರತಾದ್ಯಂತ ನಡೆದ ಸ್ವಾತಂತ್ರ್ಯ ಚಳವಳಿಯ ಚಿತ್ರ ಚಿತ್ತಭಿತ್ತಿಯಲ್ಲಿ ಚಲನಚಿತ್ರದಂತೆ ಸುಳಿಸುಳಿದಳಿಯಿತು. ದೇಶೋವಿಶಾಲವಾಗಿ ಓಡಾಡಿ, ಟ್ರೋಜನ್ ವೀರನಂತೆ ಶ್ರಮಿಸಿ, ಬಿಸಿನೆತ್ತರನ್ನು ಚೆಲ್ಲಿ ಸೂಸಿ ಜೈಲುಸೇರಿದ ಅವರ್ಣನೀಯವಾದ ಸ್ವಾನುಭವ ಸ್ಮೃತಿಪಥದಲ್ಲಿ ಸ್ಪಷ್ಟವಾಗಿ ತೇಲಿಹೋಯಿತು. ಆತ್ಮಶ್ರೀವಿದೂರರಾದ ಬ್ರಿಟಿಷರನ್ನು ತೊಲಗಿಸಿ ಅಖಂಡ ಭಾರತದ ಉಜ್ವಲ ಭವಿಷ್ಯಕ್ಕಾಗಿ ಗಾಂಧೀತತ್ವ

ಗಳನ್ನು ಅನುಷ್ಠಾನಕ್ಕೆ ತರುವಂತೆ ಶ್ರದ್ಧಾಪೂರ್ವಕವಾಗಿ ಪ್ರಚಾರ ಕೈಕೊಂಡು ತಾದಾತ್ಮ್ಯಭಾವಶ್ರೀಯಲ್ಲಿ ವಿಜೃಂಭಿಸುತಿದ್ದ ಆ ಅಮೋಘವಾದ ದಿನಗಳಲ್ಲಿ ಕೃತಕೃತ್ಯತೆಯೇ ಈಶ್ವರ ಸಾಕ್ಷಾತ್ಕಾರ! ಅಂದಮೇಲೆ ಕೌಮಾರ್ಯ ತಾರುಣ್ಯ ಗಳಲ್ಲಿದ್ದ ಆ ಹುರುಪು ಈಗಿಲ್ಲ ಎಂದೇನಿಲ್ಲ. ಈ ಜೀವನಕ್ಕೆ ಯಾವ ರೀತಿ ರೂಪು ಕೊಡಬೇಕೋ ಬಗೆಹರಿಯುತ್ತಿಲ್ಲ. ಮಾನವ ಜೀವಿತದ ಪರಮೋ ದ್ದೇಶವೇನೇ ಇದ್ದರೂ ಅದರೊಂದಿಗೆ ನಾನಾ ಕರ್ಮಕ್ರಿಯೆಗಳೂ ಇರುತ್ತವೆ. ನೀತಿ–ನಿಯಮಗಳೂ ಇರುತ್ತವೆ. ಅವುಗಳನ್ನು ಹರಿಹಾಯ್ದು ಹೊರತು ಶ್ರೀಚರಣಗಳ ನೆಲೆಯನ್ನು ತಲುಪುವುದು ಅಸಂಭಾವ್ಯ. ಅಖಂಡ ಮಾನವತೆ ಯಲ್ಲಿ ತತ್ತ್ವಶಃ ವಿಶ್ವಾಸವಿದ್ದುದರಿಂದ ಬದುಕು ಅನಿವಾರ್ಯ.

ವ್ಯಕ್ತಿ ಸುಖದುಃಖಗಳಲ್ಲಿ ತೇಲಿ ಬಿಸಿಯುಸಿರು ಬಿಟ್ಟ.

ಚಳವಳಿಯ ಕ್ಷೇತ್ರದಲ್ಲಿ ಕಂಠಪೂರ್ತಿ ಹಾಡುತಿದ್ದ ವಂಗಬಂಧುವಿನ ಸುಂದರ ಗೀತೆ ಸತ್ಯದ ವಿಶ್ವಾತ್ಮಕ ಭಾವವನ್ನು ಸಾಕ್ಷಾತ್ತಾಗಿ ಪ್ರದರ್ಶಿ ಸುತಿತ್ತು. ಅಂತರ್ನಿಹಿತ ಉಜ್ವಲ ತೇಜವನ್ನು ಬಹಿರಂಗಗೊಳಿಸುತಿತ್ತು. ಆತ್ಮಗತವಾಗಿ ನರನಾಡಿಗಳಲ್ಲಿ ರಕ್ತದೊಂದಿಗೆ ಪ್ರವಹಿಸುತಿತ್ತು.

ವಂದೇಮಾತರಂ
ಸುಜಲಾಂ ಸುಫಲಾಂ
ಮಲಯಜ ಶೀತಲಾಂ
ಸಸ್ಯ ಶ್ಯಾಮಲಾಂ ಮಾತರಂ ||

ಶುಭ್ರಜ್ಯೋತ್ಸ್ನಾ ಪುಲಕಿತ ಯಾಮಿನೀಂ
ಫುಲ್ಲಕುಸುಮಿತ ದ್ರುಮದಳ ಶೋಭಿನೀಂ
ಸುಹಾಸಿನೀಂ ಸುಮಧುರ ಭಾಷಿಣೀಂ
ಸುಖದಾಂ ವರದಾಂ ಮಾತರಂ ||

ಕೋಟಿ ಕೋಟಿ ಕಂಠ ಕಲಕಲ ನಿನಾದ ಕರಾಲೇ
ಕೋಟಿ ಕೋಟಿ ಭುಜೈರ್ಧೃತ–ಖರ ಕರವಾಲೇ

ಕೇ ಬೋಲೇ ಮಾ ತುಮಿ ಅಬಲೇ
ಬಹು ಬಲಧಾರಿಣೀಂ ನಮಾಮಿ ತಾರಿಣೀಂ
ರಿಪುದಲ ವಾರಣೀ ಮಾತರಂ ||

ತುಮಿ ವಿದ್ಯಾ ತುಮಿ ಧರ್ಮ
ತುಮಿ ಹೃದಿ ತುಮಿ ಮರ್ಮ
ತ್ವಂಹಿ ಪ್ರಾಣಾಃ ಶರೀರೇ
ಬಾಹುತೇ ತುಮಿ ಮಾ ಶಕ್ತಿ
ಹೃದಯೇ ತುಮಿ ಮಾ ಭಕ್ತಿ
ತೋಮಾರಯಿ ಪ್ರತಿಮಾ ಗಡಿ
ಮಂದಿರೇ ಮಂದಿರೇ ||

ತ್ವಂಹಿ ದುರ್ಗಾ ದಶಪ್ರಹರಣ ಧಾರಿಣೀ
ಕಮಲಾ ಕಮಲ ದಲ ವಿಹಾರಿಣೀ
ವಾಣೀ ವಿದ್ಯಾದಾಯಿನೀ
ನಮಾಮಿತ್ವಾಂ
ನಮಾಮಿ ಕಮಲಾಂ ಅಮಲಾಂ ಅತುಲಾಂ
ಸುಜಲಾಂ ಸುಫಲಾಂ ಮಾತರಂ ||

ಶ್ಯಾಮಲಾಂ ಸರಲಾಂ ಸುಸ್ಮಿತಾಂ ಭೂಷಿತಾಂ
ಧರಣೀಂ ಭರಣೀಂ ಮಾತರಂ ||

ಗೀತೆಯ ಅಮಲಿನಲ್ಲಿ ಮುನ್ನಡೆಯುವಾಗ ಕಾಣದೆ ಕಲ್ಲನ್ನೆಡವಿದ...
ಹಾ....!

ಆಗಲೂ ಹೀಗೆಯೇ ಎಡವಿ ಅರ್ಥಹೀನ ತಥ್ಯಹೀನ ವ್ಯವಹಾರದಲ್ಲಿ ಸಿಕ್ಕ ಬಂದೀಖಾನೆಯ ಅವಾಂಛಿತ ಅತಿಥಿಯಾಗಿ ನರಳಿ, ಗೆದ್ದ ವೈಭವದಲ್ಲಿ ಹೊರಬಿದ್ದು ಅನಂತರ ಅನುಭವಿಸಿದ ಏಕಾಂತ ದುಃಖ ಪ್ರಾಣಾಂತಕ ನೋವು ತನುಮನಗಳನ್ನು ಸದ್ದಿಲ್ಲದೆ ಹಿಂಡಿತು. ಹೃದಯವನ್ನು ಭೈರಿಗೆಯಿಂದ

ಕೊರೆದಂತಾಯಿತು. ತಲೆಬಾಗಿ ಯೋಧಶಕ್ತಿಯ ನೆರವಿನಿಂದ ಮುಂದು ವರಿದ. ತಾನೇತಾನಾಗಿ ಶಕ್ತಿಯನ್ನೆಲ್ಲ ಕ್ರೋಢೀಕರಿಸಿದಷ್ಟು ಪಟುತ್ವ... ಲವಲವಿಕೆ ಮೂಡಿತು.

ಆದರೆ...

ಈ ಜೀವನವೇ 'ಆದರೆ' ಮಯ....ಕ್ಷಣಭಂಗುರ.

ಇರಲಿ, ಸತ್ಯ-ಧರ್ಮಗಳು ಅಜರಾಮರ. ಅವುಗಳ ನೆಲೆಯನ್ನು ಕಂಡು ಕೊಳ್ಳುವುದರಲ್ಲಿ ಯಾವ ಅಭ್ಯಂತರವೂ ಇರಬಾರದು....ಯೋಚನೆ ಬಂದೊಡ ನೆಯೇ ಅಂತರ್ನಿಹಿತ ಸತ್ಯದ ಕಾವು ನರನಾಡಿಗಳಲ್ಲಿ ವಿದ್ಯುಚ್ಛಕ್ತಿಯ ಝರಿ ಪ್ರವಹಿಸಿದಂತೆ ದೇಹ ವ್ಯಾಪಕವಾಗಿ ಹರಿದು ಕಳೆದುಳಿದ ಕರ್ಮಾವಶೇಷ ವನ್ನು ಸುಡುತ್ತಿರುವಂತೆ ಭಾಸವಾಯಿತು. ಒಡನೆ ನಿಶ್ಶಬ್ದ ಪ್ರಕೃತಿಯ ಅಂತರಾಳದಲ್ಲಿ ಕೋಲಾಹಲಪೂರ್ಣ ವಿಶ್ವಸ್ತಭಾವ ಹೆಡೆಯೆತ್ತಿತು. ವ್ಯಕ್ತಿ ಹೆಜ್ಜೆಹೆಜ್ಜೆಯನ್ನೂ ವಿನಮ್ರಭಾವದಿಂದ ಮುಂದಿಟ್ಟು, ಬಸ್ಸುಗಳ ವೇಳಾ ಪಟ್ಟಿಯನ್ನೂ, ಟಿಕೆಟ್ಟುಗಳ ದರವನ್ನೂ ಕುರಿತು ಹಾದಿಗರನ್ನು ವಿಚಾರಿಸಿ ಕೊಂಡು ಮುಂದುವರಿದ. ದೃಷ್ಟಿ ಚೆಲ್ಲಿದೆಡೆಯಲ್ಲೆಲ್ಲಾ ಮಾತೃಭೂಮಿಯ ಶುಭಚರಣಗಳೇ ಕಣ್ಗೋಚರಿಸುತ್ತಿವೆ–ಹೃದಯ ಸಮುದ್ರ ಉಕ್ಕೇರುವಂತೆ.

ಪರಿಚಿತ....ಸುಪರಿಚಿತ...ಅಂದರೆ ಅದರಲ್ಲಿ ಅನುಮಾನವೇನೂ ಇಲ್ಲ.

....ತನ್ನ ದೇಶ....ತನ್ನ ನುಡಿ...ತನ್ನ ಸಂಸ್ಕೃತಿ....ಎಲ್ಲವೂ ತನ್ನವೇ. ಮುಲು ಮುಲು ಹರಿದಾಡುವ ಲಕ್ಷಾಂತರ ಮಂದಿ ಮಾಗಧರ ಸೇನೆಯೂ ತನ್ನದೇ. ನಿತ್ಯ ಕರ್ಮದಲ್ಲಿ ವಿಲುಪ್ತವಾಗಿ, ಮಾತುಕತೆಯಲ್ಲಿ ಮೈಮರೆತು, ಸೋಮಾರಿತನದ ಲಾಂಛನವನ್ನು ಹೊತ್ತು ಅಭಿರಾಮ ಭಂಗಿಯಲ್ಲಿ ದರ್ಶಿತ ರಾದ ಜನಬಾಹುಳ್ಯದ ಮೇಲೆ ಒಕ್ಕಣ್ಣು ಮತ್ತೆ ಮತ್ತೆ ಹರಿದಾಡಿತು. ಇಪ್ಪ ತ್ತನೇ ಶತಮಾನದ ಒಂದು ಉತ್ತಮವಾದ ದಶಕ–ದಾಸ್ಯವನ್ನು ಕಿತ್ತೊಗೆದ ಘಟಕ ಯಾವ ಘನವಿಶೇಷವನ್ನೂ ಪ್ರದರ್ಶಿಸಲಿಲ್ಲವೇನೋ....ಅಥವಾ ಆದರ ಹುರುಳನ್ನು ಶಾಂತಿ–ಸಮಾಧಾನಗಳಿಂದ ಮೆಲ್ಲುವಷ್ಟು ಸಹನೆ ತನಗಿರ ಲಿಲ್ಲವೋ....ಊಹಿಸುವುದೂ ಕಷ್ಟ.

ಹೊಟ್ಟೆಯಲ್ಲಿ ಹಸಿವು ಕಾಡುತಿತ್ತು.

ಒಂದು ರೂಪಾಯಿ ತೆತ್ತಾದರೂ ಪುಷ್ಕಳವಾಗಿ ಊಟ ಮಾಡಿಯೇ ತೀರಬೇಕೆಂಬ ನಿಲುವಿಗೆ ಶರಣಾಗಿ ಹಾದಿಯ ಪಕ್ಕದಲ್ಲಿದ್ದ ಸಣ್ಣ ಹೋಟೆಲೊಂದಕ್ಕೆ ನುಗ್ಗಿದ. ಕೆಂಪು ವರ್ಣ, ಜಪಾನೀ ಟೋಪಿ ಮತ್ತು ಉಡುಪುಗಳು ಆತನನ್ನು ಜಪಾನೀಯನೆಂದೇ ಪರಿಚಯ ಮಾಡಿಕೊಟ್ಟಿರಬಹುದು.... ಗಿರಾಕಿಯ ಸ್ಥಿತಿಗತಿಯನ್ನು ಅತ್ಯಂತ ವಿಚಿತ್ರವಾಗಿ ಗಮನಿಸುತ್ತ ಮಾಣಿ ಇಂಗ್ಲಿಷಿನಲ್ಲಿ ಕೇಳಿದ.

"ಏನು ಬೇಕು ? ಏನು ತರಲಿ ?"

"ಊಟ....ಒಂದೂಟ ಎಷ್ಟಾಗುತ್ತೆ ?"

"ಒಂದುವರೆ ರೂಪಾಯಿ !"

ವ್ಯಕ್ತಿ ಒಂದು ಘಳಿಗೆ ಚಿಂತಿತನಾದ. ಸ್ವಾತಂತ್ರ್ಯಪೂರ್ವ ಹನ್ನೆರಡಾಣೆಗೆ ದೊರೆಯುತಿದ್ದ ಊಟ ಈಗ ಅದರ ಎರಡರಷ್ಟು ಏರಿತ್ತು. ಒಡನೆ ಕಾತರ ಚಿತ್ತಶ್ರೀ ಪ್ರಶ್ನೆ ಹಾಕಿತು "ಪ್ರಗತಿಯಲ್ಲಿ ಇದೊಂದು ಮೆಟ್ಟಲಿರಬಹುದೇ ?"

ಏನು ಹೇಳಲು ತೋಚದಿದ್ದರೂ ಒಣಗಿದ ತುಟಿಗಳಲ್ಲಿ ಊಹಿಸಲೂ ಆಗದಂತಹ ಶುಷ್ಕವಾದ ಕಿರುನಗೆ ಅರಳಿ ಮಾಯವಾಯಿತು. ನಾಲಿಗೆ ನುಡಿಯಲಾರದೆ ನುಡಿಯಿತು.

"ನನ್ನ ಬಳಿ ಒಂದು ರೂಪಾಯಿ ಇದೆ. ಅದಕ್ಕೆಷ್ಟು ಊಟ ಬರುತ್ತೋ ಅಷ್ಟೇ ಕೊಟ್ಟುಬಿಡು."

ಬಲಮುಗ್ಗುಲಿನ ಹಲ್ಲುಗಳುದುರಿ ಮುಖದ ಅವಯವಗಳು ಮುದ್ದೆಗಟ್ಟಿ ಬಾಯಿ ಬಚ್ಚಾಗಿದ್ದುದರಿಂದ ಮಾತು ಸ್ಪಷ್ಟವಾಗಿ ಕೇಳಿಸುತ್ತಿರಲಿಲ್ಲ. ಮಾಣಿ ಗಂಭೀರವಾಗಿ ಪುನಃ ಕೇಳಿದ "ಏನು.. ಏನು ?"

ಅದೇ ನುಡಿ ವಿಜಾತೀಯವಾದ ದನಿಯಲ್ಲಿ ಹೊಮ್ಮಿತು.

ಅಂತಃಕರಣ ಮಂಜಿನಂತೆ ಕರಗಿತೋ ಏನೋ. ಮಾಣಿ ಕರುಣ ಭಾವದಿಂದ ಒಂದು ಪ್ಲೇಟ್ ಊಟವನ್ನು ತಂದು ಮುಂದಿಟ್ಟ. ಆ ಮುಹೂರ್ತದಲ್ಲಿ ಆದ ಸಂತಸ ಶಕ್ತಿಯ ಕಣಕ್ಕೆ ಪರಿಪೋಷಿತವಾಗಿರಲೇಬೇಕು. ತುತ್ತು ತುತ್ತನ್ನೂ ಪರಮಾನಂದದಿಂದ ಉಂಡ ನಂತರ ತಟ್ಟೆಯನ್ನು ಬಳಿದು ನೆಕ್ಕುವುದರಲ್ಲೂ ಆತನಿಗೆ ಲಜ್ಜೆ ಮೂಡಲಿಲ್ಲ. ಅನಂತರ ಕೈತೊಳೆದು ಹೊರಬಿದ್ದ.

ಸ್ವಸ್ಥಳಕ್ಕೆ ಹೋಗಿ ಹೆಂಡತಿ ಮಕ್ಕಳ ಭೇಟಿ ಮಾಡಿದರೆ ಸಾಕು ; ಅನಂತರ ಏನಾದರೂ ಸರಿಯೆ. ನನಗೆ ಈ ಜನ್ಮದಲ್ಲಿ ಇನ್ನಾವ ಆಸೆಯೂ ಉಳಿಯಲಿಲ್ಲ, ಎಂಬ ಉದ್ಗಾರ ಹೊರಬಿತ್ತು.

ಆಲೋಚನಾ ಜಗತ್ತಿನಲ್ಲಿ ತರಂಗರಂಗವಾಗಿ ಸುಳಿದಾಡುವ ಯೋಜನೆ ಯಲೆಗಳನ್ನು ಅವಲೋಕಿಸುತ್ತ ಮೂರ್ತಿಮತ್ತಾಗಿ ನಡೆಯುಹತ್ತಿದ. ನೆತ್ತಿಯ ಮೇಲೆ ಬಿಸಿಲು ಕಾಯುತಿತ್ತು. ಗಿಡಮರಗಳನ್ನು ಆಶ್ರಯಿಸಿದ ಶುಕ–ಪಿಕ–ಕಲವಿಂಕಗಳು ಅಲ್ಲಲ್ಲೆ ಮೈಯೊಡರಿ ದಣಿವಾರಿಸಿಕೊಳ್ಳುತಿದ್ದುವು. ಕಾಗೆಗಳ ಸೊಲ್ಲು ಅಡಗಿದಂತಿತ್ತು. ಮಧ್ಯಾಹ್ನ ನಗರಿ ಸ್ತಬ್ಧವಾಗಿತ್ತು. ಜನ ಜಗತ್ತಿನ ನೂತನ–ವಿನೂತನ ವಿಡಂಬನೆಗಳನ್ನು ಸೂಕ್ಷ್ಮವಾಗಿ ಗಮನಿಸುತಿತ್ತು–ಅವಿಶ್ರಾಂತ ಚಿತ್ತ.

ಬಸ್ಸಿನ ನಿಲ್ದಾಣವನ್ನು ಮುಟ್ಟಿದಾಗ ಹೊತ್ತು ಮೂರರ ಅಂಚನ್ನು ದಾಟಿತು. ಅಲ್ಲಿ ಕಲೆತಿದ್ದ ಜನಜಂಗುಳಿಯಲ್ಲಿ ಒಂದೆರಡು ಕೊಡವ ಸಂಸಾರಗಳು ಅನಿರೀಕ್ಷಿತವಾಗಿ ಕಣ್ಣಿಗೆ ಬಿದ್ದುವು. ಆ ವಿಶಿಷ್ಟ ಉಡಿಗೆಯ ಮೋಹಕತೆಯನ್ನು ಕಂಡು ಅದೆಷ್ಟು ವರ್ಷಗಳಾಗಿದ್ದುವೋ.... ನೋಡಿದೊಡನೆ ಎದೆಯು ಕಡಲು ಉತ್ಸಾಹದಿಂದ ಉಕ್ಕೇರಿ ಬಂತು. ಮಾತಾಡಿಸಲೇ ಎಂಬಷ್ಟು ತವಕ, ಪರಿಚಿತರೇ ಎಂಬಷ್ಟು ಕುತೂಹಲ. ಆದರೆ, ಯಾರೋ ಏನೋ....

ಟಿಕೆಟ್ ಕೊಂಡುಕೊಳ್ಳುವುದರಲ್ಲಿ ಸ್ವಲ್ಪ ಸಮಯ ಕಳೆಯಿತು. ಅಲ್ಲಿಂದ ಬಂದು ಬಸ್ಸಿಗೆ ಕೂಡುವಷ್ಟರಲ್ಲಿ ಕೆಲವು ಬಸ್ಸುಗಳು ಹೊರಟಿದ್ದುವು. ಮೊದಲು ಕಣ್ಣಿಗೆ ಬಿದ್ದ ಕೊಡವ ಸಂಸಾರಗಳೂ ಕಣ್ಮರೆಯಾಗಿದ್ದುವು. ಹಣೆಯ ಮೇಲೆ ಮೂಡಿದ ತುಂತುರು ತುಂತುರು ಹನಿ ಧಾರೆಧಾರೆಯಾಗಿಳಿಯಿತು. ಕೊಳಕು ಕವಿದ ಕರವಸ್ತ್ರದಿಂದ ತೀಡಿಕೊಂಡ. ಬಸ್ಸು ಹೊರಟಿತು. ಪಯಣಿಗರ ಕೌಟುಂಬಿಕ ದೃಶ್ಯ-ಮಾತುಕತೆ–ಸಹಕಾರ ಗತಜೀವನದ ಸುಂದರ ದೃಶ್ಯಗಳನ್ನು ಸ್ಮೃತಿಪಟಲದ ಮೇಲೆ ಮೂಡಿಸಿ, ಮೈಯಲ್ಲಿ ಬೆವರು ಬಸಿಯಿತು.

ಈ ಕಡೆಯಿಂದ ಆ ಕಡೆಯವರೆಗೆ ನಗರದರ್ಶನ ಮಾಡಿಸಿದ ಬಸ್ಸು ಮೈಸೂರಿನ ಹೆದ್ದಾರಿಯನ್ನು ಹಿಡಿದು ಭೀಮವೇಗದಿಂದ ಓಡತೊಡಗಿತು-ಕಬ್ಬಿಣದ ಮಹಾಕಾಯ ಗಡಗಡನೆ ನಡುಗುವಂತೆ.

ವ್ಯಕ್ತಿ ಹಾಯಾಗಿ ಕಾಲು ಚಾಚಿದ.

ಸಹ ಪಯಣಿಗರಿಗೆ ಆತನ ವಿಕೃತರೂಪು ಒಂದು ವಿಚಿತ್ರ ವಸ್ತುವಿನಂತೆ ಪ್ರೇಕ್ಷಣೀಯವಾಗಿ ಇತ್ತಲೇ ದೃಷ್ಟಿಯನ್ನು ಹೊರಳಿಸತೊಡಗಿದರು. ಕೆಲವೊಮ್ಮೆ ನೇರವಾಗಿ, ಕೆಲವೊಮ್ಮೆ ಕಳ್ಳಗತಿಯಲ್ಲಿ, ಅಲ್ಲಲ್ಲಿ ಮಧ್ಯೆಮಧ್ಯೆ ಪೊದ್ಮಿದ ಮಾತಿನ ಚುಚ್ಚುಬಾಣಗಳಿಂದ ಮನಸ್ಸು ವಿಲಿವಿಲಿಗುಟ್ಟಿತು. ಮುಖವನ್ನು ಕಿಟಕಿಯ ಕಡೆ ತಿರುವಿದ.

...ಮೈಲಿ ಮೈಲಿಗಳು ಕರಗಿದುವು. ಊರು ಕೇರಿಗಳು ಕಳೆದುವು.

...ಅದೇ ಹಾದಿ, ಅದೇ ರೂಪುರೇಷೆ.

....ಇಕ್ಕೆಲಗಳಲ್ಲಿ ಕಣ್ಗೋಚರಿಸುವ ಪ್ರಕೃತಿಯ ವೈಭವ.

ಹಾದಿಯ ಸನಿಹದಲ್ಲಿ ಕಾವೇರಿ ಕಾಲುವೆಯ ಅಚ್ಚುಕಟ್ಟು ಹಸುರು ಹೊತ್ತಿತ್ತು. ಜನಗತಿಯ ಮನಗತಿಯನ್ನು ನಿರ್ಲಕ್ಷಿಸಿ ಹೊರ ಪ್ರಪಂಚದಲ್ಲಿ ದೃಷ್ಟಿಯನ್ನು ಚೆಲ್ಲಿಕೊಟ್ಟ. ಒಕ್ಕಣ್ಣು ದಣಿಯುವವರೆಗೂ ನೋಡಿತು ನೋಟ. ಬಸ್ಸಿನ ರೂಕ್ಷ ಸದ್ದು ಕರ್ಣಪಟಲಗಳ ಮೇಲೆ ಲತ್ತೆ ಹೊಡೆದಂತೆ ಧುಮುಕಿ ರೋಮರೋಮಗಳಲ್ಲಿ ಝುಂಕೃತವಾಗುತಿತ್ತು.

ಮೈಲಿಮೈಲಿಗೂ ಸ್ವಸ್ಥಾನ ಹತ್ತಿರವಾದಷ್ಟೂ ಕಾತರ-ಕುತೂಹಲಗಳಿಂದ ಕಿಕ್ಕಿರಿ ತುಂಬಿದ ಮನಃಪ್ರಾಣಗಳು ಬಾಲ್ಯ-ಕೌಮಾರ್ಯ-ತಾರುಣ್ಯ ಸಾಮಾಜಿಕ-ರಾಜಕೀಯ ಕ್ಷೇತ್ರಗಳಲ್ಲಿ ಹಕ್ಕಿಯಂತೆ ಹಾರಾಡಿದುವು. ನಾಡಿನ ವಿಶಿಷ್ಟ ಜೀವನದಲ್ಲಿ ಭುಗಿಲೇಳುವ ಸಾಮಾಜಿಕ ಸಮಸ್ಯೆಗಳು, ಒಳಜಗಳ, ಗುದ್ದಾಟ, ಕೊಲೆಗಳಲ್ಲಿ ಪವ್ಯವಸಾಸ ಹೊಂದುತ್ತಿದ್ದುದುಂಟು... ಎಷ್ಟೋ ವೇಳೆ ಎಲ್ಲಾ ಸಮಸ್ಯೆಗಳಲ್ಲೂ ತಲೆ ಹಾಕಿದ್ದ. ಜನ ಒಳ್ಳೆಯ ಬೇಟೆಗಾರರು. ಮದಿರೆ–ಮಾಂಸ ಪುಷ್ಟೀಕರಿಸಿದ ಬಿಸಿ ನೆತ್ತರು. ಕತ್ತಿ–ಕೋವಿ ಹಿಡಿದ ಹಸ್ತಗಳು. ಅಂದಮೇಲೆ ಸಮಯ ಸಂದರ್ಭಗಳಲ್ಲಿ, ಕೈಕೈ ಮಿಲಾಯಿಸುವುದರಲ್ಲಿ ವಿಶೇಷವೇನಿಲ್ಲ. ಎಲ್ಲಾ ಸಾಮಾಜಿಕ ಕ್ಷೇತ್ರಗಳಿಗಿಂತ ಕೊಂಚ ಹಸಿ–ಬಿಸಿ ಹೆಚ್ಚು ಎಂದೇ ಹೇಳಬಹುದು. ಒಮ್ಮೆ ಕೋಪದ್ರವ ಸಿಡಿದರೆ ಇನ್ನೊಮ್ಮೆ ಕಾರುಣ್ಯದ್ರವ ಜಿನುಗುತ್ತದೆ.

ನಾಡಿನ ಕರೆಗೆ ಓಗೊಟ್ಟು ವಿದ್ಯಾಕ್ಷೇತ್ರಕ್ಕೆ ಶರಣು ಹೊಡೆದು ಪದಾರ್ಪಣೆ ಮಾಡಿದ್ದು ಸಾರ್ವಜನಿಕ ಕ್ಷೇತ್ರ...... ಆ ದೇಶೋವಿಶಾಲವಾದ ಕ್ಷೇತ್ರದಲ್ಲಿ ಎಷ್ಟೇ ಹಾರಾಡಿದರೂ, ಎಷ್ಟೇ ಮಾಡಿದರೂ ಮುಗಿಯದ ಬದುಕು....

ಶರೀರದ ಸಮಸ್ಯೆ. ಆ ಹೊಡೆತ-ಬಡಿತ, ಅನ್ನ ನೀರಿಲ್ಲದೆ ಅಲೆತ, ಜೈಲಿನ ನರಕವಾಸ, ಕುಟುಂಬಿಗರ ಬವಣೆ, ನೀಗಲಾಗದ ಬಡತನ, ತುಂಬಲಾಗದ ನಷ್ಟ, ತಾಳಲಾಗದ ಪರಿತಾಪ, ಕೊನೆಗಾಣದ ಜೀವನ ಸಮಸ್ಯೆ .. ತದನಂತರ ಮಿಲಿಟರಿ ಕ್ಷೇತ್ರ. ಅನಂತರ....ಅನಂತರ ದಾರುಣ ಪ್ರಸಂಗ....ದುಃಖಮಯ ಜೀವನ ..

ಒಂದೇ ? ಎರಡೇ ? ನೂರಾರು ಚಿತ್ರಗಳು ಸ್ಮೃತಿಪಥದಲ್ಲಿ ಸ್ಫುಟವಾಗಿ ಚಲನಚಿತ್ರದಂತೆ ಸುಳಿ ಸುಳಿದಳಿದುವು. ವ್ಯಕ್ತಿ ಮಂತ್ರಿತ ಫಣಿಯಂತೆ ಕುಳಿತ. ಬಸ್ಸು ಒಂದೇಸಮನೆ ಓಡುತಿತ್ತು. ಪ್ರಕೃತಿಯ ಸೀಮಂತರೇಖೆಯ ಮೇಲೆ ಸಣ್ಣ ಕೀಟ ಹರಿದಂತೆ. ಇಕ್ಕೆಲಗಳಲ್ಲಿ ಪ್ರಕೃತಿಯ ಸುರಸುಂದರ ಸೊಬಗು ಲಗುಬಗನೆ ಹಿಂದೋಡುತಿತ್ತು.

ಅಂದು ಬಿಟ್ಟ ನಾಡು ಹೇಗಿತ್ತೋ ಇಂದೂ ಹಾಗೆಯೇ ಇದೆ.

ಅದೇ ನಾಡು, ಅದೇ ವನದೇಶ, ಅದೇ ಊರು ಕೇರಿ, ಅದೇ ರಸ್ತೆ, ದೃಷ್ಟಿಕೋನವನ್ನು ಮೀರಿದ ಅದೇ ಸುಂದರ ಸಾಮ್ರಾಜ್ಯ ! ಒಡನೆ ಭಾವೋನ್ಮಾದದಿಂದ ಹೃದಯದ ಹೊಂಗಿಂಡಿಯು ತುಂಬಿ ಹರಿದು ಶರೀರ ಸಿಡಿದೊಡೆಯುವಂತೆ ತೋರಿತು. ನಾಡಿನ–ಅಲ್ಲ–ಜನಜೀವನದ ಧರ್ಮನಿರೂಪಣೆಯ "ದೇಶ ಕೆಟ್ಟ್ ಪಾಟ್" ಇದ್ದಕ್ಕಿದ್ದಂತೆಯೇ ಮನದಲ್ಲಿ ಗುಣಗುಣಿಸತೊಡಗಿತು. ಮೆಲ್ಲನೆ ತನ್ನಲ್ಲಿಯೇ ಹಾಡಿಕೊಂಡ.

"ಪೊಮ್ಮಾಲೆ ಕೊಡವುಲ್ ಎನ್ನತ್ತ ಫೆಲೆಯಾಪ
ದೇಶಕೋರ್ ಮಾದೇವಿ ಕಾವೇರಮ್ಮ ಮಾತಾಯಿ
ನಾಡ್‌ಕೋರ್ ಮಾದೇವ ಊರ್‌ಕೋರ್ ಪೊವ್ವದಿ
ಕೇರಿಕೋರ್ ಅಯ್ಯಪ್ಪ, ಒಕ್ಕಕೋರ್ ಕಾರಣ
ಓಡೆಕೋರ್ ನಾಥನೂ, ಓಣಿಕೋರ್ ಪೂದನೂ ಇನ್ನತ್ತ ನೆಲೆಯಾಪ"

ಅರೆರೆ !

ಎಂತಹ ಆಶ್ಚರ್ಯ ?

ಧರ್ಮಾದೇಶದ ಒಂದಕ್ಷರವೂ ಮರೆಯಲಿಲ್ಲವಲ್ಲಾ ? ಈ ನಡುವೆ ಒಮ್ಮೆಯೂ ಜ್ಞಾಪಿಸಿಕೊಂಡಿರಲಿಲ್ಲ. ಆದರೂ ಅಲೆಯಲೆಯಾಗಿ ಅಕ್ಷರ ಅಕ್ಷರಗಳೂ ಚಾಚೂ ತಪ್ಪದೆ ಸ್ಮೃತಿಪಥದಲ್ಲಿ ತೇಲಿ ಬಂದವು. ಅಂದಿಂದಿಗೂ

ತಮ್ಮವರ ಸಂಪರ್ಕವೇ ಇಲ್ಲ...ವಿದೇಶೀ ಮಲಯುದಲ್ಲಿ ನರಳುತ್ತ ಕಳೆದ ಘೋರ ದಿನಗಳಲ್ಲಿ 'ದೇಶ ಕೆಟ್ಟ್ಸ್ಪಾಟ್' ಎಲ್ಲಿ ಅಡಗಿತ್ತೋ, ಅದು ತನ್ನಲ್ಲಿ ಉಳಿದಿದೆ ಎಂಬ ಭಾವನೆಯೂ ಇರಲಿಲ್ಲ. ಅಂದಮೇಲೆ ಅದರ ಉಳಿವು ನಿಜ ವಾಗಿಯೂ ಅತ್ಯಾಶ್ಚರ್ಯಕರ....ಅಷ್ಟೇ ಅಲ್ಲ, ಸಂತೋಷಕರವೂ ಹೌದು. ಸುಂದರ ಪದಪದಗಳೂ ಸ್ಮರಣೆಯ ಹಾದಿಯಲ್ಲಿ ಮತ್ತೆ ಸುಳಿ ಸುತ್ತ ತೊಡಗಿದುವು. ವ್ಯಕ್ತಿ ಭಾವನಾಲೋಕದಲ್ಲಿ ಮುಳುಗಿ ಮೈಮರೆತ, ಹೃದಯ ವ್ಯಾಪ್ತಿಗೆ ಮೀರಿ ಮಿಡಿಯುತಿತ್ತು. ಬಸ್ಸು ವನ್ಯಪ್ರದೇಶ ತಂಪಿನೊಳಗೆ ನುಗ್ಗಿತು. ಸಂಪಿಗೆಯ ಕಂಪಿನಂತೆ ತಂಪು ತನುಮನಗಳನ್ನು ಮುತ್ತಿತು. ಏನೋ ಒಂದು ಬಗೆಯ ಆನಂದ....ಇನ್ನೇನೋ ಒಂದು ಬಗೆಯ ಕಾತರ... ಮತ್ತೇನೋ ಒಂದು ಬಗೆಯ ಪರಿತಾಪ....ಅನುಭವಿಸಲಾಗದ ಸಂಕಟ... ಭರಿಸಲಾಗದು ದುಃಖ....ಬದುಕಿಗಿಂತ ಕಾವೇರಿಯ ಒಡಲು ತಂಪನ್ನೀಯು ತ್ತದೆ. ಹೋಗಿ ಮುಳುಗಿ ಬಿಡಲೇ ಎನ್ನುವ ಅಂತಃಪ್ರಜ್ಞೆ...ಆದರೆ ಇಲ್ಲಿಯ ವರೆಗೆ ಬಂದಾಗಿದೆ, ಇನ್ನೇಕೆ ಆತುರ? ಎಂಬ ವಿವೇಕಜನ್ಯವಾದ ನೀತಿ...

ಭಾವವಿಭಾವಗಳಲ್ಲಿ ಹೃದಯ ದಣಿಯಿತು.

ಶಾಂತ-ಸುಂದರ ವನ್ಯಪ್ರದೇಶ....ತಂಪೆರೆವ ವೀಚಿವಾಯು....ಕಾವೇ ರಿಯ ಮಧುರ ಸಲಿಲಗಾನ...ಎಲ್ಲವನ್ನೂ ಕೋರೈಸುವಂತೆ ತೂರಿ ಬಸ್ಸು ನಿಂತಿತು.

ಓಹ್!

ದೂರದಲ್ಲಿ ದೃಷ್ಟಿಯ ನೇರಕ್ಕೆ ಕೊಡಗಿನ ಟೋಲ್‌ಗೇಟು ಕಾಣಿಸಿತು.

೨

ಬಾಗಂಡ....ಕಾರಿಯಪ್ಪ....

ಕಾರಿಯಪ್ಪ....ಬಾಗಂಡ....

ಆ ಎರಡೂ ಹೆಸರುಗಳಲ್ಲಿ ಅಷ್ಟೊಂದು ಆತ್ಮೀಯತೆ ಇದೆ. ಬಾಗಂಡ ಎಂದರೆ ಸಾಕು; ಕಾರಿಯಪ್ಪ ಕಣ್ಮುಂದೆ ಸುಳಿಯುತ್ತಾನೆ. ಕಾರಿಯಪ್ಪ ಎಂದರೂ ಸಾಕು ಬಾಗಂಡ ಕಣ್ಮುಂದೆ ನಲಿಯುತ್ತದೆ. ಆ ಮನೆ ಇರುವುದು ಒಂದು ಎತ್ತರ ಪ್ರದೇಶದಲ್ಲಿ; ಮನೆಗೆ ಹೋಗಬೇಕಾದರೆ ಸಾಲುಮೆಟ್ಟಿಲುಗಳನ್ನು ಹತ್ತಿಯೇ ಹೋಗಬೇಕು. ಎರಡು ತಲೆಮಾರುಗಳ ಹಿಂದಿನ ಮನೆ. ಸುತ್ತಮುತ್ತ ವಿಶಾಲವಾದ ಅಂಗಳ. ಅಂಗಳದ ಬದಿಯಲ್ಲಿ ಹೆಮ್ಮರಗಳು ಕೆಲವು. ಮೊದಲು ಮೇಲಕ್ಕೆ ಹತ್ತಿ ಬರಲು ಕಾಲು ಹಾದಿ ಮಾತ್ರ ಇತ್ತು. ಕಾರಿಯಪ್ಪ ಪ್ರವರ್ಧಮಾನಕ್ಕೆ ಬಂದಮೇಲೆ ಆ ಹಾದಿಗೆ ಕಾಡು ಕಲ್ಲುಗಳನ್ನು ಜೋಡಿಸಿ ಮೆಟ್ಟಿಲು ಕಟ್ಟಿ, ಎರಡೂ ಬದಿಗೆ ಕ್ರೋಟನ್ ಗಿಡಗಳನ್ನು ನೆಟ್ಟು ಅಲಂಕಾರ ಮಾಡಿದ. ಆ ಹಾದಿಗೆ 'ಕೆಳಮುಟ್ಟ' ಎಂದು ಹೆಸರು. ಅದು ಯಾವ ಕಾರಣದಿಂದ ಬಂದಿತೋ ನಾವರಿಯೆವು. ಮನೆ ಇರುವುದು ವನ್ಯ ಪ್ರದೇಶದಲ್ಲಿ; ಅಲ್ಲಿಂದ ಸುಮಾರು ಒಂದೆರಡು ಫರ್ಲಾಂಗುಗಳ ಅಂತರದಲ್ಲಿ ಶಾಲೆ, ಸೊಸೈಟಿ, ಅಂಗಡಿ, ಒಂದು ಸಣ್ಣ ಆಸ್ಪತ್ರೆ, ಪೋಸ್ಟಾಫೀಸು ಸಹ ಇವೆ. ಇನ್ನೂ ಸ್ವಲ್ಪ ಮೇಲಕ್ಕೆ 'ಮಾದೇವ'ನ ದೇವಸ್ಥಾನ.

ಬಾಗಂಡ ಕಾರಿಯಪ್ಪನ ಮನೆತನ ಸಾರೋದ್ಧಾರವಾಗಿ ಬಡತನದಿಂದಲೇ ನಡೆದು ಬಂದಿರುವುದರಿಂದ ಅದು ಅವನಿಗೇನೂ ಹೆಚ್ಚಲ್ಲ. ಎರಡು ಮೂರು ತಲೆಮಾರುಗಳಿಂದ ಆ ಮನೆತನಕ್ಕೆ ಒಬ್ಬನೇ ಮಗ ಜನಿಸಿರುವುದರಿಂದ ಕುಟುಂಬ ಅಂದಿಂದಿಗೂ ದಾಯಾದಿ ಮತ್ಸರ ಕಂಡರಿಯದು...ಕೋರ್ಟು ವ್ಯವಹಾರಗಳಿಂದಲೂ ಮುಕ್ತ.

ನಾಲ್ಕು ವರ್ಷಗಳ ಹಿಂದೆ ಶಾಲೆಯ ಹಂತವನ್ನು ಮುಗಿಸಿ ಕಾರಿಯಪ್ಪ ಕಾಲೇಜು ಸೇರುತ್ತೇನೆಂದಾಗ ತಂದೆ–ತಿಮ್ಮಯ್ಯನಿಗೆ ಹಣದ ಕೊರತೆ ಆತ್ಮದ

ಹಿಂಸೆಯಾಗಿ ತೋರಿತು. ಏನು ಹೇಳಬೇಕೋ ಹೊಳೆಯುಲಿಲ್ಲ. ಒಂದು ಘಳಿಗೆ ಯೋಚಿಸಿದ "ಹಣದ ವ್ಯವಸ್ಥೆ ಹೇಗೆ ? ನಾವಿರುವ ಸ್ಥಿತಿಯಲ್ಲಿ ಹಣ ಹೊಂದಿಸಿಕೊಳ್ಳುವುದು ತುಂಬ ಕಷ್ಟ" ಅಂದ....ಕಂಠಸ್ವರವನ್ನು ಎಳೆದು ಜಗ್ಗುತಿತ್ತು ಜೀವನ ಪರಿಸ್ಥಿತಿ.

"ಹೋಗಲಿ ಬಿಡಿ; ಮಿಲಿಟರಿಗೆ ಸೇರಿಬಿಡುವೆ. ಇಲ್ಲಿದ್ದು ಮಾಡುವುದೇನು ? ಸ್ವಲ್ಪ ಜಮೀನು ಇಬ್ಬರ ದುಡಿಮೆಗೆ ಸಾಲುವುದಿಲ್ಲ."

ತಿಮ್ಮಯ್ಯ ಹೌಹಾರಿ ಅಂದ "ಇದ್ದಿದ್ದನ್ನು ಹಂಚಿ ಉಣ್ಣೋಣ. ಇದ್ದ ಒಬ್ಬ ಮಗನನ್ನು ಮಿಲಿಟರಿಗೆ ಕಳುಹಿಸಿ ನಾನೇನು ಮಾಡಲಿ ಇಲ್ಲಿ ?"

ತಾಯಿಯೂ ಹಾಗೇ ಅಂದಳು.

ಮಾತಾಪಿತೃಗಳಿಗೆ ತಾನು ಏಕಮಾತ್ರ ಪುತ್ರನಾದುದರಿಂದ ಅವನಿಗೂ ಅವರ ಸಂಕಷ್ಟದ ಅರಿವು ಮೂಡಿ ಮನಸ್ಸು ಹಿಂತೆಗೆಯಿತು. ಯಾವುದಾದರೂ ವ್ಯಾಪಾರಕ್ಷೇತ್ರಕ್ಕಿಳಿಯೋಣವೇ ಅಥವಾ ಇನ್ನಿಷ್ಟು ಜಮೀನು ಕೊಂಡುಕೊಳ್ಳೋಣವೇ ಎಂದರೂ ಎಲ್ಲಕ್ಕೂ ಆ ಹಣವೇ ಪ್ರಮುಖ ಪಾತ್ರ. ಯೋಚಿಸಿ ಯೋಚಿಸಿ ಸುಮ್ಮನಾದ. ಪರಿಸ್ಥಿತಿಗೆ ಹೊಂದಿಕೊಳ್ಳುವ ದಿವ್ಯಚೇತನ ಆತನನ್ನು ಬಡತನದಲ್ಲಿಯೇ ಮುಂದುವರಿಸಿತು. ಬಹುಶಃ ಅದೇ ವರ್ಷ ಅವನು ಆ ಸಾಲುಮೆಟ್ಟಿಲುಗಳನ್ನು ಕಟ್ಟಿ 'ಸೈ' ಎನಿಸಿಕೊಂಡಿದ್ದಿರಬಹುದು.

ಜೀವನ...ಚೇತನ...

ಚೇತನ....ಜೀವನ....

ಹೇಗೆ ಎರಡಕ್ಕೂ ಅನುಪಮ ಹೊಂದಾಣಿಕೆ ಇದೆಯೋ ಹಾಗೆಯೇ ಕೊಡಗಿಗೂ ಕೆಲವು ವಿಶಿಷ್ಟ ಸಂಪ್ರದಾಯಗಳಿಗೂ ತುಂಡರಿಯದ ಹೊಂದಾಣಿಕೆ ಇದೆ. ಆ ಸಂಪ್ರದಾಯದ ಚೌಕಟ್ಟಿನಲ್ಲೀ ಬಹಳ ಮಟ್ಟಿಗೆ ಅವರ ಬದುಕು ಸಾಗುತ್ತದೆ. ಅಂತಹ ವಿಶಿಷ್ಟ ಸಂಪ್ರದಾಯಕ್ಕೆ ತಿಮ್ಮಯ್ಯನ ಕುಟುಂಬ ಹೊರತೇನೂ ಅಲ್ಲ.

ಗೋಧೂಳೀ ಸಮಯ.

ವನ್ಯಪ್ರದೇಶದ ಶಾಂತ ವಾತಾವರಣದಲ್ಲಿ ಶೋಭಿತ ಗೃಹವಲಯ... ಕರ್ತವ್ಯಪರಾಯಣೆಯಾದ ಗೃಹಿಣಿ ಅಲ್ಲಿಂದಿಲ್ಲಿಗೆ ಓಡಾಡುತ್ತಿದ್ದಾಳೆ. ಆಕೆಯ

ಅಭಿಶಸ್ತ ಹೆಜ್ಜೆಗಳ ಗತಿ ಗಮನೀಯವಾಗಿತ್ತು. ಹಿಂಭಾಗದಲ್ಲಿ ಅನುಸರಿಸುವ ಸೀರೆಯ ನಿರಿ....ತುಂಬು ತೋಳಿನ ಬಿಳಿಯ ರವಿಕೆ....ಕೊರಳ ಸುತ್ತ ಕರಿ ಮಣಿ...ತಿಲಕಯುಕ್ತ ಹಣೆಯ ಮೇಲೆ ಹರಿದಾಡುವ ಅಲೆಗೂದಲು, ಒಟ್ಟಿನಲ್ಲಿ ಆಕೆಯ ವ್ಯಕ್ತಿತ್ವ ದರ್ಶನೀಯವಾದುದು.

'ಕನ್ನಿಕೋಂಬರೆ'ಯಲ್ಲಿ ಉರಿಯುತ್ತಿದ್ದ ಸಂಧ್ಯಾದೀಪದ ಬತ್ತಿಯಲ್ಲಿ 'ಕುಡಿ' ಕಟ್ಟಿದ್ದುದ್ದರಿಂದ ಬೆಳಕು ಮಂದವಾಗಿತ್ತು. ಕಡ್ಡಿಯಿಂದ ಕುಡಿಯನ್ನು ಕೆಡವಿ ಜ್ಯೋತಿಯನ್ನು ಉಜ್ವಲಗೊಳಿಸಿದಳಾಕೆ. ಸುಂದರ ಮುಖಬಿಂಬ ಸಂಧ್ಯಾದೀಪ್ತಿಯಲ್ಲಿ ಚಂದ್ರಚಂದ್ರಿಕೆಯಂತೆ ಬೆಳಗಿತು. ನೀಲಾಂಜನಕ್ಕೆ ಇನ್ನಿಷ್ಟು ತೈಲವನ್ನೀಡಿ ಆಕೆ ದಿನಚರಿಯಲ್ಲಿ ನಿಮಗ್ನಳಾದಳು.

ಗೋಡೆಯ ಮೇಲಿನ ಗಡಿಯಾರ ಏಳು ಬಾರಿ ಬಡಿದು ಹೊತ್ತು ಉರುಳುತ್ತಿರುವುದನ್ನು ಸೂಚಿಸಿತು. ತಿಮ್ಮಯ್ಯ ಆರಾಮವಾಗಿ ಯಾವುದೋ ವೃತ್ತಪತ್ರಿಕೆಯನ್ನು ತಿರಿವಿಹಾಕುತ್ತಿದ್ದ. ವಿಷಯಗಳ ಕೋಟಿಯಲ್ಲಿ ಮನಸ್ಸು ಮುಳುಗಿತು. ಭಾರತಾದ್ಯಂತ ಜ್ವಲಿಸುವ ನಿರ್ಧೂಮ ಅಗ್ನಿಜ್ವಾಲೆ...... ಯಾವುದೋ ಒಂದು ಬಗೆಯ ಕ್ರಮರಹಿತ ಕೂಟ....ಅಸಹಕಾರ ಆಂದೋಳನ ...ಕ್ರಾಂತಿಭಾವನೆ...ಸ್ವರಾಜ್ಯದ ಗೀಳು....ಬ್ರಿಟಿಷರ ಬಗ್ಗೆ ತಿರಸ್ಕಾರ.... ವಿದ್ರೋಹಿಗಳೆಂದು ಸಾರುವಿಕೆ. ಅನ್ಯಾಯ ಅನಾಚಾರ ಅತ್ಯಾಚಾರಗಳಿಂದ ಕೂಡಿದ ಮೋಹ ಪ್ರಲೋಭನೆಗಳು....ಇವು ಯಾವ ದಿಶೆಯಲ್ಲಿ ಹುಟ್ಟಿ ಯಾವ ದಿಶೆಗೆ ಹಬ್ಬುತ್ತಿವೆಯೋ ದೇವರಿಗೇ ಗೊತ್ತು. ಪರಿಸ್ಥಿತಿ ಹೀಗಿರುವಾಗ ಬ್ರಿಟಿಷರಾದರೂ ಸುಮ್ಮನೆ ಬಿಟ್ಟಾರೆಯೆ ? ಕಂಡಲ್ಲಿ ಗುಂಡಿಟ್ಟಾರು...! ಜೀವಕ್ಕೆ ಜೀವ ನಷ್ಟ ಅಷ್ಟೆ ; ಮತ್ತೇನಿಲ್ಲ...ತಿಮ್ಮಯ್ಯ ಯೋಚಿಸುತ್ತ ನಿಟ್ಟುಸಿರು ಬಿಟ್ಟ.

ತಂದೆಯ ಪತ್ರಿಕಾವಲೋಕನವನ್ನು ಕಂಡು ಕಾರಿಯಪ್ಪ ಅಲ್ಲಿಗೇ ಬಂದು ಕುಳಿತ. ಪ್ರಸ್ತುತ ಪರಿಸ್ಥಿತಿ ತನುಮನಗಳನ್ನು ಉತ್ತೇಜಿತಗೊಳಿಸಿತ್ತು. ಮಗನ ಸಾಮಿಪ್ಯ ಹಿತವನ್ನುಣ್ಣಿಸಿದರೂ ಅಸಮಾಧಾನದಿಂದ ನುಡಿಯನ್ನು ಹೊರಹಾಕಿದ "ನೋಡಿದೆಯಾ, ನಮ್ಮವರ ಕೂಟ ?"

ಭಾವೋದ್ವೇಗದಿಂದ ಕಣ್ಣುಗಳು ಮಿಂಚಿದುವು. ತರುಣರಕ್ತ ನರನಾಡಿಗಳಲ್ಲಿ ಹರಿದಾಡಿತು. ಕಾರಿಯಪ್ಪ ಮಾತಾಡದೆ ತುಟಿಗಳಲ್ಲಿ ಮಂದಹಾಸ

ನೂಸಿದ. ಮಗನ ರೀತಿ ಅಸಮಾಧಾನ ಮೂಡಿಸಿತು. ತಿಮ್ಮಯ್ಯ ಪತ್ರಿಕೆಯ ಹಾಳೆಯನ್ನು ಮಗುಚಿ ಹಾಕುತ್ತ ಅಂದ, "ಎಷ್ಟೆಂದರೂ ಈ ಬಿಳೀ ಜನರ ಮುಂದೆ ನಮ್ಮ ಹೋರಾಟ ಸಲ್ಲ. ಮುಖ್ಯವಾಗಿ ಇದರ ಕೆಟ್ಟ ಪರಿಣಾಮ ಬೀಳುವುದೆಲ್ಲ ನಮ್ಮ ಮೇಲೆಯೇ. ನಮ್ಮ ಆಸ್ತಿಪಾಸ್ತಿಗಳಿಗೆ ನಷ್ಟ. ನಮ್ಮ ಮಕ್ಕಳು ಮರಿಗೆ ಸಮಗಂಡ. ಹಿಂದೆ ಮುಂದೆ ಆಲೋಚಿಸದೆ ದುಡುಕುವುದು ಸರಿಯಲ್ಲ ಜನರನ್ನು ಪುಂಡಾಟಿಕೆಗೆ ಪ್ರಚೋದಿಸುವುದು ಸುಲಭ. ಅಂತಲೇ ಈ ಜನ ಮುನ್ನುಗ್ಗುತ್ತಿದ್ದಾರೆ!"

"ಸ್ವರಾಜ್ಯ ಸ್ವದೇಶಗಳ ಬೊಬ್ಬೆ ಎಲ್ಲರ ಕಿವಿಗೂ ಸ್ವಲ್ಪ ಮುಟ್ಟಲಿ ಬಿಡಿ. ಜನ ಮೂಕವೇದನೆಯಲ್ಲಿ ದಿನಗಳೆದರೆ ಏನು ಮಾಡಿದ ಹಾಗಾಯಿತು? ಎಂದೆಂದಿಗೂ ಹೀಗೆಯೇ ತಾನೆ?" ಕಾರಿಯಪ್ಪ ತನ್ನ ಅಭಿಪ್ರಾಯವನ್ನು ಇನ್ನೊಂದು ರೀತಿಯಲ್ಲಿ ಮುಂದಿಟ್ಟ.

"ನಿನಗೊತ್ತಿಲ್ಲ; ಈ ಉದ್ವೇಗ-ಉದ್ರೇಕ ದೇಶಕ್ಕೆ ಕಿಚ್ಚು ಹಚ್ಚುತ್ತವೆ. ಅನಂತರ ಏನು ಸಿಕ್ಕೀತು ನಮಗೆ? ಅಷ್ಟೂ ಯೋಚಿಸಬಾರದೇ?"

"ಹಾಗೆಂದು ಕೂತುಕೊಳ್ಳುವುದೂ ಸರಿಯಲ್ಲ. ಏನೋ ಮಾಡುತಿದ್ದಾರೆ. ಇನ್ನೇನೋ ಆಗುತ್ತಿದೆ ನಿಜ; ಆದರೆ ಪರಿಣಾಮವನ್ನು ಕಾದು ನೋಡ ಬಹುದಲ್ಲ?"

"ಛೀಃ! ಅಶುಭ ಕಲ್ಪನೆ!"

ಕಾರಿಯಪ್ಪ ಮಾತಾಡಲಿಲ್ಲ.

ತಿಮ್ಮಯ್ಯ ಮಗನಕಡೆ ನಿಟ್ಟಿಸಿದ....ಅವನ ಪ್ರತಿಕ್ರಿಯೆಯೇನೆಂಬು ದನ್ನು ತಿಳಿಯುವ ಆವಶ್ಯಕತೆಯಿತ್ತು. ಅದರಿಂದ ಯುವಜನ ಅಭಿಪ್ರಾಯ ವ್ಯಕ್ತವಾಗುತ್ತದೆ. ಆದರೆ ಆತನ ಶೀತಲಮೌನ ರುದ್ರಗಂಭೀರ ಗತಿಯಲ್ಲಿ ಆರೋಗ್ಯ, ಯೌವನ, ಏಕಾಗ್ರಚಿತ್ತ, ನಿರ್ಮಲಸ್ವಭಾವ ಇವುಗಳ ಮೇಲೆ ಹರಿ ದಾಡುತಿತ್ತು. ನೋಡಿ, ಒಂದೆರಡು ಘಳಿಗೆ ಕಾದು ಪುನಃ ದೃಷ್ಟಿಯನ್ನು ಪತ್ರಿಕೆ ಯಮೇಲೆ ಹೊರಳಿಸಿ "ನೋಡು ನಮ್ಮವರ ಗೊಂದಲ ಭಾರತದಲ್ಲಷ್ಟೇ ಅಲ್ಲ. ಪರದೇಶಗಳಲ್ಲೂ ನಡೆಯುತ್ತಿದೆ. ಭಾರತದ ಸಂಸ್ಕೃತಿಗೆ ಅಪಕೀರ್ತಿಯಂತೆ!"

ತಂದೆಯ ವಿಚಾರ ಸರಣಿ ಕಾರಿಯಪ್ಪನಿಗೆ ಚೆನ್ನಾಗಿ ಗೊತ್ತು. ಈ ಜಗ ತ್ತಿನಲ್ಲಿ ಎಲ್ಲಿ ಏನು ನಡೆದರೂ ಅದರ ಭವಿಷ್ಯತ್ತು ಅನಿವಾರ್ಯ ಎಂಬುದನ್ನು

ಆತನ ಸೂಕ್ಷ್ಮಬುದ್ಧಿ ಮೊದಲೇ ಗ್ರಹಿಸಿಬಿಡುತ್ತದೆ; ಆದರೆ ಹಿಡಿಯುವುದು ಸ್ವಲ್ಪ ಹೆಚ್ಚು ಕಡಿಮೆ ವಾಮಮಾರ್ಗವೇ. ಅದನ್ನು ಅಲ್ಲಗಳೆಯುವುದಾಗಲೀ, ಹಾಗಲ್ಲ ಹೀಗೆ ಎಂದು ಬಣ್ಣಿಸುವುದಾಗಲೀ ವ್ಯರ್ಥವೆಂಬುದು ಗೊತ್ತು. ಸ್ವಲ್ಪ ಹೊತ್ತು ಸುಮ್ಮನಿದ್ದು ತಂದೆಯ ಉತ್ಸುಕ ನಿರೀಕ್ಷಣೆಗಾಗಿಯೇ ಎಂಬಂತೆ ನುಡಿದ ಕಾರಿಯಪ್ಪ "ನಮ್ಮವರು ಅಷ್ಟಾದರೂ ಉತ್ಸಾಹ ತೋರದಿದ್ದರೆ .. ಮೌನವು ಸಮ್ಮತಿ ಸೂಚಕವಾಗುತ್ತದೆ ಅಪ್ಪಯ್ಯಾ!"

"ಎಲ್ಲಾ ವ್ಯರ್ಥ....ವೃಥಾ ಗೊಂದಲ .. ಸಿಂಹವನ್ನು ನೋಡಿ ಶ್ವಾನವು ಬೊಗಳಿದರೆ ಏನು ಫಲ?"

ಕಾರಿಯಪ್ಪನಿಗೆ ಇನ್ನು ಮಾತನಾಡುವುದು ಇಷ್ಟವಾಗಲಿಲ್ಲ. ಪತ್ರಿಕೆಯನ್ನು ತೆಗೆದುಕೊಂಡು ಮುಖಪುಟದ ಮೇಲೆ ಕಣ್ಣಾಡಿಸಿದ. ಸಿಹಿ-ಕಹಿಗಳ ಜೋಡಣೆಯೇ ಅಲ್ಲಿತ್ತು. ದೇಶವಿದೇಶಗಳ ಸುದ್ದಿಸಾರವೆಲ್ಲ ಮನಃಪ್ರಾಣಗಳನ್ನು ಪುಟಿದೇಳಿಸುವಂತಿವೆ. ದಕ್ಷಿಣ ಆಫ್ರಿಕಾದಲ್ಲಿ ಭಾರತೀಯ ವಿದ್ಯಾರ್ಥಿಗಳಿಬ್ಬರನ್ನು ಹೆಡೆಮುರಿಗಟ್ಟಿ ಚೆನ್ನಾಗಿ ಥಳಿಸಿದುದನ್ನು ಓದಿ ತಿಮ್ಮಯ್ಯ ಮೊದಲು ವ್ಯಾಖ್ಯಾನ ಮಾಡಿದ್ದು. ಆತನಿಗೆ ಬಿಳಿಯರೆಂದರೆ ಎಲ್ಲಿಲ್ಲದ ಭಯ ಭಕ್ತಿ; ಕೊಡಗಿನ ರೆಸಿಡೆಂಟ್ ಬಗ್ಗೆ ತುಂಬ ಗೌರವ. ಅವನ ನಡೆ-ನುಡಿ, ಶಿಸ್ತು-ದಕ್ಷತೆಗಳನ್ನು ಹೃತ್ಪೂರ್ವಕವಾಗಿ ಮೆಚ್ಚಿಕೊಂಡಿರುವುದು ಗೊತ್ತು. ತಿಳಿದೂ ತಿಳಿದೂ ಮೊಂಡುವಾದ ಹೂಡುವುದು ಸರಿದೋರಲಿಲ್ಲ. ಅಂತಲೇ ಕಾರಿಯಪ್ಪ ಸುಮ್ಮನಾದ. ತಿಮ್ಮಯ್ಯ ಉತ್ಸುಕತೆಯಿಂದ ಹೇಳಿದ "ನಮ್ಮಲ್ಲಿ ಎಷ್ಟು ಮಂದಿ ವಿದೇಶೀಯ ರಾಜರಿಲ್ಲ? ಈ ರಾಜತ್ವದಿಂದ ಒಂದಾದರೂ ಘನ ಸರಕಾರ ಮೂಡಿತೇ? ಬಿಳಿಯರು ಬಂದಮೇಲೆ ಸರಕಾರಕ್ಕೆ ರೂಪು ಕೊಡುತ್ತಿದ್ದಾರೆ. ಕಾನೂನು ಕಟ್ಟಳೆಗಳು ಚೆನ್ನಾಗಿ ಹುಟ್ಟಿಕೊಂಡಿವೆ. ಮುಂದೆ ಮುಂದೆ ಸುಭದ್ರ ಸರಕಾರಗಳು ಹುಟ್ಟಿಕೊಳ್ಳುತ್ತವೆ. ಈಗಾಗಲೇ ಅವಸರಪಟ್ಟರೆ ಕಲಿತವರನ್ನು ನೋಡಿ ಕಲಿತುಕೊಳ್ಳುವ ಸುಯೋಗವೂ ಸಹ ತಪ್ಪಿ ಹೋಗುತ್ತದೆ."

ಸಮೀಪದ ದೇವಾಲಯದಿಂದ ಗಂಟೆಯ ಘನಘೋಷ ಕೇಳಿಬರಹತ್ತಿತು. ಸಸ್ಯಶ್ಯಾಮಲೆಯಾದ ಕೊಡಗಿನ ಫಲಭರಿತ ಭೂಮಿ ಝಂಕೃತವಾಗುವಂತೆ. ದಿನಾಂತಕಾಲೀನ ಪ್ರಚಂಡ ಮಾರುತನ ಉನ್ಮತ್ತ ವೇಗಕ್ಕೆ ದೇಗುಲದ ಬಾಗಿಲ

ಕಿರುಗಂಟೆಗಳು ಝಣಝಣಿಸುವುದು ಸಹ ಒಮ್ಮೊಮ್ಮೆ ಕೇಳಿಸುತಿತ್ತು. ತಿಮ್ಮಯ್ಯ 'ಮಾದೇವ'ನನ್ನು ಸ್ಮರಿಸುತ್ತ ಅಂದ "ನಮ್ಮವರ ಮನಸ್ಸು ತುಂಬ ದುರ್ಬಲ, ಅಪ್ರಬುದ್ಧ ಬುದ್ಧಿ, ಅಂತಲೇ ಅನೇಕವೇಳೆ ಸುಲಭವಾಗಿ ಪ್ರಚೋದನೆಗೊಳಗಾಗುತ್ತಾರೆ!"

ಕಾರಿಯಪ್ಪ ಮಂದಹಾಸ ಬೀರಿ ನುಡಿದ.

"ಇದೀಗ ಸರಿ, ನಿಮ್ಮ ವಾದ ವಿದೇಶೀಯರ ವಾದದಂತೆಯೇ ಇದೆ."

ತಿಮ್ಮಯ್ಯ ನಸುನಕ್ಕು ಸುಮ್ಮನಾದ. ವಾದ ಪ್ರತಿಪಾದದಿಂದ ಲಾಭವೇನೂ ಇಲ್ಲವೆಂಬುದು ಇಬ್ಬರಿಗೂ ತಿಳಿದಿದ್ದುದರಿಂದ ಅಷ್ಟಕ್ಕೆ ಪೂರ್ಣವಿರಾಮ ದೊರೆಯಿತೇನೋ....ದೇವಾಲಯದಿಂದ ಘಂಟೆಯ ಸದ್ದು ಆಗಾಗ ಕೇಳಿಬರುತ್ತಲೇ ಇತ್ತು. ಅಲ್ಲಿ ರಾತ್ರಿ ಎಂಟು ಗಂಟೆಯುವರೆವಿಗೂ ಪೂಜೆ ನಡೆಯುತ್ತದೆ. ವಿಷಮ ಶೋಕಸಾಗರದಲ್ಲಿ ಮುಳುಗಿದ ದುಃಖಿಗಳೂ, ಸುಖ ಸಂತೋಷಗಳಲ್ಲಿ ನಲಿವ ಸುಖಿಗಳೂ ಒಂದಾಗಿ ದೇಗುಲದಲ್ಲಿ ಬೆರೆಯುತ್ತಾರೆ. ಆ ಪ್ರದೇಶದ ಮನೆಗಳು ದೂರದೂರದಲ್ಲಿದ್ದರೂ ಸಂಜೆಯ ಸಮಯದಲ್ಲಿ ದೇವಾಲಯಕ್ಕೆ ಹೋಗಿ–ಬರುವವರಿಂದ, ಪೂಜಾ ವಿಧಿ ವಿಧಾನಗಳಿಂದ ಸ್ಥಳ ಜನಭರಿತವಾಗಿದ್ದಂತೆ ಕಾಣಿಸುತ್ತದೆ. ಸುತ್ತುಮುತ್ತಿನ ಮಂದಿಯಂತೆಯೇ ತಿಮ್ಮಯ್ಯನ ಕುಟುಂಬವು ದೇವಾಲಯಕ್ಕೆ ನಿಷ್ಠೆಯಿಂದ ನಡೆದುಕೊಳ್ಳುತ್ತದೆ.

ದೂರದ ತಿರುವಿನ ದಿಣ್ಣೆಯ ಮೇಲಿದ್ದ ದೇಗುಲದಲ್ಲಿ ಮಿನುಮಿನುಗುವ ಜ್ಯೋತಿ ಭಾಸಮಾನ ತಡಿಯಲ್ಲಿ ಶೋಭಿಸುವ ಮಂಗಳವೇಡೆಯಂತೆ ಕಂಗೊಳಿಸುತಿತ್ತು. ಹಸುರುಕ್ಕುವ ವನರಾಜಿಯಲ್ಲಿ ಜ್ಯೋತಿರ್ಮಯೀ ಮಿಣುಕು ಹುಳುಗಳು ಎಣೆಯಿಲ್ಲದೆ ಹಾರಾಡುತಿದ್ದುವು. ಕೃಷ್ಣಪಕ್ಷದ ರೇಖಾ ಚಂದ್ರನ ಮೋಹನಬಿಂಬ ಮೋಡಗಳ ಮಾಲೆಯಲ್ಲಿ ಸೆರೆಸಿಕ್ಕಿದ ಬಂದಿಯಂತೆ ಕಣ್ಣೆಸೆಯುತಿತ್ತು. ತಿಮ್ಮಯ್ಯ ತಂಗಾಳಿಗೆ ಮೈಯೊಡ್ಡಿ ಜಗಲಿಯಲ್ಲಿ ಕುಳಿತ.

ಕೊಡಗು ಸಂಪದ್ಭರಿತವಾದ ವನದೇಶ. ತಮ್ಮ ಸುತ್ತಲೂ ರಾಜವೈಭವದಲ್ಲಿ ಪ್ರತಿಷ್ಠಿತ ಧನಿಕ ಜಮೀನ್ದಾರರು, ಆಸ್ತಿ, ಅಧಿಕಾರ, ಆಡಂಬರ, ಆಳು-ಕಾಳುಗಳು, ಆರ್ಥಿಕ ವ್ಯವಹಾರ, ಜಮಾ–ಖರ್ಚುಗಳು, ಮಹಲುಗಳು, ಕಾರು, ಕುದುರೆಸಾರೋಟುಗಳು, ಅವರು ನಡೆಸುವ ವೈಭವಯುತ ಜೀವನ, ವಿನೋದ ವಿಹಾರಗಳು, ಸಮಾಜದಲ್ಲಿ ಗೌರವವನ್ನು

ಸಂಪಾದಿಸಲು, ದೊಡ್ಡಸ್ತಿಕೆಯನ್ನು ಪ್ರದರ್ಶಿಸಲು ನಡೆಸುವ ಔತಣ ಕೂಟಗಳು, ಟೀ ಪಾರ್ಟಿಗಳು ಮುಂತಾದುವುಗಳಿಗಾಗಿ ಹಣದ ಹೊಳೆಯೇ ಹರಿಯುತ್ತದೆ. ತಾನು ಕೇವಲ ಹನ್ನೆರಡು ರೂಪಾಯಿಗಳ ಫೀಜನ್ನು ಕೊಟ್ಟು ಮಗನನ್ನು ಕಾಲೇಜಿಗೆ ಕಳುಹಿಸಲಾಗದೆ ಉಳಿದುದು ಮನದಲ್ಲಿ ಸುಳಿದು.... ಮೈಯಲ್ಲಿ ನೆತ್ತರು ಹೆಪ್ಪುಗಟ್ಟಿದಂತಾಯಿತು. ಶಿವಯ್ಯ ಚಿಂತೆಯಿಂದ ಮ್ಲಾನ ಮುಖಿಯಾದ.

ಎಷ್ಟೇ ಯೋಚಿಸಿದರೂ ಆ ಏಕತಾನ ಮುನ್ನಡೆಯ ವಿಚಾರ ಅರ್ಥವಾಗುತ್ತಿಲ್ಲ. ಹೇಗೆ, ಯಾವ ರೀತಿಯಲ್ಲಿ ಈ ಬರಡು ಬಾಳನ್ನು ತುಂಬಬೇಕೆಂಬುದು ತಿಳಿಯದು. ಈ ಪ್ರಪಂಚ ಕೇವಲ ಒಂದು ಜೂಜಾಟದ ಮನೆಯಂತೆ, ಬಗೆ ಬಗೆಯ ಸರಕುಗಳ ಅಂಗಡಿಯಂತೆ ಕಾಣಿಸುತ್ತದೆ. ಇಸ್ಪೀಟಿನ ಆಟ ಆಡುವುದರಲ್ಲಿ, ವಸ್ತುವಸ್ತುಗಳನ್ನು ತೂಗಿ ನೋಡಿ ಮೌಲ್ಯವನ್ನು ನಿರ್ಧರಿಸುವುದರಲ್ಲಿ ಮನುಷ್ಯ ಪರಿಪೂರ್ಣತೆಯನ್ನು ಪಡೆಯಬಲ್ಲನೇ...? ಆದರೆ, ಇದೊಂದು ಬಗೆಯ ವಿನೂತನ ಶಕ್ತಿ-ಎನ್ನುವುದಕ್ಕಿಂತ ಪುರಾತನ ಪವಾಡ ಎನ್ನಬಹುದೇನೋ....ಕೆಲಸ ಮಾಡುವ ಶಕ್ತಿ ಇದ್ದೂ, ಯೋಚಿಸುವ ಯೋಗ್ಯತೆ ಇದ್ದೂ ದಾರಿದ್ರ್ಯ ತಪ್ಪುವುದಿಲ್ಲ ಅಂದರೆ ಆಶ್ಚರ್ಯವಲ್ಲದೆ ಮತ್ತೇನು ? ಆತ್ಮಗೌರವವನ್ನು ಕಾಪಾಡಿಕೊಳ್ಳಲೋಸುಗ ಎಷ್ಟೆಷ್ಟೋ ಕಷ್ಟಪಟ್ಟದ್ದಾಗಿದೆ. ಭಗವಂತ ಯಾರ ಕರುಣಾಶಕ್ತಿಯನ್ನು ಅಪಹರಿಸಿ ಬಿಡುತ್ತಾನೋ ಅವರು ಮಾನವರಾಗಿ ಉಳಿಯಲಾರರು. ಬಹುಶಃ ಇದೆಲ್ಲಾ ಆತನ ಲೀಲೆಯೇ ಇರಬೇಕು.

ಆದರೆ....

ಜೀವನವನ್ನು ಪರಿಶೀಲನಾ ದೃಷ್ಟಿಯಿಂದ ನೋಡಿದರೆ 'ಕರ್ತವ್ಯ' ಎಂಬುದು ಹಿರಿಯ ವಸ್ತುವಾದರೂ ಅದು ಅಳೆದು ಸುರಿದು ನೋಡಬಹುದಾದುದಲ್ಲ...ಒಬ್ಬ ದೀನದರಿದ್ರ ಮಾಡುವಷ್ಟು ಕೆಲಸ ಕಾರ್ಯ ಧನಿಕ ಎಂದೂ ಮಾಡಲಾರ. ಕೇವಲ ಕರ್ತವ್ಯ ಎಂಬ ಮಾತನ್ನು ಆಧಾರವಾಗಿಟ್ಟುಕೊಂಡು ಧರ್ಮದ ಮೇಲೆ ಮುಸುಕು ಹಾಕುವುದಾದೀತೆ ? ಸತ್ಯ-ಧರ್ಮ-ಕರ್ತವ್ಯಗಳ ಬಾಂಧವ್ಯ ಬೆಳೆದಾಗಲೇ ಸಮಾಜದಲ್ಲಿ ಮಾನ್ಯತೆ....ಎದೆಯಾಳದಿಂದ ನೀಳವಾದ ನಿಟ್ಟುಸಿರೊಂದು ಹೊಮ್ಮಿತು.

ಚಿಂತಾಬ್ಧಿಯಲ್ಲಿ ಮುಳುಗಿದ್ದ ತಿಮ್ಮಯ್ಯ ಬಹಳ ಹೊತ್ತಿನ ಮೇಲೆ ಸೆಜ್ಜೆಯನ್ನು ಸೇರಿದ. ಆದರೆ ಅದು ಇಂದೇನೂ ಹೊಸದಲ್ಲ. ಎದೆಯು ತಾಪವನ್ನು ತುಂಬಿಕೊಂಡೇ ದಿನಗಳೆಯುವುದು ಅಭ್ಯಾಸವಾಗಿ ಹೋಗಿದೆ.

ದಿನಗಳ ಗಾಲಿ ಗೊತ್ತುಗುರಿಯಿಲ್ಲದೆ ಉರುಳಿದುವು .. ಅನೇಕಾನೇಕ ಚಾಂದ್ರಮಾನಗಳು ಹೇಳಹೆಸರಿಲ್ಲದೆ ಕರಗಿದುವು.

ಆದರೆ... ಸುಖದ ನೆಲೆಯಲ್ಲಿ ದುಃಖದ ಝರಿ ಹರಿದೋಡುವಂತೆ.

ಯಾವುದೋ ಕಣದಲ್ಲಿ ಹೊಂಚುಹಾಕುತಿದ್ದ ವಿಧಿಯು ಸೇಡಿನ ಕಿಡಿ ಬಾಳ್ವನಕ್ಕೆ ಸಿಡಿದೀತೆಂದು ಯಾರೂ ಊಹಿಸಿರಲಿಲ್ಲ. ಗದ್ದೆ ತೋಟಗಳ ಕೆಲಸ ಮುಗಿಸಿ 'ಕಾವೇರಿ ಸಂಕ್ರಮಣ'ಕ್ಕೆ ಸಿದ್ಧತೆ ನಡೆಯುತ್ತಿದ್ದಾಗಲೇ ತಿಮ್ಮಯ್ಯ ಹೃದಯಾಘಾತದಿಂದ ಕೊನೆಯುಸಿರೆಳೆದ. ಯಾವುದೇ ವೈದ್ಯಕೀಯ ನೆರವು ಸಿಗುವುದರೊಳಗಾಗಿ ಸಂಭವಿಸಿದ ಪತಿಯ ಸಾವು ಅಪಾರವಾದ ದುಃಖ ಸಮುದ್ರದಲ್ಲಿ ಗೃಹಿಣಿಯನ್ನು ಮುಳುಗಿಸಿತು. ಕಾವೇರಿ ಸಂಕ್ರಮಣ ಇಂತಹ ದುಃಖ ತಂದೀತೆಂದು ಭಾವಿಸಿದ ಕಾವೇರಿ ಮನೋವೇಗಕ್ಕೆ ಸಿಲುಕಿ ತತ್ತರಿಸಿದಳು. ಆ ಲಘು ಕಾರ್ಯದಲ್ಲಿ ನಡೆಯುತಿದ್ದ ರುದ್ರಕ್ಲೇಶ ಕಾರಿಯಪ್ಪನನ್ನು ತೀವ್ರ ಕಾರ್ಯತತ್ಪರನನ್ನಾಗಿ ಮಾಡಿತು. ಕೈಗೆ ಕೆಲಸವಿಲ್ಲವೆಂದು ಕೊರಗುತಿದ್ದ ದಿನಗಳು ಓಡಿದುವು. ಅಜ್ಞಾತ ದುಃಖವನ್ನು ಬದಿಗಿಟ್ಟು ಜೀವನ ಸಂಗ್ರಾಮದಲ್ಲಿ ಹುರಿಯಾಳಾಗಿ ನಿಂತ ಮಗನನ್ನು ನೋಡಿದಾಗ ಕಾವೇರಿಗೆ ಸಮಾಧಾನ ಮೂಡಿತಾದರೂ ಅನಿರೀಕ್ಷಿತ ವೈಧವ್ಯ ಎದೆಯ ನೆಲೆಯಲ್ಲಿ ದಳ್ಳುರಿಯಂತೆ ಸುಡುತಿತ್ತು.

ಕೊಡಗು ಪ್ರಾಂತದಲ್ಲಿ ಕಾವೇರಿ ಸಂಕ್ರಮಣ ವರ್ಷೇ ವರ್ಷೇ ಬಹಳ ಸಂಭ್ರಮದಿಂದ ಆಗಮಿಸುತ್ತದೆ. ಆದರೆ ಗೃಹಿಣಿ ಕಾವೇರಿಯು ಅದರಿಂದ ಪಡೆಯುವುದು ದುಃಖವನ್ನೆ. ನೂತನ ತಾರುಣ್ಯ ವೇಗದಲ್ಲಿ ತೀಕ್ಷ್ಣತೆಯ ತುತ್ತತುದಿಯನ್ನೇರಿದ ಮಗನಿಗಾಗಿ ಆಕೆ ಹಬ್ಬವನ್ನಾಚರಿಸುತ್ತಾಳೆ. ಆದರೆ ಮಂಗಳದ್ರವ್ಯಧಾರಿಣಿಯಿಂದಲ್ಲದೆ ಕಾವೇರಿ ಸಂಕ್ರಮಣ ತುಂಬದು ಎಂಬ ಕೊರತೆ ಹೃದಯ ತಂತುಗಳಲ್ಲಿ ಕತ್ತಿಯಲುಗಿನಂತೆ ಹರಿದಾಡುತಿತ್ತು. ಈ ಸಾಲಿನಲ್ಲಾದರೂ ಅನುರೂಪಳಾದ ಸೊಸೆಯನ್ನು ತಂದು ಮನೆದುಂಬಿಸಿಕೊಳ್ಳಬೇಕೆಂಬ ಇಚ್ಛೆ, ಆದರೆ ಕಾರಿಯಪ್ಪ ಅಷ್ಟೇ ನಿರಾಳ. ಈಗಾಗಲೇ ಏನವಸರ

ಎಂಬ ವಿಳಂಬ ಧಾಟಿಯಲ್ಲೇ ಮೂರು ನಾಲ್ಕು ವರ್ಷಗಳು ಸಂದುವೋ ಏನೋ ಅವನ ಚಟುವಟಿಕೆಗಳಿಗೂ ಕಡಿಮೆಯಿಲ್ಲ. ಗದ್ದೆ ತೋಟಗಳ ವ್ಯವಸ್ಥೆಯಲ್ಲಿ, ಹಳೆಮನೆಗೆ ಹೊಸರೂಪು ಕೊಡುವುದರಲ್ಲಿ ನಿತ್ಯನೂತನ ಉತ್ಸುಕತೆ. ನೆರೆಹೊರೆಯವರ ಜಗಳ–ದೊಂಬಿ–ಗಲಾಟೆಗಳಲ್ಲಿ ಎಣೆಯಿಲ್ಲದ ಮಧ್ಯಸ್ಥಿಕೆ; ಇಂತಿಂತಹ ಚಟುವಟಿಕೆಗಳಿಂದ ಮನೆಯ ಕಡೆ ಎಷ್ಟೋ ವೇಳೆ ಉಳಿಯಲು ಬಿಡುವು ಸಹ ದೊರೆಯುತ್ತಿರಲಿಲ್ಲ

ಅದೇ ನೇರಕ್ಕೆ ಕಾವೇರಿಗೆ ತಾನನುಭವಿಸುವ ಏಕಾಂತ ದುಃಖ-ಏಕಾಂತ ಜೀವನ ಒಂದು ಕರ್ಮಯೋಗ....ಭವಬಂಧನದಲ್ಲಿ ಸಿಲುಕಿ ಕಾಮಾಗ್ನಿಜ್ವಾಲೆಯನ್ನು ಉಜ್ವಲಗೊಳಿಸುತ್ತ ಆತ್ಮಜ್ಯೋತಿಯನ್ನು ನಿರ್ಲಕ್ಷಿಸಿದ ಹೆಣ್ಣಲ್ಲ ಆಕೆ. ಜೀವನಾರಣ್ಯದ ಅಂಧಕಾರ ಮಾರ್ಗಯೋಗದಲ್ಲಿ ಸಮುದ್ರರಾಜನ ಅಲೆಗಳ ನಡುವೆ ಹೊಡೆದುಕೊಂಡು ಹೋಗುವವರ ಸಾಹಸದಲ್ಲೇ ಮುಂದು ವರಿದಿದ್ದಾಳೆ. ಹಳೆಯ ಪಥದಿಂದ ನವ್ಯಪಥಕೆ ಪದಾರ್ಪಣೆ ಮಾಡುವಾಗ ಅಂತಃಪಟಲದ ಮೇಲೆ ಲಾಸ್ಯವಾಡುವ ಭಾವ ತರಂಗಿಣಿಯ ನಾದ ಮಾಧುರ್ಯ ಮನವನ್ನು ಕೆರಳಿಸುವ ಬದಲು ತಣಿಸುತ್ತದೆ. ಆ ನಿತ್ಯ ನೂತನ ಮಧುರಾನುಭೂತಿಗಳ ದಿವ್ಯ ಶೋಭೆಯಲ್ಲಿ ಆಕೆ ಸ್ವರ್ಗಲಕ್ಷ್ಮಿಯಂತೆ ಕಣ್ಗೆಸೆಯುತ್ತಾಳೆ. ಪ್ರಕೃತಿಯ ಉಡಿಯಿಂದ ಸಿಡಿದುಬಿದ್ದ ಕೀರ್ತಿಶಿಶುವಿನಂತೆ ಪರಿಶೋಭಿಸುವ ಕೊಡಗು ಪ್ರದೇಶದಲ್ಲಿ ಆಕೆ ನಿಷ್ಣಾತ ಕೊಡಗಿ....

ದೃಗ್ವಲಯದಲ್ಲಿ ಎಲ್ಲಿಂದ ಎಲ್ಲಿಯವರೆಗೆ ಕಾಣಬರುವ ಹೆಮ್ಮರಗಳಾಶ್ರಯದಲ್ಲಿ ಸಮೃದ್ಧಿಯಾಗಿ ಬೆಳೆದ ಸಣ್ಣ ದೊಡ್ಡ ಕುರುಚಲು ಗಿಡಗಳು ಕಣ್ಣಿಗೆ ಹಬ್ಬಮಾಡಿಸುತ್ತವೆ.

....ಸಾಂಧ್ಯಮೇಘಮಾಲೆಯಲ್ಲಿ ಸಂಧ್ಯಾ ಸೌಂದರ್ಯಧಾರೆ ಮನಮೋಹಕವಾಗಿ ತುಂಬಿ ಹರಿದಿತ್ತು–ಲೋಕಾಲೋಕಗಳಿಗೆ ಹೊಂಬಣ್ಣವನ್ನು ಬಳಿಯುವಂತೆ.

ಕಾಗೆಗಳು ಆಗಲೇ ಗೂಡುಗಳ ಬಳಿ ಸುಳಿದಾಡುತ್ತಿದ್ದುವು.

ಕಾರಿಯಪ್ಪ ಇನ್ನೂ ಮನೆಗೆ ಬಂದಿರಲಿಲ್ಲವಾದುದರಿಂದ ಕಾವೇರಿ ಅಲ್ಲೇ ಹಾದಿ ನೋಡುತ್ತ ನಿಂತಳು. ಸ್ವಲ್ಪ ಹೊತ್ತು ಉರುಳಿತು. ಮಂದಾನಿಲ ತಂಪು ತಳೆಯುತಿದ್ದ. ವನಪುಷ್ಪಗಳು ಸಂಜೆಗಂಪು ಎಲ್ಲೆಡೆಯೂ ಪಸರಿಸುತ್ತಿದೆ. ಕೆಲವು ನಿಮಿಷಗಳೊಳಗಾಗಿ ದೂರದ ಗದ್ದೆಯಂಚಿನಲ್ಲಿ ಕಾರಿಯಪ್ಪನ ಉದ್ದಂಡ

ರೂಪು ಕಣ್ಣೋಚರಿಸಿತು. ಅಡಿಯಿಂದ ಮುಡಿಯವರೆಗೆ ತಂದೆಯನ್ನು ಹೋಲುವ ಅವನನ್ನು ನೋಡುತ್ತಲೂ ಮಾತೃಭಾವ ಸಹಸ್ರ ಸ್ರೋತಗಳಾಗಿ ಉಕ್ಕಿ ಹರಿಯಿತು. ನೋಡುತ್ತ ಮೂರ್ತಿವೆತ್ತಾದಳು. ಅತ್ಯಂತ ಸಹಜವೂ ಸ್ವಾಭಾವಿಕವೂ ಆದ ಗುರುತ್ವದಿಂದ ಗೃಹಾಭಿಮುಖವಾದ ಪ್ರಶಸ್ತ ಹೆಜ್ಜೆಗಳ ಸದ್ದು ಸ್ಪಷ್ಟವಾಗಿ ಕೇಳಿಸಹತ್ತಿತು–ಉದ್ಬುದ್ಧ ನಿಷ್ಠೆಯ ಸೂಚಕದಂತೆ. ಮೆಟ್ಟಿಲನ್ನು ಹತ್ತಿ ಮೇಲೆ ಬರುತ್ತಲೂ ಹಾದಿಯನ್ನೆದುರು ನೋಡುತ್ತ ನಿಂತ ತಾಯಿಯನ್ನು ಕುರಿತು ಅಂದ "ಮನೆಯಲ್ಲಿ ಒಬ್ಬರೇ ಇದ್ದು ಬೇಸರವಾಯಿತೇನೋ, ನಡೆಯಿರಿ, ದೇವಸ್ಥಾನದ ಕಡೆಗಾದರೂ ಹೋಗಿ ಬರೋಣ."

ಕೆಲವು ಘಳಿಗೆಗಳು ನಿರಾತಂಕವಾಗಿ ಉರುಳಿದುವು. ಆ ಮುಹೂರ್ತದಲ್ಲಿ ಆಕೆಯು ಯೋಚಿಸಿದ್ದುದೂ ಅದನ್ನೇ. ಒಳಹೋಗಿ ಹಣ್ಣುಕಾಯಿ ತೆಗೆದುಕೊಳ್ಳುವುದರಲ್ಲಿ ಕಾರಿಯಪ್ಪ ಕೈಕಾಲು ತೊಳೆದುಕೊಂಡ. ಇಬ್ಬರೂ ಹೊರಟರು. ಅಲ್ಲೇ ಅರ್ಧ ಫರ್ಲಾಂಗಿನ ಅಂತರದೊಳಗಾಗಿ ನಾಲ್ಕಾರು ಮನೆಗಳಿವೆ. ಕಾರಿಯಪ್ಪನ ಸಮವಯಸ್ಕರಾದ ತರುಣರೂ ಇದ್ದಾರೆ. ಅವರಲ್ಲಿ ಕೆಲವರಾಗಲೇ ಸಂಸಾರಸ್ಥರಾಗಿದ್ದಾರೆ. ಅದನ್ನೇ ಯೋಚಿಸುತ್ತ ನುಡಿದಳು ತಾಯಿ. "ಈಗ ಆಗಬೇಕಾದುದೆಲ್ಲಾ ಆಗಿದೆ. ಈ ಸಾಲಿನಲ್ಲಿ ನೀನು ಗೃಹಸ್ಥನಾಗಿಬಿಡು... ನನಗೆ ಒಬ್ಬಳೇ ಇದ್ದು ಸಾಕಾಗಿದೆ."

"ನನಗಿನ್ನೂ ಇಪ್ಪತ್ತೆರಡು ವರುಷ. ಈಗಲೇ ಏನು ಅವಸರ ?"

"ನಾನು ಇನ್ನೂ ಎಷ್ಟು ಕಾಲ ಒಬ್ಬಳೇ ಇರಲಿ ?"

ಧ್ವನಿ ಹೃದಯಕುಂಡಲಿನಿಯಿಂದ ಹರಿದು ಬಂದಾಗ ಅಪರಾಂಬುಧಿಯ ಮುನ್ನೀರು ಜಳಜಳನೆ ಹರಿದು ಬಂದಂತಾಯಿತು. ಕಾರಿಯಪ್ಪ ಚಿಂತಿತನಷ್ಟೇ ಅಲ್ಲ; ಪುಳಕಿತನೂ ಆದ. ತಾಯಿ ಮುಂದುವರಿದಳು "ಮೊನೆ! (ಮಗನೇ) ನನಗೀಗಲೇ ಏಕೆ ಎಂದುಕೊಳ್ಳಬೇಡ. ಈ ಜೀವನ ದೈವೀಕೃತವಾದರೂ ಯಾರಿಗೂ ಅಮೃತವನ್ನೇ ಪ್ರಸಾದಿಸುವುದಿಲ್ಲ. ಈ ಅಶಾಶ್ವತ ಜೀವನವನ್ನು ಉದ್ಧರಿಸಬೇಕಾದರೆ ಆದಷ್ಟು ಮುಂದಾಗಿಯೇ ನಮ್ಮ ಕರ್ತವ್ಯದ ಹೊರೆಯನ್ನು ಇಳಿಸಿಕೊಳ್ಳುವುದು ಲೇಸು."

ಕಾರಿಯಪ್ಪ ಒಂದೆರಡು ಘಳಿಗೆ ಯೋಚಿಸಿದ. ಏನಾದರೂ ಹೇಳಬೇಕೆಂದರೆ ತಾಯಿಯ ಸೂಚನಾಮಾತ್ರದಿಂದಲೇ ಅಂಗಪ್ರತ್ಯಂಗಗಳಲ್ಲಿ

ಭಾವೋದ್ವೇಗದ ವಿದ್ಯುಲ್ಲಹರಿಯು ಜಿಲ್ಲನೆ ಹರಿದಾಡತೊಡಗಿತು. ತುಟಿಗಳು ಪ್ರಯತ್ನಿಸಿದರೂ ಬಿರಿಯಲಿಲ್ಲ.

ಶೀತಲ ದೇಶದ ಶೈತ್ಯಕ್ಕಿಂತಲೂ ಶೀತಲವಾದ ಅವನ ಮೌನ ಮನ ವನ್ನು ಇರಿಯಿತು. ಒಂದೆರಡು ಘಳಿಗೆ ಕಾದುನೋಡಿ ಕರುಣ ಕಾತರ ಸ್ವರ ದಿಂದ ಮುಂದುವರಿದಳು ಪ್ರೌಢೆ "ಕೇಳು ಮೊನೆ; ಏಕೆ ಚಿಂತೆ ? ಈಗ ಅಂತಹ ಕಷ್ಟವೇನು ? ನಮ್ಮಿಬ್ಬರೊಳಗೆ ಇನ್ನೊಂದು ಜೀವ ಉಸಿರಾಡುವುದು ದೊಡ್ಡದಲ್ಲ. ಚಿಕ್ಕವಳನ್ನೇ ತಂದರಾಯಿತು. ಜೀವನಕ್ಕೆ ಅಳುಕುವುದಕ್ಕೆ ನೀನೇನು ಹೆಣ್ಣೆ ?"

ಕೆಲವು ಘಳಿಗೆಗಳು ನಿರಾತಂಕವಾಗಿ ಉರುಳಿದುವು.

ಕಾರಿಯಪ್ಪ ತನ್ನನ್ನು ತಾನು ಸಾವರಿಸಿಕೊಳ್ಳುತ್ತ ಭಾವಪೂರ್ಣ ಲೋಚನನಾಗಿ ಅಂದ "ನೀವು ಹೇಗೆ ಹೇಳಿದರೆ ಹಾಗೆ."

ಆ ಮುಹೂರ್ತದಲ್ಲಿ ಇಬ್ಬರೂ ದೇವಸ್ಥಾನದ ಮೆಟ್ಟಲು ಹತ್ತು ತ್ತಿದ್ದರು. ದೇಗುಲದಲ್ಲಿ ಪೂಜೆ ನಡೆಯುತ್ತಿತ್ತು; ಘಂಟಾರವ ಮೊಳಗುತ್ತಿತ್ತು. ಹೂಮಾಲೆ, ಕಸ್ತೂರಿದಳ, ತುಳಸೀದಳ, ಕೆಂಡಸಂಪಿಗೆ ಹೂಗಳ ಸಹಿತ ಮಂಗಳದ್ರವ್ಯಗಳ ಸುಗಂಧ ಮೂಗಿಗೆ ತಟ್ಟುತ್ತಿತ್ತು. ಅನೇಕ ಕೊಡವ ಕುಟುಂಬಗಳು ಅಲ್ಲಿ ನೆರೆದಿದ್ದುವು. ಪರಿಚಿತರಲ್ಲಿ ದರ್ಶನಲಾಭದಿಂದ ತುಟಿ ಗಳಲ್ಲಿ ಮುಗುಳುನಗೆ ಹರಿದಾಡಿಹೋಯಿತು, ಕಾವೇರಿಯನ್ನು ನೋಡುತ್ತಲೂ ಚಿಕ್ಕ ಹುಡುಗಿಯರನೇಕರು ನಮಸ್ಕರಿಸಿ ಪಾದಧೂಳಿಯನ್ನು ಸ್ವೀಕರಿಸಿದರು. ಅವರಲ್ಲಿ ನಸು ನೀಲವರ್ಣದ ಸೀರೆಯುಟ್ಟ ಹರೆಯದ ಹುಡುಗಿಯ ಗುರುತು ಹತ್ತದೆ ಕೇಳಿದಳು ಕಾವೇರಿ "ನಿಂಗ್ ದಾರ್‌ಡ ?"

ಅವಳಿಂದ ಉತ್ತರ ಹೊರಬೀಳುವುದರೊಳಗಾಗಿ ತಾನೇ ನೆನಪಿಗೆ ತಂದುಕೊಂಡು "ನಾಪೋಕ್ಲು ಅಯ್ಯಪ್ಪನ ಮಗಳೇ ?" ಎಂದಳು.

"ಹೌದು." ಅನುಭಾವ ವಿಶೇಷದಿಂದ ಮೂಡಿದ ಭಕ್ತಿಭಾವ ಶಾಂತ ಲಹರಿಗಳು ಮುಖಬಿಂಬದಲ್ಲಿ ಹೊಮ್ಮಿದುವು. ತರುಣಿ ಹಸನಾದ ನಗೆ ಬೀರಿದಳು-ಕಪೋಲಪಾಲಿಯಲ್ಲಿ ಸುಂದರ ಗುಳಿಗಳು ಮೂಡುವಂತೆ.

"ನಿನ್ನನ್ನು ನೋಡಿ ನಾಲ್ಕೈದು ವರ್ಷಗಳಾದವು. ಆಗಲೇ ಎಷ್ಟು ಬೆಳೆದಿದ್ದಿ !"

ಹುಡುಗಿ ಮಾತಾಡಲಿಲ್ಲ. ಮುಖಬಿಂಬ ಪ್ರಸನ್ನವಾಯಿತು.

"ಈಗಲೂ ಕಲಿಯುತ್ತಿದ್ದೀಯೇನು ?"

"ಇಲ್ಲ; ಶಾಲೆ ಬಿಟ್ಟು ಆರು ತಿಂಗಳಾದುವು."

ಪಶ್ಚಿಮ ದಿಕ್ತಟದಿಂದ ವಿರಾಟ್ ಸೂರ್ಯಮಂಡಲ ಸಮುದ್ರದಂಚಿಗೆ ಬಿದ್ದಾಗ ಸಿಡಿದ ಹೊನ್ನಿನ ಹನಿಯೇ ಮೈವೆತ್ತು ಬಂದಂತಿದ್ದ ತರುಣಿಯನ್ನು ನೋಡಿ ಕಾರಿಯಪ್ಪ ಪುಳಕಿತನಾದ. ರಕ್ತದ ಪ್ರತಿ ಕಣವೂ ತುಳುಕುತ್ತಿರುವಂತೆ ಭಾಸವಾಯಿತು. ಮಂದಹಾಸ ಬೀರಿ ಮೈಮರೆತು ನಿಂತ. ಕಣ್ಣುಗಳ ಹೊಳಪು ರಾಗಭಾವೋದ್ವೇಗದಿಂದ ದ್ವಿಗುಣಗೊಂಡಿತು. ಮರುಘಳಿಗೆಯಲ್ಲಿ ತನ್ನನ್ನು ತಾನು ಹತೋಟಿಗೆ ತೆಗೆದುಕೊಳ್ಳುತ್ತ "ನಿನ್ನ ಹೆಸರು 'ಗಂಗೂ' ಅಲ್ಲವೇ ? ಯಾರ ಜೊತೆ ಬಂದಿದ್ದೀ ?" ಎಂದ.

"ನನ್ನ ತಾಯಿ ಜೊತೆ ಬಂದಿರುವೆ. ಆ ಕಡೆಯ ಮೆಟ್ಟಿಲ ಮೇಲೆ ಕುಳಿತಿದ್ದಾರೆ."

"ಓ ಅಲ್ಲಿದ್ದಾರೆಯೆ ?" ಎನ್ನುತ್ತ ಆ ಕಡೆ ಹೊರಟಳು ಕಾವೇರಿ. ಅಲ್ಲಿ...ಆರಾಮವಾಗಿ ಒಂದೆರಡು ಮಾತಾಡಿ ಕ್ಷೇಮ ಸಮಾಚಾರವನ್ನು ವಿಚಾರಿಸಿಕೊಂಡು ಪೂಜೆಗೆ ಸಿದ್ಧವಾಗುವುದರಲ್ಲಿ ಕಾರಿಯಪ್ಪ ಮತ್ತು ಗಂಗೂರವರ ಹೃದಯಗಳೊಂದಾಗಿ ಅನಿರೀಕ್ಷಿತದ, ಅಕಲ್ಪಿತ, ಅನುರಾಗ ಸಮುದ್ರದಲ್ಲಿ ಮುಳುಗಿ ಹೊಂಗನಸುಗಳನ್ನು ನೇಯುತ್ತಿದ್ದವು.

೩

...ಅದೊಂದು ಸುಂದರ ಮುಂಜಾನೆ.

....ಸುಸ್ವರದಲ್ಲಿ ಪಕ್ಷಿಗಳು ಸುಪ್ರಭಾತವನ್ನು ಹಾಡುತ್ತಿದ್ದುವು.

ಬಹಳ ವರ್ಷಗಳಿಂದ ಕಾಣದಿದ್ದ ಸಡಗರವನ್ನು ಇಂದು ಕಂಡಿತು ಬಾಗಂಡ. ಹಸುರುವಾಣಿ ಚಪ್ಪರ ನವದಂಪತಿಗಗೆ ಸ್ವಾಗತ ನೀಡಿತು. ಕೌಶೇಯ ಪೀತಾಂಬರಧಾರಿಣಿ ಗಂಗೂ ಕಾರಿಯಪ್ಪನ ಕೈಹಿಡಿದು ಸೊಸೆಯಾಗಿ ಗೃಹಕ್ಕೈತಂದಾಗ ಕಾವೇರಿಯ ಹೃದಯ ಉಕ್ಕೇರಿ ಬಂತು. ಸೊಸೆಯ ಮುಸುಕು ತೆಗೆದು ಶಾಸ್ತ್ರೋಕ್ತವಾಗಿ ಬರಮಾಡಿಕೊಂಡಳು. 'ತೂಕ್‌ಬಲ್ಚ' (ತೂಗುದೀಪ)ಕ್ಕೆ ಅಕ್ಷತೆ ಹಾಕಿ ಕೈಮುಗಿದು ಒಳಬಂದ ಸೊಸೆ ನಮಸ್ಕರಿಸಿದಾಗ "ಈ ಮನೆ ನಿನ್ನಿಂದ ತುಂಬಿ ಬರಲಿ, ಮಗಳೇ !" ಎಂದಳು ಜನನಿ ತುಂಬಿಬಂದ ಆತ್ಮಾನಂದದಿಂದ. ಗೃಹವಲಯ ಬಂಧುಬಾಂಧವರಿಂದ ಕೂಡಿದ್ದು ಸಂಭ್ರಮವೇಗದಿಂದ ನಲಿಯುವಾಗ ಅರಣ್ಯಸುಂದರಿ ವಿಶ್ವಸ್ತಭಾವದಿಂದ ನಲಿದಾಡಿದಳು.

ಕಾರಿಯಪ್ಪ ಆನಂದದೊಡ್ಡೋಲಗದ ಅಧಿಪತಿಯಾದ.

ಮದುವೆಯ ಕೋಲಾಹಲ ಹರಿದ ಮೇಲೆ ಏರಿದ ಸಾಗರದುಬ್ಬರವು ಇಳಿದು ಹೋದಂತಾಗಿ ಎಂದಿನ ದಿನಚರಿ ವ್ಯವಹಾರಗಳು ಆರಂಭವಾದುವು. ದಂಪತಿಗಳ ಅತುಲ ಪ್ರೇಮ ಅತ್ತೆ ಸೊಸೆಯರ ಅನುಪಮ ಸ್ನೇಹ ವನದೇವಿಗೆ ಸತ್ಕೀರ್ತಿಯಂತೆ ಶೋಭಿತವಾದುವು.

ಅತ್ತೆ ಸೊಸೆಯರಿಬ್ಬರೂ ಧರಿಸುವುದು ಕೊಡವರ ವಿಶಿಷ್ಟ ಉಡುಪು. ಮನೆಯ ರೀತಿ-ನೀತಿಗಳಲ್ಲೂ ಒಂದೇ ವಿಧವಾದ ಲೋಲುಪ್ತಿ. ಆಚಾರ-ವ್ಯವಹಾರಗಳಲ್ಲೂ ಒಂದೇ ಬಗೆಯ ಆಸಕ್ತಿ. ಮೇಲಾಗಿ ಕಾರಿಯಪ್ಪನ ಸ್ನೇಹಮೇದುರ ನಯನಗಳಲ್ಲಿ ಹೊಮ್ಮುವ ಉಜ್ವಲಭಾವ ಮಧುಮೋಹದಿಂದ ಮದಮತ್ತ ಭ್ರಮರಾವಳಿಯಂತೆ ಮನಮೋಹಕ. ಸ್ವಾಮಿನಿ ಸೊಸೆಯೊಡನೆ ಆಗಾಗ ದೇವಸ್ಥಾನಕ್ಕೆ ಹೋಗಿಬರುತ್ತಾಳೆ; ಘಂಟಾರವ ಕರ್ಣಪಟಲಗಳಿಗೆ

ತಾಗುವಾಗ ಜಗತ್ತೇ ಭಕ್ತಿ-ಸ್ಫೂರ್ತಿಗಳಿಂದ ತುಂಬಿರುವಂತೆ ಭಾಸವಾಗುತ್ತದೆ; ಇನ್ನಾದರೂ ಬದುಕು ಸುಗಮವಾಗಿ ನಡೆದರೆ ಸಾಕೆಂದು ಮನಃಪ್ರಾಣಗಳು ಹಾರೈಸುತ್ತವೆ; ಅತ್ಯಂತ ಭಕ್ತಿಪೂರ್ವಕವಾಗಿ ಪ್ರಾರ್ಥಿಸುತ್ತದೆ ಎದೆಯ ಹಕ್ಕಿ....

ಕೊಡಗಿನ ದೊಡ್ಡ ದೊಡ್ಡ ಕುಟುಂಬಗಳು ದೊಡ್ಡ ದೊಡ್ಡ ಹಿಡುವಳಿಯನ್ನು ಹೊಂದಿ ಶ್ರೀಮಂತ ವೈಭವದಲ್ಲಿ ಜೀವನ ನಡೆಸುವುದು ಮಾತ್ರವಲ್ಲ; ಅಲ್ಲಲ್ಲಿ ಉನ್ನತ ಹುದ್ದೆಗಳನ್ನು ಹಿಡಿದು ನಾನಾ ಕ್ಷೇತ್ರಗಳಲ್ಲಿನ ವಸಂತೋತ್ಸವವನ್ನು ಆಚರಿಸುತ್ತಿರುವಾಗ ತನಗೊಂದೆರಡು ಎಕರೆ ಜಮೀನನ್ನು ವಿಸ್ತರಿಸುತ್ತೇನೆಂದರೂ ಸಾಧ್ಯವಾಗದಲ್ಲ ಎಂಬ ಕೊರಗು ಕಾರಿಯಪ್ಪನಿಗೆ. ಎಷ್ಟೇ ಪ್ರಯತ್ನಿಸಿದರೂ ಜೀವನದ ಪರಿಸ್ಥಿತಿ ಉತ್ತಮಗೊಳ್ಳಲಿಲ್ಲ. ವ್ಯವಸಾಯದೊಂದಿಗೆ ಅಲ್ಪ ಸ್ವಲ್ಪ ಕಾಫಿ ಟೀಗಳ ವ್ಯಾಪಾರವನ್ನು ಕೈಗೊಂಡ. ಮಧ್ಯೆ ಮಧ್ಯೆ ಸಾಮಾಜಿಕ ಸೇವಾ ಕಾರ್ಯಗಳೂ ನಡೆಯುತಿದ್ದುವು. ಹಾಗೂ ಹೀಗೂ ಜೀವನ ಜಹಜು ಸಾಗುತಿತ್ತು.

ಏತನ್ಮಧ್ಯೆ,

ಗಾಂಧೀಜಿಯವರ ಕಾಂಗ್ರೆಸ್ಸಿನ ಸಂಘಟನೆ-ತತ್ವನಿರೂಪಣೆ ಅದ್ಭುತವಾಗಿ ಬೆಳೆದು ರಾಷ್ಟ್ರದಾದ್ಯಂತ ದಿಶೆದಿಶೆಗೂ ಹಬ್ಬುತಿತ್ತು. ಜನನಾಯಕರು ಅದೆಷ್ಟು ಬಾರಿ ಜೈಲು ಕಂಡರೋ...ಅದೆಷ್ಟು ಹೊಡೆತ ಬಡಿತಗಳನ್ನು ತಿಂದರೋ...ಇನ್ನೆಷ್ಟು ಮಂದಿ ಅಸುನೀಗಿದರೋ ಅದನ್ನು ಹೇಳಿ ಮುಗಿಸುವಂತಿಲ್ಲ. ಉತ್ತರ ಭಾರತದ ಬಿಸಿ ದಕ್ಷಿಣ ಭಾರತಕ್ಕೆ ಹರಡುತಿತ್ತು. ರಾಜ್ಯ ರಾಜ್ಯಗಳಲ್ಲೂ ಕಾಂಗ್ರೆಸ್ಸಿನ ಅಭ್ಯುದಯವಾಗಿ...ಸ್ವಾತಂತ್ರ್ಯ ದಾಹ ವ್ಯಾಪಕವಾಗಿ ಹರಡುತಿತ್ತು ಜಡಮತಿಯನ್ನೂ ಸುಪ್ತ ಚೇತನವನ್ನೂ ತಟ್ಟನೆ ಬಡಿದೆಬ್ಬಿಸುವಂತೆ.

ಕೊಡಗಿನಲ್ಲಿ ಕಾಂಗ್ರೆಸ್ಸಿನ ಅಭ್ಯುದಯ ಇನ್ನೂ ಅಷ್ಟಾಗಿ ಆಗಿರಲಿಲ್ಲವೋ ಅಥವಾ ರೆಸಿಡೆಂಟನ ಆಳ್ವಿಕೆ ಅದರ ಪ್ರವರ್ಧಮಾನಕ್ಕೆ ಆಸ್ಪದ ಕೊಟ್ಟಿರಲಿಲ್ಲವೋ....ಅಂತೂ ಬಹಳ ಕಾಲದಿಂದ ನಿದ್ರಿಸುತಿದ್ದ ಉಜ್ವಲೊಜ್ವಲ ಮಾನವ ತೇಜ ಸುತ್ತಮುತ್ತಿನ ಬಿಸಿ ತಾಗಿ ಎಚ್ಚತ್ತುಕೊಂಡಿತು. ಹೆರೆಮರೆಯಲ್ಲಿ ನಡೆಯುತ್ತಿದ್ದ ಚಟುವಟಿಕೆಗಳು ಬಹಿರಂಗಗೊಂಡುವು.

ಯಾವುದೋ ಅದಮ್ಯಶಕ್ತಿ ಹೆಜ್ಜೆಹೆಜ್ಜೆಯನ್ನೂ ಗಟ್ಟಿಸಿ ಮುಂದೂಡುತಿತ್ತು ತಮ್ಮ ರೀತಿ–ನೀತಿ ಪ್ರಕೃತವೇ ಅಪ್ರಕೃತವೇ ಎಂಬುದನ್ನು ಯೋಚಿಸುವಷ್ಟು ಪ್ರಮೇಯವೂ ಸಹ ಬೀಳದಂತೆ ಸಹಸ್ರ ಸಹಸ್ರ ಅಭಿಶಪ್ತ ಹೆಜ್ಜೆಗಳು ಒಂದುಗೂಡಿ ಪ್ರಭಾತ್ ಫೇರಿಯಲ್ಲಿ ಪಾಲ್ಗೊಂಡುವು. ರಾಷ್ಟ್ರದಲ್ಲಿ ಈತಿ ಬಾಧೆಗಳಿಗಃತೂ ಇತಿಮಿತಿಯೇ ಇಲ್ಲ. ಕಣ್ಣೀರಿನ ಕೋಡಿಯಿಂದ ಭೂಮಿ ತೊಯ್ದರೂ ಲಕ್ಷ್ಯವಿಲ್ಲದೆ ಸ್ವದೇಶದ ಹೊನ್ನಿನ ಹೊಳೆ ವಿದೇಶಕ್ಕೆ ಹರಿಯು ತಿತ್ತು. ಬಡತನ ರೋಗರುಜಿನಗಳ ಕರಾಳ ಹಸ್ತ ಜನತೆಯನ್ನು ಒಂದೇ ಸಮನೆ ಹಿಂಡುತಿದ್ದರೂ...ಜಿದ್ದು ತೀರಿಸಿಕೊಳ್ಳಲೋ ಎಂಬಂತೆ ಬ್ರಿಟಿಷ್ ಸರ್ಕಾರ ಕಣ್ಣಿದ್ದೂ ಕುರುಡಾದುದನ್ನು ನೋಡಿ ರೊಚ್ಚಿಗೆದ್ದ ಭಾರತೀಯರ ಕೆಚ್ಚು ಹುಚ್ಚಾಗುತಿತ್ತು .. ನೆಚ್ಚು ನೂರಾಗುತಿತ್ತು...

ಕಾಂಗ್ರೆಸಿನ ಚಟುವಟಿಕೆಯಿಂದ ಕಾರಿಯಪ್ಪ ಉತ್ಸಾಹಿತನಾದ.

ಪ್ರಾಸಂಗಿಕವಾಗಿ ನಡೆದ ವಿಚಾರಮಂಥನದಿಂದ ನುಡಿದಳು ಕಾವೇರಿ,

"ಇಂಗ್ಲೀಷರ ಸಹವಾಸದಿಂದ ನಮ್ಮವರ ಜ್ಞಾನಚಕ್ಷು ತೆರೆಯಲಿಲ್ಲ ಎಂದೇ ನಿಲ್ಲ....ಹಿಂದೆ ಇದ್ದಂತಹ ಮೌಢ್ಯ ಈಗ ಜನತೆಯಲ್ಲಿ ಕಾಣುತಿಲ್ಲ. ಸಾಮಾಜಿಕವಾಗಿ ಎಷ್ಟೋ ಸುಧಾರಿಸಿಕೊಂಡಿದ್ದಾರೆ....ಎನ್ನಬಹುದು."

"ಹಾಗೆಂದು ಹಾವಿಗೆ ಹಾಲೆರೆಯುವುದಕ್ಕಾಗುತ್ತದೆಯೆ ?" ಎಂದ ಕಾರಿಯಪ್ಪ.

"ಸಾಮಾಜಿಕ ನೆಲೆ ಉತ್ತಮವಾಗದ ಹೊರತು ದೇಶಾಭಿಮಾನ ಧಾರ್ಮಿಕರೂಪ ತಳೆಯದು. ಇದರಲ್ಲಿ ಏನೋ ಒಂದು ಬಗೆಯ ನ್ಯೂನತೆ ಯಿದೆ ಎಂಬ ಅನುಭೂತಿ ಬಹಳ ದಿನಗಳಿಂದ ನನಗೆ ಉಂಟಾಗಿದೆ. ಈ ಆಂದೋಳನಕಾರಿಗಳು ಉದ್ರೇಕಿಗಳೇ ಹೊರತು ಕರ್ತವ್ಯನಿಷ್ಠರಲ್ಲ."

ಮೃದು ಮಧುರ ವೀಣಾನಿನಾದ ವಿಷಾದಗೀತೆಯನ್ನು ಮಿಡಿದಂತಾ ಯಿತು. ಕಾರಿಯಪ್ಪ ಒಂದು ಘಳಿಗೆ ಯೋಚಿಸಿದ. ಆತನ ಗಂಭೀರ ಮುಖ ಭಾವವನ್ನು ನೋಡುತ್ತ ಮುಂದುವರಿದಳು ಕಾವೇರಿ,

"ನಮ್ಮ ಸಮಾಜದ ರೂಪುರೇಷೆಗಳನ್ನು ಯಾವ ಶಾಸ್ತ್ರಕೋವಿದರು ರೂಪಿಸಿದರೋ ಅವರಿಂದ ಜೀವಿತರಿದ್ದು...ಈ ಸಮಾಜದ ಶೃಂಖಲೆಯಲ್ಲಿ ಸಿಕ್ಕಿಕೊಂಡಿದ್ದಿದ್ದರೆ ತಾನೇನು ತಪ್ಪು ಮಾಡಿರುವೆನೆಂಬುದರ ಅರಿವುಂಟಾಗು

ತಿತ್ತು. ಈ ಸಾಮಾಜಿಕ ಕ್ಲೈಬ್ಯ ಬುದ್ಧಿಗೆ ಹತ್ತಿದ ಕಿಲುಬು...ರಾಷ್ಟ್ರಕ್ಕೆ ತಟ್ಟಿದ ದೋಷ...ಸರ್ವೋಚ್ಚ ಹೆಜ್ಜೆಗಳನ್ನು ಅಮಂಗಳದೆಡೆಗೆ ನೂಕಿರುವುದು ಸಹ ಅದೇ. ಇಲ್ಲದಿದ್ದರೆ ಭಾರತೀಯರು ಬ್ರಿಟಿಷರಿಗೆ ರಾಜ್ಯಭಾರವನ್ನು ಬಿಟ್ಟುಕೊಡುತ್ತಿರಲಿಲ್ಲ."

"ಅದೊಂತಾಯಿತಲ್ಲ. ಇರಲಿ, ಈಗಲೂ ಸಹ...ಇಂದಿನ ಜನಾಂಗಕ್ಕೆ ಸಾಮಾಜಿಕ ಕ್ಲೈಬ್ಯದ ಹಸಿ ಬಿಸಿ ತಟ್ಟಿಯೇ ಇಲ್ಲ. ಅಂದರೆ ಆಶ್ಚರ್ಯವೂ ಅಲ್ಲ....ವಿಶೇಷವೂ ಅಲ್ಲ ...ಅದರಲ್ಲೂ ಈ ಕೊಡುವ ಸಮಾಜದಲ್ಲಿ ಭುಗಿಲೇಳುವ ಸಮಸ್ಯೆಗಳು, ವಿಧಿ ವಿಧಾನಗಳು, ಟೀಕೆ ಟಿಪ್ಪಣಿಗಳು ದೇಶವನ್ನೇ ಅತಿಕ್ರಮಿಸಬಲ್ಲವು ಅಂದರೆ ತಪ್ಪೇನಲ್ಲ. ನಾಗರಿಕತೆ–ವಿದ್ಯಾಭ್ಯಾಸಗಳಿಂದ ಆಡಂಬರ ಹೆಚ್ಚಿತೇ ವಿನಾ ಕ್ಲೈಬ್ಯ ಕಡಿಮೆಯಾಗಲಿಲ್ಲ. ಜನಮನೋಗತಿಯನ್ನು ನೆನೆಸಿಕೊಂಡರೆ ಯಾರೊಡನೆಯೂ ಬೆರೆಯದಿರುವುದೇ ಲೇಸು ಅನಿಸುತ್ತದೆ."

ಸೊಸೆಯ ವಿಶ್ಲೇಷಣೆ ಕೇಳಿ ಕಾವೇರಿ ಮುಗುಳು ನಕ್ಕಳು.

ಕಾರಿಯಪ್ಪನ ಸರಸವಾಣಿ ಹೊಮ್ಮಿತು. "ಯಾವ ಸಮಾಜ ತಾನೇ ಪರಿಶುದ್ಧವಾಗಿದೆ ? ಅತ್ಯಂತ ನಾಗರೀಕರೆನಿಸಿದವರಲ್ಲಿ ಕುತ್ಸಿತ ಮನೋಭಾವ ಇರುವುದಿಲ್ಲವೆಂದೇ ? ಅಥವಾ ಕಲಿತವರೆಲ್ಲಾ ಪರಮಹಂಸರೆ ? ನಮ್ಮವರು ಇನ್ನೂ ಕಣ್ತೆರೆಯುವುದರಲ್ಲೇ ಇದ್ದಾರೆ.. ಏನು ಮಾಡೋಣ ? ಸುಧಾರಿಸಿಕೊಳ್ಳಬೇಕು....ಕಾದು ನೋಡಬೇಕು."

"ಅದು ನಿಜ" ಎಂದುಕೊಂಡಳು ಗಂಗೂ. ನುಡಿ ತುಟಿ ಮೀರಲಿಲ್ಲ. ಹೃದಯದ ನೆಲೆಯಲ್ಲಿ ಮಿಡಿಯುವ ಜೀವನಾಡಿ ಒಂದೆರಡು ಬಾರಿ ಮೀರಿ ಮಿಡಿಯಿತೇನೋ....ಹವಳದ ಕುಡಿಯಂತಹ ತುಟಿಗಳಲ್ಲಿ ಶೀರ್ಣ ಸ್ಮಿತರೇಖೆ ಕೃತಕ ರೇಶಿಮೆ ಎಳೆಯಂತೆ ಹರಿದಾಡಿತು.

ಕಾರಿಯಪ್ಪ ಮುಂದುವರಿದ "ಜೀವನ–ನಾಗರಿಕತೆ–ದಾರ್ಶನಿಕತೆ–ಉತ್ತುಂಗ–ಪರಿಪೂರ್ಣತೆ–ಪ್ರೇಮಸಾಮ್ರಾಜ್ಯ ಇಂಥಿಂಥಹ ಶಬ್ದಮಾಲಿಯನ್ನು ಅರಿಯುವವರಾರು? ಹೃದಯ ನಿಘಂಟಿನಲ್ಲಿ ಅವು ತುಂಬಿಹೋಗಿದ್ದರೂ ವರ್ತಮಾನ ಯುಗಧರ್ಮ ಉಜ್ವಲೋಜ್ವಲ ಭವಿಷ್ಯತ್ತನ್ನು ರೂಪಿಸುವಂತಿದ್ದರೂ ಮಾನಸಿಕ ಶೈಥಿಲ್ಯ ಮನುಷ್ಯತ್ವವನ್ನು ಕಸಿಯುತ್ತದೆ, ಇದು

ಅಂದಿಂದಿನ ವಸ್ತುಸ್ಥಿತಿ."

ಆರಾಮವಾಗಿ ಮಲಗಿದ್ದ ಜೂಲಿ ಹೊಸಬರ ವಾಸನೆ ಹಿಡಿದು ಕರ್ಕಶ ದನಿಯಲ್ಲಿ ಬೊಗಳುತ್ತ ಹೊರಗಡೆ ಧಾವಿಸಿತು. ಒಡನೆ ಮೂವರ ಗಮನವೂ ಅತ್ತ ಹೊರಳಿತು. ನಾಯಿ ಕೆಳಮಟ್ಟೆಯ ಮೆಟ್ಟಿಲ ಮೇಲೆ ನಿಂತು ಒಂದೇ ಸಮನೆ ಬೊಗಳುತಿತ್ತು ಯಾರೋ ಬರುತ್ತಿದ್ದಾರೆಂಬುದನ್ನು ಗ್ರಹಿಸಿದ ಕಾರಿಯಪ್ಪ ವಿಶಾಲವಾದ ಅಂಗಳವನ್ನು ದಾಟಿ ಬೇಲಿಯ ಬಳಿಗೆ ಹೋದ. ವನಸಾಮ್ರಾಜ್ಯದಲ್ಲಿ ವ್ಯಕ್ತಿ ಅಗೋಚರವಾದರೂ ಪ್ರಶಸ್ತ ಹೆಜ್ಜೆಗಳ ಸದ್ದು ಸ್ಫುಟವಾಗಿ ಕೇಳಿಸುತಿತ್ತು. ಹೆಬ್ಬಯಲಿನ ಮೂಲಕ ಯಾರೇ ಬಂದರೂ ಅಂಗಳದಿಂದಲೇ ಕಾಣಿಸುತ್ತದೆ. ಬಲಭಾಗದ ಕಾಲು ಹಾದಿ ಹಿಡಿದು ಬಂದಲ್ಲಿ ಕೆಳಮಟ್ಟೆಯನ್ನು ಮುಟ್ಟುವವರೆಗೆ ಕಾಣಿಸದು. ಉದುರಿ ಹರಡಿದ ದರುಗೆಲೆಗಳ ಲರಲರ ಸದ್ದು ಕೇಳಿ ಕಾರಿಯಪ್ಪ ಅಲ್ಲೇ ಕಾದು ನಿಂತ, ನೋಟ ಹಿಮ್ಮರಳಲಿಲ್ಲ. ಹೊತ್ತು ಮಿಂಚಿನಂತೆ ಮಿಂಚಿ ಹಸುರುಕ್ಕುವ ವನಶ್ರೀಯಲ್ಲಿ ವ್ಯಕ್ತಿ ಗೋಚರಿಸಿದ. ಆ ಚಿಗುರು ಮೀಸೆಯ ನವತರುಣನನ್ನು ನೋಡುತ್ತಲೂ ಕಾರಿಯಪ್ಪನ ಮುಖ ಅರಳಿತು.

"ನೀನೇ ಇರಬಹುದೆಂದು ಊಹಿಸಿಯೇ ನಾನು ಇಲ್ಲಿಗೆ ಬಂದದ್ದು !"

ಚಂಗಪ್ಪ ಹುಬ್ಬೇರಿಸಿದ "ಅದು ಹೇಗೆ ?"

"ಅತೀಂದ್ರಿಯ ಪ್ರಜ್ಞೆ !"

ಇಬ್ಬರ ಮುಖದಲ್ಲೂ ಹಸನಾದ ಮುಗುಳು ನಗೆ ಮೂಡಿತು. ಕಾವೇರಿ–ಗಂಗೂ ಹೊರಜಗಲಿಗೆ ಬಂದರು. ಸ್ವಾಗತದ ಕುರುಹಾಗಿ ಮುಖ ಮಂಡಲ ಅರಳಿದುವು.

"ಅಪ್ಪ ಅಮ್ಮ ಚೆನ್ನಾಗಿದ್ದಾರೆಯೆ ?"

ತಮ್ಮನನ್ನು ಕೇಳಿದಳು ಗಂಗೂ. ತಾನು ಬಾಗಂಡಕ್ಕೆ ಬಂದಮೇಲೆ ಇದೇ ಮೊದಲ ಬಾರಿಗೆ ಬಂದ ತಮ್ಮನನ್ನು ನೋಡಿ ಅವಳಿಗಾದ ಸಂತೋಷ ಅಷ್ಟಿಷ್ಟಲ್ಲ. ಅಂತರ್ಗತ ಪ್ರೀತ್ಯಾದರವೆಲ್ಲ ಮುಖಭಾವದಲ್ಲಿ ನಲಿದಾಡಿತು. ಬೆಳಗಿದ ತಂಬಿಗೆಯಲ್ಲಿ ನೀರನ್ನು ತಂದುಕೊಟ್ಟಳು. ಕೈಕಾಲು ತೊಳೆದುಕೊಂಡು ಚಂಗಪ್ಪ ಒಳಬಂದ. ನಾಲ್ವರು ಜಗುಲಿಯಲ್ಲಿದ್ದ ಬೆಂಚಿನ ಮೇಲೆ ಕುಳಿತುಕೊಂಡರು. ಎರಡೂ ಮನೆತನದ ಸುಖ-ದುಃಖಗಳು ಅಲ್ಲಿ ಕರಗಿದುವು.

ಆತ್ಮೀಯತೆಯ ಸಾನ್ನಿಧ್ಯದಲ್ಲಿ ಹೊತ್ತು ಸಾನಂದದಿಂದ ಉರುಳಿತು. ಪರಿಮಳ ಸೂಸುವ ಕಾಫಿಯನ್ನು ಸಿಹಿಕಾರಗಳೊಂದಿಗೆ ತಂದಳು ಗಂಗಮ್ಮ.

ಕಾರಿಯಪ್ಪ ಭಾವನ್ಯೆದುನನೊಡನೆ ತನ್ನ ಜಮೀನಿನತ್ತ ಹೊರಟ. ಕೆಳಮಟ್ಟಿಯ ಮೆಟ್ಟಿಲುಗಳನ್ನು ಇಳಿದ ಮೇಲೆ ಕೆಳಗಡೆ ಕುರುಚಲು ಗಿಡ ಗಳಿಂದ ಕೂಡಿದ ವಿಶಾಲವಾದ 'ಹೆಬ್ಬಯಲು'....ಸಾನು ಪ್ರದೇಶ. ಅಲ್ಲಿ ನೂರಿನ್ನೂರು ಹಸುಗಳನ್ನಾದರೂ ಮೇಯಿಸಬಹುದು. ಬಹಳ ಮಟ್ಟಿಗೆ ನೆರೆ ಹೊರೆಯ ಹಸುಗಳು ಅಲ್ಲಿಗೆ ಮೇಯಲು ಬರುತ್ತವೆ. ಪಕ್ಕದಲ್ಲೇ ಬೇಸಗೆಯಲ್ಲಿ ಬತ್ತಿಹೋಗದ ತಿಳಿನೀರಿನ ಚಿಲುಮೆಯೂ ಇದೆ. ಅಲ್ಲಿಂದ ಕೆಳಗಡೆ ಕಣ್ಣೋಟ ಹರಿಯುವವರೆಗೂ ಹರಡಿದ ವಿಶಾಲವಾದ ಗದ್ದೆಯ ಕೋಗು—ಆ ಹಸುರು ಸೂಸುವ ಪೈರನ್ನು ನೋಡುವುದೇ ಒಂದು ಆನಂದ. ಸಾಲ್ಕೂ ಬದಿಗೆ ಹರಿಯುವ ನೀರಿನ ಜುಳ ಜುಳು ನಿನಾದ.

ಆ ಪೈರು ಪಚ್ಚೆಯ ವಿಸ್ತೀರ್ಣದಲ್ಲಿ ನೂರಾರು ಮಂದಿ ಭಾಗಸ್ಥರಿದ್ದಾರೆ. ಅವರಲ್ಲಿ ಕಾರಿಯಪ್ಪನೂ ಒಬ್ಬ. ಅಲ್ಲಲ್ಲಿ-ಸುತ್ತಮುತ್ತ ಏಲಕ್ಕಿ ಕಾಫಿ ತೋಟಗಳೂ ಇವೆ. ಬಹಳ ಮಟ್ಟಿಗೆ ಆ ಕ್ಷೇತ್ರ ಸಣ್ಣ ಹಿಡುವಳಿದಾರರಿಗೆ ಸೇರಿದ್ದು. ನಾಲ್ಕಾರು ಎಕರೆಗಳಿಗೆ ಒಬ್ಬ ಒಡೆಯ. ಜೊತೆಗೆ ಒಂದೆರಡು ಎಕರೆ ತೋಟವಿದ್ದರೆ ಹೆಚ್ಚು, ಜನರಲ್ಲಿ ಹುರುಪಿದೆ ಭೂಮಿ ಸಾಲದು. ಎಲ್ಲರೂ ಅಲ್ಲಲ್ಲಿ ಅವರವರ ಯೋಗ್ಯತೆಗನುಸಾರವಾಗಿ ಸಣ್ಣ-ದೊಡ್ಡ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಅಲ್ಲಿಂದಲೇ ಹೆಣ್ಣು ಕೊಟ್ಟು—ತಂದು ಸಂಬಂಧಗಳೂ ನಡೆದಿವೆ. ಎಲ್ಲಾ ಸಾಮಾಜಿಕ ವಲಯಗಳಲ್ಲಿರಬಹುದಾದಂತಹ ಗುಣ ದೋಷಗಳೂ, ಆಡಂಬರ-ಸೊಗಸುಗಾರಿಕೆಗಳೂ ಇಲ್ಲಿವೆ—ಪ್ರಕೃತಿಯ ಮಹಾ ವರವೋ ಎಂಬಂತೆ.

ಆ ನಾಲ್ಕಾರು ಎಕರೆ ತೋಟ-ಗದ್ದೆಗಳನ್ನು ಒಂದು ಸುತ್ತು ಹಾಕುವುದ ರೊಳಗಾಗಿ ಮುಗಿದು ಹೋಯಿತು. ಹಿಂದಿರುಗುತ್ತ ಕಾರಿಯಪ್ಪ ಅಂದ,

"ಇದಿಷ್ಟು ಜಮೀನು ನಮ್ಮ ಜೀವನಕ್ಕೆ ಸಾಕಾಗುವುದಿಲ್ಲ. ಎಲ್ಲಾ ದರೂ ನಾಲ್ಕಾರು ಎಕರೆ ಹೊಂದಿಸಿಟ್ಟುಕೊಳ್ಳೋಣವೆಂದರೆ ಸಾಧ್ಯವಾಗುತ್ತಿಲ್ಲ. ಸರ್ಕಾರಿ ಜಮೀನು ಬೇಕಾದಷ್ಟಿದೆ. ಇಂಗ್ಲೀಷ್ ಪ್ಲಾಂಟರ್ಸ್ ಕೇಳಿದೊಡನೆ ಮಂಜೂರಾಗುತ್ತದೆ. ನಾವು ಕೇಳಿದರೆ ಇಲ್ಲವೇ ಇಲ್ಲ. ವಿಚಾರವನ್ನು

ನ್ಯಾಯ ಪೀಠದತನಕ ಒಯ್ಯೋಣವೆಂದರೂ ಇವರ ನಿಷ್ಠುರ ನ್ಯಾಯಸ್ಥಾನ ದಲ್ಲಿ ನಮಗೆ ನ್ಯಾಯ ದೊರಕುವುದು ಕನಸಿನಮಾತು."

"ನಮ್ಮನ್ನು ಶುದ್ಧ ಮೂರ್ಖರು ಎಂದು ಅವರು ತಿಳಿದುಕೊಂಡಿರುವುದ ರಿಂದಲೇ ಈ ವ್ಯವಹಾರ. ನೋಡೋಣ, ನಮಗೂ ಒಂದಲ್ಲ ಒಂದು ದಿನ ಇವರಿಗೆ ಬುದ್ಧಿ ಕಲಿಸುವ ಅವಕಾಶವನ್ನು ದೇವರು ಕೊಟ್ಟೇ ತೀರುತ್ತಾನೆ. ಇನ್ನೂ ಎಷ್ಟು ದಿನ ಈ ದಬ್ಬಾಳಿಕೆ ?"

"ಧೂರ್ತ ಜನ....ಕಸಿಯುವುದು ದೋಚುವುದು ಇದೇ ಇವರ ನೀತಿ!"

"ಐವತ್ತೆಕರೆ ಜಮೀನಿಗೆ ಅರ್ಜಿಹಾಕು, ಏನಾಗುತ್ತೋ ನೋಡೋಣ."

"ಅಯ್ಯೋ, ಎಷ್ಟು ಬಾರಿ ಹಾಕಲಿಲ್ಲ ? ಅವೆಲ್ಲ ನೇರವಾಗಿ ಕಸದ ಬುಟ್ಟಿಗೆ ಹೋಗುತ್ತವೆ."

ಚಂಗಪ್ಪ ಸಿಟ್ಟಿನಿಂದ ಹೇಳಿದ "ನಾವು ಸುಮ್ಮನಿರುವುದು ತಪ್ಪು. ನೇರ ವಾಗಿ ರೆಸಿಡೆಂಟರಲ್ಲಿಗೆ ಹೋಗಿ ಕೇಳಬೇಕು. ಹತ್ತಿಪ್ಪತ್ತು ಜನ ಕೂಡಿಕೊಂಡು ಹೋದರೆ ಒಂದಿಷ್ಟು ಬೆಲೆ ಬರುತ್ತೆ. ಭೇಟಿಗೆ ಅವಕಾಶ ಕೊಡುವುದಿಲ್ಲ, ಗೊತ್ತು. ಆದರೂ ಹೊಡೆದಾಡಬೇಕು. ನಾವೂ ಬುದ್ಧಿವಂತರು ಎಂಬುದಿಷ್ಟು ಅವರಿಗೂ ತಿಳಿಯಲಿ!"

ಕಾರಿಯಪ್ಪ ನಕ್ಕುಬಿಟ್ಟ.

೪

ಕಾಂಗ್ರೆಸ್ಸು....ಚಳವಳಿ....ಅಸಹಕಾರ....

ಘೋರಣೆ....ದಬ್ಬಾಳಿಕೆ....ಕುಯುಕ್ತಿ....

ಭಾರತದಾದ್ಯಂತ ಎರಡೂ ಬಣಗಳ ತಿಕ್ಕಾಟ ನಡೆಯುತ್ತಲೇ ಇತ್ತು.

ಪ್ರಾಣಹಾನಿ, ಮಾನಹಾನಿ, ಆಸ್ತಿಹಾನಿ, ಅರ್ಥಹಾನಿಗಳಿಗಂತೂ ಇತಿ ಮಿತಿಯೇ ಇಲ್ಲ. ಯಾವ ಪತ್ರಿಕೆಯಲ್ಲಿ ನೋಡಿದರೂ ಬಿಸಿ ಬಿಸಿ ಸುದ್ದಿ, ಯಾರ ಬಾಯಲ್ಲಿ ನೋಡಿದರೂ ಶಾಂತಿ–ಕ್ರಾಂತಿಗಳ ವಿಭಿನ್ನ ವಾದ.

....ವಿಚಾರ ಶಕ್ತಿ ಸರ್ಕಾರದ ಮೂಸೆಯಲ್ಲಿ ಕರಗುತಿತ್ತು.

....ಭಾವಶಾಂತಿ ಗೊಂಡಾರಣ್ಯದ ಪಾಲಾಗಿತ್ತು.

ವಿದೇಶೀ ವಲಯಗಳಲ್ಲಿ ಭಾರತದ ವಿಚಾರ ಪ್ರಚಾರದಲ್ಲಿರುವ ರೀತಿಯೇ ಬೇರೆ. ಕೋವಿಯ ಗುರಿಯಲ್ಲಿ ತಮ್ಮ ಸ್ವಾತಂತ್ರ್ಯವನ್ನು ಗಳಿಸಿದ ಕ್ರಾಂತಿ ವೀರರಿಗೆ ಈ ಚಳವಳಿ–ಅಸಹಕಾರ ನಗೆ ಪಾಟಲಾಗಿದ್ದರೆ ಅದೇನೂ ವಿಶೇಷ ವಲ್ಲ.

ಕಾಲಶಕ್ತಿ ಮಾನವ ಜಗತ್ತಿನ ಕ್ಷುಲ್ಲಕ ವಿಚಾರಗಳನ್ನು ಬದಿಗೊತ್ತಿ ಮುನ್ನಡೆಯುತಿತ್ತು....ನಿರಂತರವಾಗಿ....ಅನಂತವಾಗಿ....

ನಾಲ್ಕಾರು ವರ್ಷಗಳು ಹೇಗೆ ಬಂದುವೋ....ಹಾಗೆಯೇ ಸಂದುವು.

ಕಾರಿಯಪ್ಪನಿಗೆ ಈಗ ಇದ್ದ ಅಲ್ಪಸ್ವಲ್ಪ ಜಮೀನನ್ನು ಉಚ್ಛ್ರಾಯ ಸ್ಥಿತಿಗೆ ತರುವುದು ಸಾಧ್ಯವಾಯಿತೇ ಹೊರತು ವಿಸ್ತರಿಸಲಾಗಲಿಲ್ಲ. ಸುತ್ತ ಮುತ್ತ ಎಲ್ಲಾದರೂ ಸಿಕ್ಕಿದರೆ ಕೊಂಡುಕೊಳ್ಳುವ ಯೋಚನೆಯೂ ಇತ್ತು. ಆದರೆ ಒಂದಿಂಚು ನೆಲ ಸಿಗಬೇಕಲ್ಲ? ನೋಡಿ ನೋಡಿ ಮದಮುಟ್ಟುಗಳ ವ್ಯಾಪಾರವನ್ನಾದರೂ ನಡೆಸೋಣವೆಂದು ವ್ಯಾಪಾರ ಕ್ಷೇತ್ರಕ್ಕಿಳಿದ. ಆದರೆ ಅದರಿಂದ ಲಾಭ ಬರುವುದಿರಲಿ, ದೇಶೀಯರೇ ಆದ ಕೆಲವು ಅತ್ಯಂತ ದುರ್ದಾಂತ ದುರಾಚಾರೀ ಫಾರೆಸ್ಟಿನವರ ಕೈಗೆ ಸಿಕ್ಕಿ ನರಳಬೇಕಾಯಿತು. ವ್ಯಾಪಾರ ನೈಪುಣ್ಯತೆ ಸಾಲದೆ ಆ ವ್ಯವಹಾರವನ್ನು ಅಲ್ಲಿಗೆ ಬಿಟ್ಟು ಪುನಃ ಕಾಫಿ–ಏಲಕ್ಕಿಯ

ವ್ಯಾಪಾರವನ್ನು ಕೈಕೊಂಡು ಕೈ ಖರ್ಚಿಗೆ ನಾಲ್ಕು ಕಾಸು ಗಳಿಸಿಕೊಳ್ಳುವ ಸನ್ನಾಹ ಹೂಡಿದ.

ಜೀವನದ ರಥ ನೇರ ಹಾದಿಯಲ್ಲಿ ಹರಿದು ಅರ್ಧ ದಶಕಗಳ ಗಡಿಯನ್ನು ಮುಟ್ಟಿದಾಗ ಕಾರಿಯಪ್ಪ ಎರಡು ಗಂಡುಮಕ್ಕಳ ತಂದೆಯಾದ. ಅಂದಿಂದಿಗೂ ಏಕಮಾತ್ರ ಪುತ್ರನನ್ನು ಪಡೆದ ಮನೆತನಕ್ಕೆ 'ಮಾದೇವ' ಇಬ್ಬರು ಗಂಡು ಮಕ್ಕಳನ್ನು ಪ್ರಸಾದಿಸಿ ಸಣ್ಣ ಕುಟುಂಬವನ್ನು ಆನಂದ ಸಾಗರದಲ್ಲಿ ಮುಳುಗಿಸಿದ. ಹುಡುಗರು ಸೊಂಪಾಗಿ ಬೆಳೆದು ವಿದ್ಯಾರ್ಥಿ ಜೀವನಕ್ಕೆ ಕಾಲಿಟ್ಟರು. ಮನೆ ಕುಲು ಕುಲು ನಗೆಯ ವಾತಾವರಣದಿಂದ ನಲಿಯತೊಡಗಿತು.

ಹಳೆಯ ಮನೆಯನ್ನು ಕೆಡವಿ ಹೊಸ ಮನೆಯನ್ನು ಕಟ್ಟುವ ಯೋಚನೆ ಕಾರಿಯಪ್ಪನಿಗೆ. ಆದರೆ ಅದಕ್ಕೆ ಸಂಪೂರ್ಣ ವಿರೋಧ ಕಾವೇರಿಯದು. ಮೂರು ತಲೆಮಾರುಗಳ ನಂತರ ಈ ಮನೆತನಕ್ಕೆ ಇಬ್ಬರು ಗಂಡುಮಕ್ಕಳು ದಕ್ಕಿದ್ದಾರೆ. ಅವರ ವಿದ್ಯಾಭ್ಯಾಸ ಮೊದಲಾಗಲಿ ಎಂದು. ಅದರ ವಿರುದ್ಧ ಯಾರೂ ಸೊಲ್ಲೆತ್ತಲಿಲ್ಲ. ಆದ್ದರಿಂದ ಹಳೆಯ ಮನೆ ಜೀವದಾನ ಪಡೆಯಿತು.

ಈಚೆಗೆ ಗಂಗಮ್ಮನ ಆರೋಗ್ಯವೇ ಸರಿಯಾಗಿರಲಿಲ್ಲ. ಯಾವುದೋ ಅಂತರ್ಗತ ದೈಹಿಕ ಬೇನೆ ಜೀವನಾಡಿಯ ಎಳೆಎಳೆಯನ್ನೂ ಸುಡುತಿತ್ತು. ಯಾವ ಚಿಕಿತ್ಸೆಯೂ ಆಕೆಗೆ ನೆರವು ನೀಡಲಿಲ್ಲ. ಸಂತಸದ ನೆಲೆಯಲ್ಲಿ ಸಂತಾಪದ ಬಿಸುಸುಯ್ಯಾಡತೊಡಗಿತು. ಬುದ್ಧಿಮತಿಯಾದ ಮಡದಿ ನಿರ್ಲಕ್ಷ್ಯದಿಂದ ರೋಗವನ್ನು ಬರಮಾಡಿಕೊಂಡಳೇ ಎಂಬಷ್ಟು ಸಿಟ್ಟು ಕಾರಿಯಪ್ಪನಿಗೆ. ಏನುಗತಿ ಎಂಬ ಕೊರಗು ಕಾವೇರಿಗೆ. ಈಚೆಗೆ ಹವಾ ಬದಲಾವಣೆಗಾಗಿ ಹೆಚ್ಚು ಹೆಚ್ಚಾಗಿ ತವರು ಮನೆಯಲ್ಲಿಯೇ ಇರುತ್ತಾಳೆ. ಆದರೂ ದೇಹ ಪ್ರಕೃತಿ ಸುಧಾರಿಸಲಿಲ್ಲ. ದಂಪತಿಗಳನ್ನು ಮಂಗಳೂರಿನ ತೀರ ಪ್ರದೇಶಕ್ಕೆ ಕಳುಹಿಸಿ ಕಾವೇರಿ ಗದ್ದೆ ತೋಟಗಳ ಉಸ್ತುವಾರಿಯನ್ನು ತಾನೇ ಹೊತ್ತಳು. ವಾರಕ್ಕೆ ಒಬ್ಬಿಬ್ಬರು ಊರಾಳುಗಳ ಸಹಾಯ ದೊರೆಯುತಿತ್ತು. ಶಾಲೆ ಮುಗಿದ ನಂತರ ಮೊಮ್ಮಕ್ಕಳು ಅಲ್ಪ ಸ್ವಲ್ಪ ನೆರವು ನೀಡುತ್ತಿದ್ದರು.

ವನ್ಯ ಪ್ರದೇಶದ ತಂಪು ಹವೆಯಿಂದಲೂ ವಿಮಲ ವಂಶತ್ವದಿಂದಲೂ ಮಕ್ಕಳಿಬ್ಬರೂ ಸೊಂಪಾಗಿ ಬೆಳೆದರು. ತಂದೆಯ ದೇಹದಾರ್ಢ್ಯತೆ–ತಾಯಿಯ ಸೌಂದರ್ಯವನ್ನು ಪಡೆದ ಮಕ್ಕಳಲ್ಲಿ ಹಿರಿಯವನಾದ ಮುದ್ದಪ್ಪನನ್ನು

ಎಲ್ಲರೂ ಕರೆಯುತ್ತಿದ್ದುದು 'ಮುದ್ದು' ಎಂದು. ಎರಡನೆಯವನಾದ ಮಾದಯ್ಯನನ್ನು 'ಮಾದು' ಎಂದು. ನೆರೆಹೊರೆಯ ಸಹಪಾಟಿಗಳೊಂದಿಗೆ ಹುಡುಗರಿಬ್ಬರೂ ಹೈಸ್ಕೂಲಿನ ಹಂತವನ್ನು ಸರಾಗವಾಗಿ ಏರಿದರು. ಜೀವನ ಪರಿಸ್ಥಿತಿಯ ಕತ್ತರಿಯಲ್ಲಿ ಸಿಕ್ಕಿ ತೋಟದ ಉಸ್ತುವಾರಿ ಮನೆಯ ಜವಾಬ್ದಾರಿ ಹೆಗಲೇರಿದುದರಿಂದ ಹಾಳು ಹವ್ಯಾಸಗಳಿಗೆ ಅವಕಾಶವಿರಲಿಲ್ಲ. ಕಾವೇರಿಗೆ ಅದೊಂದು ಹಿರಿಯ ಸಮಾಧಾನ.

ಪ್ರಕೃತಿ ಪ್ರಸನ್ನೆಯಾಗಿದ್ದಾಳೆ. ಮಳೆಬೆಳೆಗಳೂ ಸಮೃದ್ಧಿಯಾಗಿವೆ.

ಆದರೆ ...!

ಜನಗತಿಯಲ್ಲಿ ಮಾತ್ರ ತೀವ್ರ ಏರುಪೇರು.

ಧೀಮಂತ ವರ್ಗದ ಶ್ರೀಮಂತ ಭಂಡಾರದಲ್ಲಿ ಸಕಲ ಸುಖ ಸಾಧನ.... ಸಾಮಾನ್ಯ ವರ್ಗದ ಅಜ್ಞಾನದ ಕೋಟೆಯೊಳಗೆ ಬಡತನ-ರೋಗಗಳ ಉತ್ತಾಲನರ್ತನ....ದೇಶದ ಪರಿಸ್ಥಿತಿ ಜೀವನ ಪರಿಸ್ಥಿತಿ ಒಂದಾಗಿ ತಾಕಲಾಡುತ್ತಿರುವ ಭಯಂಕರ ಸನ್ನಿವೇಶದಲ್ಲಿ ಅತೀವ ಅಶಾಂತಿ-ಅತೃಪ್ತಿ ವ್ಯಾಪಕವಾಗಿ ಹಬ್ಬಿ, ಗುರಿಯ ನೇರಕ್ಕೆ ಮುನ್ನುಗ್ಗುವ ಕೆಚ್ಚನ್ನು ನೂರ್ಮಡಿಯಾಗಿ ಗಳಿಸುತ್ತಿತ್ತು, ದಲಿತ ಸಮಗ್ರ ಮಾನವ ಶಕ್ತಿ.

ರಾಷ್ಟ್ರದಾದ್ಯಂತ ಅಖಿಲ ಶಾಂತಿವೀರರು ಗಾಂಧೀಜಿಯವರ ಸಂದೇಶಕ್ಕಾಗಿ-ಆದೇಶಕ್ಕಾಗಿ ಮೈಯೆಲ್ಲಾ ಕಿವಿಯಾಗಿದ್ದರು. ಹೇಗೆಂದರೆ ಹಾಗೆ ಪ್ರವಹಿಸುತಿತ್ತು ಜನಪ್ರವಾಹ ಗಾಂಧೀಜಿಯವರು ಅಸಹಕಾರ ಚಳವಳಿ ಹೂಡಬೇಕೆಂದು ಕರೆ ನೀಡಿದ್ದೇ ತಡ, ಚಳವಳಿಯ ಆಂದೋಲನ ಅಂಬರದೆತ್ತರದಲ್ಲಿ ಬಾವುಟವನ್ನು ಹಾರಿಸಿತು. ಸೂತ್ರಧಾರಿಯ ಭವ್ಯ ನಿರೀಕ್ಷೆಗೆ ಮೀರಿತು ಜನಸಂಘಟನೆ. ದೇಶೀಯರಾದ ದೀನರು-ದಲಿತರು ಅಂದಿಂದಿಗೂ ಅನುಭವಿಸಿದ ಕಷ್ಟ-ನಷ್ಟಗಳ ದಾವಾಗ್ನಿ ದೇಶಕ್ಕೆ ದೇಶವನ್ನೇ ಸುಡುತ್ತಿರುವಂತೆ ಭಾಸವಾಗುತಿತ್ತು.... ವಾತಾವರಣ ಕ್ಷಣಕ್ಷಣಕ್ಕೂ ಹದಗೆಡುತಿದ್ದು ಸಾವು ನೋವುಗಳ ಕೋಟೆ ಬೆಳೆಯುತಿತ್ತು....

ಶಾಲಾ ಕಾಲೇಜುಗಳಿಂದ ಮಕ್ಕಳು ಹೊರ ಬಂದರು. ಸಂಘ-ಸಂಸ್ಥೆಗಳು ಒಂದಾದುವು. ಆಫೀಸುಗಳು ಬರಿದಾದುವು. ನಾರೀಮಣಿಯರು ಕೈಮಕ್ಕಳ ಸಹಿತ ತೆರೆಯ ಮರೆಯಿಂದ ಹೊರಬಿದ್ದರು. ಅಸಹಕಾರ ಚಳವಳಿ

ರಾಷ್ಟ್ರವ್ಯಾಪಿಯಾಗಿ ಬೆಳೆಯಿತು. ನಿರ್ಧೂಮ ಅಗ್ನಿಜ್ವಾಲೆ ಮನೆಮನೆಯನ್ನೂ ಮಠಮಠಗಳನ್ನೂ ಎಣಿಯಿಲ್ಲದೆ ಸುಡುತ್ತಿತ್ತು. ಹೊಡೆತ-ಬಡಿತ-ಸಾವು-ನೋವುಗಳಿಗೆ ಇತಿಮಿತಿಯೇ ಇಲ್ಲ. ನುಗ್ಗಿ ಬರುವ ಗೋಲಿಗಳಿಗೆ ಎದೆಗೊಟ್ಟ ಶಾಂತಿವೀರರ ಕೆನ್ನೀರು ಎಲ್ಲೆಂದರಲ್ಲಿ ಚೆಲ್ಲುತ್ತಿತ್ತು....ಹಾದಿಬೀದಿಗಳಲ್ಲಿ ಕಿವಿ ಕಿವುಡಾಗುವಂತಹ ಜಯಘೋಷ,

ವಂದೇಮಾತರಂ !

ವಂದೇಮಾತರಂ !

ವಂದೇಮಾತರಂ !

....ಕರುಳಿನ ಕರೆ !....ಹಾಹಾಕಾರ !

ದೇಶಮಾತೆಯ ಆರ್ತಕರೆಗೆ ಓಗೊಟ್ಟು ಮುದ್ದು, ಮಾದು ಇತರ ಕರ್ತವ್ಯನಿಷ್ಠ ಮಕ್ಕಳೊಂದಿಗೆ ಶಾಲೆಯಿಂದ ಹೊರಬಿದ್ದರು. ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಶಾಲಾಕಾಲೇಜುಗಳು ಅನಿರ್ದಿಷ್ಟ ಕಾಲ ರಜೆಯನ್ನು ಸಾರಿದುವು. ರಾಷ್ಟ್ರದ ಮೂಲೆಮೂಲೆಯಲ್ಲೂ ಕಾಂಗ್ರೆಸ್ಸಿನ ಅಭ್ಯುದಯವಾಗಿ ವಿಜೃಂಭಿಸುತ್ತಿತ್ತು...ಅಸಹಕಾರ ಚಳವಳಿ ಅಸಹನೀಯವಾದ ದಬ್ಬಾಳಿಕೆ ಪೈಪೋಟಿಗಿಳಿದುವು ...ಅಶಾಂತಿಯ ಅದ್ಭುತ ಕಿಡಿ ಮನೆ–ಮಠಗಳನ್ನು ಒಂದೇ ಸಮನೆ ದಹಿಸಹತ್ತಿತು. ಕೊನೆ ಎಂದಿಗೆ ಎಂಬುದೇ ಅಸ್ಪಷ್ಟ. ಕಾಲಧರ್ಮ ಅಭಿರಾಮ ಭಂಗಿಯಲ್ಲಿ ಅಭಿಶಪ್ತ ಹೆಜ್ಜೆಗಳನ್ನು ಮುಂದಿಡುವುದನ್ನು ಆರ್ತಳಾಗಿ ನಿಟ್ಟಿಸುವ ಭಾರತಮಾತೆ....ಧರ್ಮ-ದೇಶಗಳ ರಕ್ಷಣೆಗೆ ಕೊರಳೆತ್ತಿ ಕೂಗುವ ಮಾನವತೆ.

ಆದರೆ...ಕಿವಿಗೊಡುವವರೆಲ್ಲೋ....!

ಪ್ರಸ್ತುತ ಪರಿಸ್ಥಿತಿಯಲ್ಲಿ ಒಂದೊಂದು ದಿನ ಕಳೆಯುವುದೂ ಕಷ್ಟವೇ. ಕಾರಿಯಪ್ಪ ಗದ್ದೆ ತೋಟಗಳ ಕೆಲಸ ಮುಗಿಸಿ ಮನೆಗೆ ಮರಳಿದಾಗ ಮೊದಲು ಆದ ದರ್ಶನ ತಾಯಿಯದು. ಅದೇತಾನೆ ಪ್ರತ್ಯಗ್ನ ಸ್ನಾನ ಮಾಡಿದ್ದಾಳೆ. ಹಿಂಭಾಗದಲ್ಲಿ ಇಳಿಬಿದ್ದ ಘನಕೃಷ್ಣ ಕೇಶಪಾಶಗಳಲ್ಲಿ ನೀರು ಹನಿ ಹನಿಯಾಗಿ ತೊಟ್ಟಿಕ್ಕುತ್ತಿತ್ತು. ಗಂಗೂ ಬೆಳಗಿದ ತಂಬಿಗೆಯಲ್ಲಿ ನೀರನ್ನು ತಂದುಕೊಟ್ಟಳು. ಕಾರಿಯಪ್ಪ ಕೈ ತೊಳೆದುಕೊಳ್ಳುತ್ತ ಅಂದ,

"ಮೈಸೂರಿನ ತಾಳಗಟ್ಟೆ ಮಂಜುನಾಥ್ ಬಂದಿದ್ದಾನೆ. ಅವನಿಗೆ

ನಮ್ಮ ಹುಡುಗರ ಸುದ್ದಿಯೇ ತಿಳಿಯದಂತೆ. ಕಳೆದ ತಿಂಗಳು ಮೂವರೂ ಒಂದು ವಾರ ಒಟ್ಟಿಗೆ ಇದ್ದರಂತೆ. ಅನಂತರ ಯಾವ ಕಡೆ ಹೋದರೆಂಬುದು ತಿಳಿಯದು ಎನ್ನುತ್ತಾನೆ."

ಅತ್ತೆ ಸೊಸೆಯರ ಮುಖ ಕಪ್ಪಿಟ್ಟಿತು. ಹುಡುಗರಿಬ್ಬರೂ ಮನೆಬಿಟ್ಟು ಆರು ವಾರಗಳ ಮೇಲಾಗಿತ್ತು. ಇದುವರೆಗೆ ಅವರಿಂದ ಕಾಗದ ಪತ್ರಗಳು ಸಹ ಬಂದಿರಲಿಲ್ಲವಾದುದರಿಂದ ಇನ್ನಷ್ಟು ಕಳವಳ ಮನದಲ್ಲಿ ಮೂಡಿತು. ಗಂಗೂ ಮಾತಾಡಲಿಲ್ಲ. ಕಣ್ಣುಗಳಂಚಿನಲ್ಲಿ ಮಿನುಗಿದ ಹನಿ ಫಳಫಳ ಮಿಂಚಿತು. ಕಾವೇರಿ ಅಭಿಭೂತಳಂತೆ, ನಿಶ್ಚೇಷ್ಟಳಂತೆ ದುಃಖ ದೈನ್ಯಗಳ ಮುದ್ರೆಯೊಡನೆ ನಿಂತಳು. ಕಣ್ಣುಗಳಲ್ಲಿ ಲಾಲಿಮೆ ಮಿನುಗುತಿತ್ತು.

ಕಾರಿಯಪ್ಪ ಆಕ್ರೋಶಿಸುತ್ತ ಅಂದ,

"ಇದೆಂತಹ ಕರ್ಮವೋ.. ಅಂದಿಂದಿಗೂ ಈ ಮನೆಯಲ್ಲಿ ಕಣ್ಣೀರೇ ಆಗಿದೆ. ಆದದ್ದಾಗಲಿ ಇನ್ನು ನೀವ್ಯಾರೂ ಕಂಬನಿ ಕರೆಯಬೇಡಿ. ಬೆಳೆದ ಹುಡುಗರಿಗೆ ಮನೆಗೊಂದು ಕಾಗದ ಬರೆಯಬೇಕೆಂಬಷ್ಟು ಬುದ್ಧಿ ಓಡುವುದಿಲ್ಲವೇ ? ಎಲ್ಲಾ ಉದಾಸೀನ...ನಿರ್ಲಕ್ಷ್ಯ. ನಾವೇ ಈ ಗಟ್ಟಿ ಮನಸ್ಸು ಮಾಡಬೇಕು."

ಕಾವೇರಿ ಮಾತಾಡಲಿಲ್ಲ. ಮೊಮ್ಮಕ್ಕಳ ಮೇಲಿಟ್ಟ ಪ್ರೀತಿ ಅಭಿಮಾನ ಸಾಮಾನ್ಯದ್ದಲ್ಲ. ಜೀವನದ ಜೀವನಾಡಿ ಕಟಕಟನೆ ತುಂಡುಗಡಿದಂತೆ ಭಾಸವಾಯಿತು ಮಾನಸ ಮಂದಿರದಲ್ಲಿ ಮಹಾ ವಿಕ್ಷೋಭೆಯ ಪ್ರಭಂಜನ ಆಗ್ರಹಪೂರ್ವಕವಾಗಿ ನಡೆಯುತಿತ್ತು. ಆದರೂ ತೋರಗೊಡದಂತೆ ತನ್ನನ್ನು ತಾನು ಹತೋಟಿಯಲ್ಲಿಟ್ಟುಕೊಳ್ಳುತ್ತ ನುಡಿದಳು.

"ಎಲ್ಲಾದರೂ ಅರೆಸ್ಟಾಗಿ ಜೈಲಿನಲ್ಲಿದ್ದಾರೇನೋ...."

"ನನಗೂ ಆ ಅನುಮಾನವಿದೆ. ಹೊರಗಡೆ ಇದ್ದು ಪೆಟ್ಟು ತಿನ್ನುವುದಕ್ಕಿಂತ ಸೆರೆಯಲ್ಲಿರುವುದೇ ಲೇಸು....ಆದರೆ ಕಾಗದ ಬರಲಿಲ್ಲವಲ್ಲಾ ಅದೇ ಯೋಚನೆ." ಗಂಗೂ ಪರಿತಾಪದಿಂದ ನುಡಿದಳು. ಮುಖಮಂಡಲ ಕಳಾಹೀನವಾಯಿತು.

"ಒಂದು ವೇಳೆ ಜೈಲಿನಲ್ಲಿದ್ದರೆ ಕಾಗದ ಬರೆಯಲು ಅವಕಾಶ ದೊರೆಯುವುದಿಲ್ಲ....ಅಥವಾ ಉದಾಸೀನವೋ, ಎಷ್ಟೆಂದರೂ ಹುಡುಗಬುದ್ಧಿ."

"ನಮ್ಮಲ್ಲಿ ಮಾತ್ರವಲ್ಲ; ಮನೆಮನೆಯಲ್ಲೂ ಇದೇ ವ್ಯವಹಾರ. ಮಡಿಕೇರಿ ನಂಜಪ್ಪನ ಮಗ ಪತ್ತೆ ಇಲ್ಲವಂತೆ. ಸುಭಾಸರೊಂದಿಗೆ ಸೇರಿ ಕೊಂಡಿದ್ದಾನೆ ಎಂದು ದೂರದ ವರ್ತಮಾನ. ಬಿಚ್ಚಿಯಂಡ ಕೃಷ್ಣಕುಮಾರ್ ಲಾಠಿ ಏಟು ತಿಂದು ಆಸ್ಪತ್ರೆಯಲ್ಲಿದ್ದಾನೆ. ಅವನ ಜೊತೆ ಪೆಟ್ಟು ತಿಂದವರು ಜೈಲಿನಲ್ಲಿದ್ದಾರಂತೆ. ಪಾಪ, ಅವರ ಕತೆ ಏನಾಗಿದೆಯೋ .. ಅಲ್ಲಿ ಕಷ್ಟ-ಸುಖ ಯಾರು ನೋಡಬೇಕು ? ನಿನ್ನೆ ಅರೆಸ್ಟ್ ಮಾಡಿದ ಜನರನ್ನು ಬಸ್ಸಿನಲ್ಲಿ ತುಂಬಿ 'ಬಿಸಲೆ ಘಾಟಿ'ಯಲ್ಲಿ ಬಿಟ್ಟು ಬಂದಿದ್ದಾರೆ. ಅವರಲ್ಲಿ ಹೆಂಗಸರು ಮಕ್ಕಳು ಸಹ ಇದ್ದರಂತೆ. ಜೈಲುಗಳಲ್ಲಿ ಸ್ವಲ್ಪವೂ ಸ್ಥಳವಿಲ್ಲದಂತೆ ತುಂಬಿ ಹೋಗಿವೆ. ಇನ್ನು ಅರೆಸ್ಟ್ ಮಾಡಿದರೆ ಇಡುವುದಾದರೂ ಎಲ್ಲಿ ? ಕಾಡು ಮೇಡುಗಳಲ್ಲಿ ಬಿಡುವುದೊಂದೇ ದಾರಿ. ಸರಕಾರ ಕಣ್ಣು ಬಿಡುತ್ತಿದೆ. ಇನ್ನಾದರೂ ಸಮಸ್ಯೆ ಬಗೆಹರಿದರೆ ಸಾಕು. ಈಗಿನ ಅನಿಶ್ಚಿತ ಪರಿಸ್ಥಿತಿಯಲ್ಲಿ ಜೀವನ ಕಷ್ಟ. ಕೆಲಸ ಕಾರ್ಯಗಳು ಸಾಗುತ್ತಿಲ್ಲ...ಯಾವುದಕ್ಕೂ ದೃಢ ಮನಸ್ಸಿನಿಂದ ಕೈಹಾಕುವಂತಿಲ್ಲ... ನೋಡೋಣ, ಏನೇನು ಆಗುತ್ತೋ, ದೇವರಿದ್ದಾನೆ."

ದೇಶದ ಪರಿಸ್ಥಿತಿಯನ್ನು ವಿಜಾತೀಯವಾದ ದನಿಯಲ್ಲಿ ಬಣ್ಣಿಸಿದ ಕಾರಿಯಪ್ಪ, ಸ್ತ್ರೀಯರು ಮಾತಾಡಲಿಲ್ಲ. ಸ್ವಲ್ಪ ಹೊತ್ತು ಭೀಷಣ ಮೌನ ರಾಜ್ಯವಾಳಿತು.

ಹೊತ್ತು ಒಂದರ ಅಂಚಿನಲ್ಲಿತ್ತು. ದಿನಮಣಿ ನಡು ನೆತ್ತಿಯ ಮೇಲೆ ಜ್ವಲಿಸುತಿದ್ದ.

ಚಿಲಿಪಿಲಿ ಹಕ್ಕಿಗಳು ತಂಪನ್ನಾಶ್ರಯಿಸಿವೆ. ಪ್ರಕೃತಿಯ ಉಡಿಯಲ್ಲಿ ಮುಗ್ಧ ಶಿಶುವಿನಂತೆ ವಿಶ್ರಮಿಸಿದ ಶೀತಲ ಕೊಡಗು ವರ್ಣರಂಜಿತ ವನಸುಮ ಗಳ ಉತ್ತರೀಯವನ್ನು ಹೊದ್ದಿದ್ದಾಳೆ. ತಂಗಾಳಿಯಲ್ಲಿ ತೂರಿಬರುವ ವಿಗ ಲಿತ ಕುಸುಮದಳಗಳಿಂದ ಅಂಗಳ ವರ್ಣಮಯವಾಗಿತ್ತು. ಹೊರಗಿನ ಶಾಂತ ಸುಂದರ ವಾತಾವರಣಕ್ಕೆ ಮನತೆತ್ತು ಕಾರಿಯಪ್ಪ ಜಗಲಿಯ ಮೇಲೆ ಮಂಡಿ ಸಿದ. ಅತ್ತೆ ಸೊಸೆಯರೂ ಅಲ್ಲೇ ಕುಳಿತರು. ಕಾತರಯುಕ್ತ ಚಿತ್ತ ಮಕ್ಕಳ ಪ್ರತೀಕ್ಷೆಯಲ್ಲಿತ್ತು. ಜೀವನ ಪರಿಸಿತ್ಥಿ–ಮಕ್ಕಳ ಭವಿಷ್ಯ ಆ ಮುಹೂರ್ತದಲ್ಲಿ ಮಾತುಕತೆಗೆ ವಸ್ತುವಾಯಿತು. ಹೊತ್ತು ಉರುಳಿದಷ್ಟೂ ಮಾತೃಚೇತನ ಅತ್ಯಂತ ವೇದನೆಯಿಂದ ನಲುಗುತ್ತಿದ್ದುದನ್ನು ಗಮನಿಸುತ್ತಲೂ ಕರುಣ

ಕಾತರ ಸ್ವರದಿಂದ "ನೀನು ಒಳ ಹೋಗಿ ಮಲಗಿಕೋ ಗಂಗೂ, ಸುಮ್ಮನೆ ಕಾಯುವುದೇಕೆ ?" ಎಂದಳು ಕಾವೇರಿ.

ಕಾರಿಯಪ್ಪ ಮಾತಾಡದೆ ಮಡದಿಯ ಕಡೆ ನೋಟ ಹೊರಳಿಸಿದ. ಏನೋ ಒಂದು ಬಗೆಯ ಉದಾಸೀನ ಮನೋಮಂದಿರವನ್ನು ವ್ಯಾಪಿಸಿತ್ತು. ಬಹಳ ಹೊತ್ತು ಕುಳಿತು ಅಶಕ್ತ ಶರೀರ ಬಳಲಿತ್ತು ; ಗಂಗಮ್ಮ ಎದ್ದು ಒಳ ಹೋದಳು. ಹೃದಯ ಭಾರವಾಗಿದ್ದರೂ ಶರೀರ ಗಾಳಿಯಲ್ಲಿ ತೇಲುತ್ತಿರುವಂತೆ ಭಾಸವಾಯಿತು ತೊಟ್ಟಿಯನ್ನು ದಾಟ ಒಳಕೋಣೆಗೆ ಕಾಲಿಟ್ಟಾಗ ಒಬ್ಬಳೇ ಅಲ್ಲಿ ಪವಡಿಸುವುದು ಸಹ ಬೇಸರವೆನಿಸಿತು. ಒಂದೆರಡು ಘಳಿಗೆ ಕಿಟಕಿಯ ಬಳಿ ನಿಂತಳು. ಹೊರ ಜಗತ್ತು ಚೈತ್ರೋತ್ಸವವನ್ನು ಆಚರಿಸುತಿತ್ತು. ಚೇತನಭರಿತ ಚೈತ್ರಾನಿಲ ತಣ್ಣಗೆ ಹೂ ಹಸ್ತಗಳಿಂದ ಮೈದಡವಿ ಹೋದ. ವನಪಕ್ಷಿಗಳಿಂಡು ಗಿಡಮರಗಳಲ್ಲಿ ವಿಶ್ರಮಿಸಿಕೊಳ್ಳುತಿದ್ದುವು. ಸ್ವಲ್ಪ ಹೊತ್ತು ನೆಟ್ಟ ದಿಟ್ಟಿಯಿಂದ ನಿಟ್ಟಿಸಿ ನೋಡಿ ಪಲ್ಲಂಕದೆಡೆಗೆ ಮರಳಿದಳು.

....ಬಂಧು ಜೀವವಲಯದಲ್ಲಿ ತನ್ನಂತಹ ದುಃಖಿನಿ ಇನ್ನಿಲ್ಲವೆಂಬಷ್ಟು ಒಡಲ ಸಂಕಟ ತುಂಬಿ ಕಂಬನಿಗಳು ಹನಿಹನಿಯಾಗಿ ಮೊಳೆತುವು. ಮುಖ ಕಮಲ ಬಾಡಿಸಿದ ಬಾಳೆಯ ಎಲೆಯಂತೆ ಬಾಡಿತು. ಯಾವುದೋ ಕಾಣದ ಕೈ ಹೃದಯವನ್ನು ಮೆಲ್ಲಮೆಲ್ಲನೆ ಹಿಸುಕುತ್ತಿರುವಂತೆ ಭಾಸವಾಗಿ...ಮೈ ಆಯಾಸದ ಬೀಡಾಯಿತು. ಹಾಗೇ ಪಲ್ಲಂಕದ ಮೇಲೆ ಅಡ್ಡಾದಳು. ಆದರಿಸಿ ಕರೆದು ಮೈಯೊತ್ತುವ ಮಾತೆಯ ಮೃದುಭಾವ ಪಲ್ಲಂಕಕ್ಕೆ ..ತನುಮನಗಳ ಘಾಸಿಯನ್ನು ನಿವಾರಿಸಬಲ್ಲ ತಾಣ ಅದೊಂದೇ.

ಕಾವೇರಿ ಒಳಬಂದು ಕುಳಿತುಕೊಂಡು ಹೇಳಿದಳು.

"ತಾಳಗಟ್ಟೆ ಬೆಳ್ಳಿಯಪ್ಪನಿಂದಲೂ ಕಾಗದ ಬಂದಿಲ್ಲವಂತೆ. ಎಲ್ಲರೂ ಒಂದೆಡೆ ಸೇರಿಕೊಂಡಿದ್ದಾರೆ....ಇವರಿಬ್ಬರೇ, ಆದರೆ ಯೋಚನೆ, ಎಲ್ಲರೂ ಇದ್ದಾರೆ, ಎಂದಾದರೂ ಬಂದಾರು ಬಿಡು. ಸಾರಿಗೆ ಸೌಕರ್ಯ ಸರಿಯಾಗಿ ನಡೆಯುತ್ತಿಲ್ಲ. ದೇಶದ ವ್ಯವಸ್ಥೆ ಅಸ್ತವ್ಯಸ್ತವಾಗಿದೆ. ಎಲ್ಲೆಲ್ಲಿ ಯಾವ ಯಾವ ಊರುಕೇರಿಗಳಲ್ಲಿ ಸೇರಿಕೊಂಡಿದ್ದಾರೋ....ತಕ್ಷಣ ಬರುವುದೂ ಸಹ ಕಷ್ಟನೇ."

ಆ ದನಿಯ ಅಂತರ್ಯದಲ್ಲಿ ಉಕ್ಕುತಿದ್ದ ಪರಿತಾಪವನ್ನು ಕಂಡು

ಕೊಳ್ಳದೆ ಇರಲಿಲ್ಲ ಗಂಗೂ, ಇಬ್ಬರ ಮುಖಮಂಡಲದಲ್ಲೂ ಪ್ರತಿಫಲಿತ ಮೂಕವೇದನೆ ಅರಿಯಬಲ್ಲವರಿಗೆ ಮಾತ್ರ ದೃಗ್ಗೋಚರವಾಗುತಿತ್ತು.

"ಜನ್ಮಜನ್ಮಾಂತರಗಳ ಕರ್ಮವೆಲ್ಲ ಮೋಕ್ಷಿಸಿ ಈ ಜನ್ಮದಲ್ಲಿ ಕಾಡುತ್ತಿವೆಯೋ ಏನೋ...." ಎಂದಳು ಗಂಗೂ.

ಧಿಗ್.ಧಿಗ್.ಧಿಗ್.ಧಿಗ್.

ಶಾಂತ–ಪ್ರಶಾಂತ ವಾತಾವರಣದಲ್ಲಿ ಎಲ್ಲಿಯದೋ ಅಭಿಶಸ್ತ ಹೆಜ್ಜೆಗಳ ಸದ್ದು....!

ಒಡನೆ ಸೂಕ್ಷ್ಮವಾಗಿ ಗಮನಿಸಿತು ಚಿತ್ತ. ಕುತೂಹಲತೃಷಿತ ನೋಟಗಳು ಕಿಟಕಿಯ ಕಡೆ ಹೊರಳಿದುವು. ಸ್ವಲ್ಪ ಹೊತ್ತಿನೊಳಗಾಗಿ ಸದ್ದು ಹತ್ತಿರ ಹತ್ತಿರವಾಗುತಿದ್ದುದು ಸ್ಪಷ್ಟವಾಯಿತು. ಇಬ್ಬರೂ ಎದ್ದು ಉತ್ಸುಕತೆಯಿಂದ ತಲೆಬಾಗಿಲಿಗೆ ಹೋದರು. ಅಂಗಳವನ್ನು ದಾಟಿ ಜಗಲಿ ಹತ್ತುತಿದ್ದ ಚಂಗಪ್ಪ ದೃಷ್ಟಿಗೆ ಬಿದ್ದ.

ಪರಸ್ಪರ ದರ್ಶನಲಾಭದಿಂದ ಮೂವರ ತುಟಿಗಳಲ್ಲೂ ಊಹಿಸಲೂ ಆಗದಂತಹ ಕಿರುನಗು ಮೂಡಿ ಮಾಯವಾಯಿತು. ಚಂಗಪ್ಪ ಬರುಬರುತ್ತಲೇ ಅಂದ "ನಿಮಗೆಲ್ಲಾ ಹುಡುಗರ ಚಿಂತೆಯಾಗಿರಬಹುದು....ಇಬ್ಬರೂ ಬಲು ಜಾಣರು, ಬಲು ಉತ್ಸುಕತೆಯಿಂದ ಕೆಲಸಮಾಡುತಿದ್ದಾರೆ ಬಿಡಿ."

"ನಿನಗೆ ಸಿಕ್ಕಿದ್ದರೇನು ?"

"ನಾಲ್ಕು ದಿನಗಳ ಕೆಳಗೆ ನೋಡಿದ್ದೆ, ಇಬ್ಬರೂ ಮೈಸೂರಿನಲ್ಲಿ ಸಿಕ್ಕಿದ್ದರು...ಬಿಚ್ಚಿಯಂಡ ಕೃಷ್ಣಕುಮಾರ್ ಸರಕಾರಿ ಕಛೇರಿ ಮೇಲೆ ಕಾಂಗ್ರೆಸ್ ಬಾವುಟ ಹಾರಿಸಿದನೆಂದು ಪೋಲೀಸರು ಸರಿಯಾಗಿ ಹೊಡೆದು ಆಸ್ಪತ್ರೆಗೆ ಹಾಕಿದ್ದಾರಂತೆ. ಅದೇ ವ್ಯಸನ ...ಪಾಪ !"

"ಅಯ್ಯೋ, ಶಿವನೇ."

"ನೋಡಿ, ಈ ಪೋಲೀಸರು ನಮ್ಮವರೇ !"

ಮಾಡು ಮರುದನಿಗೊಟ್ಟಿತು....ನೋಡಿ, ಈ ಪೋಲೀಸರು ನಮ್ಮವರೇ !

೫

....ಮೂಡಣದಂಚಿನ ಮಂಚದ ಮೇಲೆ ಅರುಣೋದಯಶ್ರೀ !

...ಹಸುರಿನ ಹೊದರಿನಲ್ಲಿ ಹುದುಗಿ ಹಾಡುವ ವನಪಕ್ಕಿಗಳ ಸುಪ್ರಭಾತ !

ಬೆಳಗಿನ ತಣ್ಣನೆಯ ತಂಪು ಮೈಗೆ ಮುದ್ದಿಡುತಿತ್ತು. ಪಕ್ಷಿಗಳ ಮಧುರಾಲಾಪನೆ ಕಿವಿಯಮೇಲೊರೆಯುತಿತ್ತು. ಕೈಯಲ್ಲಿ ಪೂಜಾದ್ರವ್ಯಗಳೊಡನೆ ಅತ್ತೆಸೊಸೆಯರು ಮಾದೇವನ ಗುಡಿಯ ಹಾದಿ ತುಳಿದಿದ್ದರು. ಮೂರು ತಿಂಗಳಾದರೂ ಮಕ್ಕಳ ಸುಳಿವಿಲ್ಲ...ಸುದ್ದಿಯೂ ಬರಲಿಲ್ಲ. ಕಾರಿಯಪ್ಪ ನೋಡಿಕೊಂಡು ಬರಲು ಮಡಿಕೇರಿ-ಮೈಸೂರು ಕಡೆ ಹೋಗಿ ಮೂರು ದಿನಗಳಾಗಿತ್ತು. ಅವರ ಪ್ರತೀಕ್ಷೆಯಲ್ಲಿ ಪ್ರತಿ ಕ್ಷಣಗಳೂ ಉರುಳುತಿದ್ದುವು. ಈಗೀಗ ಮನಸ್ಸಿಗೆ ಏನೇನೋ ಕಳವಳ...ಭಯ...

ಕರಜೋಡಿಸಿ ನಿಂತ ಗೃಹಿಣಿಯರು ದೇಗುಲದ ಬಾಗಿಲು ಕಿರುಗಂಟೆಗಳ ಝಂಕೃತ ನಿನಾದದೊಡನೆ ತೆರೆಯುವರೆಗೂ ಕೂಡಲಿಲ್ಲ. ಅನಂತರ ಬಿಡಿಸಿ ತಂದಿದ್ದ ಮಲ್ಲಿಗೆಯ ಮೊಗ್ಗುಗಳನ್ನು ಅಲ್ಲಿಯೇ ಕುಳಿತು ಕಟ್ಟತೊಡಗಿದರು. ಭಟ್ಟರ ಹೊರತು ಭಕ್ತರಾರೂ ಬಂದಿರಲಿಲ್ಲ. ತಾಣ ನೀರವ-ಶಾಂತ ಸಾಮ್ರಾಜ್ಯದಲ್ಲಿ ವಿಜೃಂಭಿಸುತಿತ್ತು.

ಭಟ್ಟರು ಕೇಳಿದರು "ಕುಶಲವೇ ಅಮ್ಮಣ್ಣಿ ?"

"ಕುಶಲ. ನೀವು ಕ್ಷೇಮವೇ ?"

"ಪರವಾಯಿಲ್ಲ; ಮಾದೇವನ ಕೃಪೆ....ಅಂದಹಾಗೆ ನಿಮ್ಮ ಹುಡುಗರು ಬಂದರೇ ?"

"ಇಲ್ಲ....ಸುದ್ದಿಯೂ ತಿಳಿಯಲಿಲ್ಲ."

"ಬಿಚ್ಚಿಯಂಡ ಕೃಷ್ಣಕುಮಾರ್ ತೀರಿಕೊಂಡದ್ದು ಗೊತ್ತೆ ನಿಮಗೆ ?"

"ಅಯ್ಯೋ....ದೇವರೆ !" ಒಂದು ಘಳಿಗೆ ದೈಹಿಕ ಕ್ರಿಯೆಯೇ ತಟಸ್ಥವಾದಂತಾಯಿತು. ಸ್ವಲ್ಪ ಹೊತ್ತಿನ ಮೇಲೆ ಬಾಯ್ದೆರೆದಳು ಗೃಹಿಣಿ "ಸುತ್ತುಮುತ್ತಿನ ಹುಡುಗರೆಲ್ಲ ಚಳವಳಿಗೆ ಹೋಗಿದ್ದಾರೆ. ಪತ್ರಿಕೆಗಳೂ

ಇಲ್ಲ. ಕಾರಿಯಪ್ಪನೂ ಇಲ್ಲ. ನಮಗೆ ಹೇಗೆ ತಿಳಿಯಬೇಕು ಹೇಳಿ ?"

"ಎಂತಹ ನಷ್ಟ...? ತಂದೆತಾಯಿಯ ಗತಿಯೇನು ? ಇವರೆಲ್ಲ ಇಂಗ್ಲೀಷರನ್ನು ಓಡಿಸಲು ಹೊರಟಿದಾರೆ. ಇದು ಎಲ್ಲಾದರೂ ಸಾಧ್ಯವೇ ಅಮ್ಮಣ್ಣಿ ? ಎಲ್ಲಾ ಹುಚ್ಚು...ಭ್ರಾಂತಿ !"

ಸ್ವಲ್ಪ ಹೊತ್ತು ಮೌನವಾವರಿಸಿತು.

"ನಿಮ್ಮ ಹುಡುಗರು ಕೈಕಾಲು ಗಟ್ಟಿ ಇಟ್ಟುಕೊಂಡು ಹಿಮ್ಮರಳಿದರೆ ಸಾಕು....ಮಾದೇವ ದೊಡ್ಡವನು. ಅವನ ಪ್ರಾರ್ಥನೆ ಮಾಡಿದರೆ ಎಲ್ಲಾ ಸಂಕಟಗಳೂ ಪರಿಹಾರವಾಗುತ್ತವೆ." ಎನ್ನುತ್ತ ಭಟ್ಟರು ಒಳಹೋದರು. ಪೂಜೆ ಮುಗಿಸಿ ಪ್ರಾರ್ಥನೆ ಸಲ್ಲಿಸಿ ಇಬ್ಬರೂ ಮನೆ ಮುಟ್ಟಿದಾಗ ಬಾನಿನಿಂದ ಹರಿವ ಹೊಂಗಿರಣಗಳ ಹೊಂಗಾಂತಿ ಭುವಿಯನ್ನು ಆಚ್ಛಾದಿಸಿತ್ತು. ತಂಪೊರೆವ ಮಂದಾನಿಲ ತಣ್ಣಗೆ ತೀಡುತಿದ್ದ. ದಿನಚರಿ ಎಂದಿನಂತೆ ಆರಂಭವಾಯಿತು-ಮನೋರಾಜ್ಯದಲ್ಲಿ ತುಂಬಿದ್ದ ನೂರಾರು ಯೋಚನೆಗಳನ್ನು ಕಡೆಗಣಿಸಿ...ಗಂಗೂ ಪ್ರಸಾದವನ್ನು ಗೂಡಿನಲ್ಲಿಟ್ಟು ನುಡಿದಳು,

"ಇಂದು ಅನೇಕ ಕಾರಣಗಳಿಂದ ಬಡಕುಟುಂಬಗಳು ನಾನಾ ದಾರಿದ್ರ್ಯತೆಯನ್ನು ಅನುಭವಿಸುತ್ತಿವೆ, ಶುದ್ಧವಾದ ನೀರು ಆಹಾರದ ಅಭಾವ ಮಾತ್ರವಲ್ಲ ದುಃಖಿಗಳೂ ಮುಗ್ಧರೂ ಆದ ಪ್ರಜೆಗಳ ಉದ್ಧಾರವನ್ನು ಕುರಿತು ಆಲೋಚಿಸುವುದರಲ್ಲಿರುವ ತೃಪ್ತಿ, ಇಂಗ್ಲೀಷರನ್ನು ಹೊರಡಿಸುವ ಕಾರ್ಯದಲ್ಲಿ ಬರಲಾರದು. ಕೃಷ್ಣಕುಮಾರ್ ಜೀವ ತೆತ್ತದ್ದು ನೋಡಿದರೆ..."

"ಖಂಡಿತ ಇಂತಹ ಸಸ್ಯಸಮೃದ್ಧ ನಾಡಿನಲ್ಲೇ ಈ ಗತಿಯಾದರೆ ಬಯಲು ನಾಡಿನ ಕತೆ ಹೇಗಿರಬೇಡ? ಅದೂ ಅಲ್ಲದೆ ದಾರಿದ್ರ್ಯಭೋಗದಿಂದ ರೋಗವಶರಾಗುತ್ತಿರುವವರ ಉದ್ಧಾರ ತುರ್ತಾಗಿ ನಡೆಯಬೇಕಾದಂತಹ ವಿಚಾರ ...ಸರಕಾರದ ಅಲಕ್ಷ್ಯ ನೀತಿ ಜನರನ್ನು ರೊಚ್ಚಿಗೇಳಿಸಿತು. ಬದುಕಿ ಬಾಳಬೇಕಾದಂತಹ ವ್ಯಕ್ತಿಗಳು ಪ್ರಾಣ ತೆತ್ತರೆ ತುಂಬ ಸಂಕಟ."

"ದೇಶ ರಕ್ಷಣೆಯ ಹೆಸರಿನಲ್ಲಿ ಜನ್ಮತಾಳಿದ ೧೪೪ನೇ ಸೆಕ್ಷನ್ ದೇಶ ಭಕ್ಷಣೆ ಮಾಡುತ್ತಿದೆ...ಮಾನವತೆ-ಧರ್ಮ ಕೊರಳೆತ್ತಿ ಕೂಗುತಿದ್ದರೂ ಅದರೆಡೆಗೆ ಲಕ್ಷ್ಯವಿಲ್ಲ. ಇಂಗ್ಲೀಷರನ್ನು ಹೊರಡಿಸುವ ಅವಧಿಯಲ್ಲಿ ದೇಶದ ಕತೆ ಏನಾಗಿಹೋಗುವುದೊ....ಅದೇ ಶಂಕೆ."

ಕಾವೇರಿ ಮಾತನಾಡಲಿಲ್ಲ. ಉಜ್ವಲ ನೇತ್ರಗಳು ನಿಶ್ಚಲವಾಗಿ ಬೆಳಗಿದುವು.

ಗಂಗೂ ಅಶಕ್ತ ಶರೀರ ತುಸು ಬಳಲಿದಂತೆ ತೋರಿದರೂ ದೃಢವಾಗಿ ಚಲಿಸಿತು. ಅದೇ ಸಮಯದಲ್ಲಿ ಜೂಲಿ ಬೊಗಳುತ್ತಾ ಕೆಳಮಟ್ಟಿಯ ಕಡೆ ಧಾವಿಸಿ ಯಾರೋ ಬಂದುದನ್ನು ಸೂಚಿಸಿತು. ಇಬ್ಬರೂ ಕುತೂಹಲಾವಿಷ್ಟವಾಗಿ ಹಿಂದೆಯೇ ಹೋದರು. ದೂರದ ಹೆಬ್ಬಯಲಿನಲ್ಲಿ ಮಕ್ಕಳೊಂದಿಗೆ ಮಾತಾಡುತ್ತಾ ಬರುತಿದ್ದ ಕಾರಿಯಪ್ಪನ ಧ್ವನಿ ಕರ್ಣಪಟಲಗಳಿಗೆ ತಾಗಿತು. ಒಡನೆ ಎದೆಯ ಭಾರವನ್ನಿಳುಹಿ ಹರ್ಷಿತರಾದ ಹೆಂಗಳೆಯರ ಹವಳದ ಕುಡಿಯಂತಹ ತುಟಿಗಳಲ್ಲಿ ಸವಿನಗು ಹರಿದಾಡಿತು.

"ಮಾದೇವ ದೊಡ್ಡವನು !"

ಒಂದೇ ನುಡಿಯಲ್ಲಿ ಮಹದಾನಂದ ಹೊಮ್ಮಿತು....ಇನ್ನಷ್ಟು ಹೊತ್ತಿನೊಳಗಾಗಿ ಮೂವರೂ ಮೆಟ್ಟಿಲು ಹತ್ತಿ ಮೇಲೆ ಬಂದರು. ಮುದ್ದು ಅಲ್ಲಿಂದಲೇ ಅಂದ "ನಮ್ಮ ಬಗ್ಗೆ ಚಿಂತಿಸಬಾರದೆಂದು ನಾನು ಅಂದೇ ಬರೆದಿರಲಿಲ್ಲವೇ ?"

"ಒಂದಿನ ಬರೆದರೆ ಸಾಕೆ ? ಅನಂತರ ಕಾಗದ ಬೇಡವೇ ? ವಿಳಾಸವನ್ನಾದರೂ ತಿಳಿಸಬಾರದೇ ?"

ಬಹಳ ದಿನಗಳ ನಂತರ ಮನೆಗೆ ಬಂದಿದ್ದಾರೆ. ಕೋಪ ಮಾಡಿಕೊಳ್ಳಬೇಡಿ." ಎಂದ ಕಾರಿಯಪ್ಪ. ಮುಖಮಂಡಲ ಪ್ರಸನ್ನವಾಗಿತ್ತು.

ಇಬ್ಬರೂ ಉತ್ಸಾಹದಿಂದ ಒಳಬಂದರು. ಶರೀರ ಕೊಳಕು ಕವಿದಿತ್ತು. ಉಟ್ಟ ಬಟ್ಟೆ ಮಾಸಿ ಹರಿದು, ಜೀರ್ಣವಾಗಿದ್ದುವು. ತಲೆ ಮುಖಗಳಲ್ಲಿ ಹೇರಳವಾದ ಬೆಳೆ....ಬತ್ತಿದ ಮೈ ಮರುಕ ಮೂಡಿಸುವಂತಿತ್ತು, ಜನನಿಯರು ಅನುಕಂಪದಿಂದ ಆತ್ಮೀಯ ಆಲಿಂಗನ ನೀಡಿದಾಗ ಕಳೆದುಳಿದ ಹರ್ಷ ಮೈದುಂಬಿಕೊಂಡಿತು.

ಜೊತೆಗಾರರು ಅನೇಕರು ಹೋಗಿಬಿಟ್ಟರು ..! ಅದೇ ಈಗ ನಮಗೆ ಹುರುಪು. ಇದುವರೆಗಾದರೂ ಏನೋ ಒಂದು ರೀತಿಯಿತ್ತು. ಇನ್ನಂತೂ ಕೂಡುವ ಪ್ರಶ್ನೆಯೇ ಇಲ್ಲ !" ಎಂದರು ಹುಡುಗರು. ವಿಮಲ ವಿಶಾಲ ನಯನಗಳು ಆಕರ್ಣವಿಸ್ಫಾರಿತವಾದುವು.

"ಕೃಷ್ಣ ಕುಮಾರನಿಗೆ ಸರಿಯಾದ ಚಿಕಿತ್ಸೆ ನೀಡಲಿಲ್ಲ. ಬಿಟ್ಟು ಕೊಟ್ಟಿದ್ದರೆ ಮನೆಯವರಾದರೂ ನೋಡಿಕೊಳ್ಳುತಿದ್ದರು, ಅದಕ್ಕೂ ಅವಕಾಶ ನೀಡಲಿಲ್ಲ." ಮಾದು ತುಟಿ ಕಚ್ಚಿದ.

"ಛೀಃ ! ಪಾಪ, ತುಂಬ ಅನ್ಯಾಯ ?"

"ರಾಜ್ಯದ ಇತರೆಡೆಗಳಲ್ಲಿ 'ರಾಜದ್ರೋಹ' ಆಪಾದನೆಯ ಮೇಲೆ ನಡೆದ ಲಾಠಿಚಾರ್ಜ್, ಗೋಲಿಬಾರ್‌ಗಳಿಗೆ ತುತ್ತಾದವರು ಕಡಿಮೆಯೆ ? ಸುಮ್ಮ ಸುಮ್ಮನೆ.... .. ಅನಾವಶ್ಯಕವಾಗಿ ಮೇಲೆ ಬೀಳುವ ಪೋಲೀಸರ ದುರ್ವರ್ತನೆ ಜನರನ್ನು ಇನ್ನಷ್ಟು ರೊಚ್ಚಿಗೇಳಿಸುತ್ತದೆ. ಈಗೀಗಂತೂ, ದೇಶದಲ್ಲೆಲ್ಲಾ ಕಾಡ್ಗಿಚ್ಚಿನಂತೆ ವ್ಯಾಪಿಸುತ್ತಿದೆ ಚಳವಳಿಯ ಜ್ವಾಲೆ."

"ಏನೇ ಬರಲಿ, ಗುರಿ ಮುಟ್ಟುವುದಂತೂ ಖಂಡಿತ !"

"ಆದರೂ ಒಂದು ಸಂದೇಹವಿದೆ...ಈ ಮಹಾ ಪ್ರಯತ್ನಕ್ಕೆ ಬೇಕಾದ ದೀರ್ಘ ಸಹಿಷ್ಣುತೆ ಸಾಮಾನ್ಯ ಪ್ರಜೆಗಳಿಗಿರುವುದು ಕಷ್ಟವೇ. ಉದ್ರೇಕ–ಉದ್ವೇಗ ಬಹುಕಾಲ ಉಳಿಯಬೇಕಲ್ಲ ?"

"ಓ....ಬಿಡಿ. ನೆತ್ತರನ್ನು ನೀರಿನಂತೆ ಚೆಲ್ಲುತಿದ್ದಾರೆ ಜನ ! ಆ ಅನುಮಾನವೇ ಬೇಡ."

ಆ ಉತ್ಸುಕ ವಾತಾವರಣದಲ್ಲೂ ಏನೋ ಒಂದು ರೀತಿಯ ನಡು ಕಂಪನದ ಅಲೆ ಮೈಯಲ್ಲಿ ಚಿಲ್ಲನೆ ಹರಿದಾಡತೊಡಗಿದುದರಿಂದ ಗಂಗಮ್ಮ ಅಲ್ಲಿ ನಿಲ್ಲಲಾಗದೆ ಒಳಹೋಗಿ ಪಲ್ಲಂಕದ ಮೇಲೆ ಕುಳಿತುಕೊಂಡಳು. ಅಲ್ಲೂ ಸಹ ಎಲ್ಲರ ಮಾತುಕತೆ ಸ್ಪಷ್ಟವಾಗಿ ಕಿವಿಗೆ ಬೀಳುತಿತ್ತು-ಬೇಡವೆನಿಸಿದರೂ ತಡೆಯುವಂತಹ ವಾತಾವರಣವೇ ಅಲ್ಲ.

"ನಮ್ಮ ರಹಸ್ಯ ಸಂಘಗಳು, ಗುಪ್ತಧನ, ಸೇವಾಸೌಜನ್ಯತೆ, ಪರಸ್ಪರ ಸಹಕಾರ ಇಂದು ಅಭೇದ್ಯ ಕೋಟೆಯಂತೆ ನಿಂತಿವೆ. ಖಂಡಿತವಾಗಿಯೂ ನಿನ್ನ ಸ್ವಾತಂತ್ರ್ಯ ಸಾಧನೆಯಾಗದ ಹೊರತು ನಮ್ಮ ಸಂಘ ವಿಸರ್ಜನೆ ಸಾಧ್ಯವೇ ಇಲ್ಲ. ಶೃಂಖಲಾಬದ್ಧ ದೇಶೀಯರ ನರಕ ಜೀವನ ಭಗವಂತ ಕಾಣನೇ ? ಏನೇ ಇರಲಿ, ಈ ಸಲ ಮಾದೇವ ಕಡೆ ಹಾಯಿಸಿಯೇ ಹಾಯಿಸುತ್ತಾನೆ !"

ಆ ಮಾತು ಕರ್ಣಪಟಲಗಳಿಗೆ ತಾಗಿ ಪುನಃ ಪುನಃ ಪ್ರತಿಧ್ವನಿಸಿದುವು. ಗಂಗವ್ವ ಎರಡೂ ಕೈಗಳನ್ನು ಜೋಡಿಸಿಕೊಂಡು ಮಾದೇವನನ್ನು ಮಕ್ಕಳ ಕ್ಷೇಮಕ್ಕಾಗಿ ಮನಮುಟ್ಟಿ ಪ್ರಾರ್ಥಿಸಿಕೊಂಡಳು. ಮರುಕ್ಷಣದಲ್ಲಿ ಕಾವೇರಿಯ ಧ್ವನಿ ಕಿವಿಗೆ ಬಿತ್ತು.

"ಮೊದಲು ಮಿಂದು ಮಾದೇವನ ದರ್ಶನ ಮಾಡಿ ಬನ್ನಿ, ಮಕ್ಕಳಿರಾ! ಅನಂತರ ಇನ್ನೆಲ್ಲಾ..."

ಬಹುಶಃ,

ಇಬ್ಬರಿಗೂ ನಾಲ್ಕಾರು ದಿನಗಳು ಹಾಯಾಗಿ ಮನೆಯಲ್ಲಿರಲು ಅವಕಾಶ ದೊರಕಿರಬಹುದು. ಅಷ್ಟರಲ್ಲಿ ಉಪ್ಪಿನ ಸತ್ಯಾಗ್ರಹಿಗಳ ಮೇಲೆ ನಡೆದ ಬ್ರಿಟಿಷರ ದೌರ್ಜನ್ಯದ ಫಲವಾಗಿ ಪುನಃ ಎಲ್ಲೆಲ್ಲೂ ಆಂದೋಳನದಗ್ನಿಜ್ವಾಲೆ ಧಗಧಗ ದಹಿಸಹತ್ತಿತ್ತು. ವಿದೇಶೀ ವಸ್ತುಗಳ ಅಂಗಡಿಯ ಪಿಕೆಟಿಂಗ್, ಸರಕಾರೀ ಆಫೀಸುಗಳ ಪಿಕೆಟಿಂಗ್, ಶಾಲಾ ಕಾಲೇಜುಗಳ ಪಿಕೆಟಿಂಗ್ ಮುಂತಾದುವು ಗಂಭೀರ ಸ್ವರೂಪದಲ್ಲಿ ತಲೆಯೆತ್ತಿದುವು. ಜನಜಂಗುಳಿ ಎಳೆ ಸೇರಿಸಿ ಹೊಸೆದಂತೆ ಒಂದುಗೂಡಿತು. ವರ್ಗಭೇದವಿಲ್ಲದೆ, ಜಾತಿ ಭೇದವಿಲ್ಲದೆ, ಪ್ರಾಣಭಯವಿಲ್ಲದೆ ನೆಲೆಗೂಡಿದ ಜನಕೋಟಿ ಸಾಲುಗಟ್ಟಿ ಹೆಜ್ಜೆ ಹಾಕಿತು. ಅಭಿಶಸ್ತ ಹೆಜ್ಜೆಗಳು 'ಲರಲಪ' ಶ್ರುತಿ ರಾಷ್ಟ್ರಗೀತೆಗೆ ಹಿಮ್ಮೇಳವಾಯಿತು. ಕೊಡಗಿನ ಹಸಿರು ಪ್ರಾಂತಕ್ಕೆ ಮುದ್ದು ನಾಯಕನಾದ.

ರಣ ಕಹಳೆ ಮೊಳಗುತಿತ್ತು.

ಗಾಳಿ ದಿಗಂತದಿಂದ ದಿಗಂತಕ್ಕೆ ಸಂದೇಶ ಹರಡುತಿತ್ತು.

ಸ್ವಾತಂತ್ರ್ಯ....ಸ್ವಾತಂತ್ರ್ಯ...ಸ್ವಾತಂತ್ರ್ಯ ಮಂತ್ರಪಠಣದೊಂದಿಗೆ ದಿನಚರಿ ಆರಂಭ; ಪ್ರಭಾತ್ ಫೇರಿಯ ವೈಭವದೊಡನೆ ಕಾರ್ಯಾರಂಭ; ರಾಷ್ಟ್ರಗೀತೆ ಜೈಕಾರಗಳ ಗಗನಭೇರಿಯೊಡನೆ ಕರ್ಮಾಚರಣೆ, ಸ್ವಂತ ಕಾರ್ಯಕಲಾಪಗಳನ್ನು ಹಾಳುಗೆಡಗಿ ಜನತೆ ಚಳವಳಿ ಕ್ಷೇತ್ರಕ್ಕೆ ಧುಮುಕಿತು, ಗಾಂಧೀಜಿಯವರ ಸಂದೇಶದಲ್ಲಿ ಸತ್ಯ–ಶಾಂತಿ–ಶಿಸ್ತುಗಳಿಗೆ ಆದ್ಯತೆ ನೀಡಿದ್ದರೂ ಅಲಕ್ಷಿತ ಜನ ಅಲ್ಲ, ರೊಚ್ಚಿಗೆದ್ದ ಜನ ಕ್ರಾಂತಿಮನೋಭಾವಕ್ಕೆ ಶರಣಾಗಿ ಅಲ್ಲಲ್ಲಿ ಲೂಟಿ-ದುಂಡಾವೃತ್ತಿ–ಗೂಂಡಾಗಿರಿ ನಡೆಸಿದರು. ಲೆಕ್ಕವಿಲ್ಲದಷ್ಟು ಮಂದಿ ನುಗ್ಗಿಬರುವ ಗೋಲಿಗಳಿಗೆ ಎದೆಗೊಟ್ಟು ಅಮರರಾಗಿ ವೀರಸ್ವರ್ಗ

ವನ್ನಡರಿದರು. ಚೆಲ್ಲಿ ಸೂಸಿದ ಹನಿಹನಿ ನೆತ್ತರು ಶಕ್ತಿಯ ಕಣಕಣವನ್ನು ಉತ್ತೇಜಿತಗೊಳಿಸುತಿತ್ತು. ಆದರೂ...ಆದರೂ ಭಾರತಾಂಬೆಯ ಮುಖ ಮಂಡಲ ಮಳೆ ಬಿಸಿಲು ಒಂದಾಗಿ ಮೂಡಿದ ಜಗಮಂಡಲದಂತೆ ಸುಖ ದುಃಖಗಳ ಆಗರವಾಗಿತ್ತು.

ಅಶ್ರುವಾಯು-ಲಾಠಿ-ಗುಂಡುಗಳು ಜನಶಕ್ತಿಯ ಮರ್ಧನಕ್ಕೆ ಸತತ ಶ್ರಮಿಸುತ್ತಿದ್ದುವು. ರಾಷ್ಟ್ರದಾದ್ಯಂತ ಗಲಾಟೆ-ಗದ್ದಲ-ದೊಂಬಿಗಳು ಭುಗಿಲೆದ್ದು ಅಶಾಂತಿಯ ಮಹಾಜ್ವಾಲೆ ಜನಮನವನ್ನು ದಹಿಸುತಿತ್ತು. ಮನೆಮನೆಯನ್ನು ದುಃಖ-ದುಗುಡಗಳು ಆವರಿಸಿದುವು.

ಚಳವಳಿ – ಅಸಹಕಾರ – ಪ್ರಜಾರಾಜ್ಯ – ಸ್ವಾತಂತ್ರ್ಯ- ರಾಜ್ಯಾಂಗ-ಸ್ವರಾಜ್ಯ-ಗಾಂಧೀಜಿ-ನೆಹರು-ಸುಭಾಷ್-ಪಟೇಲ್-ವಿಜಯಲಕ್ಷ್ಮಿ ಪಂಡಿತ್-ಕಸ್ತೂರಿಬಾ-ಕಮಲಾನೆಹರು-ರಾಜಾಜಿ-ಆಜಾದ್-ಜಿನ್ನಾ ಇಂಥಿಂಥ ಹ ನಾಮಾವಳಿ ಕರ್ಣಪಟಲಗಳಿಗೆ ಎಡೆಬಿಡದೆ ತಾಗುತಿದ್ದರೂ ಅವುಗಳ ಘನಾರ್ಥವನ್ನು ಕ್ರಮಬದ್ಧವಾಗಿ ತಿಳಿದುಕೊಳ್ಳುವಷ್ಟು ಸಮಯವಾಗಲೀ, ಸಹನೆಯಾಗಲೀ, ಸಮಯೋಚಿತ ಪರಿಜ್ಞಾನವಾಗಲೀ ಯಾರಿಗಾದರೂ ಇದ್ದರಷ್ಟೆ ? ಬಿರುಗಾಳಿಯಂತೆ ಬಂಡೆದ್ದು ಬರುವ ಪ್ರಚಂಡ ಶಕ್ತಿಯ ಉತ್ಸುಕತೆಯಲ್ಲಿ ಅದಾವುದೂ ಬೇಕೆನ್ನಿಸುತ್ತಲೇ ಇಲ್ಲ....ಇರಲಿ, ಅವು ವ್ಯಕ್ತಿಗಳೇ ವಸ್ತುಗಳೇ ಎಂಬುದನ್ನು ಅರಿಯದವರು ಇನ್ನೆಷ್ಟು ಮಂದಿಯೋ.... ಗಾಳಿ ಬೀಸಿದಂತೆ ತೂರಿಕೊಳ್ಳುವ ಮನೋಭಾವವೇ ಮಿಗಿಲು. ಚಳವಳಿಯ ನೆಲೆಯೆಲ್ಲಿ ? ಅದರ ರೀತಿನೀತಿಗಳೇನು ? ಆದರ ಸೂತ್ರಧಾರಿ ಯಾರು ? ತಾವೀಗ ಏನು ಮಾಡಬೇಕು ? ತಮ್ಮ ಮುಂದಿನ ಗುರಿಯೇನು ? ಎಂಬೀ ವಿಚಾರಗಳಂತೂ ಅಸ್ಪಷ್ಟ....ಅಗಮ್ಯ....

ಮೂರು ವರ್ಷಗಳ ಹಿಂದೆ ಭಾರತ ಜನನಿಯ ಬಂಧವಿಮೋಚನೆಗೆಂದು ದೃಢಸಂಕಲ್ಪದಿಂದ ಸ್ವಯಂಪ್ರಕಾಶವನ್ನು ಬದಿಗಿಟ್ಟು, ಇಳಿದಿದ್ದ ವಿದ್ಯಾ ಪೀಠದ ಮೆಟ್ಟಿಲನ್ನು ಮುದ್ದು, ಮಾದು ಮತ್ತೆ ಏಳಲಿಲ್ಲ. ಗದ್ದೆ ಗಣ್ಣಗಳಿಗೂ ಇಳಿಯಲಿಲ್ಲ. ಬಡತನದ ಬವಣೆಯಲ್ಲಿ ಬಳಲಿ ಬೆಂಡಾದರೂ ಶರೀರ ಸುಟ್ಟು ಶೀರ್ಣಿತವಾದರೂ ದಿಕ್ಕೆಡಲಿಲ್ಲ; ಹಾದಿ ಬದಲಾಗಲಿಲ್ಲ. ಸ್ವತಂತ್ರ ಮನೋ ಭಾವ ಪ್ರಫುಲ್ಲ ಶತದಳ ಪುಷ್ಪದಂತೆ ಅರಳಿ ತನುಮನವನ್ನು ನವ

ತಾರುಣ್ಯವನ್ನು ಹೊರಿದುಂಬಿಸುತಿತ್ತು. ವೀರಾಗ್ರೇಸರನಂತೆ ಮುದ್ದಪ್ಪ ಮುಂದಾದ. ಆಗೊಮ್ಮೆ ಈಗೊಮ್ಮೆ ಕಾಫಿ ಏಲಕ್ಕಿಯ ವ್ಯಾಪಾರಿಯ ಸೋಗಿನಲ್ಲಿ ಎಲ್ಲರ ದೃಷ್ಟಿಗೂ ಬೀಳುತಿದ್ದುದರಿಂದ ಸಹಜವಾಗಿ ಆತನ ಮೇಲೆ ಸರಕಾರದ ವಕ್ರಿಮ ದೃಷ್ಟಿ ಹರಿಯಲಿಲ್ಲವೆಂದೇ ಹೇಳಬಹುದು....ಕೆಲವೊಮ್ಮೆ ಮರಮುಟ್ಟುಗಳ ವ್ಯಾಪಾರ ಕ್ಷೇತ್ರದಲ್ಲಿ, ಕೆಲವೊಮ್ಮೆ ಸಾಮಾಜಿಕ ಸೇವಾ ಕ್ಷೇತ್ರದಲ್ಲಿ, ಇನ್ನೂ ಕೆಲವು ವೇಳೆ ವ್ಯವಸಾಯ ಕ್ಷೇತ್ರದಲ್ಲಿ ಹೀಗೆ ವಿಧವಿಧ ರಂಗಗಳಲ್ಲಿ ಕಾಣಿಸಿಕೊಳ್ಳುತಿದ್ದುದರಿಂದ ಮುದ್ದು-ಮಾದು ಸಭ್ಯ ಜನಾಂಗದ ಅಂಗವಾಗಿಯೇ ತೋರುತಿದ್ದರು. ಸರಕಾರ ಅವರ ಮೇಲೆ ಕಣ್ಣಿಟ್ಟಿದ್ದರೂ ಸ್ವಲ್ಪಕಾಲ ಅವರೆಡೆಗೆ ಪಿಶಾಚಹಸ್ತವನ್ನು ಚಾಚಲಿಲ್ಲ. ದಿನಚರಿ ನಿರಾತಂಕ ವಾಗಿಸಾಗುತಿತ್ತು.

ಅದೊಂದು ಉಜ್ವಲ ಸಂಜೆ....!

ಅಪರಾಂಬುಧಿಯ ತೀರದಿಂದ ಹೊಮ್ಮಿದ ಸಂಧ್ಯಾರಾಗ ಮುಖ ಮೈಗಳಿಗೆ ಲಾಲಿಮೆಯನ್ನು ಸ್ವಚ್ಛಂದವಾಗಿ ಮೆತ್ತುತಿತ್ತು. ಗೂಡು ಗಳನ್ನರಸುವ ವನವಿಹಂಗಮುಗಳ ಮಧುರಗಾನ ಕಿವಿಗಳಿಗೆ ಅಮೃತ ವನ್ನೆರೆಯುತಿತ್ತು, ಮುದ್ದು ಮಡಿಕೇರಿಯನ್ನು ಮುಟ್ಟಿದಾಗ ಸಾಂಧ್ಯ ಪ್ರದೀಪಗಳು ರಸ್ತೆಯಂಚಿನ ನೇಣುಗಂಬಗಳಲ್ಲಿ ಮಿಣಮಿಣನೆ ಉರಿಯು ತಿದ್ದುವು. ಅವುಗಳಲ್ಲಿ ಬಹುಪಾಲು ಚಳವಳಿಯ ಪ್ರಕೋಪಕ್ಕೆ ಬಲಿಯಾಗಿ ದ್ದುದರಿಂದ ಅಲ್ಲೊಂದು ಇಲ್ಲೊಂದು ಉರಿಯುತಿದ್ದು, ಊರು ಮುಸುಕು ಮುಸುಕಾಗಿ ಕಾಣಿಸುತಿತ್ತು. ವಿದೇಶೀ ಬಟ್ಟೆಗಳ ಅಂಗಡಿಗಳು, ವಿದೇಶೀ ವಸ್ತುಗಳ ಅಂಗಡಿಗಳು, ವಿದೇಶೀ ಮದ್ಯಗಳ ಅಂಗಡಿಗಳು ಕಾಂಗ್ರೆಸ್ಸಿಗರ ಪಿಕೆಟಿಂಗ್ ಸಲುವಾಗಿ ಮುಚ್ಚಿದುವು. ಅಲ್ಲಲ್ಲಿ ಖಾದಿ ಬಟ್ಟೆ ಮತ್ತು ಖಾದಿ ಟೋಪಿಗಳ ವಸ್ತ್ರಾಲಯಗಳಿದ್ದು ವ್ಯಾಪಾರ ಸಮೃದ್ಧಿಯಾಗಿ ನಡೆಯುತಿತ್ತು. ಮುದ್ದು ಅಂಗಡಿಯ ಸಾಲಿನ ಮೇಲೆ ದೃಷ್ಟಿಯನ್ನು ಚೆಲ್ಲಿಕೊಂಡೇ ಮುನ್ನಡೆದ. ಮುಖದ ಮೇಲೆ ಒಂದು ವಾರದ ಬೆಳೆ ಬೆಳೆದಿದ್ದರೂ ಮನೋಹರ ಮುಖಮಂಡಲಕ್ಕೆ ಅದೊಂದು ರೀತಿಯ ಶೋಭೆಯನ್ನೇ ನೀಡಿತ್ತು. ಉಜ್ವಲ ದೇಶಭಕ್ತಿಯ ಲಾವಣ್ಯ ಪ್ರಭೆಯಲ್ಲಿ ಮಿಂದ ವಜ್ರಕಾಯ ಅತ್ಯಂತ ತೇಜಸ್ಸಿ ನಿಂದ ಬೆಳಗುತಿತ್ತು. ಅಂಗ-ಪ್ರತ್ಯಂಗಗಳಲ್ಲಿ ಹೊಮ್ಮುವ ಶಾಂತ-ಶೀತಲ

ಸ್ನಿಗ್ಧ ಲಹರಿಗಳು ದಿವ್ಯ ಸಂನ್ಯಾಸಿಗೆ ಉಪಮಾನವಾಗುವಂತಿದ್ದುವು. ಮೈಯಲ್ಲಿ ಸಾಧಾರಣ ಉಡುಪು, ತಿದ್ದಿದ ಕೂದಲು, ಒರಟು ಚಪ್ಪಲಿ, ಕೈಯಲ್ಲೊಂದು ಸಣ್ಣ ಚೀಲ ಇಷ್ಟೇ ಆತನ ಪ್ರಪಂಚ. ಕಾಲು ನಡಿಗೆಯಲ್ಲಿ ದಿನ ನಿತ್ಯ ಊರೂರು ಸುತ್ತುವುದರಿಂದ ಬಿಸಿಲಿನ ಝಳ ತಾಗಿ ಕಣ್ಣುಗಳು ಉರಿಯತೊಡಗಿದ್ದುವು. ಅದರಿಂದಾಗಿ ಒಂದು ಕಪ್ಪು ಕನ್ನಡಕದ ಅವಶ್ಯಕತೆ ತೋರಿದುದರಿಂದ ಬಲ ಮಗ್ಗುಲಿನ ಅಂಗಡಿಯ ಮೆಟ್ಟಿಲೇರಿದ. ಅಲ್ಲಿ ಗಿರಾಕಿಗಳಿರಲಿಲ್ಲ. ಡೆಸ್ಕಿನ ಹಿಂದೆ ನಿಂತುದು ಅಂಗಡಿಯ ಯಜಮಾನನಲ್ಲ. ಆತನ ಸುಕುಮಾರ್ತಿ ಪೂವಮ್ಮ. ಒಂದೆರಡು ಕ್ಷಣ ಆ ರನ್ನದ ಪುತ್ಥಳಿಯನ್ನು ನಿಟ್ಟಿಸಿ ನೋಡಿ ಮತ್ತೆ ಸುತ್ತಲೂ ಕಣ್ಣಾಡಿಸಿದ ಮುದ್ದು.

"ಯಜಮಾನರಿಲ್ಲವೇ ?"

"ಇಲ್ಲ...ಈಗಷ್ಟೇ ಹೊರಹೋದರು."

ಮುದ್ದು ಒಂದು ಘಳಿಗೆ ಸುಮ್ಮನಾದ.

"ನಿಮಗೆ ಕನ್ನಡಕ ಬೇಕೆ ?"

"ಹೌದು...ಆದರೆ .."

"ಪರವಾಯಿಲ್ಲ ; ನಾನೇ ಕೊಡುವೆ."

"ಮೊದಲು ಹೇಳಿ, ಇವು ಸ್ವದೇಶಿಯೇ ?"

ಒಡನೆ ಆ ಜ್ವಲಂತ ನಯನಗಳು ಒಂದೆರಡು ಕ್ಷಣ ಸೂಕ್ಷ್ಮವಾಗಿ ಇತ್ತಲೇ ಹರಿದಾಡಿ ಮೈಯನ್ನು ಮಿಲ್ಲು ಬಟ್ಟೆ ಅಲಂಕರಿಸಿದುದನ್ನು ಗ್ರಹಿಸಿದುವು. ಆದರೆ ಪ್ರಶ್ನೆಯ ವಿಶೇಷ ತೀರ ವ್ಯತಿರಿಕ್ತವಾಗಿದ್ದುದರಿಂದ ಊಹಿಸಲೂ ಆಗದಂತಹ ಸ್ವರ್ಣ ಸ್ಮಿತರೇಖೆ ತುಟಿಗಳಲ್ಲಿ ಮಿನುಗಿ ಮಾಯ ವಾಯಿತು. ಅವಳ ಶೀತಲ ಗ್ರಹಿಕೆಯನ್ನು ಮುದ್ದು ಗಮನಿಸಿದ. ಕಾಂಚನ ಮೃಗ ಅನುಗ್ರಹಿಸಿದ ನಯನ ಚೈತ್ಯಾಲಯದಲ್ಲಿ ಮಿಂಚುವ ಸೆಳೆಮಿಂಚನ್ನು ಈಕ್ಷಿಸಿ ಅಂದ-

"ನೋಡಿ, ನನ್ನವು ಮಿಲ್ಲು ಬಟ್ಟೆಗಳಾದರೂ ಸ್ವದೇಶಿ !"

"ನಾನದನ್ನು ಪ್ರಶ್ನಿಸಲಿಲ್ಲವಲ್ಲಾ ?" ಎಂದಳು ಆಕೆ. ಅನುಚಿತ ವಾದುದು ನಡೆಯಿತೇ ಎಂಬಂತಹ ಭಯದ ಛಾಯೆ ಕಣ್ಣುಗಳಲ್ಲಿ ಸುಳಿ

ಸುಳಿದಾಡಿತು. ಸಣ್ಣ ಸಣ್ಣ ತುಹಿನ ಬಿಂದುಗಳಿಂದ ಕೂಡಿದ ವದನಮಂಡಲ ಶಿಶಿರಸಿಕ್ತ ಪಾರಿಜಾತದಂತೆ ಕಣ್ಗೆಸೆಯಿತು.

"ನೀವು ಹೇಳದಿದ್ದರೂ ನಾನು ಊಹಿಸಿದೆ." ತುಟಿಗಳಲ್ಲಿ ಮೃದು ಹಾಸವನ್ನು ಬೀರಿದ. ಅನಿರೀಕ್ಷಿತವಾಗಿ ಆ ಮುಹೂರ್ತದಲ್ಲಿ ವಿವಶವಾಗಿದ್ದ ಮನಸ್ಸನ್ನು ಹತೋಟಿಗೆ ತೆಗೆದುಕೊಳ್ಳುತ್ತ ತಾನು ಅಂದಿಂದಿಗೂ ಜನವಾರಿಧಿಯಲ್ಲಿ ಮುಳುಗಿ ತೇಲುತಿದ್ದರೂ ಎಂದೂ ಪ್ರಥಮ ದರ್ಶನ ಮಾತ್ರದಿಂದ ಇಷ್ಟು ಉತ್ಕ್ರಾಂತಚಿತ್ತನಾಗಿರಲಿಲ್ಲ. ಇಂದೇನು ? ಯಾವ ಘಳಿಗೆಯಲ್ಲಿ ವಿಧಿ ಭೇಟಿ ಮಾಡಿಸಿತು....? ಸದ್ಯ ನನ್ನ ಯಾವ ಉದ್ದೇಶಕ್ಕೂ ತೊಂದರೆಯಾಗದಿದ್ದರೆ ಸಾಕು....ಎಂಬ ಆಲೋಚನೆ ಇದ್ದಕ್ಕಿದ್ದಂತೆಯೆ ಚಿದಾಕಾಶದಲ್ಲಿ ತಲೆ ಹಾಕಿದಾಗ ಸ್ವಲ್ಪ ಹತಪ್ರಭನಾದ. ಅದೇ ವೇಳೆಗೆ ಹದಿನಾರರ ಅರಳು ಮೊಗ್ಗೆಯ ಕಂಠಸ್ವನ ಮಧುರತರವಾಗಿ ಮತ್ತೆ ಹೊಮ್ಮಿತು.

"ನಿಮಗೆ ಯಾವ ಕನ್ನಡಕ ಬೇಕಾಗಿದೆ ?"

ಯಾವುದೋ ಲೋಕದಲ್ಲಿ ಮಂತ್ರಮುಗ್ಧನಂತೆ ವಿಹರಿಸುತ್ತಿದ್ದ ಮುದ್ದು ಮಿಡುಕಿಬಿದ್ದು, ವಾಸ್ತವ ಜಗತ್ತಿಗಿಳಿದು "ಛೇ ! ಅವಳೇ ಕೇಳಬೇಕಾಯಿತಲ್ಲ, ನನಗೇನು ಬುದ್ಧಿಮಾಂದ್ಯವೇ ?" ಎಂದುಕೊಳ್ಳುತ್ತ ಅವಳ ಪ್ರಶ್ನೆಗೆ " ಕಪ್ಪು " ಎಂದುತ್ತರಿಸಿ ಕನ್ನಡಕಗಳ ಮೇಲೆ ಕಣ್ಣು ಹೊರಳಿಸಿದ. ಅನಂತರ, ಅಲ್ಲಿಂದ ಸೂಕ್ಷ್ಮನೋಟ ಸೂಕ್ಷ್ಮಾತಿಸೂಕ್ಷ್ಮವಾಗಿ ಅವಳ ಮೇಲೂ ಹರಿದಾಡಿತು, ಆ ಸೂಕ್ಷ್ಮ ವಿಶೇಷಕ್ಕೆ ತುಸು ಲಜ್ಜಿತ ತರುಣಿಯ ಮುಖ ಚೆಂಗುಲಾಬಿಯನ್ನು ವಿಡಂಬಿಸುವಂತೆ ರಂಗು ತಳೆಯಿತು. ಹಣೆಯ ಮೇಲಿನ ತುಂತುರು ಹನಿಗಳನ್ನು ತೀಡಿಕೊಳ್ಳುವ ನೆವದಲ್ಲಿ ಮುಖವನ್ನು ಮರೆಮಾಚಲೆಳಸಿದಳಾದರೂ ...ಕೆನ್ನೆಗಳ ಲಾಲಿಮೆ ಕರವಸ್ತ್ರಕ್ಕೂ ಅಂಟುವಷ್ಟು ಸಮೃದ್ಧಿಯಾಗಿತ್ತು. ಸಂಧ್ಯಾ ದೀಪಗಳ ಉಜ್ವಲ ಕಾಂತಿಯಲ್ಲಿ ಹೊಮ್ಮಿದ ಅಪೂರ್ವಾರುಣರಾಗವನ್ನು ಗಮನಿಸಿದ ಮುದ್ದಪ್ಪ ಪುಳಕಿತನಾದ. ದೇಹಾದ್ಯಂತ ಯಾವುದೋ ಅನಿರ್ವಚನೀಯ ವಿದ್ಯುಲ್ಲಹರಿ ಮಿಂಚಿನಂತೆ ಹರಿದಾಡತೊಡಗಿತು. ಮರುಕ್ಷಣದಲ್ಲಿ ಚೇತರಿಸಿಕೊಂಡು-

"ನನಗೀ ಕನ್ನಡಕ ಬೇಕಾಗಿತ್ತು....ಯಜಮಾನರಿಲ್ಲವಲ್ಲಾ ?" ಎಂದ.

"ನಾನಿದ್ದೇನಲ್ಲಾ ?"

"ನಿಮಗಿದರ ಬೆಲೆ ಗೊತ್ತೇ !"

"ಗೊತ್ತು."

ಮಂತ್ರಮುಗ್ಧನಂತೆ ಮುಂದುವರಿದು ಕನ್ನಡಕದ ಮೇಲೆ ಕಣ್ಣಾಡಿಸಿದ. ಅವಳು ಬೀರುವೊಳಗಿನ ಹಲನಾರು ಕನ್ನಡಕಗಳನ್ನು ತೆಗೆದು ಮುಂದಿಟ್ಟಳು. ಮೃಣಾಳ ಕೋಮಲ ಬಾಹುಲತಾ ಪಟುತ್ವವನ್ನವಲೋಕಿಸಿದುವು ಕಣ್ಣುಗಳು. ಹವಳದ ಕುಡಿಯಂತಹ ಬೆರಳುಗಳು ಕಪ್ಪು ಕನ್ನಡಕದ ಮೇಲೆ ಹರಿದಾಡುವ ಅನುಪಮ ವಿನ್ಯಾಸ ಮನವನ್ನು ಸೂಜಿಗಲ್ಲಿನಂತೆ ಸೆರೆಹಿಡಿಯಿತು. ಮುದ್ದಪ್ಪ ಪುಂಗೀನಾದ ಬಂಧಿತ ಫಣಿಯಂತಾದ.

"ಇವು ಸ್ವದೇಶೀ ಕನ್ನಡಕಗಳು ಹೌದಪ್ಪೆ ?"

"ಓಹೋ ! ಎಲ್ಲಾ Made in India !"

ಮುದ್ದಪ್ಪ ಮುಗುಳು ನಕ್ಕ.

"ಅದರಿಂದಲೇ ನಮ್ಮ ಅಂಗಡಿಯ ಮುಂದೆ ಯಾರೂ ಪಿಕೆಟಿಂಗ್ ನಡೆಸುವುದಿಲ್ಲ."

ಮಂದಾರ ಪುಷ್ಪದ ಅಭಿಭಾವುಕ ಭ್ರಮರಾವಳಿಯಂತೆ ಅಂತಃಚಕ್ಷು ಅವಳೆಡೆಗೆ ಮತ್ತೆ ಮತ್ತೆ ಹರಿಯಿತು. ತಂಗಾಳಿಗೆ ಓಲಾಡುವ ಮುಂಗುರುಳು ದೃಷ್ಟಿಗೆ ಬಿದ್ದಾಗ ನಾನೇ ಆ ಮುಂಗುರುಗಳಾಗಿದ್ದಿದ್ದರೆ ಎಂದೊರಲಿತು ಹೃದಯ ಬನದ ಪಕ್ಷಿ. ತನಗೆ ತಾನೇ ಅಂಕುಶವಾಗಿ ಕನ್ನಡಕಗಳನ್ನು ಒಂದೊಂದಾಗಿ ಕಣ್ಣಿಗಿಟ್ಟುಕೊಂಡು ಪರೀಕ್ಷಿಸತೊಡಗಿದ. ಡೆಸ್ಕಿನ ಕೆಳಭಾಗದಲ್ಲಿದ್ದ ಟ್ರೇಯೊಂದನ್ನು ಮುಂದಿಟ್ಟಳು ತರುಣಿ. ಅವುಗಳಲ್ಲೊಂದನ್ನು ಆರಿಸಿಕೊಳ್ಳುತ್ತ-

"ದಿನವೂ ನೀವೇ ಇಲ್ಲಿ ವ್ಯಾಪಾರ ನಡೆಸುವಿರಾ ?"

"ಈಚೆಗೆ ಅಭ್ಯಾಸ ಮಾಡಿಕೊಳ್ಳುತ್ತಿರುವೆ. ತಂದೆಯವರು ಹೊರ ಹೋದಾಗ ಅಣ್ಣ ಈವರೆವಿಗೆ ನೋಡಿಕೊಳ್ಳುತ್ತಿದ್ದ. ಈಗವನು ಇಲ್ಲಿಲ್ಲವಾದುದರಿಂದ ನಾನು ನೋಡಿಕೊಳ್ಳುವೆ."

"ಯಾರು ನಿಮ್ಮ ಅಣ್ಣ ?"

"ತಿಮ್ಮಯ್ಯ."

"ಓ....! ತಿಮ್ಮಯ್ಯ ನಂಜಪ್ಪ ?"

"ಹೌದು."

"ಅವನು ನಿಮ್ಮ ಅಣ್ಣನೇ ? ತಿಮ್ಮಯ್ಯ ನನಗೆ ಚೆನ್ನಾಗಿ ಗೊತ್ತು ! ಅವನೂ ನಾನೂ ಒಂದೇ ಬಾರಿಗೆ ದೇಶಸೇವೆಗೆ ಇಳಿದುದು. ಈಗ ಸುಭಾಸರೊಂದಿಗೆ ಜರ್ಮನಿಯಲ್ಲಿದ್ದಾನಂತೆ !"

"ಹೌದು."

"ತಿಮ್ಮಯ್ಯನ ತಂಗಿ ! ತುಂಬ ಸಂತೋಷ ! ನಿಮ್ಮ ಹೆಸರೇನು ?"

"ಪೂವಿ"

ಒಡನೆ ನಾಲ್ಕು ಕಣ್ಣುಗಳೂ ಆನಂದೋನ್ಮತ್ತತೆಯಿಂದ ಸಂಧಿಸಿದುವು.

೭

ಮಂಗಳಮಯೀ ಪ್ರಾತಃಸಮಯ ..!

ಪ್ರಕೃತಿದತ್ತವಾದ ವರ್ಣರಂಜಿತ ವನಶ್ರೀಯ ಉಡಿಯಲ್ಲಿ ಮಾನವ ದತ್ತವಾದ ಮನೋಹರ ಪ್ರಭಾತ್ ಫೇರಿ ...!

ಮುಂದಿದ್ದ ಪ್ರಬುದ್ಧ ಕುಮಾರಿಯರ ಮಧ್ಯೆ ಬಾವುಟ ಹಿಡಿದ ಪೂವಿ, ಹಿಂದೆ ಅಪ್ರಬುದ್ಧ ಬಾಲಕಿಯರು ಅನಂತರ ವಯಸ್ಸಿಗನುಗುಣವಾಗಿ ಹೊಂದಿಸಿದ ಶಾಲಾ ಮಕ್ಕಳು. ಸಾಲು ಬರಬರುತ್ತಾ ಸಣ್ಣಗೆ ಹರಿದು ದೀರ್ಘ ದೀರ್ಘಾಯುತ ಅಜಗರದಂತೆ ಕಣ್ಗೋಚರಿಸುತಿತ್ತು. ಮೈಲುದ್ದಕ್ಕೂ ಫೇರಿ ಯಲ್ಲಿ ಭಾಗವಹಿಸಿದ ಭಾರತಾಂಬೆಯ ಮುದ್ದು ಮಕ್ಕಳ ಒಕ್ಕೊರಲಿನ ಜೈಕಾರ...!

"ಬೋಲೋ ಭಾರತ್ ಮಾತಾಕಿ ಜೈ !"

ರುದ್ರಮಧುರ ಧ್ವನಿ ನಭೋಮಂಡಲಕ್ಕೇರಿ ಬೆಟ್ಟಗಳ ಶ್ರೇಣಿಯಲ್ಲಿ ಮರುದನಿ ಹೊಂದಿ ಶ್ರವಣೇಂದ್ರಿಯಗಳಿಗೆ ಪುನಃ ತಾಗಿತು "ಬೋಲೋ ಭಾರತ್ ಮಾತಾಕಿ ಜೈ !"

ಶತ ಸಹಸ್ರ ಮಕ್ಕಳ ಕರೆ...ಹೃದಯದ ಮೊರೆ....ಕರುಣೆಯ ತೊರೆ....

ಸಹಸ್ರ ಸಹಸ್ರ ಅಭಿಶಸ್ತ ಪದಧ್ವನಿ ಮರುಳು–ದರುಗುಗಳ ಲರಲರಲರ ಮಂಜುಳರವ ಒಂದುಗೂಡಿ ಶ್ರುತಿಮೇಳದಂತೆ, ಉದಯಗಾನದಂತೆ, ಶೋಭಾ ಲಹರಿಯಂತೆ ಕೇಳಿಬರುತಿತ್ತು.

ಅಂಬರದಲ್ಲಿ ಬೆಳ್ಳಕ್ಕಿಗಳ ಬೃಹದ್ ಹಿಂಡು ಆಶೀರ್ವದಿಸಲೋ ಎಂಬಂತೆ ಹಾರಾಡುತಿತ್ತು.

ಹೊತ್ತು ಉರುಳಿತು....ಪ್ರಭಾತ್ ಫೇರಿ ಸಾಗಿತು—ಗಮ್ಯಸ್ಥಾನ ಇನ್ನೆಷ್ಟು ದೂರವೋ...?

ವಂದೇಮಾತರಂ
ಸುಜಲಾಂ ಸುಫಲಾಂ
ಮಲಯಜ ಶೀತಲಾಂ
ಸಸ್ಯ ಶ್ಯಾಮಲಾಂ
ಮಾತರಂ....

ಸುಲಲಿತ ಕಂಠಗಳ ಮಧುರ ಧ್ವನಿ ಮೇಳೈಸಿ ಮೊಳಗಿ, ಗಿರಿಕಂದರಗಳಲ್ಲಿ ಇಮ್ಮಡಿಯಾಗಿ ಮುಮ್ಮಡಿಯಾಗಿ ಪ್ರತಿಧ್ವನಿಸಿ ತನುಮನಗಳನ್ನು ಪುಟಿಪುಟಿದೇಳಿಸುತಿತ್ತು....ಪೂರ್ವಜರ ಅಭಿಶಾಪವೋ, ದುಃಖಿತ ಸ್ತ್ರೀಕಂಠಗಳ ಆರ್ತನಾದವೋ, ಬಡಜನರ ದುಸ್ಸಹವಾದ ಆಕ್ರಂದವೋ ಪಾರತಂತ್ರ್ಯ ಕ್ಕೊಡ್ಡಿದ್ದ ದೇವಿ ಭಾರತಿಯ ಬಂಧವಿಮುಕ್ತಿಗಾಗಿ ಪ್ರಬುದ್ಧ–ಅಪ್ರಬುದ್ಧ ಜನರಾಶಿ ಕೇವಲ ಕೈದೀವಿಗೆಯ ಸಹಾಯದಿಂದ ಗಾಢಾಂಧಕಾರ ಮಾರ್ಗಯೋಗದಲ್ಲಿ ಶುಭ ಚರಣಗಳ ನೆಲೆಯನ್ನು ತಲುಪುದರಲ್ಲಿಯೇ ಹೊಂದಲಾಶಿಸುವ ಮಹಾನುಭೂತಿ...ಹಸುರುಕ್ಕುವ ಬನಶ್ರೀ, ಗರುಕೆ ಹಾಸಿನ ನೆಲಶ್ರೀ ಎದೆಯ ನೆತ್ತರನ್ನು ನೀರಿನ ಚಿಲುಮೆಯಂತೆ ಉಕ್ಕೇರಿಸುತ್ತದೆ. ಸಾಸಿರ ಸಾಸಿರ ಪಕ್ಷಿಗಳ ಕೊರಳುಲಿ, ವನವೆಣ್ಣಿನ ಮರ್ಮರ ಲೀಲೆ, ವೀಚಿ ವಾಯು ಸುಯ್ಯುವ ಸುಯ್ದನಿ ಭಾವಜ್ವಾಲೆಯನ್ನು ಭುಗಿಲೇಳಿಸುತ್ತದೆ. ಜನಸಂಘಟನೆಯ ಅನುಪಮ ಶಕ್ತಿ ಹೆಜ್ಜೆಹೆಜ್ಜೆಗಳನ್ನೂ ದಿಟ್ಟತನದಿಂದ ಮುನ್ನಡೆಸುತ್ತದೆ.

ಆದರೆ....!

ಹೆಜ್ಜೆ ಹೆಜ್ಜೆಗೂ ಕಷ್ಟನಷ್ಟಗಳ ಪಾಲು....

ಶಾಂತ–ಪ್ರಶಾಂತ ಪ್ರವೃತ್ತಿಯ ಮೂರ್ತರೂಪ ಪ್ರಭಾತ್ ಫೇರಿ ನಿಧಾನಗತಿಯಲ್ಲಿ ಸಾಗುತ್ತಲೇ ಇತ್ತು. ಒಕ್ಕೊರಲಿನ ಮಧುರರವ ಧೂರ್ತ ಪೋಲೀಸರ ಕಳಂಕಪೂರ್ಣ ಮನಕ್ಕೆ ಈಟಿಯಿಂದ ಇರಿದಂತಾಯಿತೋ ಏನೋ....ದೌಡಾಯಿಸುತ್ತಲೇ ಬಂದು ಅಡ್ಡಗಟ್ಟಿ ನಿಂತು ಚದುರಲು ಅಪ್ಪಣೆ ಮಾಡಿದರು. ಮಕ್ಕಳು ಮಣಿಯದೆ 'ಜೈಕಾರ' ಮಾಡಿದರು. ಸಿಟ್ಟು ಕೆರಳಿ ಮತ್ತೆ ಅಪ್ಪಣೆ ಹೊರಬಿತ್ತು. ಆದರೂ ಬಾಲಕಿಯರು ಜಗ್ಗಲಿಲ್ಲ. ಲಾಠಿಗಳು ಮುಂದಾದುವು. ಘರ್ಜನೆ–ಭರ್ತ್ಸನೆಗಳೊಂದಿಗೆ ನಿರಪರಾಧಿ ಮಕ್ಕಳನ್ನು

ಹಿಗ್ಗಾ ಮುಗ್ಗಾ ಬಡಿದು ಧ್ವಜವನ್ನು ಕಿತ್ತುಕೊಂಡರು. ಪೋಲೀಸರ ದೌರ್ಜನ್ಯ ಯಮಧರ್ಮನ ಕಾರ್ಯಾಚರಣೆಗೆ ಉಪಮಾನವಾಗುವಂತಿತ್ತು. ನೋವು ಸಹಿಸಲಾರದ ಮಕ್ಕಳು ಚೀರುತ್ತಾ ಓಡಿದರು. ಕೆಲವರು ಮುಸು ಮುಸು ಅತ್ತರು—ಕೆಲವರು ಅಲ್ಲೇ ಕುಸಿದರು. ಕೆಲವರು ಧೀರತನದಿಂದ ಮೈಗೊಟ್ಟು ನಿಂತು ಒಕ್ಕೊರಲಿನಿಂದ ಘೋಷಿಸಿದರು. "ಬೋಲೋ ಭಾರತ್ ಮಾತಾಕಿ ಜೈ !"

ಧಿಡ್, ಧಿಡ್, ಧಿಡ್, ಧಿಡ್.

ಟಪ್, ಟಪ್, ಟಪ್, ಟಪ್.

"ಬೋಲೋ ಭಾರತ್ ಮಾತಾಕಿ ಜೈ !"

"ಹೊಡಿ...ಬಡಿ...."

"ವಂದೇಮಾತರಂ."

"ಹೊಡಿ....ಬಿಡಬೇಡ....ಹಿಡಿದು ತುಂಬು...!"

ಕೈಗೆ ಸಿಕ್ಕಿದಷ್ಟು ಮಂದಿಯನ್ನು ಹಿಡಿದು ಕುರಿಗಳನ್ನು ತುಂಬುವಂತೆ ವ್ಯಾನುಗಳಿಗೆ ತುಂಬಿದರು. ಹುಡುಗಿಯರ ತಂಡದಲ್ಲಿದ್ದ 'ಲೀಲಾ' ಪೋಲೀಸ್ ಇನ್ಸ್‌ಪೆಕ್ಟರ ಮಗಳು....ಅವಳು ಚಳವಳಿಯಲ್ಲಿ ಭಾಗ ವಹಿಸದಂತೆ ಮನೆಯವರು ಏನೆಲ್ಲಾ ಅಡೆತಡೆ ಹಾಕಿದ್ದರೋ ಅವನ್ನೆಲ್ಲಾ ಮೀರಿಯೇ ಅವಳು ಹೊರಬಿದ್ದಳು. ಬಹುಶಃ ಅವಳಿಂದಾಗಿಯೇ 'ಲಘುಪ್ರಹಾರ' ಲಭಿಸಿತೋ ಏನೋ....ಕಳೆದುಳಿದ ಹತ್ತಿಪ್ಪತ್ತು ಹುಡುಗಿಯರನ್ನು ಠಾಣ್ಯಕ್ಕೆ ಕರೆತಂದಾಗ ಇನ್ಸ್‌ಪೆಕ್ಟರು ಅಲ್ಲಿ ಇರಲಿಲ್ಲ. ಎಲ್ಲರನ್ನೂ ಠಾಣ್ಯದ ಆವರಣದಲ್ಲಿ ಅತ್ತಿತ್ತ ಹೋಗದಂತೆ ತಡೆ ಹಾಕಿದರು. ಅಕಾರಣವಾಗಿ ದಂಡಿತ ಬಾಲಕಿಯರ ಸುಮ ಸದೃಶವಾದ ಎಳೆಮೈ ಕೈಗಳಲ್ಲಿ ಬಾಸುಂಡೆಗಳೆದ್ದು ಖಾರದ ಲೇಪನ ಬಳಿದಂತೆ ಉರಿಯುತಿದ್ದುವು. ಅನಿರ್ವಚನೀಯವಾದ ಅಸಹನೆಯಿಂದ ಮನಸ್ಸು ನೊಂದಿದ್ದರೂ ಇನ್‌ಸ್ಪೆಕ್ಟರ ಆಗಮನವನ್ನು ಇದಿರು ನೋಡುತ್ತ ಅಲ್ಲೇ ಉಳಿಯಬೇಕಾಯಿತು. ಕಾಲೇಜು ಗರತಿಯರಲ್ಲಿ ಉಳಿದವರು ಲೀಲಾ ಮತ್ತು ಪೂವಿ ಇಬ್ಬರೇ. ಶಾಲಾ ಬಾಲಕಿಯರ ಕಣ್ಣುಗಳಂಚಿನಲ್ಲಿ ಫಳಫಳ ನೀರು ಮಿಂಚುತಿತ್ತು ; ಅವರನ್ನೆಲ್ಲಾ ಸಮಾಧಾನಗೊಳಿಸಬೇಕಾದರೆ ಸಾಕು ಬೇಕಾಯಿತು ಲೀಲಾ-ಪೂವಿಯರಿಗೆ.

ಇನ್ಸ್‌ಪೆಕ್ಟರ್ ಠಾಣೆಗೆ ಹಿಂದಿರುಗಿದಾಗ ಅವರ ಸಮ್ಮುಖದಲ್ಲಿ ಮೊದಲು ಹಾಜರಾದ ತರುಣಿ ಲೀಲಾ, ಕೋಪೋದ್ದೀಪ್ತ ತಂದೆಯ ರುದ್ರಕಾಯದ ಮುಂದೆ ಅಲನೆ ನತ ಶಿರಸ್ಕಳಾದಳು.

"ನಿನ್ನ ಸಿಗಿದು ತೋರಣ ಕಟ್ಟಿಯೇನು ಗೊತ್ತೆ ?"

ಕಂಠಸ್ವನ ಮಾಡು ಮುಟ್ಟವಂತೆ ಮೊಳಗಿ ಮೈ ನವಿರೇಳಿಸಿತು.

"ದೇಶಕ್ಕಾಗಿ........ಮಾತೃಭೂಮಿಗಾಗಿ....ಎಲ್ಲಾ ಶಿಕ್ಷೆಗೂ ನಾನು ಸಿದ್ಧ!"

"ಮುಚ್ಚು ಬಾಯಿ !"

ಪೋಲೀಸನೆಡೆಗೆ ತಿರುಗಿ ಇನ್ಸ್‌ಪೆಕ್ಟರ್ ಗುಡುಗಿದ "ಇವಳನ್ನು ಮನೆಗೆ ಕರೆದುಕೊಂಡು ಹೋಗಿ ಕೂಡಿ ಹಾಕಲು ಹೇಳು!"

ಲೀಲಾ ನಿರ್ಗಮಿಸುವುದರೊಳಗಾಗಿ ಪೂವಿ ಹಾಜರಾದಳು. ಇನ್ಸ್‌ಪೆಕ್ಟರನ ಕೆಂಗಣ್ಣಿನ ಕಿಡಿನೋಟ ತೀಕ್ಷ್ಣವಾಗಿ ನಿಟ್ಟಿಸಿತು. ಗಡಸು ದನಿಯಲ್ಲಿ ನುಡಿ ಹೊರಬಿತ್ತು.

"ದೇಶಕ್ಕಾಗಿ ಪಾಡುಪಡಲು ಹುಡುಗರಿದ್ದಾರೆ. ನಿಮಗೇಕೆ ಈ ತಾಪತ್ರಯ ? ತಂದೆ ತಾಯಿ ಹೇಳಿದಂತೆ ಕೇಳಿಕೊಂಡು ನೆಮ್ಮದಿಯಿಂದಿರ ಬಾರದೇ ?"

"ಕರ್ತವ್ಯ ಎಂಬುದು ಹುಡುಗರಿಗೆ ಮಾತ್ರ ಮೀಸಲೇ ?"

"ಮೀಸಲು ಎಂದೇನಿಲ್ಲ. ಮಾಡುವವರಿರುವಾಗ ನೀವೇಕೆ ತಲೆ ಹಾಕ ಬೇಕು ? ಹೆಂಗಸರಿಗೆ ಮಾನವೇ ಭೂಷಣ. ಮನೆಯೇ ನಿಜವಾದ ಕಾರ ಸ್ಥಾನ."

"ಅದು ನಿಮ್ಮ ಅಭಿಪ್ರಾಯವಾದೀತು."

"ಶಾಂತಿಯ ಹೆಸರಿನಲ್ಲಿ ಕ್ರಾಂತಿ, ಶಿಸ್ತಿನ ಹೆಸರಿನಲ್ಲಿ ಪೈಶಾಚಿಕತೆ, ಸತ್ಯದ ಹೆಸರಿನಲ್ಲಿ ಧೂರ್ತತೆ....ಇದೇನು ಭಾರತವೇ ? ಅಥವಾ ಪಿಶಾಚಿಗಳ ನಾಡೇ ?"

"ಅಧಿಕಾರಶಾಯಿ ಎಂಬುದೇ ಪಿಶಾಚಸ್ಥಾನ....ಈಗ ಹೇಳಿ, ಶಾಂತಿಯ ಉಚ್ಚಾಟನೆಗೆ ಯಾರು ಕಾರಣರು...? ನನಗೆ ಹಾಕಿದ ಪ್ರಶ್ನೆ ನಿಮ್ಮ ಸಲು ವಾಗಿಯೇ ಇದೆ. ಅಂದರೆ..."

"ಈ ದೇಶದ ಹೆಂಗಸರಿಗೆ ದೇಶಕ್ಕೂ ಧರ್ಮಕ್ಕೂ ಅತೀತರಾಗಿ ಬಾಳುವ ದೀಕ್ಷೆ ಕೊಟ್ಟವರೂ ಸಹ ನಡುಗಿ ಹೋಗುವಂತಹ ಪರಿಸ್ಥಿತಿ ಒದಗಿದೆ ಇಂದು... ಬಹಳ ಮಟ್ಟಿಗೆ ನಿಮಗೆ ಇದೆಲ್ಲ ಅರ್ಥವಾಗುವುದಿಲ್ಲ. ರಾಜಕೀಯ ರಂಗದಲ್ಲಿ ಪಡೆದ ದೋಷ ಸಾಮಾಜಿಕ ರಂಗವನ್ನು ಕಲುಷಿತಗೊಳಿಸಿ ನಿಮ್ಮ ಜೀವನವನ್ನೇ ನಾಶಗೊಳಿಸುತ್ತದೆ !"

"ನನಗೆ ಹೇಳುವ ಮುನ್ನ ಇದನ್ನು ನಿಮ್ಮ ಬಗೆಗೆ ಹಚ್ಚಿ ನೋಡಿದ್ದೀರಾ ? ಯಾವುದೇ ವಿಚಾರ ಸರಣಿ ಸ್ತ್ರೀತ್ವಕ್ಕೆ ಮಾತ್ರವಲ್ಲ ; ಪುರುಷತ್ವಕ್ಕೂ ಅನ್ವಯಿಸುತ್ತದೆ."

ಯಾವುದೋ ವೀಣೆಯ ವೀತಗಾನ ತನ್ನ ಹೃದಯ ತಂತಿಗಳಲ್ಲಿ ಮಾಟಿದಂತಾಯಿತು. ಅಂತರ್ನಿಹಿತ ತೀಕ್ಷ್ಣ ಭಾವಜ್ವಾಲೆ ತರಂಗತರಂಗವಾಗಿ ನರತಂತುಗಳನ್ನು ಸುಡಹತ್ತಿತು. ನಿಶ್ಶಬ್ದತೆಯ ಘನ ಶಾಂತ ಪದಧ್ವನಿ ಸುತ್ತಿಗೆಯ ಪೆಟ್ಟಿನಂತೆ ಮಸ್ತಕದ ಮೇಲೆ ಬೀಳತೊಡಗಿತು .. ಏನೋ ಒಂದು ರೀತಿಯಲ್ಲಿ ಮರವಟ್ಟಂತೆ ಕುಳಿತ ವ್ಯಕ್ತಿ ಮತ್ತೆ ಚೇತರಿಸಿಕೊಳ್ಳುತ್ತ ಅತ್ಯಂತ ಅಸಹನೀಯ ದನಿಯಲ್ಲಿ ಗುಡುಗಿದ.

"ದೇಶ...ದೇಶ....ದೇಶ ! ದೇಶಪ್ರೇಮದ ಹೆಸರಿನಲ್ಲಿ ನಡೆಯುತ್ತಿರುವುದು ದೇಶದ್ರೋಹ ! ಇಂದಿನ ಗೂಂಡಾಗಿರಿಯಿಂದ ದೇಶದ ಆಸ್ತಿಪಾಸ್ತಿಗಳೆಷ್ಟು ನಷ್ಟ ? ಇದೆಲ್ಲಾ ಅರ್ಥವಾಗದೆ ?"

"ನಮ್ಮ ದುಡಿಮೆ... ನಮ್ಮ ಆಸ್ತಿ ನಮ್ಮ ದೇಶ !"

"ಹೌದು ! ಆದರೆ ನಾಶಗೊಳಿಸುವುದಕ್ಕಾಗಿ ಅಲ್ಲ ! ಈ ಚಳವಳಿಯಲ್ಲಿ ಭಾಗ ವಹಿಸದಿದ್ದಲ್ಲಿ ನಿನ್ನನ್ನು ಬಿಟ್ಟುಬಿಡುವೆ ...ಹೋಗಿ ಮನೆಯಲ್ಲಿ ನೆಮ್ಮದಿಯಿಂದಿರು. ಹೆಣ್ಣುಮಕ್ಕಳಿಗೆ ಈ ಗೂಂಡಾಗಿರಿ ಶೋಭೆಯಲ್ಲ."

"ಇದನ್ನೆಲ್ಲಾ ನೀವು ಹೇಳುವ ಅಗತ್ಯವಿಲ್ಲ. ನಾನು ಕೇಳುವುದಿರಲಿ, ಇಂದು ಲೀಲಾ ಸಹ ಕೇಳಲಾರಳು."

"ನಿನ್ನ ಸಹವಾಸದಿಂದಲೇ ಲೀಲಾ ಹಾಳಾದದ್ದು !"

"ಹಾಗೋ...? ಅಷ್ಟನ್ನು ತಿಳಿದುಕೊಂಡ ನೀವು ಈ ಸಣ್ಣ ಅಧಿಕಾರದ ವ್ಯಾಮೋಹ ನಿಮ್ಮಿಂದ ದೇಶ ಸೇವಕರ ಮೇಲೆ ದಾಳಿ ಮಾಡಿಸುತ್ತಿದೆ ಎಂಬುದನ್ನು ತಿಳಿದುಕೊಳ್ಳದಿರುವುದು ಆಶ್ಚರ್ಯ ?"

"ಸುಖದೇವ್ ಎಂಬ ಹೆಸರಿನಲ್ಲಿ ಸಮಾಜ ಸೇವೆಯ ಸೋಗು ಹಾಕಿಕೊಂಡು ಕ್ರಾಂತಿ ನಡೆಸುತ್ತಿರುವ ಆ ವಿದ್ರೋಹಿಯನ್ನು ನೀನು ಸಮರ್ಥಿಸುತ್ತಿರುವೆಯಾ ?"

"ಯಾರು....ಯಾರನ್ನು ಸಮರ್ಥಿಸುತ್ತಾರೋ ಆ ವಿಷಯವನ್ನು ಊಹಿಸುವುದು ಕಷ್ಟ."

ಮಾತಿಗೆ ಮಾತು ಸೋಲುವವಳೇ ಅಲ್ಲ. ಮಗಳ ಒಡನಾಡಿಯಾದ ಅವಳನ್ನು ಮೂರು ವರ್ಷಗಳಿಂದ ಕಂಡಿದ್ದ. ತನ್ನ ನೆರೆಮನೆಯವಳೂ ಹೌದು. ಅವಳ ಮೇಲೆ ಯಾವ ಕ್ರಮ ತೆಗೆದುಕೊಳ್ಳಬೇಕೋ ಹೊಳೆಯದಾಯಿತು. ಒಂದೆರಡು ಘಂಟೆಗೆ ತಬ್ಬಿಬ್ಬಾದ ಎದೆಯಾಳದಲ್ಲಿ ಬಿಸಿಯುಸಿರು ಎಣೆಯಿಲ್ಲದೆ ಹರಿದಾಡಿತು. ಎದುರಿಗೆ ಅಪರಾಧಿ ಸ್ಥಾನದಲ್ಲಿ ನಿಂತ ಬಳ್ಳಿ ದೇಹದ ಅಪೂರ್ವ ಸುಂದರಿಯ ತೀಕ್ಷ್ಣ ನೋಟ ತನ್ನ ಒರಟು ಭಾವನೆಯನ್ನು ಸಮೂಲವಾಗಿ ಅಲುಗಾಡಿಸಿದಂತೆ ಭಾಸವಾಯಿತು. ಒಂದೆರಡು ಘಳಿಗೆ ಸೂಕ್ಷ್ಮವಾಗಿ ಸಾವರಿಸಿಕೊಳ್ಳುವುದರಲ್ಲಿಯೇ ಅಳಿದುವೋ ಏನೋ...ತನ್ನ ಜೀವಿತದಲ್ಲಿ ಎಂದೂ ಮರೆಯಲಾಗದಂತಹ ಎಷ್ಟೋ ಘಟನೆಗಳನ್ನು ಕಂಡಿದ್ದಾಗಿದೆ; ಗೆದ್ದು ಬಂದಾಗಿದೆ. ಆದರೆ ಇಂದಿನ ಪರಿಸ್ಥಿತಿ ಎಲ್ಲಕ್ಕೂ ಮಿಗಿಲಾಗಿದೆ. ಭಾವಾತ್ಮಕ-ರಚನಾತ್ಮಕ ವಿವೇಚನಾ ಜ್ಞಾನ ರಾಜಕೀಯ ಮೂರ್ಖತೆಯ ಅಡಿಗಲ್ಲಿನ ಮೇಲೆ ಮಸೆಯಲ್ಪಟ್ಟು ಹೇಳ ಹೆಸರಿಲ್ಲದಂತೆ ಕರಗುತ್ತಿರುವುದು ಆಶ್ಚರ್ಯ !

ಇನ್ಸ್‌ಪೆಕ್ಟರ್ ದೀರ್ಘವಾದ ನಿಟ್ಟುಸಿರು ಬಿಟ್ಟ...ತೀಕ್ಷ್ಣ ನೋಟ ಅವಳನ್ನಿರಿಯಿತು.

ಪೂವಿ ಭಾವೋದ್ವೇಗದಿಂದ ಆತನನ್ನೇ ದಿಟ್ಟಿಸಿ ನೋಡುತ್ತ ಹೇಳಿದಳು,

"ನನ್ನನ್ನೇಕೆ ಅನುಮಾನಿಸುತ್ತಿರುವಿರಿ ? ನಾನು ಯಾವ ತಪ್ಪನ್ನೂ ಮಾಡಿರುವುದಿಲ್ಲ. ನೀವು ಹಿಡಿದು ತರಿಸಿರುವುದರಿಂದ ಅದ್ಭುತವೂ ಅಮೂಲ್ಯವೂ ಆದ ನನ್ನ ವೇಳೆಯು ನಷ್ಟವಾಯಿತು..."

"ನಿನ್ನ ಪ್ರಚೋದನೆಯಿಂದಲೇ ಲೀಲಾ...."

ಪೂವಿ ನಡುವೆ ಬಾಯಿ ಹಾಕಿದಳು.

"ಹೌದು ! ನನ್ನ ಪ್ರಚೋದನೆಯಿಂದಲೇ ಲೀಲಾ....ಸುಖದೇವ್ ಮತ್ತು ಎಲ್ಲರೂ ! ಗಾಂಧೀಜಿ... ನೆಹರೂ ಸಹ !"

ಇನ್‌ಸ್ಪೆಕ್ಟರನ ಎದೆ ತಿದಿಯಂತೆ ಏರಿಳಿಯಿತು. ಏನೋ ಹೇಳಲು ಪ್ರಯತ್ನಿಸಿದ. ತುಟಿಗಳು ಬಿರಿಯಲಿಲ್ಲ. ಯೋಚಿಸಬೇಕಾದ, ಚಿಂತಿಸ ಬೇಕಾದ ವಿಷಯ ಮನವನ್ನು ಕೊರೆಯುತಿತ್ತು. ಜೀವನ ಧರ್ಮದ ಕಟು ಸತ್ಯವನ್ನು ಎಲ್ಲಾ ಕಾಲದಲ್ಲೂ ಎಲ್ಲಾ ಸಂದರ್ಭಗಳಲ್ಲೂ ಆತ್ಮಪೂರ್ವಕವಾಗಿ ಸ್ವೀಕರಿಸಲು ಪ್ರಯತ್ನಿಸಿದರೆ ಅದಕ್ಕಿಂತಲೂ ಮಿಗಿಲಾದ ಧರ್ಮವಾಗಲೀ ಸತ್ಯವಾಗಲಿ ಎಂದೂ...ಯಾವ ಯುಗದಲ್ಲೂ ದೊರೆಯಲಾರದು. ಆ ಮಹಾ ಸತ್ಯದ ಮುಂದೆ ಇನ್ನಾವುದೂ ನಿಲ್ಲಲಾರದು. ಹಠದಿಂದ, ಕೆಚ್ಚಿನಿಂದ ಹಾಗೂ ಯಾವುದೇ ಸಂಸ್ಕಾರದಿಂದ ಎರಡೂ ಕಣ್ಣುಗಳನ್ನು ಕಟ್ಟಿಕೊಂಡು ಅಸತ್ಯವನ್ನು ಸತ್ಯವೆಂದು ಭ್ರಮೆಯ ಪಡುವುದು ನಡೆಯುತ್ತಲೇ ಇದೆ....ಅದರ ಲ್ಲೇನೂ ವಿಶೇಷವಿಲ್ಲ. ಹಾಗೆಂದ ಮಾತ್ರಕ್ಕೆ ಅದು ಸತ್ಯವಾಗುವುದೆಂದು ಭ್ರಮೆ ಪಡಬೇಕಾದ ಅಗತ್ಯವೂ ಇಲ್ಲ....ಆದರೆ ನಡೆಯುವಷ್ಟು ಕಾಲ ನಡೆಯಲಿ...

ಆದ್ಯಂತವಿಲ್ಲದ ಯೋಚನಾ ಲಹರಿ ವಿದ್ಯುಲ್ಲಹರಿಯಂತೆ ಮನದಲೆಯಲ್ಲಿ ಹರಿದಾಡಿದಾಗ ಗಾಢಾಂಧಕಾರದಲ್ಲಿ ಸೆಳೆಮಿಂಚೊಂದು ಮಿಂಚಿ ಮಾಯ ವಾದಂತಾಯಿತು. ಎಲ್ಲಾ ಬಾಲಿಕೆಯರನ್ನೂ ಬೇಷರತ್ತಾಗಿ ಬಿಡುಗಡೆ ಮಾಡಲು ಸಬ್‌ಇನ್‌ಸ್ಪೆಕ್ಟರನಿಗೆ ಅಪ್ಪಣೆ ಮಾಡಿದ. ಬಾಲಿಕೆಯರ ದಂಡು ಠಾಣೆಯ ಆವರಣವನ್ನು ಬಿಟ್ಟು ಆನಂದೋತ್ಸಾಹದಿಂದ ಹೊರಟಿತು. ಮೇಲೆ ಸುಡು ಬಿಸಿಲು ; ಕೆಳಗೆ ಕಾದ ನೆಲ ; ಆದರೂ ಹುರುಪು ತಗ್ಗದು.

ಬೋಲೋ ಭಾರತ್ ಮಾತಾಕಿ ಜೈ !

ಹೆಣ್ದನಿಗಳ ಇಂಪು ಶ್ರವಣೇಂದ್ರಿಯಗಳಲ್ಲಿ ಅತ್ಯಾನಂದದಿಂದ ವಿಹರಿಸಿತು.

ಜಿಣ್, ಜಿಣ್, ಜಿಣ್, ಜಿಣ್.

ಲರಕ್, ಲರಕ್, ಲರಕ್, ಲರಕ್.

ನೂಪುರಗಳ ಮಧುರ ರವ....ಅಭಿಸಪ್ತ ಹೆಜ್ಜೆಗಳ ಮೃದು ಧ್ವನಿ ಯೊಂದಿಗೆ ಬೆರೆತು ಸಹಸ್ರ ಸಹಸ್ರ ಪ್ರಶ್ನೋತ್ತರಗಳಂತೆ ಎದ್ದೆದ್ದು ಮಾಯ ವಾಗುತಿದ್ದುವು.

ಪೂವಿ ಯಾವುದೋ ಮಂತ್ರಶಕ್ತಿಗೊಳಗಾದಂತೆ ಯೋಚಿಸುತ್ತ ನುಡಿದಳು:

"ಮನುಷ್ಯರನ್ನು ಜೈಲುಗಳಲ್ಲಿ ಕೂಡಬಹುದಾದ ನ್ಯಾಯಶಕ್ತಿಯನ್ನು ಯಾವ ಅಭಿಜ್ಞಾನಿ ಸೃಷ್ಟಿಸಿದನೋ ದೇವರೇ ಬಲ್ಲ. 'ಜೈಲು' ಎನ್ನುವುದು ಮನುಷ್ಯನಿಗೆ ಮಲಿನತೆಯನ್ನು ಕಡ್ಡಾಯವಾಗಿ ಕಲಿಸಬಲ್ಲ ತಾಣ... ಅಸಂಖ್ಯಾತ ರೋಗಗಳ ಸಂಗ್ರಹಾಲಯ. ಇಂತಹದರಲ್ಲಿ ರಾಜಕೀಯ ಬಂಧಿಗಳ ಗತಿ ಏನಾಗಬೇಡ ?... ತುಂಬ ಶೋಚನೀಯ."

"ನೀನು 'ಸ್ಥಿತಿಗತಿ' ಶೋಚನೀಯ ಎನ್ನುತಿದ್ದಿ. ಆದರೆ 'ಪ್ರಾಣ'ಕ್ಕೇ ಈಗ ನೆಲೆಯಿಲ್ಲವಲ್ಲ ... ಕಸಕ್ಕಿಂತ ಕಡೆಯಾಗಿ ಮಣ್ಣಿನ ಹುಡಿಯಲ್ಲಿ ಹೊರಳಾಡುತ್ತಿದೆ. ವಿದೇಶೀಯರಷ್ಟೇ ದೇಶೀಯ ಅಧಿಕಾರಿಗಳು ಭದ್ರಶೀಲರಾಗಿದ್ದಾರೆ. ಕಸಾಯಿಖಾನೆಯ ಕ್ರೌರ್ಯಕ್ಕಿಂತಲೂ ಹೆಚ್ಚಿನ ನಿರ್ದಯತೆಯನ್ನು ಈಗ ಎಲ್ಲೆಲ್ಲೂ ಕಾಣುತ್ತಿದ್ದೇವೆ." ಎಂದಳು ಲೀಲಾ.

"ಸ್ವಾರ್ಥವೇ ಪರಮಾರ್ಥ !"

ಪೂವಿ ಘಳಿಗೆ ಕಾಲ ಯೋಚಿಸಿದಳು. ಮುಖದ ಮೇಲೆ ಕಾರ್ಮೋಡದ ಕಪ್ಪು ಛಾಯೆ ದಟ್ಟೈಸಿತು. ಏನೋ ಒಂದು ರೀತಿಯಲ್ಲಿ ಅರ್ಥಹೀನವಾದ ಕಿರುನಗು ತುಟಿಗಳಲ್ಲಿ ಮೂಡಿ ಮಾಯವಾಯಿತು. ನಯನಗಳು ಜ್ವಲಂತ ಗ್ರಹಗಳಂತೆ ನಿಶ್ಚಲವಾಗಿ ಬೆಳಗಿದುವು. ತನುಮನಗಳ ಆವೇಗದಿಂದ ಬಳಲಿದ ಎಳೆಯ ದೇಹ ನಸು ಬಳುಕಿತು. ಠಾಣೆಯ ವಲಯದಿಂದ ಇಲ್ಲಿಯವರೆಗೆ ನಿರ್ವಸತಿಯಾದ ತಾಣದಲ್ಲಿಯೇ ಹರಿದ ಹಾದಿ ಈಗ ಜನವಸತಿಯುಳ್ಳ ಸ್ಥಳಕ್ಕೆ ಸೇರಿದುದರಿಂದ ಚಿತ್ತ ಜಾಗೃತವಾಯಿತು. ತನ್ನೊಂದಿಗಿದ್ದ ಶಾಲಾ ಬಾಲಕಿಯರನ್ನು ಮನೆಮನೆಗೆ ಮುಟ್ಟಿಸುವುದರಲ್ಲಿ ಅದೆಷ್ಟು ಹೊತ್ತು ಉರುಳಿತೋ....ಎದುರಾಗಿ ಮುದ್ದು–ಮಾದು ಗಮಿಸಿದಾಗಲೇ ಇತ್ತ ಗಮನ.

ಮುದ್ದಪ್ಪ ಭಾವೋದ್ವೇಗದಿಂದ ಕೇಳಿದ,

"ನಿಮ್ಮ ಪ್ರಭಾತ್ ಫೇರಿಯ ಮೇಲೆ ಪೋಲೀಸರ ದಾಳಿ ನಡೆದುದು ನಿಜವೇ ?"

ಪೂವಿ ಮಾತಾಡದೆ ಪೆಟ್ಟುಬಿದ್ದ ಕೈಗಳನ್ನು ಮುಂದೆ ಮಾಡಿದಳು. ಮುಂಗೈ ಮತ್ತು ತೋಳುಗಳ ಮೇಲೆದ್ದ ಬಾಸುಂಡೆ ಇನ್ನೂ ಅಡಗಿರಲಿಲ್ಲ. ಕೆಲವೆಡೆ ಚರ್ಮ ಹಸುರುಗಟ್ಟಿತ್ತು.

"ಏನಿದು! ಎಲ್ಲರಿಗೂ ಬಿತ್ತೆ? ಹಸು ಮಕ್ಕಳ ಕತೆಯೇನು?"

"ಯಾರನ್ನೂ ಬಿಡಲಿಲ್ಲ. ಕೆಲವರಿಗೆ ಹಿಗ್ಗಾಮುಗ್ಗಾ ಬಡಿದಿದ್ದಾರೆ. ಆದರೆ ಹೆಚ್ಚಿನ ಗಾಯವಾಗಲಿಲ್ಲ...'ಲಘುಪ್ರಹಾರ' ಎಂದೇ ಭಾವಿಸ ಬಹುದು!"

ಪೂವಿ ಮುಗುಳು ನಕ್ಕಳು–ಚೆಂದುಟಿಗಳಲ್ಲಿ ಚಿನ್ನದ ರೇಖೆ ಮೊಳೆದಂತಾಯಿತು.

ಮುದ್ದಪ್ಪ ಲೀಲಳ ಕಡೆ ಪರಿಶೀಲನಾ ದೃಷ್ಟಿಯಿಂದ ನೋಡಿ–"ನಿಮಗೂ ಪೆಟ್ಟು ಬಿತ್ತೇ?"

"ಎಲ್ಲೋ ಅಲ್ಪಸ್ವಲ್ಪ...."

"ಇನ್‌ಸ್ಪೆಕ್ಟರ ಮಗಳಿಗೆ ಪೋಲೀಸರು ಹೊಡೆದಾರೆಯೇ?"

"ಗುಂಪಿನಲ್ಲಿ ಗೋವಿಂದ! ಅಲ್ಲಿ ನನ್ನ ಗುರುತಿಸುವವರಾರು?"

"ಗುಂಪು ಸಣ್ಣದು ತಾನೆ?"

"ಇರಬಹುದು...ಆದರೂ...."

ನೋಟ ಅವಳ ಕಡೆ ಹರಿಯಿತು. ಒಂದೆರಡು ಕಡೆ ಪೆಟ್ಟಿನ ಗುರುತುಗಳು ಕಣ್ಣಿಗೆ ಬಿದ್ದುವು. ತಟ್ಟನೆ ಕೈಗಳನ್ನು ಹಿಂದಕ್ಕೆ ತೆಗೆದುಕೊಂಡು "ಅವು ಹೇಳಿಕೊಳ್ಳುವಂತಹ ಪೆಟ್ಟಲ್ಲ." ಎಂದಳು. ತುಟಿಗಳಲ್ಲಿ ಎಳೆ ನಗು ಮೂಡಿ ಮಾಯವಾಯಿತು.

"ಆಗಲಿ, ಅಷ್ಟಾದರೂ ಬಿತ್ತಲ್ಲ; ಇನ್ಸ್‌ಪೆಕ್ಟರ ಮಕ್ಕಳೂ ಸ್ವಲ್ಪ ರುಚಿ ನೋಡುವುದು ಒಳ್ಳೆಯದು." ಮುದ್ದಪ್ಪ ಮುಗುಳ್ನಕ್ಕ.

ಮಾದು ಮರುಕ ತೋರುವಂತೆ 'ಪಾಪ' ಎಂದ.

ಲೀಲಾ ಉಳಿದ ಹುಡುಗಿಯರೊಂದಿಗೆ ಹೊರಟಳು. ಪೂವಿ ಲೀಲಳ ಕಡೆ ತಿರುಗಿ "ಅಮ್ಮನಿಗೆ ಹೇಳು; ಸ್ವಲ್ಪ ಹೊತ್ತಿನೊಳಗಾಗಿ ಬಂದುಬಿಡುವೆ" ಎಂದಳು.

"ಅವಳಿರುವುದು ನಿಮ್ಮ ಮನೆಯ ಹತ್ತಿರವೇ ?"

"ಹೌದು... ಮಗ್ಗುಲ ಮನೆಯೇ ಅವಳದು." ಎಂದ ಪ್ರೀತಿ ಒಂದು ಘಳಿಗೆ ತಡೆದು ಪುನಃ "ನಮ್ಮನ್ನೆಲ್ಲಾ ವ್ಯಾನುಗಳಲ್ಲಿ ತುಂಬಿ ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗಿದ್ದರು...."

"ಏಕೆ ? ನೀವು ಮಾಡಿದ ತಪ್ಪಾದರೂ ಏನು ?"

"ಜೈಕಾರ ಮಾಡಿದ್ದೇವೆ ! ವಂದೇ ಮಾತರಂ ಹಾಡಿದ್ದೇವೆ !"

ಮೂವರೂ ನಕ್ಕುಬಿಟ್ಟರು.

"ಅವಿವೇಕಿಗಳು...ನಮ್ಮ ದೇಶ ಈ ಸ್ಥಿತಿಗೆ ಬಂದೀತೆಂದು ನಾನು ಭಾವಿಸಿರಲಿಲ್ಲ." ಎಂದ ಮಾದು. ಮುಖಭಾವ ಗಂಭೀರವಾಗಿತ್ತು.

ಮೂವರೂ ಸಾಲಾಗಿ ಹಾದಿಯ ನೇರಕ್ಕೆ ಹೆಜ್ಜೆ ಹಾಕಿದರು. ಪ್ರೀತಿ ತನ್ನ ವಿಚಾರ ಸರಣಿಯನ್ನು ಹರಿಯ ಬಿಟ್ಟಳು–"ನಮಗೂ ಇಂಗ್ಲೀಷರಿಗೂ ಶಿಕ್ಷೆ-ದೀಕ್ಷೆ, ಸಂಸ್ಕಾರ-ಸಂಪ್ರದಾಯ, ರೀತಿ-ನೀತಿ, ವಿಧಿ-ವಿಧಾನ ಇವುಗಳಲ್ಲಿ ಅರ್ಥಾತ್ ಸಂಬಂಧವಿಲ್ಲ...ಅವರ ಶಕ್ತಿ ಸಾಮರ್ಥ್ಯಗಳನ್ನು ಅರಿತುಕೊಂಡು ನಮ್ಮವರು ಚೇತರಿಸಿಕೊಳ್ಳಬಹುದಾಗಿದ್ದರೆ ಖಂಡಿತ ಈ ಅವಧಿಯೊಳಗಾಗಿ ಚೇತರಿಸಿಕೊಳ್ಳಬಹುದಾಗಿತ್ತು. ನಮ್ಮವರಿಗೆ ಸಮಯೋಚಿತ ಜ್ಞಾನವೇ ಇಲ್ಲ. ನೀವು ಏನಾದರೂ ಅಂದುಕೊಳ್ಳಿ. ಇವರು ಇಂದೂ ಅಪ್ರಬುದ್ಧರು."

"ಸರಿ ...ನಾವು ಅಪ್ರಬುದ್ಧರು. ಅವರು ಪ್ರಬುದ್ಧರು. ಈ ನಡುವಣ ಜಾಯಮಾನವೇ ಭಾರತಮಾತೆಯ ಶೋಷಣೆಗೈದಿದೆ. ಪ್ರಬುದ್ಧರನ್ನು ಬಡಿದೋಡಿಸಿದರೆ ಅಪ್ರಬುದ್ಧರು ಪ್ರಬುದ್ಧರಾಗುತ್ತಾರೆ."

"ಅದು ಸರಿಯೆ."

"ಜೀವನದ ಪರಿಸ್ಥಿತಿ-ಜಾಗೃತ ಶಕ್ತಿ ಒಂದಕ್ಕೊಂದು ಹೊಂದಿಕೊಳ್ಳದ ಹೊರತು ನಮ್ಮ ದೇಶದ ಪರಿಸ್ಥಿತಿ ಉತ್ತಮವಾಗುವುದು ಕಷ್ಟ. ಅಂದಿಂದಿಗೂ ಪರಕೀಯರಿಂದ ಸೂರೆಗೊಂಡ ನಾಡು ರಕ್ತಮಾಂಸಗಳನ್ನು ಕಳೆದುಕೊಂಡಿದೆ. ನಾವು ಸ್ವಾತಂತ್ರ್ಯ ಪಡೆಯದ ಹೊರತು ಚೇತರಿಸಿಕೊಳ್ಳುವುದು ಕಷ್ಟ."

"ಇವರ ದಬ್ಬಾಳಿಕೆ ನೋಡಿದರೆ "ಬೊಲ್ಷೆವಿಕ್ ಪ್ರೊಪಗಾಂಡ" ಕೈ

ಸಂಬಂಧಿಸಿದ ಶಕ್ತಿ ಭುಗಿಲೆದ್ದರೇನೇ ಸ್ವಾತಂತ್ರ್ಯ. ಇಲ್ಲದಿದ್ದರೆ ಇನ್ನೆಷ್ಟು ಕಾಲ ಹೆಣಗಬೇಕೋ..." ಎಂದ ಮಾಧು.

"ಕಷ್ಟ...ಅದೂ ಸಹ ಕಷ್ಟವೇ..."

ಮಾತು ಮುಗಿಯಲಿಲ್ಲ. ಹಿಂದಿನಿಂದ ದಿಡು ದಿಡು ಸದ್ದು.

ಮೂವರೂ ಚಕಿತರಾಗಿ ಹಿಂದಿರುಗಿ ನೋಡಿದರು. ಹತ್ತಾರು ಮಂದಿ ತರುಣರನ್ನು ಪೋಲೀಸರು ಅಟ್ಟಿಸಿಕೊಂಡು ಬರುತಿದ್ದಾರೆ. ಸಿಕ್ಕಿಸಿಕ್ಕಿದಲ್ಲಿ ಲಾಠಿ ಏಟುಗಳು ಬೀಳುತ್ತಿವೆ. ನೆಟ್ಟ ನೋಟಕ್ಕೆ ಆ ಘೋರ ದೃಶ್ಯ ಮೈ ನವಿರೇಳಿಸಿತು. ಅರುಗಾಗುವುದರೊಳಗಾಗಿ ಅವರು ನುಗ್ಗಿ ಬಂದಾಗಿತ್ತು.

ದಿಡ್, ದಿಡ್, ದಿಡ್, ದಿಡ್.

ಅಯ್ ! ಅಯ್‌ಯ್ !

ಅಯ್ಯೋ ಅಪ್ಪಾ !

ಆ ಮುಹೂರ್ತದಲ್ಲಿ ಅವರೊಂದಿಗೆ ಇವರಿಗೂ ಬಿತ್ತು. ಮುಖ ಮೈ ಎನ್ನದೆ ಏಟುಗಳು ಬಿದ್ದುವು. ಪೈಶಾಚಿಕತೆಯ ಹೇಯ ವೃತ್ತಿಗೆ ಸಿಲುಕಿದ ಶಾಂತಿ ವೀರರ ಮೈಯಲ್ಲಿ ನೆತ್ತರು ಬಸಿಯಿತು. ನೆಲಕ್ಕೆ ಕುಸಿದವರನ್ನು ಬೂಟು ಕಾಲುಗಳು ಹೊಸಕಿದುವು....ಪರಾಧೀನತೆಯಲ್ಲಿ ಪಥವರಿಯದ ಪಯಣ ಮಹಾ ಯಜ್ಞವೇದಿಯ ಗಮ್ಯದೆಡೆಗೆ ಎಳೆದೊಯ್ಯುತಿದ್ದರೂ, ನಿಸ್ಸಹಾಯಕ ಸ್ಥಿತಿ ತಾರ ಸ್ವರದಲ್ಲಿ ಒರಲುತಿದ್ದರೂ, ಗಂಭೀರ ಕಾರಸ್ಥಾನ ಪರ್ಯಾವಸಾನ ಹೊಂದಿದರೂ ಸಸ್ಯಶ್ಯಾಮಲಳಾದ ಮಾತೃಭೂಮಿಯ ದಿವ್ಯ ಸುಂದರ ಚರಣ ಗಳಲ್ಲಿ ತನ್ನನ್ನು ಅರ್ಪಿಸಿಕೊಳ್ಳುವುದೇ ಮಹಾಭಾಗ್ಯವೆಂದು ಅಂತರಂಗ ಉದ್ಘೋಷಿಸಿತು.

ಬೋಲೋ ಭಾರತ್ ಮಾತಾಕಿ ಜೈ !

ದಿಡ್, ದಿಡ್, ದಿಡ್, ದಿಡ್.

ವಂದೇ ಮಾತರಂ !

ದಿಡ್, ದಿಡ್, ದಿಡ್, ದಿಡ್.

೭

....ವಸಂತ ಕಾಲೀನ ಮಧ್ಯಾಹ್ನ.

....ಗಿಡಮರಗಳು ಸುಮಸಮುಚ್ಚಯಗಳ ಮಾಲೆಯನ್ನು ಸೂಡಿದ್ದುವು.

ನಾನಾ ವಿಚಾರಗಳ ಶಾಂತ ಸಮುದಾಯದಲ್ಲಿ ಭೋಜನ ಮುಗಿಸಿದ್ದ ಕಾರಿಯಪ್ಪ ಮಗನಿಗೆಂದ "ಕಾಲವನ್ನೆಲ್ಲಾ ಹಾಳು ಹವ್ಯಾಸದಲ್ಲೇ ಕಳೆದು ಬಿಟ್ಟೆ. ದೇಶ ಕಾರ್ಯದಲ್ಲಿ ಜೀವನ ವಿಶ್ವಾಸ ಇರಬಾರದು ಎಂದೇನಿಲ್ಲ."

"ಜೀವನಕ್ಕೇನು ಕೊರತೆ? ವೀಳೆಯದೆಲೆ ಮಾರಿದರೂ ಜೀವಿಸ ಬಹುದು."

"ಅಷ್ಟು ಸುಲಭವಲ್ಲ ಮುದ್ದೂ!....ದಾಸ್ಯ ವಿಮುಕ್ತತೆ ಎಲ್ಲಕ್ಕಿಂತಲೂ ಹಿರಿದಾದುದೇ....ಅದನ್ನಿಲ್ಲ ಎನ್ನುವಂತಿಲ್ಲ. ಆದರೂ ವ್ಯಕ್ತಿಗತವಾದ ಪ್ರೇಮಾನುಬಂಧ ಪೂರ್ಣ ಮಿಥ್ಯೆಯಲ್ಲ ತಾನೆ? ಒಂದು ವಿಧವಾಗಿ ಯೋಚಿಸಿ ನೋಡಿದರೆ ನಾವು ಬಯಸುವ ಸ್ವಾತಂತ್ರ್ಯೋದಯ ಸಹ ಆತ್ಮ ವಿಕಾಸಕ್ಕಾಗಿ. ಜೀವನ ವಿಕಾಸಕ್ಕಾಗಿ ಎಂದರೆ ಒಪ್ಪಿಕೊಳ್ಳುತ್ತೀ ತಾನೆ?"

"ಹೌದು, ಒಪ್ಪಿಕೊಳ್ಳುವೆ. ನಾವು ಪಡೆದುಕೊಂಡಿರುವ ಶಿಕ್ಷೆ–ದೀಕ್ಷೆ-ನೀತಿ-ಸಂಸ್ಕಾರಗಳು ಚಳವಳಿಯಲ್ಲಿ ಕಾಯಾ ವಾಚಾ ಮನಸಾ ಭಾಗಸ್ಥರನ್ನಾಗಿ ಮಾಡಿವೆ. ದೇಶದ ಸ್ಥಿತಿಗತಿ ಅರಿತುಕೊಂಡಿದ್ದು ಭಾಗ ವಹಿಸದಿದ್ದರೆ ಅನ್ಯಾಯ ಮಾಡಿದಂತಾಗುತ್ತದೆ."

ಮಾದು ನಗುತ್ತ ಮಧ್ಯೆ ಬಾಯಿ ಹಾಕಿದ "ದೇಶ ಕಾರ್ಯದಲ್ಲಿ ಇರುವಷ್ಟು ಆಸ್ತೆ ನಿನಗೆ ಜೀವನದಲ್ಲಿ ಇಲ್ಲವೇ ಇಲ್ಲ. ತಿಮ್ಮಯ್ಯ ಇರುವ ತನಕ ಅವನ ಗೆಳೆತನವಾಯಿತು, ಈಗ ನಾಣಯ್ಯ ದೊರೆತಿದ್ದಾನೆ. ಇನ್ನು ಮನೆ ಮಠ ಎಲ್ಲಾ ಮರೆತುಬಿಡುತ್ತೀ!"

"ಅವರವರ ಶಕ್ತಿ ಸಾಮರ್ಥ್ಯವಿದ್ದಷ್ಟು ಮಾಡುವುದರಲ್ಲಿ ಅರ್ಥವಿದೆ. ಅದು ಎಲ್ಲರ ಕರ್ತವ್ಯವೂ ಹೌದು. ಅದರೊಂದಿಗೆ ಸ್ವಲ್ಪ ಜೀವನ ವಿಶ್ವಾಸವೂ

ಬೇಕು, ಮುದ್ದೂ. ಒಂದು ವೇಳೆ ಕೈಕಾಲು ಮುರಿಸಿಕೊಂಡರೆ ದೇವರೇ ಗತಿ !"

ಮುದ್ದು ಗಂಭೀರ ಮುಖಮುದ್ರೆಯಿಂದ ನುಡಿದ "ಅಪ್ಪಯ್ಯಾ ! ಅದೇ ನಮ್ಮ ಹಣೆಯಲ್ಲಿ ಬರೆದಿದ್ದರೆ ಮಾಡುವುದೇನು ?"

"ನಿನ್ನೆ ಮೊನ್ನೆಯ ಗೋಲೀಬಾರಿನಲ್ಲಿ ಸತ್ತವರು ಹನ್ನೆರಡು ಮಂದಿ ಎಂದು ಸರಕಾರ ಪ್ರಕಟಿಸಿದೆ. ಬಹುಶಃ ಅದರ ಎರಡರಷ್ಟು ಮೂರರಷ್ಟು ಪ್ರಾಣ ನಷ್ಟವಾಗಿರಬಹುದು. ಏನನ್ಯಾಯ ! ಹೊತ್ತ ಹೆತ್ತವರ ಗತಿಯೇನು ?....ಗೂಂಡಾಗಳೆಂದು ಪೋಲೀಸರು ಕಾರಣವಿಲ್ಲದೇನೇ ಥಳಿಸುವುದನ್ನು ಅಸಹಾಯಕತೆಯಿಂದ ತಂದೆ ತಾಯಿಗಳು ನೋಡುತಿದ್ದರಂತೆ.... ಇದು ಇಂದಿನ ಪರಿಸ್ಥಿತಿ ! ಹೆಸರಿಗೆ ದೇಶ ರಕ್ಷಣೆ, ನಡೆಯುತ್ತಿರುವುದು ದೇಶ ಭಕ್ಷಣೆ !"

"ಇದಿಷ್ಟೇ ಏನು, ಇಂದು ನಡೆಯುತ್ತಿರುವುದೆಲ್ಲ ನಡೆಯಬಾರದುದೇ ! ತಾಯಂದಿರ ಗೋಳು ದೇವರಿಗೆ ಪ್ರೀತಿ."

ಕಾವೇರಿ ಹೊರಬಂದು ನುಡಿದಳು. ದನಿ ದುಗುಡದಿಂದ ಕೂಡಿತ್ತು.

"ಹೌದು....ಅವ್ವಾ ! ನನ್ನ ಹೃದಯ ಮಾತ್ರ ಈ ಅವಶ್ಯಕತೆಯನ್ನು ಗುರುತಿಸುವ ಸ್ಥಿತಿಯಲ್ಲಿಲ್ಲ." ಮುದ್ದು ಯೋಚನಾಕ್ರಾಂತನಾಗಿ ನುಡಿದ. ಎದೆಯಾಳದಿಂದ ಹೊಮ್ಮಿದ ಕರುಳು ಮಿಡಿಸುವ ಮಾತುಗಳಿಂದ ಹೃದಯಗಳು ಪುಲಕಗೊಂಡುದಷ್ಟೇ ಅಲ್ಲ, ಸಮಸ್ತ ಪ್ರಕೃತಿಯು ಜಾಗೃತಗೊಂಡಂತೆ ತೋರಿದ, ಆ ಅಪೂರ್ವ ಸನ್ನಿವೇಶದಲ್ಲಿ ಭಕ್ತಿ-ಆನಂದಗಳು ಪ್ರವುತ್ತವಾದವು. ಮುದ್ದು ಬಿಸಿಯುಸಿರು ಬಿಡುತ್ತ ಹೇಳಿದ, "ಸ್ವಾತಂತ್ರ್ಯೋದಯದಿಂದ ಮನುಷ್ಯನಿಗೆ ಪರಿಪೂರ್ಣ ವಿಕಾಸ ತಕ್ಷಣವೇ ಲಭಿಸುವುದೆಂದು ನಾನೆಂದೂ ಭಾವಿಸುವುದಿಲ್ಲ. ಅದನ್ನು ಮಾದೇವನಿಗೆ ಬಿಟ್ಟು, ಸಾಮಾನ್ಯ ಜನರ ವಿಚಾರ ಯೋಚಿಸೋಣ..."

"ಅದು ನ್ಯಾಯವೇ ಆಗಿದೆ. ದೈವರಕ್ಷೆ ನಿಮಗೆ ಸಕಲ ವಿಧದಲ್ಲೂ ಒದಗಲಿ." ಹರಸಿದ ಕಾವೇರಿ ನಿಟ್ಟುಸಿರು ಬಿಟ್ಟು ಘನ ಗಂಭೀರ ಭಂಗಿಯಲ್ಲಿ "ಇಂದು ದೇಶದಲ್ಲಿ ನಡೆಯುತ್ತಿರುವ ಆಂದೋಳನ ಪ್ರಜೆಗಳ ಪೌರುಷಯುತವಾದ ನಮ್ರ ವಿನಂತಿ. ದಿನೇ ದಿನೇ ಪರಿಸ್ಥಿತಿ ಹದಗೆಡುತ್ತಿದೆ. ಇಂಗ್ಲೀಸರು

ಇನ್ನೂ ವಿರೋಧಿಸುತ್ತಿರುವುದಂತೂ ಅತ್ಯಾಶ್ಚರ್ಯ. ಅವರ ರೀತಿ ನೀತಿ ನೋಡಿ ಕಂಡುಂಡು ಕಲಿತವರೂ, ಸ್ಥಿತಿವಂತರೂ, ಮತಿವಂತರೂ ಆದ ದೇಶೀಯರು ಚಳವಳಿಗೆ ವಿರೋಧವಾಗಿರುವ ರೀತಿ ಮತ್ತೂ ಆಶ್ಚರ್ಯ! ಪರಿಸ್ಥಿತಿಯನ್ನು ಪರಿಶೀಲಿಸಿದರೆ ಕುಟಿಲ–ಕುತಂತ್ರ–ವಂಚನೆಗಳ ಅಂತರಾಳಕ್ಕಿಳಿಯಬಲ್ಲವರು ಮಾತ್ರ ಈ ಹೋರಾಟದಲ್ಲಿ ಜಯಶೀಲರಾಗಬಲ್ಲರು ಎನಿಸುತ್ತದೆ. ಸತ್ಯಶೀಲರು, ಧರ್ಮಶೀಲರು, ಏಟು ತಿನ್ನುವುದೇ ಸೈ! ಎಚ್ಚರಿಕೆಯಿಂದಿರು ಮಗನೇ!"

ಇದೇ ಸಮಯದಲ್ಲಿ ಅನಾರೋಗ್ಯದಿಂದ ತೊಳಲುತ್ತ ಹಾಸಿಗೆಯ ಮೇಲೆ ಬಿದ್ದುಕೊಂಡ ಗಂಗೂ ಅತ್ಯಂತ ದೀನ ಸ್ಥಿತಿಯಲ್ಲಿ ಯೋಚನಾಂಬುಧಿಯಲ್ಲಿ ಮುಳುಗಿ "ನನ್ನದಿನ್ನೆಷ್ಟು ಕಾಲವೋ! ಮುದ್ದುಗೆ ಮದುವೆ ಮಾಡಿದರೆ ಮನೆಯಲ್ಲಿ ನೆಲೆಯಾಗಿ ನಿಲ್ಲುತಿದ್ದ. ಆದರೆ ನಮ್ಮ ಹಣೆಯಲ್ಲಿ ವಿಧಿ ಏನು ಬರೆದಿದ್ದಾನೋ...." ಎಂದುಕೊಳ್ಳುತ್ತಿದ್ದಳು.

ಕಾರಿಯಪ್ಪ ತಾಯಿಯ ಅಭಿಪ್ರಾಯದೊಂದಿಗೆ ಏಕೀಭವಿಸಿ ನುಡಿದ,

"ಅದು ನಿಜ ; ನೀವು....ನಿಮ್ಮ ಚರ್ಯೆ ಅತ್ಯಂತ ಗೋಪ್ಯವಾಗಿಟ್ಟಿದ್ದು ಸರಕಾರದ ಕಣ್ಣಿಗೆ ಬೀಳದಷ್ಟು ಚತುರತೆಯನ್ನಾದರೂ ಪಡೆದಿರಬೇಕು.

"ದೇವರ ದಯದಿಂದ ಇದುವರೆವಿಗೂ ಯಾರ ಕಣ್ಣಿಗೂ ಬೀಳಲಿಲ್ಲ. ಮುಂದೇನೋ ಹೇಳಲಾರೆ" ಎನ್ನುತ್ತ ಮುದ್ದು ಮುಗುಳು ನಕ್ಕ.

"ಹಾಗೆಂದರೆ ಹೇಗೆ ಮುದ್ದೂ ? ಏನೇ ಬಂದರೂ ಗೆದ್ದೇ ತೀರುವೆನೆಂಬ ದೃಢ ಸಂಕಲ್ಪ ಹೊಂದಿರದಿದ್ದರೆ ಮುಂದೆ ಹೋಗುವುದೂ ಸಹ ಸರಿಯಲ್ಲ." ಎಂದಳು ಕಾವೇರಿ. ಆ ಮುಹೂರ್ತದಲ್ಲಿ ಕಣ್ಣುಗಳಲ್ಲಿ ಮಿನುಗುವ ಮಿಂಚು ಉತ್ತೇಜನ ನೀಡಿತು. ಮುದ್ದಪ್ಪ ಉತ್ಸಾಹದಿಂದ ನುಡಿದ "ನಾನು ಬಹಳ ವಿಚಕ್ಷಣತೆಯಿಂದ ಕೆಲಸ ಮಾಡುವೆ. ಇದುವರೆಗೆ ಇಂಗ್ಲೀಷರಿಗೆ ನನ್ನ ನೆರಳೂ ಸಹ ಗೋಚರಿಸಲಾರದು ; ನಮ್ಮದೇನು ಬಿಡಿ, ಈಗೀಗ ಹೆಂಗಳೆಯರ ಚಟುವಟಿಕೆ ಇತಿಮಿತಿ ಇಲ್ಲವಾಗಿದೆ. ಕೈಮಕ್ಕಳನ್ನು ಎತ್ತಿಕೊಂಡು ಕಾರ್ಯರಂಗಕ್ಕಿಳಿಯುತಿದ್ದಾರೆ."

ಯಾರೂ ಮಾತಾಡಲಿಲ್ಲ. ವಾತಾವರಣ ಶಾಂತ ಸ್ನಿಗ್ಧ ಗಂಭೀರವಾಯಿತು.

ಮುದ್ದಪ್ಪ ಮುಂದುವರಿದ "ನಾನೀಗ ಮಡಿಕೇರಿಗೆ ಹೊರಡುವುದಿದೆ. ಅಲ್ಲಿ ಆರು ಗಂಟೆಗೆ ಮೀಟಿಂಗ್ ಕರೆದಿದ್ದಾರೆ."

"ಬರುವುದೆಂದು ?"

"ಅದು ಮೀಟಿಂಗಿನ ತೀರ್ಮಾನದ ಮೇಲೆ ಅವಲಂಬಿಸುತ್ತದೆ. ಹೆಚ್ಚಿನ ಕಾರ್ಯಕ್ರಮಗಳಿಲ್ಲದಿದ್ದರೆ ಬೇಗನೆ ಬರುವೆ."

ಮುದ್ದು ಒಳಗೆ ಹೋಗಿ ಕೈಚೀಲ ತೆಗೆದುಕೊಂಡು, ತಾಯಿಗೆ ಎರಡು ಮಾತಿನಲ್ಲಿ ಸಮಾಧಾನ ಹೇಳಿ ಹೊರಬಂದ. ಎಲ್ಲರೂ ತಲೆಬಾಗಿಲಲ್ಲಿ ನಿಂತೇ ಇದ್ದರು. ಮೆಟ್ಟಲಿಳಿಯುವ ಮುನ್ನ ವಿನೀತನಾಗಿ ಅಂದ "ಸದ್ಯಕ್ಕೆ ಇಲ್ಲಿನ ಯಾವುದೇ ಕೆಲಸ ಕಾರ್ಯಗಳಿಗಾಗಿ ನನ್ನನ್ನು ದಯವಿಟ್ಟು ನಿರ್ಬಂಧಿಸಬೇಡಿ. ಸ್ವರಾಜ್ಯ ಸಂಪಾದನೆಯಾದ ನಂತರ ಹೇಳದೆ ಕೇಳದೆ ನಾನು ಮನೆಗೆ ಮರಳುವೆ."

ಯಾರೂ ಪ್ರತಿ ನುಡಿಯಲಿಲ್ಲ.

ಕಾರಿಯಪ್ಪ ನಿಶ್ಚೇಷ್ಟನಂತೆ ನಿಂತ. ಅಂತರ್ಭಾವ ಮುಖಬಿಂಬದಲ್ಲಿ ದಪ್ಪ ದಪ್ಪ ಅಕ್ಷರಗಳಲ್ಲಿ ಮುದ್ರೆಯೊತ್ತಿತು....

ಮುದ್ದು ಹಸನ್ಮುಖಿಯಾಗಿ ಮೆಟ್ಟಲಿಳಿದ....ಮಾದು ಮುಖದಲ್ಲಿ ಎಳೆ ನಗುವನ್ನು ಸೂಸಿ 'ಟಾಟಾ' ಹೇಳಿ ಬೀಳ್ಕೊಟ್ಟ.

ಮಧ್ಯಾಹ್ನದ ಸುಡು ಬಿಸಿಲು ಧಗಧಗ ಉರಿಯುತ್ತಿತ್ತು. ಹಾದಿ ನಡೆಯಲು ಸಾಧ್ಯವಾಗದಂತಹ ಅತೀವ ಅಸಹನೀಯ ಸೆಕೆ....ತಾಪ....

ವನ್ಯ ಪ್ರದೇಶದಲ್ಲೇ ಇಷ್ಟೊಂದು ಬಿಸಿಲಿರುವಾಗ ಇನ್ನು ಬಯಲು ಪ್ರದೇಶದ ಕತೆ ಹೇಗಿರಬೇಡ....ಎಂಬ ಆಲೋಚನೆಯು ಮನವನ್ನು ಮುತ್ತಿತು. ಕೆಳಮುಟ್ಟಿಯ ಸಾಲು ಮೆಟ್ಟಲನ್ನು ಇಳಿದು ಹೆಬ್ಬಯಲನ್ನು ದಾಟಿ ಗದ್ದೆಯ ಕೋಗಿಗೆ ಕಾಲಿಡುವ ಮುನ್ನ ಹಿಂತಿರುಗಿ ನೋಡಿದಾಗ ಬೇಲಿ ಸಾಲಿನ ಬಳಿ ಕಾವೇರಿಯು ಮಾದಯ್ಯನೊಂದಿಗೆ ನಿಂತಿದ್ದು ಕಾಣಿಸಿತು. ಮುದ್ದು ಕೈಯೆತ್ತಿ 'ಟಾ ಟಾ' ಹೇಳಿ ಗದ್ದೆಗಿಳಿದ. ತುಟಿಗಳಲ್ಲಿ ಸಂತಸದ ಕಿರುನಗೆ ಮೂಡಿದರೂ ಕರುಳು ಚುರುಚುರುಗುಟ್ಟಿತು. ಹೆದ್ದಾರಿಗೆ ಬರುವುದಕ್ಕೂ ಬಸ್ಸು ಕಾಣಿಸಿ ಕೊಳ್ಳುವುದಕ್ಕೂ ಸರಿಹೋಯಿತು. ಬಸ್ಸು ಹತ್ತಿ ಮಡಿಕೇರಿಗೆ ಮುಟ್ಟಿದಾಗ ಹೊತ್ತು ನಾಲ್ಕರ ಅಂಚಿನಲ್ಲಿತ್ತು. ಚಳವಳಿಕಾರರು ಕ್ರಾಂತಿಭಾವವನ್ನು

ಮನದಲ್ಲಿ ತುಂಬಿಕೊಂಡು ಸಭ್ಯರಂತೆ ರಸ್ತೆಯಂಚಿನಲ್ಲಿ ಓಡಾಡುತಿದ್ದಾರೆ. ಅಸ್ತವ್ಯಸ್ತ ಮುಖಭಾವ ಮೇಘಾಚ್ಛನ್ನವಾದಂತೆ ವಿವರ್ಣವಾಗಿದ್ದರೂ ಅಭಿರಾಮವಾಗಿವೆ. ಬಹುತೇಕವಾಗಿ ಎಲ್ಲರ ಅಭಿಪ್ರಾಯಗಳೂ ಭಿನ್ನಭಿನ್ನವಾಗಿದ್ದರೂ ಗುರಿಯೊಂದೇ ಆಗಿರುವುದರಿಂದ ಪವಿತ್ರತಮವಾಗಿದ್ದುವು. ಮುದ್ದಪ್ಪ ಜನಸಮುದಾಯದಲ್ಲಿ ಸೇರಿ ಸಂದಿಗೊಂದಿಗಳಲ್ಲಿ ಕರಗಿ ಹೋದ. ಒಂದು ಗುಟುಕು ಚಹ ಕುಡಿಯುವ ಮನಸ್ಸು. ಆದರೆ ಅವನ ಪರಿಸ್ಥಿತಿಯಲ್ಲಿ ಎಂಟಾಣೆ ಖರ್ಚು ಮಾಡುವುದು ಸಹ ಅಶಕ್ಯವೇ....ಎಲ್ಲಾದರೂ ನೀರು ಕುಡಿದರೆ ಸಾಕು ಎಂದುಕೊಂಡು ಸುಮ್ಮನಾದ. ಇಚ್ಛಿತ ಸ್ಥಳವನ್ನು ಸೇರುವವರೆಗೆ ಹಾದಿ ಕಳೆದುದು ಸಹ ಗಮನಕ್ಕೆ ಬರಲಿಲ್ಲ. ಮೆಟ್ಟಿಲು ಹತ್ತಿ ಜಗಲಿಯನ್ನೇರುತ್ತಲೂ ನಾಣಯ್ಯ ಎದುರಾದ. ಇಬ್ಬರ ಮುಖದಲ್ಲೂ ಮುಗುಳ್ನಗೆ ಮೂಡಿ ಮಾಯವಾಯಿತು.

"ಮೊದಲಿಷ್ಟು ಕೈಕಾಲು ತೊಳೆಯಬೇಕಪ್ಪಾ."

"ಬಾ ಒಳಗೆ."

''ಬಿಸಿಲಿನ ತಾಪ....ರಸ್ತೆಯ ಧೂಳು....ಸಾಕಾಗಿಬಿಡುತ್ತೆ ಪಾಪಣ.''

''ಅಷ್ಟೇ ಏನು ? ಇನ್ನು ಹೊಡೆತ–ಬಡಿತ ?''

ಇಬ್ಬರೂ ನಕ್ಕುಬಿಟ್ಟರು.

ಮುದ್ದು ಅವನೊಂದಿಗೆ ಒಳಗಡೆ ಹೋದ. ತಣ್ಣೀರಿನಲ್ಲಿ ಮುಖಮಜ್ಜನ ಮಾಡಿ ಬೊಗಸೆ ತುಂಬ ನೀರು ಕುಡಿದು ಹೊರ ಬೀಳುವಾಗ ಹೆಂಗಸರು ಮಕ್ಕಳ ಸೊಲ್ಲು ಕರ್ಣಪಟಲಗಳಿಗೆ ತಾಗಿತು.

ಮುದ್ದು ಕೇಳಿದ "ಪೂವಿ ಇದ್ದಾಳೆಯೇ ?''

"ಇನ್ನೂ ಬಂದಿಲ್ಲ....ಈಗ ಬರಬಹುದು."

ಇಬ್ಬರೂ ನಡುಮನೆಯನ್ನು ದಾಟಿ ವರಾಂಡದಲ್ಲಿದ್ದ ಮೆಟ್ಟಿಲು ಹತ್ತಿ ಮಹಡಿಯ ಮೇಲಿನ 'ರೀಡಿಂಗ್ ರೂಮ್'ಗೆ ಹೋದರು ...ಆ ರೀಡಿಂಗ್ ರೂಮ್ ಬಗ್ಗೆಯೂ ಹೇಳುವುದಿದೆ. ನಾಣಯ್ಯನ ಮನೆಯು ಮಹಡಿ ಸರಕಾರದ ದೃಷ್ಟಿಗೆ ರೀಡಿಂಗ್ ರೂಮ್, ಅದಕ್ಕನುಗುಣವಾಗಿ ಬೀರುವಿನಲ್ಲಿ ಪುಸ್ತಕಗಳು ಜೋಡಿಸಲ್ಪಟ್ಟಿವೆ. ಹೊರಗಡೆಯಿಂದ ಮೆಟ್ಟಿಲು ಇದ್ದುದರಿಂದ ಸಾರ್ವಜನಿಕರಿಗೂ ಅನುಕೂಲ. ಅಲ್ಲಿ ಕೂಡುವ ಗುಪ್ತ ಸಭೆಯಲ್ಲಿ ಕಾಂಗ್ರೆ

ಸ್ಸಿನ ಅಂಗರಚನೆ-ಕಾರ್ಯಕ್ರಮಗಳ ನಿರೂಪಣೆ-ವೇಳಾಪಟ್ಟಿ-ಕೆಲಸ ಕಾರ್ಯ ಗಳ ವಿತರಣೆ ಇವೆಲ್ಲವೂ ಸದ್ದಿಲ್ಲದೆ ನಡೆಯುತ್ತವೆ. ನೆಲದ ಮೇಲೊಂದು ಹಳೆಯ ಹರಪಾದ ಹಸುರು ಜಮಖಾನೆ. ಕಸಕಡ್ಡಿ ಧೂಳುಗಳಿಗೂ ಕೊರತೆ ಯಿರಲಿಲ್ಲ. ಮೂಲೆಯಲ್ಲೊಂದು ಮೇಜು. ಅದರ ಮೇಲೆ ಬೇಕು ಬೇಡದ ವಸ್ತುಗಳು ತುಂಬಿ ಹೋಗಿದ್ದುವು. ಮುದ್ದು ಅಲ್ಲಿಯ ಅನೇಕ ಸರದಾರರಲ್ಲಿ 'ಒಬ್ಬ' ಎನ್ನುವುದಕ್ಕಿಂತ 'ಶ್ರೇಷ್ಠ' ಎನ್ನಬಹುದು.

ಆ ಜೀರ್ಣಿತ ಕೊಠಡಿಯ ಸುತ್ತಮುತ್ತ ನೋಟ ಹೊರಳುವುದರೊಳ ಗಾಗಿ ನಾಣಯ್ಯ ಅಂದ,

"ಇಂದಿನ ಗುಪ್ತ ಸಭೆ ಇಲ್ಲಿ ನಡೆಯುವುದೆಂದು ಸಿ.ಐ.ಡಿ.ಗಳು ಪತ್ತೆ ಹಚ್ಚಿ ಹೊಂಚುಹಾಕುತಿದ್ದಾರೆ. ಸರಿ . ನಾವು ಬೇರೆ ಉಪಾಯ ಹೂಡಿದೆವು!"

''ಏನು ?'' ಕಣ್ಣು ಮುಖಗಳಲ್ಲಿ ಉತ್ಸುಕತೆ ನಲಿದಾಡಿತು.

"ಮಿಟಿಂಗ್ ಇಲ್ಲದೇನೇ ನಮ್ಮ ಕಾರ್ಯಕ್ರಮ ರೂಪಿಸಿಕೊಂಡಿದ್ದೇವೆ."

"ಏನೇನು ?'' ಆಸಕ್ತಿಯಿಂದ ಕೇಳಿದ ಮುದ್ದು.

"ರಾತ್ರಿ ವಿದ್ಯುಚ್ಛಕ್ತಿಯ ತಂತಿಗಳನ್ನು ಕತ್ತರಿಸುವುದು, ಸೇತುವೆಗಳಿಗೆ ಡೈನಮೈಟ್ ಇಡುವುದು, ಜಿಲ್ಲಾ ಕಛೇರಿಯ ದಸ್ತಕತ್ತುಗಳಿಗೆ ಬೆಂಕಿ ಹಚ್ಚು ವುದು. ಇವು ಮೂರು ಮುಖ್ಯವಾದುವು." ಪಿಸು ದನಿಯಲ್ಲಿ ಬಿತ್ತರಿಸಿದ ನಾಣಯ್ಯ.

"ಎಲ್ಲಿ ಕೂಡಿದಿರಿ ?"

"ರಸ್ತೆಯಲ್ಲಿ ಐದು ಮಂದಿಗಿಂತ ಹೆಚ್ಚಾಗಿ ಕೂಡಬಾರದು ಎಂದರೆ ನಮ್ಮ ಆಟ ಏನೂ ನಡೆಯುವುದಿಲ್ಲ ಎಂದು ಅವರ ಭಾವನೆ...ಹಿಹ್ಹಿಹ್ಹೀ ! ನಾವು ಮೂವರೂ ಎಲ್ಲೂ ಗುಪ್ತ ಸಭೆ ಸೇರದೆ ರಸ್ತೆಯಲ್ಲಿ ಓಡಾಡುತ್ತ ಪಿಸು ಮಾತಿನಲ್ಲಿ ಎಲ್ಲವನ್ನೂ ನಿರ್ಣೈಸಿದೆವು !"

"ಶಹಬಾಸ್ !" ಆವೇಶದ ನುಡಿ ಹೊರಬಿತ್ತು. ಮುದ್ದು ಮುಂದು ವರಿದು "ನಿನ್ನೆಯೇ ಬರಬೇಕೆಂದಿದ್ದೆ...ನಮ್ಮ ತಾಯಿಗೆ ಹುಷಾರಿಲ್ಲದೆ ಹೊರಡ ಲಾಗಲಿಲ್ಲ."

"ಪರವಾಯಿಲ್ಲ. ಇಂದು ಕಾರ್ಯಕ್ರಮದ ನಿರೂಪಣೆ ಎಲ್ಲಾ ನನ್ನದೇ."

"ಯಾರ್ಯಾರು ಯಾವ ಯಾವ ಕಾರ್ಯಕ್ರಮ ಕೈಕೊಳ್ಳುತ್ತಾರೆ ?"

ಯಾರೋ ಮೆಟ್ಟಿಲನ್ನು ಹತ್ತಿ ಮೇಲೆ ಬರುತ್ತಿರುವ ಸದ್ದು ಕೇಳಿಸಿತು. ಇಬ್ಬರ ಕಿವಿಗಳೂ ಒಂದೆರಡು ಕ್ಷಣ ನಿಮಿರಿದುವು ..ಸರಕ್ಕನೆ ಬೀರುವಿನಿಂದ ಒಂದೆರಡು ಪುಸ್ತಕಗಳನ್ನು ತೆಗೆದುಕೊಂಡು ಕಣ್ಣಾಡಿಸತೊಡಗಿದರು. ಕೆಲವೇ ಕೆಲವು ಕ್ಷಣಗಳೊಳಗಾಗಿ ಬಾಗಿಲಿನಲ್ಲಿ ಕಾಣಿಸಿಕೊಂಡ ಪೂವಿ ಒಳಗಡೆ ಪದಾರ್ಪಣೆ ಮಾಡಿದಳು. ನೀಳವಾದ ಘನಕೃಷ್ಣವೇಣಿ....ಹರಿಣನಯನೆ ಮುಂದಡಿಯಿಡುವಾಗಲೇ ಮುಗುಳು ನಗು ಮೂಡಿ ಎರಡು ಕೆನ್ನೆಗಳಲ್ಲಿ ಗುಳಿ ಬಿದ್ದು ಮುಖದ ಶೋಭೆ ಇಮ್ಮಡಿಯಾಯಿತು.

"ಓ....ನೀನೋ ? ಪೋಲೀಸಿನವರಿರಬಹುದು ಎಂದುಕೊಂಡೆ...ಏನಾದರೂ ಸುದ್ದಿ ಇದೆಯೇ ?" ನಾಣಯ್ಯನ ದೀಪ್ತ ಕಂಠ ಮೊಳಗಿತು.

"ಹೌದು. ಜಂಬೂರು ವಿಷ್ಣುಮೂರ್ತಿ ಮತ್ತು ಅವರ ತಂಡದಲ್ಲಿದ್ದ ಇಪ್ಪತ್ತು ಮಂದಿಯನ್ನು ಪೋಲೀಸರು ಅರೆಸ್ಟ್ ಮಾಡಿದರಂತೆ. ಈಗ 'ಸುಖದೇವ್'ನಿಗಾಗಿ ಹುಡುಕಾಟ ನಡೆದಿದೆ. ಮನೆ ಮನೆಯನ್ನೂ ಶೋಧಿಸುತ್ತಿದ್ದಾರೆಂದು ವರ್ತಮಾನ."

ಮುದ್ದು ನುಡಿದ "ಇಷ್ಟಕ್ಕೂ 'ಸುಖದೇವ್' ಯಾರೆಂಬುದು ಅವರಿಗೆ ಗೊತ್ತೇ ಇಲ್ಲ. ಹೇಗೆ ಅರೆಸ್ಟ್ ಮಾಡುತ್ತಾರೋ ನೋಡೋಣ." ಪ್ರಶ್ನಪೂರ್ಣ ದೃಷ್ಟಿ ಮಿಂಚಿನಂತೆ ಮಿನುಗಿತು.

ಶುಕ್ಲವಸನ ಧಾರಿಣೀ ಪೂವಿ ಗಂಭೀರವಾಗಿ ಉತ್ತರಿಸಿದಳು "ಹುಡುಕುತ್ತಿದ್ದಾರೆ . ಹುಡುಕುವಷ್ಟು ಹುಡುಕಲಿ ಬಿಡಿ."

"ಕೊನೆಗೆ....ಸಿಕ್ಕದಿದ್ದಾಗ ಯಾರಾದರೂ ಸರಿಯೆ !" ನಾಣಯ್ಯ ಮುಗುಳು ನಕ್ಕ.

"ನಾವು ಹೀಗೆ ಸುಮ್ಮನಿರುವುದು ಸರಿಯಲ್ಲ; ಅವರಿಗೆ ಸರಿಯಾದ ಪಾಠ ಕಲಿಸುವುದು ಒಳ್ಳೆಯದು" ಮುದ್ದು ತುಟಿ ಕಚ್ಚಿದ. ಕಣ್ಣುಗಳು ಉಜ್ವಲ ಕಾಂತಿ ನಕ್ಷತ್ರಗಳಂತೆ ಬೆಳಗಿತು.

"ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ತೊಡುತ್ತಾರೆ, ಅದೇ ಕಷ್ಟ."

"ನೀನು ಹೀಗಾದುದು ಆಶ್ಚರ್ಯ ಪೂವಿ." ಎಂದ ಮುದ್ದು

"ಇದ್ದದ್ದು ಹೇಳಿದೆ ಅಷ್ಟೆ." ಮಂದಹಾಸ ಬೀರಿದಳು ಪೂವಿ.

"ಅಂದಿನ ಬಿಸಿಯ ಪ್ರಭಾವ !" ನಾಣಯ್ಯ ಹುಬ್ಬೇರಿಸಿದ.

"ಓ....ಬಿಡಿ, ಬಿಡಿ, ಹಾಗೇನಿಲ್ಲ."

ಅನಂತರ ಶಾಂತ ಗಂಭೀರ ವಾತಾವರಣದಲ್ಲಿ ಮರುದಿನದ ಕಾರ್ಯ ಕ್ರಮವನ್ನು ಕುರಿತು ಚರ್ಚಿಸುತ್ತಿರುವಾಗಲೇ ಕೆಳಗಡೆ ಇದ್ದಕ್ಕಿದ್ದಂತೆ ಗದ್ದಲ ಕೇಳಿಸಿತು. ಏನಿರಬಹುದೆಂದು ಯೋಚಿಸುವುದರೊಳಗಾಗಿ ಇಬ್ಬರು ಪೋಲೀಸಿನವರು ದಡದಡನೆ ಮೆಟ್ಟಿಲು ಹತ್ತಿ ಮೇಲ್ಗಡೆ ಬಂದರು. ಮುಖಭಾವ, ನಡೆನುಡಿಗಳ ದರ್ಪ, ಕಣ್ಣುಗಳ ತೀಕ್ಷ್ಣತೆ ಹುಲಿ ಕರಡಿಗಳಿಗೆ ಉಪಮಾನವಾಗುವಂತಿತ್ತು. ಇಬ್ಬರೂ ಬಿರುಸಾಗಿ ಒಳನುಗ್ಗಿದರು. ಗೆದ್ದ ಹೆಮ್ಮೆ ವಿಚಿತ್ರ ಪರಿಮಳದಂತೆ ಪಸರಿಸಿ ವಕ್ರ ದೃಷ್ಟಿ ಇಬ್ಬರ ಮೇಲೂ ಹರಿಯಿತು. ಒಬ್ಬ ಒಳಜೇಬಿನಿಂದ ವಾರೆಂಟನ್ನು ತೆಗೆದು ಮುಂದೆ ಹಿಡಿದು "ಸುಖದೇವ್'ಗೆ ವಾರೆಂಟಿದೆ" ಎಂದ. ಸಂಶಯ ಭರಿತ ನೋಟ ಎಲ್ಲೆಡೆಯೂ ಹರಿದಾಡಿತು.

"ಇಲ್ಲಿಗೇಕೆ ವಾರೆಂಟ್ ತಂದಿದ್ದೀರಿ ? ಸುಖದೇವ್ ಯಾರು ? ನಮಗೆ ಗೊತ್ತೇ ಇಲ್ಲವಲ್ಲಾ ?"

ನಾಣಯ್ಯ ಸಿಟ್ಟಿನಿಂದಲೇ ಆ ನುಡಿಯನ್ನು ಹೊರಹಾಕಿದ್ದ.

"ನೀನು....?" ಆ ಶಂಕೆಯ ಭಾವ ಕಣ್ಣುಗಳಲ್ಲಿ ಹೊಮ್ಮಿತು. ನಿರಿನಿರಿ ನಿಟ್ಟಿಸಿದ ಪೋಲೀಸ್.

"ನಾನು ಬಾಗಂಡ ಮುದ್ದಪ್ಪ."

ಒಂದೆರಡು ಘಳಿಗೆ ತಬ್ಬಿಬ್ಬಾಗಿ ಪೋಲೀಸರು ಬಂದ ಹಾಗೆಯೇ ಹಿಂದಿರುಗಿದರು. ಗೆಳೆಯರ ಮುಖಮಂಡಲದಲ್ಲಿ ಅಖಂಡ ವಿಜಯ ತೋಷ ಹರಿದಾಡಿತು. ಅವರು ನಿರ್ಗಮಿಸುವುದನ್ನು ವ್ಯಂಗ್ಯಭಾವದಿಂದ ನಿಟ್ಟಿಸಿದರು. ಹಗುರವಾದ ಮನಸ್ಸಿನಿಂದ ಮರುದಿನದ ಕಾರ್ಯಕ್ರಮವನ್ನು ರೂಪುಗೊಳಿಸಿ, ರೀಡಿಂಗ್ ರೂಮಿನಿಂದ ಹೊರಬಿದ್ದಾಗ ಪೂರ್ವ ದಿಕ್ತಟದಲ್ಲಿ ಚಂದ್ರಮನ ಅಭ್ಯುದಯವಾಗಿತ್ತು.

ಫಾಲ್ಗುಣ ಪೌರ್ಣಿಮಾ....ಅಮೃತಮಯೀ ಬೆಳದಿಂಗಳ ಧಾರೆ !

ಈ ರಾತ್ರಿ ಆ ವಾತಾವರಣ ತಾರುಣ್ಯ ಪ್ರಮತ್ತ ಚಿತ್ತ ಒಂದಕ್ಕೊಂದು ಪೂರಕವಾಗಿವೆ. ಆನಂದಭರಿತ ಆಶ್ಲೇಷದಿಂದ ಹೆಜ್ಜೆಹೆಜ್ಜೆಗಳೂ ದೃಢವಾಗುತ್ತಿದ್ದುವು. ಪೇಟೆ ವಲಯ ಕಳೆಯುವ ಮುನ್ನ ಇಬ್ಬರ ಹಾದಿಯೂ ಕವಲೊಡೆಯಿತು. ದೂರ ದೂರ; ಇನ್ನೂ ದೂರ ನಡೆದು ನಿರ್ಜನ ಪ್ರದೇಶವನ್ನು

ಸೇರಿದನಂತರ ಮುದ್ದು ಕರ್ತವ್ಯಕ್ಕೆ ಶರಣಾದ. ಅಲ್ಲಿ ಏನೇನು ನಡೆಯಿತು ಎಂಬುದು ಒತ್ತಟ್ಟಿಗಿರಲಿ, ಮುದ್ದು ತನ್ನ ಕಾರ್ಯಭಾರವನ್ನು ಮಿಂಚಿನಂತೆ ಮುಗಿಸಿ ಹೊರಟ. ನಾಣಯ್ಯ ಸೈಕಲ್ ಒದಗಿಸುವುದಾಗಿ ಹೊರಟವನು ಇದು ವರೆಗೂ ಬಾರದುದು ಸ್ವಲ್ಪ ಯೋಚನೆಗಿಟ್ಟುಕೊಂಡಿತು. ಅವನ ಪ್ರತೀಕ್ಷೆ ಯಲ್ಲಿಯೇ ಹೆಜ್ಜೆಹೆಜ್ಜೆಯೂ ಸಾಗುತಿತ್ತು. ಆ ಅನನ್ಯ ವನ್ಯ ಪ್ರದೇಶ.... ನಿರ್ಜನ ವಲಯ ...ಎಳ್ಳು ಬೀರಿದರೂ ಕೇಳಿಸುವಂತಹ ನಿಶ್ಶಬ್ದ.

ಮುದ್ದು ತೀವ್ರಗತಿಯಲ್ಲಿ ಹೆಜ್ಜೆ ಹಾಕಿದ. ಸಂಕೇತ ಸ್ಥಳವನ್ನು ಸೇರ ಬೇಕಾದರೆ ಪಟ್ಟಣ ವಲಯದ ಮೂಲಕವೇ ಸಾಗಿತು ಹಾದಿ. ಹೊತ್ತು ಹತ್ತರ ಅಂಚನ್ನು ಮುಟ್ಟಿತ್ತು. ಆಗಲೇ ಬಹಳ ಮಟ್ಟಿಗೆ ಎಲ್ಲಾ ಮನೆಯ ದೀಪಗಳೂ ನಂದಿದ್ದುವು. ಮಾವಿನ ಮರದಡಿ ಕಾದಿದ್ದ ಪೂವಿ ಬೆಳುದಿಂಗಳಲ್ಲಿ ಮಿಂದು ಮಧುಮಾಲತೀಲತೆಯಂತೆ ಫುಲ್ಲ ಕಮನೀಯಳಾಗಿ ಶೋಭಿಸುತಿದ್ದಳು. ಭಯ-ಉತ್ಸುಕತೆಗಳ ಸಂಮಿಶ್ರಣವಾಗಿದ್ದ ತನುಮನಗಳು ಯಾವುದೋ ಆತಂಕವನ್ನು ತುಂಬಿಕೊಂಡಂತಿದ್ದುವು.

“ಏನು ಸಮಾಚಾರ ?”

“ನೀವೇ ಹೇಳಬೇಕು. ನನಗಂತೂ ಆಗಿನಿಂದ ಕಾದು ಕಾದು ಸಾಕಾಯ್ತು.”

“ದೂರ ಪ್ರದೇಶಕ್ಕೆ ಕಾಲ್ನಡಿಗೆಯಲ್ಲಿ ನಡೆದುಕೊಂಡು ಹೋದುದರಿಂದ ಹೊತ್ತಾಯಿತು.”

ಪೂವಿ ಕೇಳಿದಳು “ಇದೇನು ಒಬ್ಬರೇ ಬಂದಿರಲ್ಲ, ನಾಣಯ್ಯ ಎಲ್ಲಿ ?”

“ಅವನು ನನಗೆ ಸಿಗಲಿಲ್ಲ. ಕೊಡುದಾರಿಗೆ ಎರಡು ಸೈಕಲ್ ತರುವು ದಾಗಿ ಹೇಳುತಿದ್ದ ವ್ಯಕ್ತಿ ಪತ್ತೆಯೇ ಇಲ್ಲ. ಮನೆಗೂ ಬಂದಿಲ್ಲವೇ ?”

“ಇಲ್ಲ.”

“ಅವನು ಬರಲೇಬೇಕಾಗಿತ್ತು. ಏನಾಯಿತೋ ತಿಳಿಯದು.”

“ನೀವು ಒಬ್ಬರೇ ಹೋಗಿದ್ದಿರಾ ?”

“ಹೌದು.”

“ಕೆಲಸವಾಯಿತೇ ?”

“ಓ....ಬಿಟ್ಟೇನೆ ? ಟೆಲಿಫೋನು ತಂತಿ ಕತ್ತರಿಸಿ ಬಂದೆ.”

"ಈಗ ಇನ್ನಾವ ಕಾರ್ಯಕ್ರಮ ?"

"ಮಂಗಳೂರಿನಿಂದ ಇಲ್ಲಿಗೆ ಪೋಲೀಸ್ ಕಮಿಷನರು ಬರುತ್ತಾರೆ. ಹಾದಿಗೆ ಬಂಡೆಯುರುಳಿಸುವ ಯೋಚನೆಯುಂಟು. ನಾಣಯ್ಯ ಬರುವುದಾಗಿ ಹೇಳಿದ್ದ....ಈಗೇನು ಮಾಡೋಣ ?"

"ಅವನು ವೀರರಾಜಪೇಟೆಗೆ ಹೋಗಿ ಬಂದು ನಿಮ್ಮನ್ನು ಕೂಡಿಕೊಳ್ಳುವುದಾಗಿ ಹೇಳಿದ. ಒಂದು ವೇಳೆ ನಾನು ಬರುವುದು. ತಡವಾದಲ್ಲಿ ನೀನೇ ಎಲ್ಲಾ ವಿಷಯ ತಿಳಿದುಕೊ. ಎಂದು ಬೇರೆ ಹೇಳಿ ಹೋಗಿದ್ದಾನೆ."

"ಹಾಗಾದರೆ ಅವನು ಬರುವುದು ಹೊತ್ತಾದೀತೇನೋ."

"ನೀವಿನ್ನೂ ಊಟ ಮಾಡಿಲ್ಲನೆಂದು ತೋರುತ್ತದೆ....ಹೌದೆ ?"

"ಈಗ ಅದನ್ನೆಲ್ಲಾ ಯೋಚಿಸುವಷ್ಟು ಸಮಯವೇ ಇಲ್ಲ."

"ಹಾಗೆಂದರೆ ಎಷ್ಟು ದಿನ ಈ ರೀತಿ ಕೆಲಸ ಮಾಡಲು ಸಾಧ್ಯ ? ಮುಖ್ಯವಾಗಿ ನೀವು ಗಡ್ಡ ಬೋಳಿಸಿಬಿಡಿ. ಗಡ್ಡವಿದ್ದರೆ ವೇಶ ಮರೆಸುವುದು ಕಷ್ಟ."

"ಸ್ವಾತಂತ್ರ್ಯ ಬರುವವರೆಗೂ ಬೋಳಿಸುವುದಿಲ್ಲವೆಂದು ದೀಕ್ಷೆ ತೊಟ್ಟಿರುವೆ."

"ಅಂತಹ ದೀಕ್ಷೆಗಳಿಗಿಂತ ಮುನ್ನುಗ್ಗಿ ಕೆಲಸ ಮಾಡಲು ಅವಕಾಶ ಹೊಂದುವಂತಹ ದೀಕ್ಷೆ ಮೇಲು."

"ಅಂದರೆ ನಾನೀಗ ದೀಕ್ಷಾಬದ್ಧನಾಗಿ ಕೆಲಸ ಮಾಡುತ್ತಿಲ್ಲವೆಂದೇ ?"

ಪೂವಿ ಮಧುಮತ್ತ ಮುಗುಳ್ನಗುವನ್ನು ಬೀರಿದಳು. ತನ್ನ ಮಾತಿನ ವಾಚ್ಯಾರ್ಥವನ್ನು ವಿರುದ್ಧಮುಖವಾಗಿ ಭಾವಿಸಿದುದನ್ನು ತಮಾಷೆಯೋ ಅಥವಾ ಗಂಭೀರವಾಗಿಯೋ ಎಂಬುದನ್ನರಿಯಲು ಉತ್ಸುಕ ಕಣ್ಣುಗಳು ನೇರ ಕಟಾಕ್ಷವನ್ನು ಬೀರಿದುವು. ಆತನ ಗಂಭೀರ ನಿಲುವು ಸವಿವಾಕ್ಯದ ಸವಿಯನ್ನು ಸವಿದು ಹಿಗ್ಗಿದಂತಿದ್ದುದನ್ನರಿತು ತುಟಿಗಳಲ್ಲಿ ಎಳೆನಗು ಚಿಮ್ಮಿತು. ಮುದ್ದು ಆನಂದ ತುಂದಿಲನಾಗಿ ಬಿತ್ತರಿಸಿದ.

"ನನ್ನ ಪ್ರತಿಯೊಂದು ಹೆಜ್ಜೆಯೂ ದೀಕ್ಷಾಬದ್ಧವಾಗಿಯೇ ನಡೆಯುತ್ತದೆ."

"ನಿಮ್ಮ ದೀಕ್ಷೆಯನ್ನಾರೂ ಅಲ್ಲಗಳೆಯುವಂತಿಲ್ಲ ...ಅದು ಬೇರೆ ಪ್ರಶ್ನೆ. ನೀವು ಎಷ್ಟೋ ಪಳಗಿರಬಹುದು....ಪ್ರತಿದಿನ. ತಿಳಿದು ಬರುವ ಸುದ್ದಿ ಎನೆ

ಯನ್ನು ನಡುಗಿಸುತ್ತದೆ. ಆಂದೋಳನದ ವ್ಯಾಪಕತೆಯಲ್ಲಿ ಚಿತ್ರವಿಚಿತ್ರವಾಗಿ ಹೊಮ್ಮುವ ಸುದ್ದಿಗಳನ್ನು ನೋಡಿದರೆ ಯಾವ ಘಳಿಗೆಯಲ್ಲಿ ಯಮಗಂಡ ತರುತ್ತವೆ ಎಂಬುದನ್ನು ಊಹಿಸುವುದು ಕಷ್ಟ. ಪರಿಸ್ಥಿತಿ ವಿಕೋಪಕ್ಕೆ ಹೋಗಿರುವಾಗ ಎಷ್ಟು ಎಚ್ಚರಿಕೆಯಿಂದಿದ್ದರೂ ಸಾಲದು. ಅಂದಮೇಲೆ...."

ಮುದ್ದಪ್ಪ ನಡುವೆ ಬಾಯಿ ಹಾಕಿದ,

"ಈಗ ಅದನ್ನೆಲ್ಲ ಕುರಿತು ಯೋಚಿಸುವಷ್ಟು ಸಮಯವುಂಟೇ ಪೂವಿ ? ದಾಸ್ಯ ವಿಮೋಚನೆ ಎಲ್ಲಕ್ಕಿಂತಲೂ ಹಿರಿದಾದುದು... ಭಾರತಾಂಬೆಯ ಕಂಬನಿಯನ್ನು ತೊಡೆಯುದ ಹೊರತು ಸ್ವಸ್ಥಿತಿಯನ್ನು ಗಮನಿಸುವಷ್ಟು ವ್ಯವಧಾನವಾದರೂ ಎಲ್ಲಿಂದ ಬರಬೇಕು ? ರಾಷ್ಟ್ರದಾದ್ಯಂತ ಎದೆಯ ನೆತ್ತರನ್ನು ಲೀಲಾಜಾಲವಾಗಿ ಬಸಿಯುತ್ತಿರುವ ಜನಕೋಟಿಯನ್ನು ನೋಡುತ್ತ ಸುಮ್ಮನೆ ಕೂಡುವುದು ಸಾಧ್ಯವೇ ? ಆದರೂ ಸಹ, ವ್ಯಕ್ತಿತ್ವವೂ ಅಷ್ಟೇ ಮಹತ್ತರವಾದುದೆಂದು ನೀನೆಂದರೆ 'ಇಲ್ಲ' ಎನ್ನುವಷ್ಟು ದೃಢತೆ ಖಂಡಿತವಾಗಿಯೂ ನನಗಿಲ್ಲ, ಶಾರೀರಕ ಸೌಖ್ಯದಿಂದಲ್ಲದೆ ಈ ಜೀವನ ತುಂಬುವುದಿಲ್ಲವೆಂಬುದು ಗೊತ್ತು. ವ್ಯಕ್ತಿಗತ ಗುಣಸಂಪತ್ತು ಸಹ ಸಂಪೂರ್ಣ ಮಿಥ್ಯೆಯಲ್ಲ. ಈ ಜೀವನೋದ್ಧಾರಕ್ಕಾಗಿಯೇ ನಾವು ಸ್ವಾತಂತ್ರ್ಯೋದಯವನ್ನು ಬಯಸುತ್ತೇವೆ, ನಿಜ. ಅಂದ ಮೇಲೆ ನಿನ್ನ ಸ್ನೇಹವಾತ್ಸಲ್ಯಪೂರ್ಣ ಸಲಹೆ ಸಾವಿರ ಸ್ವಾತಂತ್ರ್ಯೋದಯಕ್ಕಿಂತಲೂ ಹಿತಕರ. ಆದರೆ ಈಗ ನನ್ನ ಅಂತರಂಗ ಆ ಅವಸ್ಥೆಯನ್ನು ದಾಟಿಬಿಟ್ಟಿದೆ...."

ವಾಕ್ಯಸರಣಿ ಪೂರ್ತಿಗೊಂಡಾಗ ಭಾವೋನ್ಮತ್ತ ಕಂಠಸ್ವರ ವಿಜಾತೀಯವಾಗಿ ಲಘು ಕಂಪನ ಸಂಭವಿಸಿತು. ಒಮ್ಮಿಂದೊಮ್ಮೆಲೇ ಕಿವಿಗಳ ಮೇಲೆ ಹೆಜ್ಜೇನಿನ ಎರಕ ಹೊಯ್ದಂತಾಗಿ ಪೂವಿ ಮೈಮರೆತು ನಿಂತಳು. ಶರೀರ ಭಕ್ತಿಯಿಂದ ಪುಲಕಗೊಂಡಿತು. ಏನೋ ಒಂದು ಅಪೂರ್ವ ಭಾವ ಸಮಾಧಿಯಲ್ಲಿ ಮುಳುಗಿ ನರನಾಡಿಗಳಲ್ಲಿ ಹರಿದಾಡುವ ಶಕ್ತಿಯ ಝರಿ 'ನಿಜ, ನಿಜ' ಎಂಬ ಶ್ರುತಿಯನ್ನು ಹಾಡಿತು.

"ಸುಖ-ದುಃಖಗಳನ್ನು ಗ್ರಹಿಸಬಲ್ಲ, ಸ್ವತಂತ್ರವಾಗಿ ಆಲೋಚಿಸಬಲ್ಲ ಜಾಗೃತ ಶಕ್ತಿ ರೋಗ–ರುಜಿನಗಳಿಂದ ಕೂಡಿದ ದೀನ ದಲಿತರನ್ನುದ್ಧರಿಸಲು ಸ್ವದೇಶ ರಕ್ಷಣೆಯಲ್ಲಿ ತೊಡಗುವುದು ವಿಶೇಷವೇನಲ್ಲ. ಕಷ್ಟ–ನಷ್ಟಗಳಿಗೊಳ

ಗಾಗದ ಹೊರತು ಜನಗತಿ ಜಾಗೃತಗೊಳ್ಳುವುದೂ ಇಲ್ಲ. ಇಂದಿನ ಪರಿಸ್ಥಿತಿ ಯಲ್ಲಿ ಸರಸ್ವತೀ ಪ್ರಸಾದವನ್ನು ಹಂಚಿ ಮಹತ್ತಾದ ಸಂಕಲ್ಪಕ್ಕೆ ತಕ್ಷಣ ಸಿದ್ಧಗೊಳಿಸುವುದು ಅಷ್ಟು ಸುಲಭವೂ ಅಲ್ಲ. ಯೋಚಿಸಿ ನೋಡಿದರೆ ಇದೆಲ್ಲಾ ಎಂತಹ ಕ್ಲಿಷ್ಟಕರವಾದ ಸಮಸ್ಯೆ ಮುದ್ದೂ?...ನಮ್ಮವರಿಗೆ ಇಂಗ್ಲೀಷಿನವರ ರಾಜ್ಯದಲ್ಲಿ ಸ್ಥಾನಮಾನಗಳಿಲ್ಲ. ಮುಂದೆಯೂ ಎಂದೆಂದಿಗೂ ಇಲ್ಲದೆ ಹೋಗ ಬಹುದು. ಈ ಸುವಿಶಾಲ ರಂಗಸ್ಥಳ ಇಂಗ್ಲೀಷರಿಗೆ ಮಾತ್ರವೇ ವಿಾಸಲಲ್ಲ. ಎಂಬುದನ್ನಷ್ಟು ಅವರಿಗೆ ತಿಳಿಸಿಕೊಡದೆ ಬೇರೆ ಮಾರ್ಗವೇ ಇಲ್ಲ. ಅದ ಕ್ಕೆಂದೇ ನಾನೂ ಧೈರ್ಯಮಾಡಿ ಮುಂದೆ ನಿಂತುದು ...ಇಂದು ತಿಮ್ಮಯ್ಯ ನಿಂದ ಕಾಗದ ಬಂದಿದೆ. ಸುಭಾಸರ ಒಡನಾಟ ಅವನ ಉಗ್ರಗಾಮಿತ್ವಕ್ಕೆ ಪುಷ್ಟಿ ನೀಡಿದೆ. ಅವನಿಗೆ ವಿದೇಶ ಸಂಚಾರದ ಹುಚ್ಚೂ ಇದೆ. ಪುಣ್ಯವಶ ದಿಂದ ಈಗ ಅವನಿಗೆ ಎಲ್ಲವೂ ಲಭಿಸಿದೆ."

"ಜಾಣ ಹುಡುಗ !" ಮುದ್ದು ಉದ್ಗಾರ ತೆಗೆದ "ಅವನಿಗೆ ಬರೆಯು ವಾಗ ನನ್ನ ಶುಭಾಶಯಗಳನ್ನೂ ತಿಳಿಸಿಬಿಡು."

"ನಿನ್ನೊಂದಿಗೆ ಚರ್ಚಿಸುವುದು ಬಹಳವಿತ್ತು. ಆದರೆ ಹೊತ್ತಾಗಿದೆ. ದೊಡ್ಡಮ್ಮ ಏನಾದರೂ ತಪ್ಪು ತಿಳಿದುಕೊಳ್ಳಬಹುದು."

"ನನಗೂ ಹೊತ್ತಾಯ್ತು. ಹೆದ್ದಾರಿಗೆ ಹೋಗುವುದಿದೆ. ನಾಳೆ ನಾಡಿದ್ದ ರಲ್ಲಿ ಎಂದಾದರೂ ಭೇಟಿಯಾಗೋಣ. ನಾಣಯ್ಯನಿಗೆ ಹೇಳು."

"ಆಗಲಿ...." ಎಂದ ಪೂವಿ ಪುನಃ ಆತಂಕಿತಳಂತೆ "ನಾಣಯ್ಯ ಬರದಿದ್ದುದೇ ಏನೋ ಒಂದು ಬಗೆಯ ಕಳವಳ. ಸಧ್ಯ ಯಾವ ಅಪಾಯವೂ ಸಂಭವಿಸದಿದ್ದರೆ ಸಾಕು."

"ಬಂದದ್ದೆಲ್ಲಾ ಬರಲಿ. ಗೋವಿಂದನ ದಯೆ ಎಮಗಿರಲಿ...."

ಪೂವಿ ಮುಗುಳು ನಕ್ಕಳು.

ಅವನು ಸಸ್ನೇಹಪೂರ್ಣ ನೋಟವನ್ನು ಚೆಲ್ಲಿ ಹೊರಟ. ಸಜಲ ನೇತ್ರೆ ಯಾಗಿ ಅಲ್ಲೇ ನಿಂತಳು ಪೂವಿ, ಕರುಣಭಾವದಿಂದ ಚಿತ್ತ ಪ್ರಮತ್ತವಾಗಿತ್ತು.

ಕಳವಳ–ಕಾತರ–ಉದ್ವೇಗಗಳ ಜಂಝಾವಾತದಲ್ಲಿ ಒಂದೆರಡು ದಿನ ಗಳುರುಳಿದುವು. ಹೆದ್ದಾರಿಯಲ್ಲಿ ಕಲ್ಲುಬಂಡೆಯುರುಳಿಸಿದವರನ್ನು ಹಿಡಿದು ಚೆನ್ನಾಗಿ ಥಳಿಸಿ ಜೇಲಿಗೆ ಕೂಡಿದ್ದಾರೆಂದು ವದಂತಿ. ಕೆಲವರು ಸುಳ್ಳು ಎಂದು,

ಅಂತೂ ಸುದ್ದಿಗೆ ತುದಿ ಬುಡವಿಲ್ಲದಂತೆ ಹರಡುತಿತ್ತು. ಅದಕ್ಕನುಗುಣವಾಗಿ ಮುದ್ದು-ನಾಣಿ ಅದೃಶ್ಯವಾಗಿದ್ದರು. ಪೂವಿಯ ತಂದೆ–ನಂಜಪ್ಪ ಅವರ ತಪಾಸಣೆಯಲ್ಲಿ ತೊಡಗಿ ಊರೆಲ್ಲ ಅಲೆದಾಡಿದಾಗ ಆಸ್ಪತ್ರೆಯಲ್ಲಿ ಕೆಲವು ಗಾಯಾಳುಗಳಿರುವುದು ತಿಳಿದುಬಂತು. ಒಡನೆ ಅಲ್ಲಿಗೆ ಹೊರಟ.

ಊರಿನಲ್ಲಿ ಕಿಚ್ಚು ಹರಡಿದಂತೆ ಹರಡಿದ ಸುದ್ದಿ ನಿಜವಾಗಿತ್ತು. ರಾತ್ರಿಯ ಕಾಲದಲ್ಲಿ ಸಿಕ್ಕಿಬಿದ್ದ ಚಳವಳಿಕಾರರನ್ನು ನರನರಗಳೂ ಕಿತ್ತು ಹೋಗುವಂತೆ ಥಳಿಸಿ ಆಸ್ಪತ್ರೆಗೆ ಸೇರಿಸಲಾಗಿದ್ದು ಗಾಯಾಳುಗಳ ಸ್ವರೂಪ, ನರಳುವ ರೀತಿ ಘೋರವಾಗಿತ್ತು. ಎಂಟ್ಹತ್ತು ಗಾಯಾಳುಗಳು ಒಂದೇ ಕೊಠಡಿಯಲ್ಲಿ ಪೋಲೀಸರ ಪಹರೆಯಲ್ಲಿದ್ದರು. ಮ್ಯಾಜಿಸ್ಟ್ರೇಟರಿಂದ ಪರವಾನಗಿ ಪಡೆದುಕೊಂಡಲ್ಲದೆ ನೋಡಲವಕಾಶವಿಲ್ಲೆಂದು ಪಹರೆಯವರು ತಿಳಿಸಿದಾಗ ನಂಜಪ್ಪ ಪರವಾನಗಿಗಾಗಿ ಆಫೀಸುಗಳಿಗೆ ಅಲೆದಾಡಿದ. ದಿನಗಟ್ಟಲೆ ವಾರಗಟ್ಟಲೆ ಅಲೆದರೂ ಪರವಾನಗಿ ದೊರೆಯಲಿಲ್ಲ.

"ಕಿಟಕಿಯಲ್ಲಿ ನೋಡೋಣ ಬನ್ನಿ ಅಪ್ಪಾ!" ಎಂದಳು ಪೂವಿ.

ಅದೂ ಹೌದೆಂದುಕೊಂಡು ನಂಜಪ್ಪ ಹೊರಟ. ಪೂವಿ ಹಿಂಬಾಲಿಸಿದಳು. ಹದಿನೈದು ನಿಮಿಷದ ನಡಿಗೆಯಲ್ಲಿ ಆಸ್ಪತ್ರೆಯ ಹಾದಿ ಕಳೆಯಿತು. ಸೇವಿಕೆಯರಿಂದ ಗಾಯಾಳುಗಳಿದ್ದ ಕೊಠಡಿಯ ನಂಬರನ್ನು ತಿಳಿದುಕೊಂಡು ಕಿಟಕಿಯ ಬಳಿಗೆ ಹೋದರು. ಕಿಟಕಿಯ ಮಗ್ಗುಲಿಗೆ ಮುದ್ದು ಮಲಗಿದ್ದ. ಅದರಾಚೆ ನಾಣಿ ..ಕಾಲಿಗೆ ಪೆಟ್ಟು ತಾಗಿದುದರಿಂದ ನಾಣಿ ಎದ್ದು ನಡೆಯುವಂತಿರಲಿಲ್ಲ. ಮುದ್ದಪ್ಪನಿಗೆ ಮುಖ ತಲೆಗೆ ಪೆಟ್ಟು ತಾಗಿದ್ದುದರಿಂದ ಕೂದಲು ಗಡ್ಡಗಳನ್ನು ಬೋಳಿಸಲಾಗಿತ್ತು. ಬ್ಯಾಂಡೇಜ್ ಬಿಚ್ಚಿ ಅಲ್ಲಲ್ಲಿ ಪ್ಲಾಸ್ಟರ್ ಅಂಟಿಸಿದ್ದರು. ಕೊಠಡಿಯಲ್ಲಿ ಇನ್ನೂ ಅನೇಕ ಗಾಯಾಳುಗಳಿದ್ದರು.

ಕಿಟಕಿಯ ಬಳಿ ತಂದೆ ಮಗಳು ಬಂದುದನ್ನು ಮುದ್ದು ನಾಣಿಗೆ ವರದಿ ಮಾಡಿದ. ಗೆಳೆಯರ ಮುಖಗಳು ಅರಳಿ ಪ್ರಸನ್ನವಾದುವು. ಮಾತುಕತೆಯು ವಿಪರೀತ ಗದ್ದಲದಿಂದ ಕೊಠಡಿ ಶಬ್ದಾಯಮಾನವಾಗಿದ್ದು ಒಬ್ಬರ ಮಾತು ಇನ್ನೊಬ್ಬರಿಗೆ ಕೇಳಿಸುವುದೂ ಸಹ ಕಷ್ಟವೇ ಆಗಿತ್ತು. ಅಂತಹ ಪರಿಸ್ಥಿತಿಯಲ್ಲಿ ಅತ್ಯಂತ ಕಾತರ ಭಾವದಿಂದ ಹಣಿಕಿದಳು ಪೂವಿ.

"ಅಷ್ಟೊಂದು ಗಾಬರಿಯಾಗಬೇಡ. ಜೀವಕ್ಕೇನೂ ಅಪಾಯವಿಲ್ಲ" ಎಂದ ನಾಣಿ.

ಮೈಬಾಗಿ ಕತ್ತು ಆನಿಸಿ ನೋಡಿದಳು ಪೂವಿ. ಪಟ್ಟು ತಾಗಿ ಮೈಕೈ ಹಸುರುಗಟ್ಟಿದ ಭೀಷಣ ದೃಶ್ಯ ಎದೆಯನ್ನು ನಡುಗಿಸಿತು. ಒಡನೆ ಎರಡೂ ಕೈಗಳಿಂದ ಮುಖವನ್ನು ಮುಚ್ಚಿಕೊಂಡಳು. ಪೌರುಷೇಯವಾದ ವಾತಾವರಣವಲ್ಲದಿದ್ದರೆ ಆಕೆ ಅತ್ತುಬಿಡುತಿದ್ದಳೇನೋ... ದುರ್ಧರ್ಷ ಅಹಂಕಾರಯುಕ್ತ ಪ್ರತಿಕೂಲತೆ ಅಂತರಾಳದಲ್ಲಿ ವನ್ಯಕೇಸರಿಯಂತೆ ತಲೆಯೆತ್ತಿತು... ಮುದ್ದಪ್ಪ ಅಂಗೈಯನ್ನು ಬಿಚ್ಚಿ ಹಿಡಿದ. ರಕ್ತದಲ್ಲಿ ಬರೆಯಲಾಗಿದ್ದ ಅಕ್ಷರಗಳು ಕಣ್ಣಿಗೆ ಬಿದ್ದುವು...ಸ್ವರಾಜ್ಯ....ಸ್ವಾತಂತ್ರ್ಯ....

೮

ಕಷ್ಟ–ನಷ್ಟ.......ದುಃಖ–ದಾರಿದ್ರ್ಯ.......
ಸತ್ಯ .....ಶಾಂತಿ.... .. ಶಿಸ್ತು .....

ಭಾರತದಾದ್ಯಂತ ಅಸಹಕಾರ ಚಳವಳಿಯಿಂದ ಆಡಳಿತ ಕುಸಿದು ಬಿದ್ದರೂ ಜನಜೀವನದ ಅದ್ಭುತ ಶಾಂತಿ ಧೂಳೀಪಟವಾದರೂ ಜೇಲುಗಳಲ್ಲಿ ಜನರು ಕುರಿಗಳಂತೆ ತುಂಬಿ ಹೋದರೂ ಬ್ರಿಟಿಷ್ ಸರಕಾರ ಭಾರತದಿಂದ ಕಾಲ್ತೆಗೆಯಲು ಇನ್ನೂ ಮನಸ್ಸು ಮಾಡಿರಲಿಲ್ಲ. ಯಾವುದೋ ಸಬೂಬುಗಳನ್ನು ಮುಂದಿಟ್ಟು ರಾಜಿ ಸಂಧಾನ ಮುಂತಾದವುಗಳ ಮೂಲಕ ದಿನಗಳನ್ನು ಮುಂದೂಡುತಿತ್ತು. ಜಿನ್ನಾ ಸಾಹೇಬರೊಂದು ಕಡೆ ಪಾಲು ಕೇಳತೊಡಗಿದ್ದರು. ಅಕಾಲಿ ದಳ ಇನ್ನೊಂದುಕಡೆ ಹೆಡೆಯೆತ್ತುತಿತ್ತು. ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಕೆಲವು ಪ್ರಾಂತ್ಯಗಳನ್ನು ದೇಶೀಯರ ಆಡಳಿತಕ್ಕೆ ಬಿಟ್ಟು ಕೆಲವು ಕಾಲ ಸ್ಥಿತಿಗತಿಯನ್ನು ಕಾದು ನೋಡುವ ಸೂಚನೆಯನ್ನು ಮುಂದಿಟ್ಟಿತು ಬ್ರಿಟಿಷ್ ಸರಕಾರ. ಸಂಧಾನ ಅನುಸಂಧಾನಗಳ ಮಹಾಸಿದ್ಧಿ ಏಳು ಪ್ರಾಂತ್ಯಗಳಲ್ಲಿ ದೇಶೀಯ ಸರಕಾರ ಸ್ಥಾಪನೆ....ಸೆರೆಮನೆಗಳಲ್ಲಿ ತುಂಬಿ ತುಳುಕುತಿದ್ದ ಜನವಾರಿಧಿ ಜೈಕಾರದೊಡನೆ ಹೊರಬಂದರು. ಹಾಗೆ ಬಂದವರಲ್ಲಿ ಮುದ್ದಪ್ಪನೂ ಒಬ್ಬ. ದೇಶದ ಯಾವುದೋ ಮೂಲೆಯಲ್ಲಿ ಬಿಡುಗಡೆಯಾದಾಗ ಜೇಬಿನಲ್ಲಿ ಒಂದಾಣೆಯೂ ಇರಲಿಲ್ಲ. ಕೆಲವು ದಿನ ಸೌದೆ ಡಿಪೋವಿನಲ್ಲಿ ಕೆಲಸಮಾಡಿ ಬಸ್ಸಿನ ಪಯಣಕ್ಕೆ ಕಾಸು ಗಳಿಸಿಕೊಳ್ಳುವ ಅವಶ್ಯಕತೆಯೂ ಬಂತು. ಮುದ್ದಪ್ಪ ಏಳೆಂಟು ದಿನಗಳ ಕಾಲ ಎಡೆಬಿಡದೆ ಸೌದೆ ಒಡೆದು ಹದಿನೈದು ರೂಪಾಯಿ ಗಳಿಸಿಕೊಂಡ. ಬಿಡುಗಡೆಯಾದಂದೇ ತಂದೆಗೆ ಕಾಗದ ಬರೆದು ಸ್ವಲ್ಪ ಅವಶ್ಯ ಕೆಲಸವಿರುವುದರಿಂದ ಒಂದು ವಾರ ಬಿಟ್ಟು ಬರುವುದಾಗಿ ತಿಳಿಸಿ ನಿಶ್ಚಿಂತೆಯಿಂದ ಕಾರ್ಯತತ್ಪರನಾದ.

ಮಡಿಕೇರಿಯಲ್ಲಿ ಮುದ್ದು ಬಸ್ಸಿನಿಂದ ಇಳಿದಾಗ ಹೊತ್ತು ಏರುತಿತ್ತು. ಹೊತ್ತು ಇಳಿಮುಖವಾಗುವವರೆಗೆ ಇದ್ದು ಅಲ್ಲಿಂದ ಬಾಗಂಡಕ್ಕೆ ನಡೆದು

ಕೊಂಡು ಹೋದರೆ ಒಂದು ರೂಪಾಯಿ ಉಳಿಸಿಕೊಳ್ಳಬಹುದು ಎಂಬ ಯೋಚನೆ. ಅಷ್ಟರೊಳಗಾಗಿ ನಾಣಿ-ಪೂವಿಯರನ್ನು ನೋಡಿ ಹೋಗುವ ಭಾವನೆ ಮೂಡಿತು. ಕೈಚೀಲದೊಡನೆ ಹತ್ತು ಹೆಜ್ಜೆ ಸಾಗಿದ. ಚಳವಳಿಕಾರ ಗೆಳೆಯರನೇಕರು ಎದುರಾದರು.

"ಹೇಗಿತ್ತಪ್ಪಾ ಬ್ರಿಟಿಷ್ ಸರಕಾರದ ಆತಿಥ್ಯ ?"

"ಹೇಗಿರಬೇಕೋ ಹಾಗಿತ್ತು !" ಹುಬ್ಬೇರಿಸಿದ ಮುದ್ದು.

ಗೆಳೆಯರು ನಕ್ಕುಬಿಟ್ಟರು.

"ಶ್ರಮಪಟ್ಟದ್ದಕ್ಕೆ ಏನೋ ಒಂದು ರೂಪು ಬಂದಿದೆ. ಕೆಲವು ಕಾಲ ಕಾದು ನೋಡಿದರೆ ಗೊತ್ತಾಗುತ್ತದೆ. ಅನಂತ ಶಕ್ತಿ, ಅನಂತ ಉತ್ಸಾಹ, ಅನಂತ ಧೈರ್ಯ, ಅನಂತ ತಾಳ್ಮೆ ಇಲ್ಲದೆ ಹೋಗಿದ್ದರೆ ಬ್ರಿಟಿಷ್ ಗದ್ದುಗೆ ಇಷ್ಟಾದರೂ ಮಣಿಯುತ್ತಿರಲಿಲ್ಲ."

"ಸತ್ಯಕ್ಕೆ ಎಂದಿದ್ದರೂ ಜಯವಿದ್ದೇ ಇದೆ."

"ಸತ್ಯವೊಂದೇ ಅಲ್ಲ. ಉದ್ಯೋಗಿನಂ ಪುರುಷಸಿಂಹ ಮುಪೈತಿ ಲಕ್ಷ್ಮೀಃ"

"ಅಯ್ಯೋ, ಈ ದೇಶದ ಬಡತನವನ್ನು ನೀಗಿಸುವುದು ಅಷ್ಟೊಂದು ಸುಲಭವೇ ? ದುಃಖ–ಬಡತನ–ಭಿಕ್ಷಾಟನೆ–ರೋಗ-ನಿರುದ್ಯೋಗ-ಅಜ್ಞಾನ ಒಂದೇ ಎರಡೇ ? ಸರಕಾರದ ನಿರ್ಲಕ್ಷ್ಯದಿಂದ ಜನರು ಕಂಗೆಟ್ಟಿದ್ದಾರೆ. ಇನ್ನು ಚೇತರಿಸಿಕೊಳ್ಳಲು ಕೊನೆಯ ಪಕ್ಷ ಒಂದು ಶತಮಾನವಾದರೂ ಬೇಕು."

"ಖಂಡಿತ...."

"ನಮ್ಮ ನಾನಾ ಸಮಸ್ಯೆಗಳಲ್ಲಿ ಸೋಮಾರಿತನ ಬಲು ದೊಡ್ಡ ಸಮಸ್ಯೆ. ಈ ದೇಶದ ಜನ ತುಂಬ ಸೋಮಾರಿಗಳು. ಸೋಮಾರಿತನ ಹೋಗದ ಹೊರತು ದೇಶೋದ್ಧಾರವಾಗುವುದಿಲ್ಲ."

"ಅದೆಲ್ಲ ದೂರ-ಬಹುದೂರದ ಮಾತು."

"ಶತ ಶತಮಾನಗಳಿಂದ ನಿದ್ದೆಯಲ್ಲಿದ್ದ ಜನ, ಒಮ್ಮೆಲೇ ಚೇತರಿಸಿ ಕೊಳ್ಳುವುದೂ ಸಹ ಕಷ್ಟವೇ"

ಮುದ್ದಪ್ಪ ಗೆಳೆಯರಿಂದ ಬೀಳ್ಕೊಂಡು ಮುಂದುವರಿದ. ಹೆದ್ದಾರಿ ಯಿಂದ ಬಲಕ್ಕೆ ತಿರುಗಿದೊಡನೆಯೇ ವಾಮಮಾರ್ಗದಿಂದ ರಸ್ತೆಗೆ ಕಾಲಿಟ್ಟ,

ಪೂವಿ ಕಣ್ಣೋಚರಿಸಿದಳು. ಯೌವ್ವನ ಸಂಪದ್ಭರಿತ ಮುಖಮಂಡಲ ಶರಚ್ಚಂದ್ರನಂತೆ ಕಂಗೊಳಿಸುತಿತ್ತು. ಅನಿರೀಕ್ಷಿತವಾಗಿ ಆದ ಭೇಟಿಯಿಂದ ಮೈ ಪುಳಕಿತವಾಯಿತು.

"ಪೂವೀ . "

"ಓ ...! ಇಲ್ಲಿಗೆ ಯಾವಾಗ ಬಂದಿರಿ ?"

"ಇದೀಗಷ್ಟೆ"

"ಊರಿಂದ ಬಂದಿರಾ ?

"ಅಲ್ಲ, ಜೇಲುಖಾನೆಯಿಂದ."

"ಇಷ್ಟು ತಡವಾಗಿ ಬಿಟ್ಟರೇ ?"

"ಇಲ್ಲ ..ಅಂದೇ ಬಿಡುಗಡೆಯಾಯ್ತು. ನಾನೇ ಅಲ್ಲಿ ಸ್ವಲ್ಪ ಕಾಲ ಉಳಿದೆ. ಇನ್ನೇನಿಲ್ಲ, ನಾಣಿ ಮನೆಯಲ್ಲಿದ್ದಾನೆಯೋ ?"

"ಇದ್ದಾನೆ, ಅವನಿಗೆಂದೇ ಈ ಪುಸ್ತಕ ತಂದೆ." ಎನ್ನುತ್ತ ನೋಟವನ್ನು ಕೈಯಲ್ಲಿದ್ದ ಚಿಕ್ಕ ಪುಸ್ತಕದ ಕಡೆ ಹೊರಳಿಸಿದಳು. ಅಲ್ಲಿಂದ ಇಬ್ಬರೂ ಕೂಡಿ ಮುಂದುವರಿದರು. ಮುದ್ದಪ್ಪ ಕೇಳಿದ,

"ನಮ್ಮನ್ನು ಇಲ್ಲಿಂದ ಸಾಗಹಾಕಿದಮೇಲೆ ಇಲ್ಲಿ ಏನೇನಾಯಿತು? ನೀನು ಪೋಲೀಸರ ಕೈಗೆ ಸಿಕ್ಕಿ ತೊಂದರೆ ಪಡಲಿಲ್ಲವೇ ?"

"ಓ ಅದೂ ಆಯಿತು ! ನಮ್ಮ ದಳದಲ್ಲಿ ನಾವು ಮೂವತ್ತಕ್ಕೂ ಹೆಚ್ಚು ಮಂದಿ ಇದ್ದೆವು. ಹೆಂಗಳೆಯರು ಎಂಬ ಕರುಣೆಯನ್ನೂ ತೋರದೆ ನಮ್ಮನ್ನು ವ್ಯಾನಿನಲ್ಲಿ ತುಂಬಿ ಘಾಟಿ ರಸ್ತೆಯಲ್ಲಿ ಬಿಟ್ಟು ಬಂದರು."

ನಗುಮುಖದಿಂದ ಮುದ್ದು ಕೇಳಿದ "ಮತ್ತೇನಾಯಿತು ನಿಮ್ಮ ಕತೆ?"

"ಅನಂತರ ಅದೇ ದಾರಿಯಲ್ಲಿ ಮಂಗಳೂರಿನಿಂದ ಬರುತಿದ್ದ ಬಸ್ಸು ಲಾರಿಗಳಲ್ಲಿ ತಂಡತಂಡವಾಗಿ ಹಿಂದಿರುಗಿ ಮರುದಿನ ಸತ್ಯಾಗ್ರಹವನ್ನು ಆರಂಭಿಸಿದೆವು."

"ಇಲ್ಲಿಕೇಳು...? ಬ್ರಿಟಿಷ್ ದೇಶದ ಕೆಲವು ಪತ್ರಿಕೆಗಳು ತೀರ ವ್ಯತಿರಿಕ್ತವಾಗಿ ವ್ಯಾಖ್ಯೆ ಹೂಡಿದುದನ್ನು ನೋಡಿದರೆ ರಕ್ತ ಕುದಿಯುತ್ತದೆ. ಭಾರತೀಯರಿಗೆ 'ಸ್ವಾತಂತ್ರ್ಯ' 'ಸ್ವರಾಜ್ಯ' ಎಂದರೇನೆಂಬುದೇ ತಿಳಿಯದು. ಇದೆಲ್ಲಾ ಕೇವಲ ಸೋಮಾರಿಗಳ ಅಕ್ರಮಕೂಟ ಮತ್ತು ಅಲಸಿಕೆಯ ಶಕ್ತಿ ಸಾಮರ್ಥ್ಯ ಎಂದೆಲ್ಲಾ ಸಾರುತ್ತಿವೆ ! ಇದೀಗ ಬಹಳ ಸ್ವಾರಸ್ಯ !....ಹೇಗಿದೆ ನೋಡು?"

"ಎಷ್ಟು ದಿನ ತಾನೇ ಈ ರೀತಿ ಪ್ರಚಾರ ಮಾಡಿಯಾರು ?"

"ಆದರೂ ಸಹ...."

ಪೂವಿ ನಡುವೆ ಬಾಯಿ ಹಾಕಿದಳು. "ದಯವಿಟ್ಟು ಕ್ಷಮಿಸಿ, ಇಂತಹ ಪ್ರಚಾರ ಮಾಡುವುದರಲ್ಲಿ ನಮ್ಮವರೇನು ಕಡಿಮೆಯೇ ? ಹೇಗೆಂದರೆ ಹಾಗೆ ಬಣ್ಣ ಬದಲಿಸುತ್ತಾರೆ. ಯಾರನ್ನೂ, ಯಾವ ಮಾತನ್ನೂ ನಂಬುವುದು ಕಷ್ಟ. ಮೇಲಾಗಿ 'ಸತ್ಯ' 'ಧರ್ಮ' ಎಲ್ಲರ ಬಾಯಿಯಲ್ಲೂ ನಲಿಯುತ್ತಿರುತ್ತದೆ. ಇದಕ್ಕೇನೆನ್ನುತ್ತೀರಿ ?"

ಮುದ್ದಪ್ಪ ಯೋಚನೆಯ ಅಲೆಗಳಲ್ಲಿ ಹೊಡೆದುಕೊಂಡು ಹೋಗುತ್ತಿರುವವನಂತೆ ಏನೋ ಒಂದು ಬಗೆಯಲ್ಲಿ ಯಾಂತ್ರಿಕವಾಗಿ ನುಡಿದ "ಹೌದು ; ನೀನನ್ನುವುದರಲ್ಲಿ ಅರ್ಥವಿದೆ. ಆದರೂ, ನಮ್ಮವರು ವಿದ್ಯಾಬುದ್ಧಿ ರಹಿತ ಜನ. ಇಂದಲ್ಲದಿದ್ದರೂ ಇನ್ನೆಂದಾದರೂ ಸರಿಹೋಗಿಯಾರು ಎಂಬ ನೆಚ್ಚಿಟ್ಟುಕೊಳ್ಳುವುದು ಲೇಸು."

"ನಮ್ಮವರಿಗೆ ಗರ್ವ ಅಹಂಕಾರಗಳಿವೆ. ತಾಳ್ಮೆ ಸಂಘಟನೆಗಳಿಲ್ಲ. ಶಿಕ್ಷೆ–ದೀಕ್ಷೆ–ಶಕ್ತಿ–ಸಾಮರ್ಥ್ಯಗಳಿಲ್ಲ. ಯಾರಾದರೂ ಗದ್ದಲ ಹೊಡಿದರೆ ಅದನ್ನಿಷ್ಟು ದೊಡ್ಡದು ಮಾಡುವುದು ಅಥವಾ ಗೆದ್ದೆತ್ತಿನ ಬಾಲ ಹಿಡಿಯುವುದು ಗೊತ್ತು...ಶ್ರೀಮಂತ ವರ್ಗಕ್ಕೆ ಮೊದಲಾಗಿ ತಮ್ಮ ಸುಖ ಸಂತೋಷಗಳಿಗೆ ಲೋಪವುಂಟಾಗಬಾರದು, ಬೆಳಗಾಗೆದ್ದು ಸ್ನಾನಪಾನಾದಿಗಳಿಗೂ, ಔತಣ ಶೃಂಗಾರಾದಿಗಳಿಗೂ, ತೊಂದರೆಯಾಗಬಾರದು ; ಈ ಎಲ್ಲಾ ಐಷಾರಾಮ ವೃತ್ತಿ-ಪ್ರವೃತ್ತಿಗಳು ಮುಗಿದನಂತರವೇ ಸ್ವಾತಂತ್ರ್ಯೋದ್ಯಮ. ಇನ್ನುಳಿದವರಿಗೆ ಬಡತನದ ಬವಣೆ....ಈ ಮನೋಭೂಮಿಕೆಯಲ್ಲಿ ಅಂಡಲೆದ ಇಂಗ್ಲೀಷರಿಗೂ ಈಗ ನಮ್ಮನ್ನು ಕಂಡರೆ ಸದರ. ಅಂತಲೇ ನಮ್ಮ ಸ್ವಾತಂತ್ರ್ಯದಾಹವನ್ನು ನಾನಾ ವಿಧವಾಗಿ 'ಜೋಕ್' ಮಾಡುವುದರಲ್ಲಿ ವಿಶೇಷವೇನೂ ಇಲ್ಲ."

ಮುದ್ದು ಮಾತಾಡಲಿಲ್ಲ. ಆಕೆಯ ಆಲೋಚನಾ ಶಕ್ತಿಯನ್ನೂ ಬುದ್ಧಿವಂತಿಕೆಯನ್ನೂ ತನ್ನೊಳಗೇ ತರ್ಕಿಸತೊಡಗಿದ,

"ಸ್ವಾತಂತ್ರ್ಯ ಮಾನವಜನ್ಮಸಿದ್ಧ ಹಕ್ಕು. ಗಾಢಾಂಧಕಾರದಲ್ಲೂ ಬೆಳಕನ್ನು ಕಾಣಬಯಸುವುದು ಮಾನವ ಸಹಜಗುಣ. ಅವನು ಎಲ್ಲೇ ಇರಲಿ, ಹೇಗೇ ಇರಲಿ ಅದಕ್ಕಾಗಿ ಹೋರಾಡಿಯೇ ಹೋರಾಡುತ್ತಾನೆ. ಅಂತೂ ಅಂತೂ ಬ್ರಿಟಿಷರ ರೀತಿ ನೋಡಿದರೆ ಬಹಳ ಆಶ್ಚರ್ಯ !"

"ನಾನದನ್ನು ಇಲ್ಲವೆನ್ನಲಿಲ್ಲ...." ಅಷ್ಟು ಹೇಳಿ ಸುಮ್ಮನಾದಳು ಪೂವಿ ಮುಖದಲ್ಲಿ ಒಂದು ವಿಧವಾದ ಗಂಭೀರತೆ...ಇನ್ನೊಂದು ವಿಧವಾದ ಗ್ಲಾನಿ.... ಮತ್ತೊಂದು ವಿಧವಾದ ಕ್ಷಮೆ ಸುಳಿ ಸುತ್ತುತಿತ್ತು. ಹೃದಯಬನದಲ್ಲಿ ದುರ್ದಮ್ಯ ಭಾವವಿಭಾವಗಳು ಲಾಸ್ಯವಾಡುತ್ತಿರುವುದು ಸ್ಪಷ್ಟವಾಯಿತು. ಹಾಗೇ ವಿಚಾರಪರನಾಗಿ ಅವಳ ಆ ಭಾವಾನುಲೋಕದಲ್ಲಿ ತೀವ್ರ ಮುಳುಗಿ ಸ್ವಲ್ಪ ಹೊತ್ತು ಶಿಲಾಮೂರ್ತಿಯಂತೆ ನಿಶ್ಶಬ್ದವಾಗಿ ನಡೆದ ಮುದ್ದಪ್ಪ. ಹೃದಯ ತಂತುಗಳಲ್ಲಿ ಯಾವುದೋ ಕಂಡರಿಯದ ನಾದ ಎಡೆಬಿಡದೆ ಮಿಡಿಯು ತಿತ್ತು. ಈ ಪ್ರಪಂಚದಲ್ಲಿ ಸಂಭವಿಸುವ ಕಾರ್ಯಕಾರಣಗಳನ್ನು ಸತ್ಯಾಸತ್ಯ ಗಳನ್ನು ಕುರಿತು ಆಲೋಚಿಸುವಷ್ಟು ಸಮಯವಾಗಲೀ ಸಹನೆಯಾಗಲೀ ಈಗ ಇಲ್ಲವೇನೋ ಎಂಬಷ್ಟು ಪ್ರಕೃತಿ ಅಸ್ತವ್ಯಸ್ತವಾಗಿಬಿಟ್ಟಿದೆ. ಏನೆಂಬುದೇ ಅರ್ಥವಾಗುತ್ತಿಲ್ಲ...

ಪೂವಿ ಯಾಂತ್ರಿಕವಾಗಿ ಹೆಜ್ಜೆ ಹಾಕುತ್ತ ಮೌನ ಮುರಿದಳು "ದೇಶ ಕಲ್ಯಾಣಕ್ಕಾಗಿ-ಸ್ವರಾಜ್ಯ ಸ್ಥಾಪನೆಗಾಗಿ ಜೀವವನ್ನು ಬಲಿಗೊಟ್ಟವರ ತ್ಯಾಗ ಅಲಕ್ಷಿಸಲ್ಪಟ್ಟಿದೆ. ಸ್ವರಾಜ್ಯದಲ್ಲಿ ಸ್ವಾತಂತ್ರ್ಯ ಜ್ಯೋತಿಯನ್ನು ಉಜ್ವಲವಾಗಿ ಬೆಳಗಿಸಿ ಹಾಯಾಗಿ ಉಸಿರಾಡುತ್ತ ಬದುಕುತ್ತೇವೆ ಎಂಬ ಹೆಬ್ಬಯಕೆಯಲ್ಲಿ ಮುನ್ನುಗ್ಗಿದವರ ಕತೆಯೇನಾಗಿದೆ....?"

"ವಿಧಿ ವಿಚಿತ್ರವಾದುದು. ತನ್ನ ಪಾಶಕ್ಕೆ ಅನುಗುಣವಾಗಿ ಕಾರಣ ಗಳನ್ನು ಹೊಂದಿಕೊಳ್ಳುತ್ತದೆ. ದೇಶಸೇವೆಯಲ್ಲಿ ಕೊನೆಯುಸಿರೆಳೆದ ವ್ಯಕ್ತಿ ಹೇಗೆ ಇದ್ದರೂ ತನ್ನ ಜೀವಮಾನವನ್ನು ಆ ಮುಹೂರ್ತದಲ್ಲಿ ಮುಗಿಸಿ ಕೊಳ್ಳಲೇಬೇಕಿತ್ತು ; ಮುಗಿಸಿಕೊಂಡ ಎನ್ನಬಹುದು. ರೋಗ ರುಜಿನಗಳ. ಬದಲು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪ್ರಾಣ ತೆರುವುದು ವೀರ ಸ್ವರ್ಗ!ಅಂತಹ ಮರಣವೇ ಒಂದು 'ಸ್ಮಾರಕ' ಪೂವಿ! ಮತ್ತೇಕೆ ಆಡಂಬರ....ಬೂಟಾಟಿಕೆ ?"

ಅತ್ಯಂತ ಆಶ್ಚರ್ಯಚಕಿತಳಾಗಿ ತಟ್ಟನೆ ನೋಟವನ್ನು ಅವನೆಡೆಗೆ ಹರಿಸಿದಳು ಪೂವಿ. ಆತನ ಒರಟು ಭಾವನೆ ನಿರ್ಲಕ್ಷ್ಯ-ಉದಾಸೀನಗಳ ಸಮು ದಾಯದಿಂದ ಹರಿದು ಬಂದಂತಿತ್ತು. ಏನೋ ಹೇಳಲು ತೊದಲಿದಳು, ಆದರೆ ತುಟಿಗಳು ಬಿರಿಯಲಿಲ್ಲ.

ಹಾದಿ ಕಳೆದು ಮನೆ ಮೆಟ್ಟಿಲು ಹತ್ತಿದಾಗ ನಾಣಯ್ಯ ತಲೆಬಾಗಿಲಲ್ಲಿ

ಎದುರಾದ..ಗೆಳೆಯನನ್ನು ನೋಡುತ್ತಲೂ ಆತ್ಮೀಯಭಾವ ಉಕ್ಕಿ ಹರಿಯಿತು. ಸಸ್ನೇಹದಿಂದ ಒಳಗಡೆ ಬರಮಾಡಿಕೊಂಡು ಕೇಳಿದ :

"ನೀವಿಬ್ಬರೂ ಎಲ್ಲಿ ಭೇಟಿಯಾದಿರಿ ?"

"ಇಲ್ಲೆ ...ಹಾದಿಯಲ್ಲಿ."

ಅವರಿಬ್ಬರೂ ಒಂದೆಡೆ ಬೆಂಚಿನ ಮೇಲೆ ಕುಳಿತರು. ಪೂವಿ ಕಿಟಕಿಯಲ್ಲಿ ನೋಟವನ್ನು ಚೆಲ್ಲಿಕೊಟ್ಟಳು. ಉಜ್ವಲ ರವಿಯ ರಾಗಾರುಣ ಕಿರಣಗಳ ಅದ್ಭುತ ಸೌಂದರ್ಯಧಾರೆ ಬೃಹದ್ ಬ್ರಹ್ಮಾಂಡವನ್ನೆಲ್ಲ ಆವರಿಸಿ, ರಾಗ–ವಿರಾಗ-ನೀತಿ-ಅನೀತಿ-ಪಾಪ-ಪುಣ್ಯ-ಸತ್ಯ-ಮಿಥ್ಯಗಳೆಲ್ಲ ಕಳಾಹೀನವಾಗುತ್ತಿರುವುದನ್ನು ತದೇಕ ಚಿತ್ತದಿಂದ ಗಮನಿಸಿದಳು. ಹೃದಯಕಮಲ ವಿಚಿತ್ರ ಆನಂದ ಸ್ಫೂರ್ತಿಯಿಂದ ತುಂಬಿಹೋಯಿತು. ಸತ್ಯ-ಮಿಥ್ಯಗಳ ಅವಲೋಕನದಲ್ಲಿ ಕ್ಷಣಕ್ಷಣಗಳು ಮೆಲ್ಲನೆ ಉರುಳಿಹೋದವು.

"ತಿಮ್ಮಯ್ಯ ಸುಭಾಸರ ಜೊತೆ ಸೇರಿಕೊಂಡುದುದು ನನಗಂತೂ ಸರಿದೋರುವುದಿಲ್ಲ. ಅವರು ಬಹಳ ಉಗ್ರಗಾಮಿಗಳು."

ಕಂಠಪೂರ್ಣ ಧ್ವನಿ ಏನೋ ಒಂದು ಬಗೆಯ ಒಡಕು ಘಟದ ಶ್ರುತಿಯಂತೆ ಹೊರ ಹೊಮ್ಮಿತು. ಮುದ್ದಪ್ಪ ಪೂವಿಯ ಮನೋಭಾವವನ್ನು ಗ್ರಹಿಸಲು ನೋಟವನ್ನು ಅವಳ ಕಡೆ ಹಾಯಿಸಿದ.

"ನೀವು ಏನೇ ಅನ್ನಿ, ನನಗೆ ಹಾಗೆನಿಸುವುದಿಲ್ಲ. ಒಂದು ದೃಷ್ಟಿಯಿಂದ ಯೋಚಿಸಿ ನೋಡಿದರೆ ಅವನಿಗೆ ಜೇಲು ವಾಸದಲ್ಲಿ ಸಾಕಾದಷ್ಟು ಯೋಚಿಸಲು ಅವಕಾಶ ದೊರಕಿದೆ. ಅವನು ಖಂಡಿತ ಆತುರದ ಕ್ರಮ ಕೈಕೊಂಡಿರಲಾರ." ದೃಢಕಂಠದಿಂದ ನುಡಿದಳು ಪೂವಿ. ನಿಶ್ಚಲ ನಯನಗಳಲ್ಲಿ ನಿರ್ಮಲ ಜ್ಯೋತಿ ಜ್ವಲಿಸುತಿತ್ತು. ಸಿಂಧೂರಯುಕ್ತ ಲಲಾಟದೇಶ, ಮುಖಮಂಡಲದ ದಿವ್ಯಶೋಭೆ ಸ್ವರ್ಗಲಕ್ಷ್ಮಿಗೆ ಉಪಮಾನವಾಗುವಂತಿತ್ತು. ಸ್ವಲ್ಪವಾದರೂ ವಿಚಲಿತಳಾಗದೆ ತೊಟ್ಟು ಕಳಚಿದಂತೆ ನುಡಿದ ಆ ನಾರೀಮೂರ್ತಿಯ ದೃಢ ಅಭಿಪ್ರಾಯವನ್ನು ವಿಭ್ರಮೆಯಿಂದ ನಿಟ್ಟಿಸಿದ ಕಣ್ಣುಗಳಲ್ಲಿ ಸಖೇದಾಶ್ಚರ್ಯಗಳ ಛಾಯೆ ತಲೆದೋರಿತು. ಒಂದೆರಡು ಕ್ಷಣ ಮುಖದ ಮೇಲೆ ಹರಿದಾಡುವ ಭಾವವಿಭಾವಗಳ ಅಲೆಯನ್ನವಲೋಕಿಸುತ್ತ ಸಂದಿಗ್ಧಾವಸ್ಥೆಯಲ್ಲಿ ಸಿಲುಕಿಕೊಂಡಂತೆ ಮುದ್ದು ನುಡಿದ,

"ಇದು ನಿನ್ನ ಅಭಿಪ್ರಾಯದ ಮಾತಾಯಿತು...ಬಹುಶಃ ನೀನಾತನ ಭವಿಷ್ಯವನ್ನು ಕುರಿತು ಚಿಂತಿಸಿರಲಾರೆ."

"ಚಿಂತಿಸದೆ ಏನು ? ಹಾಗೆಂದರೆ....?"

"ಯೋಚಿಸಿ ನೋಡು ಪೂವಿ." ಎಂದ ನಾಣಯ್ಯ.

"ಚಳವಳಿಯ ಹೆಸರಿನಲ್ಲಿ ಲಾಠಿಏಟು ತಿಂದು ಜೇಲಿನಲ್ಲಿ ಕೊಳೆಯುವುದಕ್ಕಿಂತ ವೀರನಂತೆ ಹೋರಾಡುವುದು ಪರಮಲೇಸು....ಸುಭಾಸರ ಧೀರ ಗಂಭೀರ ನಿಲುವನ್ನು ಇಂದು ಕೆಚ್ಚೆದೆಯ ವೀರರೆಲ್ಲರೂ ಮೆಚ್ಚಿಕೊಳ್ಳುತ್ತಾರೆ."

"ಉಗ್ರಗಾಮಿತ್ವ ಹಿಂದೂಸ್ಥಾನದ ಪರಿಸ್ಥಿತಿಗೆ ಹೊಂದಿಕೊಳ್ಳುವುದು ಸಾಧ್ಯವೇ ಇಲ್ಲ. ಈ ಬಡದೇಶಕ್ಕೆ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿ ವಿದೇಶಗಳ ಮೇಲೆ ಯುದ್ಧ ಹೂಡುವಂತಹ ಶಕ್ತಿ ಸಾಮರ್ಥ್ಯ ಎಲ್ಲಿಂದ ಬರಬೇಕು ? ದೇಶದ ಸ್ಥಿತಿಗತಿಯನ್ನು ಅರಿತುಕೊಳ್ಳದೆ ಯುದ್ಧ ಪ್ರಚೋದನೆಗೊಳಿಸಿದರೆ ಪ್ರಥಮ ಹೆಜ್ಜೆಯಲ್ಲೇ ಮುಗ್ಗರಿಸಬೇಕಾಗುತ್ತದೆ."

"ಸುಭಾಸರು ಮುಗ್ಗರಿಸಿಲ್ಲ ; ಮುಂದುವರಿಯುತಿದ್ದಾರೆ !"

"ದೇಶಕ್ಕಾಗಿ ಸರ್ವಸ್ವವನ್ನೂ ತ್ಯಾಗಮಾಡಿದ ಮ ಹಾ ನು ಭಾ ವ ಸುಭಾಸ್ ! ಅವರಂತಹ ಪುಣ್ಯಜೀವಿಗಳ ಪುಣ್ಯರಾಶಿಯೇ ಭಾರತವನ್ನು ಸಾರೋದ್ಧಾರವಾಗಿ ರಕ್ಷಿಸಿಕೊಂಡು ಬಂದಿದೆ. ಎಲ್ಲಾ ಸರಿಯೆ...ಬಹಳ ದುಡುಕು ಅದೇ ಕಷ್ಟ." ಎಂದ ನಾಣಯ್ಯ.

"ಸತ್ಯಾಗ್ರಹಕ್ಕಿಂತ ದುರಾಗ್ರಹ ಇಂಗ್ಲೀಷರಿಗೆ ಒಳ್ಳೆಯ ಪಾಠ ಕಲಿಸೀತು. ಆದರೆ ಅಷ್ಟು ಮುಂದೆ ಹೋಗಲು ನಮ್ಮವರಿಗೆ ಎದೆಗಾರಿಕೆ ಬೇಕಲ್ಲ ?" ಪೂವಿ ಪ್ರಶ್ನಿಸಿದಳು.

ಮುದ್ದಪ್ಪ ನಕ್ಕು ನುಡಿದ "ಎಲ್ಲಾ ನೀನೇ ಹೊತ್ತುಕೊಂಡಂತಿದೆ.

"ಹೊಣೆಗಾರಿಕೆ-ಬಾಧ್ಯತೆಗಳು ನಿಮಗೆ ಮಾತ್ರವೇ ಮೀಸಲಲ್ಲ ; ನಮಗೂ ಇವೆ !" ಮೂವರ ಮುಖದಲ್ಲೂ ಎಳೆ ನಗು ಮೂಡಿತು.

"ಓಹೋ ! ಬಹಳ ಮುಖ್ಯವಾದ ವಿಷಯ ಮರೆತಿದ್ದೆ! ಕಣ್ಣರಳಿಸಿದಳು ಪೂವಿ. ಆ ನೆನವರಿಕೆ ಅವಳನ್ನು ಅತ್ಯಂತ ಉತ್ಕಂಠಿತೆಯಾಗಿ ಮುಂದುವರಿಸಿತು ; ಭಾವೋದ್ವೇಗದಿಂದ ಮುಖಮಂಡಲ ನಸುರಂಗು ತಳೆದು ಅಕ್ಷರ ಅಕ್ಷರಗಳೂ ಊಹೆಗೂ ನಿಲುಕದಷ್ಟು ಲಘುವಾಗಿ ವಿಕಂಪಿಸಿದು

"ಲೀಲಳ ಕಥೆ ಕೇಳಿದಿರಾ ? ಬಹುಶಃ ನಿಮಗೆ ಗೊತ್ತಿರಲಾರದೇನೋ..." ಮಾತು ಮುಗಿಯುವುದರೊಳಗಾಗಿ ಭಾವಭರಿತ ನೋಟ ಇಬ್ಬರಿಂದಲೂ ಪ್ರತಿಕ್ರಿಯೆಯನ್ನು ಉತ್ಸುಕತೆಯಿಂದ ಪ್ರತೀಕ್ಷಿಸಿತು. ಆದರೆ ಅವರ ಕುತೂಹಲ ತುಂಬಿದ ಮುಖಭಾವಗಳಲ್ಲಿ "ಏನು ?" ಎಂಬ ಪ್ರಶ್ನಾರ್ಥಕ ಛಾಯೆ ವ್ಯಾಪಕವಾಗಿ ತುಂಬಿ ಹರಡಿತೇ ವಿನಾ ತುಟಿಗಳು ಬಿರಿಯಲಿಲ್ಲ. ಪೂವಿ ಒಂದೆರಡು ಕ್ಷಣ ನಿಟ್ಟಿಸಿ ನೋಡಿ ಅವರಿಗೆ ವಿಷಯ ತಿಳಿದಿಲ್ಲವೆಂಬುದನ್ನರಿತು ಏನೋ ಒಂದು ಬಗೆಯ ವಿಜಾತೀಯವಾದ ಧ್ವನಿಯಲ್ಲಿ ಮುಂದುವರಿದಳು "ಅವಳು ನಮ್ಮೊಂದಿಗೆ ಸೇರಿ ಚಳವಳಿಗಿಳಿದುದು ಇನ್ಸ್‌ಪೆಕ್ಟರ ಅಧಿಕಾರಕ್ಕೆ ಧಕ್ಕೆ ! ದರ್ಪಕ್ಕೆ ಕುಂದು ! ಅಂತಲೇ ಅವಳಿಗೆ ಬಹಳಷ್ಟು ಹೆದರಿಸಿ ಬೆದರಿಸಿ ನೋಡಿದ್ದಾರೆ ; ಅವಳು ಯಾವುದಕ್ಕೂ ಜಗ್ಗಲಿಲ್ಲ. ಹಾಗೆಂದು ಏನು ಮಾಡಿದರು ಗೊತ್ತೇ ? ಅವರ ಬಾಧ್ಯಸ್ಥರ ಮಗನೊಂದಿಗೆ ಹಿಂದೆಯೇ ಅವಳಿಗೆ ಮದುವೆ ನಿಶ್ಚಯವಾಗಿತ್ತು. ಅದನ್ನೇ ಕಾರ್ಯರೂಪಕ್ಕಿಳಿಸಿದರು ! ಹತ್ತಾರು ಮಂದಿ ಕೂಡಿಕೊಂಡು ಭಾವೀ ಅಳಿಯನನ್ನು ಕರೆಸಿ, ಕದ ಮುಚ್ಚಿಕೊಂಡು ಮನೆಯೊಳಗೆ ಧಾರಾಮುಹೂರ್ತ ನಡೆಸಿ ಅಂದೇ ಇಲ್ಲಿಂದ ಸಾಗ ಹಾಕಿದ್ದಾರೆ ! ಚಳವಳಿಕಾರರಿಗೆ-ನೆರೆಹೊರೆಯವರಿಗೆ ಸುಳಿವು ಸಹ ಸಿಕ್ಕದಂತೆ ಬಲಾತ್ಕಾರ ಮಾಘಸ್ನಾನ ಮಾಡಿಸಿದ್ದು ಎಂತಹ ಆಶ್ಚರ್ಯ ? ಅಂದಿಂದಿಗೂ ಅವಳು ಹೊರಗೆ ತಲೆ ಹಾಕದುದನ್ನು ನೋಡಿ ಕಾಹಿಲೆ ಬಿದ್ದಿರಬಹುದೇನೋ ಅಂದುಕೊಂಡಿದ್ದೆ....ಆದರೆ ಆದದ್ದು ಹೀಗೆ !"

"ನಿಜವಾಗಿಯೂ....?"

"ಅಥವಾ ತಮಾಷೆಯೆ ?"

"ಹೌದು....ಯಾರಿಗಾದರೂ ಹಾಗೆನಿಸುತ್ತೆ, ಅಲ್ಲವೇ ?"

"ಬಹಳ ಚೆನ್ನಾಗಿದೆ !" ಸ್ವಲ್ಪ ತಡೆದು ಗಂಭೀರಭಾವದಿಂದ ಮುಂದುವರಿದ ಮುದ್ದು "ಇವನು ಸಾಮಾನ್ಯನಲ್ಲ, ಬಹಳ ಕಿಲಾಡಿ !"

"ತನ್ನ ಅಧಿಕಾರ 'ಶಾಶ್ವತ' ಎಂದು ತಿಳಿದುಕೊಂಡಿದ್ದಾನೆ, ಮತ್ತೇನಿಲ್ಲ." ನಾಣಯ್ಯ ತುಟಿ ಕಚ್ಚಿದ.

"ನಿಶ್ಚಯ...ಅದರಿಂದಲೇ..."

"ಆಗಲಿ, ಲೀಲಾ ಮಣಿಯಬಾರದಿತ್ತು !" ಮುದ್ದು ಹುಬ್ಬೇರಿಸಿದ.

“ಮಣಿಯದಿದ್ದರೆ ಬೀದಿ ಪಾಲು !....ಈ ದೇಶದಲ್ಲಿ ಹೆಣ್ಣಿನ ಕತೆ ಏನಾಗುತ್ತೆ ಎಂಬುದು ಗೊತ್ತೇ ಇದೆಯಲ್ಲ ?” ಎಂದಳು ಪೂವಿ. ತುಟಿಗಳಲ್ಲಿ ಸಣ್ಣ ತಿರಸ್ಕಾರದ ನಗೆ ಮೂಡಿ ಮಾಯವಾಯಿತು.

“ಕಷ್ಟ....ಕಷ್ಟ !” ದನಿ ಎದೆಯಾಳದಿಂದ ಹರಿದುಬಂತು. ಮುದ್ದು ಮುಖ ಹಿಂಡಿದ.

“ವಾಸ್ತವ್ಯ.” ಎಂದು ಮಂಗಳ ಹಾಡಿದ ನಾಣಯ್ಯ.

....ಆದರೂ, ಕರ್ಮಯೋಗಿ ಏಕಾಂಗಿಯಾಗಿ ಮುಂದುವರಿಯುವುದು ಅನಿವಾರ್ಯ. ಕಠೋರ ಕಮನೀಯ ಕೋಲಾಹಲದಲ್ಲೂ, ನಿತಾಂತ ನಿಶ್ಶಬ್ದ ಸ್ಥಿತಿಯಲ್ಲೂ, ಶೃಖಂಲಾಬದ್ಧ ಜೀವನದಲ್ಲೂ ಯಾರ ಶ್ರೀ ಚರಣಗಳು ನಮ್ಮನ್ನು ಏಕನಿಷ್ಠ ಕರ್ಮಚಾರಿಯನ್ನಾಗಿ ಮಾಡುತ್ತವೆಯೋ ಆ ಸುಂದರ ಚರಣಗಳೇ ಎಲ್ಲಕ್ಕೂ ನೆರವು ನೀಡುತ್ತವೆ.

ಹಾ...!

ಹೃದಯ ಕುಂಡಲಿನಿ ಶಾಂತಿವಾರಿಧಿಯಿಂದ ತುಂಬಿ, ಉಕ್ಕೇರಿ ಬಂದು ಮುಖಭಾವದಲ್ಲಿ ತುಂತುರಾಗಿ ತೊಟ್ಟಿಕ್ಕಿತು ...ಗಂಭೀರಗಮನೆ ಪೂವಿ ಆಲೋಚನಾಮಗ್ನಳಾದಳು. ಗಿಡಮರಗಳ ಮೇಲೆ ಅಲ್ಲಲ್ಲಿ, ಆಗಾಗ ಹೊಮ್ಮುವ ತೇನೆಯ ಕೋಗಿಲೆ ನಾದಸಂಪತ್ತು ಕರ್ಣದೇಶಗಳನ್ನು ತುಂಬುತಿತ್ತು. ತೀವ್ರ ವಿಚಾರಮಗ್ನಳಾಗಿದ್ದರೂ ಆ ನಾದ ಮಾಧುರ್ಯವನ್ನೂ ಸವಿದಳು ಪೂವಿ.

ಸ್ವಲ್ಪ ಹೊತ್ತು ನಿರಾತಂಕವಾಗಿ ಕಳೆಯಿತು. ಅನಂತರ ನಾಣಯ್ಯ ಮೌನ ಮುರಿದ,

“ಜೀವನಬಂಧ ಉಚಿತಾನುಚಿತಗಳನ್ನು ಲಕ್ಷಿಸಲು ಅವಕಾಶ ಕೊಡುವುದೇ ಇಲ್ಲ, ಪೂವಿ !”

“ಸ್ತ್ರೀ ಜೀವನ ಮತ್ತು ಕರ್ತವ್ಯ, ಬೋನು ಮತ್ತು ಕೇಸರಿಗೆ ಹೋಲಿಸುವಂತಾದ್ದು. ಸ್ತ್ರೀ ಜೀವನಕ್ಕೆ ಶರಣಾದರೆ ಬೋನಿನ ಕೇಸರಿ. ಕರ್ತವ್ಯಕ್ಕೆ ಶರಣಾದರೆ ವನ್ಯ ಕೇಸರಿ.” ಮುದ್ದು ಉದ್ದೇಶಪೂರ್ವಕವಾಗಿ ನುಡಿಯನ್ನು ಹೊರಹಾಕಿದ. ಹಾಸ್ಯಭಂಗಿಯಲ್ಲಿ ಹುಬ್ಬುಗಳು ಏರಿ ಇಳಿದುವು.

ಪೂವಿ ಅರುಣಾಧರಗಳಲ್ಲಿ ತಿಳಿನಗೆ ಸೂಸಿ ತನ್ನ ದೃಢ ಅಭಿಪ್ರಾಯವನ್ನು ಚೆಲ್ಲಿಕೊಟ್ಟಳು “ಬೋನಿನ ಕೇಸರಿಯಾಗುವುದಕ್ಕಿಂತ ವನ್ಯ ಕೇಸರಿಯಾಗುವುದು ಲೇಸು.”

"ಹಾ...! ಹಾಗಾಗುವುದು ಸಾಧ್ಯವೇ ಇಲ್ಲ. ಹೆಣ್ಣಿನ ಹೃದಯ ಪಂಜರವಂತೂ ಖಾಲಿ ಇರುವುದು ಖಂಡಿತ ಶೋಭೆಯಲ್ಲ." ನಾಣಯ್ಯ ದನಿ ಗೂಡಿಸಿದ, ಮುಖಬಿಂಬದಲ್ಲಿ ಹಾಸ್ಯಮಂಜರಿ ನಲಿದಾಡಿತು.

ಒಡನೆ ಪೂವಿಯ ಪದ್ಮರಾಗ ವರ್ಣಿತ ಮುಖಬಿಂಬ ಲಜ್ಜಾಭಾವದಿಂದ ತುಂಬಿ ರಕ್ತರಂಜಿತವಾಗಿ ಹೊಮ್ಮಿದ ಅಪೂರ್ವ ಶೋಭೆ ದರ್ಶನೀಯ ವಾಯಿತು. ಆಗ ನಾಣಿ ಮಂದಹಾಸ ಬೀರಿ ಮೃದುಭಾವದಿಂದ ತನ್ನದೇ ಆದ ಶೈಲಿಯಲ್ಲಿ ಮುಂದುವರಿದ "ಅಷ್ಟೆ ಅಲ್ಲ ಪೂವಿ! ಬಂಧನರಹಿತವಾದೊಡನೆ ಮೃಗ ಪಕ್ಷಿಗಳು ಹಾರಿಹೋಗುತ್ತವೆ! ಒಮ್ಮೆ ತುಂಬಿಕೊಂಡ ಪಂಜರ ಎಂದೂ ಬರಿದಾಗದಂತೆ ನೋಡಿಕೊಳ್ಳಬೇಕು! ಒಂದುವೇಳೆ, ಈ ಮುದ್ದ ನಂತಹ ಮೃಗವಾದರಂತೂ...."

ಒಡನೆ ಪೂವಿಯ ಸ್ಮಯಮಾನ ವದನ ಸೌಂದರ್ಯ ಕರ್ಪೂರ ಗುಟಿಕೆ ಯಂತೆ ಜ್ವಲಂತವಾಯಿತು.

ಮುದ್ದು ಆನಂದದೊಡ್ಡೋಲಗದ ಅಧಿಪತಿಯಾದ. ಹೃದಯ ಸಂಪುಟದಲ್ಲಿ ರಾಗಮಯ ದೇವತೆಯ ಸಾಕ್ಷಾತ್ಕಾರವಾಯಿತು. ತನುಮನಗಳು ಅಪೂರ್ವವೂ ವಿನೂತನವೂ ಆದ ರಸಮಂಜರಿಯಲ್ಲಿ ಮುಳುಗಿ ಪುಳಕಿತವಾದುವು. ಪ್ರಫುಲ್ಲ ಪುಷ್ಪದಂತೆ ಅರಳಿದ ಮುಖಮಂಡಲ ಆನಂದಾಶ್ರುವಿನಿಂದ ಸಿಕ್ತವಾಯಿತು. ಆದರೂ ಅದನ್ನು ತೋರಗೊಡದಿರಲು ತನ್ನನ್ನು ತಾನು ಗಂಭೀರಗತಿಯಲ್ಲಿ ಹತೋಟಿಯಲ್ಲಿಟ್ಟುಕೊಂಡ. ಮುಖಮಂಡಲ ತನಗರಿಯದಂತೆಯೇ ನಸು ಗೆಂಪು ತಳೆದಿತ್ತು.

...ಮಾನವ ಶರೀರ ಕೇವಲ ದಂಡನೆಯನ್ನು ಭೋಗಿಸಲು ಜನ್ಮ ವೆತ್ತಿಲ್ಲ. ಈ ಜನ್ಮ ವಿಧಾತನ ಸರ್ವೋತ್ತಮ ಸೃಷ್ಟಿ, ಭಗವಂತನ ಪವಿತ್ರ ಮಂದಿರ ಸೃಷ್ಟಿ–ಸ್ಥಿತಿ–ಲಯಗಳು ಜೀವನದ ಪರಮ ಸತ್ಯ. ಯಾರೇ ಇರಲಿ, ಜೀವನದ ಅಂತರಾಳಕ್ಕಿಳಿಯದ ಹೊರತು ಉದಾತ್ತ ಧ್ಯೇಯವನ್ನು ಅರಿತು ಕೊಳ್ಳಲಾರ; ಕಷ್ಟನಷ್ಟಗಳನ್ನು ಭರಿಸಲಾರ....ಎಂದು ಅನುರಾಗಜನ್ಮ ಅಂತರ್ವಾಣಿ ಕೂಗಿ ಹೇಳಿತು.

ಆದರೆ....

೯

....ಏರಿದ ರವಿ ಇಳಿಮುಖನಾಗಿದ್ದ.

....ವಾತಾವರಣ ತಂಪು ತಳೆಯುತಿತ್ತು.

ಮನಸಿನ ರುದ್ಧ ಕಾರಾಗಾರಕ್ಕೆ ಅನಿರೀಕ್ಷಿತವಾಗಿ ಬಾಣದಂತೆ ಹೊಕ್ಕಿದ ವಿಚಾರ ದೀಪ್ತಿ ಎದೆಯಲ್ಲಿ ಅತೀವ ಗೊಂದಲವೆಬ್ಬಿಸಿ ನರನಾಡಿಗಳಲ್ಲಿ ಬೆಂಕಿಯು ಸ್ಫುರಿಯುಂತೆ ಹರಿದಾಡಿತು. ಪೂವಿ ತನ್ನನ್ನು ತಾನು ಹತೋಟಿಯಲ್ಲಿಟ್ಟು ಕೊಳ್ಳಲು ಪ್ರಯತ್ನಿಸಿದರೂ ಸಫಲಳಾಗಲಿಲ್ಲ. ಅಲಕ್ಷಿತ ರಾಗ ಸಂಪತ್ತಿ ಫಣಿಯಂತೆ ಹೆಡೆಯೆತ್ತಿ....ಮುಖಮಂಡಲ ಭಾವೋದ್ವೇಗದಿಂದ ರಕ್ತರಂಜಿತ ವಾಯಿತು. ಅತ್ಯಂತ ಪುಳಕಿತ ಮನಸ್ಥಿತಿಯಲ್ಲಿ ಹಿಂದಣ ಬಾಗಿಲಿಂದ ಹೊರಬಿದ್ದು ತನ್ನ ಗೃಹಾಭಿಮುಖವಾಗಿ ನಡೆದಿದ್ದಳು. ಮುದ್ದಪ್ಪನ ಉತ್ಸುಕ ದೃಷ್ಟಿಗೆ ಪುನಃ ಸುವರ್ಣ ಪುತ್ಥಳಿಯ ದರ್ಶನವಾಗಲಿಲ್ಲ. ಆದರೂ ಹೃದಯ ದೇಗುಲದಲ್ಲಿ ದೇವಿ ಪ್ರತಿಷ್ಠಿತಳಾಗಿದ್ದಳು. ಮಂತ್ರ ಮುಗ್ಧನಂತೆ ಸುಮ್ಮನೆ ಕುಳಿತ. ಮುಂದಿನ ಜೀವನವನ್ನು ಕುರಿತು ಮನಸ್ಸು ಮೆಲುಕು ಹಾಕುತಿತ್ತು. ಗೆಳೆಯನ ಮನೋದಧಿಯಲ್ಲಿ ಧುಮುಧುಮಿಸುತಿದ್ದ ವಿಚಾರಲಹರಿಯನ್ನು ಗಮನಿಸಿ ನಾಣಯ್ಯ ಸಂತುಷ್ಟನಾಗಿ ಅಂದ, "ಇಂದು ಇಲ್ಲೇ ಇದ್ದು ಬಿಡು ಮುದ್ದೂ, ನಾಳೆ ಊರಿಗೆ ಹೊರಡಬಹುದು." ದನಿ ಒತ್ತಾಯ ಪೂರ್ವಕವಾಗಿ ಹರಿದು ಬಂತು.

ಮುದ್ದಪ್ಪ ಎಷ್ಟೇ ಸಬೂಬುಗಳನ್ನು ಮುಂದಿಟ್ಟರೂ ಅವನು ಒಪ್ಪದೆ ತಡೆ ಹಿಡಿದುದರಿಂದ ಏನೋ ಒಂದು ರೀತಿಯಲ್ಲಿ ಸಮಾಧಾನವೇ ಮೂಡಿತು; ಮತ್ತೆ ಪ್ರತಿವಾದ ಹೂಡಲು ಮನಸ್ಸಾಗಲಿಲ್ಲ. ಮನೋವ್ಯಾಪ್ತವಾದ ವಿಚಾರಲಹರಿ ಹಗುರವಾದ ಉಸಿರನ್ನು ಮೂಡಿಸಿತು.

ಕಾಂಗ್ರೆಸ್ಸಿನ ಚಟುವಟಿಕೆಗಳಿಗೆ ಸಧ್ಯಕ್ಕೊಂದು ತಡೆ ಬಿದ್ದುದರಿಂದ ಅನುದಿನದ ಕಾರ್ಯಕ್ರಮಗಳಿಗೆ ವಿರಾಮ....ಸರಕಾರ ಶಾಂತಿವೀರರನ್ನು ಬಂಧ ಮುಕ್ತಗೊಳಿಸಿದರೂ ಎಲ್ಲಾ ಕಡೆಯೂ ಸೂಕ್ಷ್ಮವಾಗಿ ಕಣ್ಣಿಟ್ಟಿದೆ ಎಂಬುದನ್ನು

ಎಲ್ಲರೂ ಬಲ್ಲರು. ಸಭ್ಯತೆಯನ್ನು ವಿಚಾರಬಾರದೆಂಬ ವಿಧೇಯಕದಲ್ಲಿ ವಿನೂತನ ಕಾರ್ಯರಂಗ ಆಂತರಿಕವಾಗಿ ರೂಪುಗೊಳ್ಳುತಿತ್ತು. ಇದುವರೆಗೆ ಸಾರ್ವಜನಿಕರಿಗೆ ತೆರವಾಗಿದ್ದ 'ರೀಡಿಂಗ್ ರೂಮ್' ಕದ ಮುಚ್ಚಿಕೊಂಡು ವಿಶ್ರಾಂತಿ ಹೊಂದುತಿತ್ತು. ಕಸಕಡ್ಡಿಗಳು ತೊಲಗಿ ಕೊಠಡಿ ಮೈಕೊಡವಿ ಮಡಿಯುಟ್ಟಿತ್ತು. ಗೆಳೆಯರಿಬ್ಬರೂ ಅಲ್ಲೇ ಮಂಡಿಸಿದರು. ಬಹಳ ಮಟ್ಟಿಗೆ ಹೊತ್ತೆಲ್ಲಾ ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಗಳು, ಪ್ರಜಾಪ್ರಭುತ್ವದಲ್ಲಿ ಪ್ರಜಾಸತ್ತೆಯ ಶ್ರೇಯಸ್ಸು, ಪ್ರಗತಿಪರ ರಾಷ್ಟ್ರಗಳಲ್ಲಿ ಪ್ರಜೆಗಳಿಗಿರುವ ಸೌಲಭ್ಯ ಹಕ್ಕು ಬಾಧ್ಯತೆಗಳು, ವಿದ್ಯಾಭ್ಯಾಸ, ವೈಜ್ಞಾನಿಕ ಪ್ರಗತಿ ಮುಂತಾದ ವಿಚಾರಗಳನ್ನು ಚರ್ಚಿಸುವುದರಲ್ಲಿ ಕಳೆಯಿತು. ಜೀವನ ಜೀವನೋದ್ದೇಶಗಳೂ ಅದರಿಂದ ಹೊರತಾಗಲಿಲ್ಲ ; ಎಲ್ಲಾ ವಿಚಾರ ತರಂಗಗಳು ಅಲೆಯಲೆಯಾಗಿದ್ದು ಸರಿದು ಹೋದುವು. ಆತ್ಮೀಯ ಗೆಳೆಯರ ಸನ್ನಿಧಿಯಲ್ಲಿ ಹೊತ್ತು ಸಾನಂದದಿಂದ ಉರುಳಿತು.

ಅನಂತರ ದಿನಚರಿ ವ್ಯವಹಾರ, ತದನಂತರ ಹಳೆಯ ಗೆಳೆಯರ ಭೇಟಿ ಮುಗಿಸುವಷ್ಟರಲ್ಲಿ ದಿನಮಣಿ ಇಳಿಮುಖನಾಗಿದ್ದ. ಅದ್ಭುತ ಗೆಳೆತನ ಮುಂದಿನ ಕಾರ್ಯರಂಗಕ್ಕೆ ರೂಪು–ಹುರುಪು ಎರಡನ್ನೂ ನೀಡಿತು. ಮುದ್ದಪ್ಪ ಅತ್ಯಂತ ಉತ್ಸುಕನಾದ–ನಿವಾತ ನಿಷ್ಕಂಪ ಪ್ರದೀಪವನ್ನು ನಾಚಿಸುವಂತೆ. ತಾನು ಬಾಗಂಡಕ್ಕೆ ನೇರವಾಗಿ ಹೋಗದೆ ಇಲ್ಲಿ ಉಳಿದುದು ಒಳ್ಳೆಯದಾಯಿತು ಎಂದುಕೊಂಡ. ಹೃದಯ ಸಂಪುಟ ಅಪೂರ್ವವೂ, ಆಮೋದಕರವೂ ಆದ ಸಾನುರಾಗದಿಂದ ತುಂಬಿಹೋಯಿತು. ಸಹಜ ಅನುಭಾವ ತರಂಗಿಣಿಯ ನೃತ್ಯ ಭಂಗಿಯ ಕಿಂಕಿಣಿನಾದ ರೋಮರೋಮಗಳಲ್ಲೂ ಝಂಕೃತವಾಗುತಿತ್ತು. ಮುದ್ದಪ್ಪ ಅಂತರ್ನಿಹಿತ ವಿಚಾರಗತ್ತರಿಯಲ್ಲಿ ಸೂಕ್ಷ್ಮವಾಗಿ ಸಿಕ್ಕಿಕೊಂಡ.

ಜಗತ್ತು ವಸಂತ ವೈಖರಿಯಲ್ಲಿ ಮೈಮರೆತಿತ್ತು. ಅಪರಾಂಬುಧೀ ತೀರದಿಂದ ತೀಡಿ ಬರುವ ತಂಗಾಳಿ ಸುಯ್ಯುತ್ತ ಪ್ರಾಂತದಿಂದ ಪ್ರಾಂತಕ್ಕೆ ಪಯಣಿಸುತಿತ್ತು...

ಇಬ್ಬರೂ ಹೊರ ಹೋಗಲು ಹೊರಟಾಗ ಒಂದು ಲೋಟ ಸಿಹಿ ನೀರನ್ನು ಕುಡಿದು, ಟ್ರೇಯಲ್ಲಿ ಲೋಟವನ್ನಿಟ್ಟು ಮುದ್ದಪ್ಪ ಅಂದ, "ಕಷ್ಟಪಟ್ಟು ದುಡಿಯುವುದರಲ್ಲೂ, ವಿದ್ಯಾನೈಪುಣ್ಯತೆಯಿಂದ ದೇಶವನ್ನು ಕಟ್ಟುವುದರಲ್ಲೂ

ಚಾಕಚಕ್ಯತಾತಂತ್ರದಿಂದ ಪರದೇಶೀಯರನ್ನು ಶೃಂಖಲಾ ಬದ್ಧರನ್ನಾಗಿ ಮಾಡುವುದರಲ್ಲೂ ಇಂಗ್ಲಿಷರಿಗೆ ಸಾಟಿಯಾದವರಿಲ್ಲ. ಅಂತಹವರ ತಪ್ಪುಗಳನ್ನು ಎತ್ತಿತೋರಿಸಿ ಮಹಾಸಿದ್ಧಿಯನ್ನು ಪಡೆಯುತ್ತೇವೆ ಎಂಬುದರಲ್ಲೂ ಸಹ ವಿಶೇಷವಿದೆ. ನಾವಿದರಲ್ಲಿ ಗೆದ್ದೆವೆಂದರೆ ಜಗತ್ತಿನಲ್ಲಿ ಅಸಮಾನ್ಯತೆಯನ್ನು ಪಡೆಯುತ್ತೇವೆ!" ಮುಖಮಂಡಲದಲ್ಲಿ ಅಮಿತಾನಂದ ಪ್ರಭೆ ಸ್ವಚ್ಛಂದವಾಗಿ ಹೊಮ್ಮಿ ಕಾಂತಿಯುತ ನೇತ್ರಗಳು ನಿಶ್ಚಲವಾಗಿ ಬೆಳಗಿದುವು.

ಯಾವ ಯುಗದಲ್ಲೇ ಆಗಲಿ, ಯಾವ ದೇಶದಲ್ಲೇ ಆಗಲಿ, 'ಸ್ವಾತಂತ್ರ್ಯ' ವನ್ನು ಬಯಸುವುದು ಜಾಗೃತಿಯ ಲಕ್ಷಣ. ಕೇವಲ ಪ್ರಾಣಿವರ್ಗವೇ ಸ್ವಾತಂತ್ರ್ಯಕ್ಕಾಗಿ ಘೀಳಿಡುವಾಗ ಮಾನವವರ್ಗ ಎಷ್ಟುಕಾಲ ಸುಮ್ಮನಿದ್ದೀತು ?"

"ಅದು ಇಂಗ್ಲಿಷರಿಗೆ ಅರ್ಥವಾಗುವುದಿಲ್ಲವಲ್ಲಾ, ಹೇಳು ?"

"ಅವರಲ್ಲಿ ಮನುಷ್ಯತ್ವವಿದ್ದರಷ್ಟೆ ?"

"ಇದೀಗ ಸರಿ ..."

ಇಬ್ಬರ ತುಟಿಗಳೂ ಸುಹಾಸವನ್ನು ಚೆಲ್ಲಿದುವು.

ಕಿಟಕಿಯಲ್ಲಿ ಕುಳಿತು ಗುಬ್ಬಿ ಒಳಗಡೆ ಬರಲು ಹೊಂಚು ಹಾಕುತಿತ್ತು. ಸೂರಿನಲ್ಲಿದ್ದ ಅದರ ಗೂಡಿನಲ್ಲಿ ಮರಿಗಳು 'ಚೀಪೀ' ಗುಟ್ಟುತಿದ್ದುವು.

ನೀಲಿಮಾಚ್ಛಾದ ಸರೋವರದೋಪಾದಿಯಲ್ಲಿ ಅಂಬರದ ತಡಿ ದಿಗಂತದಿಂದ ದಿಗಂತದವರೆಗೆ ಹಬ್ಬಿ, ಮುಗಿಲ ಶಿಶುಗಳು ರಾಜಹಂಸಗಳಂತೆ ತೇಲಿ ನಲಿಯುತ್ತಿದ್ದುವು. ಸಂಧ್ಯಾ ಸೌಂದರ್ಯಧಾರೆಯನ್ನು ಚಿಮುಕಿಸಿ ಮರೀಚಿಮಾಲಿಯು ಅಸ್ತಮಿಸಿದ್ದ. ಅತೀತಯುಗಧರ್ಮದ ಮಾಯಕತೆಯಲ್ಲಿ ಸಿಲುಕಿ ಮಂದ ಮಂದ ಪವನ ಬಳಲಿದ್ದನೇನೋ....ಮೆಲ್ಲಮೆಲ್ಲನೆ ಹಿೀಡುತಿದ್ದಾನೆ.

ಮನೆಯ ಮೆಟ್ಟಿಲಿಳಿಯುವ ಮುನ್ನ ನಾಣಿ ಅಂದ,

"ನಡೆ, ಕಾಲು ದಣಿಯುವಷ್ಟು ಸುತ್ತಾಡಿ ಬರೋಣ. ಎಲ್ಲಿಗೆ ಎಂದು ಮಾತ್ರ ಕೇಳಬೇಡ. ನಾನು ಕರೆದೊಯ್ದಲ್ಲಿಗೆ ಬರಬೇಕು—ತಿಳಿಯಿತೇ ?"

"ಹೇಗೂ ಊರಿಗೆ ಹೋಗದಂತೆ ತಡೆ ಹಾಕಿದ್ದಿ. ಇನ್ನು ನೀನು ಹೇಳಿದಂತೆ ಕೇಳಲೇಬೇಕಲ್ಲ ?"

"ಹೌದಪ್ಪಾ, ಇಂದು ನಾನು ಗುರು....ನೀನು ಶಿಷ್ಯ"

ಮುದ್ದಪ್ಪ ಮಾತಾಡದೆ ಮುಗುಳು ನಕ್ಕ. ಟಾರು ಬಳಿದ ಕರಿಯ ದಾರಿಯಲ್ಲಿ ಇಬ್ಬರೂ ನಡೆದರು. ಎಡಬಲಗಳ ಸಾಲು ಮನೆಗಳಲ್ಲಿ ಕಂಡು ಬರುವ ಹಳತು-ಹೊಸತುಗಳ ಪ್ರಸ್ಪಂದ-ವಿಸ್ಪಂದ ಅಜ್ಞಾತ ಶಿಲ್ಪಿಗಳ ವೈವಿಧ್ಯ ಮಯ ಕಲಾನೈಪುಣ್ಯತೆಯನ್ನು ಸ್ವಚ್ಛಂದವಾಗಿ ಪ್ರದರ್ಶಿಸಿದಂತಿತ್ತು. ಕೊಡಗಿನ ವಿಶಿಷ್ಟ ಉಡುಗೆಯುಟ್ಟ ಗೃಹಿಣಿಯರು ಮನೆಮನೆಯ ಹೊರಾಂಗಣ ದಲ್ಲಿ ಮಕ್ಕಳೊಂದಿಗೆ ಓಡಾಡುತ್ತಿರುವುದು ಕಾಣಿಸುತಿತ್ತು. ಕಾಂಗ್ರೆಸ್ಸಿನ ಆಂದೋಳನದಿಂದ ಕಲಕಿತ ವಾತಾವರಣ ಈಗೀಗ ಶಾಂತಿಯುತವಾಗಿ ಜನ ಜೀವನದಲ್ಲಿ ನೆಮ್ಮದಿ ಕಾಣಿಸುತಿತ್ತು. ಒಂದೆರಡು ಫರ್ಲಾಂಗು ಕಳೆದಮೇಲೆ ಬಲಕ್ಕೆ ತಿರುಗಿದ ನಾಣಯ್ಯ. ರಸ್ತೆ ಕಿರಿದಾಗಿದ್ದರೂ ಎಡಬಲಗಳಲ್ಲಿ ದೊಡ್ಡ ದೊಡ್ಡ ಮನೆಗಳಿದ್ದುವು. ಅಲ್ಲಿಂದ ಮುಂದೆ ಸ್ವಲ್ಪದೂರ ಸಾಗಿದಮೇಲೆ ಸುತ್ತಮುತ್ತ ಮರಗಳಿಂದ ತುಂಬಿದ ಮನೆಯ ದೊಡ್ಡ ಆವರಣ ಕಣ್ಣಿಗೆಬಿತ್ತು. ಹಸುರು ಹೊಮ್ಮುವ ಹುಲ್ಲಿನಂಚಿನ ಪಾತಿಯಲ್ಲಿ ಪುಷ್ಪಭರಿತ ಗಿಡಗಳು ತಲೆ ದೂಗುತ್ತಿದ್ದುವು. ಮಧ್ಯೆ ಶೋಭಿತ ಹೆಂಚಿನ ಮನೆಯು ಚಿಕ್ಕದಾದರೂ ಸುರುಚಿ ಪೂರ್ಣವಾಗಿತ್ತು, ಹೊಸಬರ ಜಾಡು ಹಿಡಿದು ಒಳಗಿನಿಂದ ನಾಯಿಗಳು ಧಾವಿಸಿ ಬಂದುವು. ನಾಣಯ್ಯ ಗದರಿಸಿದ. ಆದರೂ ಅವು ಒಟ್ಟುಗೂಡಿ ಬೊಗಳುತ್ತಲೇ ಇದ್ದುವು. ಇಬ್ಬರೂ ಜಗಲಿ ಹತ್ತಿದರು. ಗದ್ದಲವನ್ನು ಕೇಳಿ ಸುನೀಲವಸನೆ ಪೂವಿ ಹೊರಬಂದಳು. ಅನಿರೀಕ್ಷಿತವಾಗಿ ಆದ ಸಂದರ್ಶನ ಕಪೋಲಪಾಲಿಯಲ್ಲಿ ವಿಚಿತ್ರ ದೀಪ್ತಿಯನ್ನು ಮೂಡಿಸಿತು. ಚೆಂದುಟಿಗಳ ಮೇಲೆ ಮೂಡಿದ ಎಳೆನಗು ಅನುಪಮ ಸ್ವಾಗತ ಬಯಸಿತು.

"ಬನ್ನಿ...ಒಳಗೆ."

"ನೋಡು ನಿನಗಾಗಿಯೇ ಕರೆತಂದೆ," ನಾಣಯ್ಯ ಹುಬ್ಬೇರಿಸಿದ.

ಪೂವಿಯ ನೀಲೋತ್ಪಲಪ್ರದ ನೇತ್ರಗಳು ವಿನೂತನ ಕಾಂತಿಯಿಂದ ಬೆಳಗಿದುವು. ಆದರೂ ಮರುಕ್ಷಣದಲ್ಲಿ ಅವಳು ಒಳಗಡೆ ಜಾರಿಕೊಂಡಾಗಿತ್ತು. ಮುದ್ದಪ್ಪ ಅವಳ ಮುಖದ ಮೇಲಿನ ಲಜ್ಜೆಯ ಶೋಭೆಯನ್ನು ಅತ್ಯಾನಂದ ದಿಂದ ಸವಿದ. ಇದುವರೆಗೂ ಅದು ಪೂವಿಯ ಮನೆಯೆಂಬುದು ತಿಳಿದಿರಲಿಲ್ಲ. ಅಚ್ಚರಿಯಿಂದ ನಿಟ್ಟಿಸುತ್ತಲೂ ನಾಣಯ್ಯ ಸಸ್ನೇಹದಿಂದ ನುಡಿದ "ಇದೇ

ನಮ್ಮ ಒಟ್ಟು ಕುಟುಂಬದ ಮನೆ. ನನ್ನ ಉದ್ಯೋಗಕ್ಕನುಗುಣವಾಗಿ ನನ್ನ ನಿವಾಸವನ್ನು ಕಳೆದ ವರ್ಷ ಇಲ್ಲಿಂದ ಬದಲಿಸಿಕೊಂಡೆ.

"ಓ .. ಹಾಗೋ ? ನಾನು ಈ ಕಡೆ ಬಂದಿರಲಿಲ್ಲ."

ಇಬ್ಬರೂ ಕುಳಿತುಕೊಂಡರು.

ವಾತಾವರಣ ಅದ್ಭುತ ಶಾಂತಿಯಿಂದ ಪ್ಲಾವಿತಗೊಂಡಿತ್ತು. ನಂಜಪ್ಪ ಮನೆಯಲ್ಲಿರಲಿಲ್ಲ. ನಾಯಿಗಳು ಬೊಗಳುವುದನ್ನು ನಿಲ್ಲಿಸಿ ಅಲ್ಲಲ್ಲೇ ಮೈ ಮುದುಡಿ ಕುಳಿತುಕೊಂಡುವು- ಯಾವುದೋ ಭಾವನಾಲೋಕದಲ್ಲಿ ಮುಳು ಗೆದ್ದು ನುಡಿದ ನಾಣಯ್ಯ.

"ಇಲ್ಲಿಂದ ಸ್ವಲ್ಪ ಆಚೆ....ಈ ಮನೆಯ ಅಪರ ಪ್ರಾಂತದಲ್ಲಿ ನದಿ ಹರಿಯುತ್ತದೆ. ಇಲ್ಲಿ ಚಿಕ್ಕಂದಿನಲ್ಲಿ ನಾವಾಡಿದ ಆಟಪಾಟಗಳಿಗೆ ಇತಿಮಿತಿಯೇ ಇಲ್ಲ. ಕೈಕಾಲು ಮುರಿದುಕೊಳ್ಳದೆ ಉಳಿದಿರುವುದೂ ಸಹ ವಿಶೇಷವೇ !"

ಇಬ್ಬರ ತುಟಿಗಳಲ್ಲೂ ಸರಳ ಸ್ನಿಗ್ಧ ಹಾಸ ನಲಿದಾಡಿತು.

"ನಮಗೆ ಅಷ್ಟಕ್ಕೆ ಅವಕಾಶವೇ ಇರಲಿಲ್ಲ." ಎಂದ ಮುದ್ದಪ್ಪ.

"ಬಿಡು ...ನಮಗೆ ಕೇಳುವವರೇ ಇರಲಿಲ್ಲ. ಪಾಪ, ನಮ್ಮ ತಾಯಿಗೆ ಅದೆಷ್ಟು ಕಷ್ಟವಾಗಿತ್ತೋ."

"ಈಗ ಜ್ಞಾಪಿಸಿಕೊಂಡೇನು ಪ್ರಯೋಜನ ?"

ಇಬ್ಬರ ಮುಖದಲ್ಲೂ ಪುನಃ ಎಳೆನಗು ನಲಿದಾಡಿತು.

"ನಮ್ಮ ತಾಯಿ ಕಳೆದ ವರ್ಷ ಸ್ವರ್ಗಸ್ಥರಾದರು. ತಂದೆ ಎಳೆಯ ವಯಸ್ಸಿನಲ್ಲಿಯೇ ತೀರಿಕೊಂಡಿದ್ದರು. ಅನಂತರ ತೋಟದ ಉಸ್ತುವಾರಿ ತಾಯಿಯವರದೇ. ಅವರ ಕಾಲದಲ್ಲಿ ಚೆನ್ನಾಗಿಯೇ ನಡೆಯುತಿತ್ತು. ಅಣ್ಣ ಕನ್ನಡಕದ ಅಂಗಡಿ ತೆರೆದುದು ತಿಮ್ಮಯ್ಯನಿಗಾಗಿ. ಈಗ ಅದು ತಲೆಗೆ ಸುತ್ತಿಕೊಂಡಿದೆ. ಅವರು ಅಲ್ಲಿಗೂ ಇಲ್ಲಿಗೂ ಓಡಾಡಿಕೊಂಡಿದ್ದಾರೆ."

"ನಾವೊಂದು ಬಯಸಿದರೆ ವಿಧಿ ಇನ್ನೊಂದು ಬಯಸುತ್ತದೆ."

"ಜಗತ್ತೇ ಹಾಗೆ." ಸ್ವಲ್ಪ ಹೊತ್ತು ಗಂಭೀರವಾಗಿ ಕಳೆಯಿತು.

ಈ ಸ್ಥಿತಿಗೆ ನಮ್ಮನ್ನು ತಂದವರು ತಾಯಿಯೇ. ಅವರು ಜೀವನದಲ್ಲಿ ತುಂಬ ಕಷ್ಟನಷ್ಟಗಳನ್ನು ಅನುಭವಿಸಿದ್ದಾರೆ...."

ಮಾತು ಮುಗಿಯುವುದರೊಳಗಾಗಿ ಗೃಹಿಣಿ ಹೊರ ಬಂದಳು. ಆಕೆಯ ಕದಪುಗಳಲ್ಲಿ ಹೊಂಬಣ್ಣ ಹೊಮ್ಮುತಿತ್ತು. ಅವಳನ್ನು ನೋಡುತ್ತಲೂ ಮುದ್ದಪ್ಪ ಎದ್ದು ಕರಗಳನ್ನು ಜೋಡಿಸಿದ. ಮಗಳು ತಾಯಿಯ ಪ್ರತೀಕ ಎಂಬುದನ್ನು ಮನಸ್ಸು ಆ ಕ್ಷಣ ಗ್ರಹಿಸಿತು. ಸ್ವಾಮಿನಿ ಅತಿಥಿಗಳ ಕ್ಷೇಮ ಸಮಾಚಾರವನ್ನು ವಿಚಾರಿಸಿಕೊಂಡಳು. ಜೊತೆಗೆ ಹಾಲು ಹಣ್ಣುಗಳ ನೈವೇದ್ಯವೂ ನಡೆಯಿತು. ಉಪಚಾರವೆಲ್ಲ ತಾಯಿಯದೇ. ಕುತೂಹಲ ತೃಷಿತ ಲೋಚನಗಳಿಗೆ ಮತ್ತೆ ಪೂವಿಯ ದರ್ಶನವಾಗಲಿಲ್ಲ. ರಾತ್ರಿ ಅಲ್ಲೇ ತಂಗಲು ಸ್ವಾಮಿನಿ ಒತ್ತಾಯ ಪಡಿಸಿದಳು. ಆದರೆ ಮನೆಯಲ್ಲಿ ಹೇಳಿ ಬಂದಿಲ್ಲವೆಂದು ಹೊರಟ ನಾಣಯ್ಯ. ಇಬ್ಬರೂ ಮೆಟ್ಟಲಿಳಿದಾಗ ದಿನಾಂತ ಕಾಲೀನ ಶ್ರೀಹೀನ ಕಾಳಿಕೆ ಇಳೆಯ ಮೇಲೆ ಕರಿಯ ಸೆರಗನ್ನು ಹೊದಿಸು ತಿದ್ದಳು. ನಿರಂತರ ವಿಗಲಿತ ಪುಷ್ಪರೇಣು ಮತ್ತು ದಳಗಳಿಂದ ಅಂಗಳವೆಲ್ಲ ಬಣ್ಣದ ರಂಗೋಲಿ ಇಟ್ಟಂತಾಗಿತ್ತು. ಮುಸುಕು ಬೆಳಕಿನ ಸಾಮ್ರಾಜ್ಯದಲ್ಲಿ ಇಬ್ಬರೂ ಕೈಕೈ ಹಿಡಿದು ಹೆಜ್ಜೆ ಹಾಕಿದರು.

ಕ್ರಮಕ್ರಮೇಣ ಕರ್ಮವೀಥಿಯಲ್ಲಿ ಆತ್ಮೀಯ ಜೀವಗಳೊಂದಾಗಿ ಎರಡು ಮನೆತನದ ಸ್ನೇಹ ಹೆಪ್ಪುಗಟ್ಟಿ ಪೂವಿ ಬಾಗಂಡ ಮನೆತನದ ಸೊಸೆಯಾಗಿ ಮುದ್ದಪ್ಪನ ಹೃದಯದೇಗುಲದ ಹೆಬ್ಬಾಗಿಲು ತೆರೆಸಿದಳು. ಆದರೆ ಎಲ್ಲಕ್ಕೂ ಆರ್ಥಿಕ ಮುಗ್ಗಟ್ಟು ಮುಳ್ಳು ಬೇಲಿಯಂತೆ ನಿಂತಿತ್ತು. ಅದನ್ನು ಹರಿಹಾಯದ ಹೊರತು ನೆಮ್ಮದಿಯನ್ನು ಕಾಣುವಂತಿಲ್ಲ. ತಂದೆ ಯೊಂದಿಗೆ ಮುದ್ದಪ್ಪ ಕಾಫಿ ಏಲಕ್ಕಿಯ ವ್ಯಾಪಾರ ಕ್ಷೇತ್ರಕ್ಕಿಳಿದ. ವ್ಯಾಪಾರ ಅಲ್ಪ ಪ್ರಮಾಣದ್ದಾದುದರಿಂದ ಉತ್ಪನ್ನವೂ ಅಲ್ಪವೇ. ಸಂಸಾರ ಬೆಳೆಯುತ್ತಿರುವುದರಿಂದ 'ಮುಂದೇನು ?' ಎಂಬ ಪ್ರಶ್ನೆ ಬೃಹ ದಾಕಾರವಾಗಿ ಉದ್ಭವಿಸಿತು. ಕಾರಿಯಪ್ಪ ಮನನೊಂದು ದಿನಕ್ಕೊಮ್ಮೆ ಯಾದರೂ "ಓದದೆ ಭವಿಷ್ಯವನ್ನು ಹಾಳುಮಾಡಿಕೊಂಡಿರಿ." ಎಂದು ಅನ್ನುವ. ಗದ್ದೆ ತೋಟದ ಕೆಲಸವನ್ನು ಮಾದು ಕೈಕೊಂಡಿದ್ದುದರಿಂದ ಕಾರಿಯಪ್ಪ ವ್ಯಾಪಾರದ ನಿಮಿತ್ತ ಹೆಚ್ಚಾಗಿ ಹೊರಗಡೆಯೇ ಉಳಿಯುತಿದ್ದ. ಗೃಹಸ್ಥನಾದ ಮುದ್ದಪ್ಪ ಜೀವನಕ್ಕೊಂದು ಹೊಸದಾರಿಯನ್ನು ಕಂಡು ಕೊಳ್ಳಲೇ ಬೇಕಾಯಿತು; ಯೋಚಿಸಿ ಯೋಚಿಸಿ ಮಿಲಿಟರಿಗೆ ಸೇರಲು

ನಿರ್ಧರಿಸಿದ. ಮಗನಲ್ಲಿ ವ್ಯಾಪಾರ ನೈಪುಣ್ಯತೆ ಇರಲಿಲ್ಲವಾದುದರಿಂದ 'ಸೇರಿಕೊ' ಎಂದ ಕಾರಿಯುಪ್ಪ. ಮುದ್ದಪ್ಪ ಉತ್ಸುಕನಾದ. ಮಧುಮತ್ತ ಭ್ರಮರ ಪುಷ್ಪಸೌರಭಯುಕ್ತ ವಾತಾವರ್ಣವನ್ನು ಕಂಡಂತಾಯಿತು ಆದರೆ ಪೂವಿಯ ರೀತಿಯೇ ಬೇರೆ. ಏನೋ ಒಂದು ಬಗೆಯಲ್ಲಿ ಆವಿಷ್ಟಳಂತೆ, ಅಭಿಭೂತಳಂತೆ ಉದ್ಭ್ರಾಂತತೆಯಿಂದ ಕೂಡಿದರೂ ಸಮಯೋಚಿತವಾಗಿ ಶಾಂತ ಮಹಾ ಸಾಗರದಂತೆ ನಿಶ್ಚಲಳಾದಳು. ತನ್ನೆಲ್ಲಾ ತಡೆಗಟ್ಟೆಯನ್ನು ತಳ್ಳಿಹಾಕಿ ಒಮ್ಮೊಮ್ಮೆ ಅಶ್ರುಬಿಂದು ಮೊಳೆಯುತಿದ್ದುವು. ಕಾವೇರಿ ಮತ್ತು ಗಂಗಮ್ಮ ಪರಿಸ್ಥಿತಿಯ ಒತ್ತಡಕ್ಕೆ ಮಣಿದರೂ ಒಳಗಿಂದೊಳಗೇ ಕೊರಗುತಿದ್ದರು.

ವಾತಾವರಣ ಸುಖದುಃಖಗಳಿಂದ ತುಂಬಿ ಹೋಯಿತು.

ಎಲ್ಲಾ ಅಡೆತಡೆಗಳನ್ನು ತಳ್ಳಿಹಾಕಿ ಹೊರಡುವ ದಿನ ಬಳಿಸಾರಿ ಬಂತು.

ಮುದ್ದಪ್ಪ ಪೂವಿಯರು ಸಾರ್ವಜನಿಕ ಕ್ಷೇತ್ರದಿಂದ ಒಮ್ಮಿಂದೊಮ್ಮೆಲೇ ಅದೃಶ್ಯರಾಗುವುದು ಗೆಳೆಯ ಮಂಡಲಿಗೆ ಅಸಮಾಧಾನ ಮೂಡಿಸಿ ಸುತ್ತಮುತ್ತ ಆಕ್ಷೇಪಣೆಗಳ ಸುರಿಮಳೆ ಹರಿಯುತ್ತಲೂ ಅವರಿಗೆಲ್ಲಾ ಮುದ್ದಪ್ಪ ಒಂದೇ ಉತ್ತರ ನೀಡಿದ.

"ಈಗ ಹೇಗೂ ಅಸಹಕಾರ ಚಳವಳಿಯನ್ನು ಹಿಂತೆಗೆದುಕೊಂಡಾಗಿದೆ. ಮುಂದೆ ದೇಶದಲ್ಲಿ ರಾಷ್ಟ್ರೀಯ ಸರಕಾರವೇರ್ಪಟ್ಟರೂ ಏರ್ಪಡಬಹುದು. ಕೈಗೆ ಕೆಲಸವಿಲ್ಲದೆ ಕಾಲಹರಣ ಮಾಡುವುದೆಂದರೆ ತುಂಬ ಕಷ್ಟ. ಜೀವನಕ್ಕೆ ಕಾಲಿಟ್ಟಮೇಲೆ ಉದ್ಯೋಗವಿಲ್ಲದೆ ಎಷ್ಟು ದಿನ ಇರುವುದಕ್ಕಾಗುತ್ತೆ ?"

ಕಂಠಸ್ವರ ವಿಜಾತೀಯವಾಗಿದ್ದುದರಿಂದ ಪ್ರಸ್ತಾಪ ಅಲ್ಲಿಗೆ ಕೊನೆಗೊಂಡಿತು.

ಕಳೆದ ಎರಡು ಮೂರು ದಿನಗಳಿಂದ ಮುದ್ದಪ್ಪ—ಪೂವಿಯರಿಗೆ ತಮ್ಮ ಬಂಧು ಬಳಗದವರಿಗೂ ಸವಿಾಪವರ್ತಿಗಳಿಗೂ ಹೇಳಿ ಬರುವುದರಲ್ಲಿ ಕಳೆಯಿತು. ಗಂಗಮ್ಮನ ತಮ್ಮ ಚಂಗಪ್ಪ ದೆಹಲಿಗೆ ಹೋಗಿದ್ದುದರಿಂದ ನಾಪೋಕ್ಲಿಗೆ ಹೋಗಿ ಬರುವ ಯೋಚನೆ ಹಾಗೇ ಉಳಿಯಿತು. ಸಾಮಾನನ್ನು ಹೊಂದಿಸಿಕೊಂಡನಂತರ ಮಾದು ಉತ್ಸಾಹದಿಂದ ಅಂದ,

"ಬೇಸಿಗೆಯಲ್ಲಿ ಬೆಳೆಕೊಯ್ದನಂತರ ಒಂದೆರಡು ತಿಂಗಳು ಶಾದೀಪುರದಲ್ಲಿ ಆರಾಮವಾಗಿರುವಂತೆ ಬರುವೆ."

ಮುದ್ದಪ್ಪನ ಮುಗುಳು ನಗೆ ಸ್ವಾಗತ ನೀಡಿತು.

ಪೂವಿ ಮನದಲ್ಲಿ ಸುಖ ದುಃಖಗಳನ್ನು ತುಂಬಿಕೊಂಡು ಉತ್ತರಿಸಿದಳು "ಬನ್ನಿ ; ನೀವು ಬರದಿದ್ದರೆ ಇನ್ನಾರು ಬರಬೇಕು ? ನನ್ನ ತಮ್ಮಂದಿರೂ ಬರಬೇಕೆಂದಿದ್ದಾರೆ. ಬಂದರೆ ಮೂವರೂ ಕೂಡಿಯೇ ಬನ್ನಿ. ನನಗಲ್ಲಿ ಹೊತ್ತು ಕಳೆಯುವುದು ಹೇಗೆಂಬ ಯೋಚನೆಯಾಗಿದೆ. ಕಾಂಗ್ರೆಸ್ಸಿನ ಕ್ಷೇತ್ರದಲ್ಲಿ ಹೊಂದಿದ ಪ್ರಭುತ್ವ ಮಿಲಿಟರಿಯ ವ್ಯಾಪ್ತಿಗೆ ಒಳಪಡುವುದೆಂದು ನಾನು ಎಣಿಸಿರಲಿಲ್ಲ. ನನಗೀಗ ತುಂಬ ಕಷ್ಟಕ್ಕೆ ಬಂದಿದೆ."

ಮಾತು ಮುಗಿದಾಗ ದನಿ ವಿಕಂಪಿಸಿದುದನ್ನು ಮಾದು ಗಮನಿಸಲಿಲ್ಲ ವೇನೋ....ಒಂದು ಕ್ಷಣ ನಿಟ್ಟಿಸಿ "ಓ...! ಅದೇನು ಮಹಾ ವಿಚಾರ... ಇದ್ದಲ್ಲೇ ಬೀಡು ಬೆಳೆಸಿಕೊಂಡರಾಯಿತು."

ಪೂವಿ ಏನೋ ಹೇಳಲು ಪ್ರಯತ್ನಪಟ್ಟು ಸುಮ್ಮನಾದಳು.

ಮುದ್ದು ಅಂದ "ಅಲ್ಲೂ ಬೇಕಾದಷ್ಟು ಸಂಸಾರಗಳಿವೆ. ಕೊಡಗರೂ ಇದ್ದಾರೆ."

"ಇದ್ದಾರೆ ಸರಿ ; ಕ್ಷೇತ್ರ ಸೀಮಿತವಾದುದು...."

ನುಡಿ ಗಂಭೀರವಾಗಿ ಹೊರಬಿದ್ದಾಗ ಚಿತ್ತಜಗತ್ತನ್ನು ತುಂಬಿದ ವಿಚಾರಧಾರೆ ಶರೀರ ಪ್ರಕೃತಿಯನ್ನು ನಿಷ್ಪಂದಗೊಳಿಸಿತು. ತುಂತುರು ತುಂತುರಾಗಿ ಮೂಡಿದ ಸ್ವೇದ ಬಿಂದುಗಳು ಹಣೆಯಮೇಲೆ ಕಂಗೊಳಿಸಿದುವು, ಮಾದು ಅವಳ ಮನಸ್ಥಿತಿಯನ್ನರಿತು ಹಾಸ್ಯಭಾವದಿಂದ ಅಂದ,

"ನಿನ್ನಂತಹ ಹೆಣ್ಣು ಧೃತಿಗೆಟ್ಟರೆ...."

ಮಾತು ಮುಂದುವರಿಯಲಿಲ್ಲ. ತುಟಿಗಳಲ್ಲಿ ಎಳೆನಗು ಮೂಡಿ ಮಾಯ ವಾಯಿತು. ವರ್ಷಾನುವರ್ಷಗಳ ಸ್ನೇಹಭಾವ ಪೂವಿ 'ಅತ್ತಿಗೆ'ಯಾದ ಮೇಲೂ ಏಕವಚನವನ್ನು ಬಹುವಚನವನ್ನಾಗಿ ಮಾರ್ಪಡಿಸಿರಲಿಲ್ಲ. ಅವನು ಅಷ್ಟೇ ಸರಳತೆಯಿಂದ ಅವಳ ಪ್ರತಿಕ್ರಿಯೆಯನ್ನು ಪ್ರತೀಕ್ಷಿಸಿದ.

ಪೂವಿ ಒಂದೆರಡು ಘಳಿಗೆ ಮಾತಾಡಲಿಲ್ಲ. ಮುಖಮಂಡಲ ಭಾವೋನ್ಮಾದದಿಂದ ಜ್ವಲಂತವಾಯಿತು. ಪ್ರಯತ್ನಪೂರ್ವಕವಾಗಿ ಶಾಂತಿ ಸಮಾಧಾನಗಳನ್ನು ತಂದುಕೊಂಡು.

"ವ್ಯಥೆ ಇನ್ನೇನಿಲ್ಲ. ಆ ಕಡೆ ಹೋದಮೇಲೆ ಮುಗಿಯಿತು. ಈ ಕಡೆಯ ಸಂಪರ್ಕವೇ ಇರುವುದಿಲ್ಲ. ತಿಮ್ಮಯ್ಯ ಹಿಂದಿರುಗಲಿಲ್ಲ. ತಮ್ಮಂದಿರು ಚಿಕ್ಕವರು. ಅಪ್ಪ ಅಮ್ಮನ ತೊಂದರೆಯನ್ನೂ ಸ್ವಲ್ಪ ಗಮನಿಸಬೇಕಲ್ಲ ? ಅತ್ತೆ ಬೇರೆ ಆರೋಗ್ಯವಾಗಿಲ್ಲ. ಹೊರಡುತ್ತೇನೆಂದರೆ ಇಂತಿಂತಹ ತೊಂದರೆಗಳೆಲ್ಲ ಮನವನ್ನು ಮುತ್ತುತ್ತವೆ.

"ಅದು ಸಹಜ," ಎಂಬಂತೆ ತಲೆದೂಗಿದ ; ಮಾತಾಡಲಿಲ್ಲ.

ಅದೇ ಸಮಯಕ್ಕೆ ಗಂಗಮ್ಮ ಹೊರಬಂದಳು. ಅವಳಿಗೆ ಮುದ್ದಪ್ಪ ಮಿಲಿಟರಿಗೆ ಸೇರಿದುದು ಸ್ವಲ್ಪವೂ ಸಮಾಧಾನವಿಲ್ಲ. ಅಂದಿಂದಿಗೂ ಮುಂದಿಡುತಿದ್ದ ಕಷ್ಟಸುಖಗಳನ್ನೇ ಇಂದೂ ಮುಂದಿಟ್ಟಳು—ಅದರ ಸಾರ ಇಷ್ಟೆ, ಚಳವಳಿಗಾಗಿ ವಿದ್ಯೆಯನ್ನು ಅಲಕ್ಷಿಸಿ ಬಿಟ್ಟೆ ; ಓದಿ ಸರ್ವಿಸಿಗೆ ಸೇರಿದ್ದಲ್ಲಿ ಈ ಕಷ್ಟವಿರಲಿಲ್ಲ ..

ಇದುವರೆವಿಗೂ ಗಂಭೀರವಾಗಿದ್ದ ಮುದ್ದಪ್ಪ ಘೋರ ಮೃತ್ಯುವಿನೆಡೆಗೆ ಧಾವಿಸುತಿದ್ದರೂ ಎದೆಯಲ್ಲಿ ಸೆಣಸುವ ಕಿಚ್ಚನ್ನು ತುಂಬಿಕೊಂಡು ಧೀರ ಪ್ರಸನ್ನಭಾವದಿಂದ ನುಡಿದ,

"ಹಾಗೆಂದರೆ ಸ್ವಾರ್ಥಸಾಧಕರ ಮಾತಾದೀತು."

"ಸ್ಥಿತಿವಂತರಾಗಿದ್ದಲ್ಲಿ ಅದರ ರೀತಿಯೇ ಬೇರೆಯಾಗಿತ್ತು. ಹೊಟ್ಟೆಪಾಡಿಗಾಗಿ ಮಿಲಿಟರಿಗೆ ಸೇರಿಕೊಂಡೆ. ನಾನು ಕಣ್ಮುಚ್ಚುವ ಸಮಯದಲ್ಲಿ ನೀನೆಲ್ಲಿರುವೆಯೋ, ನನಗದೇ ಯೋಚನೆ."

ಮುದ್ದಪ್ಪ ಮಾತಾಡಲಿಲ್ಲ. ತಾಯಿಯ ಸಂಕಟ ಎದೆಯಾಳಕ್ಕಿಳಿಯಿತು. ಹಣೆಯಮೇಲೆ ಮೂಡಿದ ಶ್ರಮಬಿಂದುಗಳು ದೃಢ ನಿಶ್ಚಯವನ್ನು ಅಲುಗಾಡಿಸಿದುವೋ ಎಂಬಂತೆ ತೋರುತಿತ್ತು. ಶಾಂತ ಮುದ್ರೆಯಿಂದ ಒಂದು ಘಳಿಗೆ ಸುಮ್ಮನೆ ಕುಳಿತ. ಯಾವುಯಾವುದೋ ಹಳೆಯ ನೆನಹು ಮನವನ್ನು ಮುತ್ತಿ ಆಸೆ–ನಿರಾಸೆಗಳ ಅದಮನೀಯ ಅಂತರಾಳವರ್ತೀ ತುಮುಲ ಯುದ್ಧ ಸ್ತಬ್ಧವಾಗಿ ನಡೆಯುತ್ತಿತ್ತು. ಆದರೂ ಎಲ್ಲರೊಡನೆ ಕಳೆಯಲಿರುವ ಆ ಕೊನೆಯ ಮುಹೂರ್ತ 'ದುಃಖಪೂರ್ಣ' ಎನ್ನುವುದಕ್ಕಿಂತ 'ಸುಖದಾಯಕ' ಎನ್ನಬಹುದಾಗಿತ್ತು,

ಕಾವೇರಿ ಅಲ್ಲಿಗೆ ಬಂದು ಹೇಳಿದಳು "ಏನೆಲ್ಲಾ ಆಗಬೇಕೋ ಅದು

ಆಗಿಯೇ ತೀರಬೇಕು, ಗಂಗೂ. ಈಗ ಇಲ್ಲದ ಚಿಂತೆ ಹಚ್ಚಿಕೊಂಡು ಹೊರಡುವವರ ಮನಸ್ಸಿಗಿಷ್ಟು ದುಃಖವನ್ನು ಉಂಟು ಮಾಡಬೇಡ."

ಗಂಗಮ್ಮ ಒಡಲ ಸಂಕಟವನ್ನೆಲ್ಲ ತನ್ನಲ್ಲೇ ನುಂಗಿಕೊಂಡು ಸುಮ್ಮನಾದಳು. ಸ್ತಬ್ಧ ಪ್ರಕೃತಿಯ ಅಂತರಾಳದಲ್ಲಿ ಊಹಿಸಲಾಗದಂತಹ ಸೂಕ್ಷ್ಮಾತಿಸೂಕ್ಷ್ಮ ಕೋಲಾಹಲ ನಡೆಯುತಿದ್ದರೂ ಯಾವ ಭಾವಾತಿರೇಕವನ್ನೂ ತೋರ್ಪಡಿಸದೆ ಶಾಂತ ಮನೋಹರ ಶೋಭೆಯಿಂದ ಅಲ್ಲಿಯೇ ಕುಳಿತುಕೊಂಡಳು. ಎದೆಯಾಳದಿಂದ ನಿಟ್ಟುಸಿರೊಂದು ತಪ್ಪಿಸಿಕೊಂಡಿತು.

ಮಾದು ತಾಯಿಗೆ ಸಮಾಧಾನ ಹೇಳುವ ರೀತಿಯಲ್ಲಿ ಅಂದ,

"ಅವರು ಹೋದರೂ ದೇಶ ಬಿಟ್ಟು ಹೋಗುವುದಿಲ್ಲವಲ್ಲಾ ? ಯಾವಾಗಲಾದರೂ ಬರಬಹುದು–ಹೋಗಬಹುದು. ಅದಕ್ಕೇಕೆ ಯೋಚನೆ ?" ನುಡಿ ಹೊರಬಿದ್ದಾಗ ತಾಮ್ರವರ್ಣದ ತುಟಿಗಳಲ್ಲಿ ನೀರಸ ನಗು ಹರಿದಾಡಿತು. ಹಣೆ ಮುಖಗಳಲ್ಲಿ ತುಂತುರು ತುಂತುರಾಗಿ ಶ್ರಮಬಿಂದುಗಳು ಮೂಡಿದ್ದುವು. ಧವಳ ಅಂಗರಾಗ ಸುಂದರ ವನಸಿರಿಯ ತಣ್ಪಿಗೆ ಉಪಮಾನವಾಗುವಂತಿತ್ತು. ಅಜ್ಜಿಯ ಕಡೆ ತಿರುಗಿ ಹೊಳೆ ಹೊಳೆಯುವ ಕಣ್ಣುಗಳನ್ನರಳಿಸಿ ತಮಾಷೆಯ ಧಾಟಿಯಲ್ಲಿ–"ನೀವೇ ಸರಿ ಅವ್ವಾ, ನಿಮ್ಮ ಧೈರ್ಯ ಅಮ್ಮನಿಗಿಲ್ಲ." ದನಿ ಹೊಮ್ಮಿದಾಗ ಹುಬ್ಬುಗಳು ಏರಿ ಇಳಿದುವು. ದೃಷ್ಟಿಯ ದೀಪ್ತಿ ಮಿಂಚುತಿತ್ತು.

ಮರು ಘಳಿಗೆಯಲ್ಲಿ ಕಾರಿಯಪ್ಪ ಅಲ್ಲಿ ಹಾಜರಾದ. ಬಿರಿದ ತುಟಿಗಳಲ್ಲಿ ನುಡಿ ಹಾಸ್ಯದ ಧಾಟಿಯಲ್ಲಿ ಹೊರಬಿತ್ತು. "ನಿಮ್ಮ ಮೀಟಿಂಗಿಗೆ ನಾನು ಹಾಜರಿ ಹಾಕಬಹುದೇ ?"

"ನಿನಗೆ ಹಾಜರಿ ಕೊಡದಿದ್ದರೆ ಮೂರ್ತಿ ಇಲ್ಲದೆ ಉತ್ಸವ ನಡೆಸಿದಂತಾಗುತ್ತೆ." ಎಂದಳು ಕಾವೇರಿ.

ಕಾರಿಯಪ್ಪ ತಾಯಿಯ ಪಕ್ಕದಲ್ಲಿ ಸ್ಥಾನ ಪಡೆದ. ತೆರೆದ ಗವಾಕ್ಷಿಯಿಂದ ಗಾಳಿ ಬೆಳಕು ಸಮೃದ್ಧಿಯಾಗಿ ಬರುತಿತ್ತು. ನೆಟ್ಟ ನೋಟ ಒಳಗೂ ಹೊರಗೂ ಹರಿದಾಡಿ ಶುಭಾಶುಭಗಳನ್ನು ಮೆಲ್ಲುತಿತ್ತು. ಮಡದಿಯ ಮನಸ್ಥಿತಿಯನ್ನರಿತು ಸಹಾನುಭೂತಿಯ ವರ್ಷಣದೊಡನೆ ನುಡಿಯನ್ನು ಹೊರಹಾಕಿದ,

“ಮಾನವ ಜನ್ಮ ಪರಮಾತ್ಮನ ಪವಿತ್ರ ಸೃಷ್ಟಿ ಮುದ್ದೂ ! ನಾವು ಕೇವಲ ದಂಡಭೋಗಕ್ಕಾಗಿ ಜನ್ಮವೆತ್ತಿಲ್ಲ. ನಮಗೆ ಸುಖ–ಶಾಂತಿ–ಸಂತೋಷ-ಸಮಾಧಾನಗಳೂ ಬೇಕು. ಜೀವನದ ಈ ಮಹತ್ ಸತ್ಯವನ್ನು ಅರಿತುಕೊಂಡಿದ್ದವರಾರೂ ಅನಂತರ ಪರಿತಾಪ ಪಡರು.”

ಮುದ್ದಪ್ಪ ನಕ್ಕು ಬಿಟ್ಟ.

ಮಾದು ಅಭಿರಾಮ ಭಂಗಿಯಲ್ಲಿ ನುಡಿದ,

“ಅದು ಎಷ್ಟೆಂದರೂ ನಮ್ಮ ಕರ್ತವ್ಯದ ಮಾತಾಯಿತು. ತೆರೆಯ ಮರೆಯಲ್ಲಿ ಸೂತ್ರದಾಟವಾಡಿಸುವವ ಬೇರೆ ಇದ್ದಾನೆ ; ಅದಕ್ಕೇನು ಮಾಡೋಣ ? ಆತ ನಮಗೆ ಒಲಿಯಬೇಕಲ್ಲ ?”

ಪೂವಿ ಎಲ್ಲರ ಮಾತುಕತೆಗಳನ್ನು ಅಭಿಭೂತಳಂತೆ ಕೇಳುತಿದ್ದಳು. ಕಣ್ಣುಗಳಲ್ಲಿ ಕರಿಮಣಿಯಂತಹ ಹೊಳಪು ಥಳಥಳಿಸುತಿತ್ತು.

“ಎಲ್ಲವೂ ಅಸ್ಥಿರವೇ ಆಗಿರುವಾಗ ಸ್ಥಿರತೆಗಾಗಿ ಹುಡುಕಿದರೆ–ಬಡಿದಾಡಿದರೆ ಹೇಗೆ ?”

ಮುದ್ದಪ್ಪ ಪ್ರಶ್ನಿಸಿದ. ಭಾವಪೂರ್ಣಲೋಚನಗಳು ಅರಳಿದುವು.

“ಸರಿ ; ಪ್ರಯತ್ನ ನಮ್ಮದು ಎಂಬ ದೃಢತೆ ನಮಗಿದ್ದಲ್ಲಿ ಪರಿಣಾಮವೇ ಬೇರೆ !” ಎಂದ ಕಾವೇರಿ ದೃಢಕಂಠದಿಂದ ಹೇಳಿದಳು “ಆ ಭಕ್ತಿಯೊಂದಿದ್ದರೆ ಸಾಕು.”

“ಎಲ್ಲರೂ ಮಾಡುತ್ತಾರೆ ; ನಾವೂ ಮಾಡುತ್ತೇವೆ. ಅದರಲ್ಲಿ ವಿಶೇಷವೇನಿಲ್ಲ.”

ವಿಷಯ ವಾಸ್ತವಿಕತೆಯನ್ನು ಮುಟ್ಟಿದಾಗ ಎಲ್ಲರ ಮುಖದಲ್ಲೂ ಮುಗುಳುನಗೆ ಮೂಡಿ ಮಾಂಗಲ್ಯದ ಮಳೆಗರೆಯಿತು.

೧೦

....ಉದಯಮಾನ ಸೌಂದರ್ಯಧಾರೆ !

....ಶೀತಲ ಶಾಂತ ವಾತಾವರಣ.

ಮಾದೇವನ ದೇವಾಲಯದಲ್ಲಿ ಗಂಟೆಯ ಮಹಾರವವೆದ್ದು ನೊಳಗಿತು– ವನದೈಸಿರಿಯಲ್ಲಿ ಮರುದನಿ ಹೊಮ್ಮುವಂತೆ. ಅತ್ಯಂತ ವಿನಮ್ರತೆಯಿಂದ ಆಲೈಸುತ್ತ ನುಡಿದಳು ಕಾವೇರಿ.

"ಮಾದೇವನ ದಯೆಯಿದ್ದರೆ ಮುದ್ದು ಎಂದಾದರೂ ಹಿಂತಿರುಗುತ್ತಾನೆ. ಯೋಚಿಸಬೇಡ ಗಂಗೂ."

ಅದೇ ವೇಳೆಗೆ ಗೋಡೆಯ ಮೇಲಿನ ಹಲ್ಲಿ ನುಡಿಯಿತು ಲೊಚ. ಲೊಚ. ಲೊಚ. ಲೊಚ.

ಆ ಮುಹೂರ್ತದಲ್ಲಿ ಇಬ್ಬರ ಮುಖವೂ ಪ್ರಸನ್ನ ಮುದ್ರೆಯಿಂದ ಅಂಕಿತ ವಾಯಿತು.

ಅದೇ ಸಮಯಕ್ಕೆ ಸರಿಯಾಗಿ ಕಾರಿಯಪ್ಪ ಆಗಮಿಸಿದ. ಅವರ ತುಟಿ ಗಳಲ್ಲಿ ಮಿನುಗುತಿದ್ದ ಹವಳದ ರೇಖೆಯಂತಹ ಎಳೆನಗುವನ್ನು ನೋಡಿ ಪ್ರಶ್ನಾರ್ಥಕವಾಗಿ ನಿಟ್ಟಿಸಿದ. ಗಂಗೂ ಮಾದೇವನ ಪ್ರಸ್ತಾಪವನ್ನೂ ಹಲ್ಲಿ ನುಡಿದ ಶಕುನವನ್ನೂ ನಗು ಮುಖದಿಂದ ಮುಂದಿಟ್ಟಳು. ಹೃದಯಕಾಂತಾ ರದಲ್ಲಿ ಬಿರಿದ ಕಸ್ತೂರಿಯ ಪರಿಮಳ ಲೀಲಾಸ್ಮಿತದೊಡನೆ ಮತ್ತೆ ಹೊಮ್ಮಿತು. ಕಾರಿಯಪ್ಪ ಮಡದಿಯ ಅಂತರಾರ್ಥವನ್ನು ಸಾನಂದದಿಂದ ಸ್ವೀಕರಿಸಿದ.

ಕಾವೇರಿ ಶಾಂತಿ ಸಮಾಧಾನಗಳಿಂದ ಪುಷ್ಟೀಕರಿಸುತ್ತ "ಕಷ್ಟಸುಖಗಳು ಯಾರಿಗೂ ತಪ್ಪಿದ್ದಲ್ಲ, ಆದರೂ ದೈವಕೃಪೆಯೊಂದಿದ್ದರೆ ಸಾಕು" ಎಂದಳು.

"ಮುದ್ದು ಎಷ್ಟೊಂದು ಜನಾನುರಾಗಿ ಎಂಬುದು ತಿಳಿದು ಬಂದುದು ಈಗಲೇ ! ಎಷ್ಟು ಜನ ಬಂದಿದ್ದರು ? ಎಷ್ಟು ಜನ ಶುಭ ಹಾರೈಸಿದರು?... ನನಗೆ ಮೊದಲು ಏನೇನೂ ಅನಿಸಿರಲಿಲ್ಲ. ಅಷ್ಟು ಜನ ಬಂದು ಬೀಳ್ಕೊಟ್ಟಾಗ ಕಣ್ಣಿನಲ್ಲಿ ನೀರು ಬಂತು" ಎಂದ ಕಾರಿಯಪ್ಪ. ಮುಖಭಾವ ಗಂಭೀರ ಶಾಂತಿಯಿಂದ ಕೂಡಿ ಶೋಭಾಯಮಾನವಾಗಿತ್ತು.

"ಕಾಂಗ್ರೆಸ್ಸಿನ ಕ್ಷೇತ್ರದಲ್ಲಿ ಕೆಲಸಮಾಡಿ ಊರೆಲ್ಲಾ ಗೊತ್ತು. ಎಲ್ಲರಲ್ಲೂ ಸ್ನೇಹ ಸಂಪಾದನೆ ಮಾಡಿದ್ದಾನೆ....ದಕ್ಷ ಕೆಲಸಗಾರನೂ ಹೌದು. 'ಸುಖದೇವ್' ಎಂಬ ಹೆಸರಿನಲ್ಲಿ ಅವನ ಚಟುವಟಿಕೆ ನಿಜವಾಗಿಯೂ ಪ್ರಶಂಸನೀಯವಾಗಿತ್ತು." ಕಾವೇರಿಯ ನುಡಿ ಎದೆಯಾಳದಿಂದ ಹರಿದು ಬಂತು. ಅಗಲಿಕೆಯ ಕಿಂಚಿತ್ ಶೋಕ ಮುಖಕ್ಕೆ ರಂಗೊರೆಯಿತು. ಒಂದೆರಡು ಕ್ಷಣ ತಡೆದು ಪುನಃ ಮುಂದುವರಿದಳು "ಅವನು ಮನೆಯಲ್ಲೇ ಉಳಿಯು ವಂತಿದ್ದರೆ ಬಾಳು ಬಂಗಾರವಾಗುತಿತ್ತು ; ನಮಗೆ ಆ ಅದೃಷ್ಟವಿಲ್ಲ."

"ಹೊರಗಡೆ ನಾಲ್ಕಾರು ವರುಷ ಇರಲಿ, ಅನಂತರ ಕರೆಸಿಕೊಂಡ ರಾಯಿತು." ಎಂದ ಕಾರಿಯಪ್ಪ.

ಇಬ್ಬರ ವಾಕ್ಸರಣಿಯನ್ನೂ ಗಮನಿಸಿದಳು ಗಂಗೂ. ತುಟಿಗಳು ಬಿರಿಯಲಿಲ್ಲ.

ಮುದ್ದು ಪೂವಯ್ಯನನ್ನು ಬೀಳ್ಕೊಡಲು ಮಾದು ಅವರೊಂದಿಗೆ ಮಡಿಕೇರಿಯವರಗೆ ಪಯಣಿಸಿದ್ದ. ಅವನು ಮನಃಪೂರ್ವಕವಾಗಿ ಗದ್ದೆ ತೋಟಗಳ ಉಸ್ತುವಾರಿಯನ್ನು ಕೈಕೊಂಡಮೇಲೆ ಕಾರಿಯಪ್ಪ ಆಕಡೆ ಮುಖ ಹಾಕಿರಲಿಲ್ಲ. ಇಂದು ಗದ್ದೆಗೆ ನೀರು ಕಟ್ಟುವುದಿತ್ತು. ಅಪರೂಪವಾಗಿ ಗದ್ದೆಯ ಕಡೆ ಹೊರಟ. ಕೆಳಮಟ್ಟಿಯ ಸಾಲು ಮೆಟ್ಟಿಲುಗಳನ್ನಿಳಿದು ಹೆಬ್ಬ ಯಲಿಗೆ ಕಾಲಿಟ್ಟಾಗ ಬಾಲರವಿ ಬಾನೇರುತಿದ್ದ. ದೂರ-ಬಹುದೂರದ ಸುನೀಲ ಬೆಟ್ಟದಂಚಿನವರೆಗೂ ಹಬ್ಬಿದ ಸುವರ್ಣಮಯೀ ಶಾಲಿವನ ಮಹಾ ವಿಸ್ತಾರ ತನುಮನಗಳಿಗೆ ಆನಂದವನ್ನೂಡಿಸಿತು. ಕೀಡಿ ಬರುವ ತಂಗಾಳಿ ಯನ್ನು ಭೇದಿಸಿಕೊಂಡು ಮುನ್ನಡೆದ. ಗದ್ದೆಯ ಪ್ರದೇಶದಲ್ಲಿ ತಮ್ಮತಮ್ಮ ನೆಲೆಯಲ್ಲಿ ಅನೇಕರು ಕೆಲಸ ಮಾಡುತಿದ್ದಾರೆ....ನೆರೆ ಹೊರೆಯವರಾದ ಬಿಟ್ಟಂಗಾಳಿ ರಾಮಕೃಷ್ಣ, ಜಂಬೂರು ಶೇಷು, ಅಮ್ಮಟ್ಟಿ ಗಣೇಶ ಅಗಲೇ ಗದ್ದೆಗಿಳಿದಾಗಿತ್ತು. ಕಾರಿಯಪ್ಪನನ್ನು ನೋಡುತ್ತಲೂ ಎಲ್ಲರೂ ಗದ್ದೆ ಯಂಚಿನಲ್ಲಿ ನಿಂತು ಗಮನವನ್ನು ಈಕಡೆ ಹರಿಯಬಿಟ್ಟರು. ಗೆಳೆಯನನ್ನು ದೂರವಲಯಕ್ಕೆ ಬೀಳ್ಕೊಟ್ಟ ಹೃದಯಗಳು ಭಾರವಾಗಿದ್ದುವು. ಜಂಬೂರು ಶೇಷು ಆತ್ಮೀಯತೆಯಿಂದ ಕೇಳಿದ "ಏನಣ್ಣಾ ! ಬಹಳ ದಿನಗಳ ಮೇಲೆ ಗದ್ದೆಯಕಡೆ ಬಂದಿರಿ ?"

"ಯಾರನ್ನು ಅಲಕ್ಷಿಸಿದರೂ ಅನ್ನದೇವರನ್ನು ಅಲಕ್ಷಿಸುವಂತಿಲ್ಲಪ್ಪಾ."

"ಅದು ಸರಿ, ನನಗೆ ಹೇಳಿದ್ದಿದ್ದರೆ ಇಂದು ನಾನೇ ನೋಡಿಕೊಳ್ಳುತಿದ್ದೆ."

"ಇಷ್ಟಕ್ಕೇಕೆ ನಿನಗೆ ತೊಂದರೆ ?"

"ಇದೇನು ...ತೊಂದರೆಯೇ ?"

"ಇರಲಿ, ನನಗೂ ಕೆಲಸವಿರಲಿಲ್ಲ."

"ಮುದ್ದಪ್ಪನನ್ನು ಕಳುಹಿಸಿದ ಮೇಲೆ ಮನಸ್ಸಿಗೆ ಏನೋ ಒಂದು ರೀತಿ...ತುಂಬ ಬೇಸರ." ನಡುವೆ ಬಾಯಿ ಹಾಕಿದ ಬಿಟ್ಟಂಗಾಳ ರಾಮು ಕೃಷ್ಣ. ಒಡನೆ ಅನೇಕ ಅಭಿಪ್ರಾಯಗಳು ಹೊರಬಿದ್ದುವು.

"ನನಗೂ ಹಾಗೇ ಅನಿಸಿದೆ. ನಮ್ಮ ಜೀವನಾಡಿಯೇ ಮಿಡಿಯು ತ್ತಿಲ್ಲವೇನೋ ಎಂಬಷ್ಟು ಸಪ್ಪೆ... ನೀರಸ... " ಎಂದ ಅಮ್ಮಟ್ಟಿ ಗಣೇಶ.

"ಬಹಳ ಬುದ್ಧಿವಂತ. ಎಂದೂ ನಿಂತಲ್ಲಿ ನಿಲ್ಲದ ಹುಡುಗ. ಇನ್ನು ಒಂದೇಕಡೆ ತಳ ಊರುವುದೆಂದರೆ ತುಂಬ ಕಷ್ಟವಾಗಬಹುದು."

"ಅವನಿಗೆ ಮಾತ್ರವೇನು ? ಪೂವಿಗೂ ಅಷ್ಟೆ."

"ನಾವು ಬಯಸಿದ್ದೇನೋ... ಆಗಿದ್ದೇನೋ...."

"ಯಾವಾಗಲೂ ಆಗುವುದೇ ಹಾಗೆ."

"ಏನು ಮಾಡೋಣ....ವಿಧಿ !"

"ಜೀವನಪರಿಸ್ಥಿತಿ ಉತ್ತಮವಾಗುವವರೆಗೆ ಇರಲಿ, ಅನಂತರ ಕರೆಸಿ ಕೊಂಡುಬಿಡಿ."

"ನಾನು ಯೋಚಿಸುವುದೂ ಅದನ್ನೆ.. ಒಂದೆರಡು ಘಳಿಗೆ ಯೋಚಿಸಿ ಕಾರಿಯಪ್ಪ ಮುಂದುವರಿದ "ಮಿಲಿಟರಿ ಕ್ಷೇತ್ರ ಸಹ ದೇಶಸೇವೆಯ ಕ್ಷೇತ್ರವೇ. ಒಂದುವೇಳೆ ಅವನು ಅಲ್ಲಿಯೇ ಹೊಂದಿಕೊಳ್ಳುವುದಾದರೆ ಅದೂ ಸರಿಯೆ. ಏನಾದರೂ ಆಗಲಿ, ಎಲ್ಲಾ ಅವನಿಷ್ಟಕ್ಕೆ ಬಿಟ್ಟುಬಿಡುವೆ. ನಾವು ಒತ್ತಾಯಿ ಸುವುದು ಸರಿಯಲ್ಲ."

"ಹೌದು. ಇನ್ನೂ ನಾಲ್ಕೈದು ವರ್ಷಗಳ ಅವಧಿಯಲ್ಲಿ ಏನೇನು ಆಗಲಿದೆಯೋ....ಅಂತೂ ನಮ್ಮ ಕ್ಷೇತ್ರ ಸಪ್ಪೆಯಾಯಿತು "

"ನಿಮ್ಮ ಹುಡುಗರು ಹೇಳಿ ಮಾಡಿಸಿದಂತಿದ್ದಾರೆ ಬಿಡಿ ! ಎಲ್ಲಿದ್ದರೂ

ಸರಿಯೆ, ಪರಿಸ್ಥಿತಿಗೆ ಹೊಂದಿಕೊಳ್ಳುವ ಸ್ವಭಾವ ಇದೆ. ಹೆಚ್ಚಿನ ತೊಂದರೆ ಏನೂ ಬರಲಾರದು."

ಕಾರಿಯಪ್ಪ ಮಂದಹಾಸ ತಳೆದ. ಮುಖಮುದ್ರೆಯಲ್ಲಿ ಸಹಜ ಅನುಭಾವ ಅಲೆಅಲೆಯಾಗಿ ತರಂಗಿತವಾಗುತಿತ್ತು. ಶೋಣವರ್ಣರಂಜಿತ ಮುಖವರ್ಣ ಹೊಂಬಿಸಿಲ ಕಾಂತಿಯಲ್ಲಿ ಬೆಳಗಿ ಭಾವಧಾರೆಯಲ್ಲಿ ಅಪೂರ್ವ ರಾಗಮಾಧುರ್ಯವನ್ನು ಪ್ರದರ್ಶಿಸಿತು. ಸ್ವಲ್ಪ ಹೊತ್ತಿನ ನಂತರ ಎಲ್ಲರೂ ತಮ್ಮತಮ್ಮ ಕೆಲಸಕಾರ್ಯಗಳಲ್ಲಿ ನಿಮಗ್ನರಾದರು. ಕಾರಿಯಪ್ಪ ಗದ್ದೆಯ ಅಂಚು ಒಡೆದು ನೀರು ಕಟ್ಟುತಿರುವಾಗ ನಾಪೋಕ್ಲು ಕಡೆಯಿಂದ ಅವಸರವ ಸರವಾಗಿ ಬರುತಿದ್ದ ಚಂಗಪ್ಪ ಕಣ್ಣಿಗೆ ಬಿದ್ದ. ಮನೆಯ ಕಡೆಯ ಕವಲು ಹಾದಿಯನ್ನು ಹಿಡಿಯುತಿದ್ದ ಅವನು ಕಾರಿಯಪ್ಪನನ್ನು ನೋಡುತ್ತಲೂ ಹಿಂದಿರುಗಿ ಬಂದು ಅಂದ,

ನಾನು ಅಷ್ಟು ದೂರ ಹೋಗುವವರೆಗೂ ನಿಮ್ಮನ್ನು ನೋಡಲೇ ಇಲ್ಲ, ಮೇಲೆ ಹೋಗುವ ಅವಸರದಲ್ಲಿದ್ದೆ "

"ನಾನೂ ಮೊದಲು ನೋಡಲಿಲ್ಲ."

"ಮುದ್ದಪ್ಪ ಹೊರಟೇ ಬಿಟ್ಟನೋ, ಇದ್ದಾನೋ ?"

"ಬೆಳಗ್ಗೆ ಮೊದಲ ಬಸ್ಸಿಗೆ ಹೊರಟ. ಇಂದು ಮಡಿಕೇರಿಯಲ್ಲಿದ್ದು ನಾಳೆ ಬೆಳಗ್ಗೆ ಶಾದೀಪುರಕ್ಕೆ ಹೊರಡುತ್ತಾನೆ. ಎಲ್ಲಾ ಕಡೆ ಹೋಗಿ ಬಂದ. ನೀನು ಮನೆಯಲ್ಲಿರಲಿಲ್ಲವಂತೆ ..."

"ಹೌದು ; ನಿನ್ನೆಯಷ್ಟೆ ಬಂದೆ.. ಅನಂತರ ತಿಳಿಯಿತು. ನೋಡೋಣ ವೆಂದು ಬಂದೆ. ಇಷ್ಟು ಬೇಗನೆ ಹೊರಡುತ್ತಾನೆಂದು ನಾನು ಭಾವಿಸಿರಲಿಲ್ಲ!"

"ತುರ್ತಾಗಿ ಕರೆ ಬಂದುದರಿಂದ ಹೊರಡಬೇಕಾಯಿತು."

"ಓ....ಹೋ !" ಏನೋ ಹೇಳಬೇಕೆಂದಿದ್ದರೂ ಮಾತು ಮುಂದು ವರಿಯಲಿಲ್ಲ. ಚಿತ್ತ ಗತಕಾಲದಲ್ಲಿ ಸಂಚರಿಸಿತು. ಕಾಂಗ್ರೆಸ್ಸಿನ ಚಳವಳಿ ಕ್ಷೇತ್ರದಲ್ಲಿ ಮುದ್ದಪ್ಪ ತೆಗೆದುಕೊಳ್ಳುತಿದ್ದ ಸಕ್ರಿಯ ಪಾತ್ರ ಚಲನಚಿತ್ರದಂತೆ ಚಿತ್ತಭಿತ್ತಿಯಲ್ಲಿ ತೇಲಿ ನಲಿಯಿತು...ಸಾರ್ವಜನಿಕ ಕ್ಷೇತ್ರದಲ್ಲಿ ಸರಕಾರದ ಕಣ್ಣಿಗೆ ಮಣ್ಣೆರಚಿ ಇಂದು 'ಸುಖದೇವ್' ಭಾಷಣ ಮಾಡುತ್ತಾನೆ ಎಂದು ಡಂಗೂರ ಹಾಕಿಸಿ ಅನಂತರ ವೇದಿಕೆಯ ಮೇಲೆ ಯಾರೋ ಬಂದು ನಿಂತಾಗ

ಪೋಲೀಸಿನವರೇ ಬೆಪ್ಪಾಗುತ್ತಿದ್ದರು. ಅವನ ಭಾಷಣ ..ಚಟುವಟಿಕೆ....ಬುದ್ಧಿವಂತಿಕೆ ಜನಜನಿತವಾಗಿತ್ತು. ದಂಪತಿಗಳಿಬ್ಬರೂ ಈ ಕ್ಷೇತ್ರದಲ್ಲಿ ಚೆನ್ನಾಗಿ ನುರಿತವರು. ಇಲ್ಲೇ ಇದ್ದಿದ್ದರೆ ಚೆನ್ನಾಗಿತ್ತು ; ಎಂದು ಮುಂತಾಗಿ ಯೋಚನೆಯೂ ಬಂತು...

"ಬಹಳ ಆತುರದ ಕ್ರಮ ಕೈಕೊಂಡಂತಾಯಿತು. ಸಾರ್ವಜನಿಕ ಕ್ಷೇತ್ರವೇ ಅವನಿಗೆ ಸರಿಯಾದ ಕ್ಷೇತ್ರ"

"ಆರ್ಥಿಕ ಕೊರತೆ ಬಿದ್ದ ಕಾರಣ ಒಪ್ಪಿಕೊಳ್ಳಬೇಕಾಯಿತು. ವ್ಯಾಪಾರ ನೈಪುಣ್ಯತೆ ಇಲ್ಲದುದರಿಂದ ನಾನೇ ಒಪ್ಪಿಗೆ ಕೊಟ್ಟೆ." ನೀರಸ ದನಿಯನ್ನು ಹರಿಯಬಿಟ್ಟ ಕಾರಿಯಪ್ಪ. "ತೊಂದರೆಯಲ್ಲಿರುವ ವೇಳೆಯಲ್ಲೇ ಕೆಲಸ ದೊರೆತುದರಿಂದ ಯೋಚಿಸಲು ಅವಕಾಶವೇ ದೊರೆಯಲಿಲ್ಲ."

"ಹೋಗಲಿ ಬಿಡಿ, ಆಯಿತಲ್ಲ." ಸ್ವಲ್ಪ ತಡೆದು ನೀರಸದನಿಯಲ್ಲಿ ಅಂದ "ಇನ್ನು ನಮ್ಮ ಕ್ಷೇತ್ರ ಸಪ್ಪೆ ; ಅದೇ ಬೇಸರ."

"ಎಲ್ಲರೂ ಅನ್ನುವುದು ಹಾಗೆಯೆ. ಅವನು ಹೊರಟಿದ್ದು ಯಾರಿಗೂ ಸಮಾಧಾನವಿಲ್ಲ...ಆದರೂ ಎಲ್ಲರೂ ಬಂದು ಬೀಳ್ಕೊಟ್ಟಿದ್ದಾರೆ ಅದೇ ತುಂಬ ಸಂತೋಷ."

"ಅವನು ಎಲ್ಲೇ ಇದ್ದರೂ ಕ್ಷೇತ್ರ ವಿಶಾಲವಾಗುತ್ತದೆ!"

"ದೇವರು ಎಲ್ಲಾದರೂ ಸುಖವಾಗಿಟ್ಟಿರಲಿ."

ಚಂಗಪ್ಪ ನಿರ್ವಿಣ್ಣನಾಗಿ ನುಡಿದ,

"ಈಗಿನ ಬಸ್ಸು ಹಿಡಿದು ಮಡಿಕೇರಿಗೆ ಹೋದರೆ ನಾನು ಅಲ್ಲೇ ಮುದ್ದಪ್ಪನನ್ನು ನೋಡಬಹುದು. ಇಲ್ಲದಿದ್ದಲ್ಲಿ ಅವನು ಸಿಕ್ಕುವುದು ಇನ್ನೆಂದಿಗೋ..."

"ಹಾಗೇ ಮಾಡು. ಅವನೂ ನೀನು ಸಿಗಲಿಲ್ಲ, ಎನ್ನುತ್ತಿದ್ದ."

"ಹಾಗಾದರೆ ನಾನೀಗ ಮನೆಗೆ ಬರುವುದಿಲ್ಲ .. ಮಡಿಕೇರಿಯಿಂದ ಇಂದೇ ಮನೆಗೆ ಹಿಂದಿರುಗಬೇಕು."

"ಆಗಲಿ."

ಚಂಗಪ್ಪ ಅಲ್ಲಿಂದ ತಕ್ಷಣ ಹೊರಟ. ಬಸ್ಸಿನ ವೇಳೆಗೆ ಹೆಚ್ಚು ಸಮಯ ಇರಲಿಲ್ಲವಾದುದರಿಂದ ಬಿರುಸಾಗಿ ಹೆಜ್ಜೆ ಹಾಕುತ್ತ ಹೋಗುವುದನ್ನು ಕಾರಿ

ಯಪ್ಪನ ಸ್ನೇಹಭರಿತ ನೋಟ ಕಣ್ಮರೆಯಾಗುವವರೆಗೂ ನಿಟ್ಟಿಸಿತು.... ಹೆದ್ದಾರಿಗೆ ಬಸ್ಸು ಬರಲು ಕೆಲವು ನಿಮಿಷಗಳು ಮಾತ್ರ ಇವೆ. ಮುಂದಿನ ಬಸ್ಸಿಗಾದರೂ ಹೋಗಬಹುದಾಗಿತ್ತು ಎನಿಸಿತು. ಆದರೆ ಆ ವೇಳೆಗಾಗಲೆ ಅವನು ಗದ್ದೆಯ ಕೋಗನ್ನು ದಾಟಿ ವನದೇಶದ ಹಾದಿಯನ್ನು ಹಿಡಿದಿದ್ದ.

ಬಸ್ಸು ಸಕಾಲದಲ್ಲಿ ಹೆದ್ದಾರಿಗೆ ಆಗಮಿಸಿತು. ಅದೇ ವೇಳೆಗೆ ಚಂಗಪ್ಪ ಸಹ ಅಲ್ಲಿ ಹಾಜರಿದ್ದ. ಬಸ್ಸಿನ ಪಯಣ ಸರಾಗವಾಗಿ ಸಾಗಿ ಕಾಫೀ ತೋಟಗಳ ತಣ್ಣೆರಳಲ್ಲಿ ಕೊನೆಗೊಂಡು ಮಡಿಕೇರಿಯ ವಲಯವನ್ನು ತೀವ್ರಗತಿಯಲ್ಲಿ ಹೊಕ್ಕಿತು. ಚಂಗಪ್ಪ ನೋಟವನ್ನು ಗಡಿಯಾರದ ಕಡೆ ಹೊರಳಿಸಿದ. ಹೊತ್ತು ಹತ್ತರ ಅಂಚಿನಲ್ಲಿತ್ತು. ಬಸ್ಸಿನಿಂದ ಇಳಿದು ನಂಜಪ್ಪನ ಮನೆಯ ಹಾದಿ ಹಿಡಿದ. ಕಿತ್ತಿಲೆ ಮರಗಳ ಸುಂದರ ಹಾದಿ ಸುರಮ್ಯವಾಗಿತ್ತು. ಹಾದಿಯಲ್ಲಿ ಪರಿಚಿತರನೇಕರು ಎದುರಾದರು. ಅವರೊಂದಿಗೆ ಕ್ಷೇಮ ಸಮಾಚಾರಗಳ ವಿತರಣೆಯಾದ ನಂತರ ಮುಂದುವರಿದ. ತಲೆ ಬಾಗಿಲಲ್ಲಿ ನಂಜಪ್ಪನ ಸ್ವಾಗತ ದೊರೆಯಿತು,

"ನಮಸ್ಕಾರ! ಬನ್ನಿ, ಬನ್ನಿ. ಮುದ್ದು, ಮಾದು ಹೊರಗಡೆ ಹೋಗಿದ್ದಾರೆ. ಇಷ್ಟರಲ್ಲೇ ಬಂದಾರು!"

"ನಮಸ್ಕಾರ."

ಅಪರೂಪವಾಗಿ ಮನೆಗೆ ಬಂದ ಅತಿಥಿಯನ್ನು ಆದರಪೂರ್ವಕವಾಗಿ ಬರಮಾಡಿಕೊಂಡು ತಂಬಿಗೆ ನೀರನ್ನು ನೀಡಿದಳು ಸ್ವಾಮಿನಿ. ಪೂವಿ ತಾಯಿಯೊಡನೆ ಹೊರಬಂದಳು. ಅಲ್ಲಿ ಅವರೊಡನೆ ಮಾತುಕತೆಯಾಡುತ್ತ ಸೋದರಳಿಯಂದಿರಿಗಾಗಿ ಕಾದು ಕುಳಿತ–ಚಂಗಪ್ಪ.

ಹೊತ್ತು ಒಂದರ ಅಂಚನ್ನು ದಾಟಿದಾಗ ಮುದ್ದು, ಮಾದು ಅಲ್ಲಿ ಪ್ರತ್ಯಕ್ಷರಾದರು. ಮುದ್ದು ಚಂಗಪ್ಪನ ಪಾದಧೂಳಿ ಸ್ವೀಕರಿಸಿ ಎರಡೂ ಕೈಗಳನ್ನು ಅದುಮಿ ಹಿಡಿದುಕೊಂಡು "ನಿಮ್ಮ ಸಂದರ್ಶನ ತುಂಬ ಸಂತೋಷ ತಂದಿತು ಮಾವಾ!" ಎಂದ.

"ನಿನ್ನೆ ರಾತ್ರಿ ತಿಳಿದೊಡನೆ ನಿನ್ನನ್ನು ನೋಡುವ ಆತುರ ಮೂಡಿತು. ಓಡಿ ಬಂದೆ!"

"ಈ ಸಲ ಕ್ಷಮಿಸಿ ಬಿಡಿ ಮಾವಾ! ಈಚೆಗೆ ನಿಮ್ಮ ಮನೆಗೂ ಬರಲಿ

ಕ್ಕಾಗಲಿಲ್ಲ. ಅಂದಿಂದಿಗೂ ಗಡಿಬಿಡಿಯಲ್ಲಿಯೇ ಕಳೆದುಹೋಯಿತು. ಕೆಲವು ದಿನ ರಜೆ ಸಹ ಸಿಕ್ಕುವಂತಿಲ್ಲ. ಚಳವಳಿ ಕ್ಷೇತ್ರ ತಣ್ಣಗಾದುದರಿಂದ ಕೈಗೆ ಕೆಲಸ ಬೇಕೇ ಬೇಕಾಗಿತ್ತು. ವಿಧಿ ಇದೇ ನೆಪದಲ್ಲಿ ನಮ್ಮನ್ನು ಬೇರೆಡೆಗೆ ಎಳೆಯುತ್ತಿದ್ದಾನೆ; ಏನಾದೀತೋ ನೋಡೋಣ."

ಎದೆಯ ಹಂಬಲವೆಲ್ಲ ಕ್ರೋಢೀಕರಿಸಿ ಹೊರನುಗ್ಗಿ ಬಂತು. ಮುದ್ದು ಸುಖ-ದುಃಖಗಳ ಗಣಿಯಾದ.

ಚಂಗಪ್ಪ ಏನೋ ಹೇಳಲು ತೊದಲಿದ. ನುಡಿ ಹೊಮ್ಮಲಿಲ್ಲ. ಅನಂತರ ಜಾಡು ಬದಲಿಸಿ ಅಂದ,

"ನಾವೊಂದು ಬಯಸಿದರೆ ವಿಧಿ ಇನ್ನೊಂದು ಬಯಸುತ್ತದೆ."

"ಹೇಗೂ ವರ್ಷಕ್ಕೊನ್ಮೆ ರಜೆ ದೊರೆಯುತ್ತದೆ. ನಿಮ್ಮನ್ನೆಲ್ಲಾ ನೋಡದೆ ಬಹಳ ದಿನ ಇರುವುದಕ್ಕಾಗುವುದಿಲ್ಲ. ಮುಂದಿನ ಬಾರಿ ಬಂದಾಗ ಅರ್ಧ ದಿನಗಳೆಲ್ಲಾ ನಿಮ್ಮಲ್ಲೇ ಕ್ಯಾಂಪ್ ?"

"ಗೊತ್ತೇ ಇದೆಯಲ್ಲಾ !" ಚಂಗಪ್ಪ ಹುಬ್ಬೇರಿಸಿದ.

"ಖಂಡಿತವಾಗಿಯೂ ಮಾಮಾ !" ದನಿ ಎದೆಯಾಳದಿಂದ ಹರಿದು ಬಂತು.

"ಆಗಲಪ್ಪಾ! ಎಲ್ಲೇ ಇರು ; ಸುಖವಾಗಿದ್ದರೆ ಸಾಕು. ಮಾದೇವ ನಿನಗೆ ಒಳ್ಳೆಯದು ಮಾಡಲಿ"

"ತುಂಬ ಥ್ಯಾಂಕ್ಸ್ !"

ಹಾರ್ದಿಕವಾಗಿ ಕೈಕುಲುಕಿದ ಮುಖಮಂಡಲದಲ್ಲಿ ಸಂತಸದ ಹೊನಲು ಹರಿದಾಡಿತು. ಇಬ್ಬರೂ ಆತ್ಮೀಯ ಆಲಿಂಗನ ಪಡೆದುಕೊಂಡರು.

ಅನಂತರ ದಂಪತಿಗಳು ಬಸ್ಸು ಹತ್ತುವವರೆಗೂ ಇದ್ದು ಚಂಗಪ್ಪ ಊರಿನಕಡೆ ಹೊರಟ.ಮಿಲಿಟರಿಗೆ ಸೇರಿದ ಬಗ್ಗೆ ಅವನು ಚಕಾರ ಎತ್ತದಿದ್ದರೂ ಸಾರ್ವಜನಿಕ ಕ್ಷೇತ್ರದಿಂದ ಸರಿದುದು ಸಮಾಧಾನವಿರಲಿಲ್ಲ. ಹಿಂದೊಮ್ಮೆ ಆ ಪ್ರಸ್ತಾಪ ಬಂದಾಗ ಸೇರಬೇಡವೆಂದು ಒತ್ತಿ ಹೇಳಿದ್ದ. ಆದರೂ ಅವನು ಮುಂದಾದುದು ಮನದಲ್ಲಿ ಅಸಮಾಧಾನದ ತೆರೆಯನ್ನು ಹರಡಿತು.ಗಂಗಮ್ಮನ ಅನಾರೋಗ್ಯವನ್ನು ಕಂಡೂ ಹೊರಟು ಬಿಡುವುದೇ? ಅದಾದರೂ ಅವನನ್ನು ತಡೆಯಲಿಲ್ಲವಲ್ಲಾ, ಎಂದು ಆಕ್ರೋಶಿಸಿತು ಚಿತ್ತ.

ಚಂಗಪ್ಪ ಬಸ್ಸು ಹತ್ತುವ ಮುನ್ನ ಮಾದು ಅಂದ,

"ಬಾಗಂಡಕ್ಕೆ ಬಂದು ಹೋಗಿ ಮಾವಾ. ನಿಮ್ಮನ್ನು ನೋಡಿದರೆ ಅವ್ವ ಅಮ್ಮ ಸಮಾಧಾನ ಪಟ್ಟುಕೊಳ್ಳುತ್ತಾರೆ....ಮುದ್ದು ಹೊರಟ ಬೇಸರ ಹರಿಯುತ್ತದೆ."

ಅದು 'ಹೌದು' ಎನಿಸಿದರೂ ಮನೆಯಲ್ಲಿ ಅಗತ್ಯವಾಗಿ ಮಾಡಲೇಬೇಕಾದ ಕೆಲಸಗಳ ಹೊರೆಯೇ ಇತ್ತು. ಎಂಟ್ಹತ್ತು ದಿನಗಳು ಮನೆಯಲ್ಲಿರಲಿಲ್ಲವಾದುದರಿಂದ ಕೆಲಸಗಳೂ ಅಲ್ಲಲ್ಲೇ ಉಳಿದು ಹೋಗಿವೆ. ಒಂದು ಘಳಿಗೆ ಯೋಚಿಸಿ "ಬರಬಹುದಾಗಿತ್ತು. ಗದ್ದೆ ತೋಟಗಳ ಕೆಲಸವೆಲ್ಲಾ ಅಲ್ಲಲ್ಲೇ ಉಳಿದು ಹೋಗಿದೆ. ನಾಲ್ಕು ದಿನ ಏನೇನು ಮಾಡಬೇಕೋ ಮಾಡಿ, ಒಂದು ದಿನ ಕೈ ಬಿಡುವು ಮಾಡಿಕೊಂಡು....'ಗೌರು'ವನ್ನು ಕರೆದುಕೊಂಡು ಬರುವೆ. ಅವಳು ಹೋಗಿ ನೋಡಬೇಕು ಎನ್ನುತ್ತಿದ್ದಳು."

"ಆಗಲಿ....ಹಾಗೇ ಮಾಡಿ."

"ಹೇಳಿರು, ಮನೆಯಲ್ಲಿ."

"ಆಗಲಿ ಮಾವಾ !"

ಚಂಗಪ್ಪ ಬಸ್ಸು ಹತ್ತಿದ. ಮಾದು ತನ್ನ ಹಾದಿ ಹಿಡಿದ.

ಗಗನಾಂಗಣದಲ್ಲಿ ಕ್ಷೀಣರೇಖಾರೂಪದಲ್ಲಿ ಧೂಮಮಾಲೆ ರಜತಮಾಲೆಯಂತೆ ಆವಿರ್ಭವಿಸಿ ಕಣ್ಮನಗಳನ್ನು ಸೆಳೆಯುತಿತ್ತು. ವಾತಾವರಣ ಆನಂದದಾಯಕವಾಗಿದ್ದರೂ ಮನದ ನೆಲೆಯಲ್ಲಿ ಯಾವುದೋ ಕೀಟ ಕೊರೆಯುತಿದ್ದಂತೆ ಭಾಸವಾಯಿತು.

ಮಾದು ತಲೆಬಾಗಿ ಹೆಜ್ಜೆ ಹಾಕಿದ.

೧೧

ಮುದ್ದಪ್ಪ ಪತ್ನೀ ಸಮೇತನಾಗಿ ಶಾದೀಪುರಕ್ಕೆ ಆಗಮಿಸಿದಾಗ ಪಯಣದ ಹಾದಿಯಲ್ಲಿ ಆರು ದಿನಗಳು ಸಂದಿದ್ದುವು. ಸುಖಕರವಾದ ಸುದೀರ್ಘ ಪಯಣದಲ್ಲಿ ಆದ ಮಾತೃಭೂಮಿಯ ಉದ್ದಂಡ ದರ್ಶನ ತನುಮನ ಗಳಿಗೆ ಅತ್ಯಂತ ಶ್ರದ್ಧೆಯನ್ನು ತುಂಬಿತು. ದಂಪತಿಗಳು ಪುಳಕಿತರಾದರು. ಮುದ್ದಪ್ಪನಿಗೆ ಮರುದಿನದಿಂದಲೇ ದಿನಚರಿ ಆರಂಭ. ಠಾಣ್ಯದ ವಲಯು ಚಿಕ್ಕದೇನೂ ಅಲ್ಲ. ಬೆಟ್ಟದ ಮೇಗಡೆ ಮಟ್ಟಸವಾದ ಸುಂದರ ತಾವಿನಲ್ಲಿ ಮಿಲಿಟರಿ ಠಾಣ್ಯ ಹೂಡಿತ್ತು. ಹಸುರು ಹಸುರು; ಎಲ್ಲಿಂದ ಎಲ್ಲಿಯು ವರೆಗೂ ಹಸುರುಕ್ಕುವ ವನಶ್ರೀ. ಧವಳಗಿರಿಗೆ ಸಮೀಪವಾದ ಶಾದೀಪುರ ವನದೈಸಿರಿಯು ಕೊಡಗನ್ನೂ ಮೀರಿಸುವಂತಿತ್ತು; ಆದರೆ, ಅದರಂತೆ ಸಮೃದ್ಧಿಯಾಗಿ ಬೆಳೆ ಬೆಳೆಯುವ ಪ್ರದೇಶವಲ್ಲ. ಬೆಟ್ಟದ ತಪ್ಪಲಿನ ತಗ್ಗು ಪ್ರದೇಶದ ಹಳ್ಳಿಗಳಲ್ಲಿ ದ್ವಿದಳ ಧಾನ್ಯಗಳೂ ಗೋಧಿ ಮತ್ತು ಭತ್ತವೂ ಬೆಳೆ ಯಲ್ಪಡುತ್ತವೆ. ಠಾಣ್ಯದ ಅಂಗಳದಂಚಿನಲ್ಲಿ ನಿಂತು ಎಲ್ಲೆಡೆಯೂ ಪಕ್ಷಿ ನೋಟ ಬೀರಿದರೆ ಸುತ್ತಮುತ್ತಿನ ಪ್ರಕೃತಿಯ ಮನಮೋಹಕವಾದ ಉಡಿಯಲ್ಲಿ ಮುದ್ದು ಮಗುವಿನಂತೆ ವಿಜೃಂಭಿಸುವ ಸಣ್ಣ ಸಣ್ಣ ಹಳ್ಳಿಗಳು; ಮನೆಗಳ ಬಳಿ ಅಡ್ಡಾಡುವ ದನ, ಕರು, ಕುರಿ, ಕೋಳಿ, ನಾಯಿಗಳು; ನರನಾರಿಯರ ಅಶಾಶ್ವತ ಶರೀರಗಳಲ್ಲಿ ತುಂಬಿ ಹೋಗಿರುವ ನಿತ್ಯ ನೂತನ ಮಾಯಕತೆ. ಮತ್ತು ವಿಶಿಷ್ಟ ಜೀವನದ ವೈಶಿಷ್ಟ್ಯ; ಅವಿದ್ಯೆ ಅಜ್ಞಾನ-ಮೌಢ್ಯ-ನಿರ್ಬಂಧಗಳ ಪದಹತಿಯಲ್ಲಿ ತೊಳಲಿ ಬಳಲುತ್ತಿರುವ ಸ್ತ್ರೀಜನ. ಕಡುಬಡತನದ ಬವಣೆಯಲ್ಲಿ ಎಣೆಯಿಲ್ಲದೆ ಉಸಿರಾಡುವ ಬಾಲವೃಂದ. ಒಂದೊಂದೂ ಒಂದೊಂದೂ ಬಗೆಯ ಭಾವನೆಯನ್ನು ಮೂಡಿಸುವ ಚಿತ್ರಪ್ರಪಂಚ. ಕೆಲವೊಮ್ಮೆ ಹಳ್ಳಿಗರು ಠಾಣ್ಯದ ವಲಯಕ್ಕೆ ದವಸ ಧಾನ್ಯಗಳನ್ನು ಮಾರುವುದಕ್ಕೆ ಬರುವುದುಂಟು. ಹಾಗೆ ಬಂದವರೊಡನೆ ಅವರ ಸಾಮಾಜಿಕ ರೀತಿ–ನೀತಿ ಕುರಿತು ವಿಚಾರ ವಿನಿಮಯ ಮಾಡಿಕೊಳ್ಳಲು ಮುಂದಾಗುವುದು ಚಿತ್ತ.

ಆದರೆ ..

ಮೊದಮೊದಲೇನೋ ಒಂದು ರೀತಿ. ಅನಂತರ ದಿನಗಳೆದಂತೆಲ್ಲಾ ದೈಹಿಕ–ಮಾನಸಿಕ ಶಕ್ತಿಸಾಮರ್ಥ್ಯಗಳು ವ್ಯರ್ಥವಾಗಿ ಕಳೆದುಹೋಗುವಾಗ ಪೂವಿಯ ದುಃಖತಪ್ತ ಮನಃಪ್ರಾಣಗಳು ದಣಿಯುತ್ತಿದ್ದುವು. ಏಕಾಂತ ಜೀವನದಲ್ಲಿ ಎಷ್ಟೇ ಪ್ರಯತ್ನಿಸಿದರೂ ಹೇಗೆ ಮಾಡಿದರೂ ಹೊತ್ತು ಕಳೆಯುವುದು ಸಾಧ್ಯವಾಗುತಿಲ್ಲ. ವಿರಾಮ ...ವಿರಾಮ ದಿನವೆಲ್ಲ ವಿರಾಮ. ಸಾಮಾಜಿಕ ವಲಯದಲ್ಲಿ–ರಾಜಕೀಯ ಕ್ಷೇತ್ರದಲ್ಲಿ ಹಕ್ಕಿಯಂತೆ ಹಾರಾಡಿ, ಮಗುವಿನಂತೆ ನಕ್ಕು ನಲಿದು ನಿರಾಳವಾಗಿ ಉಸಿರಾಡಿದ ಜೀವ ಬೋನಿನ ಕೀರರಿಯಾದೀತೆಂದ ಎಂದೂ ಭಾವಿಸಿರಲಿಲ್ಲ. ಪ್ರಫುಲ್ಲವದನ ತೊಟ್ಟು ಕಳೆದ ಹೂವಿನಂತೆ ದಿನೇದಿನೇ ಮುದುಡಹತ್ತಿತು ; ಕದಡಿ ಬಗ್ಗಡವಾದ ಬಗೆ ಒತ್ತಿಯೊತ್ತಿ ಕೊರಳು ಕಟ್ಟುತಿತ್ತು. ಆತ್ಮ ಸಮೃದ್ಧಿಗೆಂದು ಪ್ರೌಢ ವಿದ್ಯೆಯನ್ನು ಪಡೆದು, ಅಮಿತ ಜ್ಞಾನವನ್ನು ಗಳಿಸಿ ರೂಪಿಸಿದ ಜೀವನವನ್ನು ಉದ್ಧರಿಸಲೇಬೇಕು. ಏನೇ ಇದ್ದರೂ, ಜೀವನಬಂಧ ಬಗೆಹರಿಸಲಾಗದ ಸಮಸ್ಯೆಯಲ್ಲ. ಇಲ್ಲೇ ಸಾಮಾಜಿಕ ಸೇವೆ ಮಾಡಲು ಅವಕಾಶ ಸಿಕ್ಕಿದರೆ ಮಾಡಬಹುದು ಎಂಬ ಯೋಚನೆ. ದಿನಗಳೇನೋ ಓಡುತ್ತಲೇ ಇವೆ. ಸಾಮಾಜಿಕ ಜೀವನಕ್ಕಿಳಿಯುವುದಿರಲಿ, ಬಾಳಿನ ಗುಡಿಗೆ ಪ್ರೌಢರೂಪು ಕೊಡುವುದು ಸಹ ಸಾಧ್ಯವಾಗುತ್ತಿಲ್ಲ. ರಾತ್ರಿಯನ್ನು ಸಾನಂದದಿಂದ ಕಳೆದು ಬೆಳಕು ಹರಿದಾಗ ಏತಕ್ಕೆ ಬೆಳಗಾಯಿತೋ ಎಂಬ ಕೊರಗು ಮನಕ್ಕಂಟುತಿತ್ತು. ಮೇಲಾಗಿ ತನುಮನಗಳನ್ನು ಎಡೆಬಿಡದೆ ಆವರಿಸುವ ದೇಶಮಾತೆಯ ಕೊರಗು, ವಿದೇಶೀಯರ ದರ್ಪ, ಆಳರಸರ ಎಣೆಯಿಲ್ಲದ ಸ್ವಾರ್ಥ ಯೋಚಿಸಿದಷ್ಟೂ ವಿನೂತನ ಸಮಸ್ಯೆಯನ್ನು ಅತ್ಯಂತ ನವುರಾಗಿ ಹರಡುತ್ತವೆ. ಆದರೂ ಸಹ, ಯೋಚನಾತಿರೇಕ ಒಂದು ವಿನೂತನ ಕಾರ್ಯಕ್ಷೇತ್ರವನ್ನು ನಿರ್ಮಿಸುವುದರಿಂದ ಬುದ್ಧಿಕ್ಷೇತ್ರಕ್ಕೆ ಎಣೆಯಿಲ್ಲದ ಕಾಯಕ.

ಮುದ್ದಪ್ಪನಿಗೆ ಮಡದಿಯ ಕಷ್ಟವೇನೆಂಬುದು ಗೊತ್ತು. ಅವಳು ದಿನೇ ದಿನೇ ಕ್ಷೀಣಿಸುತ್ತಿರುವುದೂ ಸಹ ಗಮನಕ್ಕೆ ಬಂದಿದೆ.ಎಷ್ಟೇ ಪ್ರಯತ್ನಿಸಿದರೂ ಪರಿಹಾರ ಕಂಡು ಬರುತ್ತಿಲ್ಲ. ಕೊನೆಯ ಪಕ್ಷ ಒಳ್ಳೆಯ ಪುಸ್ತಕಗಳನ್ನಾದರೂ

ಹೊಂದಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಠಾಣ್ಯದಲ್ಲಿ ಅನೇಕ ಮಂದಿ ಗೃಹಿಣಿಯರಿದ್ದಾರೆ. ಮಕ್ಕಳು ಮರಿಯೂ ಇದ್ದಾರೆ. ವಾತಾವರಣ ಶಾಂತ ಮನೋಹರವಾಗಿದೆ. ಆದರೂ ಹೃದಯಧರಿತ್ರಿ ವಿಚಿತ್ರ ಜಡಿಮೆಯಿಂದ ತುಂಬಿಹೋಯಿತು. ಸಂಪ್ರದಾಯ ರೂಢಿಗಳ ನಡುವೆ, ಅನೇಕ ವೇಳೆ ಯಾವ ಕೆಲಸಕ್ಕೂ ಬಾರದ ವಸ್ತುಗಳಿಗೆ ಅತ್ಯಂತ ಮಹತ್ವಕೊಟ್ಟು ಅವುಗಳೊಂದಿಗೆ ಹೆಣಗುವುದರಿಂದ ಜೀವನಶ್ರದ್ಧೆಯೇ ನಶಿಸುತ್ತಿರುವುದೇನೋ ಎಂಬ ಶಂಕೆ ಇಲ್ಲದಿಲ್ಲ....

ತಿಂಗಳ ಶ್ರೇಣಿ ಕಳೆದರೂ ಜೀವನದಲ್ಲಿ ಯಾವ ಮಾರ್ಪಾಡೂ ಆಗಲಿಲ್ಲ...ಆಗುವಂತೆಯೂ ಇಲ್ಲ ಎಂಬುದನ್ನು ರೋಮರೋಮಗಳೂ ಈಗ ಅರಿತುಕೊಂಡಿವೆ.

ಮುದ್ದಪ್ಪ ಏನೋ ಒಂದು ರೀತಿಯಲ್ಲಿ ಯೋಚನಾಭರಿತನಾಗಿ ಎದೆಯ ನಿವೇದನೆಯನ್ನೆಲ್ಲ ಒಂದೇ ಬಾರಿಗೆ ಹೊರಹಾಕಿದ "ನೀನು ಕೊರಗಿ ಕೊರಗಿ ನೈ ಕೆಡಿಸಿಕೊಳ್ಳಬೇಡ ಪೂವಿ, ಬಡವರು–ಭಿಕಾರಿಗಳು ತುಂಬಿಹೋಗಿರುವ ಈ ದೇಶದಲ್ಲಿ ...ಯಾವುದೇ ವೈಭವಯುಕ್ತವಾದ ಜೀವನ ಮಾನವ ಸಮಾಜದ ಹೃದಯ ಹೀನತೆಯಂತೆ ಕಾಣಿಸುತ್ತದೆ. ಭಗವಂತ ನಮಗೆ ಪ್ರಸಾದಿಸಿದ ಈ ಜೀವನ ಯಾವ ಶುಭಕ್ಕೋ ಯಾರಿಗೆ ಗೊತ್ತು ?"

ಪೂವಿ ಮಾತಾಡದೆ ಮುಗುಳು ನಕ್ಕಳು.

ವಸಂತಪುಷ್ಪಾಭರಣಧಾರಿಣಿ ವನರಾಜಿಯ ವೈವಿಧ್ಯಮಯ ತರಂಗಗಳ ಮೇಲೆ ಆನಂದ ಪ್ರಮತ್ತ ದೃಷ್ಟಿಯನ್ನು ಹರಿಸಿ "ಕೊಡಗಿನ ವನ್ಯಪ್ರದೇಶ–ಸಾರ್ವಜನಿಕ ಕ್ಷೇತ್ರ ಹೇಗೆ ಒಂದಕ್ಕೊಂದು ಸಾಮರಸ್ಯವನ್ನು ಹೊಂದಿದ್ದುವೋ ಹಾಗೆಯೇ ಈ ಪ್ರದೇಶವೂ ನಮ್ಮ ಮಿಲಿಟರಿ ಠಾಣ್ಯಕ್ಕೆ ಕರುಣಾಶ್ರಯ ನೀಡಿದೆ."

ಪೂವಿಯ ಹಸನ್ಮುಖ ಸಮ್ಮತಿ ಸೂಸಿತು.

ಮುದ್ದಪ್ಪ ಮುಂದುವರಿದ "ಜಂಬೂರು ವಿಷ್ಣುಮೂರ್ತಿ ಸಾರ್ವಜನಿಕ ಕ್ಷೇತ್ರದಿಂದ ನಿರ್ಗಮಿಸಿರುವುದರಿಂದ ಅವನ ಸಾಲಿಗೆ ನನ್ನನ್ನೂ ಸೇರಿಸಿ 'ಹೆದರಿ' ನಿರ್ಗಮಿಸಿದ ಎನ್ನುತ್ತಿದ್ದಾರಂತೆ ಕೆಲವರು. ಏನಾದರೂ ಸಿಕ್ಕಿದರೆ ಸಾಕು....ರೆಕ್ಕೆ ಪುಕ್ಕ ಬೆಳಸಿ ಬಿಡುತ್ತಾರೆ ಈ ಜನ !"

"ಹೆದರಿದವರು ಮಿಲಿಟರಿಗೆ ಸೇರಿಕೊಳ್ಳುತ್ತಾರೆಯೇ, ಹಾಯಾಗಿ ಮನೆಯಲ್ಲಿರುತಿದ್ದರು." ಎಂದಳು ಪೂವಿ.

"ಅದು ...ಹೇಳು."

ಗಾಳಿಗೊಲಿದ ಮುಂಗುರುಳು ಆಕೆಯ ಸುಂದರವಾದ ಮುಖಬಿಂಬಕ್ಕೆ ವಿನೂತನ ಶೋಭೆಯನ್ನುಂಟುಮಾಡಿತ್ತು. ಮನೋರಾಜ್ಯದಲ್ಲಿ ಮೂಡಿದ ಮೇಘಗಂಭೀರ ಮೊಲುರವವನ್ನವಲೋಕಿಸುತ್ತ ಏನೋ ಒಂದು ಬಗೆಯಲ್ಲಿ— "ಒಂದು ವೇಳೆ ಬ್ರಿಟಿಷ್ ಸರಕಾರದ ಕೀಲು ಮುರಿದು ರಾಷ್ಟ್ರೀಯ ಸರಕಾರ ಪ್ರತಿಷ್ಠಾಪನೆಯಾದರೆ ಈ ಜನ ಇನ್ನಾವ ಬಣ್ಣ ಬಳಿಯುತ್ತಾರೋ, ನೋಡಬೇಕು !"

ಮಡದಿಯ ಶಾಂತಸ್ವರ ಮನವನ್ನರಳಿಸಿತು. ಮುದ್ದಪ್ಪ ಮಂದಹಾಸ ಬೀರಿದ.

ಮೇಘಾಚ್ಛಾದಿತ ಪೂರ್ವಗಗನ ಮಂಚದಮೇಲೆ ಕರ್ಪೂರ ಧವಲ ಸುಂದರ ಮನೋಹರ ಚಂದ್ರಮನ ಅಖಂಡಭಾಗ್ಯಪ್ರತಿಷ್ಠಿತವಾದ ಮುಹೂರ್ತದಲ್ಲಿ-ಅಂಧಕಾರದಿಂದ ತುಂಬಿದ್ದ ಸುತ್ತಮುತ್ತಿನ ಗಿರಿಶ್ರೇಣಿಯ ಅಭ್ರಭೇದೀ ಶಿಖರಗಳು ಚಂದ್ರಕಾಂತಿಯ ಮಂಜುಳಧಾರೆಯಲ್ಲಿ ಆಪ್ಲಾವಿತಗೊಂಡಾಗ ಮಣಿ ಮುಕುಟ ಹೊತ್ತಂತೆ ವರ್ಣರಂಜಿತವಾದುವು. ಪ್ರಕೃತಿಯ ಪರಮ ಸೌಂದರ್ಯರಾಜಿಗೆ ಮನತೆತ್ತು ದಂಪತಿಗಳು ಅಂಗಳದಂಚಿನ ಹಸುರು ಹುಲ್ಲಿನ ಮೆತ್ತೆಯಮೇಲೆ ಮಂಡಿಸಿದರು. ಮುದ್ದಪ್ಪ ಪ್ರಕೃತಿಯ ಸೊಬಗನ್ನು ಸವಿಯುತ್ತ ನುಡಿದ,

"ತಿಮ್ಮಯ್ಯ ಐ.ಎನ್.ಎ. ಸೇರಿಕೊಂಡುದುದು ತಪ್ಪು ಎಂದು ಹಿಂದೆ ಅನ್ನಿಸುತಿತ್ತು. ಈಗ ಎಷ್ಟೋ ಬಾರಿ ಸೇನೆ ಏಕಾದರೂ ಸೇರಿಕೊಂಡನೋ ಎಂದುಕೊಂಡಿದ್ದೆ. ಈಗಿನ ಸ್ಥಿತಿಯಲ್ಲಿ ದೇಶಸೇವೆಗೆ ಅದೇ ಸೂಕ್ತಕ್ರಮ; ಅದೇ ಸರಿಯಾದ ಮಾರ್ಗ. ಇಲ್ಲದಿದ್ದದಲ್ಲಿ ಈ ವಿದ್ರೋಹ ಸರಕಾರವನ್ನು ಕೆಳಗಿಳಿಸುವುದು ಕಷ್ಟ. ನಾನು ಹೊಟ್ಟೆ ಬಟ್ಟೆಗಾಗಿ ಸರ್ವಿಸಿಗೆ ಸೇರಿಕೊಂಡಿದ್ದೇನೋ ಆಯಿತು. ಈಗ ನೋಡಿದರೆ ಇಂಗ್ಲಿಷರ ಬಳಿ ಕೆಲಸ ಮಾಡುವುದೇ ಬೇಡವೆಂದು ಅನಿಸುತ್ತೆ. ನಮ್ಮ ಸ್ಥಿತಿಗತಿ ಚೆನ್ನಾಗಿದ್ದಿದ್ದಲ್ಲಿ ನಾನೂ ಸಹ ಐ. ಎನ್. ಎ. ಸೇರಿಕೊಳ್ಳಬಹುದಾಗಿತ್ತು." ಧ್ವನಿ ಎದೆಯಾಳದಿಂದ ಹರಿದು ಬಂತು.

ಪೂವಿ ಮಾತಾಡಲಿಲ್ಲ. ದೇಶದ ಪರಿಸ್ಥಿತಿಯನ್ನು ಕುರಿತು ಚಿಂತಿಸುತಿತ್ತು ಮನಸ್ಸು. ಮುದ್ದಪ್ಪ ಯಾವುದೋ ಯೋಚನಾ ಜಗತ್ತಿನಲ್ಲಿ ಸ್ವಲ್ಪಹೊತ್ತು ಮುಳುಗಿದ್ದು ಮತ್ತೆ ಮುಂದುವರಿದ"ಹಿಂದೂ ಮುಸ್ಲಿಮರ ಮಧ್ಯೆ ಇಂಗ್ಲಿಷರು ಸಾಮಾನ್ಯ ವಿಷಬೀಜ ಬಿತ್ತುತಿದ್ದಾರೆಯೇ? ಮಹಾತ್ಮಾ ಗಾಂಧೀಜಿಯವರ ಅಸಹಕಾರ ಆಂದೋಳನವನ್ನು ಶಕ್ತಿ ಸಾಮರ್ಥ್ಯಗಳಿಂದ ಮಾತ್ರವಲ್ಲ,ಸಮಸ್ತ ಕುಟಿಲೋಪಾಯಗಳಿಂದ ಮಟ್ಟಹಾಕಲು ಹವಣಿಸುತಿದ್ದಾರೆ. ಸ್ವದೇಶ ಚಳವಳಿ ಇನ್ನಾವ ರೂಪ ತಳೆಯುತ್ತದೋ ಎಂಬ ಭಯವಾಗುತ್ತದೆ. ಇಂದಿನ ಪರಿಸ್ಥಿತಿಯಲ್ಲಿ ಹೀಗೇ ಎಂದು ದೃಢವಾಗಿ ನಿರ್ಧರಿಸುವುದು ಕಷ್ಟ."

"ಅವರೆಷ್ಟೇ ಕುಟಿಲೋಪಾಯಗಳನ್ನು ಬಳಸಿದರೂ ಶತಶತಮಾನ ಗಳಿಂದ ಅನ್ಯಾಯ ಅತ್ಯಾಚಾರಗಳಿಗೆ ಸಿಕ್ಕಿ ತೊಳಲಿ ಬಳಲಿದ ಜನ ಅಷ್ಟು ಸ್ವಲ್ಪದರದಲ್ಲಿ ಮೋಸ ಹೋಗಲಾರರು. ಇದುವರೆಗೆ ತನು ಮನ ಧನಗಳನ್ನು ನೀರಿನಂತೆ ಚೆಲ್ಲಿಕೊಟ್ಟಿದ್ದಾರೆ. ಈಗ ಅಷ್ಟು ಸುಲಭವಾಗಿ ಎಚ್ಚರ ತಪ್ಪಿ ಯಾರೇ ?" ಎಂದಳು ಪೂವಿ. ಆ ಮುಹೂರ್ತದಲ್ಲಿ ಅಕ್ಷಿಪಟಲದ ಮೇಲೆ ಅಸಹಕಾರ ಆಂದೋಳನದ ಉಗ್ರರೂಪ ಚಲನಚಿತ್ರದಂತೆ ಸುಳಿಸುಳಿದಳಿಯಿತು.

"ಇಂಗ್ಲಿಷರ ಕತೆಯಂತೂ ಒತ್ತಟ್ಟಿಗಿರಲಿ, ಇಂಗ್ಲಿಷರ ಅಭಿಮಾನಿ ಗಳಾದ ಕೆಲವು ದೇಶೀಯರೂ,ದೇಶೀಯ ರಾಜಮಹಾರಾಜರುಗಳೂ ಅಸಹಕಾರ ಆಂದೋಳನದ ಬಗೆಗೆ ತಳೆದ ಧೋರಣೆಯನ್ನು ಗಮನಿಸಿದರೆ ಇವರೆಲ್ಲ 'ಸ್ವರಾಜ್ಯ' ವನ್ನು ಯಾವ ರೀತಿ ಅರ್ಥ ಮಾಡಿಕೊಂಡಿದ್ದಾರೆ ; ಇನ್ನಾವ ರೀತಿ ಕಲ್ಪಿಸಿಕೊಂಡಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಅದರಲ್ಲೂ ಇವರೆಲ್ಲ ಕಲಿತ ವರ್ಗ .. ಎಂತಹ ಆಶ್ಚರ್ಯಕರ ಪೂವಿ ?"

"ಛೀ ! ಪರಮ ಅನ್ಯಾಯ ! ಬಹು ಸಂಖ್ಯಾತ ಪ್ರಜೆಗಳ ನಮ್ರ ವಿನಂತಿಗೆ ರಾಕ್ಷಸ ಕಠೋರ ನೀತಿ ಭಾರತ ಸಂಸ್ಕೃತಿಗೆ ಕಳಂಕಪ್ರಾಯ. ಸುಭಾಸ್‌ಚಂದ್ರಬೋಸರು ಸಿಡಿದೆದ್ದುದು ಈ ಮಂದಗಾಮಿತ್ವ ಮತ್ತು ಇಬ್ಬಗೆಯ ನೀತಿಗಳಿಂದಲೇ. ಅವರ ದಿಟ್ಟತನ ಮೆಚ್ಚುವಂತಾದ್ದು ..ಪುರುಷತ್ವ ಅಂದರೆ ಅದು ...! ಅವರ ಜೀವನ ಸಾರ್ಥಕತೆ ಅಲ್ಲಿದೆ. ಈ ಚಳವಳಿ-ಬೇಡಿಕೆ-ದಬ್ಬಾಳಿಕೆ-ಅನೀತಿ ಇವೆಲ್ಲಾ ಅವರಿಗೆ ಶೀರ ಕ್ಷುದ್ರವಾಗಿ ಕಂಡುವೇನೋ.... ಇತರರಿಗೆ ಒಗ್ಗಿ ಹೋಗಿರುವಂತೆ !"

ದಂಪತಿಗಳ ತುಟಿಯಲ್ಲಿ ಅಮೃತರೇಖೆಯಂತಹ ಎಳೆಗಳು ಹರಿದಾಡಿತು.

ಮುದ್ದಪ್ಪ ಒಂದು ಘಳಿಗೆ ಸುಮ್ಮನಿದ್ದು ಭಾವನಾಭಂಗಿಯಲ್ಲಿ ಮಡದಿಯ ಹೊಮೈಯನ್ನು ಅದುಮಿ ಹಿಡಿದು ನುಡಿದ "ಹಾಗಿದ್ದರೂ ಕಷ್ಟ, ಹೀಗಿದ್ದರೂ ಕಷ್ಟ, ಶಸ್ತ್ರಾಸ್ತ್ರಗಳಿಲ್ಲದ ಬಡದೇಶ ಇದು. ಇಂದಿನ ಪರಿಸ್ಥಿತಿಯಲ್ಲಿ ಗಾಂಧೀಜಿಯವರ ಅಸ್ತ್ರವೇ ಅಸ್ತ್ರ! ಆದರೆ....? ಯಾವುದೋ ಯೋಚನಾಸರಣಿಯಲ್ಲಿ ಮಾತು ಅಷ್ಟಕ್ಕೆ ತುಂಡುಗಡಿಯಿತು.

"ಆದರೆ ಏನು?"

"ನಮ್ಮಲ್ಲಿ ಆತ್ಮಶಕ್ತಿಯಿಲ್ಲ ಪೂವಿ. ಭಾರತದ ಮಿಲಿಟರಿ ರಂಗ ಪೋಲೀಸ್ ಖಾತೆ ಕೋವಿಗಳನ್ನು ದೇಶೀಯರ ಕಡೆ ತಿರುಗಿಸುವುದರ ಬದಲು ಒಮ್ಮೆಗೇ ಇಂಗ್ಲಿಷರ ಕಡೆ ತಿರುಗಿಸಿದರೆ ಕತೆ ಮುಗಿದುಹೋಗುತ್ತದೆ...ಇಷ್ಟು ದೊಡ್ಡ ಪೋಲೀಸ್ ಖಾತೆ ಮಿಲಿಟರಿರಂಗ ಇಂಗ್ಲಿಷರ ಗುಲಾಮರಾಗಿರುವುದರಿಂದಲೇ ದೇಶ ಇನ್ನೂ ದಾಸ್ಯದಲ್ಲಿದೆ. ಈ ಕ್ಷೇತ್ರಗಳು ತಮ್ಮ ದಾಸ್ಯತೆಯನ್ನರಿತುಕೊಂಡಿದ್ದಿದ್ದರೆ ನಮ್ಮ ರಕ್ತ ಕೆನ್ನೀರಿನಂತೆ ಚೆಲ್ಲಾಡುತ್ತಿರಲಿಲ್ಲ..."

"ನಿಜ...ಆದಂತೂ ಆಗಲಿಲ್ಲವಲ್ಲಾ, ಇನ್ನೂ ಹೆಚ್ಚಿನ ಪ್ರಾಣ ನಷ್ಟವಾಗುವುದರೊಳಗಾಗಿ ಕ್ರಾಂತಿವೀರರು ತಮ್ಮ ಗುರಿ ಮುಟ್ಟಿದರೆ ಸಾಕು. ಅನಂತರವಾದರೂ ದೇಶದಲ್ಲಿ ಶಾಂತಿ ನೆಲಸೀತೇನೋ...ಈ ಅನಿಶ್ಚಿತತೆ ಎಲ್ಲರಿಗೂ ಸಾಕಾಗಿಬಿಟ್ಟಿದೆ."

"ಅದರಲ್ಲೂ ಕಷ್ಟವಿದೆ. ಬಡತನ–ದಬ್ಬಾಳಿಕೆಗಳು ನಮ್ಮವರನ್ನು ಅಂಧಕಾರದಲ್ಲಿ ಮುಳುಗಿಸಿವೆ ನಾನಾ ದೃಷ್ಟಿಯಿಂದ ನೋಡಿದರೆ ನಾವು ಅಪ್ರಬುದ್ಧರು. ಈ ಬೃಹತ್ ದೇಶದಲ್ಲಿರುವ ಸಮಸ್ಯೆಗಳೂ ಸಾಮಾನ್ಯವಲ್ಲ ಇವನ್ನೆಲ್ಲ ಸುವ್ಯವಸ್ಥೆಯಿಂದ ನಡೆಸಿಕೊಳ್ಳುವುದೂ ಕಷ್ಟವೇ."

ಪೂವಿ ಉತ್ಕಂಠೆ ಯಾದಳು. ಹಳೆಯ ವಿಚಾರವನ್ನೆಲ್ಲ ಮೆಲುಕುಹಾಕಿತು ಮನಸ್ಸು ಕ್ರಾಂತಿವೀರರ ಆಂದೋಳನದಲ್ಲಿ ಯಾವುದು ಆಗಬಾರದೋ ಅದೇ ನಡೆದುಹೋಗಿದೆ. ಭಾರತಾಂಬೆಯ ಅಂಗಾಂಗಗಳಿಗೂ ಮುಳ್ಳು ಚುಚ್ಚಿಯಾಗಿದೆ ಭಾರತೀಯರು ಆಕೆಯ ಸ್ಥಿತಿಗತಿಯನ್ನು ಅರಿತುಕೊಳ್ಳದೆ ಹೋದರೆ ನಿಜವಾಗಿಯೂ ಆಕೆ ಅಸ್ವಸ್ಥಳೂ ದುರ್ಬಲಳೂ ಆಗುತ್ತಾಳೆ....ಮನಸ್ಸಾಗರದಲ್ಲಿ

ಅಲೆಅಲೆಯಾಗಿ ವಿಚಾರವಾಹಿನಿ ಹರಿದಾಡುತಿತ್ತು. ಒಂದೆರಡು ಘಳಿಗೆ ನಿಶ್ಶಬ್ದವಾಗಿ ಉರುಳಿದುವೋ ಏನೋ....ಅನಂತರ ಮುದ್ದಪ್ಪ ಮೌನಮುರಿದ,

"ಇಂಗ್ಲಿಷರು ಕಾನನಗಳಲ್ಲಿ ಕಾಡುಮನುಷ್ಯರಂತೆ ಜೀವಿಸುತಿದ್ದ ಕಾಲದಲ್ಲಿ ನಮ್ಮ ನಾಡು ಪ್ರಬುದ್ಧವಾಗಿತ್ತು. ಆದರೇನು ? ಕಾಲಕ್ರಮೇಣ ದಾಸ್ಯದಲ್ಲಿ ಸಿಕ್ಕಿ ಸರ್ವಶಕ್ತಿಯನ್ನು ಕಳೆದುಕೊಂಡಿದ್ದರಿಂದ ದೇಶದ ಅವನತಿಗೆ ಕಾರಣವಾಯಿತು. ಇಲ್ಲದಿದ್ದಲ್ಲಿ ನಾವು ಯಾರಿಗೂ ಕಡಿಮೆ ಇರುತ್ತಿರಲಿಲ್ಲ...."

"ಆ ಕಾಲದಲ್ಲೇ ನಮ್ಮವರು ಪ್ರಬುದ್ಧರಾಗಿದ್ದರು ಎಂದರೆ ಒಮ್ಮೆ ಪಠಾಣರಿಗೆ, ಇನ್ನೊಮ್ಮೆ ಮಹಮ್ಮದೀಯರಿಗೆ, ಮೇಲಾಗಿ ಇಂಗ್ಲಿಷರಿಗೆ ಹೇಗೆ ಶರಣಾದರು ? ಇಂದು ಆ ಪ್ರಶ್ನೆ ಉದ್ಭವಿಸಿದಾಗ ಇತಿಹಾಸದ ಪುಟಗಳನ್ನು ತಿರುವಿ ಹಾಕಿ, ವೀರಪುರುಷರ ಉಪಮಾನವನ್ನು ಉದಾಹರಿಸುವುದೆಂದರೆ ಕೇವಲ ಬಾಲಿಶವಾಗಿ ತೋರುವುದಿಲ್ಲವೇ ? ನೀವು ಏನಾದರೂ ಅನ್ನಿ; ಇಂದಿನ ಪರಿಸ್ಥಿತಿಯಲ್ಲಿ ಎಲ್ಲವೂ ಹಾಸ್ಯಾಸ್ಪದ...ಅತ್ಯಂತ ಲಜ್ಜಾಸ್ಪದ....

ಮುದ್ದಪ್ಪ ಮಂದಸ್ಮಿತನಾದ. ನಗು ಲಘುಹಾಸ್ಯಭರಿತವಾಗಿದ್ದರೂ ಅತ್ಯಂತ ಸಮಂಜಸವಾಗಿ ನುಡಿ ಹೊರಬಿತ್ತು "ಎಲ್ಲರಿಗೂ ಅಂತಹ ಸಂದೇಹಗಳುಂಟಾಗುವುದು ಸಹಜ- ಎಷ್ಟೇ ಚಾಣಾಕ್ಷನಾಗಿರಲಿ ಇನ್ನೆಷ್ಟೇ ಮೇಧಾವಿಯಾಗಿರಲಿ ಆ ಸಂದರ್ಭದಲ್ಲಿ ಸೋಲುತ್ತಾನೆ. ಹೇಗೆ ಎಂಬುದನ್ನು ವಿಶ್ಲೇಷಣೆ ಮಾಡಬಲ್ಲವರಿಗೆ ಅದರ ರಹಸ್ಯ ಹೊಳೆಯಬಹುದು....ಸುಮ್ಮನೆ ವಾದೋಪವಾದಗಳಿಂದ ಈಗ ಏನೂ ಪ್ರಯೋಜನವಿಲ್ಲ. ಇಂದು ಪ್ರೇಮ ಉತ್ಸಾಹ ನಿಷ್ಠೆಗಳಿಂದ ಕೂಡಿದ ದೇಶಬಂಧುಗಳ ವಿದ್ವೇಷಹೀನತೆ ತಾಪತ್ರಯ ಪಡುತ್ತಿರುವ ಕಾರಣವೂ ಅದೇ ಎಂಬುದರ ಅರಿವುಂಟಾದರೆ ಅದರ ನಿವಾರಣೆ ಅನಿವಾರ್ಯವಾದೀತೇನೊ... ಆದರೆ ಅದೇ ಬೆಳಕಿಗೆ ಬರುತ್ತಿಲ್ಲ. ಒಂದು ಮಹಾ ಪ್ರಯತ್ನಕ್ಕೆ ಬೇಕಾಗುವ ಸ್ನೇಹ ಸೌಜನ್ಯತೆ ದೀರ್ಘಕಾಲ ಸಹಿಷ್ಣುತೆ ಕಾರ್ಯದಕ್ಷತೆ ರಾಜಕೀಯ ನಿಪುಣತೆ ಸಾಮಾನ್ಯ ಪ್ರಜೆಗಳಿಗಿರುವುದು ಕಷ್ಟ. ಒಂದುವೇಳೆ ಇದ್ದರೂ ಸಮಯಸ್ಫೂರ್ತಿ ಬರುವುದಂತೂ ಮತ್ತೂ ಕಷ್ಟ. ನಮ್ಮಲ್ಲಿ ಶಕ್ತಿಶೌರ್ಯಾದಿಗಳು ಮಾತ್ರವಲ್ಲ ; ಲೋಪದೋಷಗಳೂ ಇವೆ. ನಾವೂ ಸಹ ಮಾನವ ಮಾತ್ರರು ಎಂಬುದನ್ನು ಮರೆಯಬಾರದು ಪೂವಿ."

ಹಾ .....!

ಆ ಮೇಘವರ್ಷಿತ ಶೈತ್ಯವಾರಿಯಿಂದ ಎದೆಯ ಬನದಲ್ಲಿ ಉರಿಯುತಿದ್ದ ಕಿಚ್ಚು ನಂದಿಹೋಯಿತು. "ಹೌದು, ನಾವೂ ಸಹ ಮಾನವ ಮಾತ್ರರು" ಎಂದುಕೊಂಡಳು ಪೂವಿ.

ಝುಗಝುಗಿಸುವ ನಕ್ಷತ್ರಗಳ ಮಾಲೆ ಸೂಡಿದ ಗಗನಕಾಳಿಕೆ ಘನ ಕೃಷ್ಣ ಕೌಶೇಯ ಉತ್ತರೀಯವನ್ನು ಹೊದ್ದರೂ ಕೌಮುದಿಯ ಸುರ ಸುಂದರ ಕಾಂತಿಯಲ್ಲಿ ಮಿಂದು ಪುನೀತಳಾದಳೋ ಎಂಬಂತಿದೆ ಸ್ತಬ್ಧ ಮಹಿಮಾಮಯ ಸನ್ನಿವೇಶ ...... ಆ ಭಗವದ್ ಕೃಪೆಯಲ್ಲಿ ದೃಷ್ಟಿಯನ್ನಟ್ಟಿ ಯಾವುದೋ ಅನನ್ಯ ಅನುಭೂತ ಶೀಕರಸಿಕ್ತ ಶಾಂತಿಯಲ್ಲಿ ಮುಳುಗಿದಂತೆ ಕುಳಿತಳು ಪೂವಿ. ತುಟಿಗಳು ಬಿರಿಯಲಿಲ್ಲ.

ಹೊತ್ತು ಹತ್ತರ ಅಂಚಿನಲ್ಲಿತ್ತು.

ಠಾಣ್ಯದ ವಲಯದಲ್ಲಿ ಉರಿಯುತಿದ್ದ ವಿದ್ಯುದ್ದೀಪಗಳು ಚಂದ್ರಕಾಂತಿಗಳುಕಿ ನಾಚಿದುವೋ ಎಂಬಂತೆ ಮಂದ ಮಂದ ಬೆಳಕು ಚೆಲ್ಲುತ್ತಿವೆ. ಕೆಲವು ಸ್ತ್ರೀಪುರುಷರು ಅಲ್ಲಲ್ಲಿ ಅಡ್ಡಾಡುತಿದ್ದಾರೆ. ಉಳಿದವರು ಮಲಗಿ ಆಗಲೇ ಎಷ್ಟೋ ಹೊತ್ತಾಗಿದೆ. ಆ ಶೀತಲ ಶಾಂತಿಯ ಬೃಹನ್ಮೌನ ಮನಃಪ್ರಾಣಗಳಿಗೆ ಶೀಲ ಸಂಕೋಚಗಳನ್ನೂಡಿಸಿ ಕಾಯಕಲ್ಪಗೈಯ್ಯುತ್ತಿವೆ ನರನರಗಳ ಎಳೆ ಎಳೆಗಳು ದೃಢವಾಗುತ್ತಿರುವಂತೆ ಒಂದು ವಿಧವಾದ ವಿಚಿತ್ರ ಜಡಿಮೆಯನ್ನು ತುಂಬಿಕೊಳ್ಳುತ್ತಿವೆ. ವನವಿಹಾರೀ ವೀಚಿವಾಯು ಅತ್ಯಂತ ಆಸ್ತೆಯಿಂದ ಮುಖ ಮೈಗಳನ್ನು ಮುದ್ದಿಸಿ ಮುದ್ದಿಟ್ಟು ಪಯಣಿಸಿದ.

"ಪೂವೀ .."

"ಞ"

"ಎಷ್ಟೋ ಸಮಯ ಅಲ್ಪವಸ್ತುಗಳು ಭೂಮವಾಗಿ ವಿಜೃಂಭಿಸುತ್ತವೆ. ಇನ್ನೆಷ್ಟೋ ಸಮಯ ಅತ್ಯಂತ ಮಹತ್ವವುಳ್ಳ ಪದಾರ್ಥಗಳು ಕಸಕ್ಕೂ ಕಡೆಯಾಗಿ ಪರಿಗಣಿಸಲ್ಪಡುವ ಸಂಭವವುಂಟು. ಸಂಪ್ರದಾಯ-ಕರ್ತವ್ಯದಕ್ಷತೆ-ಸಭ್ಯತೆಗಳ ಚೌಕಟ್ಟಿನಲ್ಲೂ ಸಹ ಮಾನವ ಕರ್ತವ್ಯಲೋಪ ಹೊಂದುತ್ತಾನೆ. ಇದರಲ್ಲಿ ವಿಶೇಷವೇನೂ ಇರುವುದಿಲ್ಲ........ಹಳೆಯ ಧಾಟಿಯಲ್ಲೇ ಹೇಳುವುದಾದರೆ 'ವಿಧಿವಿಲಾಸ' ಎನ್ನಬಹದು, ಅಂದರೆ ಒಪ್ಪುತ್ತೀಯಷ್ಟೇ?"

"ಅನ್ನಲೇಬೇಕಲ್ಲ ? ಸಜೀವ ಸತ್ಯದ ಪುರಾವೆ ಇಲ್ಲ ಎನ್ನುವುದು ಹೇಗೆ ?"

ಇಬ್ಬರ ಮುಖ ಮಂಡಲಗಳೂ ಮೋಘ ಗಂಭೀರವಾದುವು.

ಬಾನಿನಲ್ಲಿ ಚಂದಿರ ಮುಗುಳು ನಗುತಿದ್ದ. ಇಬ್ಬರೂ ಮಾತಾಡುತ್ತಲೇ ಇದ್ದಂತೆ ವೇಳೆ ಮಧ್ಯರಾತ್ರಿಯನ್ನು ಕಳೆದು ಮುಂದೆ ಹೆಜ್ಜೆಯಿಟ್ಟಿತು. ಬಹುಶಃ ಮಾತಿನ ಉತ್ತರಾರ್ಧವೆಲ್ಲಾ ಸಂಸಾರಿಕವಾಗಿ ನಡೆದಿರಬಹುದು. ವಾಚನವನ್ನೂ ವಾಚ್ಯಾರ್ಥವನ್ನೂ ತಮ್ಮ ತಮ್ಮೊಳಗೆ ಅದೆಷ್ಟು ಹೊತ್ತು ವಿಮರ್ಶಿಸಿಕೊಂಡರೋ. ಅಂತೂ, ಆ ಮುಹೂರ್ತ ಅತ್ಯಂತ ಸುಖದಾಯಕವಾಗಿತ್ತು. ಮಹಾಸಾಗರದಲ್ಲಿ ನೀರಿನ ಗುಳ್ಳೆಯೆದ್ದು ತೇಲಿ ನಲಿದಂತೆ.

ಬಹುಶಃ,

ಬೆಳಗಾಗಿ ಹಾಸಿಗೆ ಬಿಟ್ಟಾಗ ಬಹಳ ಹೊತ್ತೇ ಆಗಿದ್ದರೂ ಆ ಘಳಿಗೆಯಲ್ಲಿ ಗಡಿಯಾರದ ಕಡೆ ಇಬ್ಬರ ನೋಟವೂ ಹರಿಯಲಿಲ್ಲ. ದಿನಚರಿ ಎಂದಿನಂತೆಯೇ ಆರಂಭವಾಯಿತು. ಅಂದಿನ ಟಪ್ಪಾಲಿನಲ್ಲಿ ದೊರೆತ ಶಿಮ್ಮಯ್ಯನ ಕಾಗದ ಸುಖದುಃಖಗಳೆರಡನ್ನೂ ಒಂದೇ ಬಾರಿಗೆ ನೀಡಿತು. ಮುದ್ದಪ್ಪ ಸ್ವಾತಂತ್ರ್ಯಸಂಗ್ರಾಮದಿಂದ ಹಿಮ್ಮೆಟ್ಟಿ ಮಿಲಿಟರಿಗೆ ಸೇರಿಕೊಂಡುದುದಕ್ಕೆ ಅಪಾರವಾದ ವ್ಯಸನವನ್ನು ಸೂಚಿಸಿ ಪತ್ರವನ್ನು ಮುಗಿಸಿದ್ದ.

ಇಬ್ಬರೂ ಪರಸ್ಪರ ಮುಖ ನೋಡಿಕೊಂಡರು.

೧೨

ಗತಿಸಿದ ವರ್ಷಮಾನ ಶಾಶ್ವತ ದುಃಖವನ್ನಾಗಲೀ ಶಾಶ್ವತ ಸುಖವನ್ನಾಗಲೀ ಪ್ರಾಸಾದಿಸದೆ ಅವಿರಲಸ್ರಾವೀ ಗಂಗಾಧಾರೆಯಂತೆ ಉರುಳಿ ಹೋಯಿತು.

ಆದರೆ ನವೋದಿತ ವರ್ಷಮಾನ ನೀಡಿದ ಸುಖದುಃಖಗಳ ಪರಂಪರೆಗೆ ಇತಿಮಿತಿಯೇ ಇಲ್ಲವೇನೋ...

ಮುದ್ದಪ್ಪ ಮುದ್ದು ಮುದ್ದಾದ ಮಗುವನ್ನು ಪಡೆದಿರುವುದಾಗಿ ಆನಂದ ಪ್ರಮತ್ತನಾಗಿ ಪತ್ರಮುಖೇನ ನಿವೇದಿಸಿಕೊಂಡಾಗ ಗಂಗಮ್ಮನ ಹೃದಯದ ಗಿಂಡಿ ಸಂತೋಷಾಮೃತದಿಂದ ತುಂಬಿಹೋಯಿತು. ಆದರೆ ದುರದೃಷ್ಟವಶಾತ್ ಅದೇ ಸಮಯದಲ್ಲಿ ಅವಳ ದೇಹಸ್ಥಿತಿ ತೀವ್ರ ಗತಿಯಲ್ಲಿ ಕ್ಷೀಣಿಸುತಿತ್ತು. ಯಾವ ಚಿಕಿತ್ಸೆಯೂ ನೆರವು ನೀಡಲಿಲ್ಲವಾದುದರಿಂದ ಬಡತನದ ಬವಣೆಗೊಂದು ಮುಳ್ಳಿನ ಕಿರೀಟ ಲಭಿಸಿದಂತಾಯಿತು. ಬೆಳಗಾದರೆ ಬಿಸುಸುಯ್ಲಿನೊಂದಿಗೆ ಆರಂಭವಾಗುವ ದಿನಚರಿ ಕಣ್ಣೀರಿನ ಕೋಡಿಯೊಂದಿಗೆ ಅಂತ್ಯಗೊಳ್ಳುವುದು. ಸೊಸೆಯ ಸಂಕಷ್ಟವನ್ನು ನೋಡಲಾರದೆ ಸಮುದ್ರತೀರದ ವಾಸಕ್ಕೆ ಅಣಿಗೊಳಿಸಿದಳು ಕಾವೇರಿ. ಕಾರಿಯಪ್ಪ ಮನಸ್ಸಿಲ್ಲದ ಮನಸ್ಸಿನಿಂದ ಮಡದಿಯೊಡನೆ ಮಂಗಳೂರಿಗೆ ಪಯಣ ಬೆಳೆಸಿದ. ಸಮುದ್ರತೀರಕ್ಕೆ ಹತ್ತಿರವಾದ ಸಣ್ಣ ಮನೆಯನ್ನು ಹಿಡಿದು, ಸತಿಯ ಸಲಹೆ ಮತ್ತು ನೆರವಿನೊಂದಿಗೆ ತಾನೇ ಅಡುಗೆ ಮಾಡಿಕೊಳ್ಳುತಿದ್ದ. ಒಂದೊಂದು ದಿನ ಕಳೆಯ್ಯುದೆಂದರೂ ಕಾಸುಗಳನ್ನೆಣಿಸಿ ನೋಡಬೇಕಾದ ಪರಿಸ್ಥಿತಿ. ಕೆಲಸವಿಲ್ಲದೆ ವ್ಯರ್ಥಕಾಲಹರಣ ಮಾಡುವ ಪ್ರಸಂಗ ಮನಃಪ್ರಾಣಗಳನ್ನು ಗಾಣಕ್ಕೆ ಕೊಟ್ಟ ಕಬ್ಬಿನಂತೆ ಹಿಂಡುತಿತ್ತು. ಬೀಚಿನಲ್ಲಿ ಹೊತ್ತು ಕಳೆಯುವಾಗ ಏನೋ ಬಂದು ವಿಧದಲ್ಲಿ ಏನೂತನ ಶಕ್ತಿಯು ನರ ನಾಡಿಗಳಲ್ಲಿ ಸಂಚಾರಗೊಳ್ಳುವುದು. ಅನಂತರ....ಅನಂತರ ಪುನಃ ಅದೇ ಜೀವನ ; ಅದೇ ಅವಸ್ಥೆ.

ಸತಿಯ ಕೊರಗೊಂದಾದರೆ ಪತಿಯದು ಇನ್ನೊಂದು.

ಕಾರಿಯಪ್ಪನ ಉತ್ಸಾಹಿತ ಜೀವನಕ್ಕೆ ಮಡದಿಯ ಅಶಕ್ತ ಶರೀರ ಮುದುಡಿದ ಮುಖ, ಶ್ರದ್ಧಾಹೀನ ಆಯೋಜನೆಯ ಚೌಕಟ್ಟನ್ನು ನಿರ್ಮಿಸುತಿತ್ತು. ತಾನೆಷ್ಟೇ ಪ್ರಯತ್ನಿಸಿದರೂ ಆ ಪ್ರಾಕಾರವನ್ನು ದಾಟಿಹೋಗಲಾರದೆ ಒಮ್ಮೆ ಚಿಂತಿತನಾದರೆ ಇನ್ನೊಮ್ಮೆ ಸಿಡಿಮಿಡಿಗೊಳ್ಳುವ. ಮಾನವ ಸಹಜ ದೌರ್ಬಲ್ಯತೆಯಿಂದ ಕಟು ಮಾತುಗಳು ಹೊಮ್ಮುವುವು. ಹೊತ್ತು ಸ್ಮಶಾನ ಶಾಂತಿಯಲ್ಲಿ ಕರಗುವುದು.

ಅಂತರ್ಗತ ಮರಣ ಸಂಕಟ ತನುವನ್ನು ದ್ರಾಕ್ಷಿಯಂತೆ ಹಿಂಡುವಾಗ ಈಗಲೇ ಬಾಳು ಮುಗಿದರೆ ಸಾಕೆಂದು ಗಂಗಮ್ಮ ಮನದಲ್ಲೇ ಬೇಡಿಕೊಳ್ಳುವಳು ; ಕಂಬಳಿಯ ಮರೆಯಲ್ಲಿ ಕಂಬನಿಯ ಕಾಲುವೆ ನಿರಾತಂಕವಾಗಿ ಹರಿಯುವುದು. ದಿವಸ ಸುದೀರ್ಘವಾಗಿ ಉರುಳಿದಂತೆ ಭಾಸವಾಗುವುದು ಎಷ್ಟೇ ಪ್ರಯತ್ನಿಸಿದರೂ ಹೊತ್ತು ಕಳೆಯುವುದು ಕಷ್ಟ. ಲೋಕವಿಹಾರೀ ವೀಚಿವಾಯು ಸಾಗರವನ್ನು ಲಂಘಿಸಿ ಬಂದಾಗ ಬಂಧುಬಾಂಧವರಿಂದ ಯಾವ ಸಂದೇಶ ತಂದಿದ್ದಾನೋ ಎಂದು ಪರಿತಪಿಸುವಳು....ಶೃಂಖಲಾಬದ್ಧ ವಿರಾಗಿಣಿಯಂತೆ, ಅಸ್ವಂತತ್ರ ದೇಶೀಯರಂತೆ, ಪಂಜರಬದ್ಧ ಮೃಗಶಾವಕದಂತೆ ದೀನಾದೀನತೆಯಲ್ಲಿ ಬಿಸುಸುಯ್ಯಾಡುವುದು ಅನಿವಾರ್ಯ...

ಕಾರಿಯಪ್ಪ ಅಂತರ್ಯದಲ್ಲಿ ಚಿಂತೆಯನ್ನು ತುಂಬಿಕೊಂಡಿದ್ದರೂ ವಿನಯ–ಶ್ರದ್ಧೆಗಳ ವಶೀಭೂತನಾಗಿ ಚಿತ್ತಲೋಕವನ್ನು ಪ್ಲಾವಿತಗೊಳಿಸುತ್ತ ಅಂದ,

"ನಾವು ಊರಿನಿಂದ ಅಕ್ಕಿ ಬೇಳೆ ತಂದು ಇಲ್ಲಿ ಸಂಸಾರ ಹೂಡುವುದೆಂದರೆ ಆಗದ ಮಾತು. ಜೀವನಕ್ಕೊಂದು ಕಾರಸ್ಥಾನವನ್ನು ಇಲ್ಲೇ ಅರ್ಜಿಸಿಕೊಂಡಲ್ಲಿ ನನಗೂ ಅನುಕೂಲ ; ನಿನಗೂ ನೆಮ್ಮದಿ."

ಅದು ಹೌದೆನಿಸಿತು ಸತಿಗೆ. ಸ್ವಲ್ಪ ಹೊತ್ತು ಯೋಚಿಸಿ,

"ಇಲ್ಲಿ ಬೇರೆ ಸಹಾಯಕರಿಲ್ಲ ; ಯಾವುದೇ ಕಾರಸ್ಥಾನಕ್ಕೂ ಹಣ ಪ್ರಮುಖ ಪಾತ್ರ. ಇಂತಿಂತಹ ತೊಂದರೆಗಳೂ ಇವೆ. ಮೊದಲು ಈ ಎಲ್ಲವನ್ನೂ ಹೊಂದಿಸಿಕೊಂಡಲ್ಲಿ ಆದೀತು."

"ಅದು ನನಗೂ ಗೊತ್ತು... ಏನು ಮಾಡಬೇಕೆಂಬುದು ಇನ್ನೂ ನಿರ್ಧಾರವಾಗಿಲ್ಲ. ಯೋಚಿಸುತ್ತಿರುವೆ ; ಮಾದೇವ ಹೇಗೆ ಬುದ್ಧಿ ಕೊಡುತ್ತಾನೋ ಹಾಗೆ ಮಾಡುವೆ."

ಗಂಗಮ್ಮ ಒಂದು ಘಳಿಗೆ ಯೋಚಿಸಿದಳು. ಅಶಕ್ತ ಶರೀರದಲ್ಲಿ ಬುದ್ಧಿಗೆ ಪೌಷ್ಟಿಕಾಂಶವಿಲ್ಲದಿದ್ದುದರಿಂದಲೋ ಏನೋ.... ವಿಚಾರಶಕ್ತಿ ನಿಚ್ಚಳವಾಗಿ ಹೊಳೆಯುತ್ತಲೇ ಇಲ್ಲ. ಮುಖಮುದ್ರೆಯಲ್ಲಿ ನೀರಸ ಛಾಯೆ ದಟ್ಟವಾಗಿ ಮುದ್ರೆಯೊತ್ತಿತು. ಯೋಚಿಸುತ್ತಾ ಮಂತ್ರಮುಗ್ಧಳಂತೆ ಸ್ವಲ್ಪಹೊತ್ತು ಸುಮ್ಮನಾದಳು. ಹಿಂದಿನಂತಾಗಿದ್ದರೆ ಅದೆಷ್ಟು ಸಲಹೆಗಳು ಹೊರಹೊಮ್ಮುತಿದ್ದುವೊ, ಇಂದು ನರನಾಡಿಗಳಲ್ಲಿ ದುಃಖ–ದುಗುಡ–ಪರಿತಾಪಗಳ ಝರಿ ಸದ್ದಿಲ್ಲದೆ ಹರಿದಾಡಿತು.

ಕಾರಿಯಪ್ಪ ಮಡದಿಯ ಅಂಗ–ಪ್ರತ್ಯಂಗಗಳಲ್ಲಿ ಹರಿದಾಡುವ ಸಕಲ ಕ್ಲೇಶವನ್ನೂ ಗ್ರಹಿಸಿ ಸಮಾಧಾನ ಹೇಳುವ ರೀತಿಯಲ್ಲಿ ನುಡಿದ "ನೋಡೋಣ ಏನೇನಾಗುತ್ತದೋ... ಮಾದೇವ ಇರುವಾಗ ನಮಗ್ಯಾಕೆ ಚಿಂತೆ....? ಆದಂತಾಗಲೀ; ಪ್ರಯತ್ನ ನಮ್ಮದು, ಮಾಡುವಷ್ಟು ಮಾಡುವೆ."

ಆ ಮಾತು ಕೇಳಿದ ನಂತರ ಏನಾದರೂ ಹೇಳಬೇಕೆಂದರೆ ಮಾತುಗಳೇ ಹೊರಡಲಿಲ್ಲ, ಕಾರಿಯಪ್ಪ ಹೊರಹೋಗಲು ಅಣಿಯಾಗುತ್ತ ಅಂದ "ಸ್ವಲ್ಪ ಹೊರ ಹೋಗಿ ನೋಡುವೆ, ಏನಾದರೂ ಸಾಧ್ಯವಾದೀತೇನೋ..."

"ಹ್ಞೂ....ಎಂದಳು ಗಂಗಮ್ಮ.

ಕಾರಿಯಪ್ಪ ಹೊರಟ. ಹಳೆಯ ಬೂಡ್ಸುಗಳು ಸದ್ದು ಮಾಡಿದುವು. ಹದವರಿತು ಮುಂದಿಡುವ ಹೆಜ್ಜೆಗಳಲ್ಲಿ ಏನೋ ಒಂದು ಬಗೆಯ ಮೋಹಕತೆ ನೆಲಸಿತ್ತು. ಹಾಗೇ ಯೋಚಿಸಿದಳು....

ಅಂದು ಅವಳನ್ನು ಹವೆ ಬದಲಾವಣೆಗಾಗಿ ಸಮುದ್ರತೀರಕ್ಕೆ ಹೋಗಿಯೇ ತೀರಬೇಕೆಂದು ಕಾವೇರಿ ಒತ್ತಾಯಿಸಿದಾಗ ಗಂಗೂ ನಿರಾಶಾಪೂರ್ಣ ದುಃಖಿತ ವಾಣಿಯಲ್ಲಿ,

"ಅಂದಿಂದಿಗೂ ರೋಗವೇ ಆಗಿದೆ. ರಾಮೇಶ್ವರಕ್ಕೆ ಹೋದರೂ ಶನೀಶ್ವರ ಬಿಡದು. ಮತ್ತೇಕೆ ಹೋಗುವ ಯೋಚನೆ ? ವೃಥಾ ಪರಿಶ್ರಮ ಹಣ ಖರ್ಚು. ಯಾವ ಪ್ರಯೋಜನಕ್ಕಾಗಿ ನನ್ನಿಂದ ಎಲ್ಲರೂ ಬಳಲಬೇಕು?

ಹೇಗೂ ಒಂದಿನ ಸಾಯುವುದಿದೆ, ಇಲ್ಲೇ ಇದ್ದು ಸಾಯುವೆ. ನೀವದನ್ನು ಖಂಡಿತ ಮನಸ್ಸಿಗೆ ಹಚ್ಚಿಕೊಳ್ಳಬೇಡಿ" ಎಂದಿದ್ದಳು.

"ಹಾ....ಎಲ್ಲಿಯಾದರುಂಟೇ ? ಈ ಮಾತನ್ನು ಇನ್ನಾರ ಮುಂದೆಯು ಹೇಳಬೇಡಿ ಗಂಗೂ !" ಎಚ್ಚರಿಸಿದಳು ಕಾವೇರಿ. ದನಿ ಹೃದಯಪೂರ್ವಕವಾಗಿ ಹೊಮ್ಮಿತ್ತು.

"ಎಲ್ಲರಿಗೂ ಹೊರೆಯಾಗಿರುವುದು ಯಾರಿಗೆ ಬೇಕು ?"

"ಒಂದೆರಡು ತಿಂಗಳಷ್ಟೆ? ಅನಂತರ ಖಂಡಿತ ಸರಿಹೋಗುತ್ತೆ. ಯೋಚಿಸಬೇಡ."

ಆ ಅಚಲ ನಿರ್ಧಾರದ ಮುಂದೆ ಇನ್ನೊಮ್ಮೆ ಸೋಲ್ಲೆತ್ತಲು ಗಂಗಮ್ಮನಿಗೆ ಮನಸ್ಸಾಗಲಿಲ್ಲ. ಅತ್ತೆಯ ಏಕನಿಷ್ಠ ಹಾರೈಕೆಯಂತೆ ತನ್ನ ಶರೀರ ಪ್ರಕೃತಿ ಉತ್ತಮಗೊಂಡರೆ ಸಾಕೆಂದು ಕೊಂಡಿದ್ದಳು. ಆದರೆ ಯಾಕೋ ಈಗೀಗ ನಂಬುಗೆಯೂ ಉಳಿಯಲಿಲ್ಲ. ತಿಂಗಳ ಮಾನವೊಂದು ಸದ್ದಿಲ್ಲದೆ ಕಳೆದು ಹೋಯಿತು. ಕಾರಿಯಪ್ಪ ಚಹ ಪಾನದಲ್ಲಿ ನಿಮಗ್ನನಾಗಿದ್ದಾಗ ಗಂಗೂ ನಿಧಾನವಾಗಿ ಸೊಲ್ಲೆತ್ತಿದಳು,

"ಇಲ್ಲಿಯ ಹವೆಯಿಂದ ಇದುವರೆಗೆ ಯಾವ ಪ್ರಯೋಜನವೂ ಆಗಲಿಲ್ಲ. ನಾವಿನ್ನು ಹಿಂದಿರುಗೋಣ. ಆದಂತಾಗುತ್ತೆ, ವೃಥಾ ಖರ್ಚು."

"ಇನ್ನೊಂದು ತಿಂಗಳು ನೋಡೋಣ, ನನ್ನ ವ್ಯಾಪಾರಕ್ಕೊಂದು ನೆಲೆ ದೊರೆಯಬಹುದು. ಅದೇನಾದರೂ ಆಯಿತೆಂದರೆ ನಮಗಿಲ್ಲಿರುವುದಕ್ಕೆ ಅನುಕೂಲವೇ ಆಯಿತು."

ಆದರೆ ಮುಖ್ಯನಾಗಿ ಇಲ್ಲಿರುವುದೇ ಬೇಡವಾಗಿತ್ತು ಗಂಗಮ್ಮನಿಗೆ. ಸ್ವಲ್ಪ ಹೊತ್ತು ಯೋಚಿಸಿ ಹೇಳಿದಳು "ನನಗಿಲ್ಲಿ ದಿನ ಕಳೆಯುವುದೇ ಕಷ್ಟ."

"ಒಂದು ತಿಂಗಳಾದರೂ ನೆರೆಹೊರೆಯವರ ಪರಿಚಯ ಬೆಳೆಸಿಕೊಳ್ಳಲಿಲ್ಲ. ಇಲ್ಲಿ ಯಾರನ್ನಾದರೂ ಪರಿಚಯ ಮಾಡಿಕೊಳ್ಳಬಾರದೇ ?"

ಅವಳು ಮಾತಾಡಲಿಲ್ಲ. ಮುಖದಲ್ಲಿ ನೀರಸ ಭಾವನೆ ಎದ್ದು ತೋರುತಿತ್ತು. ಕಾರಿಯಪ್ಪ ಸ್ವಲ್ಪ ಹೊತ್ತು ಸುಮ್ಮನಿದ್ದು ಅಂದ,

"ಇಲ್ಲಿಯ 'ಟೀ ಏಜನ್ಸಿ' ಹೊಂದಿದವರು ಭಾಗಮಂಡಲದ ಅಪ್ಪಯ್ಯ, ನಾನಿಲ್ಲಿಗೆ ಬಂದ ಮೇಲೆಯೇ ಅವರ ಪರಿಚಯವಾದುದು. ಒಂದು ಕಾಲದಲ್ಲಿ

ಅವರು ತುಂಬ ಶ್ರೀಮಂತರು. ದೊಡ್ಡ ಕುಟುಂಬವಾದುದರಿಂದ ಆಸ್ತಿಯೆಲ್ಲ ಹರಿದು ಹಂಚಿ ಹೋಗಿದೆ. ಸ್ವಲ್ಪಮಟ್ಟಿಗೆ ದರ್ಬಾರೂ ಮಾಡಿದ್ದಾರೆ. ಈಗಲೂ ಆಸ್ತಿಪಾಸ್ತಿ ಅಷ್ಟೇನೂ ಕಡಿಮೆಯಿಲ್ಲ. ಕುಟುಂಬಸ್ಥರೆಲ್ಲ ಭಾಗಮಂಡಲದಲ್ಲಿದ್ದಾರೆ. ಇವರು ಮಕ್ಕಳ ವಿದ್ಯಾಭ್ಯಾಸ ಪ್ರಯುಕ್ತ ಇಲ್ಲಿದ್ದಾರೆ. ಜೊತೆಗೆ 'ಟೀ ಏಜೆನ್ಸಿ'ಯೂ ಇದೆ. ಎಲ್ಲರೂ ಬಹಳ ಒಳ್ಳೆಯ ಮಂದಿ. ಇಂದು ಬರುವಾಗ ಅವರೆಲ್ಲರನ್ನೂ ಇಲ್ಲಿಗೆ ಕರೆತರುವೆ, ಪರಿಚಯ ಮಾಡಿಕೊ."

ಗಂಗೂ ಮುಖ ಪ್ರಸನ್ನವಾಯಿತು.

"ನಿನ್ನ ಕಾಹಿಲೆಯೆಲ್ಲಾ ಬಹಳ ಮಟ್ಟಿಗೆ ಮಾನಸಿಕ ಗಂಗೂ, ನೀನದನ್ನು ತಿಳಿದುಕೊಂಡಿದ್ದರೆ ಇಷ್ಟರೊಳಗಾಗಿ ಚೇತರಿಸಿಕೊಳ್ಳುತ್ತಿದ್ದೆ."

"ನಾನು ಇಲ್ಲಿರುವುದಕ್ಕಿಂತ ಶಾದೀಪುರಕ್ಕೆ ಹೋಗಿದ್ದಿದ್ದರೆ ಪೂವಿಗೊಂದಿಷ್ಟು ಸಹಾಯವಾಗುತಿತ್ತೇನೋ .. ಒಬ್ಬಳೇ ಮಗುವನ್ನು ನೋಡಿಕೊಳ್ಳುವುದು ಕಷ್ಟ."

"ನೀನಿರುವ ಸ್ಥಿತಿಯಲ್ಲಿ ಏನು ಸಹಾಯ ಮಾಡಬಲ್ಲೆ ? ಅವಳ ಮಗುವನ್ನು ನೋಡಿಕೊಳ್ಳುವುದಿರಲಿ, ನೀನು ಹೋದರೆ ನಿನ್ನನ್ನೇ ನೋಡಿಕೊಳ್ಳುವುದಾಗುತ್ತೆ."

ಅದು ಸಹಜವಾದರೂ ಮಗುವನ್ನಾದರೂ ಕಣ್ಣಿಂದ ನೋಡಬಹುದಾಗಿತ್ತು. ಅವಳು ಮನೆಗೆಲಸದಲ್ಲಿರುವಾಗ ಮಗುವಿನ ಬಳಿ ಕುಳಿತಿರಬಹುದಾಗಿತ್ತು....ಎಂದೆಲ್ಲಾ ಯೋಚಿಸಿತು ಚಿತ್ತ. ತುಟಿಗಳು ಬಿರಿಯಲಿಲ್ಲ. ನೋಟ ಕಿಟಕಿಯ ಕಡೆ ಹೊರಳಿತು. ಪಶ್ಚಿಮ ಪ್ರಾಂತಕ್ಕೆ ಪಯಣಿಸಿದ ದಿವಸ ಲಕ್ಷ್ಮಿಯ ಕರ ಕಮಲಗಳಿಂದ ಉದುರಿದ ಕಮಲಪರಾಗವು ಅಲ್ಲಲ್ಲಿ ಚೆಲ್ಲಿ ದಿಙ್ಮಂಡಲ ಪದ್ಮರಾಗರಸದಿಂದ ಸ್ವರ್ಣಾಂಕಿತವಾಗಿತ್ತು. ಆಕೆಯ ಧೃತ ಸಂಚಾರಿತ ದಿವ್ಯಚರಣಗಳ ನೀಲರಾಗಮಣಿಯ ನೂಪುರಗಳ ಟಿಂಟಿಣಿನಾದ ಪಕ್ಷಿಗಳಿಂಚರದೊಡನೆ ಮೇಳಗೈದಂತಿತ್ತು. ರಕ್ತೋತ್ಪಲದಂತಹ ಸೂರ್ಯಮಂಡಲವನ್ನು ತೆರೆದ ಗವಾಕ್ಷಿಯಿಂದ ನೋಡುತ್ತಾ ಕುಳಿತಳು ಗಂಗಮ್ಮ. ಕ್ರಮ ಕ್ರಮೇಣ ದೂರ ಸಾಗರದಂಚಿನಲ್ಲಿ ಸೂರ್ಯಬಿಂಬವು ಅಸ್ತಮಾನ ಹೊಂದಿತು. ಸಂಧ್ಯಾಪದ್ಮಿನಿ ಸಂಕಟದಿಂದ ಬೀಳ್ಕೊಟ್ಟರೂ ಪ್ರಸನ್ನೆಯಾಗಿದ್ದಾಳೆ. ನೋಡು ನೋಡುತ್ತ ಕುರ್ಚಿಯನ್ನು ಕಿಟಕಿಯ ಬಳಿಗೆ

ಎಳೆದುಕೊಂಡಳು. ಕಾರಿಯಪ್ಪ ಸಂಜೆಯುಡುಪು ತೊಟ್ಟು ಹೊರಡು ಮುನ್ನ ಅಂದ.

"ಟೀ ಏಜೆಂಟರಲ್ಲಿಗೆ ಹೋಗುವುದಿದೆ. ಅವರು ಬಿಡುವಾಗಿದ್ದರೆ ಇಂದೆ ಕರೆತರುವೆ."

"ಆಗಲಿ" ಎಂದಳು ಮಡದಿ. ಧ್ವನಿ ಕ್ಷೀಣಿತವಾಗಿದ್ದರೂ ಮನಸ್ಸು ದೃಢವಾಗಿತ್ತು.

ಕಾರಿಯಪ್ಪ ಹೊರ ಹೊರಟ. ಪ್ರಶಸ್ತ ಹೆಜ್ಜೆಗಳು ನಿರ್ಗಮಿಸುವ ಶ್ರುತಿ ಲಯಬದ್ಧರವ ಕೇಳಿಸುವವರೆಗೂ ಕಿವಿಗೊಟ್ಟಳು ಗಂಗಮ್ಮ. ಹೋಗು ಹೋಗುತ್ತ ನಿಧಾನಗತಿಯಲ್ಲಿ ಕೇಳಿಸುತಿದ್ದ ರವ ಕ್ರಮೇಣ ನಿಂತುಹೋಯಿತು. ಅದ್ಭುತ ಸ್ನೇಹ ಸ್ವಭಾವವುಳ್ಳ ಆಂಗನೆಯ ಕಣ್ಣುಗಳಲ್ಲಿ ಸಣ್ಣಗೆ ಬೆಳ್ಳಿಯ ಗೆರೆಯಂತೆ ನೀರಾಡಿತು. ಎದ್ದು ಮುಂದಿನ ಕದದ ಅಗಣಿಯನ್ನು ಹಾಕಿಕೊಂಡು ಅಲ್ಲೇ ಕುಳಿತುಕೊಂಡಳು. ತೀಕ್ಷ್ಣ ಬುದ್ಧಿಯನ್ನು ಪಡೆದುಕೊಂಡರೂ ಸುಭದ್ರ ಶರೀರವನ್ನು ಪಡೆದುಕೊಳ್ಳಲಾಗದೆ ಮೃತ್ಯುವಿನ ಪದಧ್ವನಿಯನ್ನು ಆಲೈಸುತ್ತ ದಿನಗಳೆಯುವುದು ಲಜ್ಜಾಸ್ಪದ ಎನಿಸಿದಾಗ ಸಂಜನಿಸಿದ ಕಣ್ಣೀರು ಹೃದಯದ ಗಾಯವನ್ನು ಮೆಲ್ಲನೆ ಪ್ರಕ್ಷಾಳನೆ ಮಾಡತೊಡಗಿತು.

....ಜೀವನದುದಯದಲ್ಲೇ ಅಸ್ತಮಾನದ ನೆರಳು ಮೈ ಚಾಚಿ ತನ್ನಿರ ವನ್ನು ದೃಢಪಡಿಸುತ್ತದೆ ಎಂಬುದನ್ನು ಆಕೆ ಅರಿಯಳು ಎಂದೇನಲ್ಲ. ಆತ್ಮ ಶ್ರದ್ಧೆಯಿಂದ ಬಾಳನ್ನು ನಿರ್ಣಯಿಸುವುದೇ ಆಗಲಿ, ಪ್ರೀತಿಯನ್ನು ಒರೆಗೆ ಹಚ್ಚಿ ಮಾಲಿನ್ಯವನ್ನು ಕಳೆಯುವುದೇ ಆಗಲಿ ಅಷ್ಟು ಸುಲಭವಲ್ಲ....ಸ್ತ್ರೀ ಜೀವನ ಯಾತ್ರೆ ಎಷ್ಟು ಅದ್ಭುತವಾದುದೋ ಅಷ್ಟೇ ಸಂಕಷ್ಟಪೂರಿತವಾದುದು ಎಂದುಕೊಳ್ಳುತ್ತಲೇ ದಶಕ ದಶಕಗಳು ಉರುಳಿ ಹೋದುವು. ಇತರರಿಗೆ ಹೊರೆ ಯಾಗಿ ಈ ಬದುಕು ನಡೆಯುತ್ತಿದೆ; ಮುಂದೆಯೂ ಉಸಿರಾಡುವವರೆಗೆ ನಡೆಯುತ್ತದೆ....ಯೋಚನಾ ಜಗತ್ತನ್ನು ಆವರಿಸುವ ಆಲೋಚನೆಗಳಿಗೆ ಪ್ರತಿ ವಾದನೆ ಹೂಡುವಷ್ಟು ಬುದ್ಧಿ ಉತ್ಸುಕವಾಗಿರಲಿಲ್ಲ. ಅಂತಲೇ...ಹಾಗೇ ಮಂಕು ಬಡಿದವಳಂತೆ ಅದೆಷ್ಟು ಹೊತ್ತು ಕುಳಿತಿದ್ದಳೋ. ಮುಖದಮೇಲೆ ಮೂಡಿದ ತುಹಿನ ಬಿಂದುಗಳು ಧಾರೆಧಾರೆಯಾಗಿ ಇಳಿಯತೊಡಗಿದಾಗಲೇ

ಇತ್ತ ಗಮನ. ಕರವಸ್ತ್ರದಿಂದ ಮುಖವನ್ನು ಒರಸಿಕೊಳ್ಳುವಾಗ ಕೈಗಳು ಯಾಂತ್ರಿಕವಾಗಿ ಮರಗೈಗಳಂತೆ ಚಲಿಸಿದುವು.

....ಈ ಜೀವನಸಾಗರದ ಪ್ರಚಂಡ ಅಲೆಗಳೊಡನೆ ಹೊಡೆದುಕೊಂಡು ಹೋಗುತ್ತ ಇಲ್ಲಿಯವರೆಗಂತೂ ಪಯಣಿಸಿದ್ದಾಯ್ತು. ಇನ್ನು ಮಾದುಗೆ ಮದುವೆ ಮಾಡಿದರೆ ಅದೇ ನನ್ನ ಪಯಣದ ಗಮ್ಯಸ್ಥಾನ. ಆಮೇಲೆ ಏನಾದರೂ ಆಗಲಿ, ಅದಕ್ಕಿಂತ ಹೆಚ್ಚಿನ ಆಸೆಯಿಲ್ಲ ಎಂದುಕೊಳ್ಳುತ್ತ ಸಮಾಧಾನದ ಉಸಿರನ್ನು ಬಿಟ್ಟಳು. ಒಡನೆ ಮುದ್ದಪ್ಪ ಕಳುಹಿಸಿದ ಮಗುವಿನ ಚಿತ್ರಪಟ ದೃಷ್ಟಿಗೆ ಬಿತ್ತು....

ಸಾಂಧ್ಯ ತೇಜೋರಾಶಿಯಲ್ಲಿ ಮಿಂದ ಇಳೆಯ ಸಂಭ್ರಮ ವಿಶೇಷದಲ್ಲಿ ಪಾಪ-ಪುಣ್ಯ-ರಾಗ-ವಿರಾಗಗಳು ನಶಿಸುತ್ತಿರುವಂತೆ ಭಾಸವಾಗುತಿತ್ತು. ಬೀಚಿನ ಬಳಿ ಮೀನುಗಳಿಗಾಗಿ ಹಾತೊರೆಯುವ ಬಕ ಪಕ್ಷಿಗಳಿಂಡಿನ ಸದ್ದು ಗದ್ದಲ ಅಸ್ಪಷ್ಟವಾಗಿ ಕಿವಿಗೆ ಬೀಳುತಿತ್ತು. ಬೀದಿಯಲ್ಲಿ ಹರಿದಾಡುವ ವಾಹನಾದಿಗಳ ಸದ್ದುಗದ್ದಲಗಳಿಗೂ ಇತಿಮಿತಿ ಇರಲಿಲ್ಲ. ಹೊರಗಿನ ಸದ್ದು ಗದ್ದಲಗಳಿಗೆ ಕಸುವು ಕೂಡಿಸುವಂತೆ ಪಾದ ರಕ್ಷೆಗಳ ಪಟ ಪಟಾತ್ಕಾರದೊಡನೆ ಕಾರಿಯಪ್ಪ ಒಳಾಂಗಣಕ್ಕೆ ಹೆಜ್ಜೆಯಿಟ್ಟ.

"ಓ....ಅವರು ಬರಲಿಲ್ಲವೇ ?"

ಕದ ತೆರೆದೊಡನೆಯೇ ಕೇಳಿದಳು ಗಂಗೂ.

"ಬರುತ್ತಾರೆ. ಬಹುಶಃ ಇನ್ನರ್ಧಗಂಟೆಯೊಳಗಾಗಿ ಬರಬಹುದು."

"ಮೂವರು ಮಕ್ಕಳಿದ್ದಾರೆ. ಅಪ್ಪ ಅಮ್ಮ ಎಲ್ಲರೂ ಕೂಡಿಯೇ ಬರುತ್ತಾರೆ"

ಕೇಳಿದೊಡನೆಯೇ ಮುಖದಲ್ಲಿ ಮಂದಹಾಸ ಮೂಡಿತು.

ಕಾರಿಯಪ್ಪ ಉತ್ತೇಜಿತನಾದ. ಕಣ್ಣು ಮುಖಗಳಲ್ಲಿ ಸಾನುರಾಗದ ಖಳೆ ನಲಿದಾಡಿತು. ಆದರೆ ಅದೇ ನೇರಕ್ಕೆ ಬರಲಿರುವ ಅತಿಥಿಗಳ ಸತ್ಕಾರ ಅಶಕ್ತ ಮಡದಿಯಿಂದ ಸಾಧ್ಯವಾದೀತೆ ಎಂಬ ಪ್ರಶ್ನೆ...ಕೆಲವು ದಿನಗಳಾದರೇನೋ ಒಂದು ರೀತಿ, ಅಂದಿಂದಿಗೂ ಇದೇ ಆಯಿತಲ್ಲ ಎಂಬ ಉದಾಸೀನ....ಎಷ್ಟೇ ಪ್ರಯತ್ನಿಸಿದರೂ ಪರಿಹಾರ ದೊರೆಯಲಿಲ್ಲ ಎಂಬ ಅನು

ತಾಪ........ಏನೋ ಒಂದು ರೀತಿಯಲ್ಲಿ ಮುಮ್ಮಲ ಮರುಗಿ ಪ್ರಶ್ನಿಸಿದ ಕಾರಿಯಪ್ಪ,

"ಅವರನ್ನು ಕರೆದಿದ್ದಾಯ್ತು. ನಿನ್ನ ಸ್ಥಿತಿಗತಿ ನೋಡಿದರೆ...."

ಧ್ವನಿ ಕಟುವಾಗಿರದಿದ್ದರೂ ನಂಜಿನ ಛುರಿಯಂತೆ ಹರಿದು ಬಂತು.

ಒಡನೆ ನಸು ಮಿಡುಕಿದ ಮಡದಿಯ ನೆಟ್ಟನೋಟಕ್ಕೆ ಕೂಗಿ ಕೇಳಿತು "ಅಂದರೆ."

"ಸತ್ಕಾರದ ಪ್ರಶ್ನೆ."

ಅವಳ ಅಸ್ವಸ್ಥತೆ ಪ್ರೀತಿ ವಾತ್ಸಲ್ಯಗಳಿಗೆ ಭಂಗ ತಂದಿರಲಿಲ್ಲ. ಆದರೂ ಬಳಲಿ ಸೋತು ಕೋಪ ತಾಪಗಳ ಚಿಲುಮೆಯು ಉಗಮವಾಗಲು ಕಾರಣ ವಾಗಿತ್ತು.

ಗಂಗೂ ಒಂದುಕ್ಷಣ ಹುಬ್ಬೆತ್ತಿ ನೋಡಿ "ಯಾಕಾಗದು ? ನನ್ನಿಂದ ಎಷ್ಟಾದೀತೋ ಅಷ್ಟು ಮಾಡುವೆ" ಎಂದಳು. ಕ್ಷೀಣ ಶ್ರಾಂತ ಸ್ವರ ನಸು ಕಂಪಿಸಿತು. ಅರಳಿದ ಕಣ್ಣುಗಳ ಭಾವ "ನನ್ನ ಸ್ಥಿತಿಗತಿಯನ್ನು ಯಾರಾ ದರೂ ಅರ್ಥಮಾಡಿಕೊಂಡಾರು ಅದರಲ್ಲಿ ಶಂಕೆಯೇಕೆ ?" ಎನ್ನುವಂತಿತ್ತು. ಮೌನ ಶಾಂತಿಯಲ್ಲಿ ಕಾರಿಯಪ್ಪ ಅವಳನ್ನು ನಿಟ್ಟಿಸಿದ. ಎದೆಯಾಳದಿಂದ ಅಂತರಾತ್ಮ ಕೂಗಿ ಹೇಳಿತು "ನೀನು ವ್ಯವಹರಿಸುತ್ತಿರುವುದು ವ್ಯಥಿತ ಸ್ತ್ರೀ ಯೊಂದಿಗೆ. ಏನೇ ಇರಲಿ, ಸಭ್ಯತೆಯನ್ನು ಮೀರಬಾರದು."

ಸಮಯೋಚಿತ ಪರಿಜ್ಞಾನ ಬೇಡಿತು "ಈಗ....ಆಕೆಗೆ ಕಿಂಚಿತ್ತೂ ನೋವು ಉಂಟುಮಾಡಬೇಡ, ಕಂಡೆಯಾ."

ಆಗ ತನ್ನನ್ನು ತಾನು ಸಾವರಿಸಿಕೊಳ್ಳುತ್ತ ಬಿಸಿಯುಸಿರು ಬಿಟ್ಟ ಕಾರಿಯಪ್ಪ.

ಮಡದಿ ಮಂದಗತಿಯಲ್ಲಿ ಒಳಗಡೆ ನಡೆದಳು. ಅಶಕ್ತ ಶರೀರ ಕರುಣಾ ಜನಕ ರೀತಿಯಲ್ಲಿ ಓಡಾಡುವುದನ್ನು ಹಿಂದಿಲಿಂದ ಜೋಡಿ ಕಣ್ಣುಗಳು ನಿರು ಕಿಸಿದವು. ಸ್ವಲ್ಪಹೊತ್ತು ಬಸಿ ಬಟ್ಟಲುಗಳ ಜೋಡಣೆಯಲ್ಲಿ ಕಳೆಯಿತು. ಕಾರಿಯಪ್ಪ ಮಡದಿಯೊಂದಿಗೆ ಸಹಕರಿಸಲು ಮುಂದಾಗುವ ವೇಳೆಯಲ್ಲಿ ಅತಿಥಿಗಳು ಆಗಮಿಸಿದರು. ಎತ್ತರವಾಗಿ ಬೆಳೆದ ಇಬ್ಬರು ಹುಡುಗಿಯರು, ಹತ್ತು ಹನ್ನೆರಡು ವರ್ಷದ ಮಗನೊಂದಿಗೆ ಐಯ್ಯಪ್ಪ ದಂಪತಿಗಳು ಒಳ

ಹೆಜ್ಜೆಯಿಟ್ಟೊಡನೆಯೇ ಆತ್ಮೀಯತೆಯಿಂದ ಸ್ವಾಗತಿಸುತ್ತ ಮಡದಿಯನ್ನು ಪರಿಚಯ ಮಾಡಿಸಿದ. ಪ್ರಪ್ರಥಮವಾಗಿ ಆಕೆಯ ಕ್ಷೀಣಿತ ದೇಹ ಪ್ರಕೃತಿ ನೋಡಿ ಅತಿಥಿಗಳಿಗೆ ಎಲ್ಲಿಲ್ಲದ ಕರುಣಕಾತರ. ಹಿರಿಯ ಮಗಳಾದ ಪೊನ್ನಮ್ಮ ಮೊದಲು ನಮಸ್ಕರಿಸಿ ಅಂದಳು,

"ನೀವು ಕುಳಿತುಕೊಳ್ಳಿ ಮಾಮಿ, ಏನಾದರೂ ಮಾಡುವುದಿದ್ದರೆ ನಾನೇ ಮಾಡುವೆ."

"ಅಷ್ಟೇನೂ ತೊಂದರೆ ಇಲ್ಲ, ಬಾ ಮಗಳೇ !"

ಆ ಅರಳು ಮೊಗ್ಗೆ ಒಳಹೆಜ್ಜೆ ಇಟ್ಟಾಗ 'ಭಾಗ್ಯಲಕ್ಷ್ಮಿಯಂತಿದ್ದಾಳೆ' ಎಂದುಕೊಂಡಳು ಗಂಗಮ್ಮ.

೧೩

ಪ್ರಾತಃಕಾಲೀನ ಸುಂದರ ಸುಮಧುರ ವಾತಾವರಣ....

ಮೂಡಣದಲ್ಲಿ ಮಹಿಮಾಮಯ ಉಜ್ವಲೋಜ್ವಲ ಶಾಂತ ಸೂರ್ಯ!

ಭಾರತದಾದ್ಯಂತ ಸಾರ್ವಜನಿಕ ಕ್ಷೇತ್ರದಲ್ಲಿ, ರಾಜಕೀಯ ಆಶ್ರಯದಲ್ಲಿ ನಿರ್ಧೂಮ ಅಗ್ನಿಜ್ವಾಲೆ ಆಗಾಗ್ಗೆ ಕಾಣಿಸಿಕೊಳ್ಳುತಿದ್ದುದುಂಟು....ಹಾಗಿಂದ್ದಾಗೇ ಅಡಗಿ ಹೋಗುತಿದ್ದುದುಂಟು. ದುಂಡುಮೇಜು ಪರಿಷತ್ತಿನ ಒಪ್ಪಂದ, ಕಾರ್ಯಕಾರಿ ಸಮಿತಿಯ ನಿರ್ಣಯ ಅಲ್ಲಿಂದಲ್ಲೇ ಉಳಿದುವು. ಜಿನ್ನಾ ಧೋರಣೆಯಿಂದಾಗಿ ಸ್ವರಾಜ್ಯದ ಕನಸು ನನಸಾಗುವ ಬದಲು ಪುನಃ ಪುನಃ ಮುಂದೂಡಲ್ಪಟ್ಟು ಸಂಧಾನ-ಅನುಸಂಧಾನಗಳಲ್ಲಿ ಹೊತ್ತು ಕರಗುತಿತ್ತು. ಹೊರವಲಯದಲ್ಲಿ ಎಷ್ಟೇ ಅಶಾಂತಿ ಕಾತರಗಳಿದ್ದರೂ ಕೊಡಗಿನ ರಮ್ಯ ವಾತಾವರಣದಲ್ಲಿ ಶಾಂತ-ಪ್ರಶಾಂತ ಪ್ರಕೃತಿ ವಿಶೇಷದಲ್ಲಿ ರಾಜಕೀಯ ದಾಂಧಲೆ ಅಲ್ಲಿಂದಲ್ಲೆ ಅಡಗಿತ್ತು. ವನ್ಯದೇಶದ ಹಸುರು ಜನಮನವನ್ನು ಆವರಿಸಿತ್ತು. ಹೊರಗಣ ಚಟುವಟಿಕೆಗಳು ಸ್ತಬ್ಧವಾದುದರಿಂದ ಗದ್ದೆ, ತೋಟಗಳ ಉಸ್ತುವಾರಿಯು ಹೆಚ್ಚಿ ಬೆಳೆ ಹಸುರು ಕಕ್ಕುತಿತ್ತು. ಮನಃಪ್ರಾಣಗಳು ತಾತ್ಕಾಲಿಕ ನೆಮ್ಮದಿಯನ್ನು ಪಡೆದುವು.

ತಂಗಾಳಿ ತಣ್ಣಗೆ ತೀಡಿದರೂ ವೇಗಗಾಮಿಯಾಗಿದ್ದುದರಿಂದ ಹಣ್ಣೆಲೆಗಳು ಉದುರುತಿದ್ದುವು.

ಪಕ್ಷಿಗಳ ಮಧುರಾಲಾಪನೆಯ ಮನಮೋಹಕ ರಾಗಮಾಲೆ ಎಲ್ಲೆಡೆಯೂ ಕೇಳಿ ಬರುತಿತ್ತು.

ಕೆಲಸನೆಲ್ಲ ಮುಗಿದಿತ್ತು. ಏಕಾಂಗಿಯಾದರೂ ಮನದಾಳದಲ್ಲಿ ಏನೋ ಒಂದು ಬಗೆಯ ಸಂಭ್ರಮ ವಿಶೇಷ, ಏನೆಂಬುದೇ ಅರ್ಥವಾಗುತ್ತಿಲ್ಲ. ಬಹುಶಃ ಮಾದೇವನ ದೇಗುಲದಲ್ಲಿ ಬೆಳಗಿನ ಪ್ರಾರ್ಥನೆಯನ್ನು ಕೈಕೊಂಡಾಗ ಬಲಗಡೆ ಪ್ರಸಾದವಾದುದು ಮನಃಪ್ರಾಣಗಳಿಗೆ ಮುದವನ್ನು ತಂದಿತ್ತೋ

ಏನೋ ಮೈಯೆಲ್ಲ ಹೂವಿನಂತೆ ಹಗುರ....ಅಂತೂ ವಿಶೇಷ ರೀತಿಯ ಉತ್ಸಾಹದಿಂದ ಕಾವೇರಿ ಹೂಗಿಡಗಳ ಆರೈಕೆಯಲ್ಲಿ ತೀವ್ರತನ್ಮಯಳಾದಳು. ಕಳೆಕಿತ್ತು ಗೊಬ್ಬರ ಹಾಕುವ ಕೆಲಸ ಸದ್ದಿಲ್ಲದೆ ಸಾಗುತಿತ್ತು. ಹಸುರು ಗಿಡಗಳು ಪುಷ್ಪಭರಿತವಾಗಿ ನಳನಳಿಸುತ್ತಿದ್ದುವು. ಮನೆಯಲ್ಲಿ ತಾನೊಬ್ಬಳೇ ವಿಾಸಲು ...ಸುತ್ತುಮುತ್ತಿನ ಅಂಗಳಪೂರ್ತಿ ಶೋಭಾ ಸಮುದ್ರದಲ್ಲಿದ್ದ ಒಂದು ಸಣ್ಣ ತರಂಗದಂತೆ ದರ್ಶನೀಯವಾಗಿತ್ತು.

ಕೈ ಕೆಲಸ ಸಾಗುತ್ತಲೇ ಇತ್ತು. ತಣ್ಣನೆಯ ತಂಪಿಗೆ ಹೂಗಿಡಗಳಿಗಿಂತಲೂ ಸೊಂಪಾಗಿ ಕಳೆ ಬೆಳೆಯುತ್ತದೆ. ಕಿತ್ತಷ್ಟೂ ಮುಗಿಯದು; ವೃದ್ಧ ಶರೀರ ಎಳೆಯರಂತೆ ಬಾಗಿ ಏಳುತಿತ್ತು. ಅದೇ ಸಮಯದಲ್ಲಿ ಟಪ್ಪಾಲಿನವನು ಕಾಗದವೊಂದನ್ನು ಕೈಯಲ್ಲಿಟ್ಟು ಹೋದ. ಕಾರಿಯಪ್ಪನ ಹಸ್ತಾಕ್ಷರ ಮನವನ್ನು ಸೆಳೆಯಿತು. ಕೈಯನ್ನು ತೊಳೆದುಕೊಳ್ಳುವಷ್ಟು ವ್ಯವಧಾನವೂ ಉಳಿಯಲಿಲ್ಲ. ಅತ್ಯಂತ ಆಸಕ್ತಿಯಿಂದ ಒಡೆದಳು ತಾಯಿ, ಒಂದೆರಡು ಪಂಕ್ತಿಗಳಲ್ಲಿ ಕಾಗದ ಮುಗಿದಿತ್ತು. ಆದರೂ ವಿಷಯ ಹೃದಯ ಹಿಗ್ಗುವಂತಿದೆ. ಮಡದಿಯ ಸ್ಥಿತಿ ಈಗೀಗ ಉತ್ತಮಗೊಳ್ಳುತ್ತಿರುವುದಾಗಿಯೂ ತನ್ನ ವ್ಯಾಪಾರ ಅಲ್ಲಿ ಅಸ್ತಿತ್ವ ಪಡೆಯಿತೆಂದೂ ಸಂತಸಪೂರ್ಣವಾಗಿ ಬರೆದಿದ್ದ. ಒಡನೆ ಮಹದಾನಂದದಿಂದ ...ಇಲ್ಲಿಯು ಎಲ್ಲಾ ವ್ಯವಸ್ಥೆ ಸುಖವಾಗಿಯೇ ನಡೆಯುತ್ತಿದೆ. ಅವರೆಷ್ಟು ದಿನ ಅಲ್ಲಿದ್ದರೂ ಬಾಧಕವಿಲ್ಲ ; ಈಗ ವ್ಯಾಪಾರವು ಕುದುರಿತಷ್ಟೆ ; ದೇವರು ದೊಡ್ಡವನು! ಇನ್ನಾವ ಯೋಚನೆಯೂ ಇಲ್ಲ; ಎಂದುಕೊಂಡಳು.

ಹೊತ್ತು ನೆತ್ತಿಗೇರುತಿತ್ತು. ಕಿತ್ತ ಕಳೆಯನ್ನು ಅತ್ತಹಾಕಿ ಕೈತೊಳೆದುಕೊಂಡು ಹೊರಬರುವಷ್ಟರಲ್ಲಿ ಚಂಗಪ್ಪ ಹೊಸ್ತಿಲ ಬಳಿ ಕಣ್ಗೋಚರಿಸಿದ. ತುಟಿಗಳಲ್ಲಿ ಮುಗುಳು ನಗೆ ಮೂಡಿತು. ವೃದ್ಧ ಜನನಿಯ ಕಾಲಿಗೆರಗಿ- "ಹೇಗಿದ್ದೀರಿ ಅವ್ವಾ ?"

ಎಷ್ಟು ದಿನಗಳ ಮೇಲೆ ನಿನ್ನ ದರ್ಶನ ?"

"ಬಿಡುವೇ ಆಗಲಿಲ್ಲ. ನಿಮ್ಮನ್ನು ನೋಡಬೇಕೆಂಬ ಇಚ್ಛೆ ಮನದಲ್ಲಿ ತುಂಬಿಕೊಂಡೇ ದಿನಗಳು ಕಳೆದುವು ನೋಡಿ."

"ಈ ಹಳೇ ಶರೀರಕ್ಕೆ ಏಕೆ ಅಷ್ಟು ಪ್ರಾಶಸ್ತ್ಯ? ಮುಖ್ಯವಾಗಿ ನೀವು–ತರುಣರು ಚೆನ್ನಾಗಿರುವುದನ್ನು ನಾವು ನೋಡಿದರೆ ಸಾಕು."

ಚಂಗಪ್ಪ ಆ ನುಡಿಯನ್ನು ನಿವಾರಿಸಲೆಂದೇ ಕೇಳಿದ "ನಿಮಗೆ ಒಬ್ಬರೇ ಇದ್ದು ಬೇಸರವಾಗಿತ್ತೇನೋ...."

"ಇಲ್ಲಪ್ಪಾ, ನೆಟ್ಟಮನೆಯ ಮಾಚಮ್ಮ ಬಿಡುವಿದ್ದಾಗಲೆಲ್ಲ ಬರುತ್ತಾಳೆ. 'ಇರು' ಎಂದರೂ ಇರುತ್ತಾಳೆ; ಅದರ ಯೋಚನೆಯೇ ಬೇಡ. ಈ ದಿನ ಕಾರಿಯಪ್ಪನಿಂದ ಕಾಗದ ಬಂದಿದೆ. ನೋಡಿದಾಗಿನಿಂದ ತುಂಬ ಸಂತೋಷ; ಇದೋ ನೋಡು." ಎನ್ನುತ್ತ ಕಾಗದವನ್ನು ಅವನ ಕೈಗಿಟ್ಟಳು. ತರುಣ ಸಂತಸದಿಂದ ಕಾಗದವನ್ನು ನೋಡುತ್ತ ಒಳಬಂದ. ವನ್ಯ ಪ್ರದೇಶ ನೀಡಿದ ಪೌಷ್ಟಿಕತೆಯಿಂದ ಮುಖದಲ್ಲಿ ಲಾಲಿಮೆಯುಕ್ಕುತಿತ್ತು. ಕಣ್ಣುಗಳು ಥಳ ಥಳಿಸುವ ಉಲ್ಕೆಗಳಂತೆ ತೋರುತಿದ್ದುವು. ಮುಖಮಂಡಲದ ಸುತ್ತಲೂ ಏನೋ ಒಂದು ವಿಧವಾದ ಅವರ್ಣನೀಯ ಅನುಭಾವದ ಅಲೆ ಅಲೆಯಲೆಯಾಗಿ ತರಂಗಿತನಾಗುತ್ತಿರುವಂತೆ ಭಾಸವಾಯಿತು. ಎಂದಿನಂತೆ ಒಲುಮೆಯಿಂದ ಬರಮಾಡಿಕೊಂಡಳು ಜನನಿ.

"ಮಂಗಳೂರಿಗೆ ಅಕ್ಕ ಹೋದಮೇಲೆ ನಿಮ್ಮನ್ನು ನೋಡಿಕೊಂಡು ಬರೋಣವೆಂದು ಎರಡು ಬಾರಿ ಹೊರಟೆ. ಎರಡುಬಾರಿಯೂ ಸಮಯಃ ಕೂಡಿ ಬರಲಿಲ್ಲ. ಯಾವುದಾದರೊಂದು ಕೆಲಸ ಕಾರ್ಯ ಅಡ್ಡ ಬರುತ್ತೆ. ಅನಂತರ ಮನಸ್ಸಿಗೆ ಕೊರತೆ. ಏನೇ ಇರಲಿ, ಇಂದು ನೋಡಿಯೇ ತೀರಬೇಕೆಂದು ಬೆಳಗ್ಗೆ ಮುಂಚೆಯೇ ಹೊರಟೆ."

"ಒಳ್ಳೆಯ ಕೆಲಸ ಮಾಡಿದೆ."

ಚಂಗಪ್ಪ ಮುಗುಳು ನಕ್ಕ–"ಅಷ್ಟೇ ಅಲ್ಲ. ಇಂದು ಹೊರಟದ್ದೂ ಒಳ್ಳೆಯ ಮುಹೂರ್ತ!"

ಅನಂತರ ಮನೆಯ ವ್ಯವಹಾರಿಕವಾಗಿ ಸ್ವಲ್ಪ ಹೊತ್ತು ಮಾತುಕತೆ ನಡೆಯಿತು. ಚಂಗಪ್ಪ ಕೇಳಿದ. "ಮಾದು ಇಷ್ಟರಲ್ಲೇ ಬರಬೇಕಾಗಿತ್ತಲ್ಲ ?"

"ಅವನಿಗೆ ತನ್ನದೇ ಏನು ? ಕಂಡವರ ಕೆಲಸವೇ ಹೆಚ್ಚು."

ಮುದ್ದಪ್ಪ ಇದ್ದಾಗಲೂ ಅದೇ ಕತೆಯಾಗಿತ್ತು. ಈಗ ಅವನದೆಲ್ಲಾ ಇವನು ಹೊತ್ತಿದ್ದಾನೆ."

ಕಾವೇರಿ 'ಹೌದು' ಎಂಬಂತೆ ತಲೆದೂಗಿ ಹೇಳಿದಳು. "ಮಾಡುವುದರಲ್ಲಿ ತಥ್ಯವಿದೆ; ಆದರೆ ತನ್ನ ಕ್ಷೇಮವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.... ಅದೇ ಬಂದಿರುವ ಕಷ್ಟ."

"ಆಗಾಗ ಎಚ್ಚರಿಸುತ್ತಿರಿ. ಸುಮ್ಮನೆ ಮೈಮರೆತು ಬಿಡುತ್ತಾನೆ ಅಷ್ಟೆ."

"ಮಕ್ಕಳಾದರೇನೋ ಒಂದು ರೀತಿ. ನಿಮ್ಮಂತಹವರಿಗೆಲ್ಲಾ ನಾವು ಏನಪ್ಪಾ ಹೇಳೋಣ ?"

ಚಂಗಪ್ಪ ನಕ್ಕು ನುಡಿದ,

"ಬ್ರಿಟಿಷ್ ಸರಕಾರದೊಂದಿಗೆ ಆದ ಒಪ್ಪಂದ ಮುರಿದು ಬಿದ್ದುದು ನಿಮಗೆ ತಿಳಿಯಿತೇ ?"

"ಹೌದು !"

"ಇನ್ನು ಕಾಂಗ್ರೆಸ್ಸಿಗರು ಸುಮ್ಮನೆ ಕೂಡುವುದಿಲ್ಲ. ಪುನಃ ಶುರುವಾಗುತ್ತೆ ಆಂದೋಳನ!"

"ನನಗೂ ಅದೇ ಯೋಚನೆಯಾಗಿದೆ. ಹುಡುಗರು-ಮಕ್ಕಳು ಮನೆ-ಮಠ ಬಿಟ್ಟು ಹೊರಟು ಬಿಡುತ್ತಾರೆ...ಸುಧಾರಿಸಿಕೊಳ್ಳುವುದು ಕಷ್ಟ."

"ಜೀವನಪರಿಸ್ಥಿತಿ ದಿನದಿನಕ್ಕೂ ಹದಗೆಡುತ್ತಿದೆ, ಈಗಲೇ ಹೀಗೆ, ಮುಂದೆ ಏನಾಗಬಹುದು ಯೋಚಿಸಿ ನೋಡಿರಿ."

"ಬಹಳ ಕಷ್ಟ...."

"ಬ್ರಿಟಿಷರು ಉದಾರ ಮನಸ್ಸು ಮಾಡಿದರೆ ಈ ಎಲ್ಲಾ ಸಂಕಷ್ಟಗಳಿಂದಲೂ ಪಾರಾಗಬಹುದಾಗಿತ್ತು. ಮುಖ್ಯವಾಗಿ ಕೊರತೆ ಇರುವುದೇ ಅವರಲ್ಲಿ."

"ಅವರು ಉದಾರತೆ ತೋರುವುದು ಇನ್ನೊಂದು ಜನ್ಮಕ್ಕೆ !"

"ನಿಜ ..ಅವರು ನಮ್ಮ ದೇಶಕ್ಕೆ ಹೆಜ್ಜೆ ಇರಿಸದೆ ಹೋಗಿದ್ದರೆ ಅದರ ಕತೆಯೇ ಬೇರೆಯಾಗುತಿತ್ತು."

"ನಮ್ಮ ಹಣೆಯಲ್ಲಿ ದಾಸ್ಯ ಜೀವನ ಬರೆದಿತ್ತು."

ಚಂಗಪ್ಪ ಮುಗುಳು ನಕ್ಕು ನುಡಿದ,

"ರಾಜಕೀಯದ ಹುಚ್ಚು ಹತ್ತಿ ನಾದು ಹಿಂದಿನಂತೆಯೇ ಹಾರಿದ ಎಂದರೆ ನಿನ್ನ ಕತೆ ಮುಗಿದೇ ಹೋಗುತ್ತದೆ. ಆಂದೋಳನ ಸೂಜಿಗಲ್ಲಿದ್ದಂತೆ, ಅದು ಯಾರನ್ನೂ ಬಿಡುವುದಿಲ್ಲ."

"ಸ್ಥಿತಿಗತಿ ಅನುಕೂಲವಾಗಿದ್ದವರಿಗೆ ಹೇಗಾದರೂ ನಡೆಯುತ್ತದೆ. ನಮ್ಮಂತಹವರದೇ ಕಷ್ಟ."

"ಈಸಲ ಚಳವಳಿ ಉಗ್ರರೂಪ ತಾಳುವುದೆಂಬುದು ಸರಕಾರಕ್ಕೆ ಗೊತ್ತಿದೆ; ಆಗಲೇ ಚಳವಳಿಕಾರರನ್ನು ಎದುರಿಸಲು ಸಿದ್ಧವಾಗುತ್ತಿದ್ದಾರೆ. ಮಿಲಿಟರಿ ರಕ್ಷಣೆಯನ್ನೂ ಕೇಳಿದ್ದಾರೆ."

"ಎಲ್ಲರಿಗೂ ಅವರವರ 'ಕರ್ತವ್ಯಪಾಲನೆ' ಎಂಬುದು ಉಂಟೇ ಉಂಟಲ್ಲ." ಎಂದುಕೊಂಡಳು ಜನನಿ. ಬಾಯ್ದೆರೆಯಲು ಮನಸ್ಸಾಗಲಿಲ್ಲ. ಇನ್ನು ಒಂದೆರಡು ವಾರಗಳೊಳಗಾಗಿ ಕಾಂಗ್ರೆಸ್ಸು ತನ್ನ ಉಗ್ರ ಹೋರಾಟಕ್ಕಾಗಿ ಕರೆ ನೀಡಬಹುದು ; ಎಂಬ ಯೋಚನೆಯೂ ಬಂತು. ಅನಂತರ ಒಡಲ ದುಗುಡವನ್ನೆಲ್ಲ ಹೊರಹಾಕಿದಳು "ನಮ್ಮ ದೇಶದ ಭವಿಷ್ಯ ಏನಾಗುತ್ತೋ....ದೇವರಿಗೇ ಗೊತ್ತು."

"ದೇವರಿದ್ದಾನೆ."

ನುಡಿಯೇನೋ ಹೊರಬಿತ್ತು. ದಿನವೂ ಸಂಭವಿಸುವ ಘಟನೆಗಳಲ್ಲಿ ಹಾಗೆನ್ನುವುದು ಅಭ್ಯಾಸವಾಗಿ ಹೋಗಿದೆ. ಈಗಲೂ ಸಹ ಅಭ್ಯಾಸ ಬಲದಿಂದಲೇ ನುಡಿ ಹೊರಬಿದ್ದುದನ್ನು ಮನಸ್ಸಿಗೆ ತಂದುಕೊಂಡಾಗ ತುಟಿಗಳಲ್ಲಿ ಸರಳ ಶುಷ್ಕ ನಗು ಹರಿದಾಡಿತು. ವಿಚಾರ ಕುತೂಹಲೆಯಾದ ಜನನಿಯನ್ನು ನೋಡುತ್ತ–"ಈ ಸಲ ರಾಜಕೀಯ ಕ್ಷೇತ್ರಕ್ಕೆ ಕಾಲಿಡುವುದೆಂದರೆ ಗುರಿ ಮುಟ್ಟುವ ಪ್ರಜ್ಞೆ ಇಲ್ಲದೆ ಇಳಿಯುವುದೇ ಇಲ್ಲ ಬಿಡಿ. ಸಂಧಾನ-ಅನುಸಂಧಾನಗಳ ಗಡಿಯನ್ನು ದಾಟಿ ಬಂದಿದ್ದೇವೆ. ದೇಶಕ್ಕೆ ದೇಶವೇ ದಂಗೆ ಎದ್ದರೆ ಬ್ರಿಟಿಷರೇನು ಮಾಡಿಯಾರು ? ಅವರು ತಿಳಿದುಕೊಂಡಿರುವಷ್ಟು ಸುಲಭವಲ್ಲ ಮಟ್ಟ ಹಾಕುವುದು" ಎಂದ, ಭಾವಪೂರ್ಣ ಲೋಚನಗಳಲ್ಲಿ ಹೊಳಪು ಮಿಂಚುತಿತ್ತು.

"ಈ ಸಾಲಿನಲ್ಲಿ ಮಳೆಬೆಳೆ ಚೆನ್ನಾಗಿತ್ತು. ರಾಜಕೀಯ ರಕ್ಷಣೆ ಇಲ್ಲದಿರುವುದರಿಂದ ಬಹಳ ಕಷ್ಟ. ಯಾವ ರೀತಿಯಲ್ಲಿ ಪರಿಸ್ಥಿತಿಗೆ ಹೊಂದಿಕೊಳ್ಳಬೇಕೋ ಅರ್ಥವಾಗುತ್ತಿಲ್ಲ."

"ಚಳವಳಿಯ ಹೆಸರಿನಲ್ಲಿ ಅನಾಚಾರ ನಡೆದರೆ ಆಶ್ಚರ್ಯವೇನಿಲ್ಲ."

"ದೇವರೇ ಗತಿ."

"ಈ ಬೃಹದ್ದೇಶದಲ್ಲಿ ಪ್ರಕೃತಿಯ ವೈವಿಧ್ಯತೆಯಿದೆ. ಸಿರಿತನ-ಬಡತನ, ಅಜ್ಞಾನ-ಸುಜ್ಞಾನ, ಮೇಲು-ಕೀಳು, ಪುರಾತನ-ವಿನೂತನ ಇವುಗಳ ನಡುವಣ ತಿಕ್ಕಾಟವಿದೆ. ಇದನ್ನೆಲ್ಲ ಸರಿಪಡಿಸುವುದೂ ಸಹ ಅಷ್ಟೊಂದು ಸುಲಭವಲ್ಲ. ನಮ್ಮ ದೇಶ ಒಂದು ಸುವ್ಯವಸ್ಥೆಗೆ ಬರಲು ಇನ್ನೆಷ್ಟು ಕಾಲ ಬೇಕೋ...."

ಚಂಗಪ್ಪ ಸ್ವಲ್ಪ ಹೊತ್ತು ವಿಷಯವನ್ನು ಮನದಲ್ಲೇ ತರ್ಕಿಸಿದ.... ಒಬ್ಬರ ಜುಟ್ಟು ಇನ್ನೊಬ್ಬರ ಕೈಯಲ್ಲಿರುವುದು ಅನ್ಯಾಯವೂ ಹೌದು. ಸ್ಪಷ್ಟ ವಿಧಾನವನ್ನು ಅಳಿಯಬಲ್ಲವರಾರು ? ಶತಶತಮಾನಗಳಿಂದ ನಡೆದು ಬಂದ ರೂಢಿ ಜನಮತಿಗೆ ಅಭ್ಯಾಸವೂ ಆಗಿಬಿಟ್ಟಿದೆ; ಎಂಬ ಯೋಚನೆಯೂ ಬಂತು. ಯೋಚಿಸುತ್ತ ಭಾವಪರವಶನಾಗಿ ವಿನಯ-ನಮ್ರತೆಗಳನ್ನು ಸೂಸಿ ನುಡಿದ.

"ನಾನು ನಮ್ಮ ದೇಶವನ್ನೆಲ್ಲ ಬಹಳ ಮಟ್ಟಿಗೆ ಸುತ್ತಿರುವೆ. ಅನೇಕ ಸ್ಥಳಗಳಲ್ಲಿ ಪರಿಚಯ ಬೆಳೆಸಿಕೊಂಡಿರುವೆ. ಬಯಲು ಪ್ರದೇಶವನ್ನೂ ಹಸುರುಕ್ಕುವ ಮಲೆನಾಡು ಪ್ರಾಂತ್ಯವನ್ನೂ ಕಂಡಿರುವೆ. ಆದರೆ, ಅವ್ವಾ, ನಿಜವಾಗಿಯೂ ನಮ್ಮ ಕೊಡಗಿನಂತಹ ಭೂಸ್ವರ್ಗ ಇನ್ನೆಲ್ಲಿಯೂ ನನಗೆ ಕಂಡು ಬರಲಿಲ್ಲ. ಬಹುಶಃ ಅದು ನನ್ನ ಅಂಧಾಭಿಮಾನವೇ ಇರಬಹುದು. ಆದರೆ.... ಹಾಗೆಂದು ಹೇಳಿಕೊಳ್ಳುವುದರಲ್ಲಿ ಹೆಮ್ಮೆಯಂತೂ ಹೆಪ್ಪುಗಟ್ಟಿದೆ!"

"ಈ ಅಭಿಮಾನ ಇಲ್ಲದೆ ಹೋಗಿದ್ದಲ್ಲಿ ನೀವೆಲ್ಲಿ ಚಳವಳಿಯಲ್ಲಿ ಭಾಗ ವಹಿಸುತಿದ್ದಿರಿ ?" ಎಂದಳು ಜಸನ್ನಿ, ಕಣ್ಣುಗಳ ಭಾವ ಕೂಗಿ ಹೇಳಿತು...ಈ ಮಹಾಭಾವನೆ ಇಂದು-ನಾಳೆಗೆ ಮಾತ್ರವಲ್ಲ; ಅನುಗಾಲವೂ ಇರಬೇಕಾದುದು!

"ಆದರೂ ಸಹ..." ಚಂಗಪ್ಪ ಉಗುಳನ್ನು ನುಂಗಿ ಗಂಟಲನ್ನು ಸರಿ ಪಡಿಸಿಕೊಂಡು ವಿಷಾದವಾಣಿಯಲ್ಲಿ,

"ಸಭ್ಯತೆ ಎಂಬುದು ಒಂದು ಪಶುತ್ವ...ರಾಕ್ಷಸತ್ವ....ಈಗ ನೋಡಿ, ನಿಮಗೆ ಒಂದು ಎಕರೆ ಜಮೀನು ಕೊಳ್ಳುತ್ತೇನೆಂದರೂ ಅವಕಾಶ ದೊರೆ ಯುಲಿಲ್ಲ. ಎಲ್ಲಿದ್ದರೂ ಅವು ಸ್ಥಿತಿವಂತರ ಪಾಲಿಗೆ ..ಬಡವರ ಬಾಯಿಯ ತುತ್ತನ್ನು ಕಸಿಯುವ ಸಭ್ಯತೆ ಇರುವುದಕ್ಕಿಂತ ಅಳಿಯುವುದು ಲೇಸು...ಈ ಕರ್ಮಕಾಂಡ ಎಷ್ಟು ಬೇಗನೆ ಮುಗಿದರೆ ಅಷ್ಟು ಒಳ್ಳೆಯದು" ಮುಖದ ಮೇಲಿನ ಬೆವರಿನ ಕಣಗಳನ್ನು ಒರಸಿಕೊಳ್ಳುತ್ತ ಕೆಲವುಕ್ಷಣ ತಡೆದು ಮುಂದು

ವರಿದ "ವ್ಯವಸಾಯ ಯೋಗ್ಯವಾದ ಸರಕಾರಿ ಜಮೀನು ಬೇಕಾದಷ್ಟಿದೆ. ಆದರೆ ಸರಕಾರ ಕೊಡಬೇಕಲ್ಲ? ಸಭ್ಯತೆಯ ಹೆಸರಿನಲ್ಲಿ ಉತ್ತಮ ಪೋಷಾಕು ಧರಿಸಿಕೊಂಡು ಯಾರು ಅವರ ಕೈ ಬೆಚ್ಚಗೆ ಮಾಡಬಲ್ಲರೋ ಅವರಿಗೆ ಜಮೀನು ದಕ್ಕುತ್ತದೆ. ನಾವೂ ನೀವೂ ಎಷ್ಟೇ ಬೇಡಿದರೂ ಕಾಡಿದರೂ ದೊರಕುವುದಿಲ್ಲ."

"ಅದು ನಿಜ ಅಣ್ಣ. ನಮಗೆ ಹತ್ತು ಎಕರೆ ಜಮೀನು ಸಿಕ್ಕಿದ್ದಿದ್ದರೆ ನಮ್ಮ ಸಂಸಾರ ಛಿದ್ರ ಛಿದ್ರ ಆಗುತ್ತಿರಲಿಲ್ಲ." ಎಂದಳು ಕಾವೇರಿ, ಎದೆಯಾಳದಲ್ಲಿ ಬಿಸುಸುಯ್ಲು ಹರಿದಾಡಿತು.

....ಸಭ್ಯತೆಯನ್ನು ಮುಂದಿಟ್ಟುಕೊಂಡೇ ಪ್ರಪಂಚ ಮುಂದುವರಿಯುವುದೋ ಏನೋ, ರಾಷ್ಟ್ರದ ಪ್ರಗತಿಗೆ ನಾವೇ ಕಾರಣವೆಂದು ಶ್ರೀಮಂತರೂ ಸಹ ಬಗೆಯುತ್ತಾರೆ. ಇದರಿಂದಲೇ ರಾಷ್ಟ್ರೋನ್ನತಿಗೆ ಧಕ್ಕೆ....ಬಡವರು ಶ್ರೀಮಂತರ ಕೀಲು ಬೊಂಬೆಯಾಗಿ ಕೀಲು ಮುರಿಸಿಕೊಂಡು ನರಳುವುದು ಸೃಷ್ಟಿ ವಿಧಾನವೇ ಆಗಿರಬಹುದು....ಈ ಬಂಗಾರದಂತಹ ಭೂಮಿಯು ಈ ಸ್ಥಿತಿಗಿಳಿದಿರುವುದೂ ಸಹ ಶೋಚನೀಯ....

ಮನೋರಾಜ್ಯದಲ್ಲಿ ತರಂಗಾಯಮಾನವಾದ ಯೋಚನಾಲಹರಿಯು ಮೈಯಲ್ಲಿ ಮೊದಲಿದ್ದ ಉತ್ಸಾಹವನ್ನು ಸರ್ರನೆ ನದಿ ನೀರಿನಂತೆ ಇಳಿಸಿತೋ ಏನೋ. ಒಂದು ಬಗೆಯಲ್ಲಿ ವಿಚಾರಮಗ್ನಳಾಗಿ ಮೂರ್ತಿಮತ್ತಾಗಿ ಕುಳಿತಳು ಕಾವೇರಿ. ಅವಳ ಮುಖಭಾವದಲ್ಲಿನ ಯೋಚನಾಮುದ್ರೆಯನ್ನು ಗಮನಿಸಿ ಚಂಗಪ್ಪ ನುಡಿದ,

"ವಿದೇಶೀಯರ ಕೃತ್ರಿಮ ವ್ಯವಹಾರದಿಂದ ನಮ್ಮವರು ಕಲಿತುದು ಕುಟಿಲನೀತಿ-ಆಚಾರ ಭಂಗ-ಆಡಂಬರ-ವಿದೇಶೀ ವೇಷಭೂಷಣ-ಜಾತೀಯತೆ. ಈ ಜನ ಸಮುದಾಯಕ್ಕೆ ತಾವು ಕಲಿಯಬೇಕಾದುದು ಏನು ಎಂಬುದು ಇನ್ನೂ ಅರ್ಥವಾಗುವುದಿಲ್ಲವಲ್ಲಾ, ಅದೂ ಒಂದು ಆಶ್ಚರ್ಯವೇ !"

ಸೂರ್ಯ ನೆತ್ತಿಗೇರಿ ಎಷ್ಟೋ ಹೊತ್ತಾಗಿತ್ತು. ಮಾದು ಇನ್ನೂ ಮನೆಯ ಕಡೆ ಬರದಿದ್ದುದರಿಂದ ನೋಟ ದಾರಿಯ ಕಡೆ ಹರಿಯಿತು. ಅದೇ ವೇಳೆಯಲ್ಲಿ ಕೆಳಮಟ್ಟಿಯ ಮೆಟ್ಟಿಲುಗಳನ್ನು ಹತ್ತಿ ಪ್ರಾಂಗಣಕ್ಕೆ ಕಾಲಿಟ್ಟ ಮಾದು. ವೃದ್ಧ ಜನನಿಯ ಮುಖಭಾವ ಪ್ರಸನ್ನವಾಯಿತು. ಚಂಗಪ್ಪ ಪ್ರೇಮಾದರದಿಂದ ಸ್ವಾಗತಿಸಿದ.

ಮಾದು ಬರಬರುತ್ತಲೇ ಹುಬ್ಬೇರಿಸಿ ಅಂದ "ಬಹಳ ಅಪರೂಪವಾಗಿ ಬಂದಿದ್ದೀರಿ !"

"ಬಿಡುವು ದೊರೆಯುವುದೇ ಕಷ್ಟ."

"ನೀವು ಯಾವಾಗಲೂ ಹೇಳಿದ್ದನ್ನೇ ಹೇಳುವುದಷ್ಟೆ?.... ಮತ್ತೇನು ಸಮಾಚಾರ ಹೇಳಿ? ಬಂದು ಎಷ್ಟೊತ್ತಾಯಿತು? ಬಹುಶಃ ಅವ್ವನಿಗೆ ಬೇಸರ ಹಿಡಿಯುವಷ್ಟು ಮಾತಾಡಿರಬಹುದು !"

ಮೂವರ ಮುಖದಲ್ಲೂ ಮುಗುಳು ನಗೆಯೆದ್ದಿತು.

ಪ್ರೇಮ ವಿಶ್ವಾಸಿಗಳ ಸಾನ್ನಿಧ್ಯದಲ್ಲಿ ಸಮಯ ಸಾನಂದದಿಂದ ಉರುಳಿತು.

ಭೋಜನ ಮುಗಿಸಿದನಂತರ ಹೊರಬಂದು ಆರಾಮವಾಗಿ ಕುರ್ಚಿಯ ಮೇಲೆ ಮೈಚೆಲ್ಲಿದಾಗ ಮಾದು ಉತ್ಸಾಹದಿಂದ ಹೇಳಿದ,

"ಅಪ್ಪ ಜಮೀನಿನ ವ್ಯವಸ್ಥೆಯನ್ನೆಲ್ಲ ಸಂಪೂರ್ಣ ನನಗೆ ಬಿಟ್ಟುಬಿಟ್ಟಿದ್ದಾರೆ. ಒಂದು ವೇಳೆ ದೇಶದಲ್ಲಿ ಪುನಃ ಆಂದೋಳನ ತಲೆಯೆತ್ತಿತೆಂದರೆ ನಾನು ಪುಟ ನೆಗೆದು ಹಾರುವವನೆ ! ಅನಂತರ ತೋಟದ ವ್ಯವಸ್ಥೆಯನ್ನು ಅವ್ವ ನೋಡಿಕೊಳ್ಳಬೇಕು !"

"ಅದೆಲ್ಲಾ ...ಇರಲಿ!" ಕಾವೇರಿ ತಮಾಷೆಯ ಧಾಟಿಯಲ್ಲಿ ನುಡಿದಳು.

"ನಮಗಿರೋ ಜಮೀನಿಗೆ ಇನ್ಯಾರು ಬೇಕು ಹೇಳಿ ?"

ಕಾವೇರಿ ಆಶ್ಚರ್ಯಚಕಿತಳಾಗಿ ನುಡಿದಳು "ಈ ದೇಶದಲ್ಲಿ ಅದೆಂತಹ ಪ್ರಚ್ಛನ್ನ ಬಿರುಗಾಳಿ ಬೀಸುತ್ತಿದೆಯೋ ದೇವರಿಗೇ ಗೊತ್ತು! ಚಂಡ ಪ್ರಚಂಡರೆಲ್ಲ ನಮ್ರ ವಿನಮ್ರರಾಗಿ ಬಿಟ್ಟಿದ್ದಾರೆ. ಈ ಕೆನ್ನೆಗೆ ಹೊಡೆದರೆ, ಆ ಕೆನ್ನೆ ತೋರಿಸಲೂ ಸಿದ್ಧ ! ಗಾಂಧೀಜೀಯವರಲ್ಲಿ ಇರುವ ಮಾಯಾ ಪ್ರಭಾವ ಖಂಡಿತ ಹಿಂದಿನವರಿಗೆ ಬಂದಿರಲಿಲ್ಲ; ಮುಂದಿನವರಿಗೆ ಬರುವುದಂತೂ ಅಸಂಭವ. ಈ ದೇಶೋದ್ಧಾರ ಕಾರ್ಯದಲ್ಲಿ ಯಾರ್ಯಾರಿಗೆ ಯಾವ ಯಾವ ಬುತ್ತಿಯೋ....ಆ ವಿಚಾರ ಹೇಗೆ ಇವರ ಹೃದಯಮಸ್ತಿಷ್ಕಗಳಲ್ಲಿ ತುಂಬಿ ಹೋಯಿತೋ....ಎಂಬುದೇ ಅರ್ಥವಾಗುವುದಿಲ್ಲ. ನಾವೇನಾದರೂ ಸಾಂಸಾರಿಕ ಕೆಲಸಕಾರ್ಯಗಳನ್ನು ಮುಂದಿಟ್ಟರೆ ಇವರು ಇಷ್ಟು ಮನಸ್ಸಿಗೆ ಹಾಕಿಯಾರೇ? ಇದೀಗ ಆಶ್ಚರ್ಯ !"

ಇಬ್ಬರೂ ನಕ್ಕು ಬಿಟ್ಟರು.

ಕಾವೇರಿ ಮುಂದುವರಿದಳು "ಈ ಮನೆಯ ಮೆಟ್ಟಲು ಹತ್ತಿದಾಗ ನನಗಿನ್ನೂ ಹದಿನಾಲ್ಕು ತುಂಬಿರಲಿಲ್ಲ. ಅಂದಿನಿಂದ ಇಂದಿನವರೆಗೆ ಈ ಜೀವ ಸವೆಸಿದ್ದಾಗಿದೆ. ಇನ್ನೂ ಏಕೆ ಈ ಜವಾಬ್ದಾರಿಯನ್ನು ಹೊರಲಿ? ನಿನಗೊಂದು ಮದುವೆ ಮಾಡಿಬಿಟ್ಟರೆ ನನ್ನ ಕೆಲಸ ಮುಗಿಯಿತು. ಅದೇ ನಾನು ಕೊನೆಯದಾಗಿ ಮಾಡಲಿರುವ ಕರ್ತವ್ಯ. ಅನಂತರ ನೀವು....ನಿಮ್ಮ ಬದುಕು !"

ಧ್ವನಿ ಗಂಭೀರವಾಗಿದ್ದರೂ ತುಟಿಗಳಲ್ಲಿ ಮಂದಹಾಸವನ್ನು ಮೂಡಿಸಿತು.

೧೪

...ನಾಡಿದ್ದು, ಭಾನುವಾರ ಮಗುವಿನ ಹುಟ್ಟುಹಬ್ಬದ ಸಲುವಾಗಿ ನನ್ನ ಗೆಳೆಯರಿಗೆ ಒಂದು ಪಾರ್ಟಿ ಏರ್ಪಡಿಸಿರುವೆ. ನಾವು ನಾಮಕರಣೋತ್ಸವ ನಡೆಸಿರಲಿಲ್ಲವಾದುದರಿಂದ ನಾಡಿದ್ದು ಅದೂ ಸಹ ನಡೆಯಲಿದೆ. ನನ್ನ ಮುತ್ತಜ್ಜನ ಹೆಸರನ್ನೇ ಇಡಬೇಕೆಂದು ನನ್ನ ಬಯಕೆಯೂ ಆಗಿತ್ತು. ಅದೇ ಸಮಯಕ್ಕೆ ನೀವೂ ಸಹ 'ಚಿಟ್ಟೆಯಣ್ಣ' ಎಂದು ಹೆಸರಿಸಬೇಕೆಂದು ಬರೆದಿದ್ದೀರಿ. ಮೇಲಾಗಿ ಪೂವಿಗೂ ಅದು ಇಷ್ಟವಾಗಿತ್ತು. ಒಳಗುಟ್ಟೇನು ಗೊತ್ತೇ? ಅವಳ ಅಜ್ಜನ ಹೆಸರೂ ಅದೇ !

ಮಗು ಮುದ್ದಾಗಿ ಬೆಳೆಯುತಿದ್ದಾನೆ. ಪುಟ್ಟ ಪುಟ್ಟ ಹೆಜ್ಜೆ ಇಟ್ಟು ಮನೆಯೆಲ್ಲಾ ಓಡಾಡುತ್ತಾನೆ. ಅವನ ಬಾಲಲೀಲೆಗಳಂತೂ ಬಲು ಮನಮೋಹಕ! ಇಲ್ಲಿಗೆ ಬಂದಾಗ ಒಬ್ಬಳೇ ಹೊತ್ತು ಕಳೆಯುವುದು ಕಷ್ಟ ಎಂದು ಬೇಸರ ಪಟ್ಟುಕೊಳ್ಳುತಿದ್ದಳು ಪೂವಿ. ಈಗ ಅವಳಿಗಿನಿತೂ ಬಿಡುವು ದೊರೆಯದಷ್ಟು ಕೆಲಸ. ಮಗುವಿನೊಂದಿಗೆ ಅತ್ಯಂತ ಸಂತೋಷದಿಂದ ಕಾಲಹರಣ ಮಾಡುತ್ತಾಳೆ. ಈ ವಲಯಕ್ಕೆ–ಇಲ್ಲಿನ ಪ್ರಕೃತಿ ವಿಶೇಷಕ್ಕೆ ಸ್ವಚ್ಛಂದವಾಗಿ ಹೊಂದಿಕೊಳ್ಳುತ್ತಾಳೆ. ಈಗೀಗ ಅವಳಿಗೆ ಹಿಂದಿನಂತೆ ಕೊಡಗಿನ ಗೀಳಿಲ್ಲ.

ಇದುವರೆಗೆ ಎಲ್ಲಿಯೂ ಯುದ್ಧಭಯ ತೋರುತ್ತಿಲ್ಲ. ವಿದೇಶಗಳು ಯುದ್ಧದ ತಯಾರಿಯಲ್ಲಿ ಹುರುಪಿನಿಂದ ಕೆಲಸ ಮಾಡುತಿದ್ದರೂ ಇದುವರೆವಿಗೆ ಎಲ್ಲೂ ಭುಗಿಲೇಳುವ ಸೂಚನೆಗಳಿಲ್ಲ. ಒಂದುವೇಳೆ ನನಗೆ ಬಡ್ತಿ ಸಿಗುವ ಸಂಭವವಿದ್ದಲ್ಲಿ ಸರ್ವಿಸಿನಲ್ಲಿ ಉಳಿವೆ. ಇಲ್ಲದಿದ್ದಲ್ಲಿ ಐದುವರ್ಷಗಳಾದೊಡನೆ ಸರ್ವಿಸ್ಸಿನಿಂದ ನಿವೃತ್ತಿ ಹೊಂದಿಬಿಡುವೆ. ಎಲ್ಲಾದರೂ ಒಂದೆಡೆ ಅಲ್ಪಸ್ವಲ್ಪ ಜಮೀನು ಸಿಕ್ಕಿದರೂ ಸಾಕು ಹೇಗಾದರೂ ಜೀವನ ನಡೆಸಬಹುದು. ಕುಟುಂಬವನ್ನೆಲ್ಲ ಬಿಟ್ಟು ಇಷ್ಟು ದೂರ ಬಂದು ಹೊಟ್ಟೆ ಹೊರೆದುಕೊಳ್ಳುವುದರಲ್ಲಿ ಖಂಡಿತಾ ಆತ್ಮಸಂತೋಷ ಮೂಡುವುದಿಲ್ಲ.

ಭಾರತ ಭೂಮಿಯ ಇಂಚು ಇಂಚು ನೆಲಕ್ಕಾಗಿ ಹೋರಾಡುವುದು ನಮ್ಮ ಪವಿತ್ರ ಕರ್ತವ್ಯ. ಈ ಪ್ರಪಂಚ ಖಂಡಿತ ಹೇಡಿಗಳಿಗಲ್ಲ. ಜಡಮತಿಗಳಿಗಲ್ಲ. ಸತ್ಯಸಂಕಲ್ಪ ನಿಸ್ವಾರ್ಥಸೇವೆ ಜೀವನ ಧರ್ಮವನ್ನು ಗೆಲುವಿನ ಹಾದಿಗೆ ಹಚ್ಚುತ್ತವೆ ; ಸತ್ಕರ್ಮ ಸತ್ಕೃತಿಗಳ ಕೂಡ ಭವಬಂಧನಕ್ಕೆ ಹೇತುವಾಗುವುದುಂಟು....ಕೀರ್ತಿಗಾಗಿ ನಾನು ಹಾತೊರೆಯಲಾರೆ. ಅದರ ವಾಸನೆಯೂ ನನಗೆ ಬೇಡ. ಭಾರತಮಾತೆಯ ಸೇವೆಯನ್ನು ಕೈಕೊಂಡ ದಿನವೇ ಆಕೆಯ ಅಡಿದಾವರೆಗಳಿಗೆರಗಿ, ಎಂತಹ ಉನ್ಮತ್ತ ಕರ್ಮದ ಪ್ರಚಂಡ ಬಿರುಗಾಳಿಗೆ ಸಿಕ್ಕಿದರೂ ಆಕೆಗೆ ದ್ರೋಹ ಬಗೆಯುವುದಿಲ್ಲವಾಗಿ ಪ್ರಮಾಣ ವಚನ ಕೈಕೊಂಡಿರುವೆ. ಮಾತೃಭೂಮಿಗಾಗಿ ಹೋರಾಡುವ ಪ್ರಸಂಗ ಬಂದರೆ ಈ ದೇಹದಲ್ಲಿ ನೆತ್ತರಿನ ಕೊನೆಯ ಬಿಂದು ಇರುವವರೆಗೂ ಹೋರಾಡುವುದು ನನ್ನ ಕರ್ತವ್ಯ. ಅಂತಲೇ ಖಂಡಿತವಾಗಿಯೂ ಹೋರಾಡುವೆ.

ಹಾಗೆಂದು ಅದನ್ನೇ ಕುರಿತು ಚಿಂತಿಸುತ್ತ ಕೂಡಬೇಡಿ. ಈಗ ನಮ್ಮ ಜೀವನ ಪ್ರಶಾಂತ ಶಾಂತಿಯಿಂದ ಕೂಡಿದೆ ; ನಿರೋಚಿತವಾಗಿ ನಡೆಯುತ್ತಿದೆ. ಮೇಲಾಗಿ ನಮ್ಮ ಬೀಡು ಹಸುರುಕ್ಕುವ ಪ್ರದೇಶದಲ್ಲಿರುವುದರಿಂದ ಕೊಡಗಿನಲ್ಲಿರುವುದಕ್ಕೂ ಇಲ್ಲಿರುವುದಕ್ಕೂ ಹೆಚ್ಚಿನ ವ್ಯತ್ಯಾಸವೇನೂ ತೋರುವುದಿಲ್ಲ. ಅಲ್ಲಿ ಜಮೀನಿನ ವ್ಯವಸಾಯ, ಇಲ್ಲಿ ಮಿಲಿಟರಿ ವ್ಯವಸಾಯ. ಕೊಡಗಿನವರನೇಕರು ನಮ್ಮ ರೆಜಿಮೆಂಟಿನಲ್ಲಿರುವುದರಿಂದ ನಮಗೆ ಬಂಧು ಬಾಂಧವ್ಯದ ಕೊರತೆ ಸಹ ತೋರುವುದಿಲ್ಲ. ವಾತಾವರಣ ಮಧುರತಮ—ವ್ಯವಹಾರ ಗಂಭೀರತಮ. ಅಂದಮೇಲೆ ಇನ್ನೇನುಬೇಕು ಹೇಳಿ ? ಈ ವಿಚಾರ ಸರಣಿಯ ಅಕ್ಷರ ಅಕ್ಷರವನ್ನೂ ನೀವು ಗಮನಿಸಿದರೆ ನಮ್ಮ ವಿಚಾರದಲ್ಲಿ ಖಂಡಿತವಾಗಿಯೂ ನಿಶ್ಚಿಂತೆಯಾಗಿರುತ್ತೀರಿ. ಸಾರ್ವಜನಿಕ—ಸಾಮಾಜಿಕ—ರಾಜಕೀಯ ಕ್ಷೇತ್ರಗಳು ದೂರವಾದ ಕೊರತೆಯೊಂದು ವಿನಾ ಮತ್ತಾವ ತೊಂದರೆಯೂ ತೋರುತ್ತಿಲ್ಲ. ಸಿವಿಲ್ ಕ್ಷೇತ್ರದ ಜೀವನ ಶಾಂತಿ ಇಲ್ಲಿ ಬರುವುದಿಲ್ಲವಾದರೂ ನಮಗೆ ಇದೊಂದು ತಾತ್ಕಾಲಿಕ ಆರ್ಥಿಕ ಪರಿಹಾರ ...ಜೀವನಕ್ಕೊಂದು ನಿಲ್ಮನೆ. ಅಷ್ಟಾದರೂ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ನನಗೆ ತಕ್ಷಣ ದೊರಕಿದುದು ಪುಣ್ಯವಿಶೇಷವೇ.

ಕಳೆದವಾರ ನಾವು ಗುಡ್ಡಪ್ರದೇಶದ ಕಡೆ ತಿರುಗಾಡಿ ಬರಲು ಹೋದಾಗ ಸಾಯಂಕಾಲದ ಒಂದು ಅಪೂರ್ವ ಸಮಯದಲ್ಲಿ ಪೂವಿಗೆ ಅತ್ಯಂತ ಸುಂದರ

ಕೊಳಲಕೃಷ್ಣನ ವಿಗ್ರಹ ದೊರೆತಿದೆ. ಅದರ ವಿಚಾರ ಅವಳೇ ಬರೆಯುತ್ತಾಳೆ ಓದಿ ನೋಡಿ–

ಪೂರ್ವಿಯ ಹಸ್ತಾಕ್ಷರ,

"ಮೊನ್ನೆ ಅಂದರೆ ಇಪ್ಪತ್ತೈದನೇ ಶುಕ್ರವಾರ ಸಂಜೆಯ ಸಮಯದಲ್ಲಿ ಠಾಣ್ಯದ ಹಿಂಭಾಗದ ಕಡೆ ತಿರುಗಾಡಿ ಬರಲು ಹೋಗಿದ್ದೆವು. ಒಂದೆರಡು ಫರ್ಲಾಂಗುಗಳ ದೂರದಲ್ಲಿ ಒಂದು ಎತ್ತರವಾದ ದಿಣ್ಣೆಯಿದೆ. ಅಲ್ಲಲ್ಲಿ ದೊಡ್ಡ ದೊಡ್ಡ ಮರಗಳಿವೆ. ಕುರುಚಲು ಗಿಡಗಳಲ್ಲಿ ಹೂಗಳು ಅರಳಿ ನೋಡಲು ಬಹಳ ರಮ್ಯವಾಗಿರುತ್ತವೆ. ಹಸುರು ಹುಲ್ಲು ದಟ್ಟೈಸಿ ಮೆತ್ತೆಯನ್ನು ಹಾಸಿದಂತಿರುತ್ತದೆ. ಅಲ್ಲಿ ಕುಳಿತು ಸುತ್ತಮುತ್ತಿನ ಪ್ರಕೃತಿ ವೈಭವವನ್ನು ನೋಡುವುದೇ ಒಂದು ಆನಂದ. ಮನದಣಿಯೇ ಕಣ್ದಣಿಯೇ ನೋಡಿದರೂ ತೀರದ ಬಯಕೆ. ಬಿಡುವು ದೊರೆತಾಗಲೆಲ್ಲ ಸಂಜೆಯ ಹೊತ್ತನ್ನು ಅಲ್ಲಿ ನೆಮ್ಮದಿಯಿಂದ ಕಳೆಯುತ್ತೇವೆ; ಸಂತಸದ ರಸಾನ್ನವನ್ನುಣ್ಣುತ್ತೇವೆ- ಸೂರ್ಯಾಸ್ತವನ್ನು ನೋಡುವುದಂತೂ ಮನಮೋಹಕ. ಭಕ್ತಿ ವೈರಾಗ್ಯಗಳು ಬಯಸದಿದ್ದರೂ ಉದಿಸುತ್ತವೆ. ಕೆಳಗಡೆ ಸಾನು ಪ್ರದೇಶದಲ್ಲಿನ ಹಳ್ಳಿಯ ದೃಶ್ಯ ಮುಗ್ಧ ಮಗುವಿನಂತೆ ಬಲು ಸುಂದರ. ಈ ವರ್ಣನೆಯನ್ನೆಲ್ಲ ಬರೆದು ವಿಶದಪಡಿಸುವುದಕ್ಕಿಂತ ನೋಡಿ ಆನಂದಿಸುವುದು ಸೂಕ್ತ. ದಿಣ್ಣೆಯ ದಕ್ಷಿಣ ಭಾಗದಲ್ಲಿ ಒಂದು ಸಣ್ಣ ಹಳ್ಳವಿದೆ. ಅದರಲ್ಲಿ ಮುಳ್ಳು ಕಂಟಿಗಳೂ ಜೊಂಡು ಹುಲ್ಲೂ ಬೆಳೆದುಕೊಂಡಿದೆ. ಹಾಗೇ ನೋಡುತ್ತಾ ಕುಳಿತಾಗ ನನ್ನ ದೃಷ್ಟಿ ಜೊಂಡಿನೆಡೆಗೆ ಹರಿಯಿತು. ಗಾಳಿಗೆ ಹುಲ್ಲೆಸಳು ಅಲುಗುವಾಗ ಅದರ ಹಿಂದೆ ತೆರೆಯಮರೆಯ ಹಿಂದೆ ಹಣಿಕಿ ನೋಡುವಂತೆ ಆಗಾಗ್ಗೆ ಕಿರೀಟ ಸಹಿತ ಮಸ್ತಕ ಅಲ್ಪ ಸ್ವಲ್ಪ ಕಾಣಿಸುತಿತ್ತು. ಮೊದಲು ಏನೆಂಬುದು ತಿಳಿಯಲಿಲ್ಲವಾದರೂ ದೃಷ್ಟಿಗೆ ಅದೊಂದು ಸೋಜಿಗವಾಗಿ ತೋರಿತು. ಎದ್ದು ಹೋಗಿ ಸನಿಹದಿಂದ ನೋಡಿ ಏನೋ ಇರಬಹುದೆಂದು ಊಹಿಸಿಕೊಂಡೆ. ಹುಲ್ಲನ್ನು ಅತ್ತಿತ್ತ ಸರಿಸಿ ನೋಡಿದರೆ ಸುಂದರವಾದ ವಿಗ್ರಹ ಕಾಣಿಸಿತು. ಆಗ ನನಗಾದ ಆನಂದ ಅಷ್ಟಿಷ್ಟಲ್ಲ. ಆದರೆ ಅದನ್ನು ಅಲ್ಲಿಂದ ಎತ್ತಿ ತರುವುದು ಅಷ್ಟು ಸುಲಭದ ಕೆಲಸವಾಗಿರಲಿಲ್ಲ. ಅದು ಯಾವ ಕಾಲದಿಂದ ಅಲ್ಲಿ ಬಿದ್ದು ಹೂತುಕೊಂಡಿತ್ತೊ ಊಹಿಸುವುದು ಕಷ್ಟ. ಎಷ್ಟು ಮಳೆಗಾಳಿಗಳನ್ನು ಕಂಡಿತ್ತೊ ದೇವರೇ ಬಲ್ಲ.

ನೆಲ ಗಟ್ಟಿಯಾಗಿದ್ದುದರಿಂದ ಸುಲಭದಲ್ಲಿ ಕೀಳುವುದು ಸಾಧ್ಯವಾಗಲಿಲ್ಲ. ಮುಖ ವೈಗಳಿಗೆ ಮಣ್ಣು ಮೆತ್ತಿಕೊಂಡಿತ್ತು. ಆಗ ಅದರ ರೂಪು ಅಷ್ಟಾಗಿ ತಿಳಿಯು ದಿದ್ದರೂ ನಮಗಾದ ಆನಂದ-ಸಂತೋಷಗಳಿಗೆ ಎಣೆಯೇ ಇಲ್ಲ. ಒಂದೂವರೆ ಅಡಿ ಎತ್ತರವಿರುವ ಅದು ಒಳ್ಳೆ ತೂಕವಾಗಿದೆ. ಅಲ್ಲಿಂದ ಹೊತ್ತು ತರುವುದು ತುಂಬ ಪ್ರಯಾಸವೇ ಆಯಿತು. ಹೊರಲಾರದೆ ಹೊತ್ತು ತಂದೆವು. ಅನಂತರ ಮನೆಯಲ್ಲಿ ತೊಳೆದು ಶುಭ್ರಗೊಳಿಸಿ ನೋಡಿದರೆ ಎಂತಹ ಅಮೋಘವಾದ ಕೃತಿರತ್ನ! ಯಾವ ಮಹನೀಯ ಅದನ್ನು ಕಡೆಯಲು ಜೀವರು ಸುರಿಸಿ ಶ್ರಮಿಸಿದನೋ....ಇನ್ನಾರು ಅದನ್ನು ಕೊಂಡೊಯ್ದು ಆ ಹೊಂಡದಲ್ಲಿ ಒಗೆ ದನೋ....ಆ ಎರಡೂ ಆತ್ಮಗಳಲ್ಲಿ ಇರಬಹುದಾದ ಅಂತರವನ್ನು ನೋಡಿರಿ! ಅದರ ಸೌಂದರ್ಯವನ್ನು ವರ್ಣಿಸುವುದೆಂದರೆ ಅಂತಹ ಶಬ್ದಭಂಡಾರ ನನ್ನಲ್ಲಿಲ್ಲ. ಅದಾವ ಪುಣ್ಯವಶಾತ್ ನನಗೆ ದೊರಕಿತೋ ದೇವರೇ ಬಲ್ಲ. ಪ್ರಫುಲ್ಲ ಮುಖ, ಮುಕ್ತವಿನೋದ ಭಂಗಿ, ಕೊಳಲನ್ನು ಹಿಡಿದ ಬೆರಳುಗಳ ಅತ್ಯಂತ ಸುಂದರ ವಿನ್ಯಾಸ, ಕಣ್ಣುಗಳ ಸಹಜತೆ, ಬೆನ್ನಿನ ಮೇಲೆ ಇಳಿಬಿದ್ದ ಕೇಶರಾಶಿಯ ನವುರಾದ ರೇಕುಗಳು, ಪ್ರಶಸ್ತ ಲಲಾಟದಲ್ಲಿ ಕಸ್ತೂರಿ ತಿಲಕ, ಮೂಗು-ಕಿವಿ ಗಳ ಮನೋಹರ ಮಾಟ ಒಂದೊಂದೂ ಹೃದಯಂಗಮವಾಗಿವೆ. ಘನ ಕೃಷ್ಣ ಶಿಲೆಯಲ್ಲಿ ಮೂರ್ತೀಭವಿಸಿದ ರಾಗಾತ್ಮಕ ಶ್ರದ್ಧೆಯ ಪರಿಹಾರ-ಭಕ್ತಿ ಭಾವ ಗಳ ಉದ್ದೀಪನೆ ಎಲ್ಲರನ್ನೂ ಆಕರ್ಷಿಸಿದುದು ಮಾತ್ರವಲ್ಲ; ಅತ್ಯಂತ ಆಶ್ಚರ್ಯ ವನ್ನುಂಟು ಮಾಡಿದೆ ಜನಮನದಲ್ಲುದಿಸಿದ ಭಕ್ತಿಭಾವ ನಮಗೆ ಜನಾನು ರಾಗವನ್ನು ಗಳಿಸಿಕೊಟ್ಟಿದೆ. ನಾನು ನಿತ್ಯ ಅದರ ಉಪಾಸನೆ ಕೈಗೊಂಡಿ ರುವೆ. ಇನ್ನು ಶ್ರೀ ಕೃಷ್ಣ ಭಗವಾನ್ ನಮ್ಮನ್ನು ಎಲ್ಲಾ ಸಂಕಷ್ಟಗಳಿಂದ ಪಾರು ಮಾಡಿದರೆ ಸಾಕು....

ಇದುವರೆಗೆ ಇದ್ದಂತಹ ಮನಃಕ್ಲೇಶ ಈಗ ಇಲ್ಲ. ಕೈಗೂ ಮನಸ್ಸಿಗೂ ಬಿಡುವಿಲ್ಲದಷ್ಟು ಕೆಲಸ, ಸೈನಿಕರಿಗೆ ಬೇಕಾಗುವ ಸ್ವೆಟರ್‌ಗಳನ್ನು ಬಿಡುವಿನ ವೇಳೆಯಲ್ಲಿ ತಯಾರಿಸಿಕೊಡುತ್ತೇವೆ. ಬಟ್ಟೆಬರೆಗಳನ್ನು ಹೊಲಿಯುವಿಕೆಯೂ ಕೆಲವು ವೇಳೆ ಲಭಿಸುತ್ತದೆ. ಈ ಬಗೆಯ ನಾನಾ ಚಟುವಟಿಕೆಗಳಿಂದ ಮನಸ್ಸು ಪೂರ್ಣತ್ವವನ್ನು ಪಡೆಯುತ್ತದೆ.

ಅಕ್ಕ ಪಕ್ಕದಲ್ಲಿ ಹಳ್ಳಿಯುವರು ಆಗಾಗ ಕಾಯಿಪಲ್ಲೆಗಳನ್ನು ಮಾರಲು ಬರುತ್ತಾರೆಂದು ನಿಮಗೆ ಹಿಂದೆಯೇ ತಿಳಿಸಿದ್ದೆ. ಇವರು ಬಹಳ ಹಿಂದುಳಿದವರು. ಈಜನಾಂಗದ ಸ್ತ್ರೀಮಂಡಳಿಯನ್ನು ನೋಡಿದರೆ ಕರುಳು ನುಲಿಯುತ್ತದೆ. ಅವರ ಸ್ಥಿತಿಗತಿ ಅವರ್ಣನೀಯ....ಒಂದು ಜನಾಂಗ ಎಷ್ಟರಮಟ್ಟಿಗೆ ಮುಂದುವರಿದಿದೆ ಎಂಬುದನ್ನರಿಯಬೇಕಾದರೆ ಹೆಂಗಳೆಯರನ್ನು ಯಾವ ರೀತಿಯಲ್ಲಿ ನೋಡುತ್ತಾರೆ ಎಂಬುದೇ ಒರೆಗಲ್ಲು. ಸ್ತ್ರೀವಿದ್ಯಾಭ್ಯಾಸ-ಸ್ತ್ರೀಸ್ವಾತಂತ್ರ್ಯ ಸ್ತ್ರೀ ಶ್ರೇಯಸ್ಸು ಆರ್ಥಿಕ ಸೌಲಭ್ಯದ ಮೇಲೆ ಅವಲಂಭಿಸುವುದಾದರೂ ಅದು ಜೀವನಾದರ್ಶವನ್ನು ಪ್ರತಿಪಾದಿಸುತ್ತದೆ. ರಾಷ್ಟ್ರದ ಪ್ರಗತಿಗೆ ಮೂಲಭೂತವೂ ಸಹ...ಅದಿಲ್ಲದ ಜೀವನವೊಂದು ಜೀವನವೇ ? ಕುರಿಗೂ ಕುರುಬನಿಗೂ ಇರಬಹುದಾದ ಸಂಬಂಧ ಸ್ತ್ರೀಪುರುಷರಲ್ಲಿರುವುದರಿಂದಲೇ ನಮ್ಮ ದೇಶದ ಮಾನ್ಯತೆ ತಗ್ಗಿಡೆಯೆಂದರೆ ಏನೇನೂ ವಿಶೇಷವಲ್ಲ, ಸ್ತ್ರೀ ಜನಾಂಗ ರಾಷ್ಟ್ರದ ಅರ್ಧಾಂಗ...ಆ ಅರ್ಧಾಂಗ ವಿದ್ಯಾಹೀನತೆ, ಬುದ್ಧಿಹೀನತೆ, ಸ್ವಾತಂತ್ರ್ಯ ಹೀನತೆಗಳಿಂದ ತೊಳಲಿ ಬಳಲಿ ನರಳುತ್ತಿರುವುದರಿಂದಲೇ ಪ್ರಗತಿಯು ಹೆಜ್ಜೆ ಹೆಜ್ಜೆಯೂ ಕುಂಟುತ್ತ ನಡೆಯುತ್ತಿದೆ.

ಅತೀತಯುಗದ ಅತೀತಮಾರ್ಗಯೋಗದಲ್ಲಿ ಅತೀತಯುಗಧರ್ಮಕ್ಕೆ ಹೊಂದಿಕೊಂಡು ಸ್ತ್ರೀ ಜೀವನದ ಮೇಲೆ ಪರಮಲಕ್ಷ್ಯವಿಟ್ಟು ಮನೋವಿಕಾಸಕ್ಕೆ ಅವಕಾಶ ನೀಡಿದರೆ ಭಾರತ ಮಹಿಳೆಯರು ವಿಶ್ವಕ್ಕೆ ಮಾದರಿಯಾಗ ಬಲ್ಲರು. ನಮ್ಮವರ ಶೀರದ ಅಸಹನೀಯ ಸಂಕುಚಿತ ಮನೋಭಾವ ಎಲ್ಲಕ್ಕೂ ಅಡೆತಡೆ.

ಸ್ವಾರ್ಥದ ಪರಮಾವಧಿ ...

ಈ ಅಶಾಶ್ವತ ಶರೀರ ವಲಯದಲ್ಲಿ ತುಂಬಿಹೋಗಿರುವ ಮಾಯಕತೆಯನ್ನು ಅರ್ಥೈಸುವುದೇ ಕಡುಕಷ್ಟ. ಆದರೆ ದೇಶಕಲ್ಯಾಣಕ್ಕಾಗಿ-ಜೀವನ ಕಲ್ಯಾಣಕ್ಕಾಗಿ ಸತ್ವಹೀನರಾಗಿ ಬದುಕುತ್ತ ತಪೋನಿಷ್ಠೆಯ ನೇಮದಿಂದ ಉಸಿರಾಡುತ್ತಿರುವ ಪುಣ್ಯವತಿಯರ ನೆತ್ತರಿನ ಕಣಕಣವೂ ದೇಶಮಾತೆಯ ಸ್ವಾತಂತ್ರ್ಯಕ್ಕೆ ಇಂದು ಮಹಾಪೂರಕವಾಗುತ್ತಿದೆ. ಈ ಅಖಂಡ ಭಾರತದ ಚಾರಿತ್ರ್ಯವಾಹಿನಿಯಲ್ಲಿ ಮುಳುಗಿ ನೋಡಿದರೆ ಯುಗಯುಗಾಂತರಗಳಿಂದ ಕುಡುಬರುವ ಈ ಉದ್ದಂಡ ರಹಸ್ಯ ಗಣನೆಗೆ ಬಾರದಿರುವುದು ಆಶ್ಚರ್ಯ ! ಪರಮಾಶ್ಚರ್ಯ !!

ಕಾವೇರಿ ಕಾಗದವನ್ನೋದಿ ಕಷ್ಟ ಸುಖಗಳನ್ನೆಲ್ಲಾ ಒಂದೇ ಬಾರಿಗೆ ಹೀರಿಕೊಂಡಳು, ಯಾವುದೋ ಮಧುರ ವೀಣಾನಿನಾದ ಹೃದಯ ತಂತುಗಳಲ್ಲಿ ಮಿಡಿಯುತ್ತಿರುವಂತೆ ಭಾಸವಾಯಿತು. ಕಾಗದವನ್ನು ಮೇಜಿನ ಮೇಲಿಡುವಷ್ಟರೊಳಗಾಗಿ ಮಾದು ಒಳ ಬಂದ. ಶ್ರಮದಾನದಿಂದ ತನುಮನಗಳು ಆಯಾಸದ ಬೀಡಾಗಿದ್ದುವು. ಹಣೆಯಮೇಲೆ ಬೆವರಿನ ಹನಿಗಳು ತುಂತುರುತುಂತುರಾಗಿ ಮೂಡಿ ಅಲ್ಲಲ್ಲಿ ಧಾರೆಧಾರೆಯಾಗಿ ಇಳಿಯುತಿದ್ದುವು.

"ಮಗೂ! ತುಂಬ ಬಳಲಿದ್ದಿ. ಹೆರವರಿಗೆ ನೀನು ಮಾಡುವಷ್ಟೇ ಸಹಾಯವನ್ನು ಅವರಿಂದಲೂ ಪಡೆದುಕೊಂಡರೆ ನಿನಗೆಷ್ಟೋ ಹಗುರವಾಗುತ್ತದೆ. ನೀನದನ್ನೆಲ್ಲ ಮನಸ್ಸಿಗೆ ಹಾಕಿಕೊಳ್ಳುವುದಿಲ್ಲ. ದುಡಿಯುವುದೊಂದೇ ಗೊತ್ತು. ಇಲ್ಲದಿದ್ದಲ್ಲಿ ನಿನ್ನ ಕೆಲಸವಷ್ಟನ್ನು ಮಾತ್ರ ನೋಡಿಕೊಂಡು ನೆಮ್ಮದಿಯಿಂದಿರು."

"ಪರವಾಯಿಲ್ಲ; ಕೈಕಾಲುಗಳಂತೂ ಗಟ್ಟಿಯಾಗಿವೆ."ಎನ್ನುತ್ತ ಮುಗುಳು ನಕ್ಕ, ಮುಖ ಬಿಂಬದಲ್ಲಿ ವಿಚಿತ್ರ ಆನಂದ ಜ್ಯೋತಿ ಹರಿದಾಡಿತು.

ಕಾವೇರಿ ಹುಸಿ ಕೋಪವನ್ನು ಪ್ರಕಟಿಸುತ್ತ "ಬಿಡಪ್ಪಾ, ನಿನಗೆ ಮನೆಯ ಕಡೆ ಲಕ್ಷ್ಯವೇ ಇಲ್ಲ. ಊರುಮಂದಿಯ ಕೆಲಸ ಮಾಡಿಕೊಂಡು ಆರಾಮವಾಗಿದ್ದು ಬಿಡುತ್ತಿ; ಮದುವೆಯಾಗು ಎಂದರೂ ಮನಸ್ಸು ಮಾಡುವುದಿಲ್ಲ. ನನಗಾದರೂ ಏಕೆ ಬೇಕು ಈ ಸಂಸಾರ ?"

"ಕಾಲ ಪಕ್ವವಾಗಲಿ ಎಲ್ಲಾ ಕೂಡಿ ಬರುತ್ತೆ. ಹೀಗೆ ಸುಮ್ಮಸುಮ್ಮನೆ ಅವಸರ ಮಾಡಿದರೆ ಆಗುತ್ತದೆಯೇ ?"

"ಅವಸರವೇ ? ಇದೆಲ್ಲಾ ನಿರ್ಲಕ್ಷ್ಯ... ಹುಡುಗ ಬುದ್ಧಿ.

ಮಾದು ಮುಗುಳು ನಕ್ಕ. ತುಟಿಗಳಂಚಿನಲ್ಲಿ ನಗುವಿನ ವಿಮಲಧಾರೆ ಸರಳರೇಖೆಯಂತೆ ಹರಿದಾಡಿತು.

"ಈ ನಗು ಹುಡುಗಾಟ ಇವೆಲ್ಲಾ ಇನ್ನೂ ಎಷ್ಟು ದಿನ ? ನಿನಗೆ ನನ್ನ ಕಷ್ಟದ ಅರಿವೇ ಆಗುವುದಿಲ್ಲ ?"

"........"

ವೃದ್ಧ ಜನನಿಯ ಮುಖದಮೇಲೆ ಹರಿದಾಡುವ ಸೂಕ್ಷ್ಮಾತಿಸೂಕ್ಷ್ಮ ವೇದನಾಲಹರಿಯು ಪ್ರಕಾಶಮಯ ಅರುಣಕಿರಣಗಳ ಜ್ಯೋತಿರ್ಧಾರೆಯಲ್ಲಿ

ಸ್ಪಷ್ಟವಾಗಿ ಕಾಣಿಸುತಿತ್ತು. ತನ್ನ ಜೀವಮಾನವನ್ನೆಲ್ಲ ಸಂಸಾರದುತ್ಥಾನಕ್ಕಾಗಿ ಧಾರೆಯೆರೆದ ನಿಷ್ಣಾತೆ. ಪ್ರಾಚೀನೆಯಾದರೂ ಯುಗಧರ್ಮವನ್ನರಿತ ಮಾತೃಶ್ರೀ! ಒಂದು ಕಾಲದಲ್ಲಿ ವ್ಯತಿರಿಕ್ತ ಭಾವನೆಗಳು ಮಿಂಡಿಯುೂರಿ ನಿಲ್ಲುತಿದ್ದರೂ ಈಗ ಆಕೆಯೊಂದಿಗೆ ವಾದವಿವಾದ ಹೂಡಿ ಗೋಳು ಹುಯ್ಯುವಂತಹ ದಿಟ್ಟತನ ಇನಿತೂ ಇಲ್ಲ. ಏನೋ ಒಂದು ರೀತಿಯಲ್ಲಿ ಮುಗ್ಧ ಮೋಹಕತೆಗೊಳಗಾಗದಂತೆ ಪ್ರಶಾಂತಮುಖಿಯಾಗಿ ಪ್ರಶ್ನಿಸಿದ.

"ಹೆಣ್ಣು ಹುಡುಕಿ ಇಟ್ಟಿದ್ದೀರಾ ಹೇಳಿ !"

"ಅದೇನು ದೊಡ್ಡದು ? ಮೊದಲು ನೀನೊಪ್ಪಿದರೆ ಸಾಕಲ್ಲ...."

ಮಾದಯ್ಯನ ಸ್ತಬ್ಧ ಪ್ರಕೃತಿಯ ಅಂತರಾಳದಲ್ಲಿ ಆ ಕ್ಷಣ ವಿಚಿತ್ರತಮ ಕೋಲಾಹಲ ಆರಂಭವಾಯಿತು. ದುರ್ದಮನೀಯವಾದ ಆ ತೀಕ್ಷ್ಣತೆಗೆ ಸಿಲುಕಿ ನರನಾಡಿಗಳಲ್ಲಿ ವಿದ್ಯುಲ್ಲಹರಿಯು ಸಂಚರಿಸಿ, ರಕ್ತದ ಹನಿಹನಿಯೂ ತುಳುಕುತ್ತಿರುವಂತೆ ಭಾಸವಾಗಿ ಬಾಡಿದ್ದ ಮುಖಬಿಂಬ ರಂಗು ತಳೆಯಿತು. ಆ ಹೊಸ ಹುರುಪನ್ನು ತೋರಗೊಡದಿರಲು ಮುಖ ತೊಳೆಯುವ ನೆವದಲ್ಲಿ ಒಳಹೋದ ಮಾದು.

ಢಣ್ ಢಣ್. ಢಣ್. ಢಣ್, ಢಣ್....

ಗೋಡೆಯ ಮೇಲಿನ ಗಡಿಯಾರ ಭಾರಿಸುತ್ತಲೇ ಇತ್ತು–ಹನ್ನೆರಡರ ಗಡಿಯನ್ನು ದಾಟುವವರೆಗೂ. ಆನಂದಭಾವಾತಿರೇಕದಲ್ಲಿ ಮಿಂಚುವ ನಿಮೀಲಿತ ನೇತ್ರಗಳು ಶಾಂತ ಸ್ನಿಗ್ಧ ಮನೋಹರವಾದುವು. ಭಾಸಮಾನ ಪ್ರಕೃತಿಯ ಅಂತರಾಳದಲ್ಲಿ ಆವಿರ್ಭವಿಸಿದ ಶಾಂತಿಯ ರಸಧಾರೆ ಹೃದಯ ಕುಂಡಲಿನಿಯ ಕಮಂಡಲುವಿಗೆ ತಟತಟನೆ ತೊಟ್ಟಿಕ್ಕಿ ವೃದ್ಧಜನನಿ ಕಿಂಚಿತ್ ಆನಂದ ಸುಧೆಯನ್ನು ಸವಿದಳು.

ಬಾಗಿಲ ಬಳಿ ಮಲಗಿದ್ದ ಜೂಲಿ ಎದ್ದು ಹೊರಹೋಗಿ ಬೊಗಳತೊಡಗಿದುದರಿಂದ ಎಲ್ಲೋ ಧ್ಯಾನವಿಲಯದಲ್ಲಿ ನಿಮಗ್ನವಾಗಿದ್ದ ಮನಸ್ಸು ವಿಮುಖವಾಯಿತು. ಕುತೂಹಲ ತೃಷಿತನೇತ್ರಗಳು ಹೊರಬಾಗಿಲ ಕಡೆ ಹೊರಳಿದುವು. ಕೆಲವೇ ಕೆಲವು ನಿಮಿಷಗಳೊಳಗಾಗಿ ಪ್ರಾಂಗಣಕ್ಕೆ ಕಾಲಿಟ್ಟ ಕಾರಿಯಪ್ಪ ದಂಪತಿಗಳು ಜೂಲಿಯನ್ನು ಮೈದಡವಿ ಮುದ್ದಿಟ್ಟು ಒಳಬಂದರು. ಅನಿರೀಕ್ಷಿತ ಭೇಟಿ ಎಲ್ಲರ ಮುಖವನ್ನೂ ಪ್ರಸನ್ನ ಭಾವದಿಂದ ಬೆಳಗಿತು.

"ಕಾಗದ ಬರೆಯಬಾರದಿತ್ತೆ ? ನೀನೇ ಪೆಟ್ಟಿಗೆ ತಂದೆಯಲ್ಲಾ ?"

"ಓ....ಅದಕ್ಕೇನಂತೆ ?"

"ಮಾದು ಹೆದ್ದಾರಿಗೆ ಬರುತ್ತಿದ್ದ. ವೃಥಾ ತೊಂದರೆ ತೆಗೆದುಕೊಂಡೆ." ಎಂದು ಕಾವೇರಿ ಸೊಸೆಯೆಡೆಗೆ ತಿರುಗಿ "ನೀನು ಮಂಗಳೂರಿಗೆ ಹೋಗಿದ್ದು ಒಳ್ಳೆಯದಾಯ್ತು. ಈಗ ಸ್ವಲ್ಪ ಸುಧಾರಿಸಿಕೊಂಡಿದ್ದಿ."

"ಹೌದು ಅಲ್ಲವೇ ?"

ಎಲ್ಲರ ತುಟಿಗಳಲ್ಲೂ ಸಂತಸದ ತಿಳಿನಗೆ ಹರಿದಾಡಿತು.

೧೫

ಸಾಗರದಂಚಿನ ಸಾಗರವೀಚಿ ಧ್ವನಿಸುವ ಸುಮನೋಹರ ರಾಗಲೀಲೆ ಮೈಗೆ ಪುಷ್ಟಿನೀಡಿದಂತೆಯೇ ಅಲ್ಲಿ ಪರಿಚಿತರಾದ ಐಯ್ಯಪ್ಪನ ಕುಟುಂಬ ಮನಸ್ಸಿಗೆ ಪುಷ್ಟಿ ನೀಡಿತು. ಎರಡೂ ಸಂಸಾರಗಳಲ್ಲಿ ಆತ್ಮೀಯತೆಯ ಬಳ್ಳಿ ಹಾಸುಹೊಕ್ಕಾಗಿ ಹಬ್ಬಿ ಮನಮನಗಳನ್ನು ಬೆಸೆಯಿತು. ಹಿರಿಯ ಮಗಳಾದ ಪೊನ್ನಮ್ಮ ಕೈಬಿಡುವು ದೊರೆತಾಗಲೆಲ್ಲ ಬಂದು ನೆರವು ನೀಡುತಿದ್ದಳು. ಸಮಯ-ಸಂದರ್ಭಗಳಲ್ಲಿ ಅವರೆಲ್ಲರೂ ಬಂದು ಕೂಡುತಿದ್ದರು. ಗಂಗಮ್ಮ ಅನುಕೂಲ ದೊರೆತಾಗಲೆಲ್ಲ ಹೋಗಿ ಬರುವಳು.

ಈ ಸಲ ಸತಿಪತಿಗಳು ಅವಸರವಸರವಾಗಿ ಬಾಗಂಡಕ್ಕೆ ಹಿಮ್ಮರಳಿದ ಕಾರಣವು ಒಂದು ಉದ್ದೇಶದಿಂದ ಕೂಡಿತ್ತು. ಮಂಗಳೂರಿನಲ್ಲಿ ಕಾಫಿ-ಟೀಗಳ ಸಣ್ಣ ವ್ಯಾಪಾರವು ಕುದುರಿ ಜೀವನೋಪಾಯಕ್ಕೂ, ವಾತಾವರಣ ಆರೋಗ್ಯಕ್ಕೂ ಅನುಕೂಲವಾದುದರಿಂದ ಮಾದಯ್ಯನಿಗೆ ಮದುವೆ ಮಾಡಿ ತಾವಿಬ್ಬರೂ ಅಲ್ಲಿಯೇ ನೆಲಸುವ ಉದ್ದೇಶ ಹೊಂದಿದ್ದರು. ಮರುದಿನ ಭಾಗಮಂಡಲದಲ್ಲಿ ನಡೆಯಲಿದ್ದ ಮದುವೆಯ ಸಮಾರಂಭಕ್ಕೆ ಕುಟುಂಬ ಸಮೇತ ಐಯ್ಯಪ್ಪ ಹಿಂದಿನ ದಿನವೇ ಹೊರಟಿದ್ದ. ಆ ಸಮಯವನ್ನು ಸುಲಭದರದಲ್ಲಿ ಸದುಪಯೋಗ ಪಡಿಸಿಕೊಳ್ಳಲೆಂದೇ ಇವರೂ ಹೊರಟುದುದು.

ಮುಖ ಮಜ್ಜನ ಮಾಡಿ ಊಟಕ್ಕೆ ಕೂಡುವ ಮುನ್ನ ಗಂಗಮ್ಮ ಸಂತಸಪೂರ್ಣಧ್ವನಿಯಲ್ಲಿ ವಿಷಯವನ್ನು ಪ್ರಸ್ತಾಪಿಸಿದಳು.

"ನಾಳೆ ಎಲ್ಲರೂ ಭಾಗಮಂಡಲದ ಮದುವೆಗೆ ಹೋಗೋಣ. ಮಾದು ಅಲ್ಲಿಯೆ ಹುಡುಗಿಯನ್ನು ನೋಡಲಿ,ಪರಸ್ಪರ ಒಪ್ಪಿಕೊಂಡಲ್ಲಿ ವಿಳಂಬ ಬೇಡವೇ ಬೇಡ...ಅವರು ಸಂಬಂಧ ಕೂಡಿ ಬಂದರೆ ಈಗಲೇ ಮಾಡಿಕೊಡಲು ತಯಾರಿದ್ದಾರೆ."

ಮಾದು ಸಮ್ಮತಿ ಸೂಚಕವಾದ ಮುಗುಳ್ನಗೆ ಬೀರಿದ. ಎದೆಯಾಳ ದಿಂದ ಹೊಮ್ಮಿದ ವಿಚಿತ್ರ ಪರಿಮಳ ರಾಗವಿರಾಗಗಳನ್ನು ಸೂಸುತಿತ್ತು. ಪ್ರಶಾಂತ ಮುಖಮಂಡಲದಲ್ಲಿ ಪ್ರತಿರೋಧದ ರೇಖೆಯೂ ಸಹ ಸುಳಿಯಲಿಲ್ಲ. ಕಾವೇರಿ ಆ ಭಾವಧಾರೆಯನ್ನವಲೋಕಿಸಿದನಂತರ ತನ್ನ ಅಭಿಪ್ರಾಯವನ್ನು ಮುಂದಿಟ್ಟಳು "ಅವನಿಗೆ ಇದುವರೆಗೂ ಆ ಯೋಚನೆ ತಲೆಗೆ ತಟ್ಟಿಯೇ ಇರ ಲಿಲ್ಲ. ಸದಾ ಜನಸೇನೆ .. ಸಂಘ–ಸಂಸ್ಥೆಗಳು ಇವುಗಳಲ್ಲೇ ಹೊತ್ತು ಕಳೆ ಯುತ್ತದೆ. ಏನಾದರೂ ಹೇಳಿದನೆ ನಕ್ಕು ಹಾರಿಸಿಬಿಡುವುದೊಂದು ಗೊತ್ತು!"

ಗಂಗೂ ಅದೇ ವಿಚಾರವಾಗಿ ತುಂಬ ಮಾತನಾಡಿ ಅಂದಿಂದಿನ ಸ್ನೇಹ ಸರಣಿಯನ್ನು ಬಣ್ಣಿಸಿ"ನೀವಿಬ್ಬರೂ ಒಪ್ಪಿಕೊಂಡರೆ ಮುಂದಿನದು ನಮ್ಮಭಾರ" ಎಂದಳು.

"......"

ಕಾರಿಯಪ್ಪನ ತುಟಿಗಳು ಬಿರಿಯದಿದ್ದರೂ ಮುಖಭಾವನೇ ಎಲ್ಲವನ್ನೂ ನಿವೇದಿಸಿಕೊಂಡಿತ್ತು. ಮಾದು ನಯ-ವಿನಮ್ರನಾಗಿ ಭವಿಷ್ಯದ ವೇದಿಕೆ ಯನ್ನೇರಿದ. ಮನೋರಂಗದಲ್ಲಿ ಪೊನ್ನಮ್ಮನ ಕಲ್ಪನೆಯ ಮೂರ್ತಿ ನಲಿಯು ತಿತ್ತು.

ಮರುದಿನ ಕಾರಿಯಪ್ಪ ಎಲ್ಲರೊಂದಿಗೆ ಭಾಗಮಂಡಲಕ್ಕೆ ಹೊರಟ. ಕೆಳ ಮಟ್ಟಿಯ ಸಾಲು ಮೆಟ್ಟಿಲುಗಳನ್ನು ಇಳಿದು ಹೆಬ್ಬಯಲಿನ ಕಾಲುಹಾದಿಯನ್ನು ಹಿಡಿದರು. ವಸಂತಕಾಲೀನ ಕುಸುಮಿತ ವನರಾಜಿಯ ತಣ್ಣೆಳಲಲ್ಲಿ ಲಲ್ಲೆ ಗೈಯ್ಯುತ್ತಿದ್ದ ಸಕಲ ಪಕ್ಷಿಗಳಿಂಚರವು ಕಲಕಲಮಯವಾಗಿ ಕೇಳಿಬರುತಿತ್ತು. ವನಲಕ್ಷ್ಮಿಯ ಸೌಂದರ್ಯ ಹೊಸದಲ್ಲವಾದರೂ ತನುಮನಗಳನ್ನು ಸೆರೆ ಹಿಡಿ ಯುವಷ್ಟು ಆಮೋದಕರವಾಗಿತ್ತು. ಹಸುರುಕ್ಕುವ ವನಶ್ರೀಯಲ್ಲಿ, ಶೋಭಾ ಸಮುದ್ರದ ತರಂಗ ತರಂಗಗಳಲ್ಲಿ, ನಾನಾ ವರ್ಣರಂಜಿತ ತಳಿರುಗಳ ರಾಶಿ ರಾಶಿ ಯಲ್ಲಿ ಹೊಮ್ಮುವ ಮರ್ಮರಲೀಲೆ ಜಾನಪದ ಗೀತೆಯ ಧಾಟಿಯಲ್ಲಿ ಶೋಭಾನೆ ಹಾಡುವಂತೆ ಕೇಳಿಸುತಿತ್ತು. ಹೆಬ್ಬಯಲನ್ನು ದಾಟಿ ಗದ್ದೆಯ ಕೋಗಿಗೆ ಕಾಲಿಟ್ಟಾಗ ಹೊತ್ತು ಇನ್ನೂ ಏರಿರಲಿಲ್ಲ. ಕೆಲಸಗಾರರು ಆಗಲೇ ಗದ್ದೆಗಿಳಿ ದಾಗಿತ್ತು. ಗಂಗಮ್ಮನಿಗೆ ಅಲ್ಲಿ ಅನೇಕ ಪರಿಚಿತರ ಭೇಟಿಯಾಯಿತು. ಕಾರಿ ಯಪ್ಪ ನೆರೆಹೊರೆಯವರ ಕುಶಲವನ್ನು ವಿಚಾರಿಸಿಕೊಂಡ. ಬಹಳ ದಿನಗಳ

ನಂತರ ಆದ ಭೇಟಿ ಹರ್ಷವನ್ನು ಸೂಸಿತು. ಸ್ವರ್ಣವರ್ಣಾಂಕಿತವಾದ ಗದ್ದೆಯ ಬಯಲನ್ನು ದಾಟಿ ಹೆದ್ದಾರಿಯಲ್ಲಿ ಸೇರಿದ ಕೆಲವು ನಿಮಿಷಗಳೊಳಗಾಗಿ ಶೋಣಕಾಯದ ಬಸ್ಸು ಆಗಮಿಸಿತು, ನಾಲ್ವರೂ ಹತ್ತಿದರು. ತಂಪು ಹೊತ್ತಿನಲ್ಲಿ ಪಯಣಸುಖಕರವಾಗಿ ಸಾಗಿತು. ಭಾಗಮಂಡಲದಲ್ಲಿಳಿದಾಗ ಅಲ್ಲಲ್ಲಿ ಹಾದಿಯುದ್ದಕ್ಕೂ ಸರ್ವಾಲಂಕೃತ ಸ್ತ್ರೀಪುರುಷರು ಕಣ್ಗೋಚರಿಸಿದರು. ನಾಡಿನ ವಿಶಿಷ್ಟ ಉಡಿಗೆ-ತೊಡಿಗೆಯ ವೈಖರಿಯಲ್ಲಿ ವನದೇಶದ ಪೆಂಪು ದರ್ಶನೀಯವಾಗಿತ್ತು.

....ಅತಿಥಿಗಳನ್ನು ಅತಿಥೇಯರು ಅತ್ಯಾದರದಿಂದ ಸ್ವಾಗತಿಸಿದರು. ಅಪರೂಪ ದರ್ಶನಲಾಭ ಉತ್ಸಾಹಪೂರ್ಣಸಡಗರ ಮನಃಪ್ರಾಣಗಳಿಗೆ ಮೋದಪ್ರದವಾಗಿತ್ತು.

... ತರುಣವೃಂದ ಸಂಭ್ರಮದಿಂದ ಅಭಿರಾಮಭಂಗಿಯಲ್ಲಿ ದ್ವಾರದ ಬಳಿ ನರ್ತಿಸುತಿತ್ತು.

...ಧಾರ್ಮಿಕ ಉತ್ತೇಜನ ಪನ್ನೀರು ತಳೆಯಿತು.

ಸಮಾರಂಭ ಮುಗಿದು ಭೋಜನಾಂತರ ಅತಿಥೇಯರಿಂದ ಬೀಳ್ಕೊಂಡು ಸಕುಟುಂಬ ಸಮೇತನಾಗಿ ಕಾರಿಯಪ್ಪ ಹೊರಟು ನಿಂತಾಗ ಗಂಗಮ್ಮ ಕಾವೇರಿಯರು ಯಾವ ಮಹತ್ತರವಾದ ಅಭಿಲಾಷೆಯನ್ನು ಮನದಲ್ಲಿ ತುಂಬಿಕೊಂಡಿದ್ದರೋ ಅದು ಹೃದಯಾಂತರಾಳದಲ್ಲಿ ಮಾಂಗಲ್ಯದ ಮಳೆಗರೆಯುತಿತ್ತು. ಮಾದು ಆನಂದ ಪ್ರಮತ್ತಭಾವದಿಂದ ಉತ್ಸಾಹಿತನಾಗಿದ್ದ. ಎಲ್ಲರ ಮನೋಲ್ಲಾಸವನ್ನೂ ಗಮನಿಸಿದ ಕಾರಿಯಪ್ಪನಿಗೆ ಹೃದಯ ಹಗುರವಾಯಿತು.

ಮುಂದೆರಡು ತಿಂಗಳೊಳಗಾಗಿ ಪೊನ್ನಮ್ಮ ಮಾದಯ್ಯನ ಗೃಹಿಣಿಯಾಗಿ ಮನೆಗೆಪದಾರ್ಪಣೆ ಮಾಡಿದಾಗ ಕೋಲಾಹಲ ಪೂರ್ಣ ಸಂಭ್ರಮ ವಿಶೇಷವನ್ನು ಕಂಡಿತು ಮನೆ. ಕಾವೇರಿ-ಗಂಗೂರವರ ಹೃದಯದ ಹೊಂಗಡಲು ಉಕ್ಕೇರಿ ಬಂತು. ಸೊಸೆಯ ಮುಸುಕು ತೆಗೆದು ಅಮೃತಪಾನ ಮಾಡಿಸಿ ಆಶೀರ್ವದಿಸಿದರು. ಅನಂತರ ಗಂಗಾಪೂಜೆ...ಗಂಗೋದಕವನ್ನು ಬಿಂದಿಗೆಯಲ್ಲಿ ಹೊತ್ತು ತಂದ ಮದುಮಗಳ ಹಾದಿಯಲ್ಲಿ ನರ್ತಿಸುವ ತರುಣವೃಂದ....ಕುಲುಕುಲು ನಗೆಯ ಮಕ್ಕಳು....ಸಡಗರ ಸೂಸುವ ಹೆಂಗಳೆಯರು...ಎಲ್ಲವೂ ವಿವಾಹ ಮಹೋತ್ಸವದ ಅಂಗವಾಗಿ ವಿಜೃಂಭಿಸಿದುವು. ಸುವಾಸಿನಿಯರು ಗಂಗೋದ

ಕವನ್ನು ಇಳಿಸಿಕೊಂಡರು. "ನೆಲ್ಲಕ್ಕಿ ನಡುಬಾಡೆ"ಗೆ ಬಂದು ತೂಗುದೀಪಕ್ಕೆ ಅಕ್ಷತೆಹಾಕಿ ಹಿರಿಯರ ಆಶೀರ್ವಾದವನ್ನು ಪಡೆದುಕೊಂಡಳು,ನವಾಗತ ತರುಣಿ. ಮದುವೆಯ ಸರಳ ಸಮಾರಂಭ ಎಲ್ಲರಿಗೂ ಆನಂದಭೋಗವನ್ನುಣಿಸಿ ಮುಕ್ತಾಯಗೊಂಡಿತು.

ಮುದ್ದಪ್ಪನಿಗೆ ರಜೆ ದೊರೆಯದಿದ್ದುದರಿಂದ ಸತಿಪತಿಗಳು ಮದುವೆ ಸಮಾರಂಭಕ್ಕೆ ಬಂದಿರಲಿಲ್ಲ. ನೂತನ ದಂಪತಿಗಳಿಗೆ ಶುಭಕೋರಿ ಉಡುಗೊರೆಯನ್ನು ಕಳುಹಿಸಿಕೊಟ್ಟಿದ್ದರು. ಅವರಿಬ್ಬರೂ ಬರದಿದ್ದುದು ಎಲ್ಲರಿಗೂ ಬೇಸರ; ಗಂಗಮ್ಮ ಕಾವೇರಿಯರಿಗೆ ಎಲ್ಲಿಲ್ಲದ ಸಂಕಟ.

"ಈ ಸಮಯದಲ್ಲಿ ಬರಬಹುದು ; ಕಣ್ತುಂಬ ನೋಡುವೆ ಎಂದುಕೊಂಡಿದ್ದೆ."

ಎಂದು ಗಂಗಮ್ಮನೆಂದಾಗ, ಕಾವೇರಿ ಅಸಮಾಧಾನವನ್ನು ಬದಿಗಿಟ್ಟು ಸಹಜಭಾವದಿಂದ ನುಡಿದಳು,

"ಬಂದಮೇಲೆ ಒಂದೆರಡು ವಾರಗಳಾದರೂ ತಂಗದ ಮೇಲೆ ಬಂದೂ ಪ್ರಯೋಜನವಿಲ್ಲ. ಅವನಿಗೆ ಅನುಕೂಲವಾದಾಗಲೇ ಬರಲಿ; ಬಿಡು."

ಗಂಗಮ್ಮ ಅದೂ ಹೌದೆಂದು ಕೊಂಡಳು. ಚಿತ್ತಭಿತ್ತಿಯಲ್ಲಿ ಮುದ್ದು ಮಗುವಿನ ಚಿತ್ರ ಸುಳಿಸುಳಿದಳಿಯಿತು. ದೀಪಾಲೋಕದ ಕ್ಷೀಣ ರಶ್ಮಿಗಳು ಚಿಂತಿತ ಮನದ ಭಾವಧಾರೆಯನ್ನು ದಪ್ಪ ಅಕ್ಷರಗಳಲ್ಲಿ ನಮೂದಿಸಿದುವು.

ಅಂತೂ, ಉತ್ಸಾಹ–ಆನಂದಗಳ ಸಂಗಮದಲ್ಲಿ ಚಾಂದ್ರಮಾನವೊಂದು ಉರುಳಿಹೋಯಿತು. ಕಾರಿಯಪ್ಪ ತನ್ನ ದೈನಂದಿನ ಕಾರ್ಯಭಾರದಿಂದ ಮಂಗಳೂರಿಗೆ ಮಡದಿಯೊಡನೆ ಹೊರಡಲಣಿಯಾದ. ಗಂಗಮ್ಮನಿಗೆ ಇನ್ನೂ ಕೆಲವುದಿನ ಇದ್ದು ಹೋಗುವ ಮನಸ್ಸು. ಕಾರಿಯಪ್ಪ ಯಾರ ಅಗತ್ಯವನ್ನೂ ಪೂರೈಸುವವನಲ್ಲ. ತನ್ನ ಇಚ್ಛೆಯೇ ಇಚ್ಛೆ. ಕಾವೇರಿಗೆ ಇಬ್ಬರೂ ಕೆಲವು ದಿನ ಇದ್ದು ಹೋಗಲಿ, ಇನ್ನು ಹೊರಟರೆಂದರೆ ಸಧ್ಯಕ್ಕೆ ಹಿಂತಿರುಗಿ ಬರುವುದು ಆಗದ ಮಾತು. ಹೇಗೂ ಅಂಗಡಿಯ ಬಾಗಿಲು ಮುಚ್ಚಿಬಂದಾಗಿದೆ....ಎಂಬ ಆಲೋಚನೆ. ಆದರೆ ಕಾರಿಯಪ್ಪ ಎಲ್ಲರ ಅಡೆತಡೆಗೂ ಒಂದೇಮಾತಿನಲ್ಲಿ ಉತ್ತರ ಪೂರೈಸಿದ,"ನಾನು ಬೇಗನೆ ಹೋಗದಿದ್ದರೆ ವ್ಯಾಪಾರಕ್ಕೆ ಧಕ್ಕೆ!"ಧ್ವನಿ ದೃಢವಾಗಿದ್ದರೂ ಏನೋ ಒಂದು ಬಗೆಯ ಒಡಕು ಘಟದ ಶ್ರುತಿಯಂತೆ

ಮೃತ್ಯುವಿನ ಜಯಸಿನಾದದಂತೆ ಹೊಮ್ಮಿತು.

ಕಾವೇರಿ ತನ್ನ ವಿಚಾರಧಾರೆಯನ್ನು ಪುನಃ ಒತ್ತಾಯಪೂರ್ವಕವಾಗಿ ಮುಂದಿಟ್ಟಳು. ಆದರೂ ಕಾರಿಯಪ್ಪ ಮಣಿಯಲಿಲ್ಲ. ಗಂಗಮ್ಮನ ಕಣ್ಣುಗಳು ಮತ್ತೆಮತ್ತೆ ತೇವಗೊಂಡುವು. ಯಾವುದೋ ಕಂಡರಿಯದ ಅನಿರ್ವಚನೀಯವಾದ ಒಡಲ ಸಂಕಟ ತನುಮನಗಳನ್ನು ವ್ಯಾಪಿಸಿತ್ತು. ಅಲ್ಲಿಯ ಉಷ್ಣೋಷ್ಣ ಹವೆ ಈಗಿಂದೀಗಲೇ ಮೈಯ್ಯನ್ನೆಲ್ಲಾ ವ್ಯಾಪಿಸಿ ಸುಡುತ್ತಿರುವಂತೆ ಭಾಸವಾಯಿತು. ಎಷ್ಟೋ ಪ್ರಯತ್ನದಿಂದ ತನ್ನನ್ನು ತಾನು ಹತೋಟಿಯಲ್ಲಿಟ್ಟುಕೊಳ್ಳುತಿದ್ದಂತೆ ಕಾವೇರಿ, ಪೊನ್ನಮ್ಮನ ಕಣ್ಣುಗಳಲ್ಲೂ ಪ್ರತಿಹನಿಗಳು ಮೊಳೆತುವು. ಗಂಗಮ್ಮ ಮುಖವನ್ನು ತೊಳೆದು ಕಂಬನಿಯ ಕಲೆಯನ್ನು ನಿವಾರಿಸಿಕೊಂಡು ಅತ್ತೆಗೆ ನಮಸ್ಕರಿಸಿ ಮೆಟ್ಟಲಿಳಿದಳು. ನಾದು ಮತ್ತು ಪೊನ್ನಮ್ಮ ಹೆದ್ದಾರಿಯವರೆಗೂ ಹೋಗಿ ಬೀಳ್ಕೊಟ್ಟು ಬಂದರು.

ಬಾಲರವಿ ಇನ್ನೂ ಬಾನೇರುವುದರಲ್ಲಿದ್ದ. ಪಕ್ಷಿಗಳ ಕೊರಳುಲಿಯ ಕರ್ಣಾನಂದಕರವಾಗಿ ಕೇಳಿಬರುತಿತ್ತು.

ಮಾದಯ್ಯನ ದಿನಚರಿ ಎಂದಿನಂತೆಯೇ ಆರಂಭವಾಯಿತು. ಪರ್ವತ ಪ್ರದೇಶಗಳ ಮೇಲೆ ಹರಿದ ಸುವರ್ಣಕಾಂತಿಯಂತೆ ಅದು ಉದ್ದಗಲಕ್ಕೂ ಹರಡುತ್ತದೆ. ಅನೇಕ ವೇಳೆ ಕರ್ತವ್ಯದ ಹೊಣೆಗಾರಿಕೆ ತಮ್ಮ ಕತ್ತಿಗೇ ಉರುಲಾಗುವಂತೆ ತೋರುವುದು. ಎಲ್ಲವನ್ನೂ ಚಾಕಚಕ್ಯತೆಯಿಂದ ನಿವಾರಿಸಿಕೊಳ್ಳದಿದ್ದಲ್ಲಿ ಮುಂದಿಟ್ಟ ಹೆಜ್ಜೆ ವ್ಯರ್ಥ.

ಏತನ್ಮಧ್ಯೆ,

ಬ್ರಿಟಿಷ್ ಚಕ್ರಾಧಿಪತ್ಯವು ಭಾರತೀಯರಿಗೆ ನಾನಾ ವಿಧವಾದ ಕಿರುಕುಳ ಕೊಡುತಿತ್ತು. ವಿನಾಕಾರಣ ದಂಡನೆ, ಯಾವುದೇ ಸೌಕರ್ಯ ಕೇಳಿದರೂ ನಿರಾಕರಣೆ, ಅನೀತಿ.ಅತ್ಯಾಚಾರ; ಹೆಜ್ಜೆ ಹೆಜ್ಜೆಗೂ ದುರ್ಗತಿಯೇ ಹೊರತು ಪ್ರಗತಿಯ ಲಕ್ಷಣಗಳು ಇಲ್ಲವೇ ಇಲ್ಲ. ಯಾವ ಕಡೆ ತಿರುಗಿದರೂ ರುದ್ರ ಭೀಷಣ ದೃಶ್ಯಗಳು ಕಣ್ಮನಗಳನ್ನು ಮುತ್ತುತ್ತವೆ. ಬಿಸಿನೆತ್ತರಿನ ಕಣಕಣವನ್ನೂ ಉಕ್ಕೇರಿಸುತ್ತವೆ. ಎದೆಯ ನೆಲೆಯಲ್ಲಿ ಕಿಚ್ಚು ಭುಗಿಲೇಳುತ್ತದೆ. ಇಂತಹ ಪರಿಸ್ಥಿತಿಯಲ್ಲಿ ನೋಡುತ್ತ ಕೂಡುವುದು ಸಾಧ್ಯ

ವಾಗುತಿಲ್ಲ. ಕೈಯ್ಯಲ್ಲಾದಷ್ಟು ಸೇವೆ ಸಲ್ಲಿಸದಿದ್ದಲ್ಲಿ ಆತ್ಮವಂಚನೆ ಮಾಡಿದಂತಾಗುತ್ತದೆ. ಮುನ್ನುಗ್ಗುವುದೆಂದರೆ ಸ್ವಂತ ಕೆಲಸ-ಕಾರ್ಯಗಳಿಗೆ ಬಿಡುವು ಮಾಡಿಕೊಳುವುದು ಕಷ್ಟ, ಸುಭದ್ರ ಚಕ್ರವ್ಯೂಹದಲ್ಲಿ ಸಿಕ್ಕಿದಂತಾಯಿತು ಪರಿಸ್ಥಿತಿ. ಮೇಲಾಗಿ ಎಷ್ಟೇ ಪ್ರಯತ್ನಿಸಿದರೂ ಆದಾಯ ಹೆಚ್ಚುತ್ತಿಲ್ಲ. ಒಳಿತು-ಕೆಡಕುಗಳ ಭಾರವೆಲ್ಲ ತಲೆಯ ಮೇಲೆ...ಲೋಕದಲ್ಲಿ ಹಣವಂತರನ್ನು ಲೂಟಿ ಮಾಡಬಹುದಾದ ಗೂಂಡಾಗಳ ಗುಂಪು ಇರುವುದು ಸಂಭವನೀಯ. ಆದರೆ, ಬಡವರನ್ನು ಸುಲಿಗೆ ಮಾಡುವ ಪೈಶಾಚಿಕತೆ ಉದ್ದಂಡವಾಗಿ ಬೆಳೆದಿರುವುದೇ ವಿಶೇಷ....!

ಜೀವನ ಪರಿಸ್ಥಿತಿ....ಆರ್ಥಿಕ ಮುಗ್ಗಟ್ಟು.

ಆರ್ಥಿಕ ಮುಗ್ಗಟ್ಟು....ಜೀವನ ಪರಿಸ್ಥಿತಿ.

ಒಂದಕ್ಕೊಂದು ಸುಭದ್ರವಾದ ಕೊಂಡಿಯನ್ನು ಹೊಂದಿವೆ. ಒಂದನ್ನುಳಿದು ಇನ್ನೊಂದಿಲ್ಲ. ಸಂಘಟಿತ ಶಕ್ತಿಯೊಂದಿಗೆ ಹೋರಾಡಲು ಶಕ್ತಿ. ಸಾಮರ್ಥ್ಯಗಳನ್ನು ಹೊಂದಿಸಿಕೊಳ್ಳುವುದೂ ಸಹ ಕಷ್ಟವೇ. ಈ ನಡುವೆ ಅದೆಷ್ಟು ಬಾರಿ ಜನನಾಯಕರು ಜೈಲು ಕಂಡರೋ...ಗಾಂಧೀಜಿಯವರ ಉಪವಾಸ ವ್ರತ ಎಷ್ಟು ಬಾರಿ ನಡೆಯಿತೋ....ಆದರೂ ಸಮಸ್ಯೆ ಬಗೆಹರಿಯಲಿಲ್ಲ.

ದೇಶದಲ್ಲಿ ಎಲ್ಲೆಡೆ ಕೆನ್ನಾಲಿಗೆ ಚಾಚಿ ಹಬ್ಬುತ್ತಿರುವ ಕಿಚ್ಚಿಗೆ ಜೀವನ ಕಠಿಣ ಸಮಸ್ಯೆಯೇ ಸಮಿತ್ತು. ಏನೇ ಬಂದರೂ, ಹೇಗೆ ಆದರೂ ಗಂಡಾಂತರವನ್ನು ನಿವಾರಿಸಿಕೊಳ್ಳಲೇಬೇಕೆಂಬ ಹಠಸಾಧನೆ ಮಾನವ ಸಹಜ ಗುಣ. ಪರಿಸ್ಥಿತಿಯ ಒತ್ತಡದಿಂದ ನಜ್ಜುಗುಜ್ಜಾಗಿ ಮಾನವತೆ ಮುನ್ನುಗ್ಗುತಿತ್ತು. ಗಮ್ಯಸ್ಥಾನ ಎಲ್ಲೇ ಇರಲಿ, ಹಿಡಿದ ಪಥದಲ್ಲಿ ಸಾಗುವುದೊಂದೇ ಗುರಿ. ಇನಿತೂ ದಯೆ ದಾಕ್ಷಿಣ್ಯಗಳಿಲ್ಲದ ಧೂರ್ತ ಬಣದೊಂದಿಗೆ ಜಾಗ್ರತ ಶಕ್ತಿಯ ಹೋರಾಟ ಒಮ್ಮೆ ತಣ್ಣಗಾದರೂ ಇನ್ನೊಮ್ಮೆ ಭುಗಿಲೇಳುತಿತ್ತು.

ಭೀಕರ ಸಾಂಕ್ರಾಮಿಕ ರೋಗಗಳ ಹಾವಳಿಯಲ್ಲಿ ಎದೆಗುಂದದೆ 'ವ್ಯಾಕ್ಸಿನೇಶನ್" ತೆಗೆದುಕೊಂಡು ಮಾದು ಸೇವಾಮುಟ್ಟಿಗಳಿಯುತಿದ್ದ ಗೆಳೆಯರು ಹಿಂಬಾಲಿಸುತಿದ್ದರು. ಸಾರ್ವಜನಿಕ ಕ್ಷೇತ್ರಕ್ಕೆ ಹೊಸಬಳಾದ ಪೊನ್ನಮ್ಮನಿಗೆ ಪರಿಸ್ಥಿತಿ ಭೀಕರ. ಮನೆಯಲ್ಲಿ ಸಹಾಯಕರಿಲ್ಲವಾದುದರಿಂದ

ಮೆಟ್ಟಲಿಳಿಯುವುದು ಕಷ್ಟವೆ. ಗಂಭೀರ ಪರಿಸ್ಥಿತಿಯಲ್ಲಿ ದಿನಗಳು ಉರುಳು ತಿದ್ದುವು....ತಲೆ ಹಲವಾರು ಚಿಂತೆಗಳ ಬೀಡಾಗುತಿತ್ತು....ಒಡಲು ಸಂಕಟದ ಕ್ಷೇತ್ರವಾಗುವುದು.

ಇಂದು,

ಮಳೆ ಹೊಯ್ದು ನಿಂತುದರಿಂದ ವಾತಾವರಣ ಶುಭ್ರ ಮನೋಹರ ವಾಗಿತ್ತು.

ಹಸುರೆಲೆಗಳಲ್ಲಿ–ಹುಲ್ಲೆಸಳಲ್ಲಿ ಮಿನುಮಿನುಗುವ ಹನಿ ಮುತ್ತುಗಳು ಮನವನ್ನು ಸೆಳೆಯುವಂತಿದ್ದುವು.

ಮಾದು ಸಜ್ಜಾಗಿ ದಿನಚರಿಯನ್ನು ಆರಂಭಿಸುವಷ್ಟರೊಳಗಾಗಿ ಚಂಗಪ್ಪ ಆಗಮಿಸಿದ. ಪರಸ್ಪರ ದರ್ಶನಲಾಭದಿಂದ ತುಟಿಗಳಲ್ಲಿ ಎಳೆನಗು ಮಿನುಗಿತು. ಮಾದು ಸ್ವಾಗತಿಸುತ್ತ ಅಂದ,

"ಎಷ್ಟು ಬೇಗನೆ ಬಂದಿದ್ದೀರಿ....? ಈಗಿನ ಯಾವ ಹುಡುಗರಿಗೂ ಕಡಿಮೆಯಿಲ್ಲ ನಿಮ್ಮ ನಡಿಗೆ !"

"ಕಡಿಮೆ ಇರಬೇಕೆ...?"

ಆತುರವಾಗಿ ಉತ್ತರಿಸಿದ ಮಾದು "ಓ....ಬೇಡ ಬೇಡ ! ನೀವು ಚಟುವಟಿಕೆಯಾಗಿದ್ದರೆ ಹತ್ತು ಮಂದಿಗೆ ಮುಂದಾಳಾಗಬಲ್ಲಿರಿ. ಮುಖ್ಯವಾಗಿ ನಿಮ್ಮಂತಹವರು ಈ ಕಾಲಕ್ಕೆ ಬೇಕು !"

ಪೊನ್ನಮ್ಮ ಬೆಳಗಿದ ತಂಬಿಗೆಯಲ್ಲಿ ನೀರು ತಂದುಕೊಟ್ಟು ಕುಶಲ ಪ್ರಶ್ನೆ ನಡೆಸಿ ಕಾಫಿ ತಯಾರಿಸಲು ಒಳಹೋದಳು. ಕಾವೇರಿ ಸ್ನಾನ ಮಾಡುತಿದ್ದು ದರಿಂದ ಬರುವುದು ತಡವಾಯಿತೇನೋ. ಚಂಗಪ್ಪ ಹೊರಗಡೆ ಜಗಲಿಯ ಮೇಲೆ ಮಾದಯ್ಯನ ಜೊತೆಯಲ್ಲಿ ಕುಳಿತ. ಲೋಕಾಭಿರಾಮನಾಗಿ ಮಾತು ಕತೆಗಳು ಸಾಗುತಿದ್ದುವು. ಕೆಲವೇ ಘಳಿಗೆಯೊಳಗಾಗಿ ಪೊನ್ನಮ್ಮ ಒಳಗಡೆ ಕರೆದಳು "ಬನ್ನಿ ಮಾವಾ, ತಿಂಡಿ ಅಣಿಯಾಗಿದೆ."

"ಈಗ ಇನ್ನೇನೂ ಬೇಡಮ್ಮಾ; ಬರೀ ಕಾಫಿ ಸಾಕು, ಇಲ್ಲಿಯೇ ತಾ" ಎಂದ ಚಂಗಪ್ಪ.

"ಬೆಳಿಗ್ಗೆ ಏನು ತಿಂದಿದ್ದರೂ ಅದೆಲ್ಲಾ ಇಷ್ಟರಲ್ಲಿಯೇ ಕರಗಿ ಹೋಗಿರುತ್ತೆ...ಏಳಿ, ಸ್ವಲ್ಪ ತೆಗೆದುಕೊಂಡರಾಯಿತು." ಮಾದು ಒತ್ತಾಯ

ಪೂರ್ವಕವಾಗಿ ನುಡಿದ.

ಇಬ್ಬರೂ ಒಳಬಂದರು.

ಸಣ್ಣ ಮೇಜಿನ ಮೇಲೆ ನಿತ್ಯಬಳಕೆಯ ಸಾಮಾನುಗಳ ಜೋಡಣೆಯಾಗಿತ್ತು. ಪೊನ್ನಮ್ಮ ಎಲ್ಲವನ್ನೂ ಮುಂದಿಟ್ಟಳು. ಚಂಗಪ್ಪ ಲಘು ಫಲಾಹಾರ ತೆಗೆದುಕೊಂಡು ಕಾಫಿಯನ್ನು ಹೀರುತ್ತ ನ.ಡಿದ, "ಎರಡನೆಯ ಮಹಾಯುದ್ಧಕ್ಕೆ ಹಿರಿಯ ರಾಷ್ಟ್ರಗಳು ಸಜ್ಜಾಗುತ್ತಿವೆ....ಇನ್ನು ಮುಂದಿನ ಪರಿಸ್ಥಿತಿ ತುಂಬ ಕಷ್ಟ, ಮುದ್ದಪ್ಪ ಮಿಲಿಟರಿಗೆ ಸೇರಿ ತಪ್ಪು ಮಾಡಿದ."

"ಆದರೆ, ಭಾರತಕ್ಕೆ ಆ ಗಂಡಾಂತರವಿಲ್ಲವಷ್ಟೇ?"

"ಹೇಗೆ ಹೇಳುವುದಕ್ಕಾಗುತ್ತೆ ? ನಾವು ಬ್ರಿಟಿಷರ ಅಧೀನ !"

ಅದೇ ಸಮಯಕ್ಕೆ ಸರಿಯಾಗಿ ಕಾವೇರಿ ಮಡಿಯುಟ್ಟು ಅಲ್ಲಿಗೆ ಆಗಮಿಸಿದಳು. ಅಭಿಶಪ್ತ ಹೆಜ್ಜೆಗಳು ಗಮಿಸುವ ರೀತಿ ತಾಳ ಲಯಬದ್ಧವಾಗಿದ್ದಂತೆ ಭಾಸವಾಗುತಿತ್ತು ವಿಚಾರ ಕುತೂಹಲೆಯಾಗಿ ಸನಿಹದಲ್ಲಿ ಕುಳಿತುಕೊಂಡು ಕೇಳಿದಳು,

"ಯಾವುದೇ ರೀತಿಯಲ್ಲಿ ಮುದ್ದಪ್ಪನನ್ನು ಕರೆಸಿಕೊಳ್ಳುವುದು ಸಾಧ್ಯವಾಗದ್ದಿದ್ದರೆ ಒಳ್ಳೆಯದಿತ್ತು. ಈಗೀಗ ಅವನದೇ ಯೋಚನೆಯಾಗಿದೆ. ಇನ್ನು ಗಂಗು ಚಿಂತೆ ಹಚ್ಚಿಕೊಂಡರೆ ಮತ್ತೆ ಕಾಯಿಲೆ ಬೀಳುತ್ತಾಳೆ. ಅವಳ ಮನಸ್ಸು ಬಹಳ ಸೂಕ್ಷ್ಮ."

ಆ ನುಡಿ ಹೊರಬಿದ್ದಾಗ ಎಲ್ಲರ ಮುಖದ ಮೇಲೂ ಚಿಂತೆಯ ಮ್ಲಾನತೆ ಸುಳಿದು ಮಾಯವಾಯಿತು. ಕಾವೇರಿ ಒಂದು ಘಳಿಗೆ ಯೋಚಿಸಿ ಮುಂದುವರಿದಳು, "ಸಂಸಾರಿಕ ಗಂಡಾಂತರವೆಲ್ಲ ಕಳೆದುಹೋದುವು. ಇನ್ನು ನೆಮ್ಮದಿಯಿಂದಿರೋಣ ಎಂದುಕೊಂಡಿದ್ದೆ, ಆದರೆ ಈಗಿನ ಪರಿಸ್ಥಿತಿಯಲ್ಲಿ ಯಾವುದಕ್ಕೂ ಸ್ಥಿರತೆಯೇ ಇಲ್ಲದಂತಾಗಿದೆ."

"ನಿಜ, ಅವ್ವಾ! ರಾಜಕೀಯ ರಕ್ಷಣೆ ಇಲ್ಲದೆ ಹೋದರೆ ತುಂಬ ಕಷ್ಟ."

ಸೂರ್ಯನ ಕಿರಣಗಳು ದೀನರ ಬಂಧುವಿನಂತೆ ಸನಿಹದಲ್ಲಿ ಕೋಲು ಕೋಲಾಗಿ ಮೈಚಾಚಿದ್ದುವು. ತಂಗಾಳಿಯು ಕಿಟಕಿಯ ಮುಖಾಂತರ ಆಗಾಗ ಒಳನುಗ್ಗುತಿತ್ತು. ವಾತಾವರಣ ಸೊಂಪನ್ನು ಸವಿಯುತ್ತಾ ಏನೋ ಒಂದು ವಿಧದಲ್ಲಿ ಯೋಚನಾಮಗ್ನಳಾಗಿದ್ದಳು ಕಾವೇರಿ.

....ವನವನಾಂತರಗಳಿಗಿರುವಂತೆಯೇ ಜೀವನ ಪ್ರಕೃತಿಗೂ ಸಹ ಒಂದು ಪ್ರತ್ಯೇಕ ಸ್ವರೂಪವಿದೆ. ಗಾಢಾಂಧಕಾರ ಮಾರ್ಗದಲ್ಲಿ ಪಯಣಿಸುತ್ತಿರುವ ಜೀವನ ಯಾತ್ರಿ ಕೇವಲ ಕೈದೀಪಿಗೆಯ ಸಹಾಯದಿಂದ ವ್ಯರ್ಥ ಸಾಧನೆ ಮಾಡುವಾಗ ಸೆರಗಿನ ನೆಲೆಯಲ್ಲಿ ಆಶ್ರಯಿಸುವವರಿಗಿಂತ ಹೃದಯದ ಮೇಲೆ ಪದಚಾರಣ ಮಾಡುವವರಿಗೆ ತನ್ನ ಸ್ವರೂಪದರ್ಶನ ಮಾಡುವುದೋ ಏನೋ....

ಹಾ ...!

ಎದೆಯಾಳದಿಂದ ನಿಟ್ಟುಸಿರೊಂದು ತಪ್ಪಿಸಿಕೊಂಡಿತು. ದೃಷ್ಟಿ ಹತ್ತಿರದಲ್ಲಿದ್ದರೂ ಏನನ್ನೂ ನೋಡದು. ಮಾತುಕತೆಯ ನಿರರ್ಗಳ ಸರಣಿ ಕಿವಿಗಳ ಮೇಲೆ ಬೀಳುತಿದ್ದರೂ ಮನಸ್ಸು ಗ್ರಹಿಸುತ್ತಿಲ್ಲ. ಮಂತ್ರಮುಗ್ಧತೆಯಲ್ಲಿ ಸ್ವಲ್ಪ ಹೊತ್ತು ಉರುಳಿಹೋಯಿತು. ಪೊನ್ನಮ್ಮ ಖಾಲಿಯಾದ ಬಸಿಬಟ್ಟಲುಗಳನ್ನು ಎತ್ತಿಕೊಂಡು ಹೋದಳು.

ಚಂಗಪ್ಪ ಮನದಲ್ಲಿಯೇ ತರ್ಕಿಸಿಕೊಳ್ಳುತ್ತ ಸಹಜ ಭಾವದಿಂದ ಅಂದ,

"ಪ್ರಸ್ತುತ ದೇಶದ ಪರಿಸ್ಥಿತಿ ಬಿಗಡಾಯಿಸಿರುವುದರಿಂದ ಬಿಟ್ಟುಕೊಡುವ ಪ್ರಶ್ನೆ ಕನಸಿನ ಮಾತು.....ಹಿಂದಿನಂತಾಗಿದ್ದರೆ ಏನಾದರೂ ಮಾಡಬಹುದಾಗಿತ್ತು. ಇನ್ನು ಸಾಧ್ಯವೇ ಇಲ್ಲ. ಆಗ ಅವನು ಅವಸರ ಪಡದೆ, ಕೆಲವು ಕಾಲ ಹೇಗಾದರೂ ತಳ್ಳಿದ್ದಿದ್ದರೆ ಇಲ್ಲೇ ಎಲ್ಲಾದರೂ ನೆಲಸಬಹುದಾಗಿತ್ತು."

"ಅಂದಿನ ದಿನಗಳು ಯುದ್ಧ ಭೀತಿ ಇರದೆ ಶಾಂತಿಯುತವಾಗಿದ್ದುವು. ಈಗ ಪೂವಿಗೆ ಕಷ್ಟಕ್ಕೆ ಬಂತು." ಮಾದು ವಿಷಣ್ಣವದನನಾಗಿ ನುಡಿದ.

ವೃದ್ಧೆ ಮಾತಾಡಲಿಲ್ಲ.ಎದೆಯಾಳದಲ್ಲಿ ಬಿಸಿಯುಸಿರು ಹರಿದಾಡುತಿತ್ತು.

"ದೇಶದಲ್ಲಿ ಪುನಃ ಆಂದೋಳನ ಆರಂಭವಾಗುವುದು ಖಂಡಿತ. ಯಾವ ಮುಹೂರ್ತದಲ್ಲಾದರೂ ಚಳವಳಿ ಏಳಬಹುದು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಣಯಕ್ಕೆ ಪ್ರಾದೇಶಿಕ ಸಮಿತಿಗಳು ಕಾದು ಕುಳಿತಿವೆ."

"ಇಂಗ್ಲಿಷರು ಒಳಗಿಂದೊಳಗೇ ವಿಷಬೀಜ ಬಿತ್ತುತ್ತಿದ್ದಾರೆಂಬುದನ್ನು ನಮ್ಮವರು ಅರಿತುಕೊಳ್ಳಲಿಲ್ಲ....ಅವರಿಂದ ಕಲಿಯಬೇಕಾದುದು ಆಚಾರ ಭಂಗ ; ಕಲಿತುದು ಜಾತೀಯತೆ."

ಮೂವರೂ ಮುಗುಳುನಕ್ಕರು.

ಮಧ್ಯಾಹ್ನದ ನಂತರ ಸ್ವಗೃಹಾಭಿಮುಖವಾಗಿ ಚಂಗಪ್ಪ ಹೊರಟ. ಮಾದು ಅವನೊಂದಿಗೆ ಮಾತುಕತೆಯಾಡುತ್ತ ಹೆದ್ದಾರಿಯುವರೆಗೂ ಹೋಗಿ ಕಳುಹಿಸಿ ಹಿಂದಿರುಗುವಾಗ ನೋಟ ಗದ್ದೆಯ ಕಡೆ ಹರಿಯಿತು. ಆ ಸುವಿಶಾಲವಾದ ಗದ್ದೆಯ ಕೋಗಿನಲ್ಲಿ ಐವತ್ತು-ಅರವತ್ತು ಮಂದಿ ಮಹಿಳೆಯರು ವ್ಯಸ್ತವಾಗಿ ಕಳೆ ಕೀಳುವುದರಲ್ಲಿ ನಿಮಗ್ನರಾಗಿದ್ದರು. ಅಜ್ಞಾನಿಗಳೂ ದಟ್ಟ ದರಿದ್ರರೂ ಆದ ಜನಸಮೂಹವನ್ನು ನೋಡುತ್ತಾ ಮುಂದೆ ಸಾಗಿದ. ಸುಡು ಬಿಸಿಲಿನ ಸುವರ್ಣಧಾರೆಯಲ್ಲಿ ಮುಖದ ಮೇಲಿನ ಹಾವ-ಭಾವ ಸ್ಪಷ್ಟವಾಗಿ ಗೋಚರಿಸುತಿತ್ತು.

....ಅಂದಿಂದಿಗೂ ಅಪಾರವಾದ ಈತಿಭಾದೆಗಳಿಂದ ಸರಳ ಸತ್ವವನ್ನು ಕಳೆದುಕೊಂಡಿದೆ ಮಾನವ ಶಕ್ತಿ....ಇನ್ನು ಈ ರಾಜಕೀಯ ಆಂದೋಳನದಲ್ಲಿ ಪ್ರಚಂಡ ಅಗ್ನಿಜ್ವಾಲೆಯೊಡನೆ ಹೋರಾಟ ...ಕಷ್ಟನಷ್ಟಗಳ ಸಹಿಷ್ಣುತೆ.... ಹಿತಾಹಿತಗಳ ಚಿಂತನೆ ...ಸಾಮಾನ್ಯವಲ್ಲ. ಬಾಯಿಯವರೆಗೆ ಒಯ್ದು ತುತ್ತನ್ನು ನುಂಗಲು ಸಹ ಅವಕಾಶ ದೊರೆಯುವುದಿಲ್ಲ. ಈ ದೇಶದ ಸ್ಥಿತಿ ಇಷ್ಟಕ್ಕೆ ಬಂತು. ಇಂದಿನ ಯುವಜನಾಂಗಕ್ಕೆ ಬಿ.ಎ.,, ಪಾಸುಮಾಡಿ ಸರಕಾರಿ ಹುದ್ದೆ ಗಳಿಸುವುದೇ ಒಂದು ಪರಮ ಧ್ಯೇಯ ..! ಅದೇ ಮಹೋನ್ನತ ಜೀವನ ಸಂಕಲ್ಪ...! ಅಂದಮೇಲೆ ಸ್ವತಂತ್ರ ಭಾರತದ ಉಜ್ವಲ ಭವಿಷ್ಯಕ್ಕಾಗಿ ತ್ಯಾಗ ಮಾಡಿರಿ, ಸ್ವತಂತ್ರ ಭಾರತದಲ್ಲೇ ನಿಮ್ಮ ಉನ್ನತಿ ಇದೆ ಎನ್ನುವುದು ಎಷ್ಟು ಘೋರ ತಪ್ಪು! ಎಂತಹ ಪ್ರಮಾದ! ಇನ್ನೆಂತಹ ಗಂಡಾಂತರ ?

ಹಾ...!

ಮನೋದಧಿಯಲ್ಲಿ ವಿಚಾರಮಥನ ನಡೆಯುತ್ತಲಿತ್ತು. ಮಾದು ಮಂತ್ರಿತನಂತೆ ಗದ್ದೆಯ ಕೋಗನ್ನು ದಾಟಿ ಹೆಬ್ಬಯಲಿಗೆ ಕಾಲಿಟ್ಟ. ಊರಿನ ದನಕರುಗಳೆಲ್ಲ ಅಲ್ಲಿ ಮೇಯುತಿದ್ದುವು. ದಿನವೂ ನೂರಾರು ದನಕರುಗಳು ಹಸುರುಂಡು ಹಸುರಿನ ಹೆಸರೇ ಕಣ್ಮರೆಯಾಗಿತ್ತು. ಆದರೂ ಬೇರಿನ ಬುಡಕ್ಕೂ ಬಾಯಿಡುವ ಹಸಿದ ಬಡ ಗೋವೃಂದವನ್ನು ನೋಡು

ನೋಡುತ್ತಾ ಮುಂದುವರಿದ. ಮನಸ್ಸು ಯೋಚನೆಯ ಅಂತರಾಳದಲ್ಲಿ ವಿಮಾನಿನಂತೆ ಚಲಿಸುತಿತ್ತು.

...ಹಸಿವು...ಹಸಿವು; ಈ ದೇಶದಲ್ಲಿ ಹಸಿವಿನ ಬಾಧೆ ತೀರದ ಸಮಸ್ಯೆ. ಬಂಗಾರದಂತಹ ಈ ಭೂಮಿಯನ್ನು ಪಾರತಂತ್ರ್ಯ ಈ ದುಸ್ಥಿತಿಗೆ ಇಳಿಸಿತು. ಸ್ವಾತಂತ್ರ್ಯದ ಕೂಗೆಬ್ಬಿಸಿರುವ ಜನನಾಯಕರನ್ನು ಆಡಳಿತ ಯಂತ್ರ ದನಗಳಂತೆ ಕುರಿಗಳಂತೆ ಜೇಲುಗಳಿಗೆ ದಬ್ಬುತ್ತಿದೆ. ಕ್ರಿಮಿಕೀಟಗಳಂತೆ ಹೊಸಗಿ ಸಾಯಿಸುತ್ತಿದೆ. ಈ ದುಷ್ಟ ಪ್ರವೃತ್ತಿಗೆ ಯಾವ ಕಾಯಿದೆ ಸಹಾಯ ಮಾಡುತ್ತಿದೆಯೋ ಅದೇ ಕಾಯಿದೆ ದೇಶ ರಕ್ಷಣೆಯ ಸೋಗನ್ನೂ ಹಾಕಿಕೊಂಡಿದೆ. ಇದರ ದಮನ ಸುಲಭವಲ್ಲ. ಎಷ್ಟೆಂದರೂ ನಾವು ಶಸ್ತ್ರರಹಿತರು, ಸತ್ವರಹಿತರು ...

ಯೋಚಿಸಿದಷ್ಟೂ ವ್ಯಸನದಿಂದಲೂ ಅಭಿಮಾನದಿಂದಲೂ ಮನಸ್ಸು ಘಾಸಿಗೊಳ್ಳುತಿತ್ತು. ಪೌರುಷೇಯವಾದ ವಾತಾವರಣದಲ್ಲಿ ಅಹಂಕಾರಯುತವಾದ ಪ್ರತಿಕೂಲತೆಯು ಭುಗಿಲೇಳುತಿತ್ತು. ಹಾದಿ ಹೇಗೆ ಸಾಗಿತೋ ತಾನರಿಯ. ವನದೇಶದ ಸಾಲು ಮೆಟ್ಟಲುಗಳನ್ನು ಹತ್ತಿ ಮನೆಯಂಗಳಕ್ಕೆ ಕಾಲಿಟ್ಟಾಗ ಹೂಬೇಲಿಯ ಬಳಿ ಪೊನ್ನಮ್ಮ ಎದುರಾದಳು. ಆ ಹಸನ್ಮುಖಾವಲೋಕನದಿಂದ ತಲೆಯನ್ನು ಮುತ್ತಿದ ಆಲೋಚನೆಗಳು ದೂರ ಸರಿದುವು. ಹಾಸಕ್ಕೆ ಪ್ರತಿಹಾಸವನ್ನು ಸೂಸಿ.

"ಚಂಗಪ್ಪ ಮಾವ ಬಂದನೆಂದರೆ ನೂರು ಉತ್ಸಾಹಗಳು ತುಂಬಿಕೊಳ್ಳುತ್ತವೆ. ಅವನು ಹೋಗುವಾಗ ಅಷ್ಟನ್ನೂ ಹೊಡೆದುಕೊಂಡು ಹೋಗುತ್ತಾನೆ. ಅನಂತರ ಎಲ್ಲವೂ ಶೂನ್ಯವಾಗಿ ತೋರುತ್ತದೆ."

"ಬಹಳ ಉತ್ಸಾಹೀ ವ್ಯಕ್ತಿ."

ವಿಮಲ ವಿಶಾಲ ನಯನಗಳು ವಿನೂತನ ಕಾಂತಿಯಿಂದ ಮಿನುಗಿದುವು. ಅತ್ಯಂತ ಹರ್ಷ ವಿನಮ್ರನಾಗಿ "ಮಾವ ಇದ್ದುದರಿಂದ ಬೆಳಿಗ್ಗೆ ಯಾವ ಕೆಲಸವನ್ನೂ ಮಾಡಲಾಗಲಿಲ್ಲ. ಈಗ ಎಲ್ಲವನ್ನೂ ಒಮ್ಮೆಲೇ ಪೂರೈಸಿಕೊಳ್ಳಬೇಕಾಗಿದೆ."

ಪೊನ್ನು ಒಂದು ಘಳಿಗೆ ಮಾತಾಡಲಿಲ್ಲ. ಮುಖಾರವಿಂದ ನಸು ಬಾಡಿತು.

ಒಂದು ಕಾಲದಲ್ಲಿ ಅವಳ ವಂಶಗೃಹ ಬಹಳ ವೈಭವದಿಂದ ಬೆಳಗುತ್ತಿತ್ತು, ಅವರ ವಂಶಪಟವು ಧೂಳೀಧೂಸರಿತವಾಗಿ ಗೋಡೆಯ ಮೇಲೆ ಈಗ ನೇತಾಡುತ್ತಿರಬಹುದು. ಕೆಲಸ ಕಾರ್ಯಗಳೆಲ್ಲ ಆಳುಕಾಳುಗಳಿಗೆ ಸೇರಿದ್ದು; ಕೈಕಾಲು ಒತ್ತಿ, ತೈಲ ಹಚ್ಚಿ ಅಭ್ಯಂಜನ ಮಾಡಿಸುತಿದ್ದರು. ಯಜಮಾನರುಗಳು ಆಸ್ತಿಪಾಸ್ತಿಗಳ ಒಳಿತು ಕೆಡಕುಗಳನ್ನು ಕುರಿತು ಮಾತನಾಡುತ್ತ ಕಾಲಹರಣ ಮಾಡುತಿದ್ದರು. ಕ್ರಮ ಕ್ರಮೇಣ ಒಟ್ಟು ಕುಟುಂಬದಲ್ಲಿ ಸಡಿಲತೆ ಹುಟ್ಟಿತು. ಅನೇಕ ಆಸ್ತಿಪಾಸ್ತಿಗಳು ಕೈಬಿಟ್ಟು ಹೋದುವು. ಕುಟುಂಬ ಒಡೆದು ದಿಕ್ಕಾಪಾಲಾಯಿತು. ಅಂತಹ ಉನ್ನತ ವಂಶಜೆಯಾದ ಪೊನ್ನಮ್ಮ ಪರಿಸ್ಥಿತಿಗೆ ಹೊಂದಿಕೊಳ್ಳುವ ಮನೋಭಾವದಿಂದ ದೃಢವಾಗಿ ಹೇಳಿದಳು,

"ಇಂದಿನ ಸಂದರ್ಭದಲ್ಲಿ ವಸ್ತು ವಸ್ತುವನ್ನೂ ತೂಗಿ ನೋಡದ ಹೊರತು ಯಥಾರ್ಥ ಬೆಲೆ ತಿಳಿಯುವುದಿಲ್ಲ ಬಿಡಿ."

"ಅಂದರೆ..."

"ಯೋಚಿಸಿ ನೋಡಿ."

ಹುಬ್ಬೇರಿಸಿದಳು ಪೊನ್ನು ; ತುಟಿಗಳಲ್ಲಿ ಮಂದಹಾಸ ನಲಿದಾಡಿತು.

"ಓ... ಈಗ ಅರ್ಥವಾಯಿತು ! ನಾನು ಚಂಗಪ್ಪ ಮಾವನ ವಿಚಾರ ಕುರಿತು ಮಾತಾಡಿದರೂ ಇತರ ಯಾವ ವಸ್ತುವನ್ನೂ ಅಲಕ್ಷಿಸಲಿಲ್ಲ ಬಿಡು ; ಆದರಲ್ಲೂ ಗೃಹಿಣಿಯರನ್ನು ಅಲಕ್ಷಿಸುವಂತೆಯೇ ಇಲ್ಲ."

"ಹಾಗೇನು ?" ಹಾಸ್ಯಪೂರ್ಣ ವಾಣಿಯಲ್ಲಿ ನುಡಿದಳು ಮಡದಿ. ಮುಖ ಕಣ್ಣುಗಳಲ್ಲಿ ನವ ಉತ್ಸಾಹದ ಖಳೆ ನಲಿದಾಡಿತು. ಅತ್ಯಂತ ಲವಲವಿಕೆಯಿಂದ, ವಿವೇಚನಾಪೂರ್ಣತೆಯಿಂದ ಪುನಃ "ಈಗ ನಡೆಯಿರಿ, ನಾನೂ ಬರುವೆ ಏನೇನಿದೆಯೋ ಮಾಡಿ ಬಿಡೋಣ."

"ಈ ಕೆಲಸ ನಿನ್ನಿಂದಾಗದು; ಬಿಸಿಲು ಬಹಳ ಜೋರಾಗಿದೆ ಪೊನ್ನೂ !"

"ನೋಡೋಣ...." ಮುಗುಳು ನಕ್ಕಳು ಪೊನ್ನಮ್ಮ.

ಮಾದು ಒಳಹೋಗಿ ಮನೆಯುಡುಪು ಬದಲಿಸಿ, ಕಾಮಗಾರಿಗೆ ಉಚಿತವಾದ ಕಾಕಿ ಬಟ್ಟೆ ಧರಿಸಿ ಹೊರ ಬಂದ. ಅಷ್ಟರಲ್ಲಿ ತಣ್ಣನೆಯ ಪಾನೀಯ

ಅಣಿಯಾಗಿತ್ತು. ಅವನೊಂದಿಗೆ ಪೊನ್ನಮ್ಮನೂ ಹೊರಟುದುದನ್ನು ನೋಡಿ, ಕಾವೇರಿ,

"ನೀನು ಈ ಬಿಸಿಲಲ್ಲಿ ಹೋದರೆ ಬಾಡಿ ಹೋಗುತ್ತಿ ಮಗಳೇ!"

"ಇರಲಿ, ಈಗ ಮನೆಯಲ್ಲೂ ಏನೂ ಕೆಲಸವಿಲ್ಲ. ಹೊರಗೆ ಹೋದರೆ ಅದಾದರೂ ಒಂದಿಷ್ಟು ನಡೆದೀತು...ತೋಟದಲ್ಲಿ ನೆರಳಿದೆ."

ಕೆಲಸವಿದ್ದುದು ಗದ್ದೆಯಲ್ಲಿ ತೋಟದ ನೆರಳಿನಲ್ಲಿ ವಿಶ್ರಮಿಸಿಕೊಳ್ಳಲು ಸಮಯವಾದರೂ ಎಲ್ಲಿ....? ತನ್ನೊಳಗೇ ಯೋಚಿಸುತ್ತ "ನೀನಿನ್ನೂ ಹೊಸಬಿ, ನಿನ್ನಿಂದ ಇದೆಲ್ಲ ಆದೀತೆ ?"

ಪೊನ್ನಮ್ಮನ ಎಳೆ ನಗುವೇ ಉತ್ತರವಾಯಿತು.

"ಸಂಶಯವಿಲ್ಲ....ವಿದೇಶೀಯರ ಆಡಳಿತದಿಂದ ನಾವು ಎಷ್ಟೋ ಕಲಿತು ಕೊಂಡೆವು! ಇಲ್ಲದಿದ್ದಲ್ಲಿ ನಮ್ಮ ಮಹಿಳೆಯರು ಇಷ್ಟೊಂದು ಪ್ರವರ್ಧಮಾನಕ್ಕೆ ಬರುತ್ತಿರಲಿಲ್ಲ !"

ಮಾದು ನಗೆ ಚಟಾಕಿ ಹಾರಿಸಿದ.

"ಹೌದಪ್ಪಾ !" ಎಂದಳು ಕಾವೇರಿ.

"ಮಾಡಲಿ ಬಿಡಿ, ಮಾಡಿದರೆ ಒಂದಿಷ್ಟು ಅನುಭವವಾಗುತ್ತೆ. ಒಂದು ವೇಳೆ ನಾನೇನಾದರೂ ಸೆರೆಮನೆ ಕಂಡರೆ ಮಾಡಿಕೊಳ್ಳಬೇಕಲ್ಲ?"

"ನಮಗಿರುವ ಸಂಕಷ್ಟಗಳೇ ಸಾಕಾಗಿವೆ....ಈಗಲೇ ಏಕೆ ಹಾಳು ಬಾಯಿ ನುಡಿಯುತ್ತಿ ?"

"ಅದೇನು ಮಹಾ ಕಷ್ಟ, ಬಿಡಿ, ನೀವು ಆಗಿನಿಂದ ಒಂದೇ ಸಮ ದುಡಿದಿ ರುವುದರಿಂದಲೇ ಗಟ್ಟಿಯಾಗಿದ್ದೀರಿ. ಕೂದಲು ಸಹ ಹಣ್ಣಾಗಲಿಲ್ಲ !"

ಮೂವರ ಮುಖದಲ್ಲೂ ಮುಗುಳು ನಗೆ ಮೂಡಿತು.

೧೬

....ಶಾಂತ ಮಧುರ ಶ್ರೀಯುತ ಸಂಧ್ಯೆ.

....ತಿಳಿಗಾಳಿಯು ಸಣ್ಣ ಶ್ರುತಿಯಲ್ಲಿ ಹಾಡುವ ಕಾವಳಿ.

ಪೂವಿ ಸಂಧ್ಯಾದೀಪವನ್ನು ಹಚ್ಚುವುದರಲ್ಲಿ ನಿಮಗ್ನಳಾಗಿದ್ದಳು. ತೈಲವನ್ನು ಹಾಕಿ ಬತ್ತಿಯನ್ನು ಎತ್ತರಿಸಿ ಕಡ್ಡಿಗೀರಿ ಅಗ್ನಿಸ್ಪರ್ಶ ಮಾಡಿದೊಡನೆ ವಿದ್ಯುದ್ದೀಪದೊಂದಿಗೆ ಸ್ಪರ್ಧೆ ಹೂಡುವಂತೆ ಕುಡಿಯು ಕೆನ್ನಾಲಿಗೆ ಚಾಚಿ ಉರಿಯಹತ್ತಿತು–ತೂಗುದೀಪ. ಕೊಳಲು ಕೃಷ್ಣನ ಮೇಲೆ ಆನಂದದ ತೆರೆಯಂತೆ ಜ್ಯೋತಿರ್ಧಾರೆ ನಲಿಯುತ್ತಿರಲು ಕೊನೆಯ ಪ್ರಕರಣವಾಗಿ ಕರಗಳನ್ನು ಜೋಡಿಸಿದಾಗ ಮನದಲ್ಲಿ ಏನೋ ಒಂದು ಬಗೆಯ ಶಾಂತಿಯ ತೆರೆ ಹರಡಿತು. ಪೂವಿ ಹೊರಬಂದಾಗ ಮುದ್ದಪ್ಪ ಮಗನೊಂದಿಗೆ ಚೆಂಡಾಟದಲ್ಲಿ ಪಾಲ್ಗೊಂಡಿದ್ದ. ಪುಟ ನೆಗೆದು ಹಾರುವ ಚೆಂಡಿನೊಡನೆ ಸರಸ ಸಲ್ಲಾಪ ನಡೆಯುತಿದ್ದು ಕೇಕೆಯ ಮಧುರ ಧ್ವನಿ ಕೇಳಿ ಬರುತಿತ್ತು; ಎಳೆಯ ಹೆಜ್ಜೆಗಳು ಇಲ್ಲಿಂದಲ್ಲಿಗೆ ಜಿಗಿದಾಡುತಿದ್ದುವು. ಮುದ್ದಪ್ಪ ಉತ್ಸಾಹದಿಂದ ನಿಂತ. ಪೂವಿ ಆನಂದ ಪರವಶಳಾದಳು. ಕಣ್ಣುಗಳಲ್ಲಿ ಮಿಂಚಿದ ಹೊಳಪು ದರ್ಶನೀಯವಾಗಿತ್ತು.

"ಚಿಟ್ಟೆಗೊಂದು ಕೋವಿ ಬೇಕಂತೆ!" ಮುದ್ದಪ್ಪ ಹೆಮ್ಮೆಯಿಂದ ಬಿತ್ತರಿಸಿದ. ಮುಖದಲ್ಲಿ ಭಾವಸ್ಫೂರ್ತಿ ಮಿನುಗಿತು.

"ಓ....ಹೋ ! ಅಪ್ಪನೊಂದಿಗೆ ನೀನೂ ಯುದ್ಧಕ್ಕೆ ಹೋಗುವೆ....?"

"ಹ್ಞೂ....! ನಾನೂ ಢಮಾರನೆ ಹೊಡೆಯುವೆ!" ಉತ್ಸಾಹದಿಂದ ಕಣ್ಣರಳಿಸಿದ ಚಿಟ್ಟೆ.

"ನೀನು ಶಾಲೆಗೆ ಹೋಗುವುದಿಲ್ಲವೇ ?"

"ಉಹೂ, ಯುದ್ಧಕ್ಕೆ ಹೋಗುವೆ !"

"ಅದೆಲ್ಲ ಅಪ್ಪನಷ್ಟು ಎತ್ತರವಾದ ಮೇಲೆ; ಈಗ ಶಾಲೆಯಲ್ಲಿ ಕಲಿಯಬೇಕು ; ಇಲ್ಲಿ ಗುಂಡು ಹಾರಿಸುವುದನ್ನೂ ಹೇಳಿಕೊಡುತ್ತಾರೆ !"

"ಹೌದಾ ?"

"ಹೌದಪ್ಪಾ, ಮಿಲಿಟರಿ ಶಾಲೆ ಸೇರಿದರೆ ಎಲ್ಲಾ ಕಲಿಯುಬಹುದು."

"ಹಾಗಿದ್ದರೆ ನಾನು ಶಾಲೆಗೆ ಹೋಗುವೆ !"

ವಿಜಯಘೋಷದಂತಹ ಸುಮಧುರವಾದ ಹರ್ಷೋದ್ಗಾರ ಮಾಡಿದ ಚಿಟ್ಟಿ. ಸುಂದರ ದಂತಪಂಕ್ತಿ ದಂತದ ಕೋಟೆಯಂತೆ ನೈದೋರಿದುವು. ಎಳೆಯ ತುಟಿಗಳಲ್ಲಿ ರಂಗು ಹೊಮ್ಮುತಿತ್ತು. ಆ ಮುದ್ದು ಮುದ್ದಾದ ಮುಖದ ಶೋಭೆಯನ್ನು ನಲವಿಂದ ಹೀರಿದ ಮುದ್ದಪ್ಪ ಚೆಂಡು ಎಸೆದು "ಹೂಂ !" ಎಂದ. ದೂರಕ್ಕೆ ಹಾರಿ ಓಡಿದ ಚೆಂಡನ್ನು ಹಿಂಬಾಲಿಸಿ ಓಡಿದ-ಚಿಟ್ಟಿ. ತನು ಮನಗಳಲ್ಲಿ ಉತ್ಸಾಹ ನಲಿದಾಡುತಿತ್ತು. ತುಂಬಿದ ಮೈ, ಎಳೆತನ ಒಂದ ಕ್ಕೊಂದು ಮೋದಪೂರ್ಣಪೂರಕವಾಗಿದ್ದುವು.

"ಕೆಲವು ದಿನ ರಜೆ ಸಿಕ್ಕಿದ್ದರೆ ಊರಿಗೆ ಹೋಗಿ ಬರಬಹುದಾಗಿತ್ತು. ಚಿಟ್ಟಿಯನ್ನು ನೋಡಿದರೆ ಎಲ್ಲರೂ ಸಂತೋಷ ಪಡುತ್ತಾರೆ."

"ರಜೆ ಸಿಕ್ಕುವುದೇ ಕಷ್ಟ. ನಾನು ಆಗಿನಿಂದಲೂ ಪ್ರಯತ್ನಿಸುತ್ತಿರುವೆ.... ಏನು ಮಾಡಲಿ ಹೇಳು ?"

"ನನಗೂ ಅದೇ ಯೋಚನೆಯಾಗಿದೆ."

"ಕೊನೆಯ ಪಕ್ಷ ಎರಡು ಮೂರು ವಾರಗಳಾದರೂ ಸಿಕ್ಕಿದರೆ ಹೋಗಿ ಬರಲು ಅನುಕೂಲ. ಬರೀ ಒಂದು ವಾರ ಸಿಕ್ಕಿದರೆ ಮಾಡುವುದೇನು? ನನಗೂ ಹೇಳಿ-ಕೇಳಿ ಸಾಕಾಗಿದೆ. ಈಗ ದೇಶದ ಪರಿಸ್ಥಿತಿ ಹಿತಕರವಾಗಿಲ್ಲ ...ರಜೆ ದೊರೆಯುವುದು ಕಷ್ಟ." ವಿಷಣ್ಣಭಾವದಿಂದ ನುಡಿದ ಮುದ್ದಪ್ಪ.

"ಒಮ್ಮತವಿಲ್ಲದೆ ಪರಿಸ್ಥಿತಿ ಹದಗೆಡುತ್ತಿದೆ." ಸ್ವಲ್ಪ ಹೊತ್ತು ತೀವ್ರ ಯೋಚನೆಯಲ್ಲಿ ಮುಳುಗಿದ್ದು ಅನಂತರ ಎಚ್ಚತ್ತುಕೊಳ್ಳುತ್ತ ಶಾಂತಿವಾಚನ ಮಾಡುವಂತೆ ಮೃದು ಮಂದ ಕಂಠದಿಂದ ಮುಂದುವರಿದಳು ಪೂವಿ "ಸುಭಾಸ್ ನೀತಿ, ಜಿನ್ನಾನೀತಿ, ಗಾಂಧೀನೀತಿ ಮೂರೂ ಮೂರು ದಾರಿ ಹಿಡಿದಿವೆ. ಇಂದಿನ ಗಂಭೀರ ವಾತಾವರಣದಲ್ಲಿ-ಈ ಸಂದಿಗ್ಧ ಪರಿಸ್ಥಿತಿಯಲ್ಲಿ ರಾಷ್ಟ್ರದ ಉಜ್ವಲ ಭವಿಷ್ಯತ್ತನ್ನು ತಿಳಿದೂ ತಿಳಿದೂ ವಿಧಿಯ ಕೈಯಲ್ಲಿ ಅಡವಿಡುತ್ತಿರು ವುದನ್ನು ನೋಡಿದರೆ ಕಣ್ಣೀರು ಬರುತ್ತದೆ. ಅದರಲ್ಲೂ ಎಲ್ಲರೂ ಅಗ್ರಗಣ್ಯರೇ !

ಜನ ಸಾಮಾನ್ಯರಿಗೆ ದಾರಿದೀಪಗಳಾದವರ ಭಿನ್ನಭಿನ್ನ ನೀತಿ ಬಹಳ ಪಶ್ಚಾತ್ತಾಪಕರ ! ಹೀಗಾದರೆ...."

ಮುದ್ದಪ್ಪ ನಡುವೆ ಬಾಯಿ ಹಾಕಿದ,

"ಇಂಗ್ಲೀಷರಿಗೆ ಬೇಕಾಗಿದ್ದೇ ಇದು ಪೂವಿ ! ಇಂತಹ ಸಂದರ್ಭಕ್ಕಾಗಿಯೇ ಅವರು ಕಾದುಕೊಂಡಿದ್ದಾರೆ. ರೋಗಿ ಬಯಸಿದ್ದೂ ಹಾಲೂ ಅನ್ನ; ವೈದ್ಯ ಹೇಳಿದ್ದೂ ಹಾಲೂ ಅನ್ನ. ಈಗ ಅವರಿಗಿದು ಸರ್ವಾನುಕೂಲ ಸಿಂಧು !....ಅಂದಿಂದಿಗೂ ದೇಶೋವಿಶಾಲವಾಗಿ ಆತ್ಮೀಯತೆಯಿಂದ ಒಟ್ಟಾಗಿ ದುಡಿದು ಎಲ್ಲಾ ಕಷ್ಟನಷ್ಟಗಳನ್ನೂ ಅನುಭವಿಸಿ ಅಖಂಡ ರಾಷ್ಟ್ರದಲ್ಲಿ-ಅಖಂಡ ತೇಜದಲ್ಲಿ 'ಪಾಲು' ಕೇಳುತ್ತಿರುವ ಜಿನ್ನಾನೀತಿಯಂತೂ ಆಶ್ಚರ್ಯ ! ಪರಮಾಶ್ಚರ್ಯ !"

...ಹಾಸ್ಯಾಸ್ಪದ...

"ಯಾವುದರಲ್ಲಿ 'ಔನ್ನತ್ಯ ಇದೆಯೋ ಅದರಲ್ಲಿ ಕಷ್ಟನಷ್ಟಗಳೂ ಇರಲೇ ಬೇಕಲ್ಲ?" ಯೋಚನೆಯ ಭಾರದಿಂದ ವೀತಗಾನದ ಶ್ರುತಿಯಂತೆ ಹೊಮ್ಮಿತು ದನಿ. ಹೃದಯರಂಗದಲ್ಲಿ ಏನೋ ಒಂದು ಬಗೆಯ....ಯೋಚಿಸಿದರೂ ಅರ್ಥವಾಗದ ಅತೀವ ಅಪಹಾಸರೋದನದ ವಿಚಿತ್ರಪರಿಮಳ ಭುಗಿಲೆದ್ದಂತೆ ಉದ್ಭಾಸಿತವಾಯಿತು. ಪೂವಿ ದೃಢವಾದ ಧ್ವನಿಯಲ್ಲಿ ಮುಂದುವರಿದಳು "ಭಾರತದಂತಹ ಬೃಹತ್‌ದೇಶದಲ್ಲಿ ಒಮ್ಮತ ಬರುವುದು ಅಷ್ಟು ಸುಲಭವೂ ಅಲ್ಲ. ಎಲ್ಲರಿಗೂ ಅವರದ್ದೇ ಆದ ಅಭಿಪ್ರಾಯಗಳಿರುತ್ತವೆ...ಉದ್ದೇಶಗಳಿರುತ್ತವೆ. ಈಗಂತೂ ಸ್ವರಾಜ್ಯದ ಗೀಳು ಎಲ್ಲರನ್ನೂ ಎಳೆ ಸೇರಿಸಿ ಹುರಿ ಹೊಸೆದಂತೆ ಒಟ್ಟಾಗಿ–ಒಮ್ಮುಖವಾಗಿ ಸೇರಿಸಿದೆ. ಮುಂದೇನಾಗುತ್ತೋ ಹೇಳುವುದು ಕಷ್ಟ...ಕೊಡಗಿನಂತಹ ಸಣ್ಣ ಪ್ರಾಂತ್ಯವನ್ನೇ ಉದಾಹರಣೆಗಾಗಿ ತೆಗೆದುಕೊಳ್ಳಿ. ನಮ್ಮಲ್ಲಿ ಎಂದಾದರೂ ಒಮ್ಮತ ಬರುವುದು ಸಾಧ್ಯವೇ ?"

ಮುದ್ದಪ್ಪ ಮಡದಿಯ ಕಡೆ ನೋಟ ಹೊರಳಿಸಿದ ; ನುಡಿಯಲ್ಲಿನ ವಾಸ್ತವಾಂಶ ಗಮನವನ್ನು ಸೆಳೆಯಿತು. ಒಂದೆರಡು ಘಳಿಗೆ ಕಳೆದುದೂ ಸಹ ಗಮನಕ್ಕೆ ಬರಲಿಲ್ಲವೇನೋ...

"ಈಗ ಇಷ್ಟು ಮಾತ್ರ ನಡೆಯುತ್ತಿರುವುದೂ ಸಹ ದೈವಕೃಪೆ...ಈ

ಜನ ಕೋಟಿಯನ್ನು ನೇರ ಹಾದಿಯಲ್ಲಿ ನಡೆಸುವ ಗಾಂಧೀಜಿಯವರ ಹೊಣೆಯಂತೂ ಅಪರಂಪಾರ !"

ಅವಳ ವಿಮರ್ಶೆಯ ಕೊನೆಯ ತುಣುಕು ಕಿವಿಯನ್ನು ಮುಟ್ಟಿದಾಗ ಹರ್ಷ ಸೂಚಕವಾಗಿ ತುಟಿಗಳಲ್ಲಿ ಎಳೆ ನಗು ಮೂಡಿತು. ದೂರಕ್ಕೆ ಚಿಮ್ಮಿ ಹೋದ ಚೆಂಡಿಗಾಗಿ ಕಾತರಯುತವಾಣಿಯಲ್ಲಿ ಚಿಟ್ಟಿ ಕೂಗಿದ "ಅಪ್ಪಾ! ಚೆಂಡು....ಚೆಂಡು !"

ಮುದ್ದಪ್ಪ ಚೆಂಡು ಬಿದ್ದಲ್ಲಿಗೆ ಹೋಗಿ ತೆಗೆದುಕೊಂಡು ಬಂದ.

ಸಂಜೆಯ ಸೊಂಪು ತುಂಬಿ ಎಲ್ಲೆಲ್ಲೂ ಹರಡಿತ್ತು.

ಪಶ್ಚಿಮ ದಿಗಂಗನೆ ಕನಕಾಂಬರನ್ನುಟ್ಟು ಮನೋರಮ ವೈಖರಿಯಲ್ಲಿ ಆನಂದಮಯಿಯಾಗಿ, ಅಲ್ಲಲ್ಲಿ ಹೊಮ್ಮಿದ ಜ್ಯೋತಿರ್ವಿಹೀನವಾದ ನಕ್ಷತ್ರಗಳ ಮೇಲೆ ಪ್ರಭಾವರ್ಷಣಗೈಯ್ಯುತಿದ್ದಾಳೆ....ದೂರದಿಗಂತದಲ್ಲಿ ಚಂದ್ರೋದಯ ವಾಗುತ್ತಿದೆ. ಸದ್ದಿಲ್ಲದ ಶಾಂತ ಸಾಮ್ರಾಜ್ಯದಲ್ಲಿ ಪುಷ್ಪಪಲ್ಲವಗಳಿಂದ ಸುಗಂಧ ವನ್ನು ಪಸರಿಸುತ್ತಿದೆ ವನರಾಜಿ...

ಆ ಅದ್ಭುತ, ಸುಮನೋಹರವಾದ ವಾತಾವರಣವನ್ನು ಗಮನಿಸುತ್ತ ಆನಂದ ವಿಶೇಷದಿಂದ ಮುದ್ದಪ್ಪ ಅಂದ,

"ವನವನಾಂತರಗಳ–ಗ್ರಾಮ ಗ್ರಾಮಾಂತರಗಳ ಕುಟೀರಗಳಲ್ಲಿ ದೊರೆಯುವ ಮುಗ್ಧ ಪ್ರೇಮ ಆಯಾ ಸುಂದರ ವಾತಾವರಣವನ್ನು ಅವಲಂಭಿಸಿಯೇ ಇರುತ್ತದೆ....ಬೃಹತ್ ನಗರ ವಲಯಗಳಲ್ಲಿ ದೊರೆಯಬಹುದಾದ ಕುಟಿಲ ಪ್ರೇಮವೂ ಸಹ ಅಲ್ಲಿನ ವಾತಾವರಣವನ್ನೇ ಅವಲಂಭಿಸಿರುತ್ತದೆ, ಪೂವಿ !"

"ಹೌದು" ಹರ್ಷವನ್ನು ಸೂಸಿದಳು ಪೂವಿ. ತುಟಿಗಳಲ್ಲಿ ಚಿನ್ನದ ರೇಖೆಯಂತಹ ಎಳೆನಗು ಮಿನುಗಿ ಮಾಯವಾಯಿತು. ಅಭಿಮಾನಪೂರ್ಣವೂ ಆನಂದಲಿಪ್ತವೂ ಆದ ಸಹಜಚಿಂತನೆಯಿಂದ ಮೈಪುಳಕಿತಗೊಂಡಿತು. ಮಧುರ ಪ್ರಸನ್ನಭಾವದಿಂದ ನುಡಿದಳು "ಇಂಗ್ಲಿಷರು ನಮ್ಮ ದೇಶಕ್ಕೆ ಕಾಲಿಡದೆ ಹೋಗಿದ್ದಲ್ಲಿ ಸನಾತನ ವಿಶಿಷ್ಟತೆಯು ನಾವು ಗರ್ವಿಸುವಷ್ಟು ಪಕ್ವವಾಗಿರುತಿತ್ತೇನೋ...."

ಒಂದು ಕಾಲದಲ್ಲಿ ಮನುಷ್ಯನಿಗಾಗಿಯೇ ವಿಶಿಷ್ಟತೆ ಇತ್ತು. ಅದನ್ನು ಎಂದೆಂದಿಗೂ ಉಳಿಸಿಕೊಳ್ಳಲೇಬೇಕು ಎಂಬುದೇನೂ ಇಲ್ಲ. ಭಾರತದ

ವೈಶಿಷ್ಟ್ಯತೆ ಒಂದೆರಡು ಬಗೆಯದೂ ಅಲ್ಲ; ಅಖಂಡ ಭಾರತದ ಜೀವನ ಜ್ಯೋತಿ ಕುಡಿಕಟ್ಟಿದಂತೆ ಬೆಳಗಿದರೆ ವೈಶಿಷ್ಟ್ಯಕ್ಕಿಂತ ಮಿಗಿಲಾದ ಮಹಾನುಭೂತಿಯನ್ನು ಪಡೆಯಬಹುದು."

"ಹಿಂದೂಸ್ಥಾನದ ಇತರ ಪ್ರಾಂತ್ಯಗಳ ವಿಚಾರವೇನೇ ಇರಲಿ, ಕೊಡಗಿನ ವೈಶಿಷ್ಟ್ಯ ಅತ್ಯಂತ ವಿಭಿನ್ನವಾದುದು....ಆ ಶುಭ ಕಲ್ಪನೆ ಮನಸ್ಸಿನ ಮೇಲೆ ಮೂಡಿದಾಗ ಏನೋ ಒಂದು ಬಗೆಯ ಆನಂದವುಂಟಾಗುತ್ತದೆ."

ಹರ್ಷ ಸೂಚಕವಾಗಿ ತುಟಿಗಳು ಬಿರಿದುವು. ಕಣ್ಣುಗಳಲ್ಲಿ ಉಜ್ವಲವಾದ ಹೊಳಪು ಬೆಳಗಿತು. ಮುದ್ದಪ್ಪ ಅದೇ ಯೋಚನೆಯನ್ನು ತಲೆಯಲ್ಲಿ ತುಂಬಿಕೊಂಡು ಭಾವಾವಿಷ್ಟನಾಗಿ ನುಡಿದ. "ಈಗೀಗ ಜನರ ಮನಸ್ಸು ತೀವ್ರಗತಿಯಲ್ಲಿ ಬದಲಾಯಿಸುತ್ತಿದೆ..ಬಹುಶಃ ಅದರ ಕಾರಣ ಜಮೀನ್ದಾರರ ಅನ್ಯಾಯವಾಗಿರಬಹುದು. ಚಳವಳಿ ಆಂದೋಳನಗಳಿರಬಹುದು, ವಿದ್ಯೆಬುದ್ಧಿಗಳಿರಬಹುದು, ಧನಿಕರ ದರ್ಪವಾಗಿರಬಹುದು, ಯುಗಧರ್ಮವಾಗಿರಬಹುದು ಕ್ರಾಂತಿ ಮನೋಭಾವವಿರಬಹುದು ಅಥವಾ ಇಂಗ್ಲಿಷರ ಕ್ರೂರತನವಾಗಿರಬಹುದು. ಅಂತೂ, ಈ ತೀವ್ರತೆಯನ್ನು ಗಮನಿಸಿದಾಗ ಮನಸ್ಸಿಗೆ ಏನೋ ಒಂದು ಬಗೆಯ ಆನಂದವುಂಟಾಗುತ್ತದೆ. ಕೆಲವೊಮ್ಮೆ ಭಯವೂ ಉಂಟಾಗುತ್ತದೆ."

"ಆದರೂ . !

"ನಮ್ಮ ಬಡತನವೊಂದಿದೆಯಲ್ಲಾ, ಅದೇ ಎಲ್ಲಾ ಪ್ರಗತಿಗೂ ಪ್ರತಿಬಂಧಕ."

"ಪ್ರಗತಿಗೆ ಪ್ರತಿಬಂಧಕವಿರಬಹುದು ; ಆದರೆ ಅದೇ ನಮ್ಮ ಭಾವನೆಗಳನ್ನು ಕೆರಳಿಸುತ್ತವೆ. ಅದೇ ಮನೋವಿಕಾಸಕ್ಕೆ ದ್ಯೋತಕ, ಜೀವನ ವಿಕಾಸಕ್ಕೆ ನಾಂದಿ."

ಪೂವಿ ಮಾತಾಡದೆ 'ಹೌದು' ಎಂಬಂತೆ ತಲೆದೂಗಿದಳು.

"ಕತ್ತಲಾಗುತ್ತಿದೆ . ದೂರ ಹೋಗಬೇಡ ಚಿಟ್ಟೀ !"

ಚೆಂಡಿನೊಡನೆ ಆಟವಾಡುತ್ತ ದೂರ ಹೋಗುತಿದ್ದ ಮಗುವನ್ನುದ್ದೇಶಿಸಿ ನುಡಿದಳು ಪೂವಿ "ಬಾ, ಒಳ ಹೋಗೋಣ."

ಚಿಟ್ಟಿ ಚೆಂಡಿನೊಡನೆ ಸಮೀಪಿಸಿ–"ಎತ್ತಿಕೊಳ್ಳಿ !" ಎನ್ನುತ್ತ ಎರಡೂ ಕೈಗಳನ್ನು ನೀಡಿದ.

"ಆಡಿ ಆಡಿ ಸಾಕಾಯ್ತು !" ದನಿ ಗೋಗರೆಯಿತು.

ಮುದ್ದಪ್ಪ ಮಗನನ್ನು ಭುಜದಮೇಲೆ ಕೂರಿಸಿಕೊಂಡು ಕುದುರೆ ಆಟ ಆಡಿಸಿದ ಹೈ ಹೈ ಹೈ !

ಚಿಟ್ಟೆ ನಕ್ಕು ನಲಿದ ಹೈ ಹೈ ಹೈ !

ಮುದ್ದಪ್ಪ ಹೊತ್ತು ನಲಿದ ಹೈ ಹೈ ಹೈ !

ಸಮಯ ಸಂಭ್ರಮದಿಂದ ಉರುಳಿತು.

ಮನ ದಣಿಯೆ ಮಗುವಿನೊಂದಿಗೆ ಆಟವಾಡಿದ ಬಳಿಕ ಮುದ್ದಪ್ಪ ಉಲ್ಲ ಸಿತನಾಗಿ ಒಳಗಡೆ ಬಂದ. ಎರಡುಕೋಣೆಯ ಸಂಸಾರ, ಕೆಲವು ಸಣ್ಣಪುಟ್ಟ ಪಾತ್ರೆಗಳು, ಒಂದೆರಡು ಕುರ್ಚಿ ಮೇಜುಗಳು, ಅಷ್ಟಿಷ್ಟು ಇತರ ಪರಿಕರಣ ಗಳೊಂದಿಗೆ ಸಂಸಾರದ ಸೌಕರ್ಯವೆಲ್ಲ ಅಡಗಿತ್ತು. ವನ್ಯ ಪ್ರದೇಶದಲ್ಲಿ ಸೌದೆ ದೊರೆಯುತಿದ್ದುದರಿಂದ ಬೆಂಕಿಗೆ ಕೊರತೆ ಇರಲಿಲ್ಲ. ನೀರು ಸಹ ಅಷ್ಟೆ, ಸಿಹಿ ನೀರಿನ ಚಿಲುಮೆಗೆ 'ಪೊಂಪು' ಹಾಕಲಾಗಿ ನೀರು ಸಮೃದ್ಧಿಯಾಗಿತ್ತು,

ಠಾಣ್ಯದತ್ತ ನೂರಾರು ಸಂಸಾರಗಳಿವೆ ; ಎಲ್ಲರ ಸ್ಥಿತಿಯೂ ಬಹಳ ಮಟ್ಟಿಗೆ ಇಷ್ಟೆ. ನೆಲೆ ತಾತ್ಕಾಲಿಕ ; ಸ್ಥಿತಿಯೂ ತಾತ್ಕಾಲಿಕ.

ಮುಂದೆ,

ಒಂದೆರಡು ವಾರಗಳು ಠಾಣ್ಯದ ವಲಯದಲ್ಲಿ ಪ್ರಶಾಂತವಾಗಿ ಉರುಳಿದು ವೇನೋ .. ಅನಂತರ ದೇಶೀಯ ಚಳವಳಿಕಾರರ ದಮನ ಮತ್ತು ಎರಡನೇ ಮಹಾಯುದ್ಧಕ್ಕೆ ಪೂರ್ವಭಾವೀ ಸಿದ್ಧತೆಗಳು ಮಿಲಿಟರಿ ಕ್ಷೇತ್ರಕ್ಕೆ ತಲೆ ನೋವನ್ನು ಮೂಡಿಸಿದುವು. ಠಾಣ್ಯದಲ್ಲಿದ್ದ ಅನೇಕ ಸೈನಿಕರು ಸ್ಥಳಾಂತರಿಸ ಲ್ಪಟ್ಟರು. ತಮಗೆ ಬೇಕಾಗಿದ್ದ ಸ್ನೇಹ ಸಂಬಂಧವುಳ್ಳ ಸೈನಿಕರ ಸಂಸಾರ ಹೊರಟು ಹೋದಾಗ ಪೂವಿ ಎದೆಯಮೇಲೆ ಮಗುವನ್ನೆತ್ತಿಕೊಂಡು ಹನಿ ಗಣ್ಣಾಗಿ ನಿಟ್ಟಿಸಿದಳು. ಹೃದಯ ಸಂಪುಟದಲ್ಲಿ ಅಗಲಿಕೆಯ ಸಂಕಟ ತುಂಬಿ ಹೋಗಿತ್ತು.

ಇದೇ ಸಂದರ್ಭದಲ್ಲಾದರೂ ನಮ್ಮನ್ನು ಇಲ್ಲಿಂದ ಸ್ಥಳಾಂತರಿಸಿದ್ದರೆ ಎಂಬ ಯೋಚನೆಯು ಎಷ್ಟೋ ಬಾರಿ ಮನಸ್ಸಿನಲ್ಲಿ ಸುಳಿದಳಿಯಿತು. ಆದರೆ ಹಿರಿಯ ಅಧಿಕಾರಿಗಳಿಗೆ ಆ ಭಾವನೆ ಒಮ್ಮೆಯೂ ಮೂಡಲಿಲ್ಲವೇನೋ... ಮುದ್ದಪ್ಪ ರಜೆಗಾಗಿ ಬರೆದುಕೊಂಡ ಅರ್ಜಿಗಳೆಲ್ಲ ಕಸದ ಬುಟ್ಟಿ ಕಂಡುವು.

ಹೇಳಿಕೆ ಬೇಡಿಕೆಗಳು ತಳ್ಳಿ ಹಾಕಲ್ಪಟ್ಟುವು. ವಿಧಿವತ್ತಾಗಿ ಮುದ್ದಪ್ಪ ಅಲ್ಲೇ ಉಳಿದ. ಯುದ್ಧರಂಗದ ಪೂರ್ವಭಾವೀ ಸಿದ್ಧತೆ-ದೀಕ್ಷೆ ಹುರುಪು ಇವುಗಳ ಪೈಪೋಟಿಯಲ್ಲಿ ಚಿಂತಿಸಲಾಗಲೀ ಯೋಚಿಸಲಾಗಲೀ ಅವಕಾಶ ಕೊಡದಷ್ಟು ತೀವ್ರತೆಯಲ್ಲಿ ಹಗಲು ಕರಗುತಿತ್ತು...ದಿನಗಳು ಉರುಳುತಿದ್ದುವು. ಸಂಜೆಯ ಹೊಂಬೆಳಕಿನಲ್ಲಿ ಬಿಡಾರಕ್ಕೆ ಹಿಂದಿರುಗುವಾಗ ಸಾರ್ವಜನಿಕ ಕ್ಷೇತ್ರದಲ್ಲಿ ಉತ್ಸಾಹದಿಂದ ಓಡಾಡಿದ ದಿನಗಳನ್ನು ನೆನೆಯುತಿತ್ತು-ಚಿತ್ತ. ಗೆಳೆಯರೊಡನೆ ಕೂಡಿ ನಡೆಸಿದ ಸನ್ನಾಹ, ಯಮಗಂಡಗಳನ್ನೆದುರಿಸಿದ ಉತ್ಸಾಹ, ದೇಶ ಕಾರ್ಯದಲ್ಲಿ ಬೆಳಗಿದ ಮೇಧಸ್ಸು ಬೇಡಬೇಡವೆಂದರೂ ಅಕ್ಷಿಪಟಲದ ಮುಂದೆ ವಿಜೃಂಭಿಸುತಿತ್ತು. ಯೋಚನೆಯಲೆಗಳು–ವಿಚಾರಲಹರಿಗಳು–ತರ್ಕವಿತರ್ಕ ಗಳು ತಲೆಯನ್ನು ಚಿಟ್ಟು ಹಿಡಿಸುವಂತೆ ತುಂಬಿಕೊಳ್ಳುತಿದ್ದುವು. ಎಷ್ಟೋ ಬಾರಿ ಹಾದಿ ಕರಗಿದುದರ ಪರಿವೆಯೇ ಗಮನಕ್ಕೆ ಬರುವುದಿಲ್ಲ. ತಲೆಬಾಗಿಲಲ್ಲಿ ಮಡದಿ ಎದುರಾದಾಗ ಯೋಚನಾತರಂಗಗಳ ಪ್ರಾಕಾರ–ಸಮುದಾಯವನ್ನು ದಾಟಿ ಹೊರಬಿದ್ದು ಆತ್ಮ ನಿವೇದನೆ ಮಾಡಿಕೊಳ್ಳುವ....

ಮೂಡಣದಲ್ಲಿ ಮುಂಬೆಳಕು ಹರಿದು ಬರುತಿತ್ತು. ಹೊತ್ತಿಗೆ ಮುಂಚೆಯೇ ಎಲ್ಲಾ ಪ್ರಾತರ್ವಿಧಿಗಳು ಮುಗಿದಿದ್ದುವು. ಇನ್ನು ಕೆಲವೇ ಕೆಲವು ನಿಮಿಷ ಗಳಲ್ಲಿ ಟ್ರಕ್ಕು ಬರುವುದಿದೆ ...ತಾನು ಹೊರಡುವುದೊಂದು ಬಾಕಿ. ಚಿಟ್ಟೆ ಗಾಢ ನಿದ್ದೆಯಲ್ಲಿ ಮುಳುಗಿದ್ದ, ಹಾಸಿದ ಹಾಸಿಗೆಯನ್ನು ಇನ್ನೂ ಸುತ್ತಿರಲಿಲ್ಲ. ಮೇಜಿನಮೇಲೆ ಮೊಣಕೈಯ್ಯೂರಿ ಶಿರೋಭಾರವನ್ನು ಹೊತ್ತು ಕುಳಿತ ಮಡದಿಗೆ ಮುದ್ದಪ್ಪ ಅಂದ,

“ನೀನಿಲ್ಲಿದ್ದು ತೊಂದರೆ ಪಡುವುದಕ್ಕಿಂತ ಕೊಡಗಿಗೆ ಹೋಗುವುದು ಲೇಸು....ಹೇಗೂ ಇನ್ನು ಒಂದೆರಡು ತಿಂಗಳಷ್ಟೆ ?”

“ಆದರೂ....ಈ ಪರಿಸ್ಥಿತಿಯಲ್ಲಿ ಊರಿಗೆ ಹೋದರೆ ಮನಸ್ಸಿಗೆ ಶಾಂತಿ ಇರುವುದಿಲ್ಲ.”

“ಈಗಾಗಲೇ ಐದು ತಿಂಗಳು ತುಂಬಿತು. ದಿನ ತುಂಬಿದ ಮೇಲೆ ದೀರ್ಘ ಪಯಣ ನಿನಗೆ ಬಹಳ ಕಷ್ಟವಾಗಬಹುದು....ಯೋಚಿಸಿನೋಡು.”

“ಎರಡು ತಿಂಗಳು ನೋಡುವುದರಲ್ಲಿ ಅಭ್ಯಂತರವಿಲ್ಲ.”

"ನನ್ನದು ಹೇಗಾದರೂ ಆಗುತ್ತೆ. ಅದನ್ನಷ್ಟು ಮನಸ್ಸಿಗೆ ಹಚ್ಚಿ ಕೊಳ್ಳಲೇ ಬೇಡ."

"ಅಯ್ಯೋ, ಶಿವನೇ...! ಹಾಗೆಂದರೆ ಹೇಗೆ?"

ಆ ಮಾತು ಎದೆಯಾಳಕ್ಕಿಳಿಯಿತು. ಮುದ್ದಪ್ಪ ಏನೋ ಹೇಳಲು ಪ್ರಯತ್ನ ಪಟ್ಟು ಸುಮ್ಮನಾದ. ಒಂದೆರಡು ಘಳಿಗೆ ಮೌನವಾವರಿಸಿತೇನೋ. ಅನಂತರ ಪೂವಿಯೇ ಮೌನ ಮುರಿದಳು,

"ಇಲ್ಲಿಂದ ಯಾವ ರೆಜಿಮೆಂಟನ್ನು ಕಳುಹಿಸುತ್ತಾರೆಂಬುದು ಇನ್ನೂ ನಿರ್ಧರವಾಗಿಲ್ಲ. ಇಷ್ಟಕ್ಕೂ ಇಂಗ್ಲಿಷ್ ಸರಕಾರ ಎರಡನೆ ಮಹಾಯುದ್ಧದಲ್ಲಿ ಭಾಗವಹಿಸಲು ಕಾಂಗ್ರೆಸ್ ನಾಯಕರ ಅಭಿಪ್ರಾಯವನ್ನು ಇದುವರೆಗೂ ಕೇಳಲಿಲ್ಲವಲ್ಲಾ?....ಮುಂದೆಯೂ ಕೇಳುತ್ತಾರೋ ಇಲ್ಲವೋ ಅದು ಸಹ ಅನುಮಾನ. ದೇಶೀಯ ಸರಕಾರಗಳೂ ರಾಷ್ಟ್ರೀಯ ನಾಯಕರೂ ತಗಾದೆ ಹೂಡಿದರೆ ಯುದ್ಧದಲ್ಲಿ ಭಾಗವಹಿಸುವುದು ತಪ್ಪುತಿತ್ತು. ಮುಖ್ಯವಾಗಿ ಭಾರತ ಈ ಕಳಂಕದಿಂದ ಪಾರಾಗುತಿತ್ತು....ಈಗ ಇಲ್ಲದ ತಾಪತ್ರಯಗಳನ್ನು ಗಳಿಸಿ ಕೊಂಡಂತಾಗುತ್ತದೆ."

ಅಕ್ಷರ ಅಕ್ಷರವೂ ಅಸಮಾಧಾನದ ಝರಿಯಲ್ಲಿ ಹರಿದು ಬಂತು.

ಮುದ್ದಪ್ಪ ಒಂದೆರಡು ಕ್ಷಣ ಯೋಚಿಸಿ,

"ಬ್ರಿಟಿಷರು ಭಾರತೀಯರಿಗೆ ಆದ್ಯತೆ ಕೊಟ್ಟಿದ್ದರೆ ತಾನೇ ಕೇಳುವ ಪ್ರಶ್ನೆ? ಮೂಗುದಾರ ಹಾಕಿ ಯುದ್ಧಕ್ಕೆಳೆಯುತ್ತಾರೆ ಅಷ್ಟೆ."

"ನೋಡಿ, ಹೇಗಿದೆ?... ಅದರಲ್ಲೂ ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ?"

"ಯಾವುದೇ ಪರಿಸ್ಥಿತಿ ಇರಲಿ, ಈ ಒಂದು ಗಡುವನ್ನು ದಾಟಿದೆವಾದರೆ ತಮ್ಮದು ಎಂದೂ ರವಿ ಅಸ್ತಮಿಸದ ಅಧಿಕಾರ ಎಂಬ ದೃಢ ನಂಬಿಕೆ ಅವರಿಗಿರುವುದರಿಂದಲೇ ನಮ್ಮ ಹೋರಾಟ ಇನ್ನೂ ಕೊನೆಗಾಣುತ್ತಿಲ್ಲ."

"ನಿಜ... ನಿಜ."

"ಈ ಬೃಹದ್ ದೇಶದಲ್ಲಿ ಇಷ್ಟು ಶಕ್ತಿ, ಸಾಮರ್ಥ್ಯವಿದ್ದರೂ...ಇಂಗ್ಲಿಷರ ಮುಂದೆ ನಮ್ಮ ಬಲ ಚಿಗುರಿಗಿಂತಲೂ ಎಳಸಾಗಿ ಕಾಣಿಸುತ್ತಿದೆ. ಇದಕ್ಕೆ ಇನ್ನೊಂದು ಸೂಕ್ಷ್ಮ ಕಾರಣವಿದೆ."

'ಏನು' ಎಂಬಂತೆ ಮುದ್ದಪ್ಪ ಮಡದಿಯ ಕಡೆ ನಿಟ್ಟಿಸಿದ.

"ಭಾರತಮಾತೆಯ ಶ್ರೀಚರಣಗಳ ನೆಲೆಯನ್ನು ಕಂಡುಕೊಳ್ಳುವುದರಲ್ಲಿರುವ 'ಔನ್ನತ್ಯ' ಈಗಲೇ ಕಂಡು ಬರುವುದಿಲ್ಲವಾದುದರಿಂದ ಈ ಯೌವನ ಭರಿತ ಜೀವನವನ್ನು ಬಲಿಗೊಡುವ, 'ಔಚಿತ್ಯ' ಸಹ ನಮ್ಮವರಿಗೆ ಕಂಡು ಬರುವುದಿಲ್ಲ. ಅಂತಲೇ ಹಾವೂ ಸಾಯದು ; ಕೋಲೂ ಮುರಿಯದು."

ಒಡನೆ ದಶಕ ದಶಕ ದಶಕ ದಶಕಗಳ ಸ್ವಾತಂತ್ರ್ಯ ಹೋರಾಟ ಅಕ್ಷಿಪಟಲದ ಮೇಲೆ ಸುಳಿಸುಳಿದಳಿಯಿತು. ಮುದ್ದಪ್ಪ ಮೌನತಳೆದ. ಯೋಚನೆಯಿಂದ ತಲೆ ಭಾರಾಕ್ರಾಂತವಾಯಿತು. ಪೂವಿ ಮುಂದುವರಿದಳು "ಮಾರ್ಗಗಳು ವಿಚ್ಛಿನ್ನವಾದರೂ ಸಂಕುಚಿತ ಭಾವನೆಗಳು ಸ್ವಾರ್ಥಸಾಧನೆಗೆ ದ್ಯೋತಕವಾಗಿವೆ ಅದೇನೇ ಇರಲಿ, ಸ್ವಾತಂತ್ರ್ಯ ಸಾಧನೆ ಬಹು ಮುಂದಿಯ ಆಶಯ. ಆದರೆ ಅಲ್ಲೂ ಪ್ರತಿಗಾಮಿತ್ವ ಅಂದರೆ ಆಶ್ಚರ್ಯ !"

"ಅದೇ ವ್ಯಸನ....ಪೂವೀ ! ಮಿಲಿಟರಿ ಕ್ಷೇತ್ರವೂ ಸಹ ಸೇವಾ ಕ್ಷೇತ್ರ. ಇಲ್ಲಿ ಸಂಕುಚಿತಭಾವನೆಗೆ ಅವಕಾಶವೇ ಇಲ್ಲ. ನಮ್ಮ ನಡೆ ಒಂದೇ ನೇರಕ್ಕೆ. ಅದು ತಪ್ಪೇ ಆಗಿರಲಿ, ಒಪ್ಪೇ ಆಗಿರಲಿ ಮಾರ್ಗ ವಿಚ್ಛಿನ್ನವಾಗುವಂತಿಲ್ಲ. ನಮ್ಮ ಪ್ರತಿಯೊಂದು ಹೆಜ್ಜೆಯು ಭಾರತಮಾತೆಯ ಶುಭ ಚರಣಗಳ ನೆಲೆಯೆಡೆಗೆ ಸಾಗುತ್ತವೆ, ಅದೊಂದು ಸಮಾಧಾನ."

"ಆದರೂ ಇಚ್ಛಿತ ಎಡೆಗೆ ಧಾವಿಸುವಂತಿಲ್ಲ. ಮನಃಸಾಕ್ಷಿಯಾಗಿಮಾಡದ ಸೇವೆ ಸೇವೆಯೇ ಅಲ್ಲ- ಒಂದೊಂದು ಕ್ಷೇತ್ರದಲ್ಲೂ ಒಂದೊಂದು ಬಗೆಯ ಅಡೆ ತಡೆ. ಮುಖ್ಯವಾಗಿ ಈ ದೇಶದಲ್ಲಿ ಅದೆಂತಹ ಗಾಳಿ ಬೀಸುತ್ತಿದೆಯೋ ದೇವರಿಗೇ ಗೊತ್ತು. ವಾತಾವರಣವೇ ಸಂಕುಚಿತ ಗೊಳ್ಳುತ್ತಿರುವಂತೆ ಭಾಸವಾಗುತ್ತಿದೆ."

"ಸೌಭಾಗ್ಯದಿಂದ ಕೂಡಿದ ಆ ಉನ್ನತ ಊಹೆಯನ್ನೂ....ಊಹಿಸುವ ಸಾಹಸವನ್ನೂ ನಾವು ಈಗ ಮಾಡಲಾಗುತ್ತಿಲ್ಲ. ಏನೋ ಒಂದು ಬಗೆಯ.... ಯೋಚಿಸಿದರೂ ಅರ್ಥವಾಗದ ಅಸಹಾಯಕತೆ ಸಾಮ್ರಾಜ್ಯವಾಳುತ್ತಿರುತ್ತದೆ. ಶುಭಾಶುಭಗಳ ಕಲ್ಪನೆಯಲ್ಲೇ ದಿನಗಳು ಕರಗಿ ಹೋಗುತ್ತವೆ...ನಾವೊಂದು ಬಯಸಿದರೆ ವಿಧಿ ಇನ್ನೊಂದು ಬಯಸುತ್ತದೆ. ಏನೇ ಆದರೂ, ನಾವಿಡುವ ಹೆಜ್ಜೆ ಶಾಶ್ವತವಲ್ಲದಿದ್ದರೂ ಮಂಗಳದೆಡೆಗೆ ಎಂಬ ವಿಶ್ವಾಸವನ್ನು ಯಾವ ಕಾರಣಕ್ಕೂ ಬಿಟ್ಟುಕೊಡುವಂತಿಲ್ಲ. ಆ ವಿಶ್ವಾಸವನ್ನು ಕಳೆದುಕೊಂಡರೆ ನಮಗೆ ಉಳಿಯುವುದು ಮರಣವೊಂದೇ..."

ಪೂವಿ ಮಾತಾಡದೆ ಮುಗುಳು ನಕ್ಕಳು.

ತಂಗಾಳಿ ಹಿಮವೊತ್ತಿ ಬೀಸುತಿತ್ತು. ವನ್ಯ ಪ್ರದೇಶದ ವಾತಾವರಣ ಹಿತಕರವಾಗಿತ್ತು. ಜನಜೀವನದ ನೆಲೆ ಪ್ರಸನ್ನ ಮನೋಹರವಾಗಿತ್ತು. ಮನೆ ಮನೆಯ ಹೊಗೆ ಕೊಳವೆಗಳಲ್ಲಿ ಹೊಗೆ ದಟ್ಟೈಸಿ ಹೊರಡುತಿತ್ತು. ನಾಯಿಗಳ ಬೊಗಳುವಿಕೆ ಕೋಳಿಗಳ ಕೂಗುವಿಕೆ ಆಗಾಗ ಹಳ್ಳಿಗಳ ಕಡೆಯಿಂದ ಕೇಳಿ ಬರುತಿತ್ತು. ಗಡಿಯಾರದ ಮುಳ್ಳು ಏಳರ ಗಡಿಯನ್ನು ದಾಟುವುದರೊಳಗಾಗಿ ಬಾಗಿಲಲ್ಲಿ ಟ್ರಕ್ಕು ಬಂದು ನಿಂತಿತು. ಮನೆಮನೆಯ ಕಟ್ಟಾಳುಗಳೂ ಜಿಗಿದು ಹತ್ತಿದರು.

ಹೊಸ್ತಿಲ ಮೇಲೆ ನಿಂತ ಪೂವಿಯ ಉಜ್ವಲ ನಯನಗಳು ಟ್ರಕ್ಕು ಧೂಳೆಬ್ಬಿಸುತ್ತಾ ದೂರದ ತಿರುವಿನಲ್ಲಿ ಕಣ್ಮರೆಯಾಗುವವರೆಗೂ ನಿಟ್ಟಿಸಿದುವು. ಒಳಗಡೆ ಚಿಟ್ಸು ಹಾಯಾಗಿ ನಿದ್ದೆ ಹೋಗಿದ್ದ. ಒಲೆಯಲ್ಲಿ ಹೊಗೆಂಡ ಜ್ವಲಿಸುತಿತ್ತು.

ಗ್ರೀಷ್ಮ ಋತುವಿನ ಅಪಾರವಾದ ಪ್ರಾತಃಸೌಂದರ್ಯಧಾರೆ ಎಲ್ಲೆಲ್ಲೂ ತುಂಬಿ ಹರಡಿತ್ತು. ನೆಟ್ಟ ನೋಟದಿಂದ ಸೂರೆಗೊಳ್ಳುತ್ತ ಅಲ್ಲೆ ನಿಂತಳು ಪೂವಿ. ರಮ್ಯತಾಪೋಹಾಗ್ನಿಯಲ್ಲಿ ಮಿಂದು, ರಸಾನ್ನವನ್ನುಂಡು ಗತಕಾಲಕ್ಕೆ ಸನ್ನನೆ ಸರಿಯಿತು ಚಿತ್ತ. ಒಂದು ಕಾಲದಲ್ಲಿ–ಚಳವಳಿಯ ಕ್ಷೇತ್ರದಲ್ಲಿ ಸ್ವಾತಂತ್ರ್ಯಯೋಧರ ಗುಂಪಿನಿಂದ ಯಜ್ಞವೇದಿಕೆಯೇರಿದ ತಿಮ್ಮಯ್ಯನ ಅಸ್ಖಲಿತ ಕಂಠದಿಂದ ಹೊಮ್ಮಿದ ವಾಣಿ ಇಂದು, ಇದೀಗ ತಾನೇ ಹೊಮ್ಮಿದಂತೆ ಕರ್ಣಪಟಲಗಳ ಮೇಲೆ ಸ್ಪಷ್ಟವಾಗಿ ಪ್ರತಿಧ್ವನಿಸಿತು.

"...ಈ ಆರ್ಯ ಭೂಮಿಯಲ್ಲಿ ಸ್ವಾತಂತ್ರ್ಯ ಪೂಜೆ ಎಷ್ಟು ನಿಷ್ಠೆಯಿಂದ ನಡೆಯುತ್ತಿದೆಯೋ ಅಷ್ಟೇ ದರ್ಪಯುತ ದಬ್ಬಾಳಿಕೆ ಬ್ರಿಟಿಷರಿಂದ ನಡೆಯುತ್ತಿದೆ. ಹೂಂ ! ನಡೆಯುವಷ್ಟು ಕಾಲ ನಡೆಯಲಿ ...ಇವರು ಎಷ್ಟೇ ಮಂದಿಯನ್ನು ಧ್ವಂಸಗೊಳಿಸಿದರೂ ಇನ್ನೆಷ್ಟೇ ಮಂದಿಯನ್ನು ಸದೆ ಬಡಿದರೂ ಸಹ, ಎಂದೆಂದಿಗೂ ಇದು ಮುಗಿಯುವ ಅಧ್ಯಾಯವೇ ಅಲ್ಲ. ಈ ಪವಿತ್ರ ಭೂಮಿಯಲ್ಲಿ ಪ್ರಾಣಕಣದ ಅವಶಿಷ್ಟ ಲವಲೇಶವಿದ್ದರೂ ತಾವು ಮಾಡಿದ ಪಾಪದ ಫಲವನ್ನು ಸ್ವಹಸ್ತಗಳಿಂದ ಭುಜಿಸಬೇಕಾಗುವುದು ಎಂಬುದನ್ನು ಬ್ರಿಟಿಷರು

ಇನ್ನೂ ಅರಿತುಕೊಳ್ಳದಿರುವುದು ಆಶ್ಚರ್ಯ. ಅವರು ಅರಿತುಕೊಂಡ ಘಳಿಗೆಯಲ್ಲಿ ಭಾರತ ಬಂದ ಮುಕ್ತವಾಗುವುದು ಖಂಡಿತ ...!"

ಆದರೆ...?

ಬ್ರಿಟಿಷರ ಎದೆಯ ನಿಘಂಟಿನಲ್ಲಿ ಅಂತಹ ಅರ್ಥಕೋಶ ಇದೆಯೋ ಇಲ್ಲವೋ ಅದೇ ಅನುಮಾನ ! ಅಸ್ಪಷ್ಟ.

"ಅಮ್ಮಾ!"

ನೋಟ ತಟ್ಟನೆ ಹಾಸಿಗೆಯ ಕಡೆ ಹರಿಯಿತು. ಚಿಟ್ಟಿ ಹಾಸಿಗೆಯ ಮೇಲೆ ಎದ್ದು ಕುಳಿತಿದ್ದ. ನಿದ್ದೆಯ ಮಂಪರ ಇನ್ನೂ ಕಣ್ಣುಗಳಲ್ಲಿ ತುಂಬಿತ್ತು.

೧೭

....ಎರಡನೇ ಮಹಾಯುದ್ಧಕ್ಕೆ ಭಾರತವನ್ನು ಮೂಗುದಾರ ಹಾಕಿ ಎಳೆದಿರುವ ಅಸಹನೀಯ ಅತ್ಯಾಚಾರ ರೋಮರೋಮಗಳಲ್ಲೂ ಬೆಂಕಿಕಿಡಿಯನ್ನು ಮೂಡಿಸುತ್ತದೆ. ಶಸ್ತ್ರಾಭ್ಯಾಸ ಮಾಡಲು ನಮಗೆ ಮನಸ್ಸು ಸಹ ಬರುವುದಿಲ್ಲ. ಆದರೆ 'ದಾಸ್ಯ' ಎಂಬುದು ಎಲ್ಲವನ್ನೂ ನಮ್ರತೆಯಿಂದ ಮಾಡಿಸುತ್ತದೆ. ಪ್ರಸ್ತುತ ಪರಿಸ್ಥಿತಿ ಮನಃಪ್ರಾಣಗಳನ್ನು ಗಾಣಕ್ಕೆ ಕೊಟ್ಟಂತೆ ಹಿಂಡುತಿದ್ದರೂ ಮಯಣದ ಬೊಂಬೆಗಳಂತೆ ಕೆಲಸ ನಿರ್ವಹಿಸುತ್ತೇವೆ.. ನಿರ್ವಹಿಸಲೇಬೇಕು ವಿಧಿಯಿಲ್ಲ. ಏನೇ ಇದ್ದರೂ ನಮಗಂತಹ ತೊಂದರೆ ಏನೂ ಬರಲಾರದು, 'ಬೃಹತ್' ರಾಷ್ಟ್ರಗಳ ಮಾರಾಮಾರಿಯಲ್ಲಿ ನಮ್ಮದು ಯಾವ ಮಹಾಲೆಖ್ಖ ? ಹೇಗೋ ಆಗುತ್ತದೆ. ಅದನ್ನೆಲ್ಲಾ ನೀವು ಮನಸ್ಸಿಗೆ ಹಚ್ಚಿಕೊಳ್ಳುವುದು ಬೇಡ; ಚಿಂತೆಮಾಡಿ ದೇಹಸ್ಥಿತಿಯನ್ನು ಕೆಡಿಸಿಕೊಳ್ಳುವುದೂ ಬೇಡ. ಭಗವಂತ ದಯಾಮಯ- ಆತನ ಕೃಪೆಯೊಂದಿದ್ದರೆ ಸಾಕು, ಎಲ್ಲವೂ ಸುಗಮವಾಗಿ ಕಳೆಯುತ್ತದೆ.

ಪೂವಿಗೆ ಆರು ತಿಂಗಳು ತುಂಬಿದೆ. ಈಗಲೇ ಊರಿಗೆ ಕಳುಹಿಸೋಣವೆಂದು ಮನಸ್ಸು. ಸಧ್ಯದಲ್ಲಿಯೇ ನಾವು ಯುದ್ಧಕ್ಕೆ ಹೊರಡುವುದರಿಂದ ಅಲ್ಲಿಯವರೆಗೂ ಇದ್ದು ಹೋಗುವೆ ಎನ್ನುತ್ತಾಳೆ....ಅದರಿಂದಾಗಿ ಸ್ವಲ್ಪ ತಡವಾಗಬಹುದು. ಚಿಟ್ಟಿ ಬಹಳ ಮುದ್ದಾಗಿದ್ದಾನೆ. ನೀವು ನೋಡಿದ ಮೇಲೆ ತುಂಬ ಸಂತೋಷಪಡುತ್ತೀರಿ....ಹೊರಡುವ ಮೊದಲು ನಿಮ್ಮನ್ನೆಲ್ಲಾ ನೋಡಲಾಗಲಿಲ್ಲವಲ್ಲಾ ಎಂಬುದೊಂದು ಅಪರಿಮಿತ ಸಂಕಟ...ಏಳೆಂಟು ದಿನಗಳ ರಜೆ ದೊರೆತಾಗ ಪಡೆದುಕೊಳ್ಳದೆ ಹೆಚ್ಚಿನ ರಜೆಗಾಗಿ ಕಾದುಕುಳಿತುದು ತಪ್ಪಾಯ್ತು.

ಅಲ್ಲಿಂದ ಮುಂದಿನ ಭಾಗ ಪೂವಿಯ ಹಸ್ತಾಕ್ಷರಗಳಲ್ಲಿ ಹರಿದಿತ್ತು.

...ನಮ್ಮ ರೆಜಿಮೆಂಟನ್ನು ಯುದ್ದಕ್ಕೆ ಕಳುಹಿಸಲು ತೀರ್ಮಾನಿಸಿದುದು ನಿಮಗೆ ದುಃಖವನ್ನು ತಂದಿರಬಹುದು. ಮುದ್ದು ಧೈರ್ಯವಾಗಿದ್ದಾರೆ. ಮುಖ್ಯ

ವಾಗಿ ಅವರಿಗೆ ನಿಮ್ಮ ಆಶೀರ್ವಾದ ಬೇಕು. ಸದಾ ಅವರಿಗಾಗಿ ದೇವರಿಗೆ ಪ್ರಾರ್ಥನೆ ಸಲ್ಲಿಸಿರಿ. ನೀವು ಕ್ಷೇಮವಾಗಿದ್ದು ಸಂತೋಷವಾಗಿದ್ದರೆ ಅದೇ ಅವರಿಗೆ ರಾಮಬಾಣ. ಅವರು ಇಲ್ಲಿಂದ ಹೊರಟ ದಿನವೇ ಇಲ್ಲಿರುವ ಸಂಸಾರ ಗಳೆಲ್ಲ ಊರಿಗೆ ಹೊರಡುತ್ತವೆ. ಅವರೊಂದಿಗೆ ನಾನೂ ಹೊರಡುವೆ. ಜೊತೆಗೆ ಏಳೆಂಟು ಸಂಸಾರಗಳಿರುವುದರಿಂದ ನನಗೆ ಪಯಣದ ತೊಂದರೆಯೂ ಸಹ ತೋರುವುದಿಲ್ಲ. ಆದುದರಿಂದ ದಯವಿಟ್ಟು ನಿಶ್ಚಿಂತೆಯಿಂದಿರಿ. ನನಗೆ ನಿಮ್ಮ ನ್ನೆಲ್ಲಾ ನೋಡುವ ಹಂಬಲದೊಂದಿಗೆ ಅವರಿಂದ ದೂರವಾಗುವ ದುಃಖವೂ ಇದೆ. ಭಗವಂತ ನಮ್ಮನ್ನು ಕಡೆ ಹಾಯಿಸುತ್ತಾನೆಂದು ಪೂರ್ಣ ನಂಬಿಕೆ ಇದೆ.

ಗಂಗಮ್ಮ ಕಾಗದವನ್ನು ಮತ್ತೆ ಮತ್ತೆ ಓದಿಕೊಂಡಳು. ಆತ್ಮಸಂವೇದನೆಯಿಂದ ಒಂದೆರಡು ಹನಿಗಳು ಕಣ್ಣಿನಿಂದ ಜಾರಿದುವು. ಅಂದಿಂದಿಗೂ ಕಷ್ಟಕಾರ್ಪಣ್ಯಗಳಲ್ಲೇ ಕಾಲಹರಣ ಮಾಡಿದ ಅವಳಿಗೆ ಇಂದಿನದೇನೂ ಹೆಚ್ಚ ಲ್ಲವಾದರೂ ಹೆತ್ತ ಕರುಳು ಸಂಕಟದಿಂದ ಮಿಡಿಯಿತು. ಹನಿಗಣ್ಣಾಗಿ ನೋಟ ವನ್ನು ದೂರದಿಗಂತದಲ್ಲಿ ನೆಟ್ಟು ಮೂರ್ತಿಮತ್ತಾಗಿ ಕುಳಿತುಕೊಂಡಳು.

ಗಡಿಯಾರದ ಮುಳ್ಳು ಹತ್ತರ ಅಂಚಿನಲ್ಲಿತ್ತು.

ಪುಷ್ಪಲೋಕಕ್ಕೆ ಚಿನ್ನದ ಲೇಪವನ್ನು ಬಳಿದ ದಿನಮಣಿ ಮೋಡಗಳ ಮಾಲೆಯಲ್ಲಿ ತೆರೆಮರೆಯಾಟ ಆಡುತಿದ್ದ. ವಾತಾವರಣ ಶುಭ್ರವಾಗಿತ್ತು. ನೆರೆಹೊರೆ ಮನೆಗಳೆಲ್ಲ ಜನಾಕೀರ್ಣತೆಯಿಂದ ಗಿಜಿಗಿಜಿ ಅನ್ನುತ್ತಿದ್ದುವು. ಕಿವಿ ಗಳಿಗೆ ಅರಳೆ ಇಟ್ಟುಕೊಳ್ಳುವಷ್ಟು ಗಲಾಟೆ–ಗದ್ದಲ ಕೇಳಿಬರುತ್ತಿದೆ...ಶೌಚದ ಮನೆಯಿಂದ ಅರಂಭವಾದ ಶುಚಿ ಅಡುಗೆ ಮನೆಯಲ್ಲಿ ಕೊನೆಗೊಂಡಿತ್ತು. ಇನ್ನು ಮಾಡುತ್ತೇನೆಂದರೂ ಕೆಲಸವಿಲ್ಲ.. ಓದುತ್ತೇನೆಂದರೂ ಪುಸ್ತಕವಿಲ್ಲ. ಏಕಾಂತ ಜೀವನದಲ್ಲಿ ಹೊತ್ತು ಕಳೆಯುವುದು ಕಷ್ಟ. ಮೇಲಾಗಿ,ಈಚೀಚೆಗೆ ಯಾವುದೋ ಅಜ್ಞಾತ ಭಯ ಹೃದಯದಾಳದಲ್ಲಿ ಕೀಟದಂತೆ ಕೊರೆಯುತಿತ್ತು. ಎಷ್ಟೇ ಪ್ರಯತ್ನಿಸಿದರೂ ಏನೆಂಬುದನ್ನು ಅರಿತುಕೊಳ್ಳಲಾಗುತ್ತಿಲ್ಲ. ಏನೋ ಒಂದು ಬಗೆಯ ಅಸಹನೆ....ಇನ್ನೇನೋ ಒಂದು ಬಗೆಯ ನಿರಾಸಕ್ತಿ....ಸಹಿಸಲಾರದ ಪರಿತಾಪ...

ಉರುಳುವ ಕ್ಷಣ ಕ್ಷಣಗಳೂ ಮುಳ್ಳಿನಂತೆ ಚುಚ್ಚುತ್ತವೆ.

ಹರಿದಾಡುವ ನೆತ್ತರಿನ ಕಣಕಣವೂ ಅಲ್ಲಲ್ಲೆ ತಂಗಿದಂತೆ ಭಾಸವಾಗುತ್ತದೆ.

ಗಂಗೂ ಚಿಂತೆಯ ಪ್ರಾಕಾರದಿಂದ ಹೊರಬಿದ್ದಾಗ ಅತ್ಯಂತ ವಿಚಿತ್ರವಾದ ರೀತಿಯಲ್ಲಿ ಶಂಕೆ–ಕಳವಳಗಳಿಂದ ತುಂಬಿದ ಜನ ಬೀದಿಯುದ್ದಕ್ಕೂ ಅಸಹನೀಯವಾಗಿ ಓಡಾಡುತ್ತಿರುವುದು ಗಮನಕ್ಕೆ ಬಂತು. ಅಲ್ಲಲ್ಲಿ ಗುಂಪಾಗಿ ಮಾತಾಡಿಕೊಳ್ಳುತಿದ್ದುದೂ ಕಂಡು ಬಂದಿತು. ಏನಿರಬಹುದೆಂಬುದು ಯೋಚನೆಗೆ ನಿಲುಕದ ವಿಷಯವಾದರೂ ಎಲ್ಲೋ ಸನಿಹದಲ್ಲಿ ಯಾವುದೋ ಅನೀಪ್ಸಿತ ಘಟನೆ ಘಟಿಸಿದೆ ಎಂಬುದಂತೂ ವ್ಯಕ್ತವಾಯಿತು. ಸ್ವಲ್ಪ ಹೊತ್ತಿನ ನಂತರ ಅದೇ ಬೀದಿಯಲ್ಲಿದ್ದ ಒಬ್ಬ ಗೃಹಸ್ಥ ತಲೆಬಾಗಿಲಲ್ಲಿ ಕಾಣಿಸಿಕೊಂಡ. ಮುಖ ಭಾವದಲ್ಲಿ ಕಾತರ–ಕುತೂಹಲಗಳು ತಾಂಡವವಾಡುತ್ತಿದ್ದುವು ; ಚಿಂತಾ ಮುದ್ರೆಯು ದಟ್ಟವಾಗಿ ಹೆಪ್ಪುಗಟ್ಟಿತ್ತು.

"ನನ್ನ ಹೆಂಡತಿ ಕಾಣೆಯಾಗಿದ್ದಾಳೆ....ಇಲ್ಲೇನಾದರೂ..." ಎಂದ ಗೃಹಸ್ಥ.

"ಇಲ್ಲ . ಇಲ್ಲಿಗೆ ಯಾರೂ ಬರಲಿಲ್ಲ."

ಆತ ಇನ್ನೇನೋ ಹೇಳಲು ಪ್ರಯತ್ನಿಸಿದಂತಿತ್ತು. ಉಸಿರು ಮಾತ್ರ ಹೊರಡಲಿಲ್ಲ. ಅದೇ ಸಮಯಕ್ಕೆ ಕಾರಿಯಪ್ಪ ಆಗಮಿಸಿದ. ಸಪ್ಪೆ ಮೋರೆಯಿಂದ ನಿಂತ ಆವನನ್ನು ಒಂದೆರಡು ಕ್ಷಣ ನಿಟ್ಟಿಸಿ ನೋಡಿ ಅಚ್ಚರಿಯಿಂದ,

"ಏನು ಸಮಾಚಾರ ? ಏಕೆ ಬಂದಿದ್ದೀರಿ ?"

ಗೃಹಸ್ಥ ವಿಷಯವನ್ನು ಸಂಕಷ್ಟದಿಂದ ಮುಂದಿಟ್ಟ. ಗಂಟಲಾರಿ ಬಂದಿತ್ತು.

"ಖಂಡಿತವಾಗಿ....?"

"ಹೌದು." ನಿಟ್ಟುಸಿರು ಹೊಮ್ಮಿತು. ಗೃಹಸ್ಥ ತಲೆಬಾಗಿದ.

"ತಪ್ಪಿಸಿಕೊಂಡುದುದು ಹೇಗೆ ?"

"ರಾತ್ರಿ ಬಾಗಿಲು ತೆರೆದುಕೊಂಡು ಹೊರ ಹೋಗಿದ್ದಾಳೆ."

"ಪೋಲೀಸಿಗೆ ವರದಿ ಮಾಡಿರಿ."

"ಅವನು ಸರಸರನೆ ಹೊರಟ.

ಕಾರಿಯಪ್ಪ ಮಡದಿಯ ಕಡೆ ಕುತೂಹಲ ತೃಷಿತ ನೋಟ ಬೀರಿ "ಕೇಳಿದೆಯಾ ?" ಎಂದ. ಆ ಪ್ರಶ್ನೆಯಲ್ಲಿ ಮಾನಸಿಕ ವೇಗ ಮಾತ್ರವಲ್ಲ ; ಕರುಣಾರಸವೂ ಹರಿದಿತ್ತು.

"ನಮ್ಮಲ್ಲಿ ಆಶ್ರಯ ಪಡೆದಿರಬಹುದೇ ಎಂಬ ಅನುಮಾನ ಆತನಿಗೆ."

ಕಾರಿಯಪ್ಪ ಮುಗುಳು ನಕ್ಕ. ಅವಳ ಜೀವನವೊಂದು ತೆರೆದ ಅಧ್ಯಾಯ ವಾಗಿತ್ತು. ಸಂಸಾರ ಬವಣೆಯನ್ನು ತಾಳಲಾರದೆ ಹೋಗಿದ್ದಾಳೆಂಬುದು ಎಲ್ಲರಿಗೂ ಖಚಿತ. ಗೃಹಸ್ಥ ಮನೆಮನೆಗೆ ಭೇಟಿಯೀಯುತ್ತಿದ್ದುದರಲ್ಲೂ ಅರ್ಥವಿದೆ. ಸತಿಯೊಂದಿಗೆ ಯಾವ ಗೃಹಸ್ಥನಾದರೂ ಕಾಣೆಯಾಗಿರಬಹುದೇ ಎಂಬ ಅನುಮಾನ ಮಾತಿನಲ್ಲಿ–ಚರ್ಯೆಯಲ್ಲಿ ಪ್ರಕಟವಾಗಿದ್ದಲ್ಲಿ ವಿಶೇಷವೇನೂ ಇಲ್ಲ.

ಕಾರಿಯಪ್ಪ ಬಳಿಯಲ್ಲಿದ್ದ ಕುರ್ಚಿಯಲ್ಲಿ ಕುಳಿತುಕೊಂಡ.

"ಇನ್ನು ಸಮಾಜ ಮನಸ್ಸೀ ಅನ್ನುತ್ತದೆ....ಆದರೆ ಆಕೆ ಪಾರಾದುದು ಏಳೇಳು ಜನ್ಮಗಳ ಪುಣ್ಯಫಲದಿಂದ" ದನಿ ಎದೆಯಾಳದಿಂದ ಹರಿದು ಬಂತು. ನುಡಿಯನ್ನು ಬಹಳ ಕಷ್ಟದಿಂದ ಹೊರ ಹಾಕಿದಳು ಮಡದಿ. ಶೋಕಾವರ್ತನ ದಿಂದ ಮುಖ ಛಾಯೆ ಎಣ್ಣೆಗೆಂಪು ತಳೆಯಿತು.

"ಎಂದಾದರೂ ಹೀಗಾಗಬಹುದೆಂದು ನನಗೆ ಹಿಂದೆಯೇ ಅನಿಸಿತ್ತು."

"ಪಾಪ, ಆವಳಾದರೂ ಎಷ್ಟು ದಿನ ಸಹಿಸಿಯಾಳು ?"

ನಿಟ್ಟುಸಿರೊಂದು ದೀರ್ಘವಾಗಿ ಹರಿದು ಬಂತು.

"ಅಲ್ಲಿಗೆ ಪ್ರಸ್ತಾಪ ಮುಗಿಯಿತಾದರೂ ಆ ಅತೀವ ದುಃಖಾಂತ ಜೀವನ ಚಿತ್ರ ಚಿತ್ತಭಿತ್ತಿಯಲ್ಲಿ ಚಲನ ಚಿತ್ರದಂತೆ ಸುಳಿಸುಳಿದಳಿಯುತ್ತಲೇ ಇತ್ತು. ಇನ್ನು ಮನೆಮನೆಗಳಲ್ಲಿ ಹಾದಿಬೀದಿಗಳಲ್ಲಿ ಆ ನತದೃಷ್ಟೆಯ ಕುಲಶೀಲಗಳು ಶಂಕಿಸಲ್ಪಟ್ಟು ಕತೆ ಚಿತ್ರವಿಚಿತ್ರವಾಗಿ ವರ್ಣರಂಜಿತವಾಗಿ ಹೊಮ್ಮಬಹುದಾದ ರೀತಿ ಮನೋ ಮಂದಿರವನ್ನು ಅವಿರಳವಾಗಿ ಮುತ್ತುತಿತ್ತು. ಎಷ್ಟೇ ಪ್ರಯ ತ್ನಿಸಿದರೂ ನಿವಾರಿಸುವುದು ಕಷ್ಟ. ಅವರ ಮನೆ ಹತ್ತಿರವಾದುದರಿಂದ ಅಲ್ಲಿ ನಡೆಯಬಹುದಾದ ಸಕಲವೂ ಹೃದಯವೇದ್ಯ ; ಮನವನ್ನು ಕ್ಷೋಭಿತಗೊಳಿ ಸುವ ಕಾರಾಗಾರ. ಬಹಳ ಮಟ್ಟಿಗೆ ಅಶಾಂತಿಯಲ್ಲೇ ದಿನ ಉರುಳಿತೇನೋ... ಮರೀಚಿಮಾಲಿ ಪಡುವಣ ಮಟ್ಟಿಗಿಳಿದಾಗಲೂ ಆ ಅದೃಷ್ಟಹೀನ ಗೃಹ ಗಲಾಟೆ ಗದ್ದಲಗಳಿಂದ ಕೂಡಿತ್ತು.

ಗೂಡುಗಳನ್ನರಸುವ ಕಾಮಳ್ಳಿ-ಕಲವಿಂಕಾದಿ ವಿವಿಧ ಪಕ್ಷಿಗಳು ಚಿಲಿಪಿಲಿ ಗೈಯುತ್ತಲಿದ್ದುವು. ಗಾಳಿಪಟ ಹಾರಿಸುವ ಬಾಲವೃಂದ ಕೇಕೆ ಹಾಕುವುದು

ಕೇಳಿಸುತಿತ್ತು. ಬೀದಿಯಲ್ಲಿ ವಾಹನಾದಿಗಳ ಗದ್ದಲಕ್ಕೂ ಕಡಿಮೆಯಿರಲಿಲ್ಲ. ಜನವಾರಿಧಿಯ ಮಾತುಕತೆಯ ಶ್ರುತಿಮೇಳವೂ ಅಲ್ಪವೇನಲ್ಲ. ಸೂರ್ಯ ತಂಗಿದರೂ ಸೆಕೆ ಅಳಿಯಲಿಲ್ಲ ಮುಖ ಮೈಗಳನ್ನು ಹಿಂಡಿ ಬಸಿವ ಸ್ವೇದ ಧಾರೆ ಅಲ್ಲಲ್ಲಿ ತಣ್ಣಗೆ ತೊಯ್ಯಿಸುತಿತ್ತು. ನಿರ್ಮೇಘ ನಭೋಮಂಡಲದಲ್ಲಿ ನಿರ್ಧೂಮ ಅಗ್ನಿಜ್ವಾಲೆಯಂತೆ ಹರಡಿದ ನಯನ ಮನೋಹರ ಚಂದನರಾಗ... ಸುಯ್ಯನೆ ಸುಯ್ದು ಶೀಡುವ ಸಾಗರಾನಿಲ....

ಆದರೇನು....?

ಇಂದು ಹೊರಗೆಲ್ಲೂ ಹೋಗಿ ಬರಲು ಮನಸ್ಸಾಗಲಿಲ್ಲ. ಪೊನ್ನಮ್ಮನ ಮನೆಯವರು ಭಾಗಮಂಡಲಕ್ಕೆ ಹೋಗಿದ್ದುದರಿಂದ ಈಚೆಗೆ ಅವರ ಭೇಟಿಯೂ ಆಗಿರಲಿಲ್ಲ. ಇಂದು ನಾಳೆಯೊಳಗಾಗಿ ಬರಬಹುದೇನೋ....ಎಷ್ಟು ಬೇಗನೆ ಬಂದರೆ ಅಷ್ಟು ಕ್ಷೇಮ. ಊರಿನ ಕ್ಷೇಮವೆಲ್ಲಾ ತಿಳಿಯುತ್ತದೆ ಎಂಬ ಯೋಚನೆಯೂ ಆಗಾಗ ಮೂಡುತಿತ್ತು.

ಗಂಗಮ್ಮ ಯಾವುದೋ ಪುಸ್ತಕಾವಲೋಕನದಲ್ಲಿ ಮುಳುಗಿದ್ದಳು. ಮಧ್ಯಾಹ್ನ ಹೊರಹೋದ ಕಾರಿಯಪ್ಪ ಇನ್ನೂ ಮನೆಗೆ ಮರಳಿರಲಿಲ್ಲ. ಪತಿಯ ಪ್ರತೀಕ್ಷೆಯಲ್ಲಿಯೇ ಹೊತ್ತು ಉರುಳಿತು. ಆದರೂ ಏನೋ ಒಂದು ರೀತಿಯ ಮಾನಸಿಕ ಹಿಂಸೆ ...ತಾಳಲಾಗದ ಬೇಸರ. ಸೆಕೆಯ ಬೇಗೆಯೋ ಮೃತ್ಯುವಿನ ಛಾಯೆಯೋ ಅಥವಾ ಇನ್ನಾವ ಅಜ್ಞಾತ ಭಯವೋ ಎದೆಯೊಳ ದಲ್ಲಿ ತಳಮಳನೆಬ್ಬಿಸಿತ್ತು. ಎಷ್ಟೇ ಯೋಚಿಸಿದರೂ ಏನೆಂಬುದು ಅರ್ಥ ವಾಗುತ್ತಿಲ್ಲ....ಎಷ್ಟೇ ಪ್ರಯತ್ನಿಸಿದರೂ ತೊಡೆಯಲಾಗುತ್ತಿಲ್ಲ.

ಧಿಗ್. ಧಿಗ್. ಧಿಗ್, ಧಿಗ್.

ತನುಮನಗಳ ತಳಮಳದಲ್ಲಿ ಬಳಲಿ ಚಿಂತಾಮಗ್ನಳಾಗಿರುವಾಗಲೇ ಆ ಪ್ರಶಸ್ತ ಹೆಜ್ಜೆಗಳ ಸದ್ದು ಕರ್ಣಪಟಲಗಳಿಗೆ ತಾಗಿತು. ಒಡನೆ ಕಣ್ಣುಗಳು ಹಾದಿಯತ್ತ ಹೊರಳಿದುವು. ಕಾರಿಯಪ್ಪ ಪ್ರಾಕಾರದ ಗೇಟನ್ನು ಹಿಂದೆಯೇ ಮುಚ್ಚಿಕೊಂಡು ಒಳಬಂದ. ಮುಖದಲ್ಲಿ ಶಾಂತಿ ಸಮಾಧಾನಗಳು ತಾಂಡವ ವಾಡುತಿದ್ದುವು. ಒಳಬರುತ್ತಲೂ ಏಕಾಂಗಿಯಾಗಿ ಸಪ್ಪೆ ಮೋರೆಯಿಂದ ಕುಳಿತ ಮಡದಿಯನ್ನು ನೋಡಿದೊಡನೆ ತನುಮನಗಳು ಅಸಮಾಧಾನದ ಬೀಡಾದವು.

"ಒಂದಿಷ್ಟು ಅಂಗಳದಲ್ಲಿ ಅಡ್ಡಾಡಬಾರದೇ? ನಿನ್ನ ಮನಸ್ಸೇ ರೋಗಕ್ಕೆ ಮೂಲ !"

ವಿಷಯ ನಿರೂಪಣೆ ಸತ್ಯವೇ ಆಗಿದ್ದರೂ ಧ್ವನಿ ಅಪ್ರಿಯವಾಗಿತ್ತು.

ಗಂಗಮ್ಮ ಏನನ್ನೋ ಹೇಳಲು ತೊಡಲಿದಳು. ಆದರೂ ತುಟಿಗಳು ಬಿರಿಯಲಿಲ್ಲ.

ಈಚೆಗೆ ಕೆಲವು ದಿನಗಳ ಮಟ್ಟಿಗಾದರೂ ಕೊಡಗಿಗೆ ಹೋಗಿ ಬರಬೇಕೆಂಬ ಅಭಿಲಾಷೆಯನ್ನು ಪತಿಯೊಂದಿಗೆ ವ್ಯಕ್ತಪಡಿಸಿದ್ದಳು. ಆದರೆ ಅದರೆಡೆಗೆ ಗಮನ ಹರಿಸುವಷ್ಟು ಸಹನೆಯಾಗಲೀ ಸಮಯವಾಗಲೀ ಎಂದಾದರೂ ಕಾರಿಯಪ್ಪನಿಗೆ ಇದ್ದರಷ್ಟೆ ? ಆರ್ಥಿಕ ಸಮಸ್ಯೆ ಜೀವನ ಪರಿಸ್ಥಿತಿಯ ತಾಕಲಾಟಗಳ ನಡುವೆ ಮಾನಸ ಊರ್ಧ್ವಗಾಮಿತ್ವ ಇಷ್ಟಾನಿಷ್ಟಗಳನ್ನಾಗಲೀ ಘನಾಘನಗಳನ್ನಾಗಲೀ ಲಕ್ಷಿಸುತ್ತಲೇ ಇಲ್ಲ. ಹೊತ್ತು ಎಂದಿನಂತೆ ಉರುಳುತಿತ್ತು. ಕಾರಿಯಪ್ಪ ದಿನಚರಿ ವ್ಯವಹಾರದಲ್ಲಿ ಮುಳುಗುತಿದ್ದ. ಇಷ್ಟೆಲ್ಲವನ್ನೂ ಗಮನಿಸಿದ ಮೇಲೆ ಗಂಗಮ್ಮನಿಗೆ ಪುನಃ ಪ್ರಸ್ತಾಪಿಸಲು ಮನಸ್ಸಾಗಿರಲಿಲ್ಲ...

ಕಾರಿಯಪ್ಪ ಏನೋ ಒಂದು ರೀತಿಯಲ್ಲಿ ತನ್ನ ನೇರಕ್ಕೆ ಗುಡುಗಿದ,

"ಅಂಗಡಿ ಮುಚ್ಚಿ ನಿನ್ನ ಬಳಿ ಸದಾ ಕುಳಿತಿರಲಾಗುತ್ತದೆಯೆ ?"

ಗಂಗಮ್ಮ ನಾನದನ್ನು ಈಗ ಪ್ರಸ್ತಾಪಿಸಲಿಲ್ಲವಲ್ಲಾ ಎಂದುಕೊಂಡಳು. ಮನಸ್ಸು ನೋವಿನ ಬೀಡಾಗಿತ್ತು, ಯಾಂತ್ರಿಕವಾಗಿ ಎದ್ದು ಒಳ ಹೋದಳು. ನೀರುಮನೆಯಲ್ಲಿ ಸ್ನಾನಕ್ಕೆ ತಣ್ಣೀರು ಅಣಿಯಾಗಿತ್ತು. ಕಾರಿಯಪ್ಪ ಟವಲಿನೊಡನೆ ನೀರುಮನೆಗೆ ಹೋದ. ಗೃಹಿಣಿ ರಾತ್ರಿಯಡುಗೆಗೆ ಏನೇನೋ ಸಿದ್ಧಗೊಳಿಸುತಿದ್ದಾಳೆ. ಅಂದಿಂದಿಗೂ ಶರೀರ ಪ್ರಕೃತಿ ಸ್ವಲ್ಪ ಮಟ್ಟಿಗೆ ಸುಧಾರಿಸಿಕೊಂಡಿದ್ದರೂ ಆರೋಗ್ಯ ಭಾಗ್ಯಕ್ಕೆ ಅದು ಏನೇನೂ ಸಾಲದು.

ಕಾರಿಯಪ್ಪ ಬಟ್ಟೆ ತೊಟ್ಟು ಪಲ್ಲಂಕದಮೇಲೆ ಕುಳಿತುಕೊಂಡು ಮಡದಿಗೆ ಸಲಹೆ ನೀಡಿದ,

"ಈಗ ಕೊಡಗಿಗೆ ಹೋದರೇನೋ ತಣ್ಣಗಿರುತ್ತೆ. ಆದರೆ ಈಗ ಹೋಗಿ ಬರುವುದಕ್ಕಿಂತ ಪೊನ್ನಮ್ಮನ ಹೆರಿಗೆಯ ಸಮಯಕ್ಕೆ ಹೋದರೆ ಅವಳಿಗೊಂದಿಷ್ಟು ಸಹಾಯ ಮಾಡಿದಂತಾಗುತ್ತದೆ."

"ಅದಕ್ಕೇನಂತೆ, ಆಗಲೂ ಒಮ್ಮೆ ಹೋಗಿ ಬರಬಹುದು. ಮಾದುಗೆ ಹೇಳಿದರೆ ಅವನೇ ಬಂದು ಕರೆದುಕೊಂಡು ಹೋಗುತ್ತಾನೆ."

"ಎರಡು ಬಾರಿ....? ಅನಾವಶ್ಯಕ ಹಣ ಖರ್ಚು."

"........"

"ಇನ್ನು ಮೂರು ತಿಂಗಳಷ್ಟೆ ?"

ಗಂಗಮ್ಮ ಮಾತಾಡಲಿಲ್ಲ.

ಕಾರಿಯಪ್ಪ ಆಕೆಯ ಉತ್ತರವನ್ನು ಪ್ರತೀಕ್ಷಿಸಿಯೂ ಇರಲಿಲ್ಲ. ತನ್ನದೇ ಆದ ಧಾಟಿಯಲ್ಲಿ ಜೀವನ ರಥದ ಸಾರಥ್ಯ ವಹಿಸಿಕೊಂಡಿದ್ದುದರಿಂದ ಅದು ಎಂದೆಂದೂ ಯಾರ ಸಲಹೆಗೂ ಏರುಪೇರಾಗುವುದು ಸಾಧ್ಯವೂ ಇಲ್ಲ.

ಗಂಗಮ್ಮ ಸ್ವಲ್ಪ ಹೊತ್ತು ಸುಮ್ಮನಾದಳು. ಆದರೂ ಆ ಅದಮ್ಯ ಆಸೆ ಬಾಯ್ಬಿಡಿಸಿತು.

"ಈಗ ನಾವು ಹೋಗಿ ಬಂದರೆ ಆಗಿನ ಖರ್ಚು ಅವನೇ ವಹಿಸುತ್ತಾನೆ."

ಕಾರಿಯಪ್ಪ ಮಾತಾಡಲಿಲ್ಲ. ಮುಖಭಾವ ವಿರೋಧವನ್ನು ಸೂಚಿಸಿತು. ಗಂಗೂ ಒದ್ದೆ ಟವಲ್ಲಿನೊಡನೆ ಒಳಹೋದಳು. ಮನದಲ್ಲಿ ಮುಳ್ಳು ಮುರಿದಂತಾಯಿತು. ಹಿಂದುಗಡೆಯ ಕದ ಮುಚ್ಚಿರಲಿಲ್ಲ. ಅದನ್ನು ಮುಚ್ಚಲೆಂದು ಹೋದಾಗ ನಿಶಾದೇವಿ ಕಪ್ಪು ಸೆರಗನ್ನು ಭೂಮಿಯ ಮೇಲೆ ಹಾಸುತಿದ್ದಳು. ಒಂದೆರಡು ಘಳಿಗೆ ಹಾಗೇ ನಿಂತಳು. ನಕ್ಷತ್ರಗಳಾಗಲೇ ಮೈದೋರಿದ್ದುವು. ಶುಕ್ಲಪಕ್ಷದ ಪೂರ್ಣಚಂದ್ರಮ ಬಾನೇರಿದ್ದ. ಎಲ್ಲೋ ದೂರದಲ್ಲಿ ನಿಶಾಚರಗಳು ಸದ್ದು ಮಾಡುತ್ತಿವೆ. ಜೀರ್ದುಂಬಿಗಳು ಜೀರಿಡುತ್ತಿವೆ. ಸುರಸುಂದರ ಶಾಂತ ಸಮುದಾಯದಲ್ಲಿ ಸಮುದ್ರದ ಮೊರೆತವು ಕೇಳಿಬರುತ್ತಿದೆ–ಅನನ್ಯ. ಅನರ್ಗಳ ಕವಿತ್ವಧಾರೆಯಂತೆ.

ಮರುದಿನ ದಿನಚರಿ ಆರಂಭವಾಗುವಷ್ಟರಲ್ಲಿ ಹಿಂದಿನ ರಾತ್ರಿ ಕಾಣೆಯಾದ ನಿರ್ಭಾಗ್ಯಳ ಶವ ಬಾವಿಯಲ್ಲಿ ಬಿದ್ದುದು ತಿಳಿದು ಬಂತು. ಅತ್ಯಂತ ದುಃಖಕರವಾದ ಆ ವಿಚಾರ ಎಲ್ಲಿದ್ದರೂ ಏನು ಮಾಡಿದರೂ ಬಿಡದಂತೆ ಹೃದಯವನ್ನು ಕೊರೆಯುತಿತ್ತು. ಕಾರಿಯಪ್ಪ ಹೊರ ಹೋಗುವಾಗಲೇ ಅಂದ,

"ಇಂದು ಬೀಚ್ ಕಡೆ ಹೋಗೋಣ. ಸ್ವಲ್ಪ ಮುಂಚಿತವಾಗಿಯೇ ಬರುವೆ."

ಅಷ್ಟೇ ಬೇಕಾಗಿತ್ತು ಅವಳಿಗೆ. ಆ ಅಲೆಗಳ ಪ್ರಚಂಡವೇಗವನ್ನು ನೋಡುತ್ತಿದ್ದರೆ ಮನಸ್ಸಿಗೆ ಎಷ್ಟೋ ಆನಂದವಾಗುತ್ತದೆ. ದುಃಖ-ಭಾವನೆಗಳನ್ನೆಲ್ಲಾ ಮರೆತು ಬಿಡಬಹುದು ಎಂಬ ಯೋಚನೆ ಮನವನ್ನು ಮುತ್ತಿತು. “ಆಗಲಿ” ಎಂದಳು ಗಂಗೂ.

ಯಾಕೋ, ಏನೋ, ಹಗಲು ದೀರ್ಘದೀರ್ಘಾಯತವಾಗಿ ಉರುಳುತ್ತಿರುವಂತೆ ಭಾಸವಾಗುತಿತ್ತು. ದೀನ-ದುಃಖಿಗಳನ್ನು ಹಿಂಸಿಸುವ ಸಲುವಾಗಿಯೇ ದೀರ್ಘವಾಗಿದೆಯೋ ಏನೋ.... ಬೆಳಿಗ್ಗೆ ನೆರೆಮನೆಯಾಕೆಯ ಪಾರ್ಥಿವ ಶರೀರವನ್ನು ಪೋಸ್ಟ್ಮಾರ್ಟಂಗಾಗಿ ಆಸ್ಪತ್ರೆಗೆ ಒಯ್ದಿದ್ದು ಸಂಜೆಯ ಸಮಯಕ್ಕೆ ಬಿಟ್ಟುಕೊಟ್ಟಿದ್ದರು. ಆ ಹಾದಿಬೀದಿಯಲ್ಲಿ ಜನರೆಲ್ಲಾ ಮನೆಯ ಬಳಿ ನೆರೆದು ಅಂತ್ಯದರ್ಶನ ಮಾಡಿ ಅದೇ ವಿಚಾರವನ್ನು ಮೆಲುಕು ಹಾಕುತಿದ್ದರು. ಆ ಜನ-ಆ ಗಲಾಟೆ ಹೊರಹೋಗದಿದ್ದರೂ ಮನಸ್ಸಿಗೆ ಅಶಾಂತಿ ಮೂಡಿಸುತ್ತದೆ. ಬೀಚ್ ಕಡೆ ಹೋದರೆ ಸ್ವಲ್ಪ ತಣ್ಣಗಿರಬಹುದು... ನಾವು ಹಿಂದಿರುಗುವ ಹೊತ್ತಿಗೆ ಎಲ್ಲಾ ಮುಗಿದು ಹೋಗಿರುತ್ತೆ ಎಂಬ ಯೋಚನೆಯಲ್ಲಿ ನಿಮಿಷ ನಿಮಿಷಗಳು ಕರಗಿದುವು.

ಸಂಜೆಯಲ್ಲಿ ಕಾರಿಯಪ್ಪ ಹೊತ್ತಿಗೆ ಮುಂಚೆಯೇ ಮನೆಗೆ ಬಂದ. ಈ ಹಿಂದೆ ಎಷ್ಟೋ ಬಾರಿ ‘ಬೀಚಿಗೆ ಹೋಗೋಣ’ ಎಂದಿದ್ದರೂ ಸಮಯಕ್ಕೆ, ಸರಿಯಾಗಿ ಹಿಂದಿರುಗಲಾರದೆ ತಪ್ಪಿಹೋಗುತ್ತಿದ್ದುದುಂಟು. ಆದರೆ ಈ ಸಲ ಹಾಗಾಗಲಿಲ್ಲ. ಗಂಗೂ ಮಡಿಯುಡುಪು ಧರಿಸಿ ಅಣಿಯಾದಳು.

ಕುಂಡದಲ್ಲಿದ್ದ ಗುಲಾಬಿ ಗಿಡದಲ್ಲಿ ಪುಷ್ಪಗಳು ಅರಳಿದ್ದುವು. ರಮಣೀಯವಾದ ಪುಷ್ಪರೇಣು ಭ್ರಮಂತ ಭ್ರಮರಗಳ ಕ್ಷತದಿಂದ ಬಳಲಿ ಮಲಗಿವೆ. ಎಸಳುಗಳೂ ನಲುಗಿದ್ದುವು. ಒಂದೆರಡು ಘಳಿಗೆ ಭಾವಾವಿಷ್ಟಳಾಗಿ ನೋಡುತ್ತ ನಿಂತಳು ಗಂಗಮ್ಮ. ಚಿತ್ತ ಮೆಲ್ಲನೆ ಪುಷ್ಪದಿಂದ ಜಾರಿ ತನ್ನೆಡೆಗೆ ಹರಿಯಿತು. ಬಾಳಿನಗತ್ತರಿಯಲ್ಲಿ ಸಿಲುಕಿ ಲೌಕಿಕ ವ್ಯವಹಾರದಲ್ಲಿ ನಶಿಸಿ ಹೋಗುವ ಈ ನಾರೀ ಜನ್ಮಕ್ಕೆ ಎಂದಾದರೂ ಆತ್ಮಶಾಂತಿ ದೊರೆಯುವುದುಂಟೇ? ಎಂಬ ಪ್ರಶ್ನೆ ಮನೋರಂಗದಲ್ಲಿ ಇದ್ದಕ್ಕಿದ್ದಂತೆಯೆ ಉದ್ಭವಿಸಿತು. ಯೋಚನೆಯ ಆಳಕ್ಕೆ ಮುಳುಗಿ ಸ್ವಲ್ಪ ಹೊತ್ತು ಮೈಮರೆತಳೇನೋ....ಹೃದಯದ ಹೊಂಗಿಂಡಿಯಲ್ಲಿ ಕರುಣಾಕಾತರ ದ್ರವ ವಸರಿತು. ಏನೋ ಒಂದು ಬಗೆಯಲ್ಲಿ

ಯೋಚಿಸಿದರೂ ಅರ್ಥವಾಗದ ಅವ್ಯಕ್ತ ಕಳವಳ . ಗಂಭೀರ ಭಯ ದೇಹದಾದ್ಯಂತ ಮುತ್ತಿತು. ಹೃದಯ ಮೃದಂಗ ಉನ್ಮಾದ ಶಟ್ಚರಣಗಳಿಂದ ಉದ್ಘೋಷಿಸಿತು, ಡಬ್, ಡಬ್. ಡಬ್. ಡಬ್.

ಕ್ಷಣಕ್ಷಣಗಳು ಉರುಳಿದುವು. ನಿಮಿಷ ನಿಮಿಷಗಳು ಕರಗಿದುವು. ಆಕೆ ಮಂತ್ರ ಮುಗ್ಧಳಂತೆ ಹಾಗೇ ನಿಂತಿದ್ದಾಳೆ.

ಕಾರಿಯಪ್ಪ ಸಂಜೆಯುಡುಪು ತೊಟ್ಟು ಹೊರಬಂದ. ಅಲ್ಲಿ ಮೈಮರೆತು ನಿಂತ ಮಡದಿಯನ್ನು ನೋಡಿ ಹಾಸ್ಯಭರಿತವಾದ ವಾಣಿಯಲ್ಲಿ "ಏನು?... ಹೂವನ್ನಷ್ಟು ನೋಡುತಿದ್ದಿ ? ಜನಿಸಿದ ಮೊಮ್ಮಗುವಿನ ನೆನಪೋ ? ಅಥವಾ ಜನಿಸಲಿರುವ ಮೊಮ್ಮಗುವಿನ ಚಿಂತೆಯೋ ? ಏನು ಕತೆ ?"

ಗಂಗಮ್ಮ ಹುಬ್ಬೆತ್ತಿ ನೋಡಿದಳು. ಪಾಂಡುರವದನ ನಸುಗೆಂಪು ತಳೆಯಿತು. ಹಾಸ್ಯರಸವನ್ನು ಸವಿದು ಎಳೆ ನಗುವನ್ನು ಸೂಸಿ "ಇದು ಸ್ವಾನುಭವವೋ, ಕಾಲ್ಪನಿಕವೋ ?" ಎಂದಳು ಗಂಗೂ.

"ಸ್ವಾನುಭವ ನಿನ್ನದು, ಕಲ್ಪನೆ ನನ್ನದು !"

ಒಡನೆ ಇಬ್ಬರ ಮುಖದಲ್ಲೂ ಮುಗುಳು ನಗೆ ಮೂಡಿತು.

ಕಾರಿಯಪ್ಪ ಮೆಟ್ಟಲಿನಿಂದಿಳಿದ. ಗಂಗಮ್ಮ ಕದ ಮುಚ್ಚಿ ಹಿಂಬಾಲಿಸಿದಳು ಹತ್ತು ಹದಿನೈದು ನಿಮಿಷಗಳಲ್ಲಿ ಹಾದಿ ಕಳೆಯಿತು. ಶುಭ್ರವಾದ ಮರಳಿನ ತಡಿಯನ್ನು ದಾಟಿ ಸಾಗರ ತೀರವನ್ನು ಸೇರಿದಳು. ಆ ದೇಶೋವಿಶಾಲವಾದ ಮಹಾ ಜಲರಾಶಿ. ಚಂಡ ಪ್ರಚಂಡ ಅಲೆಗಳಲ್ಲಿ ಹನಿ ಮುತ್ತುಗಳ ರಾಶಿ ರಾಶಿ ! ಮಹಾ ಸಾಗರದ ನೀಲ ತಡಿಯ ಮೇಲೆ ತುಂಬಿ ಹರಡಿದ ಅತ್ಯಂತ ರಮಣೀಯವಾದ ಚಟುಲವೀಚಿ ಅರುಣಕಾಂತಿಯಿಂದ ಅರುಣಾಯಿತವಾಗಿ ಶೃಂಗಾರರಸವನ್ನು ಎಲ್ಲೆಡೆ ಹಬ್ಬಿಸುತ್ತಿರುವಂತೆ ಭಾಸವಾಗುತ್ತಿತ್ತು. ಎವೆಯಿಕ್ಕದೆ ನೋಡುತ್ತ ಸಾಗರ ತಡಿಯಲ್ಲಿ ಮಂಡಿಸಿದರು—ದಂಪತಿಗಳು. ಉಷ್ಣ ಪುಷ್ಟ ವಾಯು ಜಲತರಂಗಗಳಲ್ಲಿ ತರಂಗಿತವಾಗಿ ತಂಪಿನ ಮಳೆಗರೆಯುತಿತ್ತು. ಸೆಕೆಯ ಬೇಗೆಯಲ್ಲಿ ಬೇಯುತಿದ್ದ ತನುಮನಗಳಿಗೆ ತಂಪಿನಾಗರ ಹಾಯೆನಿಸಿತು. ಜುಳು ಜುಳು ಮಂಜುಳ ಜಲಗಾನ....ಪಕ್ಷಿಕೋಟಿಯ ಚಿಲಿಪಿಲಿ ಗಾನ ವಿಹಾರ...ಅಸಂಖ್ಯ ಜಗಜಂಗುಳಿಯ ಮಾತಿನ ಮೊರೆತ....ಜಹಜುಗಳ ಗಜಿಬಿಜಿ—ಗಲಿಬಿಲಿ.

ಸಾಗರದಂಚಿನಲ್ಲಿ ಅನೇಕ ಜಹಜುಗಳು ನಿಂತಿದ್ದುವು. ಅಲ್ಲಲ್ಲೇ ಸ್ವಲ್ಪ ದೂರ ಅಡ್ಡಾಡಿ ಬರಲು ಜಹಜುಗಳನ್ನು ಹತ್ತುತಿದ್ದರು ಜನ.

"ನಾವೂ ಹತ್ತು ಮೈಲಿ ಹೋಗಿ ಬರೋಣ. ಇಲ್ಲಿ ಕುಳಿತಿರುವುದಕ್ಕಿಂತ ತಣ್ಣಗೆ ಹೋಗಿಬರುವುದು ಲೇಸು." ಎಂದ ಕಾರಿಯಪ್ಪ. ಎದೆಯಾಳದಿಂದ ಹರಿದು ಬಂದ ಧ್ವನಿ ಯಾವುದೋ ಅನ್ಯಲೋಕದ ಕರೆಯಂತೆ ಕೇಳಿಸಿತು. ತದೇಕಚಿತ್ತದಿಂದ ಸಾಗರಲೀಲೆಯಲ್ಲಿ ನಿಮಗ್ನಳಾದ ಮಡದಿಗೆ. ಒಂದೇರಡು ಘಳಿಗೆ ಉತ್ತರ ಬಾರದಿರಲು ಕಾರಿಯಪ್ಪ ಪುನಃ ಪ್ರಶ್ನಿಸಿದ. ಮಂದಮೃದಲ ಭಾವದಿಂದ ಗಂಗೂ ಅನುಮೋದಿಸಿದಳು. ಕಾರಿಯಪ್ಪ ಎದ್ದು ಹೋಗಿ ಟಿಕೆಟ್ ತೆಗೆದುಕೊಂಡ. ಅವಳು ಹಿಂಬಾಲಿಸಿದಳು. ಸಣ್ಣ ಜಹಜಿನ ತುಂಬ ನೆರೆದಿದ್ದರು ಜನ. ಕೊನೆಯ ಸೀಟುಗಳೆರಡು ಕಾರಿಯಪ್ಪ ದಂಪತಿಗಳಿಂದ ಭರ್ತಿಯಾದುವು.

ಕ್ಹೂ ಊೂಊೂ !

ಜಹಜು ಸಿಳ್ಳೆ ಹಾಕಿ ಹೊರಟಿತು. ಎಡಬಲಗಳಲ್ಲಿ ಜರ್‍ರನೆ ಚಿಮ್ಮುವ ನೀರು ಅಲೆಗಳೊಡನೆ ಕೇಳೀ ಕಲಹ ನಡೆಸಿ ರಾಗವನ್ನು ಇಮ್ಮಡಿಯಲ್ಲಿ ರಂಜಿಸಿ ಆನಂದವನ್ನು ನೂರ್ಮಡಿಯಲ್ಲಿ ಆನಂದಿತ ಗೊಳಿಸುವಂತಿತ್ತು. ಬೃಹತ್ ಅಲೆಗಳನ್ನೇರಿ ಇಳಿಯುತಿತ್ತು ಜಹಜು. ಸುತ್ತುಮುತ್ತಿನ ಜಲಸಂಪತ್ತು ವಿದ್ಯುಚ್ಛಕ್ತಿಯ ದೀಪಗಳ ಬೆಳಕಿನಲ್ಲಿ ರಜತವಾರಿಯಂತೆ ಕಂಗೊಳಿಸುವಾಗ ನಾರೀಸುಲಭ ಸುಕುಮಾರ ಭಾವನೆ ಲುಪ್ತವಾಯಿತು. ಮತ್ತೇರಿ ಘನವೆತ್ತ ತನುಮನಗಳನ್ನು ಅತ್ತಲೇ ತೆತ್ತು ಕುಳಿತುಕೊಂಡಳು. ಶಬ್ದಾಯಮಾನ ಶೋಭೆ ಕರ್ಣಪಟಲಗಳನ್ನು ಮುತ್ತಿಡುತಿತ್ತು.

ದೂರ....ದೂರ....ದೂರ...ತೇಲಿಹೋಯಿತು ಜಹಜು.

ದೂರ ದೂರ ಸೀಮಾಕ್ಷೇತ್ರದಲ್ಲಿ ದಿನಮಣಿ ಅಸ್ತಂಗತನಾದ. ಗೌರವ ಪ್ರತಿಷ್ಠೆಗಳು ಕಳೆದುಹೋದಂತೆ ಭುವಿ ಮ್ಲಾನಮುಖಿಯಾದಳು.

ಅನಂತರ, ಅನಂತರ...

ದುರದೃಷ್ಟ ಜಹಜು ಒಂದು ದುರ್ಮುಹೂರ್ತದಲ್ಲಿ ಮಹಾಸಾಗರದ ಪಾಲಾದುದು ಶಿವ ಮಾತ್ರ ಬಲ್ಲ. ತೀರದಲ್ಲಿ ತೀವ್ರತರವಾಗಿ ಮೂಡಿದ ಗಲಿಬಿಲಿ ಕೊಡಗಿಗೆ ಮರುದಿನ ದುಃಖಾಂತ ಸುದ್ದಿಯನ್ನು ನೀಡಿತೋ ಏನೋ...

೧೮

ಉಜ್ವಲ ಸೂರ್ಯ ನೆತ್ತಿಯ ಮೇಲೆ ಉರಿಯುತಿದ್ದ.

ಉಷ್ಣೋಷ್ಣವಾಯು ಬೆಂಕಿಯ ಮಳೆಗರೆಯುತಿತ್ತು.

ಬೆಟ್ಟದ ತಪ್ಪಲಿನಲ್ಲಿದ್ದ ಪಚ್ಚ ಪೌಢಿಮೆ ಧೂಳೀಧೂಸರಿತವಾಗಿ ದಾವಾನಲದಿಂದ ಸುಟ್ಟು ಕಂಗೆಟ್ಟು ಬಾಡಿ ಶ್ರೀಹೀನವಾಗಿತ್ತು. ಗ್ರೀಷ್ಮ ಋತುವಿನ ರುದ್ರ ತಾಂಡವ ನೃತ್ಯದ ತಾನ ವಿಲಯಕ್ಕೆ ಸಿಲುಕಿ ಉದುರಿದ ದರುಗಲೆಗಳ ರಾಶಿರಾಶಿ...ಎಲ್ಲಿಂದ ಎಲ್ಲಿಯವರೆವಿಗೂ ಶೇಷಾವಶೇಷ....

ಮಹಾತ್ಮಾ ಗಾಂಧೀಜಿಯವರ ಅಸಹಕಾರ ಆಂದೋಳನ ಭಾರತದಾದ್ಯಂತ ಕಿಚ್ಚು ಹಚ್ಚಿದರೆ ದೇಶವಿದೇಶಗಳಲ್ಲಿ ಎರಡನೇ ಮಹಾಯುದ್ಧಕ್ಕೆ ಅದ್ಭುತ ರಂಗ ಸಜ್ಜಾಗುತಿತ್ತು. ಶಸ್ತ್ರಾಸ್ತ್ರಗಳ ಬೃಹದ್ ಕೋಠಿಗಳಲ್ಲಿ ಶಸ್ತ್ರಗಳ ಝಣತ್ಕಾರ ಎದೆ ಬಿರಿಯುವಂತೆ ಕೇಳಿಸುತಿತ್ತು.

ದುಂಡುಮೇಜು ಪರಿಷತ್ತಿನ ನಿರ್ಣಯ, ಉನ್ನತ ಸ್ಥಾನಗಳಲ್ಲಿನ ಚರ್ಚೆ, ರಾಜ ಮಹಾರಾಜರುಗಳ ಉದ್ಧಟತನ, ದೀನ ದಲಿತರ ಚೀರಾಟ, ರಾಜಕಾರಣಿಗಳ ಬಂಡಾಯ, ಹೆಂಗಳೆಯರ ನವ್ಯಧೈರ್ಯ ಒಂದೊಂದಕ್ಕೂ ಕೊಂಡಿ ಹೆಣೆದಿದ್ದು, ಕಿವಿಗಳು ಕಿವುಡಾಗುವಷ್ಟು ಚರ್ಚೆಗಳು ನಡೆಯುತ್ತವೆ. ಅರ್ಥವೋ ಅನರ್ಥವೋ ಕೊನೆಗೆ ವ್ಯರ್ಥವೋ ಯಾವುದೋ ಒಂದು ರೀತಿಯಲ್ಲಿ ಅವು ಅಳಿಸಿಹೋಗುತ್ತವೆ.. ಮೇಲಾಗಿ ರಾಜಕೀಯ ಖೈದಿಗಳ ಸ್ಥಿತಿಗತಿ....ಜನ ಜೀವನದ ಬವಣೆ. ನರಕಯಾತನೆಯಲ್ಲೂ ನರನಾಡಿಗಳಲ್ಲಿ ಹರಿದಾಡುವ ಸ್ವಾತಂತ್ರ್ಯ ಝರಿ...ಎಂದೆಂದಿಗೂ ತುಂಡರಿಯದ ಆಶಾವಾದ... ಹುಚ್ಚೆದ್ದು ಭುಗಿಲೇಳುವ ಕಿಚ್ಚು...ಯೋಚಿಸಿದರೂ ಬಗೆ ಹರಿಯದ ಕಿಂಕರ್ತವ್ಯತೆ....ಮನಸ್ಸರೋವರವನ್ನು ಕಲಕಿ ಬಗ್ಗಡಗೊಳಿಸುವುದು.

ಅಶಾಂತಿ...ಕಿಚ್ಚು....

ಇಂತಹ ಸಂದರ್ಭದಲ್ಲಿ, ಸಿಯಾಲ್ ಕೋಟ್ ವಲಯದಲ್ಲಿದ್ದ ಶಾದೀಪುರ ಠಾಣ್ಯದಲ್ಲಿ ಬೀಡು ಬಿಟ್ಟಿದ್ದ ಇಪ್ಪತ್ತಮೂರನೆ ರೆಜಿಮೆಂಟು ಎರಡನೇ ಮಹಾಯುದ್ಧಕ್ಕೆ ಆರಿಸಲ್ಪಟ್ಟಿತು. ಆರೋಗ್ಯ-ಶೌರ್ಯ-ಶಕ್ತಿ ಸಾಮರ್ಥ್ಯಗಳ ದ್ಯೋತಕವಾದ ಆ ರೆಜಿಮೆಂಟು ಧೈರ್ಯ ಪ್ರತಾಪಗಳಿಗೆ ಅನೇಕ ಬಾರಿ ಬಂಗಾರದ ಮೆಡಲುಗಳನ್ನು ಪಡೆದು ಹೆಸರುವಾಸಿಯಾಗಿದ್ದುದರಿಂದ ಬಹಳ ಮಟ್ಟಿಗೆ ಅದನ್ನೆ ಕಳುಹಿಸಲ್ಪಡಬಹುದೆಂಬ ಊಹೆ ಎಲ್ಲರಿಗಿತ್ತು. ಅದರಂತೆಯೇ ಅದು ಸಜ್ಜಾಗಿಯೂ ಇತ್ತು.

ಮುದ್ದಪ್ಪ ಹೊತ್ತಿಗೆ ಮುಂಚೆ ಎದ್ದಾಗ ನೊಟ್ಟಮೊದಲು ಹೊಮ್ಮುತ್ತಿದ್ದ ಶಾಂತಿ ಪಾಠ "ವಂದೇಮಾತರಂ" ಗೀತೆಯ ಪಠಣ. ತಂಗಾಳಿಯ ತರಂಗತರಂಗಗಳಲ್ಲಿ ಅಲೆಅಲೆಯಾಗಿ ಮೇಲೇರುವ ರಾಗ-ಭಾವ-ಮಾಧುರ್ಯಗಳಿಗೆ ಮಾರುವೋದ ಮನಸ್ಸು ಮಂತ್ರಮುಗ್ಧ ಫಣಿಯಂತಾಗುವುದು.... ಹೃದಯ ಆನಂದದಾಗರವಾಗುವುದು.

ಪೂವಿ ಸುಶ್ರಾವ್ಯವಾಗಿ ದನಿಗೂಡಿಸುವಳು.

ರಾಷ್ಟ್ರದಲ್ಲಿ ಕಿಚ್ಚು ಹೊಗೆಯಾಡುತಿತ್ತು. ಎಲ್ಲಿ ಯಾವಾಗ ಭುಗಿಲೇಳುತ್ತದೆ ಎಂಬುದನ್ನು ಊಹಿಸುವುದು ಕಷ್ಟ. ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಎಲ್ಲೆಲ್ಲೂ ಅನಿಶ್ಚಿತತೆ ಕಾಣಿಸುತಿತ್ತು. ಅವ್ಯವಹಾರಿಕ ಪ್ರವೃತ್ತಿ ಬೆಳೆಯ ತೊಡಗಿದೆ.... ಏನೋ ಒಂದು ಬಗೆಯ ಅಸಮಾಧಾನ ...ಇನ್ನೇನೋ ಒಂದು ಬಗೆಯ ಉತ್ಸಾಹ....ಭಯ–ಭೀತಿ–ದಾರಿದ್ರ್ಯಗಳಿಗೂ ಕೊರತೆ ಇರಲಿಲ್ಲ.

ಎರಡನೇ ಮಹಾಯುದ್ಧಕ್ಕೆ ಕಳುಹಿಸಲ್ಪಡುವ ತುಕಡಿಗಳ ಸಜ್ಜು ನಡೆಯುತ್ತಿರುವಾಗಲೆ ಅವರವರ ಸಂಸಾರಗಳನ್ನು ಆಯಾಯಾ ಊರುಗಳಿಗೆ ಕಳುಹಿಸುವ ಏರ್ಪಾಡು ಮಾಡಲಾಗಿತ್ತು. ಮುದ್ದಪ್ಪ ಮನೆ ಬಿಡುವಾಗ ಇಂದು ಸ್ವಲ್ಪ ಮುಂಚೆಯೇ ಹಿಂದಿರುಗುವುದಾಗಿ ಹೇಳಿಹೋಗಿದ್ದ. ಆ ಮಾತು ಮನಃಪ್ರಾಣಗಳಿಗೆ ಎಷ್ಟು ಸಮಾಧಾನ ನೀಡಿತ್ತೋ, ಘಳಿಗೆ ಘಳಿಗೆಗೂ ನೋಟ ಹಾದಿಯ ಕಡೆ ಹರಿಯುವಾಗ ಪಶ್ಚಿಮ ಪ್ರಾಚೀರದವರೆಗೂ ಹರಿದ ಅಂಕುಡೊಂಕಿನ ಹಾದಿ ಮಾತ್ರ ಕಣ್ಣಿಗೆ ಬೀಳಬೇಕೆ ? ತಲೆಗೆ ಅದೇ ತಾನೇ ಸ್ನಾನ ಮಾಡಿದ್ದಾಳೆ. ತಲೆಗೂದಲಿನಲ್ಲಿ ನೀರಿನ ಹನಿಗಳು ಹನಿಹನಿಯಾಗಿ ತೊಟ್ಟಿಕ್ಕುತ್ತಿವೆ. ಬಹುಶಃ ಕೂದಲನ್ನು ಒರಸಿಕೊಳ್ಳುವಷ್ಟು ವ್ಯವಧಾನ

ವಿರಲಿಲ್ಲವೇನೋ...ಹಾಗೇ ಹೊರಬಂದು ಹೊಂಬಿಸಿಲಿಗೆ ಮೈಯೊಡ್ಡಿ, ನೋಟ ವನ್ನು ಹಾದಿಯ ಕಡೆ ಹರಿಯಬಿಟ್ಟಳು-ಪೂವಿ. ಒಡಲ ಸಂಕಟವೆಲ್ಲ ಹನಿಹನಿ ಯಾಗಿ ಮಿಂಚಿದುವು.ಹೃದಯದ ನೆತ್ತರೂ ಹೆಪ್ಪುಗಟ್ಟುತ್ತಿರುವಂತೆ ಯಾವುದೋ ಅನಿರ್ವಚನೀಯವಾದ ವಿಚಿತ್ರ ಜಡಿಮೆ ಮನೋವ್ಯಾಪ್ತವಾಗುತಿತ್ತು.ಯೋಚಿ ಸಿದರೂ ಅರ್ಥವಾಗದು. ಹಾಗೇ ಮರವಟ್ಟಂತೆ ನಿಂತು ಎಷ್ಟು ಹೊತ್ತು ಉರುಳಿತೋ. ದಿನಮಣಿ ನಡುನೆತ್ತಿಗೇರಿದ. ಒದ್ದೆಗೂದಲು ಆರಿ ಗರಿಗರಿ ಯಾಗಿ ನೆತ್ತಿಯುರಿಯತೊಡಗಿತು. ಇನ್ನು ತಾಳಲಾಗದೆ ಪೂವಿ ಒಳ ಹೋದಳು. ಚಿಟ್ಟಿ ನೆರೆಯ ಮನೆಯ ಬಾಲಕರೊಂದಿಗೆ ಆಟವಾಡಿಕೊಂಡಿದ್ದ. ನಿಶ್ಶಬ್ದ ಶಾಂತ ಸಮುದಾಯದಲ್ಲಿ ಎಳ್ಳುಬೀಳಿಸಿದರೂ ಕೇಳಿಸುವಂತಿದೆ. ಮುದ್ದಪ್ಪ ಬೇಗನೆ ಬರಲಿಲ್ಲವೇಕೆಂಬುದು ಕೊನೆಗೂ ಅರ್ಥವಾಗಲಿಲ್ಲ. ಹೊತ್ತು ಒಂದರ ಅಂಚನ್ನು ದಾಟಿ ಮುಂದುವರಿಯಿತು.ಹೊಟ್ಟೆಯೊಂದುಕಡೆ ಹಸಿಯುತಿತ್ತು... ಎದೆಯ ಬೇಗೆಯೊಂದು ಕಡೆ ಬೇಯುತಿತ್ತು.

ನೆರೆ ಮನೆಗೆ ಹೋಗಿದ್ದ ಮಗುವನ್ನು ಕರೆತಂದು ಉಣಿಸಿ ಮಲಗಿಸಿದರೂ ಮುದ್ದಪ್ಪನ ಸುಳಿವಿಲ್ಲ. ಇನ್ನೂ ಸ್ವಲ್ಪಹೊತ್ತು ಕಾದು ನೋಡುವ ಉದ್ದೇಶ ದಿಂದ ಯಾವುದೋ ಪುಸ್ತಕವನ್ನು ಕೈಗೆ ತೆಗೆದುಕೊಂಡಳು. ಆದರೆ ಮನ ವನ್ನು ಅದರಲ್ಲಿ ತೊಡಗಿಸಲು ಸಾಧ್ಯವಾಗಲಿಲ್ಲ. ದೀನಾದೀನಳಂತೆ ಕದಲದೆ ಕುಳಿತಳು. ಚಿಟ್ಟಿ ಹಾಸಿಗೆಯ ಮೇಲೆ ಹಾಯಾಗಿ ನಿದ್ದೆ ಹೋಗಿದ್ದ. ತನು ಮನಗಳು ಬಳಲಿ ವಿಶ್ರಾಂತಿಯನ್ನು ಬಯಸಿದುವು. ಎದ್ದು ಹೊರಹೋಗಿ ಮತ್ತೊಮ್ಮೆ ಹಾದಿಯ ಕಡೆ ನೋಟ ಹರಿಸಿದಳು. ಅಂಕುಡೊಂಕಿನ ಕಾಲು ಹಾದಿ ಚೂಪಗೆ ಕಣ್ಣಿಗೆ ಚುಚ್ಚುವಂತೆ ತೋರಿತು. ಅತ್ಯಂತ ಕಾತರತೆಯಿಂದ ಪ್ರತೀಕ್ಷಿತ ನಯನಗಳು ದೃಷ್ಟಿ ತಗ್ಗಿಸಿದುವು. ಸುಡು ಬಿಸಿಲ ಬೇಗೆಯಲ್ಲಿ ಅಂಗಳ ಪ್ರದೇಶ ನಿರ್ಮಾನುಷವಾಗಿತ್ತು. ಪಕ್ಷಿಗಳು ಮರದ ತಂಪನ್ನಾಶ್ರಯಿಸಿ ದ್ದುವು. ಹಾಗೇ ಕದಮುಚ್ಚಿ ನಾಲ್ಕುತುತ್ತು ಉಂಡು ಹಾಸಿಗೆಯಮೇಲೆ ಅಡ್ಡಾ ದಳು. ಹಸಿದು ಬಳಲಿದ್ದ ಮೈ ನಿದ್ದೆಗೆ ಬಲಿಯಾಯಿತು.

ಹಸುರು...ಹಸುರು....ಹಸುರು....

ದೃಷ್ಟಿಯ ಕಕ್ಷೆಯಲ್ಲಿ ಹಸುರುಕ್ಕುತ್ತಿದೆ ವನಶ್ರೀ !

ವರ್ಣಮಯ ಇಂದೀವರಮಾಲೆಯಂತೆ ಬೆಳ್ದಳಿರು ಹೊಂದಳಿರು ಕೆಂದಳಿರು ವನದೇಶವನ್ನು ಅಲಂಕರಿಸಿವೆ. ನೋಡಿದಷ್ಟೂ ಕಣ್ದಣಿಯದು. ಹಾಗೇ ನೋಡು ನೋಡುತ್ತ ಮುಂದುವರಿದಳು. ಮುಂದೆ...ಮುಂದೆ ಅದೆಷ್ಟು ದೂರ ಹಾದಿ ಸಾಗಿತೋ....ಹೆಜ್ಜೆ ಇರಿಸಿದಷ್ಟೂ ಅಡವಿ ದಟ್ಟವಾಗುತ್ತಿದೆ ಎಲ್ಲಿ ಹುಡುಕಿದರೂ ಹಾದಿಯೇ ಸಿಗದು. ಅತ್ತಿತ್ತ ಕೈಚಾಚಿ ನಿಂತ ಗಿಡಗೆಂಟೆಗಳು ಮುಖ ಮೈಗಳಿಗೆ ತಾಗುತ್ತಿವೆ. ಈಗೀಗ ಏನೋ ಒಂದು ರೀತಿಯ ಕಳವಳ.... ಭಯ....ಶಂಕೆ....

ಇದಾವ ಸ್ಥಳ ? ಇಲ್ಲಿಗೆ ಹೇಗೆ ಬಂದೆ? ಹಾದಿಯೆಲ್ಲಿದೆ? ಮನೆ ಸೇರುವ ಬಗೆಯೆಂತು ? ಚಿಂತೆ ಹತ್ತಾಗಿ-ಹಲವಾಗಿ ಮನವನ್ನು ಮುತ್ತಿತು. ಸಿಕ್ಕಿ ಸಿಕ್ಕಿದೆಡೆ ಹೆಜ್ಜೆಗಳು ಮುನ್ನುಗ್ಗುತ್ತಿವೆ. ಭಯಭೀತಿಯ ವಿಭ್ರಮ ವೀಚಿಯಲ್ಲಿ ಮಾನಸಿಕ ಹತೋಟಿಯನ್ನು ಕಳೆದುಕೊಳ್ಳುತ್ತಿರುವಂತೆ ಉದ್ಭಾಸಿತವಾಯಿತು. ಮನೋವೇಗದಲ್ಲಿ ಗಿಡಗೆಂಟೆಗಳನ್ನೂ ಲೆಕ್ಕಿಸದೆ ಹೆಜ್ಜೆ ಹಾಕತೊಡಗಿದಳು. ಎಷ್ಟು ಹುಡುಕಿದರೂ ಒಂದು ಕಾಲುಹಾದಿಯಾದರೂ ಗೋಚರಿಸದು. ಹೊತ್ತು ಉರುಳುತ್ತಿದೆ. ಸೂರ್ಯ ಇಳಿಮುಖನಾಗುತಿದ್ದಾನೆ.

ಹಾಯ್ ! ಏನುಗತಿ ?

ಹೃದಯಮೃದಂಗ ಈಗಲೀಗ ಬಿರಿಯುವಂತೆ ಉದ್ಘೋಷಿಸುತಿತ್ತು. ವಿಭ್ರಮ ವಿಘಾತವನ್ನು ತಡೆಯಲಾಗದೆ ವಕ್ಷಃಸ್ಥಳವನ್ನು ಎರಡೂ ಕೈಗಳಿಂದ ಅದುಮಿ ಹಿಡಿದುಕೊಂಡಳು—ಪ್ರಥಮ ಮೇಘಘರ್ಜನೆಯನ್ನು ಕೇಳುತ್ತಿರುವ ಮುಗ್ಧ ಶಿಶುವಿನಂತೆ. ಬೆಕ್ಕಸಬೆರಗಾಗಿ ನೋಟದ ಕಕ್ಷೆಯವರೆಗೂ ನೋಡಿತು ನೋಟ...ಮಾನಸಿಕ ಎಲ್ಲೆಯವರೆಗೂ ಚಿಂತಿಸಿತು ಚಿತ್ತ....

ಎಲ್ಲಿಂದ ಎಲ್ಲಿಯವರೆಗೂ ಗಿಡ ಮರ ಮುಳ್ಳು ಕಡ್ಡಿಗಳ ಹಸುರ್ಗಾಡು. ಮೈ ರೋಮರೋಮವೂ ಕದಂಬ ಕೇಸರದಂತೆ ಉದ್ಭಿನ್ನವಾಯಿತು. ಕೂಗಿ ಕರೆಯೋಣವೆಂದರೆ ತುಟಿಗಳು ಬಿರಿಯವು ..ಉಸಿರು ಹೊರಡದು. ಮೈ ಒಂದೇಸಮನೆ ಬೆವರುತಿತ್ತು. ಗಂಟಲಾರಿ ಹೃನ್ನಾಳವೇ ತುಂಡುಗಡಿದಂತೆ ಸಹಿಸಲಸಾಧ್ಯವಾದ ತಳಮಳ—ಎದೆಯಲ್ಲಿ. ಅದ್ಭುತ ಆಕಾಶವೇ ಕಳಚಿ ಬಿದ್ದಂತೆ ಅತೀವ ಕಳವಳ-ಮನದಲ್ಲಿ.

ಈಗೀಗ ತನಗಿನ್ನು ಉಳಿಗಾಲವಿಲ್ಲ. ವಿಧಿ ವಿನಾ ಕಾರಣ ಇಲ್ಲಿಗೆ ಎಳೆ ತಂದಿಲ್ಲ....ಎಂಬ ಯೋಚನೆ. ದುಃಖ ಉಕ್ಕುಕ್ಕಿ ಬರತೊಡಗಿತು. ಜೊತೆಗೆ ಭಗವನ್ನಾಮ ಸ್ಮರಣೆಯೂ ನಡೆಯಿತು. ತುಟಿಗಳು ಮತ್ತೆಮತ್ತೆ ಪಠಿಸು ತ್ತಲೇ ಇವೇ.ಆದರೂ ಹಾದಿಯ ನೆಲೆ ಹತ್ತದು; ಕದಡಿದ ಮನಸ್ಸಿಗೆ ಸ್ವಾಸ್ಥ್ಯ ಲಭಿಸದು. ಹುಸುರಿನ ಚೆಲುವಿಗೆ ಹಾತೊರೆಯುತಿದ್ದ ಜೀವಕ್ಕೆ ಈಗ ಈ ಹಸುರಿಂದ ಪಾರಾದರೆ ಸಾಕು ಎಂಬ ಗೀಳು. ಉರುಳುವ ಕ್ಷಣಕ್ಷಣಗಳೂ ಮುಳ್ಳಿನಂತೆ ಚುಚ್ಚುತ್ತಿವೆ, ನರನಾಡಿಗಳು ಕಟ್ ಕಟ್ಟನೆ ತುಂಡುಗಡಿಯು ತ್ತಿರುವಂತೆ ಭಾಸವಾಯಿತು. ವ್ಯಾಪ್ತಿಗೆ ಮೀರಿ ಮಿಡಿಯುವ ಹೃದಯುವನ್ನು ಅದುಮಿ ಹಿಡಿದುಕೊಂಡೇ ಮುಂದುವರಿದಳು ಪೂವಿ. ಆ ದಟ್ಟವಾದ ಹಸುರಿನ ಸಂತೆಯಲ್ಲಿ ನುಗ್ಗುವುದೂ ಸಹ ಕಷ್ಟವೇ.

ಎಳ್ಳು ಬೀರಿದರೂ ಕೇಳಿಸುವಂತಹ ನಿಶ್ಶಬ್ದ. ನಿರ್ಮಾನುಷ ಪ್ರದೇಶ. ಪಶು ಪಕ್ಷಿಗಳ ಸೊಲ್ಲೂ ಸಹ ಕೇಳಿಬರುತ್ತಿಲ್ಲ. ಅತ್ತಿತ್ತ ಹರೆಗೈಚಾಚಿ ನಿಂತಿ ರುವ ಗಿಡಗೆಂಟೆಗಳು ತಾಗಿ ಮೈಕೈಗಳು ತರಚಿ ಅಲ್ಲಲ್ಲಿ ನೆತ್ತರಿನ ಹನಿಗಳು ಮೊಳೆತವು. ನಡೆಯುವ ಭರದಲ್ಲಿ ತಪ್ಪು ಹೆಜ್ಜೆಯಿಟ್ಟು ಹೊಂಡಕ್ಕೆ ಮುಗ್ಗರಿಸಿ "ಅಯ್ಯೋ !" ಎಂದು ಚೀರಿದಳು ಹೃದಯ ಬಿರಿಯುವಂತೆ.

ಆಕ್ಷಣದಲ್ಲಿ ಮುದ್ದಪ್ಪ ಧಾವಿಸಿ ಬಂದು, ಬಿದ್ದ ಮಡದಿಯುನ್ನು ಹಿಡಿ ದೆತ್ತಿ "ಏನಾಯಿತು ಪೂವಿ? ಹೇಗೆ ಬಿದ್ದೆ ?" ಎಂದ ಕಾತರಭರಿತ ಕಂಠದಿಂದ.

"ಅಯ್ಯೋ, ನನ್ನನ್ನು ಬಿಟ್ಟು ಎಲ್ಲಿ ಹೋಗಿದ್ದಿರಿ ? ಈ ಕಗ್ಗಾಡಿನಲ್ಲಿ ಅಲೆದಲೆದು ನಾನೆಷ್ಟು ಕಷ್ಟಪಟ್ಟೆ...ಸಧ್ಯ ಬಂದಿರಲ್ಲಾ." ಏದುತ್ತಲೇ ನುಡಿ ದಳು ಮಡದಿ.

"ಎಲ್ಲೂ ಹೋಗಿರಲಿಲ್ಲ ..ಇಲ್ಲೇ ಇದ್ದೆ. ನೀನೇಕೆ ಆತುರಪಟ್ಟೆ ?"

"ಇದುವರೆವಿಗೂ ಕಾಣಿಸಲಿಲ್ಲವಲ್ಲಾ, ನನಗೆಷ್ಟು ಭಯವಾಯಿತು ಗೊತ್ತೆ ?" ಎನ್ನುತ್ತ ಆತನ ಹೃದಯದ ಮೇಲೊರಗಿದಳು ಪೂವಿ.

ಮುದ್ದಪ್ಪ ಸಂತೈಸುತಿದ್ದರೂ ಬಿಗಿದ ತೋಳ ಬಂಧನದೊಳಗೆ ಆಕೆ ಮುಸುಮುಸು ಅತ್ತಳು-ಭಯಭ್ರಾಂತ ಬಾಲಿಕೆಯಂತೆ.

"ಬಾ . ಅಳುವುದಕ್ಕೂ ಈಗ ಸಮಯವಿಲ್ಲ. ಹಾದಿ ಸೇರಬೇಕಾದರೆ ನಾವು ಬಹಳ ದೂರ ನಡೆಯಬೇಕು."

ಮುದ್ದಪ್ಪ ಅವಳ ಕೈ ಹಿಡಿದುಕೊಂಡು ಆ ದುರ್ಗಮವಾದ ಹಾದಿಯಲ್ಲಿ ಮುನ್ನಡೆಯ ಹತ್ತಿದ. ದಿಶೆದಿಶೆಯಲ್ಲೂ ತಂಗಾಳಿ ತೀಡುತಿತ್ತು. ಶಾಂತ–ಶ್ರಾಂತ ಸೂರ್ಯ ದೂರ್ಘ ಪಯಣದಿಂದ ದಣಿದು ಕಡಲ ತಡಿಗೆ ಬಿದ್ದಾಗ ಸಿಡಿದು ಹಾರಿದ ಚಂದನದಂತೆ ದಿಗಂತದಲ್ಲಿ ಅರುಣರಾಗ ಕೋಲುಕೋಲಾಗಿ ಹರಿದಿತ್ತು. ಸೂರ್ಯ ತಂಗುತ್ತಲೂ ಮುದ್ದಪ್ಪ ಅವಸರಿಸಿದ "ಇನ್ನು ಬೇಗ ಕತ್ತಲಾಗುತ್ತದೆ . ಚುರುಕಾಗಿ ಹೆಜ್ಜೆ ಹಾಕು."

"ಇದಕ್ಕಿಂತಲೂ ಚುರುಕಾಗಿ ನಾನು ಹೆಜ್ಜೆ ಹಾಕಲಾರೆ. ನಾನಾಗಲೇ ಬಹಳ ದಣಿದಿರುವೆ." ನೋಲುಸಿರು ಬಿಡುತ್ತ ತುಂಬ ನಿಶ್ಶಕ್ತಳಾದಂತೆ ಉತ್ತರಿಸಿದಳು-ಪೂವಿ.

ಹೊತ್ತು ಓಡುತಿತ್ತು. ಚಂದನರಾಗ ಅಳಿಯುವುದೇ ತಡ ನಿಶಾರಾಣಿ ಮುಂದೆ ಮುಂದೆ ಹೆಜ್ಜೆ ಹಾಕತೊಡಗಿದ್ದಾಳೆ. ಕೈಯ್ಯಲ್ಲೊಂದು ಕೈ ದೀವಿಗೆಯೂ ಇಲ್ಲ. ನಡೆದು ನಡೆದು ಕಾಲುಗಳು ಸೋತು ಹೋಗಿವೆ. ಇನ್ನು ಭರಿಸಲಾರೆನೋ ಎನ್ನುತಿದೆ–ಜೀವ. ಆದರೆ ವಿಧಿಯಿಲ್ಲ...ಹೇಗಾದರೂ ಪಯಣಿಸಲೇಬೇಕು...

ಹಾದಿಗಡ್ಡಲಾಗಿದ್ದ ಸಣ್ಣ ಅಗಳೊಂದನ್ನು ಹಾರಿ ಆಚೆಯ ದಡದ ಮೇಲೆ ನಿಂತು, ಮುದ್ದಪ್ಪ ಅಗಳನ್ನು ಪರೀಕ್ಷಿಸುತ್ತ ಅಂದ "ಹಾರುವುದು ನಿನ್ನಿಂದಾಗದು- ಅಗಳು ಕಡಿದಾಗಿಲ್ಲ ಇಳಿದು ಹತ್ತುವುದು ಸುಲಭ. ಮೆಲ್ಲಗೆ ಇಳಿದು ಹತ್ತಿಬಿಡು."

ಪೂವಿ ಸ್ವಲ್ಪ ಆತುರ ಪಟ್ಟಳೇನೋ...ಹತ್ತುವಾಗ ಕಾಲು ಜಾರಿ ಚೀರಿಕೊಂಡಳು "ಅಯ್ಯೋ, ಬಿದ್ದೆ !"

"ಇಲ್ಲ, ಭಯ ಪಡಬೇಡ, ನಾನಿರುವೆ !" ತೆಕ್ಕನೆ ತೋಳು ಬಿಗಿಹಿಡಿದ.

ಅರೆ ! ಅದಾರ ಧ್ವನಿ ?

ಆ ಬಲಿಷ್ಠ ತೋಳುಗಳಾಶ್ರಯ ಪಡೆದು ದಡವನ್ನು ಹತ್ತಿದ ಮೇಲೆ ಸಂತೋಷಾಶ್ಚರ್ಯಗಳಿಂದ ಹುಬ್ಬೆತ್ತಿ ನೋಡಿದಳು ಪೂವಿ. ಕಣ್ಣುಗಳಲ್ಲಿ

ಆಶ್ಚರ್ಯಭಾವ ಮಿಂಚುತಿತ್ತು. ಕೈಹಸ್ತವನ್ನು ಬಿಗಿಯಾಗಿ ಹಿಡಿದು ನಿಂತ ಮಾದು ಪ್ರಸನ್ನ ಮನೋಹರ ಮುಖಿಯಾಗಿ "ತುಂಬ ಶ್ರಮವಾಯಿತೇ ?" ಎನ್ನುತಿದ್ದಾನೆ !

ಎಂತಹ ಆಶ್ಚರ್ಯ ?

"ಭಯಪಡಬೇಡ...ನಾನಿರುವೆ !"

ಆ ಮುಹೂರ್ತದಲ್ಲಿ ಇನ್ನೇನೂ ಹೇಳಲಾಗದಷ್ಟು ಬಳಲಿ ಬಂದಿತ್ತು ಶರೀರ. ಆತನ ಎದೆಯ ಮೇಲೆ ಒರಗಿದಳು ಪೂವಿ.

ಕಟ ಕಟ ಕಟ ಕಟ !

"ಪೂವೀ ಪೂವೀ !"

"ಆ್ಞ....!"

ಪೂವಿ ಹಾಸಿಗೆಯಿಂದೆದ್ದು ಕದ ತೆರೆದಳು. ಬಾಗಿಲಲ್ಲಿ ಮುದ್ದಪ್ಪ ನಿಂತಿದ್ದ. ಮುಖ ಬಾಡಿ ಬಳಲಿ ಬೆಂಡಾಗಿತ್ತು. ಆಯಾಸವೇ ಮೈವೆತ್ತಿ ಬಂದಂತೆ ಒಳ ಬಂದ. ಅತ್ಯಂತ ಉತ್ಸಾಹದಿಂದ ಆರಂಭವಾದ ದಿನಚರಿ ಅತುಲ ಆಯಾಸ ದಿಂದ ಕೊನೆಗೊಂಡಿತು. ಪೂವಿ ಅದೇ ಯೋಚನೆಯಲ್ಲಿ ಮಂಚದ ಮೇಲೆ ಕುಳಿತಳು. ಕನಸಿನ ಚಿತ್ರ ಚಿತ್ತಭಿತ್ತಿಯಲ್ಲಿ ಸುಳಿಸುಳಿದಳಿಯಿತು....ಈಗ ಆಗುತ್ತಿರುವುದೂ ಸಹ ಹಾಗೆಯೆ, ಎನಿಸಿದಾಗ ಕಣ್ಣುಗಳಲ್ಲಿ ಕಂಬನಿಗಳು ಬೆಳ್ಳಿಯ ಗೆರೆಯಂತೆ ಮಿನುಗಿದುವು.

ಮುದ್ದಪ್ಪ ಮುಖ ಮಜ್ಜನ ಮಾಡಿ ಹೊರಬಂದ. ಮುಖದಮೇಲೆ ತಣ್ಣೀರು ಧಾರೆಧಾರೆಯಾಗಿಳಿಯುತಿತ್ತು....ಪೂವಿ ಟವಲ್ಲು ಮುಂದೆ ಹಿಡಿದಾಗ ಅಂದ,

"ಆಗಲೇ ಕೊಡಗಿಗೆ ಹೋಗಿ ಬರದಿದ್ದುದು ತಪ್ಪಾಯ್ತು. ಒಮ್ಮೆ ಹೋಗಿ ದ್ದಿದ್ದರೆ ಅಪ್ಪ ಅಮ್ಮನನ್ನು ನೋಡಬಹುದಾಗಿತ್ತು. ಆ ಭಾಗ್ಯವನ್ನು ಕಳೆದು ಕೊಂಡೆವು. ಈಗ ಅವ್ವನನ್ನಾದರೂ ನೋಡಿಕೊಂಡು ಬರೋಣವೆಂದರೆ ಅಷ್ಟಕ್ಕೂ ಅವಕಾಶ ಸಿಗುತ್ತಿಲ್ಲ. ಮುಂದೆ ನನ್ನ ಹಣೆಯಲ್ಲಿ ಇನ್ನೇನು ಬರೆ ದಿದೆಯೋ," ಕಂಠಸ್ವನ ನೀರಸವಾಗಿತ್ತು.

ಆ ನುಡಿ ಕರ್ಣಪಟಲಗಳ ಮೇಲೆ ಧ್ವನಿಸಿದಾಗ ಕಣ್ಣಂಚಿನಲ್ಲಿ ಹರಿ ದಾಡುತಿದ್ದ ಹನಿಗಳು ಕೆಳಗಡೆ ಜಾರಿದವು. ಆಕಡೆ ತಿರುಗಿ ಕಾಣದಂತೆ

ಒರಸಿಕೊಂಡಳು ಪೂವಿ–ತನ್ನ ಮನೋ ದೌರ್ಬಲ್ಯವನ್ನು ತೋರಿಕೊಳ್ಳಲಿಚ್ಛಿಸದೆ. ಮುದ್ದಪ್ಪ ಗಮನವನ್ನು ಎಲ್ಲೋ ಹರಿಯಬಿಟ್ಟಿದ್ದ. ತಲೆಯಲ್ಲಿ ತುಂಬಿಕೊಂಡ ಹಲವಾರು ಯೋಚನೆಗಳು ಕಲಸುಮೇಲೋಗರವಾಗಿದ್ದುವು. ಯಾಂತ್ರಿಕವಾದ ಕೈಕಾಲುಗಳ ಚಾಲನೆಯಲ್ಲಿ ಮುಖವನ್ನು ಒರಸಿ ಟವಲ್ಲನ್ನು ಆರಲು ಹಾಕಿ ಪಲ್ಲಂಕದಮೇಲೆ ವಿಶ್ರಮಿಸಿದ. ಮೈ ಆಯಾಸದ ಬೀಡಾಗಿದ್ದರೂ ಕಣ್ಣುಗಳಲ್ಲಿ ಕಾಂತಿಯುಕ್ಕುತಿತ್ತು. ಅನಿರೀಕ್ಷಿತವಾಗಿ ನಿಸ್ತೇಜವಾದ ಮಡದಿಯ ಮುಖವನ್ನು ನೋಡಿ ಅಂದ,

"ಸೂರ್ಯೋದಯವೇ ಶಾಶ್ವತವೆಂದು ಭ್ರಮಿಸಬಹುದಾದ ವಯಸ್ಸಲ್ಲ ನಿನ್ನದು ಪೂವಿ!"

ಅವಳು ಮಾತಾಡಲಿಲ್ಲ. ತುಟಿಗಳಲ್ಲಿ ಊಹೆಗೂ ನಿಲುಕದಂತಹ ನೀರಸ ನಗು ಮಿನುಗಿ ಮಾಯವಾಯಿತು.

ಮುದ್ದಪ್ಪ ಮಂದಹಾಸ ಬೀರಿದ.

೧೯

...ತೇನೆ ಹಕ್ಕಿಯ ಚೀಂಕೃತ ಚೀೕೕೕಂಕಾರ !

...ವನವನಾಂತರಗಳಲ್ಲಿ ಸಹಸ್ರ ಸಹಸ್ರ ಭ್ರಮರಾವಳಿಗಳ ಝಂಕೃತ ಝೇಂಕಾರ !

ಸಮುದ್ರದೆಡೆಗೆ ರಭಸದಿಂದ ಧಾವಿಸುವ ಕಾವೇರಿ ಪ್ರವಾಹದಲ್ಲಿ ತರಂಗಾಯಿತವಾಗುವ ಅನರಾಗಮಯ ಮಧುರ ಧ್ವನಿಯು ಕರ್ಣಪಟಲಗಳಿಗೊರೆಯುತಿತ್ತು. ಸುಖದುಃಖಗಳ ತಾನವಿತಾನದಲ್ಲಿ ದಿನಗಳು ಹೇಗೆ ಬರುತ್ತವೆಯೋ ಹಾಗೆಯೇ ಉರುಳುತ್ತವೆ.

ಕಾರಿಯಪ್ಪ ದಂಪತಿಗಳು ಇಹಲೋಕವನ್ನು ಬಿಟ್ಟು ಆಗಲೇ ನಾಲ್ಕು ತಿಂಗಳು ಸಂದುವು. ಆ ನತದೃಷ್ಟ ಹಡಗಿನ ದುರಂತದಲ್ಲಿ ಇತರ ಕೆಲವು ಮಂದಿಯ ಪಾರ್ಥಿವ ಶರೀರಗಳು ದೊರೆತುವಾದರೂ ಇವರ ಶವಗಳು ದೊರೆಯಲಿಲ್ಲ. ಬಂಧುಮಿತ್ರರು ವಾರಗಟ್ಟಲೆ ಶೋಧ ನಡೆಸಿ ಸಪ್ಪೆಮೋರೆಯಿಂದ ಕಂಬನಿಯ ಕಾಣಿಕೆಯನ್ನು ಕಡಲಿಗರ್ಪಿಸಿದರು. ಅದಂತೂ ಈಗ ಹಳೆಯ ಕತೆಯಾಗುತ್ತಿದೆ. ನಾಲ್ಕು ಮಂದಿ ಕೂಡಿದಾಗ, ನೆನಹು ಮೂಡಿದಾಗ ಪುನಃ ಪುನಃ ಅದೇ ವಿಚಾರ ಚರ್ವಣಚರ್ವಿತವಾಗಿ ಒಂದೆರಡು ಕಂಬನಿಗಳು ಜಾರಿದರೂ ಅಂತಿಮವಾಗಿ 'ವಿಧಿವಿಲಾಸ' ಎಂದುಕೊಂಡು ಸುಮ್ಮನಾಗುತಿದ್ದರು–ಅಂದಿಂದಿಗೂ ನಡೆದು ಬಂದ ಲೋಕರೂಢಿಯಂತೆ.

ಅದೊಂದು ಸುಂದರ ಮುಂಜಾನೆ.

ಎಲ್ಲೋ ಕಣ್ಣಿಗೆ ಕಾಣದೆಡೆ ಕುಳಿತು ಕೋಗಿಲೆ ಹಾಡುತಿತ್ತು.

ಸ್ವಾಮಿನಿ ಹೊರ ಬಾಗಿಲಿಗೆ ಬಂದಳು. ಆಕೆಯ ಅಭಿಶಪ್ತ ಹೆಜ್ಜೆಗಳು ತುಂಬ ಅಶಕ್ತವಾದಂತೆ ಮಂದಮಂದವಾಗಿವೆ. ಕಣ್ಣುಗಳು ಯಾರದೋ ಪ್ರತೀಕ್ಷೆಯಲ್ಲಿರುವಂತೆ ಹಾದಿಯ ಕಡೆ ಹರಿದುವು. ನೋಟದ ಕಕ್ಷೆಯವರೆಗೂ ಹರಿದಿದೆ ಆ ಅಂಕುಡೊಂಕಿನ ಹಾದಿ. ಮಾದು ಮಾತ್ರ ಕಣ್ಣಿಗೆ ಬೀಳಲಿಲ್ಲ.

ತಿಂಗಳಿಡೀ ಎಡೆಬಿಡದೆ ಸುರಿದಜಡಿಮಳೆ ನಾಲ್ಕು ದಿನಗಳಿಂದ ಬಿಡುವುಕೊಟ್ಟಿದ್ದು ವಾತಾವರಣ ಅತ್ಯಂತ ಶುಭ್ರವಾಗಿ ಹೊಂಬಿಸಿಲಿಗೆ ಮೈಯೊಡ್ಡುವಷ್ಟು ಹಿತವಾಗಿತ್ತು, ಆ ಸುತ್ತಮುತ್ತಿನ ಸೊಗದ ಸೊಂಪು. ಆದರೆ ...ಆದರೆ.... ಈ ಮನೋಹರ ಜಗತ್ತಿನಲ್ಲಿ ಅದೆಂತಹ ದುಃಖ ಪ್ರವಾಹ ಹರಿಯುತ್ತಿದೆಯೋ ದೇವರಿಗೇ ಗೊತ್ತು, ಫೇನ–ಬುದ್ಬುದದಂತೆ ಆಕ್ಷಣ ನಡೆದುಹೋಗುವ ಸೂಕ್ಷ್ಮಾತಿಸೂಕ್ಷ್ಮವಾದ ವ್ಯವಹಾರವನ್ನು ಅರ್ಥಮಾಡಿಕೊಳ್ಳುವುದೂ ಸಹ ಕಷ್ಟವೇ ..

ಪೊನ್ನಮ್ಮ ಹೆತ್ತು ತಿಂಗಳಾಗಿತ್ತು. ಹೆಣ್ಣುಮಗು 'ಗಂಗಮ್ಮ'ನನ್ನೇ ಹೋಲುತ್ತಿದೆಯೆಂದು ಕಾವೇರಿಯ ಗಂಭೀರ ಆಶಾಭಾವ. ಅಂತಲೇ ಆಕೆ 'ಗಂಗಮ್ಮ' ಎಂದು ಮಗುವಿಗೆ ಹೆಸರಿಸಿದಳು. ಗಂಗಮ್ಮನೊಂದಿಗೆ ಸಮಿಾಪ ವರ್ತಿಯಾಗಿದ್ದು ಬಹಳವಾಗಿ ಹೊಂದಿಕೊಂಡಿದ್ದುದರಿಂದ ಆ ನಾಮದೇಯ ಹಿತಕರವಾಗಿತ್ತು–ಪೊನ್ನಮ್ಮನಿಗೆ.

ಇನ್ನಷ್ಟು ಹೊತ್ತಿನೊಳಗಾಗಿ ಪೊನ್ನಮ್ಮ ಹೊರಗಡೆ ತಲೆಹಾಕಿದಳು.

"ಇಷ್ಟರೊಳಗಾಗಿ ಮಾದು ಬರಬೇಕಾಗಿತ್ತು . ಏಕೆ ಬರಲಿಲ್ಲವೋ ?"

"ಇಂದು ಬಸ್ಸು ತಡವಾಗಿರಬಹುದು. ಇಲ್ಲದಿದ್ದಲ್ಲಿ ಇಷ್ಟರೊಳಗಾಗಿ ಬರುತ್ತಿದ್ದರು." ಎಂದಳು ಪೊನ್ನು. ಮುಖಮುದ್ರೆ ಜನನಿಯ ಚಿಂತೆಯನ್ನು ಗ್ರಹಿಸಿದಂತಿತ್ತು. ಅಂತಲೇ ಸಮಾಧಾನ ಹೇಳಿದ್ದಳೇನೋ....

ಒಂದು ಘಳಿಗೆ ಮೌನಮಾವರಿಸಿತು. ಸ್ವಲ್ಪಹೊತ್ತು ಹೆಜ್ಜೆ ಕೀಳದೆ ನಿಶ್ಚೇಷ್ಟಳಂತೆ ಅಲ್ಲೇ ನಿಂತಳು ಕಾವೇರಿ. ತಲೆ ಹಲವಾರು ಯೋಚನೆಗಳ ಬೀಡಾಗಿತ್ತು. ಭಾರವಾದ ಧ್ವನಿಯಲ್ಲಿ ಎದೆಯ ಆಶಯವನ್ನು ಹೊರ ಹಾಕಿ ದಳು-"ಪೂವಿ ಮಗುವಿನೊಂದಿಗೆ ಸುಖವಾಗಿ ಊರು ಮುಟ್ಟಿದರೆ ಸಾಕು. ನನ ಗವಳದೇ ಯೋಚನೆಯಾಗಿದೆ, ರಾತ್ರಿ ನಿದ್ರೆ ಸಹ ಬರುವುದಿಲ್ಲ. ಗರ್ಭಿಣಿ ಸ್ತ್ರೀ, ಪಯಣ ಎಷ್ಟು ಕಷ್ಟವಾಗಿರಬೇಡ ? ಸಹಾಯಕರೂ ಇಲ್ಲ; ದೂರ ಪಯಣಬೇರೆ, ದೇವರೇ ಕಾಪಾಡಬೇಕು."

ಆ ಕೊನೆಯ ಮಾತು ಹೊರಬಿದ್ದಾಗ ಅಕ್ಷಿಪಟಲದ ಮೇಲೆ ಮಗ ಸೊಸೆ ಸುಳಿದಳಿದರು. 'ದೇವರು' ಎಂಬುವವ ಇದ್ದಿದ್ದರೆ ಕಾಪಾಡುತ್ತಿರಲಿ ಲ್ಲವೇ ಎಂಬ ಯೋಚನೆಯು ಮೂಡಿ ಬಂದಾಗ ಮುಖಬಿಂಬದಲ್ಲಿ ವ್ಯಸನದ

ಕಪ್ಪು ಛಾಯೆ ಸುಳಿಸುಳಿದಳಿಯಿತು. ಈ ದುರಂತಗಳೆಲ್ಲ ಹೇಳಿ-ಕೇಳಿ ಬರುವುದಿಲ್ಲ. ಅವಳಿಗಾಗಲೇ ಎಂಟು ತಿಂಗಳು ತುಂಬಿದೆ. ಇನ್ನೂ ಒಂದೆರಡು ತಿಂಗಳು ಹಿಂದೆಯೇ ಇಲ್ಲಿಗೆ ಬಂದಿದ್ದರೆ ಚೆನ್ನಾಗಿತ್ತು. ಈಗ ದಾರಿಯಲ್ಲಿ ತೊಂದರೆಗೆ ಸಿಕ್ಕಿದ್ದರೆ ಏನುಗತಿ ? ಎಂಬ ಯೋಚನೆಯೂ ಬಂತು.

"ಹೀಗಾಗುತ್ತೆ ಅಂತ ಯಾರು ತಿಳಿದಿದ್ದರು ಪೊನ್ನೂ ? ಇರುವ ಗಂಜಿಯುಂಡು ಜೀವ ಹಿಡಿದಿದ್ದರೂ ಸಾಕಾಗಿತ್ತು. ಈ ವಿಧಿಯ ಸಂಚು ಯಾರಿಗೂ ಹೊಳೆಯುವುದಿಲ್ಲ. ನಾವು ಏನೋ ಒಂದು ಬಯಸುತ್ತೇವೆ....ಅದೇನೋ ಆಗುತ್ತದೆ. ನನಗಂತೂ ಸಾಕಾಗಿದೆ ಈ ಜನ್ಮ. ಎಲ್ಲರನ್ನೂ ಸುಸ್ಥಿತಿಯಲ್ಲಿ ನೋಡಿ ಆನಂದದಿಂದ ಕಣ್ಮುಚ್ಚಬೇಕು ಎಂದುಕೊಂಡಿದ್ದೆ ಆದರೆ ನನ್ನನ್ನೆ ಕೈಕಾಲು ಮುರಿದು ಮೂಲೆಗೆ ಕೂಡಿಸಿತು ವಿಧಿ."

ಅಕ್ಷರ ಅಕ್ಷರವೂ ಶೋಕವ್ಯಾಕುಲತೆಯಿಂದ ಹರಿದು ಬಂದುವು.

ಆ ಸಂಕಟದ ಮಡುವಿನಲ್ಲಿ ಮುಳುಗೆದ್ದ ಪೊನ್ನಮ್ಮ ಸ್ವಲ್ಪ ಹೊತ್ತು ಸುಮ್ಮನಿದ್ದು ಪರಿತಾಪದಿಂದ ನುಡಿದಳು "ಆಗುವುದಂತೂ ಆಗಿಹೋಯಿತು; ಇದ್ದವರಿಗಾದರೂ ದೈವರಕ್ಷೆ ಇದ್ದರೆ ಸಾಕು."

"ಮೂವರು ಮೂರು ಕಡೆ ನೆಲಸಿ ಎಷ್ಟು ಸಂಕಟ ಮಾಡಿತ್ತೋ... ನಾನಾಗಲೇ ಕಣ್ಣು ಮುಚ್ಚಿದ್ದರೆ ಎಷ್ಟೋನೆಮ್ಮದಿಯಿರುತಿತ್ತು... ಈಗ ಸತ್ತರೂ ಸ್ವರ್ಗ ಸಿಗುವುದಿಲ್ಲ." ನುಡಿಯುತ್ತಿದ್ದಂತೆಯೇ ಕಣ್ಣುಗಳಂಚಿನಲ್ಲಿ ಫಳಕ್ಕನೆ ನೀರಾಡಿತು. ಕಾವೇರಿ ಹಾದಿಯ ಕಡೆ ನೋಡುತ್ತ ನಿಂತಳು.

ಗಂಟೆ ಒಂಭತ್ತರ ಅಂಚನ್ನು ದಾಟಿತು. ದೂರದ ಅಂಕುಡೊಂಕಿನ ಹಾದಿಯಲ್ಲಿ ಮಾದು ಕಾಣಿಸಿಕೊಂಡ. ಪೂವಿ ಬರುವ ಬಗ್ಗೆ ಏನಾದರೂ ಸಮಾಚಾರ ತಿಳಿಯಬಹುದೆಂದು ಕೊಡಗಿಗೆ ಪಯಣಿಸಿದ್ದ. ಮುದ್ದಪ್ಪ ಬರೆದ ಕಾಗದದಲ್ಲಿ ಇತರ ಸೈನಿಕರ ಸಂಸಾರದೊಂದಿಗೆ ಮಡದಿಯನ್ನು ಕಳುಹಿಸುವುದಾಗಿಯೂ ಅವಳು ಬೆಂಗಳೂರಿಗೆ ತಲುಪುವ ಸಮಯ ನಿಗದಿಯಾದ ಮೇಲೆ ಬರೆಯುವುದಾಗಿಯೂ ಬರೆದಿದ್ದು ಆಗಲೇ ಎಂಟು ಹತ್ತು ದಿನಗಳು ಸಂದಿದ್ದುವು. ಅನಂತರ ಅವನಿಂದ ಕಾಗದ ಬಂದಿರಲಿಲ್ಲವಾದುದರಿಂದ ಎಲ್ಲರಿಗೂ ಎಲ್ಲಿಲ್ಲದ ಕಳವಳ.

ಏತನ್ಮಧ್ಯೆ

ರಾಷ್ಟ್ರದಾದ್ಯಂತ ಕಾಂಗ್ರೆಸ್ಸಿನ ಚಳವಳಿ ಅಂಬರಚೆತ್ತರಕ್ಕೆ ಭುಗಿಲೆದ್ದಿತು' ಸರಕಾರದ ಯಂತ್ರ ಹದಗೆಟ್ಟುದುದರಿಂದ ಸಾರಿಗೆ ಸೌಕರ್ಯ ರೆಕ್ಕೆ ಮುರಿದು ಕೊಂಡಿತು. ಬಸ್ಸು ರೈಲುಗಳು ಬಂದರೆ ಬಂದುವು; ಇಲ್ಲದಿದ್ದರೆ ಇಲ್ಲ. ಎಲ್ಲಿಂದ ಎಲ್ಲಿಯುವರೆಗೂ ಅನಿಶ್ಚಿತತೆಯ ಕರಾಳ ರೂಪ. ಯಾವುದೇ ವಿಚಾರ ವನ್ನು ಹೀಗೇ ಎಂದು ನಿರ್ಣಯಿಸುವುದು ಕಷ್ಟ. ಸಂಕಟ–ಕಳವಳ–ಕಾತರ ಗಳಿಂದ ಮಾತೃ ಹೃದಯಸಂಪುಟ ತುಂಬಿ ಹೋಗಿತ್ತು. ಇನ್ನು ಬಿರಿಯುವು ದೊಂದು ಬಾಕಿ. ಈ ಸಂದರ್ಭದಲ್ಲಿ ಬರೆಯಬಲ್ಲವರು ಯಾರಾದರೂ ವ್ಯಕ್ತಿ ಚಿತ್ರವನ್ನು ಗಮನಿಸಿದ್ದಿದ್ದರೆ ಎಷ್ಟೊಂದು ಗಂಭೀರ ವರ್ಣಮಯ ವರ್ಣನೆ ಯಲ್ಲಿ ಆ ಮೂಕ ಸಂಕಟ ಹೊಮ್ಮುತಿತ್ತೋ....

ಪೊನ್ನಮ್ಮ ಮಾತಾಡಲಿಲ್ಲ. ಕಣ್ಣು ಕೆನ್ನೆಗಳಲ್ಲಿ ಚಂದನದ ಲೇಪವೊರೆ ದಂತೆ ರಂಗೊರೆಯಿತು. ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಬಗೆಹರಿಯದ ಸಮಸ್ಯೆ ಗಳು ಹಿಂಡು ಹಿಂಡೇ ಗಮಿಸಿ, ಬೃಹದ್ ಜಾಲವನ್ನು ನಿರ್ಮಿಸುತ್ತಿರುವಾಗ.... ಹೇಗಾದರೂ ಒಂದೆರಡು ಸಮಾಧಾನದ ಮಾತುಗಳನ್ನು ಹೇಳಲು ಪ್ರಯತ್ನಿ ಸಿದರೂ ಬಿಗಿದತುಟಿಗಳು ಬಿರಿಯಲಿಲ್ಲ.ದೂರದಲ್ಲಿ ಕಾಣಿಸಿಕೊಂಡ ಮಾದಯ್ಯನ ಬಳ್ಳಿದೇಹ .. ಮೂರು ದಿನದ ಹಿಂದೆ ಬಿರುಗಾಳಿಗೆ ಸಿಕ್ಕಿ ಹಾದಿಗಡ್ಡಲಾಗಿ ಧರಾಶಾಯಿಯಾದ ಹೆಮ್ಮರದ ಬುಡದಮೇಲೆ ಹತ್ತಿ ಇಳಿದು ಸಾಲು ಮೆಟ್ಟಿಲು ಗಳನ್ನೇರಿತು ...ಬೇಲಿ ಸಾಲಿನಲ್ಲಿ ಮೈ ದೋರಿದಾಗಲೇ ಕೇಳಿದಳು ಸ್ವಾಮಿನಿ,

"ಕಾಗದ ಬಂದಿದೆಯೇ ?"

"ಇಲ್ಲ....ಅಲ್ಲಿಗೂ ಬಂದಿಲ್ಲ. ಇನ್ನು ನಾವು ಕಾಯುತ್ತ ಕೂಡುವುದು ಸರಿಯಲ್ಲ; ಬೆಂಗಳೂರಿಗೆ ಹೋಗಿ ಏನೇನಾಗಿದೆಯೋ ನೋಡುವೆ. ಹೊತ್ತು ಹೊತ್ತಿಗೆ ನಿಲ್ದಾಣದಲ್ಲಿ ಕಾಯುವುದು ಲೇಸು."

"ಅದಾದರೂ ಮಾಡು" ಎಂದಳು ಕಾವೇರಿ. ನುಡಿಯೊಂದಿಗೆ ಬಿಸು ಸುಯ್ಲು ಹೊಮ್ಮಿತು.

"ಇಂದಿನ ಪರಿಸ್ಥಿತಿಯಲ್ಲಿ ಅಲ್ಲಿ ಬರೆದ ಕಾಗದ ಇಲ್ಲಿಯುವರೆಗೆ ಸುಸೂತ್ರ ವಾಗಿ ಬಂದು ತಲುಪುತ್ತದೆ ಎಂದು ನಂಬುವುದು ಕಷ್ಟ. ಅವಳನ್ನು ಕರೆತಂದು ಮನೆ ಮುಟ್ಟಿಸುವವರೆಗೆ ಮನಶ್ಶಾಂತಿ ಬರುವುದಿಲ್ಲ. ಏನಾದರಾಗಲಿ ಇಂದು ಹೊರಟುಬಿಡುವೆ."

"ಅದೇ ವಾಸಿ ..."

"ಹೋಗಿ, ಏನಾಗಿದೆಯೆಂಬುದನ್ನು ತಿಳಿದು ನಿಮಗೆ ಬರೆಯುವೆ. ಅಷ್ಟ ರೊಳಗಾಗಿ ಮುದ್ದಪ್ಪನಿಂದ ಕಾಗದ ಬಂದರೆ ನನ್ನ ವಿಳಾಸಕ್ಕೆ ರವಾನಿಸಿ ಬಿಡಿ.... ಒಂದುವೇಳೆ ಪೂವಿ ಬಂದಿದ್ದಲ್ಲಿ ನಾಳೆಯೇ ಹಿಂದಿರುಗುವೆ."

"ಆಗಲಿ."

ಪೊನ್ನಮ್ಮ ಸಮ್ಮತಿ ಸೂಚಕವಾಗಿ ತಲೆಯಾಡಿಸಿದಳು. ಮಾದು ಪ್ರಾತ ರ್ವಿಧಿಗಳನ್ನು ಮುಗಿಸುವಷ್ಟರಲ್ಲಿ ಬಟ್ಟೆ ಬರೆಗಳ ಜೋಡಣೆಯಾಗಿತ್ತು. ಒಂದು ಬಿಸಿ ಚಹವನ್ನು ಹೀರಿ ಪೋಸ್ಟಾಫೀಸಿನ ಕಡೆ ಹೊರಟ. ಅವನು ಮಾರುಗಾಲು ಹಾಕುವುದನ್ನು ಇಬ್ಬರೂ ಜಗಲಿಯಲ್ಲಿ ನಿಂತು ನಿಟ್ಟಿಸಿದರು. ಒಂದೆರಡು ಫರ್ಲಾಂಗ್ ಹಾದಿ ಅವನಿಗೆ ಲೆಖ್ಖವೇ ಇಲ್ಲ. ಹತ್ತು-ಹದಿನೈದು ನಿಮಿಷ ಗಳೊಳಗಾಗಿ ಹಿಂದಿರುಗಿಯಾಗಿತ್ತು. ಕಾಗದ ಇಲ್ಲವೇ ಇಲ್ಲ.

"ಏನು ಗತಿಯಾಗಿದೆಯೋ...."

"ಜೀವಕ್ಕಿಂತ ಯಾವುದೂ ಮಿಗಿಲಲ್ಲ. ನೀವೀಗಲೇ ಹೊರಡಿ." ಎಂದಳು ಪೊನ್ನಮ್ಮ.

"ಕಷ್ಟಬಂದರೆ ಹೀಗೆಯೇ. ಒಂದರ ಮೇಲೊಂದು ಬರುತ್ತಲೇ ಇರು ತ್ತವೆ...." ಎನ್ನುತ್ತ ತೇವವಾದ ಕಣ್ಣುಗಳನ್ನು ತೀಡಿಕೊಂಡಳು ಕಾವೇರಿ. ತಡೆಹಿಡಿದರೂ ಎದೆಯ ಸಂಕಟ ಮುನ್ನುಗ್ಗಿ ಬರುತ್ತಲೇ ಇತ್ತು—ನಯನಕೋ ರಕಗಳಲ್ಲಿ ಕಂಬನಿಯ ಸಣ್ಣ ರೇಖೆ ಜ್ವಲಿಸುವಂತೆ.

ಹೊರಡುವ ಆತುರದಲ್ಲಿ ಮಾದು ಅಂದ,

"ಬೆಳಿಗ್ಗೆ ಜಂಬೂರು ಶೇಷುಗೆ ಹೇಳಿದ್ದೇನೆ. ಈಗ ಹೋಗುವಾಗ ತಾಳಗಟ್ಟ ಬೆಳ್ಳಿಯಪ್ಪನಿಗೂ ಹೇಳಿ ಹೋಗುವೆ. ನಾನು ಬರುವವರೆಗೆ ಗದ್ದೆ ತೋಟದ ವ್ಯವಸ್ಥೆಯನ್ನು ಅವರಿಬ್ಬರೂ ನೋಡಿಕೊಳ್ಳುತ್ತಾರೆ."

ಅದು ಸೂಕ್ತವೆನಿಸಿತು ಹೆಂಗಳೆಯರಿಗೆ.

"ಕೆಲವಾರು ದಿನಗಳಾದರೂ ಚಿಂತೆಯಿಲ್ಲ. ಪೂವಿ ಬರುವವರೆಗೂ ಕಾದಿದ್ದು ಕರೆದು ತಾ."

ಪೊನ್ನಮ್ಮ ಸಣ್ಣ ಸೂಟ್‌ಕೇಸನ್ನು ತಂದುಕೊಟ್ಟಳು. ಮಾದು ಸರ ಸರನೆ ಹೊರಟ. ಗೃಹಿಣಿಯರಿಬ್ಬರೂ ಅಲ್ಲೇ ನಿಂತು ಅವನು ಕೆಳಮುಟ್ಟ

ಇಳಿದು ಹಾದಿ ಕಳೆಯುವವರೆಗೂ ನೋಡಿದರು. ಮಾದು ಬೀಸುಗಾಲು ಹಾಕುತ್ತಲೇ ಗದ್ದೆ ಬಯಲಿಗಿಳಿದ. ನೋಡಿದರೆ ತಾಳಗಟ್ಟೆ ಜೆಳ್ಳಿಯಪ್ಪ ಅಲ್ಲೇ ಗದ್ದೆಯ ಅಂಚು ಕಟ್ಟುತ್ತಿದ್ದ. ಇನ್ನು ತಾಳಗಟ್ಟೆಗೆ ಹೋಗುವ ಶ್ರಮವೂ ತಪ್ಪಿತು ಎನ್ನಿಸಿತು. ವೈಬಾಗಿ ಅಂಚು ಕಟ್ಟುತ್ತಿದ್ದ ಅವನು ತನ್ನ ಸನಿಹಕ್ಕೆ ಬಂದ ಪಾದಸಪ್ಪಳವನ್ನು ಕೇಳಿದಾಕ್ಷಣವೇ ಇತ್ತ ತಿರುಗಿನೋಡಿ ಆಶ್ಚರ್ಯದಿಂದ "ಓಹೋ, ಏನಪ್ಪಾ? ಎಲ್ಲಿಗೋ ಹೊರಟದ್ದೀ? ಆಗಲೇ ಸತ್ಯಾಗ್ರಹಕ್ಕಿಳಿದಂತಿದೆ....?"

"ಇಲ್ಲಪ್ಪಾ, ಪೂವಿ ಇಲ್ಲಿಗೆ ಬರುವವಳಿದ್ದಾಳೆ. ಅವಳು ಸುರಕ್ಷಿತವಾಗಿ ಮನೆ ಸೇರಿದನಂತರ ಸತ್ಯಾಗ್ರಹ...ಈಗ ಅದರ ಕಡೆ ಯೋಚಿಸುವಷ್ಟು ವಿರಾಮವಿಲ್ಲ"

"ನೀನು ಹೋಗಿ ಬಾ. ಅನಂತರ ಒಂದು ಕಾರ್ಯಕ್ರಮವನ್ನು ಇಲ್ಲಿ ನಾವೇ ರೂಪಿಸಿಕೊಳ್ಳಬೇಕು. ಈದಿನ ಮಡಿಕೇರಿ ಪೊನ್ನಂಪೇಟೆಗಳಲ್ಲಿ ಪ್ರಭಾತ್ ಫೇರಿ ನಡೆಸಿದ ಹಸುಮಕ್ಕಳ ಮೇಲೆ ಲಾಠಿ ಛಾರ್ಜ್ ಮಾಡಿಸಿದ್ದಾನೆ-ಈ ರೆಸಿಡೆಂಟ. ಈಸಲ ಈತನಿಗೆ ಪುನರ್ಜನ್ಮ ಕಾಣಿಸದಿದ್ದರೆ ಕೇಳು! ಧೂರ್ತ.... ಧರ್ಮಕರ್ಮ ಇನ್ನೊಂದು ಜನ್ಮಕ್ಕೂ ಬರುವುದಿಲ್ಲ .."

"ಇಲ್ಲಿ ತನ್ನ ಸ್ಥಾನ ಸ್ಥಿರ ಅಂತ ತಿಳಿದುಗೊಂಡಿದ್ದಾನೆ...ಅದರಿಂದಲೇ ಹೀಗೆ."

ಮಾತು ಮುಗಿಯುವುದರೊಳಗಾಗಿ ಬಿಟ್ಟಂಗಾಳ ರಾಮಕೃಷ್ಣ,ಅಮ್ಮಟ್ಟಿ ಗಣೇಶ ಅಲ್ಲಿಯೇ ಕಾಣಿಸಿಕೊಂಡರು. ಮುಖಮುದ್ರೆ ಗಂಭೀರವಾಗಿದ್ದರೂ ತುಟಿಗಳಲ್ಲಿ ತುಂಟನಗೆ ಹವಳದ ಛವಿಯಂತೆ ಹೊಳೆಯಿತು.

ಎಲ್ಲೋ ದೂರದಲ್ಲಿ ಚಂಡೋಲ ಪಕ್ಷಿ ಇಂಪಾಗಿ ಹಾಡುತಿತ್ತು.

ಮಾನಸಿಕ ಪ್ರಸ್ಪಂದ-ವಿಸ್ಪಂದಗಳಿಂದ ಇನಿ ಇಂಚರವನ್ನು ಕೇಳಿಸಿಕೊಳ್ಳುವಂತಹ ಸಹನೆಯಾಗಲೀ ಸಮಯವಾಗಲೀ ಯಾರಿಗೂ ಇರಲಿಲ್ಲವೇನೋ....

"ಎಷ್ಟು ಕಡೆ ಗೋಲೀಬಾರ್ ನಡೆದಿದೆ...ಏನು....ಕತೆ? ಇದೇನು ತಮಾಷೆ ಎಂದುಕೊಂಡಿದ್ದಾರೋ ಏನೋ ಈ ಇಂಗ್ಲಿಷರು!"

"ಇರಲಿ ನೋಡೋಣ; ಈ ಆಟ ಇನ್ನೂ ಎಷ್ಟುಕಾಲ ನಡೆಯುತ್ತೆ ?"

"ವಂದೇಮಾತರಂ ಗೀತೆ ಹಾಡಿದವರ ಮೇಲೆ ಅಶ್ರುವಾಯು...ಲಾಠಿ ಛಾರ್ಜ್.. ಗಲ್ಲುಗಂಬ...ಇದಕ್ಕೆ ಇತಿಮಿತಿಯೇ ಇಲ್ಲ."

"ಮನುಷ್ಯತ್ವ ಇಲ್ಲವೇ ಇಲ್ಲ !"

"ನಮ್ಮವರು ಎಷ್ಟು ದಿನ ಈ ದಬ್ಬಾಳಿಕೆ ಸಹಿಸಿಯಾರು ?" ಶಾಂತಿ–ಶಿಸ್ತು ಎಲ್ಲಿಯವರೆಗೆ ತಾಳಿಕೊಂಡೀತು?....ಇದೆಲ್ಲ ಒಂದಲ್ಲ ಒಂದುದಿನ ಕ್ರಾಂತಿ ರೂಪ ತಳೆಯುತ್ತದೆ. ದೇಶದಲ್ಲಿ ಇನ್ನೇನು ಗಂಡಾಂತರಗಳಾಗಬೇಕೋ ...!"

"ನಿಜ....ನಿಜ."ಎನ್ನುತ್ತ ಮಾದು ಗಡಿಯಾರದ ಕಡೆ ನೋಟ ಹೊರಳಿಸಿದ· ಹೆದ್ದಾರಿಗೆ ಬಸ್ಸು ಬರಲು ಇನ್ನು ಹದಿನೈದು ನಿಮಿಷಗಳು ಮಾತ್ರ ಇವೆ. ಇಲ್ಲಿಂದ ಹತ್ತು ನಿಮಿಷದ ನಡಿಗೆಯೂ ಇತ್ತು. ಇನ್ನು ಅಲ್ಲಿ ನಿಲ್ಲಲು ಹೊತ್ತಿರಲಿಲ್ಲವಾದುದರಿಂದ ನನಗಿನ್ನು" ಸಮಯವಿಲ್ಲ.ಬಸ್ಸು ಬರುವ ಹೊತ್ತಾಯಿತು." ಎಂದಷ್ಟೇ ನುಡಿದು ಹಾದಿಯ ಕಡೆ ಹೆಜ್ಜೆ ತೆಗೆದ.

"ನೀನು ಬಂದೊಡನೆಯೇ ಇಲ್ಲಿ 'ಮೀಟಿಂಗ್' ಕೂಡಬೇಕು. ಬಂದೊಡನೆಯೇ ನಮ್ಮಲ್ಲಿಗೆ ಬಾ." ಎಂದ ತಾಳಗಟ್ಟೆ ಬೆಳ್ಳಿಯಪ್ಪ,

"ಮೊದಲು ನಮ್ಮಲ್ಲಿಗೆ ಬಾ. ಅಲ್ಲಿಂದ ಎಲ್ಲರೂ ಒಟ್ಟಾಗಿಯೇ ತಾಳಗಟ್ಟೆಗೆ ಹೋಗೋಣ" ಎಂದ ಅಮ್ಮಟ್ಟೆ ಗಣೇಶ.

"ಆಗಲಿ, ಜಂಬೂರು ಶೇಷುಗೂ ಹೇಳಿಕಳುಹಿಸಿರಿ."

ಮಾದು ಅಲ್ಲಿಂದ ಮಾರುಗಾಲು ಹಾಕುತ್ತಲೇ ಹೊರಟ. ಆ ಗದ್ದೆಯ ಬಯಲನ್ನು ದಾಟುವುದೇ ಆರೇಳು ನಿಮಿಷಗಳ ಮೇಲಾಯಿತು.ಅಲ್ಲಿಂದ ಹತ್ತು ಮಾರು ಒಳಹಾದಿಯಲ್ಲಿ ನಡೆದರೆ ಹೆದ್ದಾರಿ. ನಿಶ್ಚಿತ ತಾವನ್ನು ತಲುಪುತ್ತಲೂ ನೋಟವನ್ನು ಹಾದಿಯ ನೇರಕ್ಕೆ ಹೊರಳಿಸಿದ. ಬಸ್ಸು ಇನ್ನೂ ಬಂದಿರಲಿಲ್ಲ. ಎಲ್ಲೋ ದೂರದಲ್ಲಿ ಅದರ ಸದ್ದು ಕೇಳಿಸುತ್ತಿದೆ ; ಇಷ್ಟರಲ್ಲಿಯೇ ಬಂದೀತು ಎಂದುಕೊಳ್ಳುತ್ತ ಸಜ್ಜಾಗಿ ನಿಂತ.

ಕೆಲವೇ ಕೆಲವು ನಿಮಿಷಗಳೊಳಗಾಗಿ ಕೆಂಪು ಬಸ್ಸಿಗೆ ಬದಲಾಗಿ ನೀಲಿಯ ಪೋಲೀಸ್ ವ್ಯಾನು ನುಗ್ಗಿ ಬಂತು. ಒಳಗಡೆ ಕುರಿಗಳನ್ನು ತುಂಬಿದಂತೆ ಸತ್ಯಾಗ್ರಹಿಗಳನ್ನು ತುಂಬಿದ್ದಾರೆ.ಒಳಗಡೆಯಿಂದ ಅವರು ಒಂದೇ ಸಮನೆ'ಜೈಕಾರ' ಹಾಕುತಿದ್ದಾರೆ !

ಬೋಲೋ ಭಾರತ್ ಮಾತಾ ಕಿ ಜೈ !!

ವಂದೇಮಾತರಂ...ವಂದೇಮಾತರಂ !

ಆ ಜಯಭೇರಿ ವನದೇಶದಲ್ಲಿ ಮಹಾರವದಿಂದ ಮೊಳಗಿ ಮೈ ರೋಮ ರೋಮವನ್ನೂ ಉದ್ಬುದ್ಧಗೊಳಿಸಿತು. ಜಡಚೇತನವನ್ನು ಬಡಿದೆಬ್ಬಿಸುವ ಆ ಒಕ್ಕೊರಲಿನ ಕರೆಯು ರುದ್ರರವ ಕರ್ಣದೇಶದಲ್ಲಿ ಮತ್ತೆ ಮತ್ತೆಮೊಳಗಹತ್ತಿತು. ತನುಮನಗಳೆಲ್ಲಾ ದೇಶಮಾತೆಯ ದೇಗುಲವಾಗಿ ನಿಂತ ಕಣ್ಣುಗಳಲ್ಲಿ ಮಿನುಗಿದ ವಿನೂತನ ಮಿಂಚು ಮುಖಬಿಂಬಕ್ಕೆ ಹೊಸ ಖಳೆ ಕೂಡಿಸಿತು. "ಓ.... ನೋಡೋಣ, ಇವರಿಗೆ ಎದೆಗಾರಿಕೆಯಾದರೂ ಎಷ್ಟಿದೆ ? ಎಷ್ಟು ಮಂದಿಯನ್ನು ಬಡಿದಾರು?ಇನ್ನೆಷ್ಟು ಮಂದಿಯನ್ನು ಕೊಂದಾರು?" ಎಂಬ ಉದ್ಗಾರ ಹೊರಬಿತ್ತು.

ದೂರದ ತಿರುವಿನವರೆವಿಗೂ ಜೈಕಾರ ಕೇಳಿಸುತ್ತಲೇ ಇತ್ತು. ತಾನೂ ದನಿಗೂಡಿಸಲೇ ಎನಿಸಿ ಬಾಯಿತೆರೆದ. ಆದರೆ ತನ್ನ ಕರ್ತವ್ಯ ಅಡ್ಡಬಂತು. ಸ್ವಲ್ಪ ಸಮಯ ತನ್ನನ್ನು ತಾನೇ ಹತೋಟಿಯಲ್ಲಿಟ್ಟುಕೊಂಡು ನಿಟ್ಟಿಸಿದ. ವ್ಯಾನು ದೂರದ ತಿರುವಿನಲ್ಲಿ ಕಣ್ಮರೆಯಾಯಿತು. ಉತ್ಸಾಹಿತ ಮನಃಪಟಲದ ಮೇಲೆ ದೇಶದ ಪ್ರಕ್ಷುಬ್ಧ ಪರಿಸ್ಥಿತಿ ಅಲೆಯಲೆಯಾಗಿ ತೇಲಿ ನಲಿಯಿತು. ತಾಳಲಾಗದ....ಅತ್ಯಂತ ಕ್ಲಿಷ್ಟಕರವಾದ ವಿಚಾರಗಳೆಲ್ಲ ತೇಲಿಹೋದುವು. ರಕ್ತದ ಕಣಕಣವೂ ಉಕ್ಕೇರುವಂತೆ. ಎಂದಿಗೆ ಈ ಪವಿತ್ರಭೂಮಿ ದಾಸ್ಯದಿಂದ ಬಿಡುಗಡೆ ಹೊಂದುವುದೋ....ಎಂಬ ಯೋಚನೆಯಲ್ಲಿ ಮೈ ಮರೆತು ಸ್ವರ್ಣ ಸಲಾಕೆಯಂತೆ ನಿಂತ. ಒಂದೆರಡು ಘಳಿಗೆ ನಿತಾಂತವೇದನೆಯಿಂದ ಉರುಳಿದುವೇನೋ... ದೂರದಲ್ಲಿ ಸಂಚಾರಿ ಬಸ್ಸು ದೊಡ್ಡ ದನಿಯಲ್ಲಿ ಹಾರನ್ ಮಾಡಿತು.

ಇನ್ನಷ್ಟು ಹೊತ್ತಿನೊಳಗಾಗಿ ಅದು ಭೀಮವೇಗದಲ್ಲಿ–ರೂಕ್ಷ ಕಾಯದಲ್ಲಿ ಪ್ರತ್ಯಕ್ಷ್ಯವಾಯಿತು.

೨೦

ಚಳವಳಿ–ಆಂದೋಳನ ...

ಲಾಠಿಛಾರ್ಜ್–ಅಶ್ರುವಾಯು-ಗೋಲಿಬಾರ್....

ಒಂದೆಡೆ ನೆತ್ತರಿನ ಹೊಳೆ ಸ್ವಚ್ಛಂದವಾಗಿ ಹರಿಯುತಿತ್ತು. ಇನ್ನೊಂದೆಡೆ ಶಾಂತಿ-ಶಿಸ್ತುಗಳ ಘೋಷಣೆ ಕೇಳಿಬರುತಿತ್ತು. ಈ ಅವಧಿಯಲ್ಲಿ ಮತ್ತೊಮ್ಮೆ ದುಂಡುಮೇಜಿನ ಪರಿಷತ್ತು ಕೂಡಿತು. ಮಹಾ ಸಂಗ್ರಾಮದಲ್ಲೂ ಬ್ರಿಟನ್ನು ಅಪಾರವಾದ ಕಷ್ಟನಷ್ಟಕ್ಕೊಳಗಾಯಿತು. ಆದರೂ ಭಾರತವನ್ನು ಬಿಟ್ಟು ಕೊಡುವ ಮನಸ್ಸಿಲ್ಲ. ಜಿನ್ನಾ ಹಿಡಿದ ಪಟ್ಟು ಸಹ ಬಿಡಲಿಲ್ಲ. ಸ್ವಾತಂತ್ರ್ಯದ ಕತೆ ಏನಾಗುವುದೋ ಎಂಬ ಭಯ-ಕಳವಳ ಒಮ್ಮೊಮ್ಮೆ ಚಿತ್ತಭಿತ್ತಿಯಲ್ಲಿ ಸಂಶಯದ ಕಪ್ಪು ತೆರೆಯನ್ನು ಹರಡುವುದು.

ಮಹಾತ್ಮಾ ಗಾಂಧೀಜಿಯವರ ಸಂದೇಶ ಬೃಹದ್ ಭಾರತದ ಮೂಲೆ ಮೂಲೆಗೂ ತಲುಪುತಿತ್ತು. ಆ ಮಹಾ ಸಂದೇಶವನ್ನು ಶಿರಸಾ ಹೊತ್ತ ಜನತೆ ಶಿಸ್ತಿನ ನೇಮದಲ್ಲೇ ಅಶಿಸ್ತನ್ನು ಪಾಲಿಸಿ ಆಂದೋಳನದಗ್ನಿಜ್ವಾಲೆಗೆ ತುಪ್ಪ ವನ್ನು ಸುರಿಯಿತು. ತಮ್ಮ ಕಾರ್ಯಾಚರಣೆ ಹೇಗೆ ಆರಂಭಿಸಬೇಕು....ಅದರ ಅಂತಿಮ ಗುರಿಯೇನು ಎಂಬುದನ್ನು ಆವೇಶಯುಕ್ತ ಸಾಮಾನ್ಯ ಜನತೆ ಅರಿ ಯದು. ಆದರೂ ಪ್ರಭಾತ್ ಫೇರಿಯ ಆರಂಭದಲ್ಲೇ ನಡೆದ ಲಾಠಿ ಚಾರ್ಜ್ ಗೋಲಿಬಾರ್‌ಗಳು ಜನತೆಯನ್ನು ರೊಚ್ಚಿಗೇಳಿಸಿತು. ಅಲ್ಲಲ್ಲಿ ಹಿಂಸಾಕೃತ್ಯ ಗಳು ನಡೆದು ಮೃತ್ಯುದೇವತೆ ತಾಂಡವನೃತ್ಯಗೈಯ್ಯತೊಡಗಿದಳು. ದೇಶದ ನಾನಾ ಕಾರ್ಯಕ್ಷೇತ್ರ ಸ್ತಬ್ಧಗೊಳ್ಳುವುದು ಅನಿವಾರ್ಯವಾಯಿತು. ಹಾಗೆ ಸ್ತಬ್ಧಗೊಂಡ ಕಾರ್ಯಕ್ಷೇತ್ರದಲ್ಲಿ ಸಾರಿಗೆ ಸೌಕರ್ಯವೂ ಒಂದು.

ಸೈನಿಕರ ಸಂಸಾರಗಳನ್ನು ಇನ್ನಿತರ ಪ್ರಯಾಣಿಕರೊಂದಿಗೆ ಹೊತ್ತ ರೈಲು ನಾಗಪುರ ಬಿಟ್ಟು ಸ್ವಲ್ಪದೂರ ಪಯಣಿಸಿದ ಮೇಲೆ ಚಳವಳಿಕಾರರಿಂದ ತಡೆಯಲ್ಪಟ್ಟು ಬಯಲು ಪ್ರದೇಶದಲ್ಲಿ ನಿಂತುಹೋಯಿತು. ಹಿಂದೆ–ಮುಂದೆ

ರೈಲು ಹಳಿಗಳನ್ನು ಕಿತ್ತು, ರೈಲು ನಿಲ್ದಾಣಗಳನ್ನು ನಾಶಮಾಡಿ, ತಂತಿ ಸಂಪರ್ಕವನ್ನು ತುಂಡರಿಸಿ, ಸೇತುವೆ–ಕಟ್ಟೆಗಳನ್ನು ಉರುಳಿಸಿ ಮುಂದಿನ ಕಾರ್ಯರಂಗಕ್ಕೆ ಸಜ್ಜಾಗುತಿತ್ತು ಜನತೆ. ಮಾನವೀಯ ಪೈಶಾಚಿಕತೆಯಲ್ಲಿ ಒಂದು ತೊಟ್ಟು ನೀರು ದೊರೆಯುವುದು ಸಹ ಕಷ್ಟವಾಯಿತು. ಬಿಸಿಲು ಧಗೆಗಳ ಪರಿತಾಪ....ಜನಗಳ ಹಾಹಾಕಾರ ...ಮಕ್ಕಳು ಮರಿಗಳ ಆಕ್ರಂದನ....ಹೆಂಗಳೆಯರ ಗೋಳು....ಹಸಿವಿನ ಕಾಟ .. ಕೂಗು....ಗದ್ದಲ.... ರೋಷ...ಕಣ್ಣೀರು ಇತ್ಯಾದಿಗಳು ಯಮಧರ್ಮನ ವಿಕಟಾಟ್ಟಹಾಸದಂತೆ, ರುದ್ರನ ರುದ್ರತಾಂಡವ ನೃತ್ಯದಂತೆ ಕಂಡು ಬರುತಿದ್ದುವು.

ಭಯಂಕರ ಗೋಳಿನಲ್ಲಿ ಒಂದಲ್ಲ, ಎರಡಲ್ಲ, ಮೂರಲ್ಲ, ನಾಲ್ಕಾರು ದಿನಗಳು ಸಂದುಹೋದುವು. ರೈಲು ಸಿಬ್ಬಂದಿಯವರು ಅಲ್ಪಸ್ವಲ್ಪ ಆಹಾರವನ್ನೂ ಅಲ್ಪಸ್ವಲ್ಪ ನೀರನ್ನೂ ಒದಗಿಸುತಿದ್ದರು. ಹಾದಿಯ ದುರಸ್ತಿ ನಡೆಯುತಿತ್ತು. ಸುಡು ಬಿಸಿಲಿನಲ್ಲಿ ನಿಂತುಹೋದ ರೈಲಿನಲ್ಲಿ ಉಳಿದ ನೂರಾರು ಮಂದಿಯ ಜೀವನ ನರಕಮಯವಾಯಿತು, ಅಳುವವರ-ನರಳುವವರ ಕಂಬನಿಯ ಕಾಣಿಕೆ ಸ್ಮಶಾನ ವೈಭವದಲ್ಲಿ ನಡೆಯುತಿತ್ತು. ಸೈನಿಕರ ಸಂಸಾರಗಳೆಲ್ಲಾ ಒಂದು ಡಬ್ಬಿಯಲ್ಲಿ ಸೇರಿಕೊಂಡು ಮರಣಾಂತಕ ಯಾತನೆಯಲ್ಲಿ ಕಳೆದರು. ಕೈಯಲ್ಲಿ ಹಣವಿಲ್ಲ. ಕಟ್ಟಿಕೊಂಡು ಬಂದಿದ್ದ ಬುತ್ತಿ ಅಲ್ಲಿಂದಲ್ಲೇ ಕರಗಿ ಹೋಯಿತು. ಈಗ ಒಂದೊಂದು ಕ್ಷಣವನ್ನು ಕಳೆಯುವುದೂ ಸಹ ಮೃತ್ಯುವಿನ ಸನಿಹಕ್ಕೆ ಸರಿದಂತೆಯೇ...ಆ ಭಯಂಕರ-ಉತ್ಕಟ ಪರಿಸ್ಥಿತಿಯಲ್ಲಿ ಮತ್ತೊಂದು ದಾರುಣ ದಿನ ಹೇಗೆ ಉರುಳಿತೋ ದೇವರಿಗೇ ಗೊತ್ತು. ಇದುವರೆವಿಗೆ ಕಣ್ಣೀರಿನ ಕೋಡಿ ಹರಿಸಿದವರಿಗೆ ಈಗ ಅಳಲೂ ಸಹ ಶಕ್ತಿಯಿಲ್ಲ... ಅಳುತ್ತೇನೆಂದರೂ ಕಂಬನಿ ಮೊಳೆಯದು.

....ಈ ಪರಿಸ್ಥಿತಿಗಿಂತ ಸಾವು ಹಿತಕರವಾಗಿತ್ತು. ನಮ್ಮ ಯಾವ ತಪ್ಪಿಗಾಗಿ ಭಗವಂತ ಈ ಶಿಕ್ಷೆಯನ್ನು ಕೊಟ್ಟಿದ್ದಾನೆ....ಎಂದುಕೊಂಡಳು ಪೂವಿ. ತನುಮನಗಳಲ್ಲಿ ತುಂಬಿ ಹೋಗಿರುವ ಸಂಕಟದೊಂದಿಗೆ ಈ ಸಂಕಷ್ಟವನ್ನು ತುಂಬಿಕೊಳ್ಳಲು ಸ್ಥಳವೇ ಸಾಲದು. ಇನ್ನು ತಾಳಲಾರೆ ಯಾವುದಾದರೊಂದು ಹಾಳುಬಾವಿ ಇದ್ದಿದ್ದರೆ ಮಗುವಿನೊಂದಿಗೆ ಹಾರಿಕೊಳ್ಳಬಹುದಾಗಿತ್ತು ಎಂಬ ಯೋಚನೆ ಅನೇಕ ಬಾರಿ ಹೆಡೆಯೆತ್ತಿತು. ರೈಲಿನಿಂದ ಇಳಿದಾಗ ಅಲ್ಲೆಲ್ಲಾ

ದರೂ ಹಳ್ಳತಿಟ್ಟುಗಳಿವೆಯೇ ಎಂದು ಅಳೆಯುತ್ತಿತ್ತು ಪಕ್ಷಿನೋಟ. ಆ ಸಮ ಪ್ರದೇಶದಲ್ಲಿ ಅಂತಹ ಸ್ಥಳವಾದರೂ ಎಲ್ಲಿಂದ ಬರಬೇಕು ?

....ಅಯ್ಯೋ, ಈ ಭೂಮಿಯಾದರೂ ಬಿರಿದಿದ್ದರೆ....?

ಆದರೆ .. ಆದರೆ....

ಭೂಮಿ ಬಿರಿಯುವುದಿರಲಿ, ಅಲ್ಲಲ್ಲೆ ಶೇಖರಣೆಯಾದ ಮಲಮೂತ್ರಗಳ ದುರ್ವಾಸನೆ ಉಸಿರಾಡುವ ಗಾಳಿಗೂ ಸಂಚಕಾರ ತಂದಿತು. ನಾನಾ ಸಂಕಟಗಳ ಅವ್ಯಾಹತ ಧಾಳಿಯಲ್ಲಿ ಸಿಲುಕಿ ತೊಟ್ಟು ಕಳಚಿದ ಬಕುಳ ಪುಷ್ಪದಂತೆ ಬಾಡಿ ಬೆಂಡಾಯಿತು ಜನರಾಶಿ. ಏಳನೆಯ ದಿನ ರೈಲ್ವೆ ಸಿಬ್ಬಂದಿಯವರು ಎಲ್ಲರಿಗೂ ಆಹಾರದ ಪೊಟ್ಟಣಗಳನ್ನು ಹಂಚಿದರು. ಮಧ್ಯಾಹ್ನದ ವೇಳೆಗೆ ಹಳಿಗಳನ್ನು ಹೊಂದಿಸಿ ಸೇತುವೆ ರಿಪೇರಿ ನಡೆಸಿ ಮಿಲಿಟರಿಯ ಸಿಬ್ಬಂದಿಯವರೊಡನೆ ರೈಲು ಹೊರಟಿತು. ಹಾದಿಯಲ್ಲಿ ಸತ್ಯಾಗ್ರಹಿಗಳ ಕೂಗು ಗಲಾಟೆ ಗದ್ದಲ ಕೇಳಿಸುತಿತ್ತು. ಆಬಾಲವೃದ್ಧರಾದಿಯಾಗಿ ಗುಂಪು ಗುಂಪಾಗಿ ಕಾಣಿಸುತಿದ್ದರು. ಧಿಕ್ಕಾರ–ಜೈಕಾರ ಕಿವಿಯ ಮೇಲೆ ಝೇಂಕರಿಸುತಿತ್ತು. ಎಷ್ಟೇ ಮುನ್ನೆಚ್ಚರಿಕೆ ವಹಿಸಿದರೂ ಇನ್ನೆಲ್ಲಾದರೂ ಹಳಿಗಳನ್ನು ಕಿತ್ತಿರಬಹುದೇನೋ ಎಂಬ ಭಯದಿಂದ ರೈಲನ್ನು ನಿಧಾನವಾಗಿ ನಡೆಸಲಾಗುತಿತ್ತು. ಮರಣಾಂತಕ ನೋವಿನಿಂದ ನಡೆಯಲಾರದೇ ನಡೆಯುವಂತೆ.

...ಕುಳಿತುಕೊಳ್ಳಲಾಗಲೀ ನಿಂತುಕೊಳ್ಳಲಾಗಲೀ ತಾವಿಲ್ಲದ ಕಿಷ್ಕಿಂಧೆ... ದುಃಖಭರಿತ ಹೃದಯ....ಸಂಕಟಕ್ಕೀಡಾದ ಮೈ....ಪ್ರಾಣ ಹೋದರೆ ಸಾಕು ಎಂದು ಪರಿತಪಿಸುವ ಜೀವ ..ಹಸಿವು ಬಾಯಾರಿಕೆಗಳ ಧಾಳಿ....ರೋಗರುಜಿನಗಳ ಹಾವಳಿ....

ರೈಲು ಚಲಿಸುತಿತ್ತು....ಎಡೆಬಿಡದೆ ಚಲಿಸುತಿತ್ತು.

ಪ್ರತಿ ನಿಲ್ದಾಣದಲ್ಲೂ ಮಿಲಿಟರಿಯ ದಂಡು ಕಾದಿದ್ದರೂ ಗಲಾಟೆ, ಲೂಟಿ, ಹೊಡೆದಾಟಗಳು ಸಂಭವಿಸುತ್ತಿದ್ದುವು. ಕೆಲವೆಡೆಗಳಲ್ಲಿ ನಿಲ್ದಾಣದ ಮೂಲಕ ಹಾದುಹೋದರೂ ಅದು ನಿಲ್ಲಲಿಲ್ಲ ನಿಲ್ಲುವಂತೆಯೂ ಇರಲಿಲ್ಲ...

ಸಂಕಟ....ಆಯಾಸಗಳಿಂದ ಕೂಡಿದ ಮುಂದಿನ ಆ ಮೂರು ದಿನಗಳ ಅವ್ಯಾಹತ ಪಯಣವನ್ನು ಮುಗಿಸಿ ಇಚ್ಛಿತ ಸ್ಥಳವನ್ನು ತಲುಪಿದಾಗ ದೇಹ ಜೀವಚ್ಛವವಾಗಿತ್ತು. ಎಲುಬಿನ ಹಂದರವಾದ ಮಗು ಕೀರಲು ಧ್ವನಿಯಲ್ಲಿ

ಅಳುತಿತ್ತು. ಎತ್ತಿ ಎತ್ತಿ ಕೈಗಳು ಸೋತುಹೋಗಿದ್ದುವು. ಗರ್ಭಿಣಿಸ್ತ್ರೀ.... ದೀರ್ಘಪಯಣ, ಮೇಲಾಗಿ ಎಂಟ್ಹತ್ತು ದಿನಗಳ ಉಪವಾಸ ತಪ್ತಶರೀರವನ್ನು ಹೊರಲಾಗದೆ ಹೊತ್ತ ಕಾಲುಗಳು ಬಳುಕಿದುವು. ಮಗುವಿನೊಂದಿಗೆ ಗಂಟು ಮೂಟೆಗಳನ್ನು ಇಳಿಸಿಕೊಳ್ಳಬೇಕಾದರೆ ಸಾಕುಸಾಕಾಯಿತು. ಎಲುಬಿನ ಹಂದರ ಕಷ್ಟದಿಂದ ಉಸಿರಾಡುತ್ತ ಸಾಮಾನಿನ ಮೇಲೆ ತುಂಡುಗಡಿದ ಬಳ್ಳಿಯಂತೆ ಕುಸಿಯಿತು. ಬಳಲಿ ಬಸುವಳಿದಂತೆ ಸುಸ್ತಾಗಿ ನೆಲದ ಮೇಲೆ ಸಿದ್ದೆ ಹೋಗಿದ್ದ ಚಿಟ್ಟೆ. ಮೈಕೈಗಳಲ್ಲೆಲ್ಲ ಉಗಿಯ ಮಸಿ ತುಂಬಿ ..ಅತ್ಯಂತ ಕರುಣಾ ಜನಕ ಸ್ಥಿತಿಯಲ್ಲಿ ಉಸಿರಾಡುತಿತ್ತು ಜೀವ. ನಿಲ್ದಾಣದಲ್ಲಿ ತಮ್ಮವರಾರೂ ದಿಟ್ಟಿಗೆ ಬೀಳಲಿಲ್ಲ. ಪುನಃಪುನಃ ಶ್ರಾಂತ ನೋಟ ಸುತ್ತಮುತ್ತ ಹರಿದಾಡಿತು. ತನ್ನವರಾರೂ ಇಲ್ಲವೇ ಇಲ್ಲ. ಇದುವರೆಗೆ ತೆಗೆದುಕೊಂಡ ಶ್ರಮವೆಲ್ಲಾ ಸೂರೆ ಗೊಂಡಂತೆ ಭಾಸವಾಯಿತು. ಹಾಗೇ ಸಾಮಾನಿನ ಮೇಲೆ ಬಿದ್ದುಕೊಂಡಳು. ಇಲ್ಲಿಯವರೆಗೆ ಪಯಣಿಸಿದ್ದೇ ಸಾಕಾಗಿತ್ತು. ಇನ್ನು ಮುಂದೆ ಪಯಣಿಸುತ್ತೇನೆಂಬ ಭರವಸೆ ಕಿಂಚಿತ್ತೂ ಉಳಿಯಲ್ಲಿಲ್ಲ. ಇಂದೋ ನಾಳೆಯೋ ಇಲ್ಲಿಯೇ ಪ್ರಾಣಬಿಡುವ ಸ್ಥಿತಿ ಬಂತೆಂಬ ಭಾವನೆ ಮೂಡಿದಾಗ "ಆದದ್ದಾಗಲಿ ಮಾದೇವನ ಇಚ್ಛೆ!" ಎಂದುಕೊಂಡಳು. ವ್ಯಸನವಾಗಲೀ ಸಂಕಟವಾಗಲೀ ಮೂಡಲಿಲ್ಲ. ಸಹ ಪಯಣಿಗರು ಹೊರಟರು. ಅವರಾಗಿಯೇ ಹೊರಟರೋ ಅಥವಾ ಬಂಧು ಬಳಗದವರು ಬಂದಿದ್ದರೋ ದೇವರಿಗೇ ಗೊತ್ತು. ಅದೂ ಸಹ ಗಮನಕ್ಕೆ ಬಂದಿರಲಿಲ್ಲ.

ಸ್ವಲ್ಪ ಹೊತ್ತು ಉರುಳಿತು. ಮುಚ್ಚಿದ ನಯನಗಳಿಗೆ ಮಂಜು ಕವಿದಂತಾಯಿತು.

ಹೃದಯ ವ್ಯಾಪ್ತಿಗೆ ಮೀರಿ ಮಿಡಿಯುತಿತ್ತು. ಮಸ್ತಿಷ್ಕ ಮಂಕಾಗಿದೆ. ನಿದ್ದೆಯೋ ಭ್ರಮೆಯೋ ಅಥವಾ ಮಂಪರವೋ ಅಂತೂ ಯಾವುದೋ ಮನವನ್ನು ಅಖಂಡವಾಗಿಮುಸುಗಿತ್ತು. ನಿಶ್ಚೇಷ್ಟಿತಳಂತೆ,ಅಭಿಭೂತಳಂತೆ,ಮೂರ್ಛಿತಳಂತೆ ಹಾಗೇ ಬಿದ್ದುಕೊಂಡಿದ್ದಾಳೆ....ಬಹುಶಃ ಅರ್ಧತಾಸು ಕಳೆಯಿತ್ತೇನೋ ಜನಗಳ ಮಧ್ಯೆ ಕರಗಿಹೋಗಿದ್ದ ಬಳ್ಳಿದೇಹದ ವ್ಯಕ್ತಿ ಹುಡುಕುತ್ತ ಇತ್ತಲೇ ಬಂದ. ದಟ್ಟವಾದ ಕುರುಚಲು ಗಡ್ಡ, ಸೊರಗಿದ ಮುಖ, ರಂಗು ತಳೆದ ಕಣ್ಣು ಆಯಾಸವೇ ಮೈವೆತ್ತು ಬಂದಂತಿದ್ದರೂ ನರನಾಡಿಗಳಲ್ಲಿ ಉಷ್ಣೋಷ್ಣ ಝುರಿ

ಹರಿದಾಡುತಿತ್ತು. ನೆಲದಮೇಲೆ ಮಲಗಿದ್ದ ಮಗು, ಸಾಮಾನಿನ ಮೇಲೆ ಮುಖಮಡಿಯಾಗಿ ಬಿದ್ದಿದ್ದ ಪೂವಿ ದೃಗ್ಗೋಚರಿಸಿದರು. ಮುಖ ಕಾಣಿಸು ತ್ತಿಲ್ಲವಾದುದರಿಂದ ಯಾರೆಂಬ ಗುರುತುಹತ್ತದು. ಕೊಳಕು ಬಟ್ಟೆ, ಸೊರಗಿದ ಸ್ಥಿತಿ ತನ್ನವರಲ್ಲವೆಂದೇ ಸಾರಿ ಹೇಳುತಿತ್ತು. ಒಮ್ಮೆ ಕರೆಯೋಣವೆನ್ನಿಸಿದರೂ ಯಾರೋ ಎಂಬ ಅನುಮಾನ. ಆದರೂ ಇನ್ನಷ್ಟು ಹೊತ್ತು ಕಾಯುವ ಸಹನೆ ಮೂಡಲಿಲ್ಲ. ಯಾರೆಂಬುದನ್ನು ಅಗತ್ಯವಾಗಿ ತಿಳಿದುಕೊಳ್ಳಬೇಕಾಗಿತ್ತು. ಪೂವಿಯೇ ಆಗಿದ್ದರೂ ಸರಿ ; ಅಲ್ಲದಿದ್ದರೂ ಅದರಿಂದ ದೋಷವಿಲ್ಲ ಎಂದು ಕೊಳ್ಳುತ್ತಲೇ ಕರೆದ,

"ಪೂವೀ....ಪೂವೀ !"

ಉತ್ತರವಿಲ್ಲ.

"ಪೂವೀ....!"

"......."

"ಪೂವೀೕೕ !"

ಪೂವಿಗೆ ಬದಲಾಗಿ ಮಗು ಎಚ್ಚರಗೊಂಡು ಅತ್ಯಂತ ಸನಿಹದಲ್ಲಿ ಪರಕೀ ಯನನ್ನು ನೋಡಿ ಕೀಚು ದನಿಯಲ್ಲಿ ಅಳಹತ್ತಿತು. ಅವಳ ಬಳಿಯಿದ್ದ ಸೂಟ್ ಕೇಸ್ ಹಾಸಿಗೆಗಂಟು ಹಳೆಯ ನೆನಪನ್ನು ಮರುಕಳಿಸುತಿದ್ದರೂ ಆ ಸ್ಥಿತಿಗತಿ ಅಲ್ಲವೆಂದೇ ಉಸುರುತ್ತಿದೆ. ಏನು ಮಾಡುವುದೆಂದು ಯೋಚಿಸುತ್ತ ನಿಂತ... ಏನೋ ಒಂದು ಬಗೆಯ ಸಂಕಟ .. ಇನ್ನೇನೋ ಒಂದು ಬಗೆಯ ಗ್ಲಾನಿ.... ಯೋಚಿಸಿದರೂ ಅರ್ಥವಾಗದಂತಿದೆ....ನೆಟ್ಟ ನೋಟ ಚಲಿಸಲಿಲ್ಲ. ದಾರಿ ದ್ರ್ಯವೇ ಮೈವೆತ್ತು ಬಂದಂತಿದ್ದ ಅತ್ಯಂತ ಶೀರ್ಣಿತ ದೇಹ ಯಾವ ಚಹರೆ ಯನ್ನೂ ತೋರುತ್ತಿಲ್ಲ.

ಒಂದು ಘಳಿಗೆ ನಿಟ್ಟಿಸಿ ನೋಡಿ ಪುನಃ ಕರೆದ "ಪೂವೀೕೕ !"

ಬಸುವಳಿದು ಬಿದ್ದಿದ್ದ ಮೈ ತುಸು ಅಲುಗಾಡಿತು. ಮೆಲ್ಲನೆ ಹುಬ್ಬೆತ್ತಿ ನೋಡಿ ಏಳಲಾರದೆ ಎದ್ದು ಕುಳಿತಳು. ಅವನ ಗಡ್ಡಭರಿತ ಮುಖ ಬಳ್ಳಿದೇಹ ಮಂಜು ಕವಿದ ಕಣ್ಣುಗಳಿಗೆ ಏನೋ ಒಂದು ಬಗೆ ಎನಿಸಿದರೂ ಅನಂತರ

ಮನವರಿಕೆಯಾಗಿ ಎದ್ದು ಕುಳಿತುಕೊಂಡಳು. ಅಶಕ್ತ – ಅವಿಶ್ರಾಂತ ಶರೀರ ಥರಥರ ನಡುಗುತಿತ್ತು.

"ಅಯ್ಯೋ, ಯಾವ ಸ್ಥಿತಿಯಾಗಿದ್ದಿ ಪೂವಿ ?" ಎಂಬುದು ಅಪಾರವಾದ ಸಂಕಟವೆಲ್ಲಾ ಒಂದೇ ವಾಕ್ಯದಲ್ಲಿ ಹೊರಬಿತ್ತು. ಕಣ್ಣುಗಳಲ್ಲಿ ತೆಕ್ಕನೆ ರಂಗು ಮೂಡಿತು. ಮಾದು ಸಂಕಟಾಬ್ಧಿಯಲ್ಲಿ ಮುಳುಗಿದ.

ಪೂವಿ ಮಾತಾಡಲಿಲ್ಲ. ನಯನಕೋರಕಗಳಲ್ಲಿ ಮಿನುಗಿದ ಹನಿಯೇ ಉತ್ತರವಾಯಿತು. ಅವನ ಕಣ್ಣುಗಳಲ್ಲೂ ಪ್ರತಿಹನಿಗಳು ಅನಿರೀಕ್ಷಿತವಾಗಿ ಮೂಡಿದುವು. ಅಲ್ಲಿ ಒಂದು ನಿಮಿಷ ಕಳೆಯುವಷ್ಟೂ ವ್ಯವಧಾನವಿರಲಿಲ್ಲ. ಓಡುತ್ತಲೇ ಕ್ಯಾಂಟೀನಿಗೆ ಹೋಗಿ ಇಡ್ಲಿ ಕಟ್ಟಿಸಿಕೊಂಡು ಬಂದ. ಆದರೆ ಗಂಟಲಾರಿದ ಜೀವಕ್ಕೆ ಅದು ಬೇಡವಾಗಿತ್ತು. ಒಣಗಿದ ತುಟಿಯನ್ನು ನಾಲಿಗೆ ಯಿಂದ ಒರಸಿಕೊಂಡು–"ಒಂದಿಷ್ಟು ತಣ್ಣನೆಯ ಮಜ್ಜಿಗೆ ಸಿಕ್ಕಿದರೆ ಸಾಕಿತ್ತು." ಎಂದಳು.

ಅಕ್ಷರ ಅಕ್ಷರವೂ ಅಲ್ಲಿಂದಲ್ಲೇ ಸಿಕ್ಕಿಕೊಳ್ಳುವಂತೆ ಭಾಸವಾಯಿತು.

ಮಾದು ಮತ್ತೆ ಹೋಗಿ ಮಜ್ಜಿಗೆಯನ್ನು ತಂದ. ಅಷ್ಟು ತರಬೇ ಕಾದರೂ ಕಾಸಿನ ಸ್ಥಿತಿಗತಿಗಳನ್ನು ಮೊದಲು ಗಮನಿಸಬೇಕಾಯಿತು.

ಆವನು ಹೊಸಬನಾದುದರಿಂದ ಮಗುವಿಗೆ ಭಯ. ಅಳುವ ಮಗುವನ್ನು ಸಂತೈಸಿ ಅವಳಿಗೆ ಸಹಾಯ ಮಾಡುವ ಉದ್ದೇಶದಿಂದ ಮುಂದಾದರೂ ಮಗು ಒಲ್ಲದು. ಪೂವಿ ಮಗುವಿಗೆ ಮಲಗಿದಲ್ಲೇ ನಾಲ್ಕು ತುತ್ತು ತಿನ್ನಿಸಿ ತಾನಿಷ್ಟು ನುಂಗಿ ನೀರು ಮಜ್ಜಿಗೆ ಕುಡಿದಳು. ಅಷ್ಟಾಗುವವರೆಗೂ ಯಾವ ವಿಷಯವೂ ಹೊರಬೀಳಲಿಲ್ಲ. ಹೊರಬೀಳುವ ಸ್ಥಿತಿಯಲ್ಲಿಯೂ ಇರಲಿಲ್ಲ.

ಮಾದು ಸಾಮಾನನ್ನು ತೆಗೆದುಕೊಂಡು ಅಳುವ ಮಗುವನ್ನೂ ಬಗಲಿಗೆ ಹಾಕಿಕೊಂಡ; ಅತ್ತರೂ ಬಿಡಲಿಲ್ಲ. ನಡುಗುವ ಕಾಲುಗಳಿಂದ ನಡೆಯಲಾರದೆ ಹೆಜ್ಜೆ ಹಾಕಿದಳು ಪೂವಿ. ಅವಳ ಬೆಂಬಿಡದೆ ನಡೆಯುತ್ತ ಮಾದು ಕೇಳಿದ.

"ಬಸ್ಸಿನ ನಿಲ್ದಾಣದವರೆಗೆ ನಿನ್ನಿಂದ ನಡೆಯಲಾದೀತೆ ?"

"ಪರವಾಯಿಲ್ಲ : ನಡೆಯುವೆ."

"ಹೇಗಾದರೂ ನಿನ್ನ ಸುರಕ್ಷಿತವಾಗಿ ಮನೆ ಮುಟ್ಟಿಸಿದರೆ ಸಾಕಾಗಿದೆ... ದೇವರು ನಿನಗೆ ಈ ಕಷ್ಟ ಕೊಡಬಾರದಿತ್ತು ಪೂವಿ."

ಅವಳು ಭಾರವಾದ ನಿಟ್ಟುಸಿರು ಬಿಟ್ಟಳು.

ನಿಲ್ದಾಣದಿಂದ ಹೊರಬರುವ ಹಾದಿಯಲ್ಲಿ ಸಾಲಾಗಿದ್ದ ಹತ್ತಿಪ್ಪತ್ತು ಮೆಟ್ಟಿಲುಗಳನ್ನು ಹತ್ತಲಾರದೆ ಹತ್ತುವಾಗ ಕುಸಿದುಬಿದ್ದಳು. ಒಡನೆ ಸಾಮಾನನ್ನು ಅಲ್ಲೇ ಬಿಟ್ಟು ಅವಳನ್ನು ಹಿಡಿದೆತ್ತಿ ಕೂರಿಸಿ ಕರುಣಾರ್ದ್ರ ಧ್ವನಿಯಲ್ಲಿ "ಏಳಬೇಡ, ಸ್ವಲ್ಪ ಸುಧಾರಿಸಿಕೋ; ಪೆಟ್ಟಿಗೆಯನ್ನು ಬಸ್ಸಿಗೆ ಹಾಕಿಬರುವೆ" ಎಂದ. ದುಃಖ ಕರುಣೆಗಳಿಂದ ಧ್ವನಿ ಗದ್ಗದವಾಯಿತು.

ನಿಮೀಲಿತ ನೇತ್ರಗಳ ದೈನ್ಯನೋಟ ಸಮ್ಮತಿ ಸೂಸಿತು ; ತುಟಿಗಳು ಬಿರಿಯಲಿಲ್ಲ.

ಒಂದು ವಾರದಿಂದ ಅರೆ ಹೊಟ್ಟೆಯಲ್ಲಿದ್ದರೂ ಮೈಯಲ್ಲಿ ಆ ಕೂಡಲೇ ಭೀಮಶಕ್ತಿ ಸಂಚಾರವಾಯಿತು. ಮಾದು ಓಡುತ್ತಲೇ ಹೋಗಿ ಬಸ್ಸಿನಲ್ಲಿ ಸಾಮಾನನ್ನು ಜರಿದು ಬಂದು, ಅಳುತಿದ್ದ ಮಗುವನ್ನೆತ್ತಿಕೊಂಡು ಅವಳ ತೋಳನ್ನು ಹಿಡಿದು ನಡೆಸಲು ಸಹಾಯ ಮಾಡಿದರೂ ಅವಳಿಂದ ಅಷ್ಟು ಮೆಟ್ಟಿಲುಗಳನ್ನು ಹತ್ತಲಾಗಲಿಲ್ಲ. ಹಾದಿಗರು ಸಹಕಾರ ನೀಡಿ ಮೇಲಕ್ಕೆ ಹತ್ತಿಸಿದರು. ಯಾರೋ ಕಾಣದವರು ತಾಯಿಯನ್ನು ಹಿಡಿದುಕೊಂಡುದನ್ನು ನೋಡಿ ಚಿಟ್ಟ ಗಟ್ಟಿಯಾಗಿ ಅಳತೊಡಗಿದ. ಅತ್ಯಂತ ಕರುಣಾಜನಕ ಸ್ಥಿತಿಯಲ್ಲಿ ತಾಯಿ ಮಗುವನ್ನು ಬಸ್ಸಿಗೆ ಹತ್ತಿಸಿದಾಗ ...ಅದೃಷ್ಟವಶಾತ್ ಸಾರಿಗೆ ಸೌಕರ್ಯ ಒದಗಿದೆ. ಇನ್ನು ಸುಖ ಪಯಣ ದೊರೆತರೆ ಸಾಕು ಎಂದು ಮನಃಪ್ರಾಣಗಳು ಘೀಳಿಟ್ಟುವು.

ಬಸ್ಸು ಹಿರಿಯ ಸದ್ದಿನೊಡನೆ ಹರಿಯಿತು.

ಎಲ್ಲಿಂದ ಎಲ್ಲಿಯವರೆಗೂ ಜೈಕಾರ....ರಾಷ್ಟ್ರಗೀತೆ....ಧಿಕ್ಕಾರ....ಲಾವಣಿ ಭಕ್ತಿಗೀತೆಗಳು ಕಿವಿಯಮೇಲೆ ಬೀಳುತ್ತಿದ್ದುವು. ದಿನನಿತ್ಯ ವ್ಯವಹಾರದ ಸ್ಥಗಿತ....ದಬ್ಬಾಳಿಕೆ....ಗೂಂಡಾಗಿರಿ ಅಲ್ಲಲ್ಲಿ ಕಣ್ಗೋಚರಿಸುತಿತ್ತು. ಬಸ್ಸು ಕೊಡಗು ಮುಟ್ಟುವವರೆಗೆ ಯಾವ ದುಷ್ಟಶಕ್ತಿಯೂ ಎದುರು ಸುಳಿಯದಿದ್ದರೆ ಸಾಕು....ಎಂಬ ಹಾರೈಕೆಯೊಡನೆ ಪಯಣ ಸಾಗಿತು. ಉರುಳುವ ಒಂದೊಂದು ನಿಮಿಷವೂ ಗಂಡಾಂತರವನ್ನು ಬದಿಗೆ ತಳ್ಳುವ ಮಹತ್ವ ಮನಸ್ಸಿಗೆ ಸಮಾಧಾನವನ್ನೀಡುತಿತ್ತು. ಭಗವಂತ ಅಷ್ಟಾದರೂ ದಯಾವಂತ....

ಮಾದು ಮೃದು ಮಂದ ವಾಣಿಯಲ್ಲಿ,

"ಬಹಳ ಸುಸ್ತಾಗಿದ್ದಿ. ಕೆಲವು ದಿನ ಮಡಿಕೇರಿಯಲ್ಲಿದ್ದು ಸುಧಾರಿಸಿ ಕೊಳ್ಳಬಹುದಾಗಿತ್ತು. ಏನು ಹೇಳುತ್ತಿ."

ಸ್ವಲ್ಪ ಹೊತ್ತು ಮೌನವಾಗಿ ಕಳೆಯಿತು. ವಾತದಿಂದ ಕಠಿಣವಾಗಿ ನರಳುವ ತಾಯಿಗೆ ಈ ಸ್ಥಿತಿಯಲ್ಲಿ ಹೋಗಿ ಕಷ್ಟಕೊಡುವುದು ಮಾತ್ರವಲ್ಲ, ಈ ಅನಿಶ್ಚಿತ ಪರಿಸ್ಥಿತಿಯಲ್ಲಿ ಸೇರಬೇಕಾದ ಸ್ಥಳವನ್ನು ಮೊದಲೇ ಸೇರಿಕೊಳ್ಳು ವುದು ಲೇಸು. ಮುಂದಿನ ವಿಚಾರ ಈಗ ನಿರ್ಧರಿಸುವಂತಿಲ್ಲ....ಎಂಬ ಮನೋ ವಿಶ್ಲೇಷಣೆಯಲ್ಲಿ ನುಡಿದಳಾರಮಣಿ,

"ಒಂದು ಸಲ ನಿಶ್ಚಿತ ಸ್ಥಳ ಸೇರಿಕೊಂಡರೆ ಅನಂತರ ಎಂದಾದರೂ ಹೋಗಬಹುದು."

"ಅದೂ ನಿಜವೆ. ಇಂದಿನ ಪರಿಸ್ಥಿತಿಯಲ್ಲಿ ಎಲ್ಲಿದ್ದರೂ ವೈದ್ಯಕೀಯ ಸೌಲಭ್ಯ ಅಷ್ಟಕ್ಕಷ್ಟೆ ...ಇನ್ನು ಮುಂದೆ ಹೊರಗೆ ತಲೆಗೆ ಹಾಕುವುದೂ ಕಷ್ಟ ವಾದೀತು. ಅಂದಮೇಲೆ ಮಡಿಕೇರಿಗಿಂತ ಬಾಗಂಡವೇ ಲೇಸು ...ಆದರೆ ಹೆದ್ದಾರಿಯಿಂದ ನಡೆಯುವುದು ನಿನ್ನಿಂದಾಗದು. ಅಷ್ಟು ಮೆಟ್ಟಿಲುಗಳನ್ನು ನೀನು ಹತ್ತಲಾರೆ,"

"ಸಂಜೆಯ ಹೊತ್ತಿಗೆ ಸ್ವಲ್ಪ ಚೇತರಿಸಿಕೊಳ್ಳುವೆ....ಪರವಾಯಿಲ್ಲ."

ಹಾಗೆಂದರೂ ಅವಳಲ್ಲಿ ಚೇತರಿಸಿಕೊಳ್ಳುವ ಸೂಚನೆ ಕಾಣಿಸುತ್ತಿಲ್ಲ. ಮಾದು ಒಂದೆರಡು ಕ್ಷಣ ಅವಳನ್ನು ನಿಟ್ಟಿಸಿ ಸುಮ್ಮನಾದ. ನಗರ ವಲಯ ದಲ್ಲಿ ಮಿತಿಮೀರಿದ ಪೋಲೀಸರ ಚಟುವಟಿಕೆಯನ್ನು ದರ್ಶಿಸಲೋ ಎಂಬಂತೆ ಬೃಹದ್ ನಗರಮಧ್ಯೆ ಪಯಣಿಸಿ ಹೆದ್ದಾರಿಯನ್ನು ಹಿಡಿಯಿತು ಬಸ್ಸು..

"ನಾಸಿಲ್ಲಿಗೆ ಬಂದು ಹತ್ತು ದಿನಗಳಾದುವು ಪೂವಿ. ತಂದ ಹಣ ಕರಗಿ ತುಂಬ ಚಿಂತೆಗೊಳಗಾಗಿ ದಿನವೆಲ್ಲಾ ನಿಲ್ದಾಣದಲ್ಲೆ ಬಿದ್ದುಕೊಂಡು ನಿನಗಾಗಿ ಕಾದಿದ್ದೆ. ನಿಮ್ಮಿಂದ ಸುದ್ದಿಯೂ ಇಲ್ಲ; ಕಾಗದ ಪತ್ರವೂ ಇಲ್ಲ. ಏನು ಮಾಡಬೇಕು ಹೇಳು ?"

ವಿಷಣ್ಣವದನೆ ಪೂವಿಯ ಚಿಂತಿತಚಿತ್ತ ಪರಿಸ್ಥಿತಿಯನ್ನು ನೆನೆಯು ತಿತ್ತು, ತುಟಿ ಬಿರಿಯಲಿಲ್ಲ.

"ಮಾದು ಒಂದೆರಡು ಕ್ಷಣ ಅವಳನ್ನೆ ನಿಟ್ಟಿಸಿದ. ಅತ್ಯಂತ ಶೀರ್ಣಿತ ಮುಖಬಿಂಬದಲ್ಲಿ ಹುದುಗಿದ ಕಣ್ಣಾಲಿಗಳ ಹೊಳುಪು, ಕಪೋಲಪಾಲಿಯ

ರಾಜೀವ ರಂಗು ಹೇಳ ಹೆಸರಿಲ್ಲದಂತೆ ಕರಗಿತ್ತು. ಮೈ ಬಿಳಿಚಿಕೊಂಡು, ಕೈ ಕಾಲುಗಳು ಒಣಗಿದ ಕಾಷ್ಟದಂತಾಗಿದ್ದುವು. ಮುಂದಿನ ಪಯಣ ಮುಗಿಯು ವವರೆಗೆ ಇನ್ನೇನು ಕತೆಯೋ ಎಂಬಂತಹ ವಿಶಾದನೀಯವಾದ ಚಿತ್ರ.

ಚಿಟ್ಟೆ ಒಂದೇ ಸಮನೆ ಅಳುತಿದ್ದ. ಬಹುಶಃ ಪಯಣ ಮುಗಿದರೆ ಸಾಕಾ ಗಿತ್ತೇನೋ....ಇತ್ತ ಪೂವಿಗೆ ಪ್ರಾಣ ಚಿಮ್ಮಿದರೆ ಸಾಕಾಗಿತ್ತು

ಹಾದಿಯುದ್ದಕ್ಕೂ ಪೋಲೀಸ್ ವ್ಯಾನುಗಳಲ್ಲಿ ಸತ್ಯಾಗ್ರಹಿಗಳನ್ನು ತುಂಬಿಕೊಂಡೊಯ್ಯುತ್ತಿದ್ದುದು ದೃಗ್ಗೋಚರಿಸುತಿತ್ತು. ರಾಷ್ಟ್ರಗೀತೆಗಳನ್ನು ಉಚ್ಚಸ್ವರದಲ್ಲಿ ಹಾಡಿಕೊಳ್ಳುತ್ತ, ನಭೋಭೇರಿಯಾಗಿ ಮೊಳಗುವಂತೆ ಜೈಕಾರ ಗಳನ್ನು ಹಾಕುತ್ತ ಪಯಣಿಸುವ ಆ ಶಾಂತಿವೀರರ ಚಿತ್ರ ಮನಃಪ್ರಾಣಗಳನ್ನು ನಾಲ್ಕಾರು ವರ್ಷಗಳ ಹಿಂದಿನ ಸ್ವಾತಂತ್ರ್ಯ ಸಂಗ್ರಾಮದೆಡೆಗೆ ಒಯ್ಯಿತು. ಅಂದಿದ್ದ ಹುರುಪು-ಸಹಿಷ್ಣುತೆ ನೆನೆಸಿಕೊಂಡರೆ ನರನಾಡಿಗಳಲ್ಲಿ ಚೇತನದ ಚಿಲುಮೆ ಹರಿದಾಡುವುದು. ನೆತ್ತರಿನ ಕಣಕಣವೂ ಉತ್ತೇಜಿತಗೊಳ್ಳುವುದು.

ಪೂವಿ ಭಾರವಾದ ಹೃದಯವನ್ನು ಹೊರಲಾರದೆ ಹೊತ್ತು ದೇಶದ ಪರಿ ಸ್ಥಿತಿಯನ್ನು ಗಮನಿಸಿದಳು ತಾಯ್ನಾಡಿನ ಹಂಬಲ, ಸ್ವಾತಂತ್ರ್ಯದ ಗೀಳು, ಪತಿಯ ಕ್ಷೇಮ,ದೂರ ಭವಿಷ್ಯ ಒಂದೊಂದೂ ವಿಚಿತ್ರ ಪರಿಮಳವನ್ನು ಬೀರುತ್ತ ಮನವನ್ನು ಮುತ್ತಿದುವು. ಪಯಣ ಮುಗಿದಾಗ ಸೌವರ್ಣಕಾಂತಿಯುಕ್ತ ಉಜ್ವಲ ಸೂರ್ಯ ಪಡವಲ ಮಟ್ಟೆಯಲ್ಲಿ ತಂಗಿದ್ದ. ಸಾಯಂಸಮಯ ಸುಗಂಧ ಸಿಕ್ತ ಕಂಪನ್ನು ಪೂಸಿಕೊಂಡಿತ್ತು. ನೋಡಿ ಮನಸ್ಸಿಗೆ ಹಿತವಾದರೂ ಶಾರೀರಕ ದೌರ್ಬಲ್ಯ ಆ ಆನಂದಪ್ರಮತ್ತ ಶಾಂತಿಯನ್ನು ಸವಿಯಲು ಅವಕಾಶ ಕೊಡುತ್ತಿಲ್ಲ. ಹೆದ್ದಾರಿಯಿಂದ ನಡೆಯಬೇಕಾದ ಸಮಸ್ಯೆ ಕಣ್ಮುಂದೆ ಮೈ ತಳೆದು ಗರಿಗೂಡಿ ನಿಂತಿತ್ತು.

ಪೆಟ್ಟಿಗೆಯನ್ನು ರಸ್ತೆಯಂಚಿನ ಅಂಗಡಿಯಲ್ಲಿಟ್ಟು "ನೀನು ಚಿಟ್ಟೆಯೊಂ ದಿಗೆ ಇಲ್ಲೇ ಕುಳಿತಿರು. ತಾಳಗಟ್ಟೆಗೆ ಹೋಗಿ ಗಾಡಿ ತರುವೆ." ಎಂದ ಮಾದು-ಅವಸರವಸರವಾಗಿ.

"ಗಾಡಿಯಲ್ಲಿ ಪಯಣಿಸುವುದಕ್ಕಿಂತ ನಡೆಯುವುದು ಲೇಸು. ಮೆಲ್ಲಗೆ ಹೋಗೋಣ ನಿಧಾನವಾದರೂ ಚಿಂತಿಲ್ಲ."

ಆದರೆ ಅವನು ಕೇಳಬೇಕಲ್ಲ? ಓಡುತ್ತಲೇ ಹೋಗಿ ಎತ್ತಿನ ಗಾಡಿಯನ್ನು ತಾನೇ ಹೊಡೆದುಕೊಂಡು ಬಂದ. ಅದರಲ್ಲಿ ಕುಲುಕಿ ಮೈ ನೋಯಿಸಿಕೊಳ್ಳುವುದಕ್ಕಿಂತ ನಡೆಯಬಹುದಾಗಿತ್ತು ಎಂಬ ಯೋಚನೆ ಪೂವಿಗೆ. ಮಾದು ತನ್ನ ಸಂತಸವನ್ನೆಲ್ಲಾ ಒಂದೇ ಮಾತಿನಲ್ಲಿ ಹೊರಪಡಿಸಿದ,

"ದೇವರು ದೊಡ್ಡವನು ಪೂವಿ! ಬಸ್ಸು ಎಲ್ಲೂ ತಡೆಹಿಡಿಯಲ್ಪಡದೆ ಇಲ್ಲಿಯತನಕ ಸುರಕ್ಷಿತವಾಗಿ ಬಂದು ತಲುಪಿದುದೂ ಸಹ ನಮ್ಮ ಅಹೋಭಾಗ್ಯ!"

ಪೂವಿ "ಹೌದು" ಎಂಬಂತೆ ತಲೆಯಾಡಿಸಿದಳು. ಮುಖಭಾವ ಕೂಗಿ ಹೇಳಿತು "ಆದರೆ ನಿಮ್ಮ ಅಣ್ಣನ ಕತೆ ಇನ್ನೇನೋ...."

ಎತ್ತಿನ ಗಾಡಿಯ ಪಯಣ ಸ್ವಲ್ಪ ಹೊತ್ತಿನೊಳಗಾಗಿ ಮುಗಿಯಿತು. ಅದೇ ಅಂಕುಡೊಂಕು ಹಾದಿಯಲ್ಲಿ ಗಡಬಡ ಸದ್ದಿನೊಡನೆ ಗೈಲ್ ಗೈಲ್ ಘಂಟಾರವ ಮೊಳೈಸಿ ಮೊಳಗುತ್ತ ಬಂದು ಮನೆಯ ಬಳಿ ಗಕ್ಕನೆ ನಿಂತಿತು. ಅತ್ಯಂತ ಅಶಕ್ತ ಸ್ಥಿತಿಯಲ್ಲಿ ಮನೆಗೈತಂದ ಅವಳನ್ನು ಬರಮಾಡಿಕೊಳ್ಳುವಾಗ ಜನನಿಯ ಕರಳು ನಲುಗಿತು. ಅಪಾರವಾದ ಶೋಕವ್ಯಾಕುಲತೆಯಿಂದ ಎದೆಯ ಹಾರೈಕೆಯನ್ನು ಹೊರಹಾಕಿದಳು "ಮಾದೇವನ ದಯೆಯಿಂದ ಇನ್ನು ನೀನು ಸುಖಿಯಾದರೆ ಸಾಕು. ಕೊನೆಯ ಪಕ್ಷ ಈ ಸ್ಥಿತಿಯಲ್ಲಾದರೂ ಭಗವಂತ ನಿನ್ನನ್ನು ಮನೆಗೆ ತಲುಪಿಸಿದನಲ್ಲ, ಅದೇ ನಮ್ಮ ಭಾಗ್ಯ !"

ನುಡಿ ಹೊರಬಿದ್ದ ಸುಸಮಯದಲ್ಲಿ ಮಾದೇವನ ದೇಗುಲದ ಘಂಟಾರವ ಮೊಳಗಿತು.

ಢನ್. ಢನ್. ಢನ್. ಢನ್ !

"ಓ....ಎಂತಹ ಶುಭ ಶಕುನ ? ಯೋಚಿಸಬೇಡ ಪೂವಿ, ಇನ್ನೆಲ್ಲವೂ ಸುಖವಾಗುತ್ತೆ !" ಎಂದ ಮಾದು. ಮುಖದಲ್ಲಿ ಊಹಿಸಲೂ ಆಗದಂತಹ ಎಳೆನಗು ಮೂಡಿ ಮಾಯವಾಯಿತು.

ಆ ವಾಕ್ಯಸರಣಿ ಕಿವಿಯಮೇಲೆ ಬಿದ್ದಾಗ ಪತಿಯೆಡೆಗೆ ಜಿಗಿಯಿತು ಚಿತ್ತ ಅವನೂ ಸಹ ಸಮಯ ಸಂದರ್ಭಗಳಲ್ಲಿ ಶಕುನಗಳನ್ನು ಗಮನಿಸುತಿದ್ದುದು ಹೀಗೆಯೆ. ಶುಭಾಶುಭಗಳನ್ನು ಕುರಿತು ಪಾರಿಭಾಷಿಕ ಶಬ್ದಗಳಿಂದ ಕೂಡಿದ ಸಣ್ಣ ಭಾಷಣವನ್ನೇ ಬಿಗಿಯುತಿದ್ದ. ಆ ಶುಭಕಲ್ಪನೆ ಮನೋವಾಕ್ಕಾಯ

ಗಳಿಂದ ಮಾದೇವನನ್ನು ಸ್ಮರಿಸುವಂತೆ ಮಾಡಿತು. ಏನೋ ಒಂದು ಬಗೆಯ ಅಪೂರ್ವ ಶಾಂತಿ ಮನದಲ್ಲಿ ತುಂಬಿಬಂತು.

ಜೂಲಿ ಮೂರು ವರ್ಷಗಳನಂತರ ಕಂಡ ಒಡತಿಯನ್ನು ಅತ್ಯಾನಂದ ದಿಂದ ಸ್ವಾಗತಿಸಲು ಮೈಮೇಲೆ ಹಾರಿ ಉತ್ಸಾಹ ತೋರಲೆಳಸಿದಾಗ ಮಾದು ಕತ್ತಿನ ಪಟ್ಟೆಯನ್ನು ಹಿಡಿದು ಹಿಂದಕ್ಕೆಳೆದು ಅವಳಿಗೆ ಒಳ ಹೋಗಲು ಅನುವು ಮಾಡಿಕೊಟ್ಟ. ಅದು ಬಾಲ ಆಡಿಸುತ್ತ ದೊಡ್ಡ ದನಿಯಲ್ಲಿ ಬೊಗಳಿ ಒಡಲ ಮುದವನ್ನೆಲ್ಲ ಹೊರಸೂಸಿತು.

ಪೊನ್ನಮ್ಮ ಬೆಳಗಿದ ತಂಬಿಗೆಯಲ್ಲಿ ನೀರು ತಂದಳು.

ಆದರೆ ಹತ್ತು ದಿನಗಳಿಂದ ಸ್ನಾನ ಕಂಡಿರಲಿಲ್ಲ. ತಂಬಿಗೆಯ ನೀರು ಯಾವಲೆಕ್ಕ? ಉಗಿಯ ಮಸಿಯಿಂದ ಮೈ ಮುಚ್ಚಿ ಹೋಗಿತ್ತು. ಆದರೂ ಪ್ರಸ್ತುತ ಪರಿಸ್ಥಿತಿಯಲ್ಲಿ ಸ್ನಾನ ಮಾಡುವುದೂ ಕಷ್ಟವೇ. ಹಾಗೆಂದು ಹಾಗೇ ಇರುವಂತೆಯೂ ಇಲ್ಲ.

"ನೀನು ಬಹಳ ಬಳಲಿದ್ದಿ. ಈಗ ಕೈಕಾಲು ತೊಳೆದುಕೊಂಡು ಸುಧಾರಿಸಿಕೊ. ಅನಂತರ ಸ್ನಾನ ಮಾಡಿದರಾಯಿತು." ಎಂದಳು ವೃದ್ಧ ಜನನಿ.

ಪೂವಿಯ ಕಣ್ಣುಗಳಂಚಿನಲ್ಲಿ ನೀರಾಡುತಿತ್ತು. ಬಚ್ಚಲು ಮನೆಗೆ ಹೋಗುವಷ್ಟರೊಳಗಾಗಿ ಪೊನ್ನಮ್ಮ ನೀರು ತೋಡಿ ಅಣಿಗೊಳಿಸಿದ್ದಳು. ಕೈಕಾಲು ತೊಳೆದುಕೊಂಡು ವಿಶ್ರಾಂತಿಗಾಗಿ ಹಾಸಿಗೆಯ ಮೇಲೆ ಅಡ್ಡಾದಳು. ತಮ್ಮ ಪಯಣದ ಗೋಳಿನ ಕತೆಯನ್ನು ಹೇಳುವ ಮನಸ್ಸಿದ್ದರೂ, ತ್ರಾಣವಿರಲಿಲ್ಲ. ಮೂಕ ನಿವೇದನೆಯಲ್ಲಿ ಹೊತ್ತು ಉರುಳಿತು.

ಹೊಸ ತಾಣವಾದುದರಿಂದ ಚಿಟ್ಟೆಗೆ ಭಯ-ಕಳವಳ. ತಾಯಿಯ ಬಳಿಯಿಂದ ಕದಲಲಿಲ್ಲ. ಬಹುಶಃ ಪೂವಿ ಸ್ನಾನ ಮಾಡಲು ಎದ್ದಾಗ ರಾತ್ರಿ ಒಂಬತ್ತರ ಅಂಚನ್ನು ದಾಟಿತ್ತೇನೋ....ಆಗ ಚಿಟ್ಟೆ ಗಾಢ ನಿದ್ದೆಯಲ್ಲಿದ್ದ.

ವಾತಾವರಣ ಶಾಂತ ಸಮುದಾಯದಲ್ಲಿ ಸುಮನೋಹರವಾಗಿದ್ದರೂ ಎದೆಯಬನ ದಳ್ಳುರಿಯಿಂದ ಬೇಯುತಿತ್ತು. ಭಯ–ಸಂಕಟಗಳ ಧಾಳಿ ಅವ್ಯಾಹತವಾಗಿ ನಡೆಯುತಿತ್ತು. ಅವಳ ಮನಸ್ಥಿತಿಯನ್ನರಿತು ಸಂತೈಸುತ್ತ ನುಡಿದಳು ವೃದ್ಧ ಜನನಿ,

"ಏನೇನು ಆಗಬೇಕೋ ಅದು ಆಗಿಯೇ ತೀರಬೇಕು ಪ್ರಾವಿ. ಇದು ನಿನಗೆ ತಿಳಿಯದ ವಿಷಯವಲ್ಲ. ಚಿಂತೆ ಹಚ್ಚಿಕೊಂಡು ಮನಸ್ಸನ್ನು ದುರ್ಬಲಗೊಳಿಸಿಕೊಳ್ಳಬೇಡ."

"ನಾಲ್ಕು ದಿನಗಳ ಹಿಂದೆ ನಿಮ್ಮನ್ನೆಲ್ಲ ನೋಡುವ ಭಾಗ್ಯ ನನಗಿದೆ ಎಂದು ಕೊಂಡಿರಲಿಲ್ಲ ನಾನು."

"ನಮ್ಮ ಎದೆಯೂ ಅದೇ ಸಂಕಟದಿಂದ ತುಂಬಿ ಹೋಗಿತ್ತು."

ಆ ವಾಕ್ಯ ಪೂರ್ತಿಗೊಂಡಾಗ ಎಲ್ಲರ ಕಣ್ಣುಗಳಲ್ಲೂ ನೀರಾಡುತಿತ್ತು.

೨೧

ಲಾಠಿ...ಜೈಲು....ಗಲ್ಲು...

ಸಾವು ...ನೋವು....ಗೋಳು....

ಗಲಾಟೆ ಗದ್ದಲ ಚೀರಾಟಗಳ ಪ್ರಾಕಾರ-ಸಮುದಾಯವನ್ನು ದಾಟಿ ಕಿವಿಗಿಂಪಾಗಿ ಕೇಳಿ ಬರುತಿತ್ತು-ಸುಮನೋಹರ ಸ್ವಾತಂತ್ರ್ಯಗೀತೆ. ಸಿಹಿ–ಕಹಿಗಳ ಧೋರಣೆಯಲ್ಲಿಯೂ ಸರಳ ಲಲಿತ ಕಂಠಗಳ ಮನಮೋಹಕ ಶೈಲಿ.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿ ಬಲಿವೇದಿಯನ್ನೇರಿ ಕೊನೆಯುಸಿರಿನವರೆಗೂ 'ವಂದೇಮಾತರಂ' ಗೀತೆಯನ್ನು ಪಠಿಸುತ್ತ ಪ್ರಾಣವನ್ನೀಗಿದ ಸ್ವಾತಂತ್ರ್ಯವೀರರ ಮೇಲ್ಪಂಕ್ತಿಯನ್ನನುಸರಿಸುವ ಸತ್ಯಾಗ್ರಹಿಗಳ ತಂಡ. ಚಿತ್ತಭಿತ್ತಿಯ ನೇರಕ್ಕೆ ನೇಣುಗಂಬದ ಮಿಣಿ; ಸುತ್ತಮುತ್ತ ನುಗ್ಗಿ ಬರುವ ಗೋಲಿ; ಹೆಜ್ಜೆ ಹಿಂದಿಡುವುದೂ ಕಷ್ಟ; ಮುಂದಿಡುವುದೂ ಕಷ್ಟ.

ಸಹಪಾಟಿಗಳಲ್ಲಿ ಅನೇಕರು ಜೇಲುಗಳಲ್ಲಿ ಕೊಳೆಯುತಿದ್ದಾರೆ. ಎಲ್ಲಿ ಯಾವಕಡೆ ಎಂಬುದು ತಿಳಿಯುತ್ತಿಲ್ಲ, ಶಾಲಾ ಕಾಲೇಜುಗಳು ಹಾಳು ಸುರಿಯುತ್ತಿವೆ. ಕೋರ್ಟು ಕಛೇರಿಗಳು ಮುಚ್ಚಿ ಯಾವಕಾಲವೋ. ಸರಕಾರದ ಯಂತ್ರಕೆಟ್ಟು ಕಿಲುಬು ಹತ್ತಿದರೂ ಗುಂಡು-ಮಸಿಗಳ ಕೋಟೆ ಬೆಳೆಯುತ್ತಲೇ ಇತ್ತು. ಯಾವಾಗೆಂದರೆ ಆವಾಗ, ಎಲ್ಲೆಂದರೆ ಅಲ್ಲಿ ಭುಗಿಲೇಳುತ್ತದೆ ಭೀಕರ ಕರ್ಫ್ಯೂ !

ಒಂದೆಡೆ ಕಿವಿಗಡಚಿಕ್ಕುವಂತೆ ಕೇಳಿ ಬರುವ ಕರ್ಫ್ಯೂ ಪ್ರಸಾರ....ಇನ್ನೊಂದೆಡೆ ಕೋಟಿಕೋಟಿ ಜನಸಾಮಾನ್ಯರ ಜೈಕಾರದ ಮಧುರ ಝೇಂಕಾರ! ಸ್ವಾತಂತ್ರ್ಯದ ಧೀರೋದಾತ್ತ ಘೋಷಣೆ! ತಾಯ್ನಾಡಿನ ಅನುಪಮ ಹಂಬಲ! ದಿನಗಳು ಕತ್ತಿಯಲುಗಿನಮೇಲೆ ಉರುಳುತ್ತವೆ. ಕಂಬನಿಯ ಕಾಲುವೆ ಕೋಡಿಗಟ್ಟಿ ಹರಿಯುತ್ತದೆ.

ಹೊಡೆತ....ಬಡಿತ....

ಚೀರಾಟ....ನರಳಾಟ....ಕೂಗಾಟ....

ಮೇಲಾಗಿ,

ವಂದೇಮಾತರಂ...!

ಭಾರತಾಂಬೆಯ ಬಿಸಿಯುಸಿರು ಸುಯ್ಯೆಲರ ಸುಯ್ಲಿನೊಡನೆ ಸೇರಿ ದಿಗಂತದಿಂದ ದಿಗಂತರಕ್ಕೆ ಶೋಕಸಂದೇಶವನ್ನು ಮುಟ್ಟಿಸುತಿತ್ತು. ದೇಶ ನಾಯಕರ ಸಿಂಹಘರ್ಜನೆ, ಗಾಂಧೀಜಿಯ ಅಮರ ಸಂದೇಶ ಬೆಂಕಿಯ ಬಲೆಗೆ ಮುನ್ನುಗ್ಗಲು ನೂರ್ಮಡಿಯ ಹುರುಪು ನೀಡುತಿದ್ದುವು. ಸ್ವಾತಂತ್ರ್ಯಜ್ವಾಲೆಯಲ್ಲಿ ಸಿಕ್ಕಿ ದೀಪದ ಕುಡಿಗೆರಗುವ ಪತಂಗಗಳಂತೆ ಬೇಯುವಾಗಲೂ ಭಾರತ ಮಾತೆಗೆ ಮಂಗಳವನ್ನು ಕೋರುತಿತ್ತು ಜನತೆ. ಸಾವು-ನೋವುಗಳಲ್ಲಿ ನಲುಗಿದ ಪ್ರಾಣಶಕ್ತಿ ಒಂದಕ್ಕೆ ಹತ್ತಾಗಿ ನೂರಾಗಿ ಜ್ವಲಿಸುವ ಸಾಹಸದ ಕತೆ ನಿಗಮಗೋಚರ ಮಾತ್ರ ಬಲ್ಲನೇನೋ...

ಮನೆಮನೆಯ ಗೆಳೆಯರು ಕೂಡಿದ ಗುಪ್ತ ಕೂಟದಲ್ಲಿ ಮಾದು ಕೇಳಿದ,

"ಈ ವಿಷಯದಲ್ಲಿ ನಿನ್ನ ಅಭಿಪ್ರಾಯವೇನು ?"

ಪ್ರಶ್ನೆ ಎದೆಯಾಳದಿಂದ ಹೊರಬಿದ್ದಾಗ ಒಂದೆರಡು ಘಳಿಗೆ ಏನು ಹೇಳಬೇಕೋ ಹೊಳೆಯಲಿಲ್ಲ. ಜಂಬೂರು ಶೇಷು ಆಶ್ಚರ್ಯಚಕಿತನಾಗಿ ಹುಬ್ಬೆತ್ತಿ ನೋಡಿದ, ತಕ್ಷಣ ಹರಿದ ಆ ಚುರುಕಾದ ನೋಟದಿಂದ ವಿಚಲಿತನಾಗದ ಮಾದು ಜಾಗೃತ ವೈಭವದಿಂದ ಎಳೆನಗು ಚೆಲ್ಲಿದ.

ವಾತಾವರಣ ಸುಮನೋಹರವಾಗಿತ್ತು ನಿಜ ; ಆದರೆ ಚಿದಾಕಾಶದಲ್ಲಿ ಕಾರ್ಮೋಡಗಳೆದ್ದಿದ್ದವು...

"ದೇಶ ನಮ್ಮದು ..ಆಸ್ತಿಪಾಸ್ತಿಗಳು ನಮ್ಮವು ...ದುಡಿಯುವವರು ನಾವು...ಮತ್ತೇಕೆ ಯೋಚನೆ ?" ಮಾದು ಮತ್ತೆ ಹುರುಪಿನಿಂದ ಪ್ರಶ್ನೆ ಹಾಕಿದ. ನೋಟ ಗೆಳೆಯರ ತಂಡದ ಪ್ರತಿಕ್ರಿಯೆಯನ್ನು ಗಮನಿಸುತಿತ್ತು.

"ಅದು ಸರಿಯೆ. ಆದರೂ ಒಳಿತು ಕೆಡಕುಗಳನ್ನು ನಿರ್ಣಯಿಸಿ ಮುಂದೆ ಹೆಜ್ಜೆ ಇಡುವುದು ಲೇಸು."

"ನಿಜ....ನಿಜ." ಅನೇಕ ದನಿಗಳು ಅನುಮೋದಿಸಿದುವು.

"ದುಡುಕಿ ದೂರ್ತರ ಕೈಗೆ ಸಿಕ್ಕಿಕೊಂಡಲ್ಲಿ ಬಹಳ ಕಷ್ಟ."

ಮಾದು ಏನೋ ಒಂದು ರೀತಿಯಲ್ಲಿ ಸಂದಿಗ್ಧತೆಗೊಳಗಾದಂತೆ- "ಇಲ್ಲಪ್ಪಾ ಇದುವರೆವಿಗೆ ಎಂದಾದರೂ ಆ ರೀತಿ ನಡೆದಿದೆಯೇ ? ಬೇಕಾದರೆ...."

ಪ್ರಶ್ನೆಯೇನೋ ಹೊರಬಿತ್ತು. ಆದರೆ ಅದು ತನ್ನಂತರಂಗವನ್ನೇ ಪರೀಕ್ಷಿಸಿಕೊಂಡಂತಿತ್ತು...ಅಂದಿಂದಿಗೂ ಭಾರತಮಾತೆಯ ಶುಭಚರಣಗಳಲ್ಲಿ ಆತ್ಮಾಹುತಿ ಮಾಡಿಕೊಂಡ ಶಾಂತಿವೀರರು ಚಿತ್ತಭಿತ್ತಿಯಲ್ಲಿ ಸುಳಿದು ಹೋದರು. ದೇಶಕ್ಕಾಗಿ ಧರ್ಮಕ್ಕಾಗಿ ಕೊರಳೆತ್ತಿ ಕೂಗುವ ಮಾನವತೆ ಹೃದಯ ಸಮುದ್ರದಲ್ಲಿ ಕೈಯಾಡಿಸಿದಂತಾಯಿತು. ಒಡನೆ ಮೈಯೆಲ್ಲ ಸಂಕೋಚದ ಮುದ್ದೆಯಾದರೂ ಹಠಾತ್ತಾಗಿ ಸುಧಾರಿಸಿಕೊಳ್ಳುತ್ತ ಯೋಚಿಸಿದ....ಮನೆ ಮಠಗಳನ್ನು ಬಿಟ್ಟು ಬೀದಿ ಹೋಕರಂತೆ ಅಲೆಯುತ್ತ ದೇಶಕಾರ್ಯದಲ್ಲಿ ತೊಡಗಿದುದರ ಪ್ರಭಾವ ಊರು ಹಾಳು ಸುರಿಯುವಿಕೆ....ಕೇರಿ ಕಂಗೆಟ್ಟಿರುವಿಕೆ ಬಚ್ಚಿಟ್ಟರೂ ಅಗೋಚರವಲ್ಲ. ಇನ್ನು ಕೆರೆಕಟ್ಟೆಗಳನ್ನು ಒಡೆದರಂತೂ ಕುಡಿಯಲು ನೀರಿಗೂ ಸಂಚಕಾರ....ಆತನ ವಾದದಲ್ಲಿ ಹುರುಳಿಲ್ಲದಿಲ್ಲ. ಆದರೆ ಎಲ್ಲಿಯ ತನಕ ಈ ಅನಿಶ್ಚಿತ ಪರಿಸ್ಥಿತಿ ? ಕಾಲಹರಣ ಮಾಡುವ ಬಗೆಯೆಂತು ?.... ಯೋಚನಾಲಹರಿಗಳು ಏರುಪೇರಾದುವು. ಚಿಂತೆಯ ಕೀಟ ಮನವನ್ನು ಭೈರಿಗೆಯಂತೆ ಒಳಗಿಂದೊಳಗೆ ಕೊರೆಯಹತ್ತಿತು. ಒಂದೆರಡು ಘಳಿಗೆ ಬದಿಗಿಟ್ಟ ವ್ಯಕ್ತಿತ್ವವನ್ನು ಮತ್ತೆ ಪಡೆದಂತೆ ಪ್ರಭಾವಿತನಾಗಿ ಸ್ವಭಾವ ಜನ್ಯವಾದ ಶಾಂತ ಸ್ವರದಲ್ಲಿ ಹೇಳಿದ,

"ಕಟ್ಟಿಗೆಯಿಲ್ಲದೆ ಕಿಚ್ಚು ಉರಿಯಬಲ್ಲುದೇ ?... ಕಿಚ್ಚನ್ನು ನಂದಿಸಬಾರದೆಂದರೆ ಏನಾದರೂ ಆಹುತಿ ನೀಡಲೇಬೇಕಷ್ಟೆ....ಇದು ಯಾರ ತಪ್ಪೂ ಅಲ್ಲ; ಪ್ರಕೃತಿಯ ನಿಯಮ."

"ಸರಿಯಾದ ಮಾತು. ನಾನೂ ಅದನ್ನೇ ಹೇಳಬೇಕೆಂದಿದ್ದೆ." ತಾಳಗಟ್ಟಿ ಮಂಜುನಾಥ್ ನಡುವೆ ಬಾಯಿ ಹಾಕಿದ. ಕಣ್ಣುಗಳಲ್ಲಿ ಮಿನುಗುವ ಸಮಯೋಚಿತ ಮಿಂಚು ಭಾವಪೂರ್ಣವಾಗಿತ್ತು. ತಮ್ಮನನ್ನು ತಡೆಯುತ್ತ ಬೆಳ್ಳಿಯಪ್ಪ ಕೇಳಿದ "ಸೌದೆ ಉರಿಸುವ ಕಡೆ ಮರಮುಟ್ಟುಗಳನ್ನು ಉರಿಸುವ ಯೋಚನೆ ಮಾಡುವುದುಂಟೇ ?"

"ಆದರೂ__!"

"ಭವಿಷ್ಯತ್ತಿನಲ್ಲಿ ಒಂದಲ್ಲ ಒಂದುದಿನ ದೇಶಕ್ಕೆ ಸ್ವಾತಂತ್ರ್ಯ ಲಭಿಸು

ವುದು ಅಸಂಭವವೇನಲ್ಲ; ಕೋಟ್ಯಾನುಕೋಟಿ ಕರ್ಮಶೀಲರ-ದೀನ ದುಃಖಿಗಳ ಆರ್ತನಾದವನ್ನು ಬ್ರಿಟಿಷರ ಕುತಂತ್ರ-ಕುಯುಕ್ತಿ-ಕುತ್ಸಿತ ಮನೋಭಾವ ಅಡಗಿಸಲಾರದು....ಹತ್ತಿಕ್ಕಲಾರದು...ಮತ್ತೇಕೆ ತಡೆ? ಸ್ವಾತಂತ್ರ್ಯ ಒಂದೇ ನಮ್ಮ ಗುರಿ...! ಇದುವರೆಗೆ ಆಗಿರುವ ನಷ್ಟ ಅಲ್ಪವೇನಲ್ಲವಲ್ಲ? ಇಲ್ಲಿಗೆ ಕೈಬಿಟ್ಟಲ್ಲಿ ಏನು ಸಾಧಿಸಿದ ಹಾಗಾಯಿತು ?"

.. ಅತೀತಯುಗದ ಗಾಢಾಂಧಕಾರದ ಮಾರ್ಗಯೋಗದಲ್ಲಿ ಊರ್ಧ್ವಮುಖಿಯಾಗಿ ಪಯಣಿಸುವ ನವ್ಯಮಾನವನ ಗಮ್ಯಸ್ಥಾನ ಇನ್ನೆಷ್ಟು ದೂರದಲ್ಲಿದೆಯೋ ಏನುಕತೆಯೋ ಎಂದು ಅನುಮಾನಿಸುವುದು ಸಹ ಸಂಭವನೀಯ.... ಆದರೆ ಇವೆಲ್ಲ ಅರ್ಥವಿಲ್ಲದ್ದು!...ಈಸಲ ಗುರಿ ಮುಟ್ಟುವುದರಲ್ಲಿ ಅನುಮಾನವೇ ಇಲ್ಲ, ಈ ಜೀವಿತದಲ್ಲಿ 'ಆನಂದ' ಎಂಬುದು ನಮ್ಮ ಹಣೆಯಲ್ಲಿ ಬರೆದಿದ್ದರೆ ಅದು ಖಂಡಿತ ಸ್ವಾತಂತ್ರ್ಯದ ಮೂಲಕ ಲಭಿಸುತ್ತದೆ. ಅನಂತರ ಭಾರತಿಯ ಉಡಿಯಲ್ಲಿ ನಿಶ್ಚಿಂತೆಯಿಂದ ಜೀವಿಸಬಹುದು, ಅಷ್ಟೇ ಅಲ್ಲ ನಿಶ್ಚಿಂತೆಯಿಂದ ಸಾಯಲೂಬಹುದು...

ಅಭಿಮಾನಪೂರ್ಣವಾದ ದನಿ ತರ್ಕವಿತರ್ಕಗಳ ಸಮುದಾಯದಿಂದ ಹೊರಬಿದ್ದಾಗ ಅನುಮಾನರಹಿತವಾದ ನಿರ್ಮಲಭಾವ ಮುಖಮಂಡಲವನ್ನು ಆವರಿಸಿತ್ತು. ಸ್ವಲ್ಪವೂ ವಿಚಲಿತನಾಗದೆ ನುಡಿದ ಮಾದು,

"ಇರಲಿ, ಇರಲಿ....'ಕರ್ತವ್ಯಪಾಲನೆ, ಎಂಬುದು ಮಕ್ಕಳಾಟವಲ್ಲ."

"ಹಾಗೆಂದು ಅತೀತವರ್ತನೆಯಿಂದಒಮ್ಮೆಗೇ ಮುಗಿಸಬಹುದೆಂದು ಭಾವಿಸಿದರೆ ಅದು ಮಕ್ಕಳಾಟವೇ ಹೊರತು ಮತ್ತೇನಲ್ಲ."

"ಯಾವುದೇ ವಿಧಿ ವಿಧಾನಗಳಿಂದ ರಾಜಕೀಯ ಮಾಲಿನ್ಯವನ್ನು ಕಳೆಯುವುದು ಅಷ್ಟು ಸುಲಭವಲ್ಲ. ರಾಜಕೀಯ ಕ್ಷೇತ್ರ ಎಷ್ಟು ವಿಶಾಲವಾದುದೋ ಮಾಲಿನ್ಯವೂ ಅಷ್ಟೇ ವಿಶಾಲವಾದುದು."

"ನಿಜ....ಕಾಡುಗಳಲ್ಲಿ ಕಲ್ಯಾಣಪುಷ್ಪ ಅರಳುವುದು ಸಾಧ್ಯವೇ ?... ಈಗ ಹೇಳಿ, ಏನು ಮಾಡೋಣ ? ನಮ್ಮ ಕಾರ್ಯಕ್ರಮಕ್ಕೊಂದು ರೂಪು ಕೊಡಬೇಕಲ್ಲ? 'ದೇಶಸೇವೆ' ಎಂಬ ಉದ್ರೇಕದಲ್ಲಿ ಸಿಲುಕಿಕೊಂಡರೆ ವಾಸ್ತವಿಕ ಜಗತ್ತೇ ಮಿಥ್ಯೆಯಾಗಿ ಕಾಣುವುದರಲ್ಲಿ ಆಶ್ಚರ್ಯವಿಲ್ಲ !"

"ನೀನು ಸರಿಯಾಗೇ ಹೇಳಿದ್ದಿ. ಸ್ವಂತ ಅನುಭವ !"

ಎಲ್ಲರ ಮುಖದಮೇಲೂ ಮುಗುಳ್ನಗೆ ಅರಳಿತು.

"ಸಮರ್ಥ–ಸಭ್ಯತೆ ಒಂದುಗೂಡಿದರೇನೇ ಶೋಭೆ. ಆದರೆ ಬ್ರಿಟಿಷರ ಉಚ್ಚಾಟನೆಯಾಗಬೇಕಾದರೆ ವಿಧ್ವಂಸಕ ಕಾರ್ಯಗಳಿಂದಲ್ಲದೆ ಸಾಧ್ಯವೇ ಇಲ್ಲ ..ಅದೇ ಈಗ ಬಂದಿರುವ ತಲೆನೋವು."

"ಅದೇನೇ ಇರಲಿ, ಪ್ರತಿಯೊಂದು ಕಾರ್ಯವನ್ನೂ ಅರಿತು ನುರಿತು ಮಾಡುವುದರಲ್ಲೇ ವಿಶೇಷ...ಈ ಆಂದೋಳನದಿಂದ ದೇಶಕ್ಕೆ ಒಳ್ಳೆಯದಾಗುವುದೋ ಇಲ್ಲವೋ ಭಗವಂತನೇ ಬಲ್ಲ. ಒಳ್ಳೆಯದಾಗುವುದೆಂಬ ಧೃಢ ನಂಬಿಕೆ ನಮಗಿದೆಯಲ್ಲಾ, ಇರಲಿ. ಅದನ್ನೇಕೆ ಕೆಡಿಸುವುದು? ಖಂಡಿತ ಒಳ್ಳೆಯದೇ ಆಗುವುದೆಂದು ನಂಬೋಣ....ಈ ದೇಶ ನಮ್ಮದು. ಅದರ ಒಳಿತು–ಕೆಡಕುಗಳೂ ನಮ್ಮವೇ. ತಿಳಿದೂ ತಿಳಿದೂ ಹೆಜ್ಜೆಯನ್ನು ತಪ್ಪಿ ಇಟ್ಟಲ್ಲಿ ನಾವು ಕೆಡುವುದಲ್ಲದೆ ದೇಶವೂ ಕೆಡುತ್ತದೆ. ಆದ್ದರಿಂದ ಈ ಯೋಜನೆ ಅನುಚಿತವಾದುದು."

ವಾದಸರಣಿ ನಿರರ್ಗಳವಾಗಿ ಹೊರಬಿತ್ತು. ಶ್ರೋತೃಗಣ ಯೋಚನಾಶೀಲರಾದುದರಿಂದ ಘಳಿಗೆ ಘಳಿಗೆಗಳೂ ನೀರವನೆಯ ಮೋಹಕ ಸಾಮ್ರಾಜ್ಯದಲ್ಲಿ ನಿರಾತಂಕವಾಗಿ ಉರುಳಿದುವು ...ಸ್ಮರಣೆಯ ಹಾದಿಯಲ್ಲಿ ಸುಜಲಾ, ಸುಫಲಾ, ಸಸ್ಯಶ್ಯಾಮಲಳಾದ ವಿನೀತ ವಿನಮ್ರ ಮಾತೃಭೂಮಿಯ ಮನಮೋಹಕ ಭಂಗಿ ಮೂಡಿ ನಿಂತಿತು. ಈಗಾಗಲೇ ಅಸಂಖ್ಯಾತ ಮಕ್ಕಳನ್ನು ಕಳೆದುಕೊಂಡ ದುಃಖಿನಿ...ದಾಸ್ಯ ಜೀವನದಲ್ಲಿ ನೊಂದ ಜನನಿ....ಈ ನಿಶ್ಶಬ್ದ ಸ್ಥಿತಿಯಲ್ಲೂ ತನ್ನನ್ನು ಕರ್ಮಚಾರಿಯನ್ನಾಗಿ ಮಾಡುತ್ತಿರುವ ಸುಹಾಸಿಣೀಯಾರ ದಿವ್ಯ ಚರಣಗಳಲ್ಲಿ ತನ್ನನ್ನು ತಾನು ಸಮರ್ಪಿಸಿಕೊಂಡು ಮುಂದೆ ಮುಂದೆ ಧೃತಿಗೆಡದೆ ಸಾಗುತ್ತಿರುವನೋ ಆ ಜನನಿಯ ಸುಂದರ ಚರಣಗಳು ಮನದಲೆಯಲ್ಲಿ ಮೂಡಿಬಂದುವು. ಮಾಡು ಭಾವೋದ್ವೇಗದಿಂದ ನುಡಿದ,

"ಸರಕಾರಿ ಕಟ್ಟಡಗಳ ಮೇಲೆ ಅರಮನೆಗಳ ಮೇಲೆ ರಾಷ್ಟ್ರೀಯ ಬಾವುಟ ಹಾರಿಸಿದರೆಂಬ ಕಾರಣಕ್ಕಾಗಿ ಸ್ವಯಂ ಸೇವಕರನ್ನು ಗಲ್ಲಿಗೇರಿಸಲಿಲ್ಲವೇ ? ನಾವು ಏನೇ ಮಾಡಿದರೂ ಹೇಗೇ ನಡೆದರೂ ನೇಣುಗಂಬವೇ ಅಂತಿಮ ಗುರಿ! ಅಂದಮೇಲೆ ಏನು ಚಿಂತೆ ? ಏನೇನು ಆಗುತ್ತೋ ಆಗಿಯೇ ಬಿಡಲಿ."

ಏನೋ ಒಂದು ರೀತಿಯಲ್ಲಿ ನನ್ನ ಹಾದಿಯಿಂದ ಸ್ವಲ್ಪ ಸರಿದಿದ್ದ ಮಾದು ಮತ್ತೆ ತನ್ನ ನಿಲುವನ್ನು ದೃಢೀಕರಿಸುತ್ತ ಆ ಮಾತನ್ನು ಘಂಟಾಘೋಷವಾಗಿ

ಹೊರಹಾಕಿದ್ದ. ಮುಖದ ವರ್ಚಸ್ಸು ಇದ್ದಕ್ಕಿದ್ದಂತೆಯೇ ಇಮ್ಮಡಿಗೊಂಡಿತು. ಕಣ್ಣುಗಳು ಮಿನುಗುವ ಉಲ್ಕೆಗಳಂತಾದುವು.

"ಹಾಗಲ್ಲಪ್ಪಾ, ಸ್ವಲ್ಪ ನಿಧಾನಿಸಬಾರದೇ ?"

"ನಿನ್ನದು ಯಾವಾಗಲೂ ಹೀಗೆಯೇ....ಬಹಳ ದುಡುಕು."

"ನಮ್ಮ ಸಲಹೆಗಳಿಗೆ ಮನ್ನಣೆ ದೊರೆಯದ ಮೇಲೆ ಮತ್ತೇಕೆ ಮುಂದಿಡಬೇಕು ಬಿಡಿ."

"ಬಿಡು...ಬಿಡು, ಇದೆಲ್ಲ ಸರಿಯಲ್ಲ."

ತನ್ನ ಸ್ವಾಭಿಮಾನಕ್ಕೆ ಧಕ್ಕೆಯುಂಟಾಗುತ್ತಲೂ ಸ್ವಲ್ಪ ಉದ್ರೇಕಗೊಂಡ. ಆದರೂ ಸಾವರಿಸಿಕೊಳ್ಳುತ್ತ ನಿಧಾನವಾಗಿ ನುಡಿದ ಮಾದು.

"ಯುಕ್ತಾಯುಕ್ತಗಳನ್ನು ಗಮನಿಸುವುದು ಸರಿಯೆ. ಸರಕಾರಕ್ಕೇ ಆಗಲೀ, ಇನ್ನಾರಿಗೇ ಆಗಲಿ ನಮ್ಮನ್ನೇಕೆ ಅರ್ಪಿಸಿಕೊಳ್ಳಬೇಕು ? ನಮ್ಮ ಹಾದಿ ನಮಗೆ."

ಈ ಬಗೆಯ ತರ್ಕವಿತರ್ಕ ಇಂದೇನೂ ಹೊಸದಲ್ಲವಾದರೂ ಇಂದು ಮಾತ್ರ ಒಮ್ಮತ ಮೂಡುತ್ತಲೇ ಇಲ್ಲ. ಅಂದಿಂದಿಗೂ ಏಕೀಭವಿಸಿ ರೂಪಿಸುತಿದ್ದ ಕಾರ್ಯಕ್ರಮ ಅಡೆತಡೆ ಇಲ್ಲದೆ ಸಾಗುತಿದ್ದುವು....ಇಂದಿನ ರೀತಿಯಲ್ಲಿ ಎಲ್ಲರಿಗೂ ತುಸು ಅಸಮಾಧಾನವೇ ಉಂಟಾಯಿತು.

"ಹೋಗಲಿ, ಬಿಡಿ. ಯಾಕೋ ಏನೋ ಒಂದೂ ಬಗೆಹರಿಯುತ್ತಿಲ್ಲ. ನಾಳೆ ಇನ್ನೊಮ್ಮೆ ಕೂಡಿದರಾಯಿತು. ಮನಸ್ಸಿಗೆ ಹಿತವಿಲ್ಲದಾಗ ಯಾವ ಕೆಲಸವನ್ನೂ ಕೈಗೊಳ್ಳಬಾರದು."

ಆ ಹಿತವಾದ ಹೊರಬಿದ್ದಾಗ ಬಿಟ್ಟಂಗಾಳ ರಾಮಕೃಷ್ಣ ಮುಗುಳುನಕ್ಕು ಹೇಳಿದ.

"ಇಷ್ಟಕ್ಕಾದರೂ ಮಾದು ಒಪ್ಪಿಕೊಂಡರೆ ಸಾಕಲ್ಲ."

ತೂಗುದೀಪದ ಪ್ರಶಾಂತವಾದ ಬೆಳಕಿನಲ್ಲಿ ದ್ವೈದೀ ಭಾವವಿಭಾವಗಳ ದುರ್ದಮ್ಯ ಛಾಯೆ ಎಲ್ಲರ ಮುಖದ ಮೇಲೂ ಸ್ಪಷ್ಟವಾಗಿ ಕಾಣಿಸುತಿತ್ತು. ಶೇಷು ಮುಖದಲ್ಲಿ ವೇದನೆಯ ಭಾವವನ್ನು ಗ್ರಹಿಸಿ ಮಾದು ನುಡಿದ.

"ಚಿಂತಿಸುವುದೇನಿದೆ? ಎಲ್ಲರಲ್ಲೂ ಅಭಿಪ್ರಾಯ ಭೇದವಿರುವುದು ಸಹಜ. ಇರಲಿ, ನೋಡೋಣ...ಕಾಲಗತಿ ಹೇಗೆ ಬರುತ್ತೆ ಅಂತ...."

ನಿಡಿನಾದ ಬಿಸಿಯುಸಿರು ಹೊರಬಿತ್ತು. ಶೇಷು ಪ್ರಯತ್ನಪೂರ್ವಕವಾಗಿ ಮುಗುಳು ನಕ್ಕ.

ಕೃಷ್ಣಪಕ್ಷದ ಕಾಳಗಪ್ಪು ಹೆಪ್ಪುಗಟ್ಟುತಿತ್ತು. ಹೊರ ಜಗತ್ತಿನಲ್ಲಿ ನೆಟ್ಟ ದೃಷ್ಟಿಯಾವುದೋ ಅನ್ವೇಷಣೆಯಲ್ಲಿ ತೊಡಗಿದಂತೆ ಸುತ್ತಮುತ್ತ ಹರಿದಾಡು ತಿತ್ತು. ಅಲ್ಲೊಂದು ಇಲ್ಲೊಂದು ಮಿಣುಕುವ ದೀಪಗಳು ಕಗ್ಗತ್ತಲೆಯನ್ನು ಎದುರಿಸಲಾರದೆ ನಾಚಿದಂತೆ ಮಸುಕು ಮಸುಕಾಗಿವೆ. ರಸ್ತೆಯಲ್ಲಿ ಜನ ಸಂಚಾರ ಇಲ್ಲವೆಂದೇನಿಲ್ಲ. ಲೋಕದ ಭಾರವನ್ನೆಲ್ಲಾ ಹೊತ್ತಂತೆ ಯಾವು ಯಾವುದೋ ವಿಚಾರಗಳ ತುಲನೆಯಲ್ಲಿ ಮೈಮರೆತು ಜೋಲು ಮುಖ ಹಾಕಿ ಕೊಂಡು ಸಾಗುವ ಹಿರಿಯ ಮಂದಿ ಭಾರವಾದ ಹೆಜ್ಜೆಗಳನ್ನು ದುಪು ದುಪು ಇಡುತಿದ್ದಾರೆ....ನೋಟ ಹಾಗೇ ಎಷ್ಟೋ ಹೊತ್ತು ಹರಿದಾಡಿ ಹಿಮ್ಮರಳಿದಾಗ ಗೆಳೆಯರೆಲ್ಲ ಹೊರಡುವ ತರಾತುರಿಯಲ್ಲಿದ್ದರು.

....ಸರಕಾರಕ್ಕೆ ಭಾರಿ ನಷ್ಟವಾದರೇನೆ. ಅಧಿಕಾರಕ್ಕೆ ಧಕ್ಕೆ....ಅದಲ್ಲದೆ ಈ ಸಣ್ಣಪುಟ್ಟ ವ್ಯವಹಾರದಲ್ಲಿ ತೊಡಗಿದರೆ ಪ್ರಯೋಜನವಿಲ್ಲವೆಂಬ ವಿಶ್ವಾಸ ಮಸ್ತಿಷ್ಕದಲ್ಲಿ ಹೇಗೆ ಪ್ರವೇಶಿಸಿತೋ ತಾನರಿಯ. ಆದರೂ ದೌರ್ಜನ್ಯಕಾರರ ಸಾಲಿಗೆ ಸೇರಿಕೊಳ್ಳುವುದು ಯುಕ್ತವಲ್ಲವೆಂಬುದು ರಕ್ತದ ಪ್ರತಿ ಕಣಕ್ಕೂ ಗೊತ್ತು. ಮತ್ತೆ ಆ ವಿಚಾರದಲ್ಲಿ ಪ್ರತಿವಾದನೆ ಹೂಡಿ ಸಭ್ಯತೆಯನ್ನು ಕಳೆ ಯಬಾರದೆಂದು ಸಾರಿ ಹೇಳುತಿತ್ತು ವಿವೇಕ....

ಶಿಷ್ಟಾಚಾರದ ಪ್ರಕಾರ ಎಲ್ಲರೂ ಒಬ್ಬರಿಗೊಬ್ಬರು 'ಗುಡ್ ನೈಟ್' ಹೇಳುವ ಬದಲಿಗೆ 'ವಂದೇಮಾತರಂ' ಹೇಳಿಕೊಂಡರು. ಸಭೆ ವಿಸರ್ಜನೆ ಯಾಯಿತು.

ಮೆಟ್ಟಲಿಳಿಯುವ ಮುನ್ನ ಬೆಳ್ಳಿಯಪ್ಪ ಅಂದ "ದುಡುಕಬೇಡ."

ಮಾದು ತುಟಿಗಳಲ್ಲಿ ಸರಳ ಸ್ನಿಗ್ಧಹಾಸ ಮಿನುಗಿ ಮಾಯವಾಯಿತು. ಯಾಂತ್ರಿಕವಾಗಿ ನಿರ್ಗಮಿಸಿದ. ಅಂತರ್ನಿಹಿತ ಭಾವನೆಗಳ ದುರ್ದಮ್ಯ ಛಾಯೆ ಮುಖಮಂಡಲದಲ್ಲಿ ಅಚ್ಚೊತ್ತಿದಾಗ ಹೃದಯ ದುಃಖದಿಂದ ಆಕ್ರೋ ಶಿಸುತ್ತಿರುವುದು ವ್ಯಕ್ತವಾಗುತಿತ್ತು. ನರನಾಡಿಗಳಲ್ಲಿ ಹರಿದಾಡುವ ನೆತ್ತರಿನ ಝುರಿ ಮೆಲ್ಲಮೆಲ್ಲನೆ ಹೆಪ್ಪುಗಟ್ಟುತ್ತಿರುವಂತೆ ಭಾಸವಾಯಿತು....

....ದೇಶದ ಬಹು ಸಂಖ್ಯಾತ ಪ್ರಜೆಗಳ ನಮ್ಮ ವಿನಂತಿಯನ್ನು ದುರ್ಲಕ್ಷಿಸುವುದು ಯಾವ ನ್ಯಾಯ ? ನಮ್ಮ ಬೇಡಿಕೆಗೆ-ಧರ್ಮಬದ್ಧವಾದ ವಿನಂತಿಗೆ-ನ್ಯಾಯಯುತವಾದ ಕೇಳಿಕೆಗೆ ಗೋಲಿಯ ಉತ್ತರ ! 'ಸತ್ಯಕ್ಕೆ ಜಯ' ಎಂಬುದು ಶತಸಿದ್ಧ....ಪ್ರಪಂಚ ಒಂದಲ್ಲ ಒಂದುದಿನ ನಮ್ಮ ವಿಶೇಷತೆಯನ್ನು ಖಂಡಿತ ಗ್ರಹಿಸುತ್ತದೆ. ಆದರೆ ಅಲ್ಲಿಯ ತನಕ ರಾಷ್ಟ್ರದ ಗತಿ? ನನಗೆ ದುಡುಕಿ ಕಿಚ್ಚು ಹಚ್ಚಬೇಕೆಂಬುದೇನೂ ಇಲ್ಲ. ನಾನೂ ಸಹ ಅವಕಾಶವಾದಿಯಾದ ಗೃಹಸ್ಥ. ಶಾಂತಿವಾದದಲ್ಲೇ ಗುರಿಮುಟ್ಟುವುದಾದಲ್ಲಿ ಯಾರಿಗೆ ಬೇಡ ? ಈ ಬ್ರಿಟಿಷರ ಕುಯುಕ್ತಿಯಲ್ಲಿ ಜಯ ಕನಸಿನ ಗಂಟು. ಹೇಗೂ ಹಾದಿ ತುಳಿದಿದ್ದೇನೆ! ದೂರಗಮ್ಯಸ್ಥಾನವನ್ನು ಸೇರದ ಹೊರತು ಸುಖಶಾಂತಿಗಳು ಲಭ್ಯವಲ್ಲ. ಈ ಅನಿಶ್ಚಿತ ಪರಿಸ್ಥಿತಿಯಲ್ಲಿ ಸುಖ ಜೀವನವೂ ಅಸಾಧ್ಯ. ಇನ್ನೆಷ್ಟು ಕಾಲ ಹೀಗೆ ?....

ಹಾದಿಯಲ್ಲಿ ಏಕಾಂಗಿಯಾಗಿ ನಡೆಯುತ್ತಿರುವ ಮಾದಯ್ಯನ ಶರೀರ ನಿಶ್ಶಕ್ತಿಯಿಂದ ತೂಗಾಡುತ್ತಿರುವಂತೆ ಗೋಚರಿಸುತಿತ್ತು. ಉದ್ವೇಗ-ಅಶಾಂತಿ-ಕಾತರತೆ-ಚಿಂತೆ ಮನವನ್ನು ಅವಿರಳವಾಗಿ ಮುತ್ತಿ ಘಾಸಿಗೊಳಿಸುತ್ತಿವೆ. ಎಷ್ಟೇ ಪ್ರಯತ್ನಿಸಿದರೂ ಕದಡಿದ ಮನಕ್ಕೆ ಶಾಂತಿಯನ್ನು ತಂದುಕೊಳ್ಳಲಾಗಲಿಲ್ಲ. ನೆರಳು ನೀಳವಾಗಿ ಮುಂದೋಡುತಿತ್ತು. ಹಾದಿಗರ ಮುಖದಮೇಲೂ ಅಶಾಂತಿ-ಉದ್ರೇಕಗಳ ಭಾವ ಕಂಡುಬರುತಿತ್ತು. ಅಂಗಡಿಗಳಲ್ಲಿ ವ್ಯಾಪಾರವೇನೋ ನಡೆಯುತಿತ್ತು. ಆದರೂ ಅನಿಶ್ಚಿಯತೆಯ ಭಯಮುದ್ರೆಯ ವ್ಯಾಪಕತೆಯನ್ನು ಅಲ್ಲಿಯೂ ಕಾಣಬಹುದಾಗಿತ್ತು.

ದೂರದಲ್ಲಿ ಬಿದಿರು ಮೆಳೆಯ ಮಸೆತ ಕಿವಿಗಳಿಗೆ ಸ್ಪಷ್ಟವಾಗಿ ಕೇಳಿಸುತಿತ್ತು-ಅವಾಸ್ತವಿಕತೆಯೊಡನೆ ನಡೆಯುವ ಸಾತ್ವೀಕತೆಯ ಸಂಧಿಯಂತೆ. ನಡಿಗೆ ಸಾಗುತ್ತಲೇಯಿತ್ತು-ಕಾಲಡಿಯ ಕರಿಯ ಹಾದಿ ಇನ್ನೂ ಉದ್ದುದ್ದ ಬೆಳೆಯುತ್ತಿದೆಯೋ ಎಂಬಂತೆ. ಗಾಳಿ ಯಾವ ಕಡೆಯಿಂದ ಯಾವಕಡೆಗೆ ಬೀಸುತ್ತಿದೆಯೋ ಹೇಳುವಂತಿಲ್ಲ. ಮೈ ಮುಖಗಳಿಗೆ ಸುಖವಾಗಿ ತಾಗಿದಾಗ ಮನಸ್ಸು ಆಹ್ಲಾದಗೊಳ್ಳುತಿತ್ತು.

....ಹಳ್ಳಿಯಲ್ಲಿ ಎಪಿಡಮಿಕ್ ಫಾರಮ್ ಆಗುತ್ತಿದೆ. ಇನ್ನು ಚುಚ್ಚು ಮದ್ದು ತೆಗೆದುಕೊಂಡು ಹಳ್ಳಿಗಳಿಯುದಿದ್ದಲ್ಲಿ ಸಾವಿನ ಸಂಖ್ಯೆ ಸಹ ಕಡಿಮೆ

ಇರುವುದಿಲ್ಲ. ಈ ವ್ಯವಹಾರದಿಂದ ತನಗೂ ಯಮಗಂಡ ತಪ್ಪಿದ್ದಲ್ಲ. ಹೇಗಾದರೂ ಈ ಬಡ ಜೀವನವನ್ನು ಉದ್ಧರಿಸದೆ ಹೋದಲ್ಲಿ ಸಾರ್ವಜನಿಕ ಕ್ಷೇತ್ರಕ್ಕೆ ಇಳಿದುದೂ ಸಹ ಪ್ರಯೋಜನವಿಲ್ಲ. ಎಷ್ಟೋ ಸಮಯ ಸೇವೆಯ ಮಾತಿರಲಿ, ಗುಟುಕು ನೀರು ಹೊಯ್ಯುವವರಿಲ್ಲದೆ ಪ್ರಾಣ ತೆತ್ತವರೂ ಉಂಟು. ಮುಗ್ಧ ಜನ... ಗಹನವಾದ ವಿಚಾರಗಳು ತಿಳಿಯುವುದಿಲ್ಲ. ಕಾಯಿಲೆಯ ಸ್ವರೂಪವನ್ನರಿಯದೆ ಉದಾಸೀನ ಮಾಡಿ ಮೃತ್ಯುವಿನ ಪಾಲಾಗುತ್ತಾರೆ. ಹೇಗೆ ಈ ಜೀವನದುದ್ಧಾರವೋ ದೇವರೇ ಬಲ್ಲ ..

ಹಿಂದಿನ ಸಾಲಿನಲ್ಲಿ ಬಡಜನರ ಕಷ್ಟನಷ್ಟಗಳನ್ನು ಕಣ್ಣಾರೆ ಕಂಡಿದ್ದುದರಿಂದ ಅಂತರಂಗದಲ್ಲಿ ಅನುಪಮ ಸಹಾನುಭೂತಿ ಮೂಡಿತು. ಮಾದು ದೀರ್ಘವಾದ ನಿಟ್ಟುಸಿರು ಬಿಟ್ಟು ಮುಂದಡಿಯಿಟ್ಟ. ಅರ್ಥಭರಿತವಾದ ಉಷ್ಣೋಷ್ಣ ಜ್ವಾಲೆಗಳೇಳುತ್ತಿವೆ... ಶಾಂತಿಯ ಹೆಸರಿನಲ್ಲಿ ಎಣೆಯಿಲ್ಲದ ಕಷ್ಟಕಾರ್ಪಣ್ಯಗಳನ್ನನುಭವಿಸುತ್ತ ತೊಳಲುವುದೇ ಆಗಿರುವುದರಿಂದ ಕ್ರಾಂತಿಜ್ಯೋತಿಯ ಕುಡಿಯನ್ನು ಉಜ್ವಲಗೊಳಿಸುವುದು ಸಾಧ್ಯವಾಗುತ್ತಿಲ್ಲವೇನೋ... ತೋಟಗಳ ಕೂಲಿಗಾರರು ಅನುಗಾಲವೂ ಚಳವಳಿಗೆ ಬೆಂಬಲಿಸುತ್ತಿದ್ದರು. ಈಗ ಮೃತ್ಯು ಪ್ರತಿಯೊಬ್ಬರ ಮುಖದ ಮೇಲೂ ಛಾಯೆಯನ್ನು ಬೀರಿದೆ- ಇನ್ನು ಅವರ ಸಹಕಾರವೂ ಕಷ್ಟ. ಈ ವಾತಾವರಣದಲ್ಲಿ ಅನುಭವಿಸಬೇಕಾದ ರಾಜಕೀಯ ಜ್ವರ ಡಿಂಗೂ ಜ್ವರಕ್ಕೇನೂ ಕಡಿಮೆ ಇರುವುದಿಲ್ಲ. ಕೆಲವೊಮ್ಮೆ ಅದಕ್ಕೂ ಮಿಾರಿ ಮೃತ್ಯುವಿನ ಪಾಲಾಗುವುದು ಹೊಸದಲ್ಲವಷ್ಟೆ ...?

ಅದುವೇ ಜೀವನ...!

ಅಲ್ಲ, ಅಲ್ಲ. ಸಂಪೂರ್ಣ ಸೌಂದರ್ಯದಿಂದ ಕೂಡಿದ, ಪರಿಪೂರ್ಣವಾದ ಆರೋಗ್ಯದಿಂದ ಕೂಡಿದ ಭವ್ಯ ಭವಿತವ್ಯವನ್ನು ವಿಧಿಯ ಕೈಯಲ್ಲಿ ಅಡವಿಟ್ಟು ಅಮೂಲ್ಯವಾದ ಕಾಲವನ್ನು ವ್ಯರ್ಥಗೊಳಿಸುತ್ತಿರುವೆ ಎಂಬ ಕಮನೀಯ ಕಠೋರವಾಣಿ ಕಿವಿಯ ಸನಿಹದಲ್ಲಿಯೇ ಕೇಳಿ ಬಂದಂತಾಯಿತು. ಒಡನೆ ದೇಹದಾದ್ಯಂತ ಮೈನವಿರೆದ್ದಿತು. ಮಾದು ತಲೆಬಾಗಿ ಹೆಜ್ಜೆಹಾಕಿದ. ಆದೇಶ ಮೀಯದಿದ್ದರೂ ಕಾಲುಗಳು ಚುರುಕುಗೊಂಡುವೇನೋ...

ಸ್ವಲ್ಪದೂರ–ಇನ್ನಷ್ಟುದೂರ ಹಾದಿ ಹೇಗೆ ಸಾಗಿತೋ ತಾನರಿಯ. ಕಾಲುಗಳು ಯಾಂತ್ರಿಕವಾಗಿ ನಡೆಯುತ್ತಲೇ ಇವೆ. ಅದೇ ಸಮಯದಲ್ಲಿ–ಬಹುಶಃ ತನ್ನಂತೆಯೇ ಮಾನಸಿಕ ವೈಫಲ್ಯಕ್ಕೆ ತುತ್ತಾಗಿ ಇಳಿಮೋರೆಯಿಂದ ಎದುರಾಗಿ ಬರುತಿದ್ದ ಅಮ್ಮಟ್ಟ ಗಣೇಶ ಕಣ್ಣಿಗೆ ಬಿದ್ದ. ಅವನು ಅಲ್ಲಿಂದಲೇ ಹುಬ್ಬೇರಿಸಿದ "ಏನಪ್ಪಾ ...?"

"ಇದುವರೆವಿಗೂ ಕಾಣಲಿಲ್ಲವಲ್ಲಾ ಗಣೇಶ್ ?"

"ಪೊನ್ನಂಪೇಟೆಯಿಂದ ಬರುತ್ತಿರುವೆ."

"ಸರಿ ಮತ್ತೆ ..ಈಗ..." ಮಾತನ್ನು ಅಷ್ಟಕ್ಕೆ ತುಂಡುಗಡಿದು ಸ್ವಲ್ಪ ಯೋಚಿಸುವಂತೆ ಸುಮ್ಮನಾದ. ಗೆಳೆಯನ ಅನುಮಾನ ಪ್ರಕೃತಿ ಕುತೂಹಲ ಮೂಡಿಸಿತು. ಗಣೇಶ ಕೇಳಿದ "ಏನಪ್ಪಾ .. ಅಂತಾದ್ದು ?"

"ಜನ ಹಿತಕ್ಕಾಗಿ ದೇಶದ ಕಲ್ಯಾಣಕ್ಕಾಗಿ ಇದುವರೆಗೆ ಏನೇನು ನಡೆದಿದೆಯೋ ಅದನ್ನೆಲ್ಲ ವ್ಯರ್ಥ ..ಅನರ್ಥಗಳ ಪಟ್ಟಿಯಲ್ಲಿ ಸೇರಿಸಿ ಮೊಂಡುವಾದ ಹೂಡುವುದನ್ನು ನೋಡಿದರೆ ವೈರೋಪಾಂಚನವಾಗುತ್ತದೆ. ಉಚಿತಾನುಚಿತಗಳನ್ನು ಸರಿಯಾಗಿ ತುಲನೆ ಮಾಡದೆ ಹೋದರೆ ಬರುವ ಬೆಲೆ ಇಷ್ಟೆ."

ರಸ್ತೆ ನಿರ್ಜನವಾಗಿತ್ತು. ಅಂಗಡಿ ಬಾಗಿಲುಗಳು ಮುಚ್ಚಿಯಾಗಿದೆ. ಹಾದಿಯಂಚಿನಲ್ಲಿ ಸಾಲಾಗಿ ನಿಂತ ಕರಿಯ ವಿದ್ಯುದ್ದೀಪಸ್ತಂಭಗಳು ಅಂಗರಕ್ಷಕರಂತೆ ಅಭಯಹಸ್ತಗಳಿಂದ ಬೆಳಕನ್ನು ಮಂದಕಾಂತಿಯಲ್ಲಿ ಚೆಲ್ಲುತ್ತಿವೆ. ಲಕ್ಷಗಟ್ಟಲೆ ದೀಪದ ಹುಳುಗಳು ದೀಪದ ಬೆಳಕಿಗೆ ಮುತ್ತುವ ಭರದಲ್ಲಿ ಹಾರಿ ಹಾರಾಡಿ ಬಳಲಿ ರೆಕ್ಕೆಗಳನ್ನು ಕಳೆದುಕೊಂಡು ಕೆಳಗೆ ಬಿದ್ದು ತಳಮಳಿಸುತ್ತ ಮುಲಮುಲನೆ ಹರಿದಾಡುತ್ತಿದ್ದುವು.

"ಯಾವ ವಿಚಾರ ಒಬ್ಬರಿಗೆ ವ್ಯರ್ಥವೋ ...ಅದು ಇತರರಿಗೂ ನಮಗೂ ವ್ಯರ್ಥವೆಂದು ಭಾವಿಸುವುದು ಹೇಗೆ ? ವ್ಯರ್ಥ–ಅನರ್ಥಗಳ ತರ್ಕ ನಾವೇ ಮಾಡಿಕೊಂಡರಾಯಿತು. ಒಳಿತು ಕೆಡಕುಗಳು ಮುಚ್ಚಿಡುವ ವಸ್ತುಗಳಲ್ಲವಷ್ಟೆ ?" ಮುಖದಲ್ಲಿ ಸ್ವಭಾವಬದ್ಧವಾದ ಗಂಭೀರತೆ ಅಚ್ಚೊತ್ತಿತ್ತು.

"ಅದೇ ಮುಖ್ಯವಾದುದು ..ಇನ್ನೇನು ಬೇಕು ? ನನಗೆ ಅದೇ ಸಮಾಧಾನ."

"ಸರಿ ಬಿಡು....ಯಾರು ಏನಾದರೂ ಅಂದುಕೊಳ್ಳಲಿ."

ಆ ಮಾತು ಏನೋ ಒಂದು ಬಗೆಯ ಸಮಾಧಾನ ಮೂಡಿಸಿತು. ಮರುದಿನದ ಕಾರ್ಯರಂಗಕ್ಕೆ ಸಮಯ–ಸ್ಥಳಗಳನ್ನು ಸೂಚಿಸಿ ಅವನನ್ನು ಬೀಳ್ಕೊಟ್ಟು ಟಾರ್ಚಿನ ಬೆಳಕಿನ ಸಹಾಯದಿಂದ ತನ್ನ ಹಾದಿಹಿಡಿದ ಮಾದು. ಕಾಫಿತೋಟದ ಆ ಸುಂದರ ಹಾದಿಯನ್ನು ಕಳೆದು, ಮನೆಯನ್ನು ಸೇರುವವರೆಗೂ ರಾಜಕೀಯ ವಿದ್ಯಮಾನಗಳ ನೆಲೆಯಲ್ಲಿ ಹರಿದಾಡುತಿತ್ತು ಚಿತ್ತ. ಹಾದಿ ಕಳೆದುದರ ಪರಿವೆಯೂ ಗಮನಕ್ಕೆ ಬರಲಿಲ್ಲ. ಅಂಗಳಕ್ಕೆ ಕಾಲಿಟ್ಟೊಡನೆಯೇ ಎಂದಿನಂತೆ ನಾಯಿಗಳು ಅತ್ಯಾನಂದದಿಂದ ಸ್ವಾಗತ ನೀಡಿದುವು.

ಮನೆ ಮೆಟ್ಟಿಲು ಹತ್ತಿದಾಗ ವೃದ್ಧ ಜನನಿ ಎದುರಾದಳು. ತೂಗುದೀಪ ಉಜ್ವಲಕಾಂತಿಯಿಂದ ಬೆಳಗುತಿತ್ತು. ವೃದ್ಧೆಯ ಮುಖದ ಮೇಲೆ ಹರಿದಾಡುವ ಯೋಚನಾಲಹರಿ ದೀಪಕಾಂತಿಯಲ್ಲಿ ಸ್ಪಷ್ಟವಾಗಿ ಕಾಣಿಸುತಿತ್ತು. ಪ್ರೇಮಭರಿತ ಮನೋವೇಗದಿಂದ ತಕ್ಷಣ ಮುಖಮಂಡಲ ಆರಕ್ತವಾಯಿತು. ಏನು ಹೇಳುತ್ತಿರುವೆನೆಂಬುದನ್ನು ಸಹ ಯೋಚಿಸದೆ ನುಡಿದಳು,

"ನೀನು ಇದೇನು ನಡೆಸುತ್ತಿರುವೆ ?....ಈ ಕಾರಸ್ಥಾನ ಅರ್ಥವೇ ಆಗುವುದಿಲ್ಲ !"

ಮಾದು ಒಂದು ಘಳಿಗೆ ಹಾಗೇ ನಿಂತು ನಸುನಕ್ಕು ನುಡಿದ,

ಯಾರೇನಾದರೂ ಅಂದುಕೊಳ್ಳಲಿ, ನಿಮಗೆ ಬೇಸರವಾಗುವಂತಹ ಯಾವ ವ್ಯವಹಾರವನ್ನೂ ನಿಮ್ಮ ಮಾದು ನಡೆಸುವುದಿಲ್ಲ ಬಿಡಿ."

ಜನನಿಯ ಕಣ್ಣಾಲಿಗಳು ನಸುರಂಗು ತಳೆದುವು. ಏನೋ ಒಂದು ರೀತಿಯ ಸಮಾಧಾನ ತುಂಬಿಕೊಂಡು ನುಡಿದಳು. "ನಾನೆಲ್ಲವನ್ನೂ ಬಲ್ಲೆ ಮಗೂ....ಈ ಮನಸ್ಸೊಂದುಂಟಲ್ಲ; ಇದ್ದಕ್ಕಿದ್ದಂತೆ ಕಳವಳ ತುಂಬಿ ಬಿಡುತ್ತೆ."

"ದೇವರಿಲ್ಲಿದ್ದಾನೆ !"

"ದೇವರಿಲ್ಲಿದ್ದಾನೆಂದು ಸಮುದ್ರದಲ್ಲಿ ಮುಳುಗಿದರೆ ಆದೀತೆ?ರಾಜಕೀಯ ಭಿನ್ನಾಭಿಪ್ರಾಯಗಳಿಂದ ವರ್ಗಭೇದಗಳು ಮೇಲೇಳುತ್ತನೆ. ಅವೇ ನಿಜವಾದ ವಿಪತ್ತುಗಳು !"

ಮಾದು ನಕ್ಕು ಬಿಟ್ಟ.

ವೃದ್ಧ ಜನನಿ ಭಾರವಾದ ದನಿಯಲ್ಲಿ ಮುಂದುವರಿದಳು "ಅದಕ್ಕೇಕೆ ಇಷ್ಟು ಪ್ರಾಧಾನ್ಯತೆ ಕೊಡಬೇಕೆಂಬ ಯೋಚನೆ ನಿನಗಿರಬಹುದು...ಆದರೆ ಅನೇಕರಿಗೆ ಅದರಲ್ಲೇ ಪ್ರಗತಿ !"

"ಆಗಲಿ, ಬಿಡಿ."

"ತಪ್ಪಾಗಿ ಭಾವಿಸುತ್ತಿರುವೆ ಮಗೂ...ಅಂದಿಂದಿಗೂ ಇಂತಹ ಸುಖ ದುಃಖಗಳ ನಡುವೆ ಒದ್ದಾಡಿ ಈ ಜೀವ ವೃದ್ಧಾಪ್ಯದಲ್ಲಿ ಕಾಲಿಟ್ಟಿದೆ. ಇದುವರೆಗೆ ಎಷ್ಟೆಷ್ಟು ಪ್ರಬಂಧಗಳ ಪ್ರಾಕಾರಗಳನ್ನು ದಾಟಿಯಾಗಿದೆಯೋ ನಾನು ಎಂದೂ ಸೋಲಲಿಲ್ಲ ಎಂದೇನಲ್ಲ. ಪ್ರತಿಹೆಜ್ಜೆಗಳನ್ನು ನೋಡಿ ಮುಂದಿಡದಿದ್ದರೆ ಗತಿಗೆಟ್ಟಂತೆಯೇ ಸೈ. ತಿಳಿದೂ ತಿಳಿದೂ ರಾತ್ರಿ ಕಂಡ ಬಾವಿಗೆ ಹಗಲು ಧುಮುಕುವ ಸಾಹಸ ನಮಗೆ ಬೇಡ ಕಂಡೆಯಾ...." ದನಿ ಎದೆಯಾಳದಿಂದ ಆತಂಕ-ಕಾರುಣ್ಯಗಳ ಕಾಲುವೆಯಲ್ಲಿ ಹರಿದು ಬಂತು. ಆ ಮುಹೂರ್ತದಲ್ಲಿ ಬೆಳಗಿದ ವರ್ಚಸ್ಸು ಅಸ್ತಮಾನ ಶೋಭೆಯನ್ನು ಪಡೆದುಕೊಂಡಿತ್ತು. ಆದರೂ ಭಾವವಿಭಾವಗಳ ತರಂಗಗಳಲ್ಲಿ ತೇಲಿಹೋಗುತ್ತಿರುವಂತೆ ಭಾಸವಾಗುವುದು. ವಿಷಯಗಳು ಹೊಳೆಯಲ್ಲಿ ಕೊಚ್ಚಿ ಹೋಗುವ ಹುಚ್ಚು ಸಹ ಹಿಡಿಯುವುದು-ಹೃದಯರಂಗದಲ್ಲಿ ನಾಟ್ಯವಾಡುತ್ತಿರುವ ಭಾವತರಂಗಿಣಿಯ ನೂಪುರದ ನಿನಾದ ಸ್ಪಷ್ಟವಾಗಿ ಕೇಳಿಸುತಿತ್ತು. ವೃದ್ಧೆ ಏನೋ ಒಂದು ಬಗೆಯ ಯೋಚನೆಯ ಭಾರದಿಂದ ಮಂತ್ರಮುಗ್ಧತೆಯಲ್ಲಿ ಸುಮ್ಮನಾದಳು.

ಆ ಮುಹೂರ್ತ ಎಲ್ಲಿ ಹೇಗೆ ಪ್ರಾರಂಭವಾಯಿತೋ ಹಾಗೆಯೇ ಪುರಾತನವಾಯಿತು–ಮರುಘಳಿಗೆಯ ಆವರ್ತನದಲ್ಲಿ ಸಿಕ್ಕಿ.

೨೨

ದಿನಾಂತಕಾಲೀನ ಶಾಂತ ಗಂಭೀರ ಸಂಧ್ಯೆ !

ಅವರ್ಣನೀಯ ಅದ್ಭುತ ಶಾಂತಿ ಅನುಭೂತವಾದಂತೆ ಅತ್ಯಂತ ಸಂಭ್ರಮ ವೇಗದಿಂದ ತೀಡುತಿತ್ತು-ಸೀಕರ ಸಿಕ್ತವೀಚಿ ವಾಯು.

ವನದೇಶದಿಂದ ಮಧ್ಯೆ ದಟ್ಟವಾದ ನೆರಳಿನ ನೆಲೆಯಲ್ಲಿ ಹರಿದ ಅಂಕು ಡೊಂಕಿನ ಹಳ್ಳತಿಟ್ಟುಗಳ ಜಲ್ಲಿಕಾಣದ ರಸ್ತೆಯಲ್ಲಿ ಹರಿದು ಬಂದ ಟ್ಯಾಕ್ಸಿ ಮನೆ ಬಾಗಿಲಲ್ಲಿ ನಿಂತಿತು. ಆ ರಸ್ತೆಯನ್ನು ಹೆಚ್ಚಾಗಿ ಯಾರೂ ಬಳಸುವುದಿಲ್ಲವಾದು ದರಿಂದ ಅದರ ದುರಸ್ತಿಯ ಕಡೆ ಗಮನವೂ ಹರಿಯದು. ಅಕ್ಕಪಕ್ಕದವರಾರೂ ಕಾರು-ಗಾಡಿಗಳನ್ನು ಹೆಚ್ಚಾಗಿ ಬಳಸುವುದಿಲ್ಲ. ಸಮೀಪದ ಹೆದ್ದಾರಿಯಲ್ಲಿ ಬಸ್ಸು ಓಡಾಡುವುದರಿಂದ ಎಲ್ಲರೂ ಒಳಹಾದಿಗಳ ಮೂಲಕ ಹೋಗಿ ಬಸ್ಸು ಹಿಡಿಯುತ್ತಾರೆ. ಅವಶ್ಯಕತೆ ಬಿದ್ದಾಗ ಮಾತ್ರ ಆ ರಸ್ತೆಯಲ್ಲಿ ಗಾಡಿ–ಕಾರು ಓಡಾಡುತ್ತವೆ.

ಟ್ಯಾಕ್ಸಿ ಬಂದುನಿಂತ ಸದ್ದುಕೇಳಿ ಪೊನ್ನಮ್ಮ ಹೊರಬಂದಳು. ಡ್ರೈವರ್ ಬಾಗಿಲು ತೆರೆದು ಹಿಡಿದ. ಬಂದವರು ಪೂವಿಯ ತಂದೆ-ತಾಯಿ, ಅಣ್ಣ-ಅತ್ತಿಗೆ, ತಮ್ಮಂದಿರು. ಅತಿಥಿಗಳಿಗೆ ತಂಬಿಗೆ ನೀರು ತಂದುಕೊಟ್ಟು, ಮುಖದಲ್ಲಿ ಹೂನಗೆ ಚೆಲ್ಲಿ ಒಳಗಡೆ ಬರಮಾಡಿಕೊಂಡಳು ಪೊನ್ನಮ್ಮ. ಪೂವಿ ಇನ್ನೂ ಹಾಸಿಗೆಯಲ್ಲೇ ಇದ್ದಾಳೆ. ನಿತ್ರಾಣೆಯಾದ ಚಿಟ್ಟೆ ಮಗ್ಗುಲನ್ನು ಬಿಟ್ಟಿರಲಿಲ್ಲ. ಅಲ್ಲೇ ಬಳಿಯಲ್ಲಿದ್ದ ಕಾವೇರಿ ಎಲ್ಲರನ್ನೂ ಪಲ್ಲಂಕದ ಮೇಲೆ ಕೂಡಿಸಿದಳು. ಹಿಂದೆಲ್ಲಾ ಮೃದುಮಂದಹಾಸ ಸೂಸುತಿದ್ದ ಮನೆ ಇಂದು ರುದ್ರಗಾಂಭೀರ್ಯ ವನ್ನು ತಾಳಿತ್ತು. ಅಪರೂಪ ದರ್ಶನ ಸಹ ಮುಖದಲ್ಲಿ ಗೆಲುವು ಮೂಡಿಸಲಿಲ್ಲ. ಪೂವಿ ಎದ್ದು ಕುಳಿತುಕೊಂಡಳು. ಸೊರಗಿದ ಮೈ, ಬಿಳಚಿಕೊಂಡ ಮುಖ, ಕಣ್ಣಿನ ಸುತ್ತ ಕಡೆದ ಕಪ್ಪು, ಗುಳಿಬಿದ್ದ ಕೆನ್ನೆಗಳು ನೋಡಿದ ಪ್ರಥಮ ನೋಟಕ್ಕೆ ಮನಃಪ್ರಾಣಗಳು ದ್ರವೀಭೂತವಾಗುವಂತಹ ಕರುಣಾಜನಕದೃಶ್ಯ.

ಮಗಳ ಶಯ್ಯಾಪ್ರಾಂತದಲ್ಲಿ ಕುಳಿತುಕೊಂಡು ಮೃದು ಹಸ್ತವನ್ನು ಅದುಮಿ ಹಿಡಿದು ಒಡಲ ಸಂಕಟವನ್ನು ತೋಡಿಕೊಂಡಳು ತಾಯಿ "ಅಯ್ಯೋ, ಹೇಗಾಗಿದ್ದಿ ಮಗಳೇ !"

ಪೂವಿ ತನ್ನ ಪಯಣದ ಕರುಣಕತೆಯನ್ನು ಕ್ಷೀಣಿತ ಧ್ವನಿಯಲ್ಲಿ ಮುಂದಿಟ್ಟಳು. ಎಲ್ಲರ ಒಡಲಲ್ಲೂ ಸಂಕಟದ ಝರಿ ಹರಿದಾಡಿತು. ನಂಜಪ್ಪ ಒಂದೇ ಮಾತಿನಲ್ಲಿ ಸಮಾಧಾನವನ್ನು ವ್ಯಕ್ತಪಡಿಸಿದ "ದೇವರು ದೊಡ್ಡವನು ಪೂವಿ. ಇಲ್ಲದಿದ್ದಲ್ಲಿ ತುಂಬು ಗರ್ಭಿಣಿ ಸಹಿಸಿಕೊಂಡಿದ್ದೂ ಸಹ ವಿಶೇಷವೇ."

"ನಿಗದಿಯಾದ ದಿನವನ್ನು ಮೊದಲೇ ತಿಳಿಸಿದ್ದಲ್ಲಿ ನಾವ್ಯಾರಾದರೂ ಬರಬಹುದಾಗಿತ್ತು ಪೂವಿ." ಎಂದ ನಾಣಯ್ಯ ಕರುಣಕಾತರ ಸ್ವರದಲ್ಲಿ.

"ಹೀಗಾಗುತ್ತೆ ಅಂತ ಯಾರಿಗೆ ಗೊತ್ತಿತ್ತು ?"

"ವಿಧಿ ವಿಲಾಸ."

ಚಿಟ್ಟೆ ಹೊಸಬರನ್ನು ನೋಡಿ ಸ್ವಲ್ಪ ಹೊತ್ತು ಹಿಂಜರಿದರೂ ಅನಂತರ ಹೊಂದಿಕೊಂಡ. ಎಲ್ಲರ ಮನಸ್ಸೂ ಅವನಲ್ಲಿ ಕೇಂದ್ರಿಕೃತವಾಯಿತು. ಚಿಟ್ಟೆ ಕೈಯಿಂದ ಕೈಗೆ ಚಲಿಸಿದ. ಪ್ರೇಮಾನುಬಂಧ ಮುತ್ತಿನ ಸೇಸೆ ಸೂಸಿತು. ಸುಖದುಃಖಗಳೊಂದುಗೂಡಿದರೂ ಆ ಮುಹೂರ್ತ ಏನೋ ಒಂದು ರೀತಿಯ ಸುಶಾಂತಿಯನ್ನು ಪ್ರಾಸಾದಿಸಿತು.

ತೋಟದ ಕಡೆಯಿಂದ ಬಂದ ಮಾದು ಚಿಟ್ಟೆಯನ್ನೆತ್ತಿಕೊಂಡು "ಅವರು ನಿನ್ನ "ಅಜ್ಜ ಅಜ್ಜಿ ಕಣೊ !" ಎನ್ನುತ್ತ ಪರಿಚಯ ಮಾಡಿಸಿದ."

"ಅವನಾಗಲೇ ನಮ್ಮವನಾಗಿದ್ದಾನೆ." ನಾಣಯ್ಯ ಹುಬ್ಬು ಹಾರಿಸಿದ.

ತಾಯಿ ಸುಖದುಃಖಗಳನ್ನೆಲ್ಲಾ ನುಂಗಿಕೊಂಡು ಭಾರವಾದ ದನಿಯಲ್ಲಿ ನುಡಿಯನ್ನು ಹೊರಹಾಕಿದಳು.

"ನೀನಲ್ಲೇ ಬರಬಹುದಾಗಿತ್ತು ಪೂವಿ."

ಕಾಲು ಬಾಧೆಯಿಂದ ಸದಾ ನರಳುವ ಜೀವ....ಕೋಲಿನ ಸಹಾಯದಿಂದ ಓಡಾಡುವ ದೇಹ ತನ್ನ ಭಾರವನ್ನೂ ಹೊರಲು ಸಿದ್ಧವಾಗಿರುವುದನ್ನು ಗಮನಿಸಿ ಮನದಲ್ಲಿ ಮರುಕ ಮೂಡಿತು...ಕಣ್ಣುಗಳಲ್ಲಿ ನೀರಾಡಿತು. ಸ್ಥಿತಿಗತಿಯನ್ನು ಮನದಲ್ಲೇ ತರ್ಕಿಸುತ್ತ ಮೆಲುದನಿಯಲ್ಲಿ "ಸ್ವಲ್ಪದಿನ ಹೋಗಲಿ, ಅನಂತರ ಬರುವೆ." ಎಂದಳು ಪೂವಿ.

ಅನಂತರ ಎಲ್ಲರೂ ಕೂಡಿ ಅನೇಕ ವಿಚಾರಗಳನ್ನು ಕುರಿತು ಚರ್ಚಿಸಿದರು. ತಿಮ್ಮಯ್ಯ ಮತ್ತು ಮುದ್ದಪ್ಪ ಇವರ ವಿಚಾರ ಚರ್ವಿತ–ಚರ್ವಣವಾಯಿತು. ಮೂರು ವರ್ಷಗಳ ಕಷ್ಟಸುಖಗಳೆಲ್ಲ ಅಲ್ಲಿ ಕರಗಿದುವು. ಒಂದು ಪಕ್ಷ ಮುದ್ದಪ್ಪ ತಿಮ್ಮಯ್ಯ ಇಲ್ಲೇ ಇದ್ದಿದ್ದರೆ ಅಲ್ಲಿಂದಲೇ ಭವಿಷ್ಯದ ವೇದಿಕೆಯೂ ನಿರ್ಮಾಣವಾಗುತಿತ್ತೋ ಏನೋ...

ಆದರೆ ಜೀವನ ಪ್ರಸಾದವೇ ಬೇರೆ.

ಅತಿಥಿಗಳು ಇನ್ನೆರಡು ದಿನ ಅಲ್ಲೇ ಉಳಿದರು. ಅವರ ಸಮಕ್ಷಮದಲ್ಲಿ ಪೂವಿ ಸ್ವಲ್ಪ ಓಡಾಡುವಂತಾದಳು. ಅನಂತರ ಅವರೆಲ್ಲ ಸಮಾಧಾನದಿಂದ ಹೊರಟರು. ತಾಯಿ ಒಂದು ವಾರ ಇದ್ದು ಬರುವುದಾಗಿ ಹೇಳಿ ಇಲ್ಲೇ ಉಳಿದಳು. ಚಿಟ್ಟೆ ಸುಧಾರಿಸಿಕೊಂಡು ಎಲ್ಲರೊಡನೆ ಹೊಂದಿಕೊಳ್ಳತೊಡಗಿದ. ಪೊನ್ನಮ್ಮನ ಹಸುಗೂಸಿನಲ್ಲಿ ಎಲ್ಲಿಲ್ಲದ ಪ್ರೇಮ. ತಾನು ಎತ್ತಿಕೊಳ್ಳುವ ಉತ್ಸಾಹವನ್ನೂ ತೋರುತ್ತಾನೆ. ಮಕ್ಕಳ ಆಟಪಾಟಗಳಲ್ಲಿ ಮನೋವೇದನೆ ಒಂದಿಷ್ಟು ಅರುಗಾದರೂ ಹೃದಯಾಂತರಾಳದಲ್ಲಿ ಉರಿಯುವ ಮಹಾನ್ ಅಗ್ನಿರಾಶಿ ಪ್ರಜ್ವಲಿಸುತ್ತಲೇ ಇತ್ತು. ಏನೇ ಮಾಡಿದರೂ ಅದನ್ನು ನಂದಿಸುವುದು ಸಾಧ್ಯವಾಗುತ್ತಿಲ್ಲ. ಕಾವೇರಿಗೆ ಧುಮುಕಿದರೆ ಮೈ ತಣ್ಣಗಾಗುವುದೇನೋ ಎನಿಸುವುದೊಮ್ಮೊಮ್ಮೆ ಅತ್ಯಂತ ದಣಿದ ಮನಸ್ಸಿಗೆ.

ಆದರೆ ...!

ಈ ಜೀವನ ಅಷ್ಟೊಂದು ಕ್ಷುದ್ರವೂ ಅಲ್ಲ, ಅಲ್ಪವೂ ಅಲ್ಲ.

ವನಶ್ರೀಯು ತುಪೂಡಿದಮೇಲೆ ಪೂವಿಯ ದೇಹಸ್ಥಿತಿ ದಿನದಿನಕ್ಕೂ ಸುಧಾರಿಸಿಕೊಳ್ಳುತಿತ್ತು. ತಾಯಿ ತನ್ನೊಂದಿಗೆ ಮಗಳನ್ನು ಕರೆದೊಯ್ಯಬೇಕೆಂದು ಇಚ್ಛಿಸಿದರೂ ಪೂವಿ ಹೊರಡದೆ "ಇನ್ನೊಮ್ಮೆ ಬರುವೆ." ಎಂದು ಮುಂದೂಡಿದುದರಿಂದ ತಾಯಿ ಹೊರಟಳು. ನಂಜಪ್ಪ ಟ್ಯಾಕ್ಸಿಯನ್ನು ತಂದಿದ್ದ. ಮಗಳ ಕೈಯಾಶ್ರಯದ ಮೇಲೆ ಟ್ಯಾಕ್ಸಿಯವರೆಗೆ ನಡೆದಳು ತಾಯಿ....ಕಾವೇರಿ ಪೊನ್ನಮ್ಮ ಮಾದು ಟ್ಯಾಕ್ಸಿ ಹೊರಡುವವರೆಗೂ ಅಲ್ಲೇ ನಿಂತು ಬೀಳ್ಕೊಟ್ಟರು. ಪೂವಿ ಭಾರವಾದ ದೇಹವನ್ನು ಹೊರಲಾರದೆ ಹೊತ್ತು ಒಳಬಂದಳು. ಕಣ್ಣುಗಳಲ್ಲಿ ಎಳೆ ರಂಗೊರೆದಿತ್ತು.

ಮುದ್ದಪ್ಪ ಸಿಂಗಪುರ ತಲ್ಪಿದೊಡನೆಯೇ ಕಾಗದ ಬರೆಯುವುದಾಗಿ ಹೇಳಿದ್ದ. ಯುದ್ಧರಂಗಕ್ಕಿಂತ ಪಯಣ ಸುಖಕರ ಎಂಬುದು ಹೃದ್ಗತವಾದರೂ ಅತ್ತೆ ಮಾವಂದಿರ ದುರ್ಮರಣ ಅದಕ್ಕೂ ಚಳಿ ಹಿಡಿಸುತ್ತದೆ. ಅನುದಿನವೂ ಆತನ ಪತ್ರದ ಪ್ರತೀಕ್ಷೆಯಲ್ಲಿಯೇ ದಿನಚರಿ ಉರುಳುವುದು....ಆವುದೋ ಕಂಡರಿಯದ ದುರ್ಬಲತೆಯಿಂದ ಎದೆ ದೀರ್ಣವಿದೀರ್ಣವಾದಂತೆ ಭಾಸವಾಗುವುದು. ಎಷ್ಟೇ ಪ್ರಯತ್ನಿಸಿದರೂ ಕದಡಿ ಬಗ್ಗಡವಾದ ಮನಸ್ಸಿಗೆ ಶಾಂತಿ ಬರುವುದಿಲ್ಲ. ಮನಶ್ಯಾಂತಿ ಇಲ್ಲದೆ ದೇಹಕ್ಕೆ ಸ್ವಾಸ್ಥ್ಯ ಪಡೆದುಕೊಳ್ಳುವುದು ಕಷ್ಟ; ಕಂಬನಿಗಳು ತನಗರಿಯದಂತೆಯೇ ಪಟ ಪಟನೆ ಉರುಳುತ್ತವೆ. ಅನಂತರ....ಆ ಲಜ್ಜಾಸ್ಪದವಾದ ಸನ್ನಿವೇಶದಿಂದ ತಾನೇ ತಾನಾಗಿ ಚೇತರಿಸಿಕೊಳ್ಳುತ್ತಾಳೆ- ದಿನಗಳಗಾಲಿ ಉರುಳಿ ಬದುಕಿನ ಸಾರ್ಥಕತೆಯನ್ನು ಹೃದಯಂಗಮವಾಗಿ ಪ್ರದರ್ಶಿಸಿದಾಗ ಅಕ್ಷಿಪಟಲದ ಮೇಲೆ ಯೋಧನ ದಿನಚರಿಯು "ಔನ್ನತ್ಯ" ಚಲನ ಚಿತ್ರದಂತೆ ಪ್ರದರ್ಶಿಸಲ್ಪಡುವುದು.

ಒಮ್ಮೆ ದುಃಖಾಶ್ರುಗಳು ಹನಿತರೆ ಇನ್ನೊಮ್ಮೆ ಆನಂದಾಶ್ರುಗಳು ಮೊಳೆಯುವುದು ಸಹಜವೇ. ಕಾವೇರಿ ಅವಳನ್ನು ಹೆಚ್ಚುಹೆಚ್ಚಾಗಿ ತನ್ನ ಬಳಿಯೆ ಇಟ್ಟುಕೊಳ್ಳುತ್ತಾಳೆ. ರಾತ್ರಿ ಮಲಗುವುದು ಸಹ ಮಗ್ಗುಲಲ್ಲೇ... ಈ ಎಲ್ಲಕ್ಕೂ ಮಿಗಿಲಾಗಿ ಮನವನ್ನು ಚಿಂತೆಯ ಕೋಟೆಯಿಂದ ಹೊರಗೆಳೆಯಬಲ್ಲುದೆಂದರೆ ರಾಷ್ಟ್ರದಾದ್ಯಂತ ನಡೆಯುತ್ತಿರುವ ಸ್ವಾತಂತ್ರ್ಯ ಚಳವಳಿಯ ಮಹಾ ಆಂದೋಳನ ಮತ್ತು ಅದರ ತೀವ್ರ ಪರಿಣಾಮಗಳು....ಈಗ ಮಾದಯ್ಯನ ದಿನಚರಿ ರಾಷ್ಟ್ರಧ್ವಜದಡಿಯಲ್ಲಿಯೇ ...ಮನೆಗೆ ಎಂದಾದರೂ ಬಿರುಗಾಳಿಯಂತೆ ಬಂದುಹೋಗುವ, ಅಥವಾ ಎರಡುಪಂಕ್ತಿ ಕಾಗದಬರೆದುಬಿಡುವ ತೋಟ ಜಮೀನುಗಳ ವ್ಯವಸ್ಥೆ ಪೂರ್ಣ ಹೆಂಗಳೆಯರದೇ. ನೆರೆ ಹೊರೆಯ ತರುಣರೆಲ್ಲ ಚಳುವಳಿಗಿಳಿದುದರಿಂದ ಸಹಾಯಕರೂ ಇಲ್ಲ; ಸಲಹೆಗಾರರೂ ಇಲ್ಲ. ಆದರೂ ಜೀವನ ರಥ ಸಾಗುತ್ತದೆ.

ಹೊತ್ತು ಹನ್ನೊಂದರ ಗಡಿಯನ್ನು ದಾಟಿತ್ತು.

ಅಭ್ರಮಣಿ ನಡುನೆತ್ತಿಯಲ್ಲಿ ಥಳಥಳಿಸುತಿದ್ದ.

ಕಾವೇರಿ, ಪೊನ್ನಮ್ಮ ಗದ್ದೆಯ ಕಡೆ ಹೋಗಿದ್ದರು. ಮನೆಗೆಲಸ ಹೊತ್ತಿಗೆ ಮುಂಚೆ ಮುಗಿದಿದ್ದುದರಿಂದ ಮಾಡಬಹುದಾದ ಕೆಲಸವೇನೂ

ಇರಲಿಲ್ಲ. ಪೂವಿ ಅಶಕ್ತಸ್ಥಿತಿಯಲ್ಲಿ ಮಕ್ಕಳೊಂದಿಗೆ ಮನೆಯಲ್ಲಿ ಉಳಿದಿದ್ದಳು. ಶಾಂತ ಸಮುದಾಯದಲ್ಲಿ ಚಿಂತೆಯಲುಗಿನಮೇಲೆ ಚಿತ್ತ ಹರಿದಾಡುತಿತ್ತು. ನ್ಯೈ ಮರವಟ್ಟಂತೆ ಕುಳಿತು ಅದೆಷ್ಟು ಹೊತ್ತು ಉರುಳಿತ್ತೋ... ಜೂಲಿ ಕೆಳಮಟ್ಟೆಯ ಕಡೆಗೆ ಧಾವಿಸಿ ದೊಡ್ಡ ದನಿಯಲ್ಲಿ ಬೊಗಳ ತೊಡಗಿತು. ಒಡನೆ ಯೋಚನೆಯ ಪ್ರಾಕಾರದಿಂದ ಹೊರಬಿದ್ದಾಗ, ನೋಟ ಸಹಜವಾಗಿ ಅತ್ತ ಹೊರಳಿತು. ಯಾರೋ ಮೆಟ್ಟಿಲು ಹತ್ತಿ ಬರುತ್ತಿರುವ ಸದ್ದು—ನೀರವತೆಯ ಶಿರೋದೇಶದ ಮೇಲೆ ಸುತ್ತಿಗೆಯಿಂದ ಪಟಪಟ ಬಡಿಯುವಂತೆ.ಯಾರಿರಬಹುದೆಂದು ಯೋಚಿಸುವುದರೊಳಗಾಗಿ ಕಾಕಿಯುಡುಪಿನ ಟಪ್ಪಾಲಿನವ ಕಾಣಿಸಿಕೊಂಡ. ಅವನನ್ನು ನೋಡುತ್ತಲೂ ಮುದ್ದಪ್ಪನ ಕಾಗದಕ್ಕಾಗಿ ಕಾತರಿಸಿತು ಜೀವ. ಬಹಳ ದಿನಗಳ ನಂತರ ಕೆಲವು ಕಾಗದಗಳು ಕೈಸೇರಿದುವು, ಅವುಗಳಲ್ಲಿ ತಿಮ್ಮಯ್ಯನ ಕಾಗದವಿತ್ತು.

...ಒಂದುವೇಳೆ, ಇಂದಿನ ಪರಿಸ್ಥಿತಿಯಲ್ಲಿ ನಾನು ಸ್ವದೇಶದಲ್ಲಿಯೇ ಉಳಿದಿದ್ದರೆ ನನ್ನಿಂದ ಚಳವಳಿಯಲ್ಲಿ ಭಾಗವಹಿಸುವುದು ಮಾತ್ರ ಸಾಧ್ಯವಾಗುತಿತ್ತು. ಆದರೆ ಈಗ ನಡೆಯುತ್ತಿರುವ ಸಾಧನೆ ಮಹತ್ಸಾದನೆ. ನಾವು ಈ ಸುತ್ತುಮುತ್ತಿನ ಭಾರತೀಯರ ಸಂಘಟನೆಯನ್ನು ಅತ್ಯಂತ ನಿಷ್ಠೆಯಿಂದ ಸಾಧಿಸಿದ್ದೇವೆ. ಅಲ್ಲದೆ ಧನಿಕ ಭಾರತೀಯರಿಂದ—ಭಾರತದ ಆತ್ಮೀಯರಿಂದ ಕೈತುಂಬ ಸಹಾಯಧನವನ್ನು ಪಡೆಯುತಿದ್ದೇವೆ. ನಾವು ಸಂಘಟಿಸಿದ ಸೈನ್ಯ 'ಆದಾಜ್ ಹಿಂದ್ ಫೌಜ್" ಎಂಬ ಅಭಿಧಾನವನ್ನು ಪಡೆದು ಸರ್ವಮಾನ್ಯವಾಗಿ ರೂಪುಗೊಂಡಿದೆ. ಇದರಲ್ಲಿ ನಿವೃತ್ತ ಸೈನಿಕರೂ-ಸೇನಾನಾಯಕರೂ ಇದ್ದಾರೆ. ಈಗ ನಮಗೆ ಅದೆಷ್ಟು ಆನಂದವೋ ಬರೆದು ಬಣ್ಣಿಸಲಾರೆ. ನಾವು ಐ. ಎನ್. ಎ. ಎಂದು ಹೇಳಿಕೊಳ್ಳುವುದೆಂದರೆ ಅದೆಂತಹ ಹೆಮ್ಮೆ ? ಅದೆಷ್ಟು ಆನಂದ ?

ಪೂವೀ, ನನಗೀಗ ಸ್ವರ್ಗದ ಸೋಪಾನಗಳನ್ನು ಏರಿ ಹೋದಷ್ಟೆ ಸಂತಸ. ಯಾವ ಜನ್ಮದ ಪುಣ್ಯವಿಶೇಷವೋ ನಾರು ಹೂವಿನೊಂದಿಗೆ ಬೆರೆತುಕೊಂಡಿತು. ಒಂದುವೇಳೆ ನಾನು ಅಲ್ಲೇ ಇದ್ದಿದ್ದರೆ ಈ ಸೌಭಾಗ್ಯ ಎಲ್ಲಿ ದೊರೆಯುತಿತ್ತು?ನಮ್ಮ ದಳ ಹೊಂದಿದ ಅನ್ವರ್ಥ ನಾಮಧೇಯಕ್ಕೆ ತಕ್ಕುದಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಶಾಂತಿ-ಶಿಸ್ತು-ಕ್ರಮಗಳಿಗೆ ಸರಿ

ಯಾದ ಚೌಕಟ್ಟಿದೆ... ಎಲ್ಲರೂ ಅರಿತು-ನುರಿತವರೇ ಆದುದರಿಂದ ಉಲ್ಲಂಘನೆಯ ಪ್ರಶ್ನೆಯೇ ಏಳುವುದಿಲ್ಲ....ನಮ್ಮ ಕಾರ್ಯಕ್ಷೇತ್ರಕ್ಕೆ ಸೀಮೆಯೇ ಇಲ್ಲ. ಅಪಾರ ವಾದ ಕೆಲಸ.. ಅಪಾರವಾದ ಶ್ರದ್ಧೆ....ಅಪಾರವಾದ ಸಾಧನೆ....ಅಪಾರವಾದ ಸಂಘಟನೆ....ಉನ್ನತ ಧ್ಯೇಯ...ಗಗನಸದೃಶ ನೇತಾಜಿ ! ಹೇಳು, ನಮಗಿನ್ನೇನು ಬೇಕು ? ನಾವು ಉಣ್ಣುವ ಹಿಡಿ ಅನ್ನ ನೆತ್ತರನ್ನು ನೂರ್ಮಡಿಯಲ್ಲಿ ವೃದ್ಧಿಗೊಳಿಸುತ್ತದೆ. ಗುರಿ ಮುಟ್ಟಿಯೇ ತೀರುವ ಶ್ರದ್ಧೆ ಹೆಜ್ಜೆ ಹೆಜ್ಜೆಯನ್ನೂ ನಡೆಸುತ್ತವೆ. ಇನ್ನು ಹಿಂದೆ ಬೀಳುವ ಭಯವೇ ಇಲ್ಲ.

ಚಲೋ ದಿಲ್ಲಿ !

ಆ ಕರೆ ! ಆ ಘೋಷಣೆ !

ಎದೆಯ ಗಡಲನ್ನು ಉಕ್ಕೇರಿಸುತ್ತದೆ. ಸ್ಫೂರ್ತಿಯುತ ಭಾಷಣ, ಸ್ಫೂರ್ತಿಯುತ ಕಾರ್ಯಾಚರಣೆ, ಸ್ಫೂರ್ತಿಯುತ ಸಂಘಟನೆ, ಸ್ಫೂರ್ತಿಯುತ ಶಿರೋಮಣಿ ; ನಾನು ಏನು ಬಯಸಿದ್ದೆನೋ ಅದರ ನೂರರಷ್ಟು ಅನುಗ್ರಹೀತನಾಗಿರುವೆ. ನೇತಾಜಿಯ ನೇತೃತ್ವದಲ್ಲಿನ ನಮ್ಮ ಮುನ್ನಡೆ ವಿಜಯಶ್ರೀಯನ್ನು ಖಂಡಿತ ಅಭಿವ್ಯಕ್ತಿಗೊಳಿಸುವುದು. ನಾವದರ ಫೌಜುದಾರರು ! ಎಂತಹ ಹೆಮ್ಮೆ ಪೂವಿ ! ನಿನಗೆ ಹಾಗೆನಿಸುವುದಿಲ್ಲವೇ ? ನನ್ನ ಒಕ್ಕಣೆಯ ಅಕ್ಷರ ಅಕ್ಷರವನ್ನೂ ಗಮನಿಸಿನೋಡು....ಖಂಡಿತ ಮನನಮಾಡು....ಅರ್ಥೈಸಿ ಆನಂದ ಪಡು ...

ಪೂವೀ....! ನಿನಗೆ ಬರೆಯಲೇ ಬೇಕಾದಂತಹ ವಿಷಯಗಳಿಗೇನು ಕಡಿಮೆ ? ಆದರೆ ಒಂದೆಡೆ ಕುಳಿತು ಐದು ನಿಮಿಷ ವೆಚ್ಚಮಾಡಿ ಬರೆಯುವಷ್ಟು ಸಮಯವಾಗಲೀ, ಸಹನೆಯಾಗಲೀ ನಮಗೆ ದೊರೆಯಬೇಕಲ್ಲ? ನಿತ್ಯ ಕರ್ಮಾದಿಗಳಿಗೆ ವೇಳೆ ಹೊಂದಿಸಿಕೊಳ್ಳುವುದೇ ಕಷ್ಟ. ಎಷ್ಟೋ ಬಾರಿ ಊಟಕ್ಕೆ ಬಿಡುವು ದೊರೆಯುವುದಿಲ್ಲ; ಇನ್ನೆಷ್ಟೋ ಬಾರಿ ಊಟ ದೊರೆಯುವುದೇ ಇಲ್ಲ. ರಾತ್ರಿ ಒಂದೆರಡು ಗಂಟೆಯಷ್ಟು ನಿದ್ದೆ ಮಾಡುವುದೆಂದರೂ ಹೆಚ್ಚೆ. ಕೆಲಸ... ಕೆಲಸ....ಕೆಲಸ.... ; ಹಗಲೂ ರಾತ್ರಿ ಮಾಡಿದರೂ ಮುಗಿಯದ ಕೆಲಸ. ಮಾತೃಭೂಮಿಯ ದುಃಖಭರಿತ ಜೀವನವನ್ನು ಉದ್ಧರಿಸದ ಹೊರತು ನಮಗೆ ಖಂಡಿತ ಬಿಡುವು ದೊರೆಯುವುದಿಲ್ಲ. ಬಹುಶಃ....ಬಹಳ ಮಟ್ಟಿಗೆ ಅನಂತರವೇ ನಮ್ಮ ನಿಮ್ಮ ಭೇಟಿ. ಈ ನಡುವೆ ಒಮ್ಮೆಯಾದರೂ ಬರಲಿಲ್ಲವೆಂದು ಬೇಸರ

ಪಟ್ಟುಕೊಳ್ಳಬೇಡ. ನಾವು ಹೆಜ್ಜೆ ಇಟ್ಟಿರುವ ಕ್ಷೇತ್ರವೇ ಅಂತಾದ್ದು....ಈಗ ಇಲ್ಲಿ ಸೆಚ್ಚುಗೆಟ್ಟರೆ ಅಧೋಗತಿಯೇ ನಮಗೆ ಪರಮಗತಿ !

ನಾನು ನಿಜವಾಗಿಯೂ ಹೇಳುವುದಾದರೆ ನನ್ನ ಜೊತೆಗಾರ ಕಾಗದ ಬರೆಯುತಿದ್ದುದನ್ನು ನೋಡಿದ ಮೇಲೆ ಕೊನೆಯಪಕ್ಷ ನಿನಗಾದರೂ ಬರೆಯೋಣ ವೆಂಬ ಭಾವನೆ ಬಲಿಯಿತು. ಅಂದರೆ...ಅದೇನೇ ಇರಲಿ, ನನಗೂ ಬಂಧು-ಬಳಗದವರಮೇಲೆ ಅಭಿಮಾನವಿದೆ; ನಾನು....ನಿರ್ಲಕ್ಷಿಸುವಂತಹ ಪಶುವೇನಲ್ಲ. ಆದರೂ ಸಹ ಪ್ರಸ್ತುತ ಪರಿಸ್ಥಿತಿ ನಮ್ಮನ್ನು ಆಳುತ್ತಿದೆ; ನಾವದರಲ್ಲಿ ಬದ್ಧರು. ನಾನೂ ಮುದ್ದಪ್ಪನೂ ಕೊಡಗನ್ನು ಬಿಟ್ಟನಂತರ ಚಳವಳಿಯ ಕ್ಷೇತ್ರ ಬರೀ ನೀರಸವೆಂದೂ ಗೆಳೆಯರೂ ಬರೆದಿದ್ದಾರೆ. ಓದಿ ಏನೋ ಒಂದು ಬಗೆಯ ಖೇದ ವೆನಿಸಿತು. ಎಲ್ಲೇ ಇದ್ದರೂ, ಏನೇ ಆದರೂ ನಮ್ಮ ನಡೆ ಪೂರ್ಣದೆಡೆಗೆ. ಅಂದ ಮೇಲೆ ರಸವೋ ನೀರಸವೋ ಯಾವುದೇ ಇರಲಿ, ಇನ್ನಾವುದೇ ಬರಲಿ, ಜೀರ್ಣಿಸಿಕೊಳ್ಳುವುದೇ ನಮ್ಮ ನವ್ಯಸಂಘಟನೆಯ ದಿವ್ಯಪ್ರವೃತ್ತಿ....

ಚರ್ಚಿಲ್ಲನಿಗೆ ಭಾರತ ಸ್ವತಂತ್ರರಾಷ್ಟ್ರವಾಗುವುದು ಒಪ್ಪಿಗೆಯಿಲ್ಲ. ಅದರಲ್ಲೂ ಇಂದಿನ ಉತ್ಕಟ ಪರಿಸ್ಥಿತಿಯಲ್ಲಿ ಪ್ರತಿದ್ವಂದ್ವಿಯಾಗಿ ನಿಲ್ಲಲು ಆ ಪರಮ ಸ್ವಾರ್ಥಿಗೆ ಇನ್ನೆಂತಹ ಪ್ರಚಂಡ ವಿದ್ವೇಶವಿದ್ದೀತು ? ಹೋಗ್ಲಿ ಇರಲಿ, ಎಷ್ಟುಕಾಲ ಈತನ ಅಧಿಕಾರ ಉಳಿಯಬಲ್ಲುದು ಎಂಬುದು ಸಹ ಗಮ ನಾರ್ಹವೇ....

ಯೋಚಿಸಬೇಡ ದೇವರಿದ್ದಾನೆ !

ಪೂವಿ ಮನತುಂಬಿ ಕಾಗದವನ್ನು ಮತ್ತೆಮತ್ತೆ ಓದಿಕೊಂಡಳು.ಹೃದಯ ಸಮುದ್ರ ಅದೆಷ್ಟುಬಾರಿ ಉಕ್ಕೇರಿ ಬಂತೋ....! ವಿಷಯಾವಲೋಕನ ಚಿತ್ತ ವನ್ನು ಗತಕಾಲಕ್ಕೆ ಹಕ್ಕಿಯಂತೆ ಹಾರಿಸಿತು. ಅಂದಿನ ನಾನಾ ಚಟುವಟಿಕೆಗಳ ಅಂತರಾಳಕ್ಕಿಳಿದು ಧ್ಯೇಯೋದ್ದೇಶಗಳನ್ನು ಮೆಲುಕುಹಾಕಿ ಮೈದುಂಬಿ ಕೊಂಡಾಗ ಜನ್ಮಭೂಮಿಯ ದಾಸ್ಯ-ಹಿರಿಯರಾಷ್ಟ್ರಗಳ ಠೇಂಕಾರ ಎದೆಯಾಳ ದಲ್ಲಿ ಗೊಂದಲಹೂಡಿತು. ಯೋಚಿಸಿದಷ್ಟೂ ಬಗ್ಗಡವಾಗುವ ಚಿತ್ತ....ನರನಾಡಿ ಗಳಲ್ಲಿ ಹುಚ್ಚೆದ್ದು ಪ್ರವಹಿಸುವ ದೇಶಭಕ್ತಿಯ ಝರಿ....ಕರ್ಣಪಟಲಗಳ ಮೇಲೆ ಪುನಃಪುನಃ ಧ್ವನಿಸುವ ರಾಷ್ಟ್ರಗೀತೆ...ದುಃಖಭರಿತ ಉಷ್ಣೋಧಿಕ ಜ್ವಾಲೆಯಲ್ಲಿ

ದೇಹ ದಹಿಸುತಿದ್ದರೂ ಮುಖಬಿಂಬದಲ್ಲಿ ತಟತಟನೆ ತೊಟ್ಟಿಕ್ಕುವ ಶಾಂತಿ ರಸ....ಹೃದಯ ಕುಂಡಲಿನಿಯಲ್ಲಿ ಚಿಲ್ಲಿಸೂಸುವ ಧರ್ಮದೇಶನ.

ಪೂವಿ ಮರವಟ್ಟಂತೆ ಕುಳಿತಳು. ಅಂತರಾಳವರ್ತಿೀ ಮೃದುಮಂದವಾಣಿ ತಾಳಲಯ ಬದ್ಧವಾಗಿ ಹೊಮ್ಮಿತು,

ವಂದೇಮಾತರಂ
ಸುಜಲಾಂ ಸುಫಲಾಂ
ಮಲಯಜ ಶೀತಲಾಂ
ಸಸ್ಯ ಶ್ಯಾಮಲಾಂ ಮಾತರಂ

ಪ್ರಭಾತ್‌ಫೇರಿ ಆಬಾಲಸ್ತ್ರೀವೃದ್ಧರು ಅಪರಾಧಿಗಳ ಸ್ಥಾನದಲ್ಲಿ ನಿಂತು ಜೇಲನ್ನು ಸೇರಿ ಬಲಿವೇದಿಯನ್ನೇರಿದ ವೀರೋಚಿತವಾದ ಚಿತ್ರ, ರುದ್ರ ಭಯಂಕರ ತೇಜ ಅಕ್ಷಿಪಟಲದ ಮೇಲೆ ಮೂಡಿಮಾಯವಾಯಿತು. ಪೂವಿ ದಿಟ್ಟಿಯನ್ನು ಹೊರ ಜಗತ್ತಿನಲ್ಲಿ ನೆಟ್ಟು ಯೋಚನಾಮಗ್ನಳಾದಳು. ಭಾವಪೂರ್ಣ ಲೋಚನಗಳಲ್ಲಿ ಚಂದನವೊರೆದಂತೆ ರಂಗು ದಟ್ಟೈಸಿತು. ಪ್ರಕೃತಿಯ ಉಡಿಯಲ್ಲಿ ಸಿಡಿದ ಹೊನ್ನಿನ ಕಿಡಿಯಂತೆ ಅದೆಷ್ಟು ಹೊತ್ತು ಅಲುಗದೆ ಕುಳಿತಿದ್ದಳೋ....

ಇಂದು,

ದಿನಚರಿ ಆರಂಭವಾದಾಗ ಮೂಡಣದಲ್ಲಿ ಮುಂಬೆಳಕು ಇನ್ನೂ ಮೂಡಿರಲಿಲ್ಲ. ಆಗೊಮ್ಮೆ ಈಗೊಮ್ಮೆ ಕೋಳಿಗಳು ಕೂಗುತಿದ್ದುವು. ಎಲ್ಲರಿಗಿಂತಲೂ ಮುಂದಾಗಿ ಏಳುವುದು ಕಾವೇರಿಯ ರೂಢಿಯುತವಾದ ದಿನಚರಿ. ಮಾದು ಅನೇಕವೇಳೆ ಅನ್ನುತಿದ್ದ "ಅದೇಕೆ ಇಷ್ಟು ಬೇಗ ಏಳುತ್ತೀರೋ ನನಗಂತೂ ಅರ್ಥವಾಗುವುದಿಲ್ಲ."

ಆದರೂ ದಿನಚರಿ ಹಿಂದುಮುಂದಾಗಲಿಲ್ಲ, ಆಕೆ ಇರುವ ತನಕ ಆಗುವುದೂ ಇಲ್ಲ. ಮನೆಮನೆಯಲ್ಲೂ ನಡೆಯುವಂತಹ ದಿನಚರಿ ಇಲ್ಲೂ ನಡೆಯುತ್ತದೆ, ಎಂದರೆ ಇನ್ನು ಹೆಚ್ಚು ವಿವರಿಸುವ ಅವಶ್ಯಕತೆ ಉಳಿಯದು. ದಿನಲಕ್ಷ್ಮಿ ಹೊಂದಾವರೆಯಂತಹ ಅಡಿಗಳನ್ನು ಮುಂದಿಟ್ಟು ಪೂರ್ವ ಪ್ರಾಂತ್ಯದ ದಿಕ್ತಟದಲ್ಲಿ ರಂಗಮಂಚವನ್ನೇರಿದಾಗ ಶಾಲೀನಪೂರ್ಣ ವದನ ಮಂಡಲ ತೇಜೋಮಯವಾಗಿ ವರ್ಣರಂಜಿತವಾಗಿತ್ತು. ಆಕೆಯ ಮೃದು

ಸಂಚಾರಿತ ಚರಣಗಳ ಪದ್ಮರಾಗ ಮಣಿಗಳು, ಅಲ್ಲಲ್ಲಿ ಕಳಚಿ ಬಿದ್ದು, ರವಿಯು ಅಭೂತಪೂರ್ವ ಸ್ವಾಗತಕ್ಕಾಗಿ ಕಮಲಪರಾಗವನ್ನು ಚೆಲ್ಲಿದಂತಾಗಿತ್ತು.

ಬೆಳಗಿನ ಉಪಹಾರವನ್ನು ಮುಗಿಸುವಷ್ಟರಲ್ಲಿ ಮಾದು ತಲೆಬಾಗಿಲಿನಲ್ಲಿ ಕಾಣಿಸಿಕೊಂಡ, ನಾಯಿ ದೊಡ್ಡದನಿ ತೆಗೆದು ಬೊಗಳುತ್ತ ಮೈಮೇಲೆ ಹಾರಿ ಪ್ರೀತ್ಯಾದರವನ್ನು ವ್ಯಕ್ತಪಡಿಸಿತು ಅದನ್ನು ಮುದ್ದುಗೈದು, ಸಮಾಧಾನ ಪಡಿಸಿ ಜಗಲಿಯನ್ನೇರಿದುದು ಗೋಚರಿಸಿದಾಗ ಜನನಿಗೆ ತುಸು ಆಶ್ಚರ್ಯವೆನಿಸಿತು. ಅಷ್ಟು ಮುಂದಾಗಿ ಹೆದ್ದಾರಿಗೆ ಬರಬಹುದಾದ ಬಸ್ಸಿರಲಿಲ್ಲವಾದುದರಿಂದ ಹೇಗೆ ಬಂದಿರಬಹುದೆಂಬ ಯೋಚನೆ ಮನದಲ್ಲಿ ಮೊಳೆದಾಗಲೇ ಮಾದು ಮುಂದು ವರಿದು ಪಾದಧೂಳಿ ಸ್ವೀಕರಿಸಿ ಅಂದ "ಈ ಹೊತ್ತಿನಲ್ಲಿ ಇಲ್ಲಿರುವೆ ಎಂದು ನಾನೇ ಎಣಿಸಿರಲಲ್ಲ."

"ಮಾದೇವನ ಆಶೀರ್ವಾದ....!" ಅತ್ಯಂತ ಪ್ರಸನ್ನ ಮುಖಿಯಾಗಿ ಕೇಳಿದಳು ಜನನಿ. "ಈಗ....ಇಷ್ಟು ಮುಂಚಿತವಾಗಿ ಹೇಗಪ್ಪಾ ಬಂದೆ ?" ನಿರಿಗಟ್ಟಿದ ಕಪೋಲ ಪಾಲಿಯಲ್ಲಿ ಉತ್ಸುಕತೆಯ ಹೆದ್ದೆರೆಗಳು ತುಯ್ಯಲಾಡಿ ದುವು. ನಯನದೀಪ್ತಿ ಉಜ್ವಲವಾಗಿ ಬೆಳಗಿತು. ವೃದ್ಧ ಜನನಿ ಹೆಜ್ಜೆ ಕೀಳದೆ ನೆಟ್ಟ ನೋಟದೊಡನೆ ಅಲ್ಲೇ ನಿಂತಳು.

"ಕಾಂಗ್ರೆಸ್ಸಿನವರು ಬಿಟ್ಟು ಹೋದರು, ತಾಳಗಟ್ಟೆ ಬೆಳ್ಳಿಯಪ್ಪ, ನಾನು ಜಂಬೂರು ಶೇಷು ಬಂದೆವು. ನಮಗೆ ಹೆಚ್ಚು ವಿರಾಮವಿಲ್ಲ. ಮೊದಲಿಷ್ಟು ಸ್ನಾನ ಮಾಡಬೇಕಾಗಿದೆ."

"ಓ....ಹೋ....!" ನಿರಾಶಾಪೂರ್ಣ ಉದ್ಗಾರ ಹೊರಬಿತ್ತು.

ಅದೇ ವೇಳೆಗೆ ಮಡದಿ ಎದುರಾದಳು. ಆತನ ಸ್ಥಿತಿಗತಿಯಲ್ಲಿ ಚಳವಳಿಯ ವ್ಯಾಪಕತೆಯನ್ನು ಅಳೆಯಿತು-ಚಿತ್ತ. ಚಳವಳಿ ಕ್ಷೇತದಲ್ಲಿ ನಿನ್ನೆ-ಮೊನ್ನೆ ನಡೆದ ಲಾಠಿಛಾರ್ಜ್ ಗೋಲೀಬಾರ್ ಪ್ರಕರಣ ಹೃದಯ ಹಿಂಡುವಂತಿತ್ತು. ಅಲ್ಲಿಂದ ಹಿಂದಿರುಗಿ ಯಾರೂ ಬಂದಿರಲಿಲ್ಲವಾದುದರಿಂದ ಯಾರ್ಯಾರಿಗೆ ಏನೇನಾ ಗಿದೆ ಎಂಬುದು ತಿಳಿಯದೆ ಮನಸ್ಸಿಗೆ ತುಂಬ ಕಳವಳ ಉಂಟಾಗಿತ್ತು. ಇಂದು ಅನೀರಿಕ್ಷಿತವಾಗಿ ಆದ ಪತಿಯ ದರ್ಶನದಿಂದ ಸಂತಸ-ಪ್ರೇಮಗಳ ವಿಶೇಷ ತುಟಿಗಳಲ್ಲಿ ಚೆಲ್ಲಿತು. ಕಣ್ಣುಗಳು ಅರಳಿ ಕಾಂತಿಯನ್ನು ಸೂಸಿದುವು. ಮಾದು ಕೈಚೀಲವನ್ನು ಅವಳ ಕೈಗಿಟ್ಟು ಸ್ನಾನಕ್ಕೆ ಅಣಿಯಾದ. ಉಟ್ಟ ಬಟ್ಟೆ

ಮಾಸಿತ್ತು ; ಮುಖದ ಮೇಲೆ ವಾರದ ಬೆಳೆ ಬೆಳೆದಿತ್ತು; ಅದೆಲ್ಲಾ ಒಪ್ಪವಾಗ ಬೇಕಾದರೆ ಅರ್ಧ ತಾಸಾದರೂ ಬೇಕಾದೀತೇನೋ...ಯೋಚಿಸುತ್ತ ಹೇಳಿದಳು ಪೊನ್ನಮ್ಮ "ಮೊದಲು ಒಂದು ಬಸಿ ಚಹ ತೆಗೆದುಕೊಂಡರೆ ಒಳ್ಳೆಯದು ಮಡಿ ಮಾಡಿಕೊಳ್ಳುವುದು ಹೊತ್ತಾಗಬಹುದು....ನಿಮ್ಮನ್ನು ನೋಡಿದರೆ ಊಟ ಮಾಡಿದಂತೆಯೇ ತೋರುವುದಿಲ್ಲ."

"ಸಿಕ್ಕಿದರೆ ಊಟ. ಇಲ್ಲದಿದ್ದರೆ ಅದೂ ಇಲ್ಲ. ದೇವರು ಕೊಟ್ಟ ಕೈ ಕಾಲು ಗಟ್ಟಿಯಾಗಿವೆ. ಸಧ್ಯಕ್ಕೆ ಯೋಚನೆ ಇಲ್ಲ."

ಒಳಗಡೆಯಿದ್ದ ಪೂವಿ ಹೊರಬಂದಳು. ತಿಂಡಿ ತಿನ್ನುತಿದ್ದ ಚಿಟ್ಟೆ ಪ್ಯೆ ಕೈ ಮುಸುರೆಯ ಸಹಿತ ಹೊರ ಬಂದ. ಮಗುವನ್ನು ಮುದ್ದಿಟ್ಟುಕೊಂಡು ಮಾದು ಕೇಳಿದ,

"ಮುದ್ದಪ್ಪನಿಂದ ಕಾಗದ ಬಂತೇ ?"

"ಇಲ್ಲ." ಒಡಲ ಸಂಕಟದಿಂದ ನುಡಿಯನ್ನು ಹೊರ ಹಾಕಿದಳು ಪೂವಿ.

ತೊಟ್ಟಿಲಲ್ಲಿ ಮಲಗಿ ನಿದ್ದೆಗೈದಿದ್ದ 'ಗಂಗೂ' ಎದ್ದು ರಾಗ ತೆಗೆದುದ ರಿಂದ ಪೊನ್ನಮ್ಮ ಒಳಹೋದಳು. ಸದ್ದು ಗದ್ದಲವಿಲ್ಲದೆ ಸಪ್ಪೆಯಾಗಿದ್ದ ಮನೆ ಒಮ್ಮೆಲೇ ಕಲಕಲಮಯವಾಯಿತು. ಚಿಟ್ಟೆ ತನ್ನ ಜಗತ್ತಿನಲ್ಲಿದ್ದ ಅನೇಕ ವ್ಯವಹಾರಗಳನ್ನು ಮುದ್ದು ಮಾತುಗಳಿಂದ ಚಿತ್ರಿಸತೊಡಗಿದ. 'ಹ್ಞೂ' ಎಂದಷ್ಟೂ ವಿಷಯಗಳು ಬೆಳೆಯುತ್ತಲೇ ಇದ್ದುವು. ಪೂವಿ ಬಂದು ಬಸಿ ಚಹ ವನ್ನು ತಂದುಕೊಟ್ಟಳು. ಹಸಿದ ಒಡಲು ಆಕರ ಮೂಡಿದ ನಾಲಿಗೆ ಪೈಪೋಟಿ ಗಿಳಿದುವು ಎಂದೇ ಹೇಳಬಹುದು. ಮಾದು ಸ್ವಲ್ಪ ಸ್ವಲ್ಪವಾಗಿ ಚಹವನ್ನು ಹೀರುತ್ತ ಅಂದ "ಚಳವಳಿ ಕ್ಷೇತ್ರ ಬಹಳ ಬಿಗಡಾಯಿಸಿದೆ. ಯಾವ ಘಳಿಗೆ ಯಲ್ಲಿ ಯಮಗಂಡವಿದೆ ಎಂಬುದನ್ನು ಹೇಳುವಂತಿಲ್ಲ. ಸಿಕ್ಕ ಸಿಕ್ಕದಲ್ಲಿ ಮುಟ್ಟ ಹಾಕುತಿದ್ದಾರೆ. ಪ್ರಾಣಹಾನಿ-ಅರ್ಥಹಾನಿಗಳಿಗೆ ಇತಿಮಿತಿಯೇ ಇಲ್ಲ. ಛೀ! ಛೀ! ನೆನೆಸಿಕೊಂಡರೆ ಹೊಟ್ಟೆಯುರಿಯುತ್ತದೆ. ಬ್ರಿಟಿಷರು ಇಷ್ಟಕ್ಕೆ ಅವಕಾಶ ಕೊಟ್ಟದ್ದು ತಪ್ಪು. ಸಂಧಾನ ಅನುಸಂಧಾನಗಳಲ್ಲಿ ಈ ಅಧ್ಯಾಯವನ್ನು ತಿರುವಿ ಹಾಕಿದ್ದಿದ್ದಲ್ಲಿ ಎಂತಹ ಗೌರವವಿತ್ತು? ಬ್ರಿಟಿಷರಿಗೆ ಅದೇ ಅರ್ಥವಾಗುತಿಲ್ಲ.

"ಅದೊಂದೇ ಅಲ್ಲ ; ನಮ್ಮ ಕರ್ಮ ಸಂಯೋಗವೂ ಇದೆಯಲ್ಲ....?"

"ಸರಿ ಬಿಡು ; ಈ ಸಲ ಹೆಂಗಳೆಯರೂ ಹುಡುಗಿಯರೂ ಇತಿಮಿತಿ

ಯಿಲ್ಲದೆ ಹೊರಟಿದ್ದಾರೆ. ಆದರೆ ವ್ಯವಹಾರ ನೈಪುಣ್ಯತೆ ಸಾಲದು."

"ಸದಾ ಒಳಗಡೆ ಇದ್ದವರಿಗೆ ವ್ಯವಹಾರ ಜ್ಞಾನ ತಕ್ಷಣ ಬರುವುದೂ ಸಹ ಕಷ್ಟವೇ."

"ಆಗ ನೀನು ಈ ವ್ಯವಹಾರವನ್ನೆಲ್ಲ ಎಷ್ಟು ಸೂಕ್ಷ್ಮವಾಗಿ ನಡೆಸುತಿದ್ದೆ ಎಂಬುದು ಈಗ ನನಗೆ ಅರ್ಥವಾಗುತ್ತದೆ !" ಗಂಭೀರ ಮುಖಮುದ್ರೆಯ ಮೇಲೆ ಸಂತಸದ ಖಳೆಯನ್ನು ತೇಲಿಸಿದ ಮಾದು.

ಪೂವಿ ಮುಗುಳುನಕ್ಕು ನುಡಿದಳು "ನನಗೆ ಅಪ್ಪ ಕೊಟ್ಟ ತಯಾರಿ ಅದು."

"ಈಗಲೂ ಸ್ತ್ರೀಯರಿಗೆ ಮನೋವಿಕಾಸವಾಗಲಿಲ್ಲ. ಈ ದೇಶ ನರಳು ತ್ತಿರುವುದು ಸ್ತ್ರೀವಮೌಢ್ಯತೆಯಿಂದ !"

"ಓ....ಅಷ್ಟೇ ಏನು ?"

ಒಡನೆ ಎಲ್ಲರೂ ಕುಲುಕುಲು ನಕ್ಕರು.

ಆನಂದಭರಿತ ವಾತಾವರಣದಲ್ಲಿ ತನ್ನೊಳಗೆ ತರ್ಕಿಸಿಕೊಳ್ಳುತ್ತ ಗಂಭೀರ ಭಾವದಿಂದ ಮಾದು ಮುಂದುವರಿದ, "ಜನಸಾಮಾನ್ಯರೊಂದಿಗೆ ಎಷ್ಟೆಷ್ಟು ಹೆಣಗುತ್ತೇವೋ ದೇವರಿಗೇ ಗೊತ್ತು. 'ಗೂಂಡಾ ಇಜಂ' ಕಡೆ ಹೇಗೆಂದರೆ ಹಾಗೆ ಪ್ರಚೋದನೆಗೊಳಿಸಬಹುದು. ಅದೇ ಸೂಕ್ಷ್ಮ ವ್ಯವಹಾರಗಳ ಕಡೆ ಬೌದ್ಧಿಕ ವಿಚಾರಗಳ ಕಡೆ ಪಳಗಿಸುವುದು ಬಹಳ ಕಷ್ಟ."

"ವಿದ್ಯೆ ಬುದ್ಧಿ ಕಡಿಮೆ....ಒಂದು ವೇಳೆ ಲಭಿಸಿದರೂ ಕ್ರಿಯಾತ್ಮಕ ಚಟುವಟಿಕೆಗಳಿಲ್ಲ. ಇಂದಿನ ರೂಪುರೇಷೆಗಳೆಲ್ಲ ಹಳೆಯ ತಳಹದಿಯಲ್ಲೆ ನೆಲಸಿವೆ. ಆದುದರಿಂದ ಮಾನಸಿಕ ವಿಕಾಸ ನೊಟಕು...ನಮ್ಮವರು ಚೇತರಿಸಿ ಕೊಳ್ಳಬೇಕಾದರೆ ಬಹಳ ಕಾಲಬೇಕು."

ಎದೆಯಮೇಲೆ ಮಗುವನ್ನೆತ್ತಿಕೊಂಡು ಹೊರಬಂದ ಪೊನ್ನಮ್ಮ ತನ್ನ ವಿಚಾರ ದೀಪ್ತಿಯನ್ನು ಹರಿಯಬಿಟ್ಟಳು.

"ಇದ್ದ ಬುದ್ಧಿಯನ್ನು ಉಪಯೋಗಿಸಿಕೊಂಡು ತಮ್ಮ ಪರಿಸ್ಥಿತಿಯನ್ನು ಅರಿತುಕೊಂಡರೆ ಪಾರಾಗಬಹುದು....ಆದರೆ ನಮ್ಮವರ ದೃಷ್ಟಿಕೋನವೇ ಬೇರೆ !"

ಎಲ್ಲರ ಮುಖದ ಮೇಲೂ ಮುಗುಳುನಗೆ ಅರಳಿತು.

ಮಾದು ಟವಲ್ಲು ತೆಗೆದುಕೊಂಡು ನೀರುಮನೆಗೆ ಹೋಗುವ ಮುನ್ನ ಮಗುವಿನ ಹಣೆಯಮೇಲೆ ಹೂ ಮುತ್ತನೊತ್ತಿದ. ಆನಂದ ಭರಿತ ಆ ಪ್ರೇಮ ಮನಸ್ಸಿಗೆ ಉಲ್ಲಾಸ ನೀಡಿತು.

ಜೂತಿ ಹೊರಗಡೆ ಒಂದೇ ಸಮನೆ ಬೊಗಳುತಿತ್ತು–ವನದೇಶದ ಎಲೆ ಎಲೆಯೂ ಪ್ರತಿಧ್ವನಿ ಕೊಡುವಂತೆ.

೨೪

...ಹಡಗು ಹತ್ತಿ ನೂರಿನ್ನೂರು ಮೈಲಿ ಯಾನ ಕಳೆಯುವಷ್ಟರಲ್ಲಿ ಮನಃಪ್ರಾಣಗಳು ಮಿಡುಕುವಂತೆ ಏನೋ ಒಂದು ಬಗೆಯ, ಯೋಚಿಸಿದರೂ ಅರ್ಥವಾಗದ, ಅನಿರ್ವಚನೀಯವಾದ ತಳಮಳ-ಸಂಕಟ-ಗಲಿಬಿಲಿ ಉಂಟಾಯಿತು. ಏನೆಂಬುದೇ ಬಗೆ ಹರಿಯಲಿಲ್ಲ. ಲವಲವಿಕೆಯಿಂದಿರಲು ಎಷ್ಟೆಷ್ಟೋ ಪ್ರಯತ್ನಪಟ್ಟೆ; ಆಗಲಿಲ್ಲ. ಔಷಧ ಸೇವನೆ, ಪುಸ್ತಕ ಪಠಣ, ಹರಟೆ, ಆಟ ಯಾವಯಾವುದರಲ್ಲೋ ಭಾಗವಹಿಸಿದೆ. ಆದರೂ ಮನಸ್ಸಿಗೆ ನೆಮ್ಮದಿ ಮೊಳೆಯಲಿಲ್ಲ, ಒಡಲ ಸಂಕಟ ತಣಿಯಲಿಲ್ಲ.

ಸಮುದ್ರದ ಮೊರೆತ, ಜಲಹಾರಿಣೀ ಪಕ್ಷಿಗಳ ಕ್ರೇಂಕಾರ, ಚಂಡ ಪ್ರಚಂಡಗಾಳಿಯ ಹೊಡೆತ, ಸಮುದ್ರಯಾನ, ಮತ್ಸ್ಯಗಂಧ,ಸೀಮಿತಜೀವನ, ಸಮುದ್ರ ಹವೆ ಒಂದೊಂದೂ ಒಂದೊಂದು ಬಗೆಯ ಭಾವನೆಯನ್ನು ಹುಟ್ಟಿಸುವಂತಿದ್ದುವು. ಆದರೂ ಮನಸ್ಸಿಗೆ ನೆಮ್ಮದಿ ಮೂಡದಿದ್ದುದು ಪರಮಾಶ್ಚರ್ಯ....ಒಂದೇ ಬಾರಿಗೆ ಮಗ ಸೊಸೆಯನ್ನು ಕಳೆದುಕೊಂಡ ಅವ್ವನ ದುಃಖಿತ ಚಿತ್ರ ಚಿತ್ತಭಿತ್ತಿಯಲ್ಲಿ ತುಂಬಿ ಹೋಗಿತ್ತು. ಅವರೊಂದಿಗೆ ಕೆಲವು ದಿನಗಳಿದ್ದು ನೊಂದಜೀವಕ್ಕೆ ಸಮಾಧಾನವೂಡಿಸಿ ಬರಲಾಗಲಿಲ್ಲವಲ್ಲಾ ಎಂಬ ಸಂಕಟ ಒಡಲನ್ನು ಕೊರೆಯುತಿತ್ತು. ಮೇಲಾಗಿ, ಎರಡನೇ ಮಹಾಯುದ್ಧದ ಪಾಪದಲ್ಲಿ ಭಾಗಿಯಾಗಲಿರುವ ಸಂಕಟ...ಸಾರ್ವಜನಿಕ ಕ್ಷೇತ್ರದಿಂದ ದೂರವಾದ ಸಂಕಟ....ಹೀಗೆ ನಾನಾ ಪರಿತಾಪಗಳನ್ನು ತುಂಬಿಕೊಂಡಿದ್ದೆ. ಬಹುಶಃ ಅದೇ ಅನಾರೋಗ್ಯವನ್ನು ತಂದಿದೆಯೆಂಬ ದೃಢ ಆಲೋಚನೆಯಲ್ಲಿಯೇ ನಾನಿದ್ದೆ, ಆದರೆ ಕ್ರಮಕ್ರಮೇಣ ಎಲ್ಲರೂ ಕಾಯಿಲೆ ಬಿದ್ದುದರಿಂದ ನಮಗೆ ಸಾಗರದ ಹವೆ ಹಡಗಿನ ಊಟ ಒಗ್ಗಲಿಲ್ಲವೆಂಬುವು ಅರ್ಥವಾಯಿತು.

ಎಲ್ಲರಿಗೂ ಡಿಂಗೂ ಜ್ವರ ಬೆನ್ನುಹತ್ತಿದೆ. ಔಷಧೋಪಚಾರದ ವ್ಯವಸ್ಥೆ ಸಾಕಷ್ಟಿದ್ದರೂ ಯೋಧರು ಸುಧಾರಿಸಿಕೊಳ್ಳುತ್ತಿಲ್ಲ. ಮೊಟ್ಟಮೊದಲು ಕಾಯಿಲೆ ಬಿದ್ದುದರಿಂದ ನಾನು ಮೊದಲಾಗಿಯೇ ಎದ್ದು ಸುಧಾರಿಸಿಕೊಂಡೆ, ಈಗ ರೋಗಿಗಳ ಉಪಚಾರಕ್ಕೆ ನಾನೇ ನಿಂತಿರುವೆ. ಹಗಲಿರುಳು ಮಾಡಿದರೂ ಮುಗಿಯದ ಬದುಕು. ಈ ಪರಿಸ್ಥಿತಿಯಲ್ಲಿ ಮುಂದಿನ ಪಯಣ ಸರಿಯಲ್ಲ ಎಂಬ ವಿವೇಚನೆ ದಂಗೆ ಎದ್ದಿದೆ. ಖಂಡಿತವಾಗಿಯೂ ಎಲ್ಲರಿಗೂ ಭೂ ವಾತಾವರಣ ಸ್ವಲ್ಪ ಕಾಲವಾದರೂ ಬೇಕೇ ಬೇಕು. ನಮ್ಮ ಕ್ಯಾಪ್ಟನ್ ಅದಕ್ಕಾಗಿ ಒತ್ತಾಯ ಪಡಿಸಿದ್ದಾನೆ. ಆದರೆ ಹಡಗಿನ ಕ್ಯಾಪ್ಟನ್ನನು ಒಪ್ಪುತ್ತಲೇ ಇಲ್ಲ. ಈ ಪರಿಸ್ಥಿತಿಯಲ್ಲಿ ನಾವು ಹೋಗಿ ಮಾಡುವುದಾದರೂ ಏನು ? ಇತರ ಸೈನಿಕರು ಉಗ್ರವಾಗಿ ಹೋರಾಡುವಾಗ ನಾವು ವಾತ, ಪಿತ್ಥ, ಜ್ವರಗಳಿಂದ ನರಳುವುದೆಂದರೆ ಎಂತಹ ಅಸಹ್ಯ ?

ಹೇಗೆ ಇದರ ಪರಿಹಾರವೋ ಅರ್ಥವಾಗುತ್ತಿಲ್ಲ.

ಏನಾದರಾಗಲಿ, ಪರಿಸ್ಥಿತಿಗೆ ಹೊಂದಿಕೊಳ್ಳುವ ಮನಸ್ಸು ದೃಢವಾಗಿದೆ. ಆದ್ದರಿಂದ ಯೋಚಿಸಬೇಕಾದ್ದಿಲ್ಲ. ಈಗಾಗಲೇ ಅನೇಕರು ಸುಧಾರಿಸಿಕೊಂಡಿದ್ದಾರೆ. ಉಳಿದವರು ಕೆಲವು ದಿನಗಳಲ್ಲಿ ಸುಧಾರಿಸಿಕೊಳ್ಳಬಹುದು ಚಿಂತೆ ಬೇಡವೇ ಬೇಡ.

ನಾನು ಹೊರಡುವ ಮುನ್ನ ಕೊಡಗಿನಲ್ಲಿ ಒಂದು ವಾರ ಕಳೆದಿದ್ದರೂ ಚೆನ್ನಾಗಿತ್ತು. ನಮ್ಮವರನ್ನು ನೋಡದೆ ಬಂದುದು ಮನಸ್ಸಿಗೆ ಮುಜುಗರ, ಅವ್ವ ಮತ್ತು ಎಲ್ಲರಿಗೂ ನನ್ನನ್ನು ಕ್ಷಮಿಸಿ ಬಿಡಲು ಹೇಳು. ನಾನು ಹಿಂದಿರುಗಿ ಬಂದೊಡನೆಯೇ ಎಲ್ಲರ ದರ್ಶನವನ್ನೂ ಪಡೆಯುವೆ....

ಪೂವೀ, ಸಾಗರಸಮ ಭಾವನೆಗಳು ಬೆಳೆಯಬೇಕಾದರೆ ಸಾಗರಯಾನ ಮಾಡಿಯೇ ತೀರಬೇಕು. ಈ ನೀಲಾಕಾಶ, ನಿರ್ಜಲ ಮೋಡಗಳು, ವಿಲೋಲ ವಾಯು, ಮೇರೆಯಿಲ್ಲದ ಸಾಗರ ಒಂದಕ್ಕೊಂದು ಹೊಂದಿರುವ ರೀತಿಯನ್ನವಲೋಕಿಸಿದರೆ ಹೊಳೆಯುವುದು ಅರ್ಥವತ್ತಾದ ಸತ್ಯದ ಸಾಕ್ಷಾತ್ಕಾರ! ಧರ್ಮದ ಪಾವನರೂಪೀ ಅಭಿವ್ಯಕ್ತಿ !

ಎಂತಹ ಅಜ್ಞರೂ ಇಲ್ಲಿ ಸತ್ಯದ ಹುರುಳನ್ನು ಕಂಡು ಕೊಂಡಾರು! ಅಂದಮೇಲೆ ನಾನು ಹೇಳುವುದು ಇನ್ನೇನಿದೆ ?

ನಮ್ಮ ಆರೋಗ್ಯದ ಬಗ್ಗೆಯೇ ಆಗಲಿ, ಸ್ಥಿತಿಗತಿಯ ಬಗ್ಗೆಯೇ ಆಗಲಿ ಅಥವಾ ಇನ್ನೇನೇ ಇರಲಿ,ಮನಸ್ಸಿಗೆ ಏನೇನೂ ಹಚ್ಚಿಕೊಳ್ಳಲೇಬೇಡ. ಮುಖ್ಯ ವಾಗಿ ನಿಮ್ಮೆಲ್ಲರ ಸ್ಥಿತಿಗತಿಸುಧಾರಿಸಿ ಕೊಂಡರೆ ಸಾಕು. ಈಗ ನನ್ನ ಯೋಚನೆ ಚಿಂತೆ ಇರುವುದೆಲ್ಲಾ,ನಿಮ್ಮ ಬಗೆಗೆ. ಅದೊಂದು ಬಿಟ್ಟರೆ ನಾನು ಪೂರ್ಣಸುಖಿ. ಜೀವನ ಯಾರಿಗೂ ಸುಖವನ್ನೇ ಪ್ರಸಾದಿಸುವುದಿಲ್ಲ. ಅಲ್ಪಸುಖದೊಂದಿಗೆ ಅಪಾರವಾದ ದುಃಖವೂ ಇದ್ದೇ ತೀರುವುದು ಅದಕ್ಕಾಗಿ ಮರುಗಬಾರದು...

ಸ್ವರಾಜ್ಯ . ಸ್ವರಾಜ್ಯ...ಸ್ವರಾಜ್ಯ ಮಂತ್ರವನ್ನು ರಕ್ತದ ಕಣಕಣವೂ ಘೋಷಿಸುತ್ತದೆ. ಮಿಲಿಟರಿಗೆ ಸೇರುವಾಗ ದೇಶೋದ್ಧಾರವೇ ಮುಖ್ಯಗುರಿ ಯಾಗಿತ್ತು. ಮಾತೃಭೂಮಿಯ ಸೇವೆಯನ್ನು ಹೀಗೊಂದು ರೀತಿಯಲ್ಲಿ ನಡೆಸ ಬಹುದೆಂಬ ಮಹದಾಶಯವೂ ಇತ್ತು. ಎದೆಯ ನೆತ್ತರಿನ ಪ್ರತಿಯೊಂದು ಕಣವನ್ನೂ ಚೆಲ್ಲುವ ಹುಮ್ಮಸ್ಸಿತ್ತು. ಆದರೆ ಆದುದೆಲ್ಲ ತೀರ ವ್ಯತಿರಿಕ್ತ. ಭಾರತ ರೆಜಿಮೆಂಟು ವಿಶ್ವದ ಮಹಾಯುದ್ಧಕ್ಕೆ ಉಪಯೋಗಿಸಲ್ಪಡುವುದೆಂದು ಹಿಂದೆಯೇ ತಿಳಿದಿದ್ದರೆ ಖಂಡಿತಾ ಮಿಲಿಟರಿ ಸೇವೆಯನ್ನು ಬಯಸುತ್ತಿರಲಿಲ್ಲ. ಏನೋ ಮಾಡಲು ಹೋಗಿ ಏನೋ ಆಗುತ್ತಿದೆ....ಮಾತೃಭೂಮಿಯಿಂದ ಕೊನೆಯ ಹೆಜ್ಜೆಯನ್ನು ತೆಗೆಯುವಾಗ ಬಹಳ ದುಃಖವಾಯಿತು. ಇತರೆ ಸೈನಿಕರು ನನ್ನನ್ನು 'ಜೀವಗಳ್ಳ' ಎಂದು ಕರೆದು ಅಸಹ್ಯಿಸಿಕೊಂಡಾರೆಂಬ ಚಿಂತೆಯಿಂದ ನನ್ನನ್ನು ನಾನು ಹತೋಟಿಯಲ್ಲಿಟ್ಟುಕೊಂಡೆ. ಈಗಲೂ ಮನಃ ಪ್ರಾಣಗಳಿಗೆ ಸ್ವಾಸ್ಥ್ಯವಿಲ್ಲ. ಯೋಧರಲ್ಲಿರಬೇಕಾದ ಯೋಧಶಕ್ತಿಯೇ ಇಲ್ಲ. ಆನಂದಪುರದಲ್ಲಿ ಆನಂದವೇ ಇಲ್ಲದಂತೆ ಎಂದರೂ ಎನ್ನಬಹುದು.

ಗಾಂಧೀಜಿಯವರ ಅಸಹಕಾರ ಚಳವಳಿಯ ಆಂದೋಳನದಲ್ಲಿ ಊಟ ನಿದ್ರಾದಿಗಳಿಲ್ಲದೆ ಕೆಲಸ ಮಾಡುವಾಗ ನಮ್ಮಲ್ಲಿ ಎಂತಹ ಹುರುಪಿತ್ತು ?... ಎಷ್ಟು ನಿಷ್ಠೆಯಿಂದ ಕೆಲಸ ಮಾಡುತಿದ್ದೆವು...? ಆಗ ಸಂಬಳ ಸಾರಿಗೆಗಳಿರಲಿಲ್ಲ. ಈಗ ಎಲ್ಲವೂ ಉಂಟು ; ಮಾಡುವ ಮನಸ್ಸಿಲ್ಲ. ಪ್ರಸ್ತುತ ನಡೆಯುತ್ತಿರುವ ಅಸಹಕಾರ ಚಳವಳಿಯ ಮಹಾ ಆಂದೋಳನದ ರೂಪುರೇಷೆಗಳನ್ನು ಓದಿ ತಿಳಿಯುವಾಗ ವೈರಕ್ತವು ಕುದಿಯ ತೊಡಗುತ್ತದೆ. ನಾನೂ ಹೋಗಲೇ ಎಂಬಷ್ಟು ಹುರುಪು ಮೂಡುತ್ತದೆ. ಆದರೆ....ಆದರೆ ಹೊಟ್ಟೆಯ ಪಾಡು ಕೈ ಕಾಲಿಗೆ ಸಂಕೋಲೆಯನ್ನು ತೊಡಿಸುತ್ತದೆಂದು ಅಂದು ಊಹಿಸಲಾರದೇ ಹೋದೆ

ಒಮ್ಮೊಮ್ಮೆ, ಯಾವುದಾದರೊಂದು ರೀತಿಯಲ್ಲಿ ಮಿಲಿಟರಿಯಿಂದ ಬಿಡುಗಡೆ ಹೊಂದಬಹುದೇ ಎಂಬ ಯೋಚನೆ ಮನವನ್ನು ಕಾಡುತ್ತದೆ. ಈ ಪೌರುಷೇಯವಾದ ವಾತಾವರಣದಲ್ಲಿ ಹಿಂಜರಿಯುವುದೂ ಸಹ ಕಷ್ಟವೇ. ಹೊರಟದ್ದಾಗಿದೆ, ನನ್ನ ಕರ್ತವ್ಯವನ್ನು ನಡೆಸಿಕೊಳ್ಳಬೇಕಾದುದು ನನ್ನ ಧರ್ಮ. ಅಂತಲೇ ಬದ್ಧನಾಗಿರುವೆ.

ಅಂದಮೇಲೆ ಅನುಚಿತವೆನ್ನುವುದಾಗಲಿ, ದುಃಖಿಸುವುದಾಗಲೀ ಸರಿಯಲ್ಲ. ಇಲ್ಲಿಂದ ಭಾರತಕ್ಕೆ ಹಿಮ್ಮರಳಿದನಂತರ ಮಿಲಿಟರಿ ಕ್ಷೇತ್ರಕ್ಕೆ ನಮೋ ಎನ್ನುವೆ. ಹೊಟ್ಟೆಗಿಲ್ಲದಿದ್ದರೂ ಚಿಂತೆಯಿಲ್ಲ. ಸ್ವರಾಜ್ಯಕ್ಕಾಗಿ ಹೋರಾಡುವುದರಲ್ಲಿ ಅರ್ಥವಿದೆ ..ಧರ್ಮವಿದೆ....ತಥ್ಯವಿದೆ....

ನಾವು ಹಡಗು ಹತ್ತಿದಮೇಲೆ ಚಳವಳಿಯ ಕತೆ ಏನಾಯಿತೋ ತಿಳಿಯಲಿಲ್ಲ. ಭಗವಂತನ ದಯದಿಂದ ಸ್ವಾತಂತ್ರ ಲಭಿಸಿದರೆ ಸಾಕು....ಅದೊಂದೇ ಇನ್ನೂ ತೀರದ ಬಯಕೆ....ಈ ಲೋಕದಲ್ಲಿನ ಎಲ್ಲಾ ಅಂತರಂಗಗಳೂ ಸಾಗರದಲೆಗಳಂತೆ ಮುಂದು ಮುಂದಕ್ಕೆ ಸಾಗುತ್ತಲೇ ಇರುತ್ತವೆ....ಆದರೆ ಮಹಾಪ್ರಳಯದಲ್ಲಿ ಸಣ್ಣ ಪುಟ್ಟ ಅಲೆಗಳ ಗತಿ ಏನಾಗುವುದೋ ಅವುಗಳ ನೆಲೆ ಇನ್ನೆಲ್ಲೋ....ಯಾವ ಘಳಿಗೆಯಲ್ಲಿ ಲಯ ಹೊಂದುತ್ತವೆಯೋ....ಈ ವೇದನಾಭರಿತ ಚರಿತ್ರೆಗೆ ಭಾರತ ಇತಿಹಾಸದಲ್ಲಿ ಸ್ಥಳವೇನಾದರೂ ಉಂಟೇ ಎಂಬುದೇ ಅನುಮಾನ....

ಯೋಚನೆಯ ಸುಳಿಯಲ್ಲಿ ಸಿಕ್ಕಿ ಮಂಕಾದವಳಂತೆ ನಿಂತ ಪೂವಿಯನ್ನು ನೋಡಿ ಬಿಸಿಯುಸಿರು ಬಿಡುತ್ತ ಕಾವೇರಿ, ಸಾಂತ್ವನಗೈಯ್ಯುವ ದನಿಯಲ್ಲಿ ನುಡಿದಳು,

"ಅವನೇ ಅಷ್ಟೊಂದು ಧೈರ್ಯಹೇಳಿ ಬರೆದಿದ್ದಾನಲ್ಲ, ಮತ್ತೇಕೆ ಚಿಂತೆ? ಇಂದಿನ ಪರಿಸ್ಥಿತಿಯಲ್ಲಿ ಎಷ್ಟುಕಾಲ ಪ್ರಜೆಗಳು ದುಸ್ಥಿತಿಯನ್ನು ಸಹಿಸಿಕೊಂಡು ನರಳುತ್ತ ಇದ್ದಾರು ? ಎಂದಾದರೂ ತಮ್ಮ ಸ್ಥಿತಿ ಅರಿವಾಗಲೇ ಬೇಕಲ್ಲ, ತ್ಯಾಗಪಥ, ಕರ್ತವ್ಯಮಾರ್ಗ, ದೇಶನಿಷ್ಠೆ ಕೆಲವರಿಗಾದರೂ ಕಂಡೇ ಕಾಣಿಸುತ್ತದೆ. ವರ್ತಮಾನ ಕಾಲದಲ್ಲಿ ಲೋಪದೋಷಗಳು ಹುಟ್ಟುವುದೂ, ಸಾವು

ನೋವುಗಳು ತಟ್ಟುವುದೂ ಸಹ ಸಹಜ.ದೇಶದ ನಾಯಕರು ತಮ್ಮ ಬಾಳನ್ನು ಲೆಕ್ಕಿಸದೆ ದೇಶಕ್ಕಾಗಿ ಹೋರಾಡುವ ಕೆಚ್ಚನ್ನು ಇಂಗ್ಲಿಷರು ಮೆಚ್ಚಿಕೊಂಡಿದ್ದಾರೆ, ವಿದೇಶಿಯರು 'ಭಲೆ' ಎನ್ನುತಿದ್ದಾರೆ. ಎಲ್ಲರಿಗೂ ಭಗವಂತ ಏನು ಪ್ರಸಾದಿಸುತ್ತಾನೋ ಅದರಲ್ಲಿ ನಮಗೂ ಹಂಚಿಕೆಯಾಗುತ್ತದೆ...ಯೋಚನೆ ಬಿಡು, ನೀನಿರುವ ಸ್ಥಿತಿಯಲ್ಲಿ ಚಿಂತಿಸುವುದು ಸರಿಯಲ್ಲ."

ಪೂವಿ ಮಾತಾಡಲಿಲ್ಲ. ಮುಖಮಂಡಲ ಮ್ಲಾನವಾಗಿತ್ತು.

ಚಿಟ್ಟಿ ಅಂಗಳದಲ್ಲಿ ನಾಯಿಯೊಂದಿಗೆ ಆಟದಲ್ಲಿ ನಿಮಗ್ನನಾಗಿದ್ದ. ಹೊತ್ತು ಇನ್ನೂ ನೆತ್ತಿಗೇರುವುದರಲ್ಲಿತ್ತು. ಪೊನ್ನಮ್ಮ ನೀರು ಮನೆಯಲ್ಲಿ ಸ್ನಾನಮಾಡುತಿದ್ದಳೇನೋ. ಜಳಜಳ ನೀರು ಸುರಿಯುತಿದ್ದುದು ಕೇಳಿಸುತಿತ್ತು.

ಚಿಟ್ಟಿ ಅಂಗಳದಿಂದ ಕೂಗಿ ಹೇಳಿದ,

"ಅವ್ವಾ, ಚಿಕ್ಕಪ್ಪ ಬಂದರು !"

ಇಬ್ಬರೂ ಹೊರಗಡೆ ತಲೆಹಾಕಿದಾಗ ಮಾದು ಮೂರು ನಾಲ್ಕು ಮಂದಿ ಸಂಗಡಿಗರೊಡನೆ ಹೆಬ್ಬಯಲು ಹಾದಿಯಲ್ಲಿ ಬರುತಿದ್ದುದು ಕಾಣಿಸಿತು. ಹೆಜ್ಜೆಗಳ ಗತಿ ತೀವ್ರವಾಗಿತ್ತು. ಇನ್ನಷ್ಟು ಹೊತ್ತಿನೊಳಗಾಗಿ ನಾಲ್ವರೂ ಮೇಲೆ ಬಂದರು.ಅಮಟ್ಟಿ ಗಣೇಶ, ಬಿಟ್ಟಂಗಾಳ ರಾಮಕೃಷ್ಣ, ನಾಪೋಕ್ಲು ಚಂಗಪ್ಪ ಮತ್ತು ಮಾದು ಅನಿರೀಕ್ಷಿತವಾಗಿ ಇಂದು ಪ್ರತ್ಯಕ್ಷವಾದುದು ಹೆಂಗಳೆಯರಿಗೆ ಮಹದಾನಂದ ತಂದಿತು. ಬಹಳ ದಿನಗಳಿಂದ ಹಾದಿ ನೋಡಿ ಬತ್ತಿದ ಕಣ್ಣುಗಳ ದೀಪ್ತಿ ಉಜ್ವಲವಾಗಿ ಬೆಳಗಿತು. ಪ್ರಶ್ನೋತ್ತರಗಳು ಮೊಳಗಿದುವು: ತುಟಿಗಳಲ್ಲಿ ಮಂದಹಾಸ ನಲಿದಾಡಿ ಆ ಮುಹೂರ್ತ ಮಂಗಳಮಯವಾಯಿತು.

ಚಂಗಪ್ಪ ಚಿಟ್ಟಿಯನ್ನು ಎತ್ತಿಕೊಂಡು ಒಳಬಂದ. ಕೆಂಧೂಳೀಧೂಸರಿತ ಉಡುಪು, ಮುಖದಮೇಲಿನ ಪುಷ್ಕಳವಾದ ಬೆಳೆ, ಮೈಕೈಗಳಿಗೆ ಮೆತ್ತಿದಕೊಳೆ, ಬಾಡಿಬತ್ತಿದ ಮುಖ ಚಳವಳಿಯ ಗಾತ್ರವನ್ನು ಸಾರಿ ಹೇಳುವಂತಿದ್ದುವು ; ಯಶಸ್ಸನ್ನು ಮುಂದಿಟ್ಟರೂ ಆಶ್ಚರ್ಯವಿಲ್ಲ.

ಎಲ್ಲರೂ ನೀರುಮನೆಗೆ ಹೋಗಿ ಹಂಡೆ ನೀರು ಚೆಲ್ಲಿ ಕೈಕಾಲು ತೊಳೆದುಕೊಂಡು,ಮುಖ ಮಜ್ಜನ ಮಾಡಿ ಹೊರಬರುತ್ತಲೂ ಪೊನ್ನಮ್ಮ ಅಂದಿಂದಿನ ಅಸಮಾಧಾನವನ್ನೆಲ್ಲ ತುಂಬಿಕೊಂಡು ನುಡಿದಳು "ಈ ಮೊದಲೆಲ್ಲ ಕಾಗದ ಪತ್ರಗಳು ಬರುತಿದ್ದುವು. ಈಗ ಅವೂ ಇಲ್ಲ. ಕೆಲವು ಸಮಯವಂತೂ ನೀವು

ಎಲ್ಲಿದ್ದೀರೆಂಬುದೇ ತಿಳಿಯುದಿಲ್ಲ.

"ನಮ್ಮ ನೆಲೆ ನಮಗೆ ತಿಳಿದರಲ್ಲವೇ ನಿಮಗೆ ತಿಳಿಸುವುದು?" ಎಂದ ಅಮ್ಮಟ್ಟಿ ಗಣೇಶ. ಮಾದು ನಕ್ಕು ಬಿಟ್ಟ.

"ಚಳವಳಿ ಇಷ್ಟು ಉಗ್ರರೂಪ ತಾಳುವುದೆಂದು ನಾವು ಭಾವಿಸಿರಲಿಲ್ಲ. ಇದೊಂದು ಸಂತೋಷಕರವೇನೋ ಸರಿ; ಆದರೆ ನಿಮ್ಮಿಂದ ಸುದ್ದಿ ಬರದಿದ್ದರೆ ಮನಸ್ಸಿಗೆ ಶಾಂತಿಯೇ ಇರುವುದಿಲ್ಲ. ಎಷ್ಟೇ ಪ್ರಯತ್ನಿಸಿದರೂ ಮನಸ್ಸಿಗೆ ಹಿಂಸೆ....ಈ ಗೋಳು ಯಾರಿಗೆ ಬೇಕು? ಇನ್ನು ನೀವು ಹೊರಟರೆ ನಾನೂ ಹೊರಡುವವಳೇ ಸೈ!" ಎಂದಳಾಕೆ. ಮುಖಮಂಡಲ ನವೋದಿತ ಉಜ್ವಲ ದೀಪ್ತಿಯಿಂದ ಆಚ್ಛನ್ನವಾಗಿತ್ತು. ನಿಂತ ನಿಲುವಿನಲ್ಲಿ ದೃಢ ನಿಶ್ಚಯ ಕಾಣಿಸುತಿತ್ತು.

ಪೂವಿ ಪೊನ್ನಮ್ಮನ ಮುಖಭಾವವನ್ನು ಗಮನಿಸುತ್ತ ನಿಶ್ಚಲಭಾವ ದಿಂದ ನುಡಿದಳು.

"ಕರ್ತವ್ಯ ಎಂಬುದು ಕಾಳೋಗರದಂತೆ ಹತ್ತು ತಲೆಗಳಿಂದ ಹತ್ತು ಕಡೆ ಕುಟುಕುತ್ತದೆ. ನೀನು ಮಗುವಿನ ತಾಯಿ...ಚಳವಳಿರಂಗಕ್ಕೆ ಧುಮುಕಿದರೆ ಕಷ್ಟ...."

"ನಾನು ಎಷ್ಟು ಕೆಲಸವನ್ನಾದರೂ ಮಾಡಬಲ್ಲೆ. ಈ ಚಿಂತೆ ಮಾತ್ರ ಭರಿಸಲಾರೆ."

"ಹೌದು....ಏನು ಮಾಡೋಣ ? ಸಹನೆ ಇಲ್ಲದಿದ್ದರೆ ಆಗುತ್ತದೆಯೆ ?" ಮಾದು ಸಮಾಧಾನ ಹೇಳಿದ.

ಪೂವಿ ಒಂದು ಘಳಿಗೆ ತಡೆದು ಮಾದಯ್ಯನಿಗೆಂದಳು. "ಇಂದು ವಿದೇಶಿ ಯರಿಗೂ, ಬಹುಶಃ ಬಹಳ ಆಶ್ಚರ್ಯ....ತಾವು ಎಷ್ಟೆಷ್ಟು ಪರಿಶ್ರಮದಿಂದ ಎಷ್ಟೆಷ್ಟು ಶೌರ್ಯದಿಂದ ಸ್ವರಾಜ್ಯ ಸ್ಥಾಪನೆ ಮಾಡಿದರೋ ಅದರಲ್ಲಿ ಸಾವಿರದ ಲ್ಲೊಂದಂಶವನ್ನೂ ಪ್ರಯತ್ನಿಸದೆ ಭಾರತೀಯರು ಸ್ವಾತಂತ್ರ್ಯ ಸಾಧನೆಗೆ ಹೋರಾಡುತಿದ್ದಾರೆಂದರೆ ಖಂಡಿತ ಅಪಹಾಸ್ಯವಲ್ಲದೆ ಇನ್ನೇನು? ಈ 'ಚಳವಳಿ' ದುರ್ಬುದ್ಧಿಗಳ ಕೂಟ ಎಂದು ಅವರು ಭಾವಿಸಿದರೆ ಏನೇನೂ ಆಶ್ಚರ್ಯವಿಲ್ಲ ಎನ್ನಬಹುದು."

"ಈಗೀಗ ಅವರಿಗೂ ಭಯ ಹುಟ್ಟಿದೆ."

"ಒಂದಲ್ಲ ಒಂದುದಿನ ಬ್ರಿಟಿಷರ ಎಲ್ಲಾ ಆಯೋಜನೆಗಳು ಮಣ್ಣು ಪಾಲಾಗುತ್ತದೆ ಅದರಲ್ಲಿ ಅನುಮಾನವೇ ಇಲ್ಲ." ಚಂಗಪ್ಪ ದೃಢ ಕಂಠದಿಂದ ಹೇಳಿದ.

ಆ ನುಡಿ ಎಲ್ಲರಿಗೂ ಎಷ್ಟು ಸಮಾಧಾನವನ್ನು ತಂದಿತೆಂದರೆ ಹುರಿಯಾಳುಗಳ ಮುಖಮಂಡಲ ಇದ್ದಕ್ಕಿದ್ದಂತೆಯೇ ಕತ್ತಲಲ್ಲಿ ದೀಪ ತಂದಂತೆ ಪ್ರಸನ್ನ ಮಯವಾದುವು.

ಅಲ್ಪ ವಿಶ್ರಾಂತಿ ಶಾಂತ ಸಮಯದಲ್ಲಿ ದೊರೆತ ಗೃಹಸೌಖ್ಯ ತನುಮನಗಳಿಗೆ ಉತ್ಸಾಹವನ್ನು ನೀಡಿತು. ಚಿಟ್ಟೆಯನ್ನು ಬಳಿಯಲ್ಲಿ ಕೂಡಿಸಿಕೊಂಡು ಮೈದಡವುತ್ತ ಚಂಗಪ್ಪ ನುಡಿದ,

"ಮುದ್ದು ಜೀವ ಈಗ ಇಲ್ಲಿಯೇ ಇರಬಹುದು. ದೇಶದ ಪರಿಸ್ಥಿತಿ ಜೀವನ ಪರಿಸ್ಥಿತಿ ಪ್ರಾಣವನ್ನೆಷ್ಟುಬಗೆಯಲ್ಲಿ ಹಿಂಡುತ್ತಿದೆಯೊ....ಇಲ್ಲಿ ವಿಶಾಲ ಕ್ಷೇತ್ರದಲ್ಲಿ ಜಗಿದಾಡಿದ ವ್ಯಕ್ತಿ; ಈಗ ಎಷ್ಟು ಕಷ್ಟವಾಗಿರಬೇಡ ... ? ನನಗದೇ ಸಂಕಟ. ಅವನು ಏನೋ ಯೋಚಿಸಿದ್ದ, ಇನ್ನೇನೋ ಆಗಿ ಹೋಯಿತು."

"ಅದನ್ನೆ 'ವಿಧಿವಿಲಾಸ' ಅನ್ನುವುದು."

"ಪಾಪ ..! ಅವನದೊಂದು ಬಗೆಯ ಕರುಣಾಯಿತ ಚಿತ್ರಾರ."

"ಆ ಕತೆ ಇದಾಯಿತಲ್ಲ ಇರಲಿ, ನಮ್ಮಲ್ಲಿ ಬಹುಮಂದಿ ದೇಶೀಯರು– ಅದರಲ್ಲೂ ಕಲಿತವರು ಪ್ರಜಾರಾಜ್ಯವನ್ನು ಯಾವರೀತಿ ಕಲ್ಪಿಸಿಕೊಂಡಿದ್ದಾರೆ ಗೊತ್ತೆ ?"

"ವಾಮಮಾರ್ಗದಲ್ಲಿ ನಡೆಯುವ ಊರ್ಧ್ವಮುಖೀ ಜೀವನಕ್ಕೆ ಪ್ರಜಾರಾಜ್ಯದಿಂದ ಧಕ್ಕೆ. ಅಂತಲೇ ಅವರದ್ದೆಲ್ಲ ಬಹಳ ದೂರಾಲೋಚನೆ !"

"ಮಾತೃಭೂಮಿಗೆ ದ್ರೋಹ ಬಗೆಯುವುದೆಂದರೆ....?"

"ಸ್ವಾರ್ಥದ ಪರಮಾವಧಿ ! ಒಮ್ಮೆ ಸ್ವರಾಜ್ಯಬರಲಿ...ಇವರ ಜನ್ಮ ಜಾಲಾಡದಿದ್ದರೆ ?"

"ಇವರು....ಇಂದು ಇಂಗ್ಲಿಷರ ಬಾಲ ಬಡುಕರು! ಮುಂದೆ ಕಾಂಗ್ರೆಸ್ಸಿನ ಬಾಲಬಡುಕರು ! ಗೆದ್ದೆತ್ತುಗಳಿಗೆಲ್ಲ ಹಾರ ಹಿಡಿದೇ ಇರುತ್ತಾರೆ. ನೋಡು, ಬೇಕಾದರೆ !"

"ಜಗತ್ತೇ ಹಾಗೆ !"

"ಇನ್ನು ನಮ್ಮ ಮುಂದಿನ ಕಾರ್ಯಕ್ರಮವೇನು ?"

"ಏನು ಮಾಡಿದರೂ ಸಿಕ್ಕಿಕೊಳ್ಳಬಾರದು. ಜೇಲಿನಲ್ಲಿ ಸುಮ್ಮನೆ ಕೊಳೆಯುವುದಕ್ಕಿಂತ ಹೊರಗಡೆ ಇದ್ದರೆ ಕೆಲಸ ಮಾಡಬಹುದು."

"ಹೆಸರಿಗೆ ಶಾಂತಿಸಂಗ್ರಾಮ....ಶಾಂತಿವೀರರ ರಕ್ತ ಚೆಲ್ಲಾಡಿದ್ದಕ್ಕಂತೂ ಇತಿಮಿತಿಯೇ ಇಲ್ಲ. ಜೀವನಷ್ಟ ನೆನಸಿಕೊಂಡರೆ ಸಂಕಟವಾಗುತ್ತದೆ."

"ಇಂಗ್ಲಿಷರು ನಮ್ಮ ಸಂಪತ್ತಿನ ರುಚಿ ಕಂಡಿದ್ದಾರೆ....ಅಷ್ಟು ಸುಲಭದಲ್ಲಿ ಬಿಟ್ಟುಕೊಟ್ಟಾರೆಯೆ ?"

"ಅದಿರಲಿ, ಈಗಲೂ ಜನಸಂತೆಯಲ್ಲಿ ಯುಕ್ತಾಯುಕ್ತಗಳ ವಿಮರ್ಶೆಯೆಷ್ಟು ನಡೆಯುತ್ತದೆ ಗೊತ್ತೆ ? ಬಸ್ಸುಗಳಲ್ಲಿ–ರೈಲುಗಳಲ್ಲಿ ಅವನ್ನೆಲ್ಲಾ ಕೇಳುವಾಗ ಈ ಪಯಣವೇ ಒಂದು ಮಜಾ ಎನಿಸುತ್ತದೆ. ಎಂತಹ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ ? ಓಹ್! ಗಾಂಧೀಜಿಯವರ ಸಲಹೆ ಆಚರಣಾ ಯೋಗ್ಯವೇ ? ಅವರಿಂದ ಈ ಬೃಹದ್ದೇಶದ ನಾಯಕತ್ವ ಸಾಧ್ಯವೇ? ಕಾಂಗ್ರೆಸ್ಸಿನ ಸಾಧಕ-ಬಾಧಕಗಳೇನು ? ಕರನಿರಾಕರಣ ಚಳವಳಿಯಿಂದ ಗುರಿಮುಟ್ಟುವುದು ಸಾಧ್ಯವೇ? ಸ್ವರಾಜ್ಯ ಬಂದರೂ ಸಹ ಈ ಅಖಂಡ ಭಾರತಕ್ಕೆ ರಾಜತ್ವ ಬೇಡನೇ ?...

"ಈ ಎಲ್ಲಕ್ಕೂ ಎಂತೆಂತಹ ಉತ್ತರ ಹೊರಬೀಳುತ್ತವೆ? ಒಬ್ಬೊಬ್ಬರ ತಿಳಿವಳಿಕೆಯ ಮಟ್ಟವನ್ನೂ ಎಷ್ಟು ಸುಲಭವಾಗಿ ಈಗ ಅಳೆಯಬಹುದು ? ಕರನಿರಾಕರಣೆ ಎಂದರೆ ಶುದ್ಧ 'ಅನೀತಿ-ಪುಂಡಾಟಿಕೆ' ಎಂದು ಕೆಲವರು ಭಾವಿಸಿದರೆ ಇನ್ನು ಕೆಲವರು 'ಬಿಕ್ಕೆ' ಬೇಡುವುದು ಎಂದು ಭಾವಿಸಿದ್ದಾರೆ. ಸಭ್ಯ ಜನಾಂಗದ ಬೇಡಿಕೆ ಹೀಗಲ್ಲ ಎಂಬುವವರೂ ಇದ್ದಾರೆ "

ಎಲ್ಲರ ಮನದಲ್ಲೂ ಮುಗುಳು ನಗೆ ಮೂಡಿತು.

"ಅಂತಹ ಶಂಕೆ ಬರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ನಮ್ಮ ಜನ ಇನ್ನೂ ಕಣ್ತೆರೆಯುವುದರಲ್ಲಿದ್ದಾರೆ. ನೆನೆಸಿಕೊಂಡರೆ ನಿಜಕ್ಕೂ ಸಂಕಟ....ಈ ಮನೋಭಾವ ಇಂದು ನಿನ್ನೆಯದಲ್ಲ. ಇಂತಹವರನ್ನು ಹೆತ್ತು ಭಾರತಿ ಬಂಜೆಯಾದಳು.

"ಅದು ನಿಜ..." ಮಾದು ಹಾಗೇ ಒಂದು ಘಳಿಗೆ ಯೋಚಿಸಿದ. ಚಂಗಪ್ಪನ ದನಿಯಲ್ಲಿ ಪರಮ ಸತ್ಯದ ತನಿರಸ ಜಿನುಗುತಿತ್ತು. ಎಲ್ಲರ ಮುಖದ ಮೇಲೂ 'ಹೌದು' ಎಂಬ ಭಾವ ದಪ್ಪದಪ್ಪ ಅಕ್ಷರಗಳಲ್ಲಿ ಬರೆದಂತಾಗಿತ್ತು....ಭಾವಪೂರ್ಣ ನೋಟವನ್ನು ಚೆಲ್ಲಿ, ವಿಚಾರಮಗ್ನನಾಗಿ–"ಕ್ರಾಂತಿಗಿಂತಲೂ ಶಾಂತಿಯುತವಾದ ಬೇಡಿಕೆಯಲ್ಲಿ ವಿಶ್ವಾಸ ತೋರುವುದು ಭಾರತದ ಚಿರಾಚರಿತ ಸಂಸ್ಕೃತಿ...ಆದರೆ ಎಷ್ಟು ಕಾಲ ಹೀಗೆ ನಡೆಯಲು ಸಾಧ್ಯ? ಎಷ್ಟು ಬಾರಿ ಸತ್ಯಾಗ್ರಹ ನಡೆಯಲಿಲ್ಲ? .. ರಷ್ಯದ ಮಹಾಕ್ರಾಂತಿಯನ್ನು ನಮ್ಮ ಸಂಸ್ಕೃತಿಗೆ ಅಳವಡಿಸಿದರೆ ಸ್ವರಾಜ್ಯ; ಇಲ್ಲದಿದ್ದರೆ ಮರೆತುಬಿಡುವುದು ಲೇಸು." ಎಂದ. ಕಂಠಸ್ವರ ದೃಢವಾಗಿ ವ್ಯಾಖ್ಯೆ ಹೂಡಿತು.

"ಹಾಗಾಗುವುದು ಅಸಾಧ್ಯ....ಇಂಗ್ಲಿಷರ ಮೇಲೆ ಗುಂಡಿಡುವ ಚೇತನ ನಮ್ಮಲ್ಲಿದೆಯೇ ? ಒಂದು ಗುಂಡಿಗುತ್ತರವಾಗಿ ನೂರು ಗುಂಡುಗಳು ಹಾರುತ್ತವೆ. ಅಲ್ಲಿಗೆ ನಮ್ಮ ಕತೆ ಮುಗಿಯುತ್ತದೆ."

ದಾಸ್ಯ...ನಿಸ್ಸತ್ವ...ನಿಶ್ಚೇತನ ..

"ಈಗೇನಾಗಿವೆ? ಹಿರಿಯ ರಾಜಕಾರಣಿಗಳೆಲ್ಲ ಜೈಲು ಸೇರಿ ಹೇಳುವವರು ಕೇಳುವವರು ಇಲ್ಲದೆ ಜನ ಮನಸ್ವೀ ವರ್ತಿಸುತಿದ್ದಾರೆ. ಕೊಟ್ಟ ಕೊನೆಗೆ ನಮ್ಮ ಸಂಸ್ಕಾರವನ್ನು ನಾವೇ ಹಾಳು ಮಾಡಿದಂತಾಗುವುದೇನೊ ಎಂಬ ಭಯ ಒಮ್ಮೊಮ್ಮೆ ಮೂಡುತ್ತದೆ."

"ಆದರೆ ಯಾವುದು ಶಾಶ್ವತ ಈ ಪ್ರಪಂಚದಲ್ಲಿ?.. ಒಮ್ಮೆ ಸ್ವರಾಜ್ಯ ಸ್ಥಾಪನೆಯಾಗಲಿ. ಅನಂತರ ಉಳಿದ ಯೋಚನೆ."

ನಾಲ್ವರೂ ಒಂದೇ ಸಮನೆ ಚರ್ಚೆಯಲ್ಲಿ ಭಾಗವಹಿಸಿದ್ದ ಸಮಯದಲ್ಲೇ ಒಳಗಡೆ ಪೂವಿಗೆ ಸುಖ ಪ್ರಸವವಾಗಿ ಗಂಡುಮಗು ನೂತನ ಜಗತ್ತಿಗೆ ಆಗಮಿಸಿತ್ತು. ಸುದ್ದಿ ತಿಳಿದು ಮಾದು ಒಳಗಡೆ ಓಡಿದ.

"ಒಂದು ಮಾತು ಹೇಳಿದ್ದಿದ್ದರೆ ಡಾಕ್ಟರನ್ನು ಕರೆಸಬಹುದಾಗಿತ್ತು.... ಹೇಳಲೇ ಇಲ್ಲವಲ್ಲಾ !"

ಕಾವೇರಿ ನಗುಮುಖದಿಂದ ಉತ್ತರಿಸಿದಳು,

"ಅವಳಿಗೆ ಸುಖಪ್ರಸವವಾಗುವುದರಿಂದ ಅವಳೇ ಇಷ್ಟಪಡಲಿಲ್ಲ. ದೇವರು ದೊಡ್ಡವನು ಉಪಕಾರ ಮಾಡಿದ."

ಮಾದು ಪುನಃ ಗೆಳೆಯರಲ್ಲಿಗೆ ಹೋದ. ಎಲ್ಲರೂ ನೂತನ ಕಾರ್ಯಕ್ರಮವನ್ನು ರೂಪಿಸಿ ಕೊಳ್ಳುವಾಗ ಹೊತ್ತು ಇಳಿಮುಖವಾಗುತಿತ್ತು.

ವನದೇಶ ಶಾಂತ ಸಮುದಾಯದಲ್ಲಿ ಮುಳುಗಿತ್ತು. ಎಲ್ಲಿಂದ ಎಲ್ಲಿಯ ವರೆವಿಗೂ ನೀರವ....ನಿಶ್ಶಬ್ದ...

ಹೊರಡುವ ಮುನ್ನ ಮಾದು ಒಳಬಂದಾಗ ಹೂ ಮಗು ಹಾಯಾಗಿ ಮಲಗಿತ್ತು. ಪ್ರಸನ್ನಮುಖಿಯಾದ ಪೂವಿಯ ಕಪೋಲಪಾಲಿ ವಿಕಸನಗೊಂಡುವು, ಮಾದು ಆಶ್ವಸ್ತನಾಗಿ ಅಭಿನಂದಿಸಿ ಒಂದೆರಡು ಮಾತಾಡಿ ಹೊರಬಿದ್ದ. ಮನಸ್ಸು ಹಗುರವಾಗಿತ್ತು. ಗಡಿಯಾರದ ಕಡೆ ನೋಟ ಹೊರಳಿಸಿ "ನಾವಿನ್ನು ಹೊರಡುತ್ತೇವೆ. ಏನಾದರೂ ಬರೆಯುವುದಿದ್ದರೆ ನಾಣಯ್ಯನಿಗೆ ಬರೆದರೆ ನಮಗೆ ವಿಚಾರ ತಿಳಿಯುತ್ತೆ" ಎಂದ.

ಪೊನ್ನಮ್ಮ ಏನೋ ಒಂದು ಬಗೆಯಲ್ಲಿ ಖಿನ್ನ ಮುಖಿಯಾಗಿ ನಿಂತಳು,

"ಗುಂಡಾಗಿರಿಯ ಬಳಿ ಸುಳಿಯ ಬೇಡಿರಿ...ಏನಾದರೂ ಅನಾಹುತ ಸಂಭವಿಸಿದರೆ ನಮ್ಮ ಗತಿಯೇನು ? ನಿಮಗೇನೋ ಉತ್ಸಾಹ....ಉತ್ಸಾಹದ ಪರಿಣಾಮವನ್ನೂ ಕೊಂಚ ಯೋಚಿಸಬೇಕಾದದ್ದೆ." ವಿಜಾತೀಯವಾದ ದನಿಯಲ್ಲಿ ನುಡಿದಳು ಕಾವೇರಿ.

"ದೇವರಿದ್ದಾನೆ." ಎಂದಷ್ಟೇ ನುಡಿದು ಅಜ್ಜಿಯ ಕಾಲು ಮುಟ್ಟಿ ಆಶೀರ್ವಾದ ತೆಗೆದುಕೊಂಡ ಮಾದು. ಉಳಿದವರೂ ನಮಸ್ಕರಿಸಿ ಪಾದಧೂಳಿ ಸ್ವೀಕರಿಸಿದರು.

ಹೊತ್ತು ಆರರ ಬಳಿಸಾರಿತು. ಗಿಡಮರಗಳ ನೆರಳು ನೀಳವಾಗಿದ್ದುವು; ಬಾಂದಳದಲ್ಲಿ ಮುಗಿಲುಗಳ ಮಾಲೆ ಸುಭದ್ರವಾಗಿದ್ದುವು. ಬೇಲಿ ಸಾಲಿನಲ್ಲಿ ಮೈನಾಹಕ್ಕಿ ಮನಮೋಹಕ ದನಿಯಲ್ಲಿ ಹಾಡುತಿತ್ತು. ಪೊನ್ನಮ್ಮ ಕಾವೇರಿಯರು ಬೀಳ್ಕೊಡುವಾಗ ಹನಿಗಣ್ಣಾದರು. ಚಿಟ್ಟಿ ಉತ್ಸಾಹದಿಂದ ಹೇಳಿದ.

"ಚಿಕ್ಕಪ್ಪಾ, ಖರುವಾಗ ಕೋವಿ ತನ್ನಿ !"

"ಹ್ಞಾ...ಖಂಡಿತ ತರುವೆ."

ಯಾವುದಾದರೂ ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಕ್ಕಿಕೊಳ್ಳಬಾರದೆಂದು ಮತ್ತೊಮ್ಮೆ ಹಿತವಾದ ಹೇಳಿದಳು ಕಾವೇರಿ.

"ಅಂತಹದೇನಿಲ್ಲ." ಎಂದು ಎಲ್ಲರೂ ಏಕೀಭವಿಸಿ ನುಡಿದರು "ಯೋಚಿಸ ಬೇಡಿ; ಆಗುವುದೆಲ್ಲಾ ಒಳ್ಳೆಯದಕ್ಕೆ !"

ಆದರೆ ಆ ಮಾತನ್ನು ಗುರುತಿಸುವ ಸ್ಥಿತಿಯಲ್ಲಿರಲಿಲ್ಲ ವೃದ್ಧೆಯ ಹೃದಯ.

೨೪

ಜೀವನ ಕಾಂತಾರದ ಗಾಢಾಂಧಕಾರದ ಮಾರ್ಗಯೋಗದಲ್ಲಿ ಪಡೆದ ಅನನ್ಯ ಅನುಭೂತಿ ಅಲ್ಪವಲ್ಲವಾದರೂ ಜೀವನ ಸಂಧ್ಯೆಯಲ್ಲಿ ಪಡೆಯಲೇ ಬೇಕಾದ ಶೀತಲ ಶಾಂತಿ ಲಭಿಸುತ್ತಲೇ ಇಲ್ಲ. ಯಾವುದೇ ತೀರ್ಥದಲ್ಲಿ ಮಿಂದರೂ, ಇನ್ನಾವುದೇ ಕ್ರಮದಲ್ಲಿ ರೂಪಿಸಿದರೂ ದಿನಚರಿ ವ್ಯವಹಾರ ಯಥಾ ರೀತಿ, ಸರ್ವೇಸಾಮಾನ್ಯ. ಯಾವ ಮಾರ್ಗದಲ್ಲಿ ಇನ್ನಾವ ರೀತಿಯಲ್ಲಿ ಉನ್ನ ತಿಯ ಶಿಖರವನ್ನೇರಬೇಕೋ ಅರ್ಥವಾಗುತ್ತಿಲ್ಲ. ದುರ್ಗಮವೂ, ದುಸ್ಸಹವೂ ಆದ ಸಂಸಾರ ಕಾಂಡದಲ್ಲಿ ಸಂಭವಿಸುವ ಹಾನಿಯನ್ನು ಯಾವ ಧೀರತೆ ಇದು ವರೆಗೆ ಸುಲಭವಾಗಿ ಜೀರ್ಣಿಸಿಕೊಳ್ಳುತ್ತಿತ್ತೋ ಅದಿಂದು ಮ್ಲಾನವದನೆಯ ರಾದ ಎಳೆ ಮಡದಿಯರ ಮುಂದೆ ಅತ್ಯಂತ ನಿಸ್ಸಹಾಯಕತೆಯಿಂದ ವೀತ ಗಾನವನ್ನು ನರನಾಡಿಗಳಲ್ಲಿ ಆರೋಹಣ–ಅವರೋಹಣ ನಡೆಸುವುದು. ಅಂದ ಮೇಲೆ, ತಾನಿನ್ನು ಮುಟ್ಟಲೇಬೇಕಾಗಿರುವ ಗಮ್ಯಸ್ಥಾನ ಮೊದಲ ಸರ್ಗ ವೆಂದರೆ ಹರಿದು ಹಂಚಿಹೋಗಿರುವ ಸಂಸಾರವನ್ನು ಒಂದುಗೂಡಿಸಿ ಜೀವನ ದೀಪ್ತಿಯನ್ನು ಪ್ರೋಜ್ವಲಗೊಳಿಸುವುದು. ಅನಂತರ...'ಅಲೌಕಿಕ'ವೆಂಬ ಪರಿ ಜ್ಞಾನ ಮನದಲ್ಲಿ ಮೂಡಿದಾಗ ಅಂತರ್ನಿಹಿತ ಬಿಸಿಯುಸಿರು ನಿತಾಂತ ವೇದನೆ ಯಿಂದ ಹರಿದಾಡಿತು,

ಆದರೆ...?

ಹೆಜ್ಜೆ ಇಟ್ಟೆಡೆ ಮುಗ್ಗರಿಸುವ ಪರಿಸ್ಥಿತಿ ಮಾತ್ರವಲ್ಲ; ಭೂಮಿಯೇ ಕುಸಿ ಯುವ ಪ್ರಸಂಗ! ಎಷ್ಟೇ ಪ್ರಯತ್ನಿಸಿದರೂ ಸುತ್ತುಮುತ್ತಿನ ಮಹಾಕ್ಷೋಭೆ ಮನಃಪ್ರಾಣಗಳನ್ನು ಭೈರಿಗೆಯಂತೆ ಕೊರೆಯುತ್ತದೆ. ಈಗ ತಾನೇತಾನಾಗಿ ಆತ್ಮಶಾಂತಿಯನ್ನು ಪಡೆಯಲಾಶಿಸುತ್ತಿಲ್ಲ. ಭಗವಂತ ಎಲ್ಲರಿಗೂ ಏನು ಪ್ರಸಾ ದಿಸುತ್ತಾನೋ ಅದರಲ್ಲಿಷ್ಟು ನನಗೂ ಲಭ್ಯ. ಮತ್ತೇಕೆ ಹೆಚ್ಚಿನ ಆಸ್ಥೆ ? ಎಂಬ ಆತ್ಮ ನಿರ್ಣಯಕ್ಕೆ ಪಾರಮಾರ್ಥಿಕ ಸತ್ಯ, ಆರ್ಥಿಕ ವ್ಯವಸ್ಥೆಗಳೂ ಶ್ರುತಿಮೇಳವಾಗಿವೆ.

ಮಾನಿನಿ...

ಇ...ಂ...ದು ಯಾವುದೇ ಅಳತೆಗೋಲಿನಿಂದ ಅಳೆದರೂ ಸ್ವಯಂ ಪೂರ್ಣೆಯೂ ಅಲ್ಲ; ಜ್ಞಾನಿಯೂ ಅಲ್ಲ; ಅವಜ್ಞೆಯೂ ಅಲ್ಲ. ಜೀವನಧರ್ಮದ ಕಮನೀಯ ಕಠೋರ ಮಾರ್ಗಾನುಕ್ರಮಣದಲ್ಲಿ ಅರ್ಥವಿಲ್ಲದೆ ಅಂಡಲೆದು... ಸಂಕುಚಿತ, ಅಸ್ಪಷ್ಟ, ಅಸುರ ಸಂಭ್ರಾಂತ ಸಂಸ್ಕಾರದಲ್ಲಿ ತೊಳಲಿ....ಜೀವನ ಸಫಲತೆಯನ್ನು ಪಡೆಯಲಾಶಿಸದೆ....ಬಡಭಾವನೆಯ ಬಂಡವಾಳವನ್ನು 'ಸುಸಂಸ್ಕಾರ'ವೆಂದು ಅಚಲ ಶ್ರದ್ಧೆಯಿಂದ ನಂಬಿ....ತಥ್ಯಹೀನ ಸತ್ವಹೀನ ಪರಂಪರೆಯಲ್ಲಿ ಮುಗ್ಧ ಮನೋಹರ ಶೋಭೆಯಿಂದ ನಲುಗಿ ಜೀವನವಿಕಾಸ ಗೊಳಿಸುವ ಮಹಾ ತಪಸ್ವಿನಿ..ಕಷ್ಟನಿಷ್ಠೂರಗಳಿಗೆ ಮಣಿಯದ ಹಠಯೋಗಿನಿ.

ಮೌಢ್ಯತೆ-ಚಂಚಲತೆ–ಮುಗ್ಧತೆ–ಅಬಲತೆ–ಯಾಂತ್ರೀಕತೆ–

ಈ ಅನುಪಮ ಶಬ್ದಾವಳಿ ಏತರಿಂದ ಹುಟ್ಟಿತು ಎಂಬುದನ್ನು ಪರ್ಯಾಲೋಚಿಸಿದರೆ–ಜನ್ಮ ನಕ್ಷತ್ರದ ಮೂಲವನ್ನು ತಡಕಿದರೆ ಹೊರ ಹೊಮ್ಮುವ ಸ್ವರ್ಗತುಲ್ಯ ಸತ್ಯ ಅಖಂಡ ವಿಭ್ರಮಾವೀಚಿಯಲ್ಲಿ ತೊಳಲುವ ನಾರೀಶ್ರೀ ! ಸಾಮಾಜಿಕ ಬಂಧಾನುಬಂಧನದಲ್ಲಿ ತೊಡೆಯಲಾಗದ ಸ್ವಾರ್ಥಸಾಧನೆಯ ಮಹಾಯಜ್ಞ ಕುಂಡದಲ್ಲಿ ಆಕೆ ಸರ್ವಾನುಕೂಲ ಸಿಂಧು....!

ಅಂತಲೇ ಶಬ್ದ ಮಣಿಮಾಲೆ ಅತ್ಯಂತ ಶ್ರದ್ಧೆಗೆ ಸುಪಾತ್ರವಾಗಿದೆ ! ನಿತ್ಯ ನೂತನತೆಯಿಂದ ವಿಜೃಂಭಿಸುತ್ತಿದೆ !

ಆದರೂ,

ಕಾವೇರಿ ಇಂದು ಯೋಚಿಸುವುದೇನು? ಇತರ ಮಾನಿನಿಯರಂತೆ ತಾನೂ ರಕ್ತ ಮಾಂಸಾದಿಗಳಿಂದ ಕೂಡಿದ ನಾರಿ. ಈ ಮಾಂಸದ ಶರೀರದಲ್ಲಿನ ದೇವ ಮಂದಿರವನ್ನು ಪೂಜಿಸಲು ಲೋಕದ ಇತರ ಸ್ತ್ರೀಯರಿಗೆ ಬಿಡುವು ದೊರೆಯದೆ ಹೋದಂತೆಯೇ ತನಗೂ ಸಹ ದೊರೆಯಲಿಲ್ಲ ಅಂದರೆ ವಿಶೇಷವೇನೂ ಅಲ್ಲ !

ಮೂಡಣದಲ್ಲಿ ಬಾಲರವಿ ಮೂಡುವ ಮುನ್ನ ಬುಗ್ಗೆ ಬುಗ್ಗೆಯಾಗೇಳುವ ಅಣಬೆಗಳಂತೆ ತಾಪತ್ರಯಗಳು ಮೂಡುತ್ತವೆ. ಹೃದಯ ಬಿಸಿಲಟ್ಟಿದ ನವ ನೀತದಂತೆ ದ್ರವಿತವಾಗಿ ತೀವ್ರ ಉದ್ಬುದ್ಧತೆಯಿಂದ ತನುಮನಗಳನ್ನು ಗಾಢಾಂಧಕಾರ ಮಾರ್ಗದಲ್ಲಿ ಸೆಳೆದೊಯ್ಯುತ್ತದೆ. ಟಗ....ಅಭಿಶಸ್ತ ಹೆಜ್ಜೆಗಳು ಹಿಡಿಯುವುದು ಅರ್ವಾಚೀನ ನೆಲೆಯಲ್ಲಿ ಪ್ರಾಚೀನ ಹಾದಿ....

ಭಾವನ ತರಂಗಿಣಿಯ ದ್ವಂದ್ವ ಲೀಲೆ ..ವಿಭ್ರಮ ವೀಚಿಯಚಟುಲತೆ.... ವಿಮಲ ವಿಶಾಲ ನಯನಗಳಲ್ಲಿ ಮಿನುಗುವ ಲಾಲಿಮೆ...ಪೂಜಿನೀಯ ಅಂಗ ಯಷ್ಟಿಯಲ್ಲಿ ಹೊಮ್ಮುವ ಕೃತಕೃತ್ಯತೆಯ ಲಹರಿ....ಇಂದು ಏನೇ ಇದ್ದರೂ ಇಡೀ ಜೀವಮಾನವೇ ಶೋಭಿತವಾಗಬೇಕಾಗಿದ್ದ ಉತ್ತಮಕಾಲ. ಆದರೆ ಏಕೆ ಹೀಗಾಯಿತು ? ಅದೇ ಅಸ್ಪಷ್ಟ...ಅಗ್ರಾಹ್ಯ...

"ಅವ್ವಾ !"

ಯೋಚನೆಯ ಎಳೆಯನ್ನು ಎಳೆದು ಜಗ್ಗಿತು ಎಳೆದನಿ. ಹಿಂತಿರುಗುವುದ ರೊಳಗಾಗಿ ಪುನಃ ಅದೇ ಕರೆ.

"ಅವ್ವಾ"

ಬಾಲ ಸಹಜ ಸುಮಧುರವಾಣಿ ಕರ್ಣದೇಶಗಳ ವೀಣೆಯನ್ನು ಮಿಡಿ ಯುವಂತೆ ಮೊಳಗಿತು. ಓಡಿ ಬರುತಿದ್ದ ಮಗುವಿನೆಡೆಗೆ ಕೈಚಾಚಿ ಕರುಣ ಕಾತರ ಸ್ವರದಿಂದ ನುಡಿದಳು ಕಾವೇರಿ,

"ಅದೇಕಷ್ಟು ಓಡಿ ಬರುತ್ತಿ ಚಿಟ್ಟೀ ? ಮೆಲ್ಲಗೆ ಬರಬಾರದೇ ?"

ಹವಳದ ತುಟಿಯಂತಹ ತುಟಿಗಳನ್ನು ಬಿರಿದ ಅವನೆಂದ "ಓ....! ಬಿಡಿ ಅವ್ವಾ ! ಓಡಿ ಬಂದರೇನಾಗುತ್ತೆ ?"

"ಬೀಳುತ್ತಿ ಅಷ್ಟೇ."

"ನಾನು ಬೀಳುವುದಿಲ್ಲ !"

"ಹಾಗೆನ್ನಬೇಡ ; ಒಂದು ಕಲ್ಲೆಡವಿದರೆ ಸಾಕು."

ಚಿಟ್ಟಿ ಉತ್ಸಾಹದಿಂದ ನುಡಿದ "ನಾನು ಯುದ್ಧಕ್ಕೆ ಹೋಗುವೆ ..! ಇಷ್ಟಕ್ಕೆಲ್ಲಾ ಹೆದರುತ್ತೇನೆಯೆ?" ಬಾಲೋಚಿತವಾದ ಮುಗ್ಧಭಾವ ಮುಖ ದಲ್ಲಿ ಮುದ್ರೆಯೊತ್ತಿತ್ತು.

"ಸರಿ ಬಿಡಪ್ಪಾ; ತಂದೆಯಂತೆ ಮಗ !'

"ಹೌದು; ಮತ್ತೆ;"

ಎಳೆಯ ತುಟಿಗಳಲ್ಲಿ ಚಿನ್ನದ ಛವಿಯಂತಹ ನಗು ಹರಿದಾಡಿತು.

ಕಾವೇರಿ ಅತ್ಯಂತ ಆತ್ಮಾನಂದದಿಂದ ಮುದ್ದಿಟ್ಟುಕೊಂಡಳು. ಕಣ್ಣು ಗಳಲ್ಲಿ ನಿತ್ಯನೂತನ ಭಾವಾತ್ಮಕ ಶ್ರದ್ಧೆಯ ಛಾಯೆ ಹೊಮ್ಮುತಿತ್ತು.

ಚಿಟ್ಟಿ ಆತುರದಿಂದ ಅಂದ,

"ಗಂಗೂ ಬಾಯಿಯಲ್ಲಿ ಕಡ್ಡಿ ಇಟ್ಕೊಂಡಿದಾಳೆ !"

"ಎಲ್ಲಿ ?"

"ಕಿರು ಜಗಲಿಯಮೇಲೆ...."

ಚಿಟ್ಟಿಯೊಂದಿಗೆ ಆ ಕಡೆಗೆ ಹೋದಳು ಕಾವೇರಿ. ಸುತ್ತಮುತ್ತ ಆಟದ ಬೊಂಬೆಗಳನ್ನು ಹರಡಿಕೊಂಡು ಕುಳಿತಿದ್ದ ಗಂಗಮ್ಮ ಕೊಳೆ ಸಹಿತ ಕಡ್ಡಿಯೊಂದನ್ನು ಜಗಿಯುತಿದ್ದುದು ನಿಜವಾಗಿತ್ತು. ಕಾವೇರಿಯು ಅದನ್ನು ಕಸಿಯುತ್ತಲೂ ಕೂಗಿ ರಂಪಾಟವೆಬ್ಬಿಸಿತು ಮಗು. ಚಿಟ್ಟಿ ತಟ್ಟನೆ ನುಡಿದ,

"ನಾನು ಕಸಿದು ಕೊಂಡಾಗಲೂ ಅವಳು ಮಾಡಿದ್ದು ಹೀಗೆಯೇ."

ಕಾವೇರಿ ಮಗುವನ್ನೆತ್ತಿಕೊಂಡು ಮುದ್ದುಗೈದು ವಿಷಯವನ್ನು ಮರೆಸಲು ಪ್ರಯತ್ನಿಸುತ್ತಿದ್ದಂತೆಯೇ ಒಳಗಿಂದಲೇ ಕರೆದು ಕೇಳಿದಳು ಪೂವಿ.

"ಏಕಮ್ಮಾ ಅಳುತಿದ್ದಾಳೆ ? ಬಿದ್ದಳೇ ?"

"ಬಾಯಿಯಿಂದ ಕಡ್ಡಿ ತೆಗೆದುದು ತಪ್ಪಾಯ್ತು ಪೊನ್ನಮ್ಮ ಒಳಗಿಲ್ಲವೇ?"

"ಸ್ನಾನ ಮಾಡುತಿದ್ದಾಳೆ."

"ಮಗು ಮಲಗಿದ್ದಾನೆಯೇ ?"

"ಇಲ್ಲ ..ಇಲ್ಲೇ ಇದ್ದಾನೆ."

"ಓ ...ಹೋ !"

ಮಗುವನ್ನೆತ್ತಿಕೊಂಡು ಚಿಟ್ಟಿಯ ಜೊತೆ ಒಳ ಬಂದಳು ಕಾವೇರಿ. ಚಾಪೆಯ ಮೇಲೆ ಮಲಗಿದ ಮಗು ಕೈಕಾಲು ಮುದುಡಿ ಕಣ್ಣು ಬಿಟ್ಟು ಮಲಗಿತ್ತು. ಪೂವಿ ಮನೆಗೆಲಸದಲ್ಲಿ ನಿಮಗ್ನಳಾಗಿದ್ದಳು. ಕೋಮಲ ಶರೀರ ಮೂಳೆ ಮೂಳೆಯಾಗಿ ಒಣ ಕಾಷ್ಠದಂತಾಗಿದೆ....ಯಾರ ಶುಭಚರಣಗಳ ಬಳಿ ಆತ್ಮಾರ್ಪಣೆಮಾಡಿಕೊಂಡಳೋ ಆ ದಿವ್ಯ ಜನನಿಯ ಉಡಿಯಲ್ಲಿ ಸಮರ್ಪಿಸಿದ ನವಜೀವನದ 'ಔನ್ನತ್ಯ' ವಿದೇಶಗಳ ಅಧಿಕಾರ ದಾಹಕ್ಕೆ ತುತ್ತಾಗುತ್ತಿರುವಾಗ, ತಾನೊಂದು ರೀತಿಯಲ್ಲಿ ಬಾಳಿನ ಬಲೆಗೆ ಸಿಕ್ಕಿ ಸ್ವಾತಂತ್ರ್ಯೋದಯಕ್ಕೆ 'ದ್ರೋಹ' ಬಗೆಯುತ್ತಿರುವೆನೇ ಎಂಬ ಕೊರತೆ ಕೀಟದಂತೆ ಮನವನ್ನು ಕೊರೆಯುತಿತ್ತು.

ನಡುಬಾಗಿ ಕಸವುಡುಗುತಿದ್ದ ಪೂವಿ ಹುಬ್ಬೆತ್ತಿ ನೋಡಿ ಏನೋ ಒಂದು ರೀತಿಯ ವಿಶಾದವಾಣಿಯಲ್ಲಿ ನುಡಿದಳು.

“ಜೀವನ ಪರಿಸ್ಥಿತಿ ಹದಗೆಡುತ್ತಿದೆ. ಇನ್ನಿನ್ನು ಸಂಸಾರ ನಿರ್ವಹಿಸುವುದು ಕಷ್ಟ.”

ಅದು ತಿಳಿಯದ ವಿಷಯವಲ್ಲ. ಎಷ್ಟೆಷ್ಟು ಪರಿಶ್ರಮದಿಂದ ಈ ಜೀವನವನ್ನು ನಡೆಸಬೇಕೋ ಬಗೆ ಹರಿಯುತ್ತಿಲ್ಲ. ಸ್ವಲ್ಪ ಯೋಚಿಸುತ್ತ ಹಾಗೇ ನಿಂತಳು...ಕಾರ್ಗಾಲದ ಕಾರ್ಮಳೆ ನಿಂತು ನಾಲ್ಕೈದು ದಿನಗಳಾಗಿದ್ದುವು. ಪುನರಪಿ ಮಳೆ ಸುರಿಯುವುದರೊಳಗಾಗಿ ಅಡವಿಯಿಂದ ಸೌದೆ ಆರಿಸಿ ತರುವುದು ಮೇಲು ಎಂಬ ಯೋಚನೆ ತಲೆಯಲ್ಲಿ ಸುಳಿಸುತ್ತುತಿತ್ತು. ಜನನಿ ಯೋಚನೆಯ ಭಾರದಿಂದ ಒಂದೇ ಒಂದು ನುಡಿಯನ್ನು ಹೊರಹಾಕಿದಳು,

“ದೇವರಿದ್ದಾನೆ.”

ನುಡಿ ಎದೆಯಾಳಕ್ಕಿಳಿಯಿತು. ಉಡುಗಿದ ಕಸವನ್ನು ಮೂಲೆಯಲ್ಲಿ ರಾಶಿಮಾಡಿ ಎತ್ತುತ್ತ ಮುಂದುವರಿದಳು ಪೂವಿ “ಪರಿಸ್ಥಿತಿಗೆ ಹೊಂದಿಕೊಳ್ಳುವುದೂ ಹೇಗೂ ಇದ್ದದ್ದೆ. ಅದರಿಂದೇನೂ ಭಯವಿಲ್ಲ. ಧನಸಂಸ್ಕಾರವಿಲ್ಲದಿರುವುದರಿಂದ ನಾಗರಿಕ ಸಮಾಜದಲ್ಲಿ ಪ್ರೀತಿ ಕಾಣದಿರಬಹುದಾದರೂ ಕೂಲಿನಾಲಿಗಳಿಗೆ ಕೊರತೆ ಬರಲಾರದು.”

ಸುಶಿಕ್ಷಿತ ಸೊಸೆಯ ಸಾಹಸವನ್ನು ಕಂಡು ಆಶ್ಚರ್ಯವೆನಿಸಲಿಲ್ಲ ವೃದ್ಧ ಜನನಿಗೆ. ಹೇಗಾದರೂ ಜೀವನ ನಡೆಸಬೇಕಾಗಿದ್ದುದರಿಂದ ಅದು ಸೂಕ್ತವೂ ಆಗಿತ್ತು. ಶೀತಕಾಲದ ಹಗಲು ಮೈನವಿರೇಳಿಸುವಷ್ಟು ಚಳಿಯಿಂದ ಕೂಡಿದ್ದರಿಂದ, ಬಾನೇರುತಿದ್ದ ಸೂರ್ಯನ ಕಿರಣಗಳು ಉಜ್ವಲವಾಗಿದ್ದರೂ ಉಷ್ಣ ಮೂಡಿರಲಿಲ್ಲ. ಕಿಟಕಿಯ ಕಂಬಿಗಳ ಮಧ್ಯೆ ತೂರಿ ಬರುತಿದ್ದ ಬೆಚ್ಚನ್ನ ಬಿಸಿಲ್ಕೋಲುಗಳು ಮೈಮೇಲೆ ಎಳೆಎಳೆಯಾಗಿ ಚಾಚಿದ್ದುವು. ಅಶಕ್ತಪಾದಗಳನ್ನು ಮುಂದಿಟ್ಟು ಹೊಸ್ತಿಲು ದಾಟುತ್ತ “ಈ ಲೋಕದಲ್ಲಿ ಬಡಕುಟೀರಗಳಲ್ಲಿ ನಿರಭಿಮಾನ–ಉತ್ಸಾಹ ಕಡಿಮೆಯದಲ್ಲ. ಆದರೆ ದಯಾದಾರಿದ್ರ್ಯತೆಯಿಂದ ಮುನ್ನಡೆಯಿಲ್ಲ....” ಇನ್ನೂ ಹೇಳುವುದೇನೋ ಇತ್ತು ; ಗಂಟಲು ಕಟ್ಟಿದುದರಿಂದ ಮಾತು ಅಷ್ಟಕ್ಕೆ ತುಂಡುಗಡಿಯಿತು.

“ನನ್ನ ಸಾಹಸಕ್ಕೆ ಕ್ಷಮೆ ಇರಲಿ ಅವ್ವಾ. ಇದು ವಿಷಭರಿತಕಾಲ ಎಂಬುದು ಘಳಿಗೆ ಘಳಿಗೆಗೂ ಮರೆತು ಹೋಗುತ್ತಿದೆ...ಒಳ್ಳೆಯತನ ಎಷ್ಟು ಜನರ ಬಾಳಿಗೆ ಕಂಟಕವಾಗಿದೆಯೋ...ಅದೇ ಅರ್ಥವಾಗುತ್ತಿಲ್ಲ.”

"ಅದೇ ಮಹತ್ತಾದ ವಿಷಯ."

...ಈ ಸಣ್ಣ ಜೀವನದ ನಿರ್ವಹಣೆಗಾಗಿ ಎಷ್ಟೆಲ್ಲ ಪಾಡು ಪಡಬೇಕಾಯಿತೋ...ಅದೇ ನೆರೆಹೊರೆಯ ದೊಡ್ಡ ಹಿಡುವಳಿದಾರರು ಒಂದು ದಿನಕ್ಕೋ ಒಂದು ವಾರಕ್ಕೋ ಖರ್ಚುಮಾಡುವ ಮೊತ್ತದಲ್ಲಿ ತಮ್ಮ ಒಂದು ವರ್ಷದ ಜೀವನ ಅಡಗಿರುತ್ತದೆ....ಸಾಮಾನ್ಯ ಜನರ ಹೊಟ್ಟೆ ಬಟ್ಟೆಯ ಅವಶ್ಯಕತೆಗಿಂತ ತಮ್ಮ ವಿಲಾಸೀ ವಸ್ತುಗಳೇ ತುಂಬ ಅಗತ್ಯವಾದುವು ಎಂಬ 'ವಿದ್ಯೆ'ಯನ್ನು ಯಾವ ಪುಣ್ಯಾತ್ಮರು ರೂಪಿಸಿದರೋ....ಅವರು ಅದರಲ್ಲಿ ಅರ್ಥಹೀನ ಶಕ್ತಿ ಹೀನ ದುಃಖಿಗಳ ಜೀವನ ಸತ್ವ ಅಡಗಿದೆ ಎಂಬ ಕಠೋರ ಸತ್ಯವನ್ನು ಕಂಡಿರಲಾರರು. ಮಾನವ ಮಾನವತೆಯೊಂದಿಗೆ ನಡೆಸುವ ಅನ್ಯಾಯ–ಅತ್ಯಾಚಾರ, ಯಾವುದೇ ರೀತಿಯ ಕಾನೂನಿಂದ–ವಾದದಿಂದ 'ಸರಿ' ಎಂದು ಅಂಗೀಕರಿಸಲಾಗುವುದಿಲ್ಲ. ಮುಂದಾದರೂ ಆಗುತ್ತದೆ ಎಂಬುದು ಅನುಮಾನ....

ತಲೆಯಲ್ಲಿ ವಿಚಾರವಾಹಿನಿ ಅವಿರಳವಾಗಿ ಪ್ರವಹಿಸುವಾಗ ಜಗತ್ತೇ ಚಿತ್ರವಿಚಿತ್ರವಾಗಿ ತೋರಿದರೂ...ತನ್ನ ಪಾತ್ರ ಬಗೆಗಣ್ಣಿಗೆ ಅಲ್ಪವಾಗಿ-ಅಣುವಿಗಿಂತ ಕಡೆಯಾಗಿ ಕಾಣಿಸುತ್ತದೆ....ಮೌನವಾಗಿ ಯೋಚಿಸಿ ಪ್ರಾಪಂಚಿಕ ವಿಚಾರ ಸರಣಿಯ ಪ್ರಾಕಾರ ಸಮುದಾಯದಿಂದ ಹೊರಬಿದ್ದು ಹೇಳಿದಳು,

"ಅವ್ವಾ, ಈ ಸಲ ಏಲಕ್ಕಿ ಫಸಲು ಸರಿಯಾಗಿ ಬರುವುದೆಂದು ಹೇಳಲಾಗುವುದಿಲ್ಲ. ಈ ಎಲ್ಲಾ ತಾಪತ್ರಯಗಳೊಂದಿಗೆ ಅದೂ ಸಹ ಕೈಬಿಟ್ಟು ಹೋದಲ್ಲಿ ಚೇತರಿಸಿಕೊಳ್ಳುವುದು ಕಷ್ಟ. ಈ ವರ್ಷ ಗೊಬ್ಬರ ಹಾಕದಿದ್ದುದು ಬಹಳ ತಪ್ಪಾಗಿದೆ. ಸ್ಪ್ರೇ ಮಾಡಿಸುವುದೂ ಸಹ ತಡವಾಯಿತು.

"ಇದುವರೆಗೆ ಎಲ್ಲಾ ಕೆಲಸ ಕಾರ್ಯಗಳೂ ಕ್ಲುಪ್ತಕಾಲದಲ್ಲೇ ನಡೆಯುತಿದ್ದುವು. ಹಿಂದೆಯೂ ಸಹ ನಾನೇ ನೋಡಿಕೊಳ್ಳುತಿದ್ದೆ ..ಈಗ ಯಾಕೋ ಏನೋ ಒಂದು ಬಗೆಯಾಗಿದೆ .. ಏನೆಂಬುದೇ ಅರ್ಥವಾಗುತ್ತಿಲ್ಲ. ದಿನಗಳು ಕಳೆದುದೂ ಸಹ ತಿಳಿಯುವುದಿಲ್ಲ."

"ಎಲ್ಲರ ಸ್ಥಿತಿಯೂ ಹಾಗೆಯೇ ಆಗಿದೆ .. ಈಗ ವಿತರಣೆದಾರರಿಗೆ ಒಂದು ಕಾಗದ ಹಾಕಿ ಬಿಡಿ. ಹೇಗಾದರೂ ಗೊಬ್ಬರ ಹಾಕಲೇಬೇಕು."

"ಆಗಲೇ ಬರೆಯಬಹುದಿತ್ತು...ಹಣ ಮುಂಗಡವಾಗಿ ಕೊಡಬಹುದಾಗಿದ್ದರೆ ಹಾಗೆ ಮಾಡಬಹುದು. ಸಾಲದಮೇಲೆ ಎಂದರೆ ನಾವು ಬೆಳೆದಿದ್ದೆಲ್ಲ

ಅವರಿಗೆ ಬಡ್ಡಿ ಕೊಡುವುದರಲ್ಲೇ ಕಳೆಯುತ್ತದೆ. ಅದೇ ದೊಡ್ಡ ಕಷ್ಟ."

"ಆದರೂ ಬಿಡುವಂತಿಲ್ಲ. ಈ ಸಲ ಗೊಬ್ಬರ ಹಾಕದಿದ್ದರೆ ಮುಂದಿನ ಬೆಳೆಯೂ ಕ್ಷೀಣಿಸುತ್ತದೆ. ಹೇಗಾದರೂ ಮಾಡಿ ಹಣ ಪೂರೈಸುವುದು ಲೇಸು."

"ಗಿಡಗಳು ಎಳೆಯವು. ಒಳ್ಳೆ ಪುಷ್ಟಿಯುತವಾಗಿವೆ. ಒಂದು ವರ್ಷ ತಡೆದುಕೊಳ್ಳಬಹುದಾದಲ್ಲಿ ಬಹಳ ಕ್ಷೇಮ...ಏನು ಮಾಡೋಣ ?"

ಪೂವಿ ಮೌನವಾಗಿ ಒಂದೆರಡು ಘಳಿಗೆ ಯೋಚಿಸಿದಳು. ಆರ್ಥಿಕ ಪರಿಸ್ಥಿತಿ ಕೊರಳು ಹಿಸುಕುತ್ತಿರುವಂತೆ ಭಾಸವಾಯಿತು. ಆದರೂ ಸಹ ಮುಂದಿನ ಬೆಳೆಯನ್ನು ಕಾಪಾಡುವುದಕ್ಕೋಸ್ಕರ ಈಗ ಹಾಕುವುದೇ ಸೂಕ್ತ ಎನ್ನುತ್ತದೆ ಬುದ್ಧಿಶಕ್ತಿ. ಅಂತಲೇ ನುಡಿ ವಿವೇಚನಾಪೂರ್ವಕವಾಗಿ ಹೊರ ಬಿತ್ತು,

"ಗಿಡಗಳು ಎಳೆಯುವಾದರೂ ಬೆಳೆ ಕಡಿಮೆಯಾಗುತ್ತದೆ. ಈ ವರ್ಷವೂ ಇಲ್ಲ, ಮುಂದೆಯೂ ಇಲ್ಲವಾದರೆ ಬಹಳ ಕಷ್ಟಕ್ಕೆ ಸಿಕ್ಕುತ್ತೇವೆ. ಹಣಕ್ಕೆ ಬೇರೆ ಏನಾದರೂ ಏರ್ಪಾಡು ಮಾಡಿಕೊಂಡರೆ ...?"

ವೃದ್ಧ ಜನನಿಯ ನಿರಿಗಟ್ಟಿದ ಹಣೆಯಮೇಲೆ ತುಂತುರು ತುಂತುರಾಗಿ ಬೆವರಿನ ಹನಿಗಳು ಮೂಡಿದುವು. ಯಾರ ಕಡೆಯಿಂದ ಸಾಲ ಕೇಳಲೂ ಮನಸ್ಸಾಗಲಿಲ್ಲ. ಹುಬ್ಬೆತ್ತಿ ನೋಡಿ. "ಈಗ ಅಂತಹ ಕೊರತೆ ಏನಿಲ್ಲ. ಹೇಗಾದರೂ ಮಾಡೋಣ."

ತಲೆಯಲ್ಲಿ ಯೋಚನಾ ಸರಣಿಸುಳಿ ಸುತ್ತುತಿತ್ತು. ಮಂತ್ರಿತ ಫಣಿಯಂತೆ ನಿಂತಳು. ಹೃದಯ ಭಾರವಾದರೂ ಮನದಲ್ಲಿ ಸಹಾನುಭೂತಿ ಮೂಡಿತು.

ಅಶಕ್ತಳಾದ ಮಾತೆಯ ಸ್ವರೂಪ ಭಕ್ತಿಭಾವವನ್ನು ಮನದಲ್ಲಿ ತುಂಬಿತು. ತನ್ನಷ್ಟಕ್ಕೆ ತಾನೇ ಹೇಳಿ ಕೊಂಡಳು ಪೂವಿ "ಬಲಹೀನತೆ ಕೋಮಲತೆ ಮಾತೃತ್ವ ಈ ಮೂರೂ ಒಂದೇ ವಸ್ತುಗಳಲ್ಲ ..ಅಂದಿಂದಿಗೂ ನಿಮ್ಮನ್ನು ನೋಡುತ್ತಿರುವೆ; ಆದರೂ ಅರ್ಥಮಾಡಿಕೊಳ್ಳಲಾಗಲಿಲ್ಲ. ಭಗವಂತ ನಿಮ್ಮನ್ನಾದರೂ ನಮ್ಮ ಪಾಲಿಗೆ ಉಳಿಸಿದ್ದಾನಲ್ಲ, ಆತನಿಗೆ ನಾವೆಷ್ಟು ಋಣಿಗಳಾಗಿರಬೇಕೋ."

ಆ ಮುಹೂರ್ತದಲ್ಲಿ ತನುಮನ ತುಂಬಿ ಬಂದುವು. ಸಂಕೋಚ ಭಾವವನ್ನು ಬದಿಗಿಟ್ಟು ಅವಿಲೋಲ ನೇತ್ರಗಳಿಂದ ನೋಡುತ್ತ ಒಂದೆರಡು

ಘಳಿಗೆ ಸುಮ್ಮನಿದ್ದು ಪುನಃ ಮುಂದುವರಿದಳು "ಯೋಚಿಸಿ ನೋಡಿ ಅವ್ವಾ, ಈ ವರ್ಷ ಬಡ್ಡಿ ತೀರಿಸಿದರೂ ಚಿಂತೆಯಿಲ್ಲ. ನಾವು ಮುಂದಿನ ವರ್ಷವಾದರೂ ಒಳ್ಳೆಯ ಬೆಳೆ ಕೊಯ್ಯಬಹುದು. ಆದೂ ಅಲ್ಲದೆ, ಗಿಡಗಳು ಶಕ್ತಿಹೀನವಾದರೆ ಚೇತರಿಸಿಕೊಳ್ಳಲು ಬಹಳ ಕಾಲ ತೆಗೆದುಕೊಳ್ಳುತ್ತವೆ."

ಮಾತು ಮುಗಿಯುವುದರೊಳಗಾಗಿ ಪೊನ್ನಮ್ಮ ಸ್ನಾನಮಾಡಿ ಮಡಿಯುಟ್ಟು ಒಳಬಂದಳು. ಅಪರದೇಶದಲ್ಲಿ ಇಳಿಬಿದ್ದ ದಟ್ಟವಾದ ಕಪ್ಪುಕೂದಲಿನಲ್ಲಿ ಹನಿಹನಿಯಾಗಿ ನೀರು ತೊಟ್ಟಿಕ್ಕುತಿತ್ತು. ಈಚೆಗೆ ಮಾದಯ್ಯನಿಂದ ತಪ್ಪದೆ ಕಾಗದಗಳು ಬರುತಿದ್ದುದರಿಂದ....ಚಳವಳಿ ರಂಗದಲ್ಲಿ ಹೊಡೆತ ಬಡಿತ ತಿನ್ನುವುದಕ್ಕಿಂತ ಜೇಲಿನಲ್ಲಿರುವುದೇ ಕ್ಷೇಮ ಎಂಬ ಸಮಾಧಾನ ಆಕೆಯಲ್ಲಿತ್ತು. ಆರ್ಥಿಕ ಮುಗ್ಗಟ್ಟು, ಕಾಯಿಲೆಗಳ ಹಾವಳಿ, ನಿಸ್ಸಹಾಯಕತೆ, ಅರಹೊಟ್ಟೆ ಊಟ, ಮಕ್ಕಳ ಹೊಣೆ, ಮನೆಯ ಪರಿಸ್ಥಿತಿ ಅವಳನ್ನು ಆ ಮಂದಿರಕ್ಕೆ ನಿಶ್ಶೇಷ ಭಾವದಿಂದ ಅರ್ಪಿಸಿಕೊಳ್ಳಲು ಪೋಷಕವಾಗಿದ್ದು....ಒಂದು ಕಾಲದಲ್ಲಿ ಚಳವಳಿಯ ರಂಗಕ್ಕೆ ಧುಮುಕಬೇಕೆಂದಿದ್ದ ಬಯಕೆಯನ್ನು ಮುಂದೂಡಿತ್ತು. ಅಂತರ್ಯದ ಆರಾಧ್ಯಲಹರಿಗಳು ಅಂಗಯಷ್ಟಿಯಲ್ಲಿ ಹೊಮ್ಮಿ ವರಲಕ್ಷ್ಮಿಯಂತೆ ಕಣ್ಗೆಸೆಯುತಿದ್ದಳು.

ಕಾವೇರಿ ತನ್ನ ಸಮಸ್ಯೆಯನ್ನು ಮುಂದಿಟ್ಟು ಕೇಳಿದಳು "ನೀನೇನು ಹೇಳುತ್ತಿ ಪೊನ್ನೂ ?"

"ಏನಾದರೂ ವ್ಯವಸ್ಥೆಮಾಡಿಕೊಂಡು ಗೊಬ್ಬರ ಹಾಕುವುದು ಲೇಸು. ಪೋಷಣೆಯಿಲ್ಲದೆ ಹೋದರೆ ಮುಂದಿನ ಬೆಳೆ ದೊರೆಯುವುದೂ ಅನುಮಾನವೇ ...ಎನಿಸುತ್ತೆ."

ವೃದ್ಧ ಜನನಿ ಅದೇ ಸರಿಯೆಂದು ಒಪ್ಪಿಕೊಂಡಳು. ಚಿದಾಕಾಶದಲ್ಲಿ ತೆರೆತೆರೆಯಾಗಿ ಹರಡುತ್ತಿರುವ ಯೋಚನೆಯಲೆಯನ್ನವಲೋಕಿಸಿದರೆ....ಈ ಪೃಥ್ವಿ ಸಾಮಾನು ಸರಂಜಾಮುಗಳಿಂದ ತುಂಬಿದ ಅಂಗಡಿಯಂತೆ ತೋರುವುದು. ವಸ್ತು ವಸ್ತುವನ್ನು ತೂಗಿ ನೋಡಿ ಬೆಲೆಯನ್ನು ನಿರ್ಣಯಿಸುವಂತೆ, ಜೀವನಸಮೌಲ್ಯವನ್ನು ನಿರ್ಧರಿಸುವುದರಲೇ ಮಾನವಶಕ್ತಿ ಪರಿಸಮಾಪ್ತಿ ಹೊಂದುವುದರ ವಿನಾ ಪೂರ್ಣತೆಯನ್ನು ಸಾಧಿಸಲಾಗುತ್ತಿಲ್ಲ .. ಎಂಬ ಕಠೋರ ಸತ್ಯ ಮನವರಿಕೆಯಾಗುವುದು.

ಪ್ರಾಣ ಪ್ರವಾಹದ ಅವಿರಳ ಅಲ್ಲೋಲಕಲ್ಲೋಲ ಧ್ವನಿಯನ್ನು ತನ್ನಲ್ಲೇ ಅಡಗಿಸಿಕೊಂಡು ನುಡಿದಳು ಜನನೀ "ಆಗಲಿ ; ಹಾಗೇ ಮಾಡೋಣ."

ಪೂವಿ ಮತ್ತು ಪೊನ್ನಮ್ಮ ನಿರೀಕ್ಷಿತ ಉತ್ತರದಿಂದ ತುಸು ಸಮಾಧಾನ ಹೊಂದಿದರು.

ಕಾವೇರಿ ಕಾಲು ಮಣೆಯ ಮೇಲೆ ಕುಳಿತು ಕೊಂಡಳು. ಮುಖ ಮಂಡಲ ವೃದ್ಧಾಪ್ಯದಿಂದಲೋ ಸಂಕಷ್ಟದಿಂದಲೋ ಬಾಡಿ ಕಳೆಗುಂದಿದೆ. ಕಣ್ಣುಗಳ ಸುತ್ತ ಕಾಡಿಗೆಯೊರೆದಂತಹ ಕಪ್ಪು...ಕಪೋಲ ಪಾಲಿಯಲ್ಲಿ ಗೆರೆ ಗೆರೆಯಾಗಿ ತೋರುವ ನಿರಿಗಳು ..ಕಪ್ಪು ಕೂದಲಿನೊಡನೆ ಸ್ಪರ್ಧಿಗಿಳಿದ ಬೆಳ್ಳಿಯ ಕೂದಲುಗಳು....ಏನೋ ಒಂದು ಬಗೆಯಲ್ಲಿ ಮಸ್ತಿಷ್ಕ ಮಂಕಾದಂತೆ ಚಿತ್ತ ಜಡವಾದಂತೆ ಅಂತರ್ವಿಕಾರದ ತೊಡಕಿಗೆ ಸಿಕ್ಕಿ ನಿಶ್ಚಲ ಭಂಗಿಯಲ್ಲಿ ಕುಳಿತಿದ್ದಾಳೆ.. ಗತಕಾಲದ ದಿನಚರಿ ನೆನಪಿಗೆ ಬರತೊಡಗಿತು. ಅತ್ಯಂತ ನಿಶ್ಶಕ್ತಳಾಗಿದ್ದ ಗಂಗಮ್ಮ ತನ್ನ ಸಲಹೆಗಳನ್ನು ಶ್ರದ್ಧಾಗೌರವ ಪೂರ್ವಕವಾಗಿ ಮುಂದಿಡುತ್ತಿದ್ದುದು ಹೀಗೆಯೇ...ಅನುನಯ ವಿಶ್ವಾಸಗಳನ್ನು ತೋರುತ್ತಿದ್ದುದು ಸಹ ಹೀಗೆಯೆ ..ಮಾದೇವ ಒಳ್ಳೆಯ ಸಂಸಾರವನ್ನೂ ಕೊಟ್ಟ ; ಅಷ್ಟೇ ಗೋಳನ್ನೂ ಕೊಟ್ಟ. ಇಂದು ಕಾರಿಯಪ್ಪ ಬದುಕಿದ್ದಿದ್ದರೆ ಕೊರತೆಯೇನಿತ್ತು ? ಇನ್ನು ಮುದ್ದಪ್ಪನ ಗತಿಯೇನೋ...ಈ ಜಗತ್ತು ಇಷ್ಟೆ; ಹಲ್ಲಿದ್ದವರಿಗೆ ಕಡಲೆಯಿಲ್ಲ, ಕಡಲೆ ಇದ್ದವರಿಗೆ ಹಲ್ಲಿಲ್ಲ. ಆದರೆ ನಮ್ಮ ಭಾಗಕ್ಕೆ ಎರಡೂ ಇಲ್ಲವಾಯಿತು, ಅದು ನಮ್ಮ ಕರ್ಮ ವಿಶೇಷ....

ವಿಚಾರಧಾರೆ ತಲೆಯಲ್ಲಿ ಸುಳಿಸುತ್ತುತಿತ್ತು. ನಿಷ್ಪಂದ ನಿಮೀಲಿತ ನೇತ್ರಗಳಲ್ಲಿ ಹೃದಯದಾಹೀ ಭಾವಜ್ಯೋತಿ ಮಿಂಚುತಿತ್ತು. ಅಂತರ್ನಿಹಿತ ವಿಚಾರಗಳ ಸಮುದಾಯದಿಂದ ಹೊರಬಿದ್ದು ಪ್ರಶಾಂತ ಭಾವದಿಂದ ಭಾರವಾದ ಧ್ವನಿಯಲ್ಲಿ ಹೇಳಿಕೊಂಡಳು. "ನಾವೊಂದು ಯೋಜನೆ ಹೂಡಿದರೆ ನೀನೊಂದು ಯೋಜನೆ ಹೂಡುತ್ತಿ. ಜಗದೊಡೆಯನಾದ ನಿನ್ನ ಮುಂದೆ ನಮ್ಮದೇನುಂಟು ಪ್ರಭೂ ?"

ಆ ಪ್ರಭುವಿನ ಅಕ್ಷಯ ಪಾತ್ರೆಯಿಂದ ಯಾರೂ ಎಲ್ಲವನ್ನೂ ಹೊಂದಿರುವುದಿಲ್ಲ, ಎಂಬುದನ್ನು ಅರಿಯಲಾರಳು ಎಂದೇನಿಲ್ಲ. ಭಕ್ತಿರೂಪದ ವಿಚ್ಛಿನ್ನ

ಸತ್ಯವಾಹಿನಿಯಲ್ಲಿ ಮುಳುಗೆದ್ದು ಸಮಾಧಾನದ ಸಾಕ್ಷಾತ್ಕಾರವನ್ನು ಪಡೆದು ಕೊಳ್ಳಲು ಜಗ್ಗಿಸಿದಳು–ವೃದ್ಧ ಜನನಿ.

ದೂರದ ಮರದ ನೆತ್ತಿಯ ಮೇಲೆ ಅಡಗಿ ಕುಳಿತ ಕೋಗಿಲೆ ಮನ ಮೋಹಕ ಧ್ವನಿಯಲ್ಲಿ ಕೂಗಿತು. ಕುಹೂೂೂ ! ಕುಹೂೂೂ !

ಅದನ್ನು ಕೇಳಿ ಆನಂದಿಸುವಷ್ಟು ಚಿತ್ತಸ್ವಾಸ್ಥ್ಯ ಯಾರಿಗೂ ಇರಲಿಲ್ಲ. ವಾದರೂ ಮಧುರಧ್ವನಿ ಕರ್ಣಪಟಲಗಳ ಮೇಲೆ ಬೀಳುತ್ತಲೇ ಇತ್ತು. ವನ ವನಾಂತರಗಳಿಂದ ಮರುದನಿ ಹೊಮ್ಮುವಂತೆ.

ಕುಹೂೂೂ ! ಕುಹೂೂೂ !

ಚಿಟ್ಟಿ ಜೂಲಿಯೊಂದಿಗೆ ಆಟದಲ್ಲಿ ನಿಮಗ್ನನಾಗಿದ್ದ....ಒಮ್ಮೆ ಅದರ ಉದ್ದವಾದ ಕೂದಲನ್ನು ಎಳೆದರೆ ಇನ್ನೊಮ್ಮೆ ಅದರ ಮೇಲೆ ಕುಳಿತು ಸವಾರಿ ಮಾಡುತಿದ್ದ. ಕಿವಿಗಳನ್ನು ಹಿಡಿದು ಹಿಂಸಿಸುವಾಗ ಅದು ಮೃದುವಾಗಿ ಕಚ್ಚಿ ಹಿಡಿದು ಬಿಡಿಸಿಕೊಳ್ಳುವುದು. ಅವನು ಓಡಿದರೇ ಹಿಂದೆಯೇ ಅಟ್ಟಿಸಿ ಕೊಂಡು ಹೋಗಿ ಹಿಡಿದು ನಿಲ್ಲಿಸುವುದು. ಕೊಠಡಿಯೊಳಗೆ ಅಡಗಿ ಕದ ಮುಚ್ಚಿಕೊಂಡರೆ ದೊಡ್ಡ ದನಿಯಲ್ಲಿ ಬೊಗಳಿ ಬಾಗಿಲು ತೆರೆದು ಕೂಗಿ ಗದ್ದಲ ವೆಬ್ಬಿಸುವುದು. ಈ ಪ್ರಕಾರ ಸಾಗಿತ್ತು ಆಟದ ಸಂಚು.

"ಜೂಲೀ...ಜೂಲೀ ! ಎಳೆ ದನಿ ಅಜ್ಜಿಯ 'ಒಲ್ಲಿ'ಯ ಮರೆ ಯಿಂದ ಮೊಳಗಿತು.

"ಅದೀಗ ಮೈಮೇಲೆ ಜಿಗಿಯಿತು ಎಂದರೆ ಇಬ್ಬರೂ ಉರುಳಿ ಬೀಳು ವುದೇ ಸೈ !" ಮಾತು ಮುಗಿಯುವುದರೊಳಗಾಗಿ ಜೂಲಿ ಮೈಮೇಲೆ ಜಿಗಿ ದಾಗಿತ್ತು.

"ಛಿಃ ! ಮೈ ಕೊಳಕು ಮಾಡಿಬಿಟ್ಟಿ."

ಬಟ್ಟೆಯನ್ನು ಕೊಡವಿಕೊಂಡೆದ್ದಳು ಸ್ವಾಮಿನಿ.

ಇದೇ ಸಮಯ ಮತ್ತೊಂದು ತೊಂದರೆಯನ್ನು ಎದುರಿಸಬೇಕಾಯಿತು ಸಂಸಾರ. ಅದು ಮಲೇರಿಯಾ ಹಾವಳಿ. ಎಷ್ಟೇ ಪ್ರಯತ್ನಿಸಿದರೂ ಅದರ ಕಪಿ ಮುಷ್ಟಿಯಿಂದ ಬಿಡಿಸಿಕೊಳ್ಳುವುದು ಕಷ್ಟ....ಒಮ್ಮೆ ಗೆದ್ದರೂ ಇನ್ನೊಮ್ಮೆ ಸೋಲು. ಸರಕಾರದ ನಿರ್ಲಕ್ಷ್ಯ ಡಾಕ್ಟರ ಅಲಕ್ಷ್ಯ ಮೈತ್ರಿ ಹೂಡಿ ಮನೆ ಮನೆಯನ್ನೂ ಹೊಕ್ಕು ಭಯಂಕರ ಅತಿಥಿಯಾಗಿ ನಿಂತು ಒಬ್ಬೊಬ್ಬರನ್ನಾಗಿ

ಆಹುತಿ ತೆಗೆದುಕೊಳ್ಳತೊಡಗಿತು—ಕ್ಷುದ್ರ ರೋಗಮಾರಿ. ದಿನವೂ ಒಬ್ಬರಲ್ಲ ಒಬ್ಬರು ನರಳುತ್ತಿರುವುದರಿಂದ ಜ್ವರ ಬಿಡಲಿ, ಬಿಡದಿರಲಿ ನೀರೌಷಧಿಯನ್ನು ನಿರ್ವಾಹವಿಲ್ಲದೆ ಕುಡಿಯುವುದು ದಿನಚರಿಯಲ್ಲಿ ಅಡಕವಾಯಿತು. ಅನಿವಾರ್ಯ ರೋಗವಿಶೇಷದಿಂದ ಬಹಳವಾಗಿ ಬಳಲಿದರು ಜನ. ಸದೃಢ ಶರೀರಗಳು ಬಳಲಿ ಬೆಂಡಾದುವು. ಬಣ್ಣ ಬಿಳಿಚಿಕೊಂಡಿತು....ಮಕ್ಕಳು ಮರಿ ಹೊಟ್ಟೆ ಡುಬ್ಬಾದುವು....ಕೆನ್ನೆಗಳು ಬತ್ತಿ ಗುಳಿಬಿದ್ದುವು. ಒಂದಲ್ಲ ಒಂದು ಕಡೆ ಸಾವಿನ ಸುದ್ದಿ ಕರ್ಣ ಕಠೋರವಾಗಿ ಕೇಳಿ ಬರುತಿತ್ತು. ಭಯಭೀತಿಯ ಪಿಶಾಚಹಸ್ತ ಹೃದಯವನ್ನು ಹಿಸುಕುತಿತ್ತು....ಪ್ರೇತಕಳೆ ಮುಖಬಿಂಬದ ಮೇಲೆ ಮುದ್ರೆಯೊತ್ತುತಿತ್ತು. ಅಂತೂ, ಘೋರರೂಪೀ ಮೃತ್ಯುದೇವನ ಪಾದಧ್ವನಿಯನ್ನು ಆಲೈಸುತ್ತ ಅಸಂಖ್ಯ ದಿವಾರಾತ್ರಿಗಳು ಉರುಳಿ ಹೋದುವು.

ಇದೇ ಸಮಯದಲ್ಲಿ ರೋಮರೋಮವೂ ಪುಳಕಿತ ಕದಂಬಕೇಸರದಂತೆ ಉತ್ಕರ್ಣವಾಗುವ ರೀತಿಯಲ್ಲಿ 'ಹುತ್ತರಿ' ಹಬ್ಬಕ್ಕಾಗಿ ನಾಡು ಸಂಭ್ರಮ ವಿಶೇಷದಿಂದ ಸಿದ್ಧಗೊಳ್ಳುತಿತ್ತು—ದುರ್ಭಿಕ್ಷದಲ್ಲಿ ಅಧಿಕಮಾಸವನ್ನು ಎದುರಿಸುವಂತೆ. ಮನೆಮನೆಯೂ ಕಳೆದುಳಿದ ಶಾಂತಿಯನ್ನು ಕಲೆಹಾಕಿ ಆನಂದ ಪ್ರಮತ್ತತೆಯಿಂದ ನಲಿಯುತಿತ್ತು. ಗೋಡೆಗಳು ಸುಣ್ಣ ಸೇಚನೆ ಹೊಂದಿ ಧವಳಕಾಂತಿಯನ್ನು ಮಸರಿದುವು. ಕಳೆ—ಕಸ ಇತ್ಯಾದಿಗಳು ಮಾರು ದೂರ ಹಾರಿ ಬಿದ್ದುವು. ಒಟ್ಟಿನಲ್ಲಿ ನಾಡಿಗೆ ನಾಡೇ ಶೃಂಗಾರ ಸಮೃದ್ಧಿಯಿಂದ ವಿಜೃಂಭಿಸುತಿತ್ತು, ಪುರುಷವರ್ಗ ದೇವಸ್ಥಾನ ಅಥವಾ 'ಮಂದಿ'ಯಲ್ಲಿ ಕೂಡಿ ಬೆಳುದಿಂಗಳ ಮನಮೋಹನೀಯ ಸಾಮ್ರಾಜ್ಯದಲ್ಲಿ ಹಾಡಿಪಾಡಿ ಕೋಲಾಟದ ಅಭ್ಯಾಸದಲ್ಲಿ ತೊಡಗುತ್ತಿದ್ದರು. ರಾಗಮಾಧುರ್ಯ-ಝಣತ್ಕಾರ—ಪಟತ್ಕಾರ ಕರ್ಣಪಟಲಗಳಿಗೆ ಬಂಡೆದ್ದು ಬೀಳುತ್ತವೆ. ಸಮೀಪವರ್ತಿಗಳ ಸಂಭ್ರಮ, ನೆರೆಹೊರೆ ಯುವಕರ ಉತ್ಸಾಹ ಸುಪ್ತ ಚೇತನವನ್ನು ಬಡಿದೇಳಿಸುವುದು.

ಆದರೆ....!

ಶಕ್ತಿ ಮೀರಿ ಶ್ರಮಿಸಿದ್ದರೂ ಏಲಕ್ಕಿಯ ಬೆಳೆ ಹುಲುಸಾಗಿ ಬಂದಿರಲಿಲ್ಲ. ಕಳೆದುಳಿದ ಫಸಲನ್ನು ನೋಡಿದರೆ ಒಡಲುರಿ ಏಳುತ್ತದೆ. ಇದುವರೆಗೆ ಕಡವಾಗಿ

ತಂದಿದ್ದ ಬತ್ತಕ್ಕೆ ಚಕ್ರ-ಬಡ್ಡಿ ರೂಪವಾಗಿ ಕಾಳನ್ನು ಒಕ್ಕಿದ ದಿನವೇ ಅರ್ಧ ಕ್ಕರ್ಧ ಕೊಡಬೇಕಾಗಬಹುದು....ಆ ಯೋಚನೆ ಬಂದಾಗ ಶುಷ್ಕ ಅಂತರಂಗ ಪ್ರವಾಹ ಅಲ್ಲಿಂದಲ್ಲೇ ಬತ್ತಿ ಹೋಗುವಂತೆ ತೋರುತಿತ್ತು.

ಆದರೂ ಸಹ, ಜೀವನ ಕಾಂತ್ರಾರದಲ್ಲಿ ಘನ ಕ್ಲೇಶ ಪರಿಸ್ಥಿತಿಯ ಮಹಾ ಪೂರದಲ್ಲಿ ಮಿಂದೆದ್ದ ಪೊನ್ನಮ್ಮ ಪೂವಿಯರು ಈ ಸಲ ಹುತ್ತರಿ ಹಬ್ಬದಾ ಚರಣೆಯನ್ನು ಕೈಬಿಡುವುದೆಂದು ತಮ್ಮತಮ್ಮೊಳಗೆ ತೀರ್ಮಾನಕ್ಕೆ ಬಂದಿದ್ದು, ಅನಂತರ ವಿಷಯವನ್ನು ಸ್ವಾಮಿನಿಯ ಮುಂದೆ ಮಂಡಿಸಿದರು. ಆಗ ಭುವನ ಮಂಡಲದಲ್ಲಿ ಪ್ರಶಾಂತ ಚಂದ್ರಮನ ಚಂದ್ರಿಕೆ ತುಂಬಿ ಹರಡಿತ್ತು. ವನ್ಯ ಪ್ರದೇಶದ ವಾತಾವರಣ ಮನಃಪ್ರಾಣಗಳಿಗೆ ಆಹ್ಲಾದವನ್ನುಂಟು ಮಾಡು ತಿತ್ತು ಆದರೂ ನಾಲಿಗೆ ಹೊರಳದಂತಹ ರುದ್ರ ಪ್ರಸನ್ನ ಗಂಭೀರತೆ....

ಕಾವೇರಿ ಒಂದು ಘಳಿಗೆ ಪರಿಮ್ಲಾನ ದೃಷ್ಟಿಯನ್ನು ಚಂದ್ರ ಚಂದ್ರಿಕೆ ಯಲ್ಲಿ ನೆಟ್ಟು ನಾಡಿನಾದ್ಯಂತ ಸಂಭ್ರಮದಿಂದ ಆಚರಿಸಲ್ಪಡುವ ಹುತ್ತರಿ ಯನ್ನು ಗಮನಕ್ಕೆ ತೆಗೆದುಕೊಂಡು ಸ್ವರವನ್ನು ಪ್ರಯತ್ನಪೂರ್ವಕವಾಗಿ ದೃಢ ಪಡಿಸಿಕೊಳ್ಳುತ್ತ ಹೇಳಿದಳು,

"ಹಾಗೆಂದರೆ ಹೇಗೆ ? ಹತ್ತು ಮಾಡುವ ಕಡೆ ಒಂದು ಮಾಡಿದರೂ ಆಯಿತು."

ಕೋಲಾಟದ ಅಭ್ಯಾಸಿಗಳ ಹುಯಿಲು-ಕೇಕೆ-ಝಣತ್ಕಾರ-ಪಟತ್ಕಾರ ಗಳ ಸ್ವರ ಮಾಧುರ್ಯವನ್ನು ಕಿವಿತುಂಬ ತುಂಬಿಕೊಂಡು ಗತಕಾಲದ ಆನಂದ ವಿಶೇಷವನ್ನು ಸ್ಮರಿಸಿ ಪುನಃ ಮುಂದುವರಿದಳು "ಅಂದಿಂದಿಗೂ ನಡೆದು ಬಂದ ಹಬ್ಬ .. ನಮಗಾಗಿ ಅಲ್ಲದಿದ್ದರೂ ಮಕ್ಕಳಿಗಾಗಿ-ಸಂಪ್ರದಾಯಕ್ಕಾಗಿ ಆಚರಿಸಲೇ ಬೇಕು. ಏನೇ ಇರಲಿ, ನಮ್ಮ ಶಕ್ತಿ ಇದ್ದಷ್ಟು ಮಾಡೋಣ."

"ಅಂದರೆ...ವೃಥಾ ಖರ್ಚು. ಮಕ್ಕಳು ಚಿಕ್ಕವರು. ಅವರಿಗೆ ಇದೆಲ್ಲಾ ಅರ್ಥವಾಗುವುದಿಲ್ಲ. ಅನುಕೂಲವಿದ್ದಾಗ ಮಾಡಿದರಾಯಿತು." ಉತ್ತರಿಸಿ ದಳು ಪೂವಿ. ಕಾಲದ ಬೆಲೆಯನ್ನು ನಿರ್ಣಯಿಸಿ ಹರಿಯಿತು ವಾಕ್ಯಸರಣಿ.

"ನಾನೂ ಅನ್ನುವುದು ಅಷ್ಟೆ ...ಹಬ್ಬದ ಖರ್ಚು ಉಳಿಸಿಕೊಂಡರೆ ಒಂದು ತಿಂಗಳು ಗ್ರಾಸವಾಗುತ್ತದೆ. ಈ ಸಲ ನಿಲ್ಲಿಸಿ ಬಿಡುವುದು ಲೇಸು."

"ನಾವು ಹೇಗೂ ಜೀವನಕ್ಕೆ ಹಣ ಹೊಂದಿಸಿಕೊಳ್ಳಬೇಕಷ್ಟೆ ? ಕಡಗ

ವನ್ನು ಅಂಗಡಿಯಲ್ಲಿಟ್ಟು ಹಣ ತರುವೆ. ಅದರಲ್ಲೇ ಸ್ವಲ್ಪ ಬಳಸಿಕೊಂಡರಾಯಿತು...."

ವೃದ್ಧ ಜನನಿಯ ದೀಪ್ತಸ್ವರ ಇಬ್ಬರನ್ನೂ ಮಂತ್ರಮುಗ್ಧರನ್ನಾಗಿಸಿತು. ಇಬ್ಬರ ತುಟಿಯೂ ಬಿರಿಯಲಿಲ್ಲ. ಮಾದೇವನ ದೇಗುಲದಂಗಳದಲ್ಲಿ-ಬೆಳುದಿಂಗಳ ನವ ಸುಧಾವಾಹಿನಿಯಲ್ಲಿ ಕೋಲಾಟಾಭ್ಯಾಸಿಗಳ ಕುತಸ್ವನ ಕೋಲುಗಳ ಪಟತ್ಕಾರ ಸ್ಫುಟವಾಗಿ ಕೇಳುತಿತ್ತು.

ಕೊಟ್ಟ್ಡಾ ಮೇದ ನೀ ಉದ್ ಪೊಲೆಯಾ ಪೊಯಿಲೇ ಪೊಯಿಲೇ
ಊರ್ಡ ಮಂದಲ್ ಕೋಲ್ಕ್ಳಂಜ ಪೊಯಿಲೇ ಪೊಯಿಲೇ
ನಾಡ್ ಪರಂಬಲ್ ಕೋಲ್ಕ್ಳಂಜ ಪೊಯಿಲೇ ಪೊಯಿಲೇ
ದೇವ ಪರಂಬಲ್ ಕೋಲ್ಕ್ಳಂಜ ಪೊಯಿಲೇ ಪೊಯಿಲೇ

೨೫

"ನೀವೇ ಯೋಚಿಸಿ ನೋಡಿ ಅವ್ವಾ !?

ಆ ನಿಜವಾದ ಅನುಭೂತಿಯ ಮುಂದೆ ಆತ್ಮಗ್ಲಾನಿಯಿಂದಲೂ ದುಃಖದಿಂದಲೂ ತಲೆತಗ್ಗಿಸಿ ನುಡಿದಳು ಪೊನ್ನಮ್ಮ, ದನಿ ಎದೆಯಾಳದಿಂದ ಹರಿದು ಬಂದಾಗ ವಿಕಂಪಿಸಿದುದನ್ನು ವೃದ್ಧ ಜನನಿ ಗಮನಿಸಲಿಲ್ಲವೇನೋ....

"ಖಂಡಿತ ನನಗೆ ಅರ್ಥವಾಗುತ್ತಿಲ್ಲ ಎಂದೇನಲ್ಲ ಅಕಸ್ಮಾತ್ ಏನಾದರೂ ಸಂಭವಿಸಿದರೆ ಅದಕ್ಕೆ ಈ ಅಭಾಗ್ಯಳು ಕಾರಣವಾಗಬಾರದು. ಮೇಲಾಗಿ ಸರ್ವಸ್ವವನ್ನೂ ತ್ಯಾಗಮಾಡಿ ಪ್ರೀತಿಯ ಮಾಲಿನ್ಯವನ್ನು ನಿಷ್ಕಲ್ಮಶಗೊಳಿಸುವುದು ಅಷ್ಟು ಸುಲಭವೇ ? ಸ್ವದೇಶ....ಸ್ವಾತಂತ್ರ್ಯ...ಸಣ್ಣ ವಿಷಯವಲ್ಲ. ಅದಕ್ಕಾಗಿ ದುಡಿಯುವುದರಲ್ಲಿ ಮಾನ್ಯತೆಯೂ ಇದೆ. ಮಹತ್ವವೂ ಇದೆ. ಸ್ವರಾಜ್ಯಕ್ಕಾಗಿ ಶಾಸ್ತ್ರಸಿದ್ಧಾಂತಗಳನ್ನೂ ನಂಬಿಕೆಯನ್ನೂ ಬದಿಗಿಟ್ಟು, ಅಹಿಂಸಾತತ್ವವನ್ನು ಕೈಗೊಂಡು ಹೋರಾಟಕ್ಕಿಳಿಯುವುದು ಹೆಚ್ಚಲ್ಲ. ಎಷ್ಟೆಂದರೂ...."

ಪೊನ್ನು ಸ್ವಲ್ಪ ಉದ್ರೇಕದಿಂದ ಹೇಳಿದಳು.

"ಹಾಗಾದರೆ ಹೆಣ್ಣು ಕೇವಲ ಇನ್ನೊಬ್ಬರ ಸೊತ್ತೇ ಏನು ?"

ಕಾವೇರಿ ಸ್ಥಿರವಾದ ದನಿಯಲ್ಲಿ ಉತ್ತರಿಸಿದಳು "ಆಳವಾಗಿ ಯೋಚಿಸಿ ನೋಡು, ಕರ್ತವ್ಯ ಕಾಕೋದರನಂತೆ....ಹೇಗೇ ಇದ್ದರೂ, ಹಲವು ತಲೆಗಳಿಂದ ಕುಟುಕುತ್ತಲೇ ಇರುತ್ತದೆ. ಕಾಲ ಪಕ್ವವಾಗಲಿಲ್ಲ....ಕಾಡು ಮೇಡುಗಳಲ್ಲಿ ಅಲೆತ ಸಾಮಾನ್ಯವಲ್ಲ, ಈ ಕಠಿಣ ವ್ಯವಹಾರದಲ್ಲಿ ನಿನ್ನಂತಹ ಮುಗ್ಧೆ ಕರ್ತವ್ಯಕ್ಕೆ ಬಲಿಯಾಗದೇ ಇರುವುದು ಅಸಂಭವ. ಬಹಳಷ್ಟು ಯೋಚಿಸಿ ನೋಡು, ನೀನು ಕಲಿಯದವಳಲ್ಲ."

"ಇಲ್ಲಿ ಕೇಳಿ! ತಪ್ಪು ಒಬ್ಬರದಾದರೆ ಶಿಕ್ಷೆ ಮತ್ತೊಬ್ಬರಿಗೆ, ಇದು ಇಂದಿನ ನ್ಯಾಯಶಾಸ್ತ್ರ....ಸರ್ವ ನಾಶವಾಗುವುದನ್ನು ಕಣ್ಣಿಂದ ನೋಡುತ್ತ ಆತ್ಮ ವಂಚನೆ ಮಾಡಿಕೊಳ್ಳುವುದನ್ನು ನೀವು 'ಕರ್ತವ್ಯ' ಎನ್ನುವಿರಾ ಅವ್ವಾ ?

ಲೋಭ ಮೋಹಗಳಿಗೆ ಅತೀತವಾಗಿ ಸ್ವಾರ್ಥಹೀನತೆಯಿಂದ ದೀಕ್ಷಾಬದ್ಧರಾಗಿ ಲಾಠಿ ಹೊಡೆತ ತಿಂದು ಜೈಲುವಾಸವನ್ನು ಅನುಭವಿಸುತ್ತ, ಮೃತ್ಯುವಿನ ಪದ ಧ್ವನಿಯನ್ನು ಆಲೈಸುತ್ತ ಕೊಳೆಯುತ್ತಿರುವ ಶಾಂತಿಪ್ರಿಯರ ಪ್ರಾಣರಕ್ಷಣೆ ಪ್ರತಿಯೊಬ್ಬರ ಕರ್ತವ್ಯವಲ್ಲವೇ? ಯಾವ ಅಮೋಘವಾದ ಗೌರವಾದರಗಳನ್ನು ಪಡೆಯಬೇಕು ಎಂದು ಸಾಮಾಜಿಕ ಪ್ರಾಕಾರಗಳಿಗೆ ನೀವು ತಲೆ ಬಾಗುವಿರಿ ? ಜೀವನಾದರ್ಶದ ಹೆಸರಿನಲ್ಲಿ ಸತೀತ್ವದ ಹೆಸರಿನಲ್ಲಿ ಸ್ತ್ರೀಯರನ್ನು ಗೃಹಬಂದಿಗಳನ್ನಾಗಿ ಮಾಡಿ ಮನುಷ್ಯತ್ವವನ್ನು ಹರಣಮಾಡಿರುವ 'ಪಾಪ' ಅಕ್ಷಮ್ಯ ಅಪರಾಧ. ಸ್ತ್ರೀಯರನ್ನು ಜಡಮತಿಗಳನ್ನಾಗಿ ಆಲೋಚನಾರಹಿತರನ್ನಾಗಿ ಮಾಡಿರುವುದರ ಪ್ರತಿಫಲ ನಮ್ಮ ದೇಶದ ಹೀನಸ್ಥಿತಿ. ನೀವು ಇನ್ನೂ ಅದೇ ನೀತಿಯನ್ನು ಪ್ರತಿಪಾದಿಸುವಿರಾ ?"

"ನಿಜ ಪೊನ್ನೂ, ನಿನ್ನ ವಾದವನ್ನು ಅಕ್ಷರಶಃ ಒಪ್ಪಿಕೊಳ್ಳುವೆ." ಉದ್ವೇಗದಿಂದ ಉಜ್ವಲ ನೇತ್ರಗಳು ನಿಶ್ಚಲವಾಗಿ ಬೆಳಗಿದುವು. ಕಾವೇರಿ ಗಂಭೀರ ಗತಿಯಲ್ಲಿ ಮುಂದುವರಿದಳು "ನಾರೀಶ್ರೀ ಚರಣಗಳಲ್ಲಿ ದಿಟ್ಟತೆಯನ್ನು ಪಡೆಯದ ಯಾವ ಜೀವನವೂ ಸಫಲವಾಗದು. ಆ ಮಹಾನುಭೂತಿಗೆ ತಕ್ಕ ಶಿಕ್ಷಣವನ್ನು ಕೊಡದಿರುವುದೂ ಸಹ ಅನ್ಯಾಯವೇ. ಅದನ್ನಾದರೂ ಇಲ್ಲವೆನ್ನಲಾರರು. ಆದರೆ ಅದನ್ನೇ ಸ್ತ್ರೀಜೀವನದ ಪರಮ ಲಕ್ಷ್ಯವೆಂದು ನಾನು ಹೇಳಲಾರೆ. ಕಾಲ ಇಂದಿಗೇ ಮುಗಿದು ಹೋಗಲಿಲ್ಲ. ಕಲಿಯುವುದನ್ನೆಲ್ಲ ಮುಂದೆಯೂ ಕಲಿಯಬಹುದು. ಆದರೆ ಸತೀತ್ವ ತುಚ್ಛವೆಂದು ನಾನು ಭಾವಿಸುವುದಿಲ್ಲ."

ಪೊನ್ನಮ್ಮ ಒಳಗಿಂದೊಳಗೇ ಸಂಕೋಚಿಸುತ್ತ ಹೇಳಿದಳು,

"ಈ ಒಂದು ಅನುಮಾನಕ್ಕಾಗಿ ನೀವಿಂದು ನನ್ನನ್ನು ಹೋಗಗೊಡುತ್ತಿಲ್ಲ, ಅಲ್ಲವೇ ?"

ವೃದ್ಧ ಜನನಿಗೆ ಆಕ್ಷಣ ಏನುತ್ತರ ಹೇಳಬೇಕೋ ಹೊಳೆಯಲಿಲ್ಲ. ತೀಕ್ಷ್ಣ ಬುದ್ಧಿಯುಳ್ಳ ಆಕೆಯ ಅಂತರಂಗದಲ್ಲಿ ಯಾವ ಯಾವ ಭಾವನೆಗಳು ಮೂಡಿದುವೋ ಯಾರಿಗೆ ಗೊತ್ತು ? ತೀವ್ರತರವಾದ ಭಾವವಿಭಾವಗಳು ಮುಖಮುದ್ರೆಯಲ್ಲಿ ನಳನಳಿಸಿದುವು. ಪ್ರತಿಪಾದನೆ ಅಥವಾ ಸಮರ್ಥನೆ ಹೂಡುವ ಮನಸ್ಸು ಮೂಡಲಿಲ್ಲವೇನೋ....ಒಂದು ಘಳಿಗೆ ಯೋಚನೆಯ

ಸುಳಿಗೆ ಸಿಕ್ಕಿ ಹಾಗೇ ನಿಂತಳು. ಉಜ್ವಲ ದೀಪಕಾಂತಿಯಿಂದ ಹೊಳೆಯುವ ಮುಖ... ಹಣೆಯಮೇಲೆ ಹರಿದಾಡುವ ಅಲೆಗೂದಲು....ಸಜಲ ಸುಂದರ ನೇತ್ರಗಳು ಅಸ್ತಮಾನ ಶೋಭೆಯಿಂದ ಕಂಗೊಳಿಸುತಿದ್ದುವು.

ಸ್ವಲ್ಪ ಹೊತ್ತು ಗಂಭೀರ ಮೌನ ರಾಜ್ಯವಾಳಿತು.

ಅನಂತರ ಪೊನ್ನಮ್ಮ ತಾನೇ ಮೌನ ಮುರಿದಳು,

"ನಿತ್ಯ ಪೂಜನೀಯವೂ ಸದಾಚಾರವೂ ಅದು ಸ್ತ್ರೀತ್ವವನ್ನು ನಿಮ್ಮ ಮುಂದೆ ವಿಮರ್ಶಿಸಲು ನಾನು ಪ್ರಯತ್ನಿಸುತ್ತಿಲ್ಲ. ಆದರೆ ಒಂದು ಮಾತು. ಪ್ರಾಚೀನವಾದ ಮಾತ್ರಕ್ಕೆ ಎಲ್ಲ ಸೂತ್ರಗಳೂ ಉನ್ನತವಾಗಿರುವುದಿಲ್ಲ. ಅಥವಾ ಆಚಾರಯೋಗ್ಯವಾಗಿರುವುದಿಲ್ಲ. ಕೆಲವು ಜನಾಂಗಗಳಲ್ಲಿ ಎಂತೆಂತಹ ಕೀಳು ಪದ್ಧತಿಗಳು ರೂಢಿಯಲ್ಲಿವೆ ಎಂಬುದು ನಿಮಗೆ ತಿಳಿಯದೇ? ಅವನ್ನೆಲ್ಲಾ ಇಂದು ಮಾನ್ಯ ಮಾಡಲಾಗುವುದೇ ? ಹೇಳಿ-ಕೇಳಿ ವಿಮರ್ಶೆ ಮಾಡಿದರೂ ಅವು ಮಹತ್ವವುಳ್ಳ ಪದ್ಧತಿಗಳೆಂದು ಎಷ್ಟು ಮಂದಿ ಪರಿಭಾವಿಸುವುದಿಲ್ಲ....? ಇದಕ್ಕೇನು ಹೇಳುವಿರಿ ?"

ಆಕೆಯ ಮಾತಿನ ಸರಣಿ ತೀಕ್ಷ್ಣವಾಗಿರದಿದ್ದರೂ ಅನುನಯದಿಂದ ಬಿದ್ದ ಘಾತವಾಗಿದ್ದು ಅದರಿಂದ ಚೇತರಿಸಿಕೊಳ್ಳಲು ಸ್ವಲ್ಪ ಸಮಯ ಹಿಡಿಯಿತು. ಹಾಗೇ ಆಳವಾಗಿ ಯೋಚಿಸುವುದರೊಳಗಾಗಿಯೇ ಹಠಾತ್ತನೆ ಮಾದು ಕಾಣಿಸಿಕೊಂಡ.

"ಓ ...ನೀನು ಬಂದುದು ಒಳ್ಳೆಯದೇ ಆಯಿತು. ಇನ್ನು ಈ ಸಮಸ್ಯೆಯ ಪ್ರಶ್ನೆ ಏಳುವುದಿಲ್ಲ." ಎಂದಳು ಜನನಿ-ಹರ್ಷಿತವಾಣಿಯಲ್ಲಿ.

"ನೀವು ಇನ್ನೊಮ್ಮೆ ಹೋಗುವಿರಾದರೆ ನಾನೂ ಬರುವೆ ನಡೆಯಿರಿ." ಎಂದಳು ಪೊನ್ನಮ್ಮ. ಆಕೆಯ ದೃಢ ಅಭಿಪ್ರಾಯವನ್ನು ಕೇಳಿ ಮಾದು ಆಶ್ಚರ್ಯದಿಂದ ನಿಟ್ಟುಸುತ್ತ ಮುಖದ ಮೇಲೆ ಸುತ್ತಿದ್ದ ಮಫ್ಲರನ್ನು ಬಿಚ್ಚಿದ. ಹಣೆ ಕೆನ್ನೆಗಳ ಮೇಲೆ ಬಿದ್ದ ಪೆಟ್ಟಿಗೆ ಕಟ್ಟು ಬಿಗಿದಿತ್ತು. ಮೈ ಕೈ ಬೆನ್ನುಗಳ ಮೇಲೂ ಕಟ್ಟುಗಳು....! ಕೊನೆಗೂ ಯಾವ ಪುಣ್ಯಾತ್ಮರೋ ಚೆನ್ನಾಗಿ ಮುದ್ದು ಬಳಿದು ಉಪಕಾರ ಮಾಡಿದ್ದಾರೆ, ಅಷ್ಟಾದರೂ ದಯ ಬಂತಲ್ಲ....

"ಹಾ....!"

"ಇರಲಿ, ಅದೇನೂ ಹೆಚ್ಚಲ್ಲ. ನನ್ನ ಹಿಂದೆ ಪೋಲೀಸರು ಬೆನ್ನಟ್ಟ

ಬರುತಿಪ್ಪಾರೆ. ಅವರು ಬರುವುದರೊಳಗಾಗಿ ಸ್ನಾನ ಮಾಡಿ ಬಟ್ಟೆಗಳನ್ನು ಹೊಂದಿಸಿಕೊಳ್ಳಬೇಕು." ಎಂದ ಮಾದು, ಅವಸರ ತುಂಬಿದ ಧ್ವನಿಯಲ್ಲಿ.

ಒಡನೆ ಅವರಿಬ್ಬರ ಮುಖ ಕಪ್ಪು ತಳೆದು ಕಾರ್ಮೋಡದಂತಾಯಿತು. ಮೈದುನನ ದನಿ ಕೇಳಿ ಒಳಗಡೆಯಿದ್ದ ಪೂವಿ ಹೊರಬಂದಳು. ದೇಶಕಾರ್ಯ ದಲ್ಲಿ ತೊಡಗಿ ಅಡಿಯಿಂದ ಮುಡಿಯುವರೆಗೆ ಧೂಳೀಧೂಸರಿತನಾಗಿ ಹಣೆ ಕೆನ್ನೆ ಗಳಿಗೆ ಕಟ್ಟು ಬಿಗಿದುಕೊಂಡಿದ್ದ ಕರುಣಾಜನಕ ದೃಶ್ಯ ತಟ್ಟನೆ ಮುದ್ದಪ್ಪನ ಚಿತ್ರವನ್ನು ನೆನಪಿಗೆ ತಂದಿತು. ಕಣ್ಣುಗಳಲ್ಲಿ ನೀರಾಡಿಸುತ್ತ "ಏಕಪ್ಪಾ ಹೀಗೆ ?" ಎಂದಳು.

"ಇಂಗ್ಲಿಷರ ಉಂಬಳಿ."

"ಇರುವ ಒಬ್ಬೊಬ್ಬರು ಹೀಗೆ ಮಾಡಿಕೊಂಡರೆ ಗತಿಯೇನು ಹೇಳಿ?"

"ದೇವರಿದ್ದಾನೆ ..ಈಗ ಹೆಚ್ಚು ಮಾತಾಡಲು ಸಮಯವೇ ಇಲ್ಲ. ಮನೆಯ ವ್ಯವಸ್ಥೆಯ ಬಗ್ಗೆ ಹೇಳಿ ಹೋಗಬೇಕಾಗಿತ್ತು. ಹೇಗೋ ತಪ್ಪಿಸಿ ಕೊಂಡು ಬಂದೆ."

ಮಾದು ಒಳಹೋಗಿ ಕೊಳಕು ಬಟ್ಟೆಕಳಚಿ ಬಿಗಿದ ಕಟ್ಟುಗಳನ್ನು ಹಾಗೇ ಬಿಚ್ಚಿಟ್ಟು ಸ್ನಾನ ಮಾಡಿದ. ಅನಂತರ ಗಾಯಗಳ ನೀರನ್ನು ಬಟ್ಟೆ ಯಿಂದ ಒತ್ತಿ ತೆಗೆದು ಮದ್ದು ಬಳಿದು ಕಟ್ಟು ಬಿಗಿದಳು ಪೊನ್ನಮ್ಮ. ತೋಟದ ವ್ಯವಸ್ಥೆಯ ಬಗ್ಗೆ ಹೇಳುವುದನ್ನು ಹೇಳಿ ಮಕ್ಕಳೊಡನೆ ಒಂದೆರಡು ಮಾತಾ ಡುವುದರೊಳಗಾಗಿ ಪೋಲೀಸರು ಮನೆಯ ಬಾಗಿಲಿಗೆ ಬಂದಾಗಿತ್ತು. ಜೇಲಿ ನಿಂದ ಬಿಡುಗಡೆ ಹೊಂದಿ ಒಂದೆರಡು ಗಂಟೆಯೊಳಗಾಗಿ ಪುನಃ ಜೇಲು ಕಾಣ ಬಹುದಾದ ವೀರಪಟುಗಳಲ್ಲಿ ಮಾದು ಒಬ್ಬ. ಶಾಲಾ ಪಿಕೆಟಿಂಗ್ ನಡೆಸಿ ಪೆಟ್ಟು ತಿಂದು ಕೈ ತಪ್ಪಿಸಿಕೊಂಡು ಬಂದಾಗಲೇ ಪೋಲೀಸರು ಹಿಂಬಾಲಿಸಿ ಬಂದದ್ದು. ಅವರನ್ನು ಕಾಣುತ್ತಲೂ ಒಡಲಲ್ಲಿ ಕಿಚ್ಚು ಮೂಡಿತು. ಮಾದು ತಲೆಬಾಗಿಲಲ್ಲಿ ಹಣಿಕಿ ಅಣಕವಾಣಿಯಲ್ಲಿ ಅಭಿವಾದಿಸಿದ,

"ಓ ಬಂದಿರಾ ? ಬನ್ನಿ...ಬನ್ನಿ, ವಂದೇಮಾತರಂ !"

"ಬದ್‌ಮಾಷ್ !"

"ಇಷ್ಟಲ್ಲದೆ ಕೆಟ್ಟಮಾತು ಬೇರೆ? ಮನೆಗೆ ಬಂದ ಅತಿಥಿ ಸಿಟ್ಟುಗೊಂಡರೆ ಹೇಗೆ ? ನಾನು ಸುಖಾಗಮನ ಬಯಸುತ್ತಿರುವೆ ! ವಂದೇಮಾತರಂ !"

ಇನ್ಸ್‌ಪೆಕ್ಟರ್ ಕಿಡಿಕಿಡಿಯಾದ;

ಅಲ್ಲಿಂದಿಲ್ಲಿಗೆ ಬೆನ್ನು ಹತ್ತಿ ಬಂದು ಸಾಕಾಗಿತ್ತು. ಜೊತೆಗಾರರ ಕಡೆ ಒಮ್ಮೆ ಹರಿದ ನೋಟ ಮತ್ತೆ ಇತ್ತಲೇ ಸಿಡಿಯಿತು. ಅಂತೂ ಸಿಕ್ಕಿದನಲ್ಲಾ ಎಂಬ ಸಂತಸ ಮೂಡಿದಾಗಲೇ ಅಣಕದ ಸ್ವಾಗತವೋ ಎಂಬಂತೆ ಹೊಮ್ಮಿದ "ವಂದೇಮಾತರಂ" ಸ್ವಾಗತ ಕಿವಿಯಲ್ಲಿ ಗುಂಗೀಹುಳದಂತೆ ಗರಗರ ಕೊರೆಯಿತು. ಎವೆಯಿಕ್ಕದೆ ತೀಕ್ಷ್ಣದೃಷ್ಟಿಯನ್ನೆಸಚಿ ನಿಂತ. ಮನಸ್ಸು ಸಿಟ್ಟಿಗೆದ್ದ ವ್ಯಾಘ್ರನಾಗಿತ್ತು....ಕತ್ತಲೆಯ ಕಾಲಿಮೆಯೇ ಆತನಲ್ಲಿ ಆವಾಹನೆಯಾಗಿದೆಯೋ ಎಂಬಂತೆ ತಿಮಿರ ಛಾಯೆ ಪರ್ಯಾಪ್ತವಾಗಿದ್ದ ತನುನಸು ಕಂಪಿಸಿತು. ಇನ್ಸ್‌ಪೆಕ್ಟರ್ ತನ್ನನ್ನು ತಾನು ಹತೋಟಿಯಲ್ಲಿಟ್ಟುಕೊಳ್ಳುತ್ತ ಮೆಟ್ಟಲೇರಿದ. ಸಂಗಡಿಗರು ಹಿಂಬಾಲಿಸಿದರು, ಕೈಗಳಲ್ಲಿ ಪ್ರಕಾಶಮಾನವಾದ ವಿದ್ಯುದ್ದೀಪಗಳಿದ್ದುವು. ಕಾಲುಗಳಲ್ಲಿ ಧರಿಸಿದ ಘನಪಾದರಕ್ಷೆಗಳ ಸದ್ದು ನಿಶ್ಶಬ್ದತೆಯ ಮಸ್ತಕದ ಮೇಲೆ ಕೊಡಲಿಯ ಪೆಟ್ಟಿನಂತೆ ಬೀಳುತಿತ್ತು.

ಮಾದು ಗಂಭೀರಭಾವದಿಂದ ಕೈಗಳೆರಡನ್ನೂ ವಕ್ಷಸ್ಥಳದ ಮೇಲೆ ಕಟ್ಟಿ ಮಂತ್ರದ್ರಷ್ಟನಂತೆ ನಿಂತ. ಕಣ್ಣುಗಳಲ್ಲಿ ವಿಚಾರಪರ ದೀಪ್ತಿಯುಕ್ಕುತಿತ್ತು. ದೇಹದಾದ್ಯಂತ ಬಿಸಿನೆತ್ತರಿನ ನವ ಸಂಚಾರ ಆರಂಭವಾಯಿತು. ಒಳಗಡೆ ಊಟದ ಹಂಚಿಕೆಯಲ್ಲಿದ್ದ ನಾಯಿಗಳು ಹೊಸಬರ ವಾಸನೆ ಹಿಡಿದು ಧಾವಿಸಿ ಬಂದು ಅಡ್ಡಗಟ್ಟಿದುವು. ಮಾದ ಅವುಗಳನ್ನು ತಡೆದು ಕುತ್ತಿಗೆಗೆ ಸರಪಣಿ ತೊಡಿಸಿ ಕಟ್ಟಿದ. ಆದರೂ ಅವು ಅಲ್ಲಿಂದಲ್ಲೇ ಜಿಗಿದಾಡುತ್ತ ಕರ್ಕಶ ಧ್ವನಿಯಲ್ಲಿ ಬೊಗಳ ತೊಡಗಿದವು—ವನದೇಶವೆಲ್ಲ ಕಂಪಾಯಮಾನವಾಗುವಂತೆ. ಪ್ರಶಾಂತವಾತಾವರಣದಲ್ಲಿ ಒಮ್ಮಿದೊಮ್ಮೆಲೇ ಸದ್ದುಗದ್ದಲವೆದ್ದಿತು.

ಚಿಟ್ಟೆ ಓಡಿಬಂದು ಮಾದುವನ್ನು ಅಪ್ಪಿಕೊಂಡು ಕೇಳಿದ,

"ನೀವೀಗ ಎಲ್ಲಿಗೂ ಹೋಗಬೇಡಿ ಚಿಕ್ಕಪ್ಪಾ; ರಾತ್ರಿಯಾಗಿದೆ !"

"ಹಾಗೆಂದರೆ ಪೋಲೀಸರು ಕೇಳುತ್ತಾರೆಯೆ ?"

ಚಿಟ್ಟೆ ಬೆರಗಾಗಿ ನಿಂತ. ಎಳೆಯ ಮನಸ್ಸಿಗೆ ವಿಷಯ ಹೊಳೆಯಲಿಲ್ಲ.

ಪೋಲೀಸರು ಜಗಲಿ ಹತ್ತಿ ಒಳಬಂದರು. ಅವರಲ್ಲಿ ವಾರೆಂಟಿತ್ತು. ರುದ್ರಕಾಯ ಗುಡುಗಿತು "ಹೂಂ, ಹೊರಡು ! ಪೋಲೀಸ್ ವ್ಯಾನಿಗೆ ಕಿಚ್ಚು ಹಚ್ಚಲಿಕ್ಕೆ ನಿನ್ನಪ್ಪನ ಆಸ್ತಿ ಎಂದು ಕೊಂಡಿದ್ದೆಯಾ ?"

ಅಹಂಕಾರಯುತ ವಾಣಿ ಪ್ರತಿಕೂಲತೆಯನ್ನು ಬಯಸುವಂತಿತ್ತು.

ಮಾದು ಮಾತಾಡದೆ ತೀಕ್ಷ್ಣದೃಷ್ಟಿಯನ್ನು ಒಮ್ಮೆ ಎಲ್ಲರಮೇಲೂ ಎರಚಿದ.

ದೀಪಗಳು ಮಂದಕಾಂತಿಯನ್ನು ಚೆಲ್ಲುತ್ತಿವೆ. ಮಾದೇವನ ದೇಗುಲದಲ್ಲಿ ಘಂಟಾರವ ಮೊಳಗುತಿತ್ತು. ಗಂಟೆ ಏಳರ ಅಂಚನ್ನು ದಾಟಿತು. ಪೋಲೀಸರನ್ನು ಅಲ್ಲೇ ಇರಲು ಹೇಳಿ ಒಳಬಂದ. ಪೊನ್ನಮ್ಮ ಭಾರವಾದ ಹೃದಯವನ್ನು ಹೊತ್ತು ಕೆಲವು ಬಟ್ಟೆಗಳನ್ನು ಜೋಡಿಸಿಕೊಟ್ಟಳು. ಪೂವಿ ತಟ್ಟೆಯಲ್ಲಿ ಊಟವನ್ನು ಅಣಿಗೊಳಿಸಿ ಬಂದು ಬಿಸಿ ಹಾಲಿನೊಡನೆ ತಂದು ಮುಂದಿಟ್ಟು ಹೇಳಿದಳು,

"ಬಿಸಿ ಬಿಸಿ ಊಟವಿದೆ. ಮೊದಲು ಊಟ ಮಾಡಿರಿ."

ಮಾದು ಒಳಗಡೆ ಕುಳಿತು ನಾಲ್ಕು ತುತ್ತು ಉಂಡು ಹಾಲು ಕುಡಿದು, ಮಕ್ಕಳನ್ನು ಮುದ್ದಿಟ್ಟು ಅಜ್ಜಿಗೆ ನಮಸ್ಕರಿಸಿ ಆಶೀರ್ವಾದ ಪಡೆದುಕೊಂಡು, ಪೊನ್ನು ಪೂವಿಯರಿಗೆ ಹೇಳಿ ಅಣಿಯಾದ.... ಪೋಲೀಸರು ವಾರೆಂಟಿನ ಸಹಿತ ಹುಡುಕುತ್ತಿರುವುದು ತಿಳಿದಿತ್ತು. ಒಂದು ದಿನದ ಮಟ್ಟಿಗಾದರೂ ಅವರ ಕಣ್ಣು ತಪ್ಪಿಸಿ ಮನೆಗೆ ಬರಬೇಕೆಂದು ಉದ್ದೇಶಿಸಿದ ಮಾದಯ್ಯನಿಗೆ ಹಾಗೆ ಬರಲು ಅವಕಾಶವೇ ಸಿಕ್ಕಿರಲಿಲ್ಲ. ಅಲ್ಲಿ ಇಲ್ಲಿ ಅಲೆದು ಕಣ್ಣು ತಪ್ಪಿಸಿ ತಿರುಗಿದರೂ ಪೋಲೀಸರು ಬೆಂಬಿಡಲಿಲ್ಲ. ಮಂಗಳೂರಿನಲ್ಲಿ ತಂಟೆ–ತಕರಾರು ನಡೆಯಿತೆಂದು ಅಟ್ಟಿಸಿಕೊಂಡು ಬಂದ ಪೋಲೀಸರು ಇಲ್ಲಿಯ ಪೋಲೀಸರೊಂದಿಗೆ ಬೆರೆತುಕೊಂಡಿದ್ದುದನ್ನು ಇಬ್ಬಗೆಯ ಟೋಪಿಗಳಿಂದ ಗುರುತಿಸಬಹುದಾಗಿತ್ತು.

ಪೋಲೀಸರು ಅವಸರಿಸಿದರು, "ಹೊರಡು ಹೊತ್ತಾಯ್ತು !"

ಕಾಳಮೇಘ ಕಾಯ ಮತ್ತೆ ಒತ್ತಾಯಿಸಿತು. ಮಾದು ತೋಟದ ವ್ಯವಸ್ಥೆಯ ಪುರಾಣ ಬಿಚ್ಚಿಕೊಂಡಿದ್ದುದರಿಂದ ಅಜ್ಜಿಯೊಡನೆ ಮಾತುಕತೆ ಮುಗಿದಿರಲಿಲ್ಲ.

"ಹೊರಡು ...!" ದನಿ ಮಾಡು ಮುಟ್ಟುವಂತೆ ಮೊಳಗಿತು.

"ಇದೋ ಹೊರಟೆ." ವಿಚಲಿತನಾಗದೆ ನುಡಿದ ಮಾದು.

"ಇದೊಂದು ವಿಚಾರ ಯೋಚಿಸಿನೋಡು; ಬೇಕಾದರೆ ಹತ್ತು ನಿಮಿಷ ಕಾಲಾವಕಾಶ ಕೊಡುವೆ.... ಸುಮ್ಮನೆ ದಃಡುಕುವುದರಿಂದ ಪ್ರಯೋಜನವಿಲ್ಲ." ಇನ್ಸ್‌ಪೆಕ್ಟರ್ ತನ್ನ ಸಲಹೆ ನೀಡಿದ.

"ಏನು ಹೇಳಿ ?"

"ಚಳವಳಿಯಲ್ಲಿ ಭಾಗವಹಿಸುವುದಿಲ್ಲವೆಂದು ಬರೆದುಕೊಟ್ಟರೆ ನಿನ್ನನ್ನು ಬಿಟ್ಟು ಬಿಡುತ್ತೇವೆ....ಸುಖವಾಗಿ ಸಂಸಾರ ಮಾಡಿಕೊಂಡಿರಬಹುದು. ಈ ತಾಪತ್ರಯವೆಲ್ಲಾ ಏಕೆ ?"

ಒಮ್ಮೆಲೇ ರಕ್ತಒತ್ತಡ ಹೆಚ್ಚಿದಂತೆ ಮೋದು ಕೆಂಪು ತಳೆದ. ಕಣ್ಣುಗಳಲ್ಲಿ ತುಂಬಿದ ಲಾಲಿಮೆ ನೆತ್ತರು ಚೆಲ್ಲುವಂತಿತ್ತು. ನರನಾಡಿಗಳಲ್ಲಿ ಕೋಪದ ಝರಿ ಲಾವಾರಸದಂತೆ ಹರಿದಾಡಿತು. ಉಚ್ಚಸ್ವರದಲ್ಲಿ ಬಿತ್ತರಿಸಿದ,

ಭಾರತೀಯನಿದ್ದು ಇಂತಹ ಮಾತನ್ನು ಹೇಳಲು ನಿನಗೆ ಹೇಗೆ ಮನಸ್ಸು ಬಂತು ? ಯಾವ ಶಕ್ತಿ ಈ ರೀತಿ ಪ್ರೇರೇಪಿಸುತ್ತಿದೆ....? ಸರಕಾರದಿಂದ ನೀನು ಪಡೆದ ಸಣ್ಣ ಅಧಿಕಾರ-ಪಗಾರ ಶಾಶ್ವತವೆಂದು ತಿಳಿದಿರುವೆಯಾ ? ಅಥವಾ ನಿನ್ನ ಜನ್ಮ ಇಲ್ಲಿ ಶಾಶ್ವತವೇ ? ಈ ದೇಶದಲ್ಲಿ ಹುಟ್ಟಿ, ಈ ದೇಶದಲ್ಲಿ ಬೆಳೆದು ಈ ದೇಶಕ್ಕೆ ದ್ರೋಹ ಬಗೆಯುವ ನಿನ್ನ ಜನ್ಮವನ್ನು ಸುಡಬೇಕು ! ಇಂದೇ ನಿನ್ನ ಅಧಿಕಾರವನ್ನು ಕಿತ್ತೊಗೆದು ಮಾತೃಭೂಮಿಯ ಸೇವೆಗಿಳಿ. ಒಂದು ವೀಳೆದೆಲೆಯ ಅಂಗಡಿ ಹಚ್ಚಿದರೂ ಜೀವನ ನಡೆಸಬಹುದು. ಈ ನಾಚಿಕೆಗೇಡಿನ ಜೀವನ ಇನ್ನು ಸಾಕು ಮಾಡು !"

ಇನ್ಸ್‌ಪೆಕ್ಟರ್ ಪಡೆದ ಮುಖಭಂಗ ಒಡಲ ಕಿಚ್ಚನ್ನು ನೆತ್ತಿಗೇರಿಸಿತು. ರಟ್ಟೆಯನ್ನು ಹಿಡಿದೆಳೆದು ಸಿಟ್ಟಿನಿಂದ ಒದರಿದ "ಮುಚ್ಚು ಬಾಯಿ !"

"ನಾನೇಕೆ ಮುಚ್ಚಲಿ ? ನೀನೇ ಮುಚ್ಚು !"

ಬೆನ್ನಿನಮೇಲೆ ದಿಡ್ ದಿಡ್ಡನೆ ಗುದ್ದಿ "ಹೊರಡು ಮತ್ತೆ !"

ನಾಯಿಗಳು ದೊಡ್ಡದನಿಯಲ್ಲಿ ಬೊಗಳತೊಡಗಿದುವು. ಮಕ್ಕಳುಮರಿ ಕಂಗಾಲಾದರು, ಹೆಂಗಳೆಯರ ಕಣ್ಣುಗಳು ತುಂಬಿಬಂದುವು. ನೆರೆ ಹೊರೆಯ ಮಂದಿ ಗದ್ದಲ ಕೇಳಿಸಿ ಧಾವಿಸಿ ಬಂದರು ..ಕೆಲವು ಗೆಳೆಯರೂ ಒಮ್ಮಿಂದೊಮ್ಮೆಲೇ ಪ್ರತ್ಯಕ್ಷರಾದರು. ಮನೆಯಂಗಳ ಗದ್ದಲಮಯವಾಯಿತು. ಮೋದು ಒಳಬಂದು ನಾಯಿಗಳನ್ನೂ ಮಕ್ಕಳನ್ನೂ ಮುದ್ದಿಟ್ಟು ಸಂತೈಸಿ ಹೊರಟ. ಮುಖದಲ್ಲಿ ಧೀರ ಪ್ರಸನ್ನತೆ ನೆಲೆಸಿತ್ತು. ಖಾಕೀಧಾರಿಗಳಾದ ನಾಲ್ಕಾರು ಮಂದಿ ಪೋಲೀಸರು ಸುತ್ತುವರಿದರು. ಅಂತರಂಗದ ದುರ್ಭಾವನೆಗಳ ವಿನಮ್ರ ಆಳಾಗಿ ರಾಷ್ಟ್ರೀಯ ಸ್ವಯಂ ಸೇವಕನನ್ನು ನಾಯಿಯಂತೆ ದರದರನೆ ಎಳೆದು

ಕೊಂಡು ಬೂಟುಕಾಲುಗಳಿಂದ ಒದೆಯುತ್ತಲೇ ನಡೆದರು. ಆ ಘೋರ ದೃಶ್ಯ ಕರುಳಿಗೆ ಚೂರಿ ಇರಿಯುವಂತಿತ್ತು. ಆತ್ಮವನ್ನು ತೋಯಿಸುವಂತೆ ಹೃದಯ ದಲ್ಲಿ ಕಣ್ಣೀರು ಸಂಜನಿಸಿತು. ಮರವಟ್ಟಂತೆ ಮೈಮರೆತು ನಿಂತ ಸ್ತ್ರೀಮಂಡಳಿ ಯನ್ನು ನೆರೆದ ಮಂದಿ ಸಂತೈಸಿ, ತಮ್ಮತಮ್ಮ ಮನೆಗಳಿಗೆ ತೆರಳಿದರು-ಭಾರ ವಾದ ಹೃದಯವನ್ನು ಹೊರಲಾರದೆ ಹೊತ್ತು.

....ವಾತಾವರಣ ಅತ್ಯಂತ ಶೀತಲವಾಗಿತ್ತು.

....ದೇಹಾಂತರಿತ ಅಗ್ನಿಜ್ವಾಲೆ ದಹಿಸುತಿತ್ತು.

ಪೊನ್ನು ದುಃಖಭಾವದಿಂದ ವಿಜಾತೀಯವಾದ ದನಿಯಲ್ಲಿ ನುಡಿದಳು,

"ಹೊಡೆತ-ಬಡಿತ ಸಹಿಸಿಕೊಂಡು ದೇಶಸೇವೆಯಲ್ಲಿ ತೊಡಗುವುದು ಸಾಮಾನ್ಯವಲ್ಲ. ದೇವರೇ ಕಾಪಾಡಲಿ....ಒಂದುವೇಳೆ ಅರೆಸ್ಟಾಗದೆ ಅವರು ಉಳಿದಿದ್ದರೆ ನಾನೂ ಜೊತೆಗೂಡಿ ಹೋಗಬಹುದಾಗಿತ್ತು. ಈ ವನದೇಶದಲ್ಲಿ ಇನ್ನು ನಾನೊಬ್ಬಳೇ ಸುತ್ತಲಾರೆ ! ನನಗಷ್ಟು ಧೈರ್ಯವೂ ಇಲ್ಲ."

....ಯಾರಿಗಾಗಿ ಹಗಲಿರುಳೂ ಕಾದಿದ್ದಳೋ ಆ ವ್ಯಕ್ತಿ ಬಿರುಗಾಳಿ ಯಂತೆ ಬಂದು ಬಿರುಗಾಳಿಯಂತೆಯೇ ಹೋದಾಗ....ಕರ್ತವ್ಯನಿಷ್ಠ ದುರ್ದಮ್ಯ ಶಕ್ತಿ ಜೀವನಾನಂದವನ್ನು ತೃಣದೋಪಾದಿಯಲ್ಲಿ ಕಡೆಗಣಿಸಿದುದನ್ನು ಆಶ್ಚರ್ಯವಿಶೇಷದಿಂದ ಗಮನಿಸಿತು ಸ್ತಬ್ಧ ಚಿತ್ತ.

ಕಾವೇರಿ ಕಣ್ಣುಗಳನ್ನು ಓಡಿಕೊಳ್ಳುತ್ತ, ದುಃಖದಗ್ಧ ಧ್ವನಿಯಲ್ಲಿ-

"ಈ ಜಗತ್ತಿನಲ್ಲಿ ಸಂಭವಿಸುವ ಪ್ರತಿಯೊಂದಕ್ಕೂ ಸಕಾರಣವಿರುತ್ತದೆ. ಕಾರ್ಯಕಾರಣಗಳ ನೆರಳಲ್ಲಿ ಸತ್ಯಾಸತ್ಯಗಳು ಹೊರಹೊಮ್ಮಿದಾಗ ಅಂತಿಮ ವಾಗಿ ಖಂಡಿತ ಸತ್ಯಕ್ಕೆ ಜಯವಾಗಿಯೇ ತೀರುತ್ತದೆ....ಸತ್ಯದ ಬಲವಿಲ್ಲದೆ ಈ ಜಗತ್ತು ಉಳಿದಿಲ್ಲ."

"ನಿಜ ಅವ್ವಾ, ಕೊನೆಗೆ ಅಷ್ಟಾದರೆ ಸಾಕು."

ದುಃಖ-ಸಂಕಟ-ಗ್ಲಾನಿ ಏನೇ ಇದ್ದರೂ ಆತ್ಮಜ್ಞಾನದ ನೆಲೆಯಲ್ಲಿ ಏನೋ ಒಂದು ಬಗೆಯ ಸಹಾನುಭೂತಿ ..ಇನ್ನೇನೋ ಒಂದು ಬಗೆಯ ಅಖಂಡ ವಿಭ್ರಮೆ ...ಎಷ್ಟೇ ಯೋಚಿಸಿದರೂ ಬಗೆ ಹರಿಸಲಾಗದ ನಿತ್ಯನೂತನ ಸಮಸ್ಯೆಗಳು ...

ಒಂದೊಂದು ದಿನ ಉರುಳಿದಾಗಲೂ ಹೊತ್ತು ದೀರ್ಘವಾಗಿ ಉರುಳಿ

ದಂತೆ ಭಾಸವಾಗುವುದು. ಆದರೂ ಮಾಡಿ ಮುಗಿಸಲಾಗದ ಬದುಕಿಗೆ ಆ ವೇಳೆಯೂ ಸಾಲದು. ಉಡಿಯಲ್ಲಿ ಸಣ್ಣಪುಟ್ಟ ಮಕ್ಕಳನ್ನು ಇಟ್ಟುಕೊಂಡು ಬಹಳ ಕಷ್ಟದಿಂದ ಬೆಳೆದ ಬೆಳೆಯಲ್ಲಿ ಬಹುಪಾಲು ಕಳ್ಳರ ಪಾಲಾಯಿತು. ಕಂಗೆಟ್ಟ ಹೆಂಗಳೆಯರಿಗೆ ಒಂದೊಂದು ದಿನ ಕಳೆಯುವುದೂ ಸಹ ಕಷ್ಟವೇ. ಚಾಂದ್ರಮಾನಗಳು ಹೇಗೆ ಉರುಳಿದುವೋ ಹಾಗೆಯೇ ತಿಂಗಳಮಾನಗಳೂ ಸಹ ಕರಗಿದುವು. ತಂಪಿನಾಗರದಲ್ಲಿ ಬಿಸುಸುಯ್ಲು ಸದ್ದಿಲ್ಲದೆ ಆಡುವುದು.

ದೇಶದ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ನಿಂತುಹೋದ ಅನೇಕಾನೇಕ ವ್ಯವಹಾರಗಳಲ್ಲಿ ಕಾಗದ ಪತ್ರಗಳ ವಿತರಣೆಯೂ ಒಂದು. ದಿನವೂ ಟಪ್ಪಾಲು ಕಟ್ಟೆಯನ್ನು ಹತ್ತಿ ಇಳಿದು ಸಾಕಾಗಿತ್ತು ...ಟಪ್ಪಾಲಿನವ ಈ ಬಳಿಯಲ್ಲಿ ಸುಳಿಯುತ್ತಲೇ ಇಲ್ಲ. ಹಾದಿ ನೋಡಿ ನೋಡಿ ಕಣ್ಣುಗಳು ಬತ್ತಿದರೆ ಯೋಚಿಸಿ ಯೋಚಿಸಿ ಬರಡಾಗುತಿತ್ತು–ಚಿತ್ತ.

ಬೆಳಗಿನ ಸುಂದರ ವಾತಾವರಣದಲ್ಲಿ ಪಕ್ಷಿಗಳ ಸವಿಗೊರಲುಲಿಯನ್ನು ಆಲೈಸುತ್ತಾ ಹಾದಿಯನ್ನು ಕ್ರಮಿಸಿದ ನೆರೆಮನೆಯ ಮಾಚಮ್ಮ ಒಳಬಂದು ಪ್ರಸನ್ನ ಮುಖಿಯಾಗಿ ಹೇಳಿದಳು,

"ನಾನೀಗ ಪೋಸ್ಟಾಪೀಸಿನಿಂದ ಬರುತ್ತಿರುವೆ. ಇದೀಗ ತಾನೇ ಟಪ್ಪಾಲಿನ ಚೀಲ ಬಂದಿಳಿಯಿತು. ಅದರಲ್ಲಿ ನಿಮ್ಮ ಕಾಗದಗಳು ಬಂದಿರಬಹುದು !"

"ಓ....ಹಾಗೋ?ಬಂದಿದ್ದಲ್ಲಿ ತಂದೇ ಬಿಡಬಹುದಾಗಿತ್ತು ಮಾಚಮ್ಮ!"

ಮಾಚಮ್ಮ ಮುಗುಳುನಕ್ಕು ನುಡಿದಳು,

"ಇಲ್ಲಿ ವಿಂಗಡಿಸಿ ಸೀಲು ಹಾಕುವುದುಂಟಲ್ಲ !"

ತನ್ನ ಅವಸರಕ್ಕೆ ತಾನೇ ನಾಚಿವಳು ಪೂವಿ. ಮಾಚಮ್ಮ ಸ್ವಲ್ಪ ಹೊತ್ತಿದ್ದು ಅನಂತರ ತನ್ನ ಗೃಹಾಭಿಮುಖವಾಗಿ ಹೊರಟಳು. ಮಟ್ಟಸವಾದ ದೇಹವು ದೇಗುಲದ ತಿರುವಿನಲ್ಲಿ ಕಣ್ಮರೆಯಾಗುವವರೆಗೂ ನಿಟ್ಟಿಸಿದಳು ಪೂವಿ. ಚಿತ್ತಭಿತ್ತಿಯಲ್ಲಿ ತಮ್ಮವರ ಚಿತ್ರ ತುಂಬಿ ಹೋಗಿತ್ತು. ಬರಲಿರುವ ಆ ಕಾಗದಗಳಿಗಾಗಿ ಜೀವ ಹಾತೊರೆಯುತಿತ್ತು.

ವಾತಾವರಣ ಅತ್ಯಂತ ಪ್ರಶಾಂತವಾಗಿತ್ತು.

ನೊಂದ ತನುಮನಗಳಿಗೆ ಹಸುರೂಡಿಸುವಂತಿದೆ ಹಸುರುಕ್ಕುವ ವನಶ್ರೀ!

ಪಟ. ಪಟ. ಪಟ. ಪಟ.

ಶಾಂತ ಸಮುದಾಯದಲ್ಲಿ ಕೇಳಿಬಂದ ಆ ಪದ ಘಾತ ಕಿವಿಗಳನ್ನು ತಟ್ಟನೆ ನಿಮಿರಿಸಿತು. ಒಡನೆ ಅಲ್ಲಿಂದಲೇ ಕೆಳಮಟ್ಟಿಯ ಕಡೆಗೆ ಹಣಿಕಿದಳು ಪೂವಿ. ಕೆಲವು ಕ್ಷಣಗಳೊಳಗಾಗಿ ಟಪ್ಪಾಲಿನವ ಅಲ್ಲಿ ಕಾಣಿಸಿಕೊಂಡಾಗ ಹೃದಯ ಬಿರಿಯುವಂತಾಯಿತು. ಕಮನೀಯ ಕಾತರದಿಂದ ಹಸ್ತವನ್ನು ನೀಡಿದಳು ಪೂವಿ.

....ಬಹಳ ತಿಕ್ಕಾಟದನಂತರ ಹಡಗಿನ ಕ್ಯಾಪ್ಟನ್ ಮಹಾಶಯ ನಾವು ಇಚ್ಛಿತ ಸ್ಥಳದಲ್ಲಿ ಒಂದುವಾರ ತಂಗಲು ನಮಗೆ ಅವಕಾಶ ಕೊಟ್ಟುದುದು ನಮ್ಮ ಸುದೈವ. ಭೂವಾತಾವರಣ ಸುಧಾರಿತ ಆಹಾರಗಳಿಂದ ಎಲ್ಲರೂ ಬೇಗನೆ ಸುಧಾರಿಸಿಕೊಂಡರು. ಆದರೂ ಸಂಪೂರ್ಣ ಆರೋಗ್ಯ ಭಾಗ್ಯವನ್ನು ಪಡೆದು ಕೊಳ್ಳಬೇಕಾದರೆ ಇನ್ನೂ ಕಾಲಾವಕಾಶಬೇಕು. ಅಲ್ಲಿಂದ ಮುಂದಿನ ನಮ್ಮ ಸುಖಕರ ಪಯಣ ರೋಮರೋಮವನ್ನೂ ಕೇಸರಿಯ ಕೇಸರದಂತೆ ಉತ್ಕರ್ಣಗೊಳಿಸಿತು. ಚಿತ್ತ ಮುಗಿಲೆತ್ತರದಲ್ಲಿ ವಿಹರಿಸಿತು. ನಾನು ಅತ್ಯಂತ ಸಂತುಷ್ಟನಾದೆ.

ಇಲ್ಲಿನ ಪರಿಸ್ಥಿತಿಯನ್ನು ಗಮನಿಸಿದರೆ ಯಾವ ಘಳಿಗೆಯಲ್ಲಾದರೂ ಶಸ್ತ್ರಪ್ರಯೋಗ ನಡೆಸಬೇಕಾಗಬಹುದು ಪರಿಸ್ಥಿತಿ ಕ್ಷಣೇ ಕ್ಷಣೇ ಉತ್ಕಟ ವಾಗುತ್ತಿದೆ ವಿದೇಶೀ ಸೇನಾತುಕುಡಿಗಳನ್ನೂ, ಅವರು ಹೊಂದಿರುವ ಉತ್ಕೃಷ್ಟ ಆಯುಧಗಳನ್ನೂ ನೋಡಿದಾಗ ನಮ್ಮದು ಕೇವಲ ಬಾಲಿಷವಾಗಿ ತೋರಿ, ಎದೆಯಲ್ಲಿ ಹುದುಗಿದ ಅನನ್ಯ ಅನುಭಾವ ಸಂಪತ್ತಿ ಸಮೂಲವಾಗಿ ಅಲುಗಾಡಿತು. ಇರಲಿ, ಚಿಂತೆಯಿಲ್ಲ. ಈ ಲಘುಕಾಯದಲ್ಲಿ ಕುಲೀನತೆಯ ತೇಜಸ್ಸಿದೆ. ವೃದ್ಧ ಜನನಿಯ ಆಶೀರ್ವಾದವೂ ಮಡದಿಯ ಅನುಪಮ ಪ್ರೇಮವೂ ಇದೆ. ಸದಾಕಾಲವೂ ಅಶ್ವಸ್ತನಾಗಿರುವಂತೆ, ಶಕ್ತಿಶಾಲಿಯಾಗು ವಂತೆ ಭಾರತ ಜನನಿಯ ಸುಪ್ರೇಮ ಉತ್ತೇಜನ, ನಾಡಿನ ಗೌರವಪೂರ್ಣ ಉತ್ಸಾಹಶೀಲತೆ ನರನಾಡಿಗಳಲ್ಲಿ ಹರಿದಾಡುತ್ತಿದೆ. ಇದಕ್ಕಿಂತ ಇನ್ನೇನುಬೇಕು?

ಇಲ್ಲಿ ನಮಗೆ ದೊರಕಿರುವ ಪಾಳ್ಯ ಒಂದು ದೊಡ್ಡ ವಠಾರ. ಅದರಲ್ಲಿ ಯಾವ ಉತ್ತಮ ಸೌಕರ್ಯಗಳೂ ಇಲ್ಲ. ಹತ್ತಿರದಲ್ಲಿ ಒಂದು ಹಳ್ಳ ಹರಿಯು ತ್ತಿರುವುದರಿಂದ ನಮಗೆ ನೀರಿನ ತೊಂದರೆ ಕಾಣಿಸುವುದಿಲ್ಲ. ನೀರು ಬಹಳ ಶುದ್ಧವಾಗಿದೆ. ನಾವು ಎಲ್ಲಕ್ಕೂ ಅದನ್ನೇ ಬಳಸುತ್ತೇವೆ. ಆ ಒಂದರಲ್ಲಿ ನಾವು

ಸಂತೃಪ್ತರು.

ಭಾರತ ಗಡಿಯೊಳಗೆ ನಮ್ಮ ಇಂಚುಇಂಚು ನೆಲಕ್ಕಾಗಿ ನಾವು ಹೋರಾಡುವ ಭಾಗ್ಯವನ್ನು ಹೊಂದಿದ್ದರೆ ಅದು ನಿಜವಾಗಿಯೂ ಅಹೋಭಾಗ್ಯನೇ ಆಗುತಿತ್ತು. ಆದರೆ ನಾವು ಪಡೆದದ್ದು ಬಲಾತ್ಕಾರ ಮಾಘಸ್ನಾನ. ಏನು ಮಾಡೋಣ ? ನಾವೊಂದು ಬಯಸಿದರೆ ವಿಧಿಯೊಂದು ಬಯಸುತ್ತದೆ. ಭಾರತ ಗಡಿ ದಾಟುವವರೆಗೆ ಇದ್ದ ಉತ್ಸಾಹ ಈಗ ಉದಾಸೀನವಾಗಿ ಮಾರ್ಪಾಡಾಗಿದೆ. ಆದರೂ ನಾನೀಗ ಏನನ್ನೂ ನಿರ್ಧರಿಸಿ ಹೇಳಲಾರೆ. ಎಲ್ಲವನ್ನೂ ಈಶ್ವರನ ಪದತಲದಲ್ಲಿ ಸಮರ್ಪಿಸಿ ನಿಶ್ಚಿಂತೆಯಿಂದ ಇದ್ದುಬಿಡುವೆ.

ಪತ್ರಿಕೆಗಳ ಮೂಲಕ ಭಾರತ ದರ್ಶನ ಮಾಡುವಾಗ ಕರುಣಕಾತರತೆ ಮನೋವ್ಯಾಪ್ತವಾಗುತ್ತದೆ. ಎಷ್ಟೇ ಕಷ್ಟನಷ್ಟಗಳಿಗೊಳಗಾದರೂ ಭಾರತೀಯರು ಹಿಂಜರಿಯದೆ ಮುನ್ನುಗ್ಗುತ್ತಿರುವುದು ನಮ್ಮ ನೆತ್ತರಿನ ಕಣಕಣಕ್ಕೂ ಕಾಯಕಲ್ಪಗೊಳಿಸುತ್ತದೆ. ನೀನು ಯುಕ್ತ ಸ್ಥಳದಲ್ಲಿದ್ದಿ. ಚೊಕ್ಕ ಸಂಸಾರದಲ್ಲಿದ್ದಿ. ಸಹಾಯಯೋಗ್ಯವಾದ ಹಸ್ತಗಳನ್ನು ಹೊಂದಿದ್ದಿ. ವೀರ ರಮಣಿಯೂ ಹೌದು.ಅವ್ವನ ಹೊಣೆಗಾರಿಕೆಗೆ ನಿನ್ನ ಸಹಾಯ ಖಂಡಿತ ಬೇಕು. ಸನ್ನಿವೇಶವೇ ನಿನಗೆ ಕಾಯಕಲ್ಪ ನೀಡುತ್ತದೆ. ಸುಪಾತ್ರಧಾರಿಣಿಯಾಗಲೆಂದೇ ನಿನಗೆ ಯುಕ್ತಸ್ಥಳದಲ್ಲಿ ಜನ್ಮಧಾರಣೆಯಾಗಿದೆ. ಪಾರ್ವತಿಯ ಜನ್ಮ ಹಿಮಾಲಯದಲ್ಲಿ ಮಾತ್ರ ಸಾಧ್ಯ ! ಇಂತಹ ಸನ್ನಿವೇಶದಲ್ಲಿ ಮಾನಸಿಕ ಆವೇಗವನ್ನು ಹತ್ತಿಕ್ಕಲು ನೀನು ಖಂಡಿತ ಶಕ್ತಳಿದ್ದಿ. ಎಳೆಯರ ಪೋಷಣೆ ನಿನಗೆ ಸೇರಿದ್ದು. ದೇಶಮಾತೆಯ ಕರೆಗೆ ಮಾದು ಓಗೊಟ್ಟಿರುವುದರಿಂದ ಕಳೆದುಳಿದ ಜವಾಬ್ದಾರಿಯೆಲ್ಲಾ ನಿಮ್ಮದೇ. ಸಾಂಕ್ರಾಮಿಕ ರೋಗಗಳು ನಿನ್ನ ದೃಢ ವಿಶ್ವಾಸವನ್ನು ಕೆಡಿಸದಿರಲಿ. ದಾರಿದ್ರ್ಯಭೋಗ ನಿನ್ನ ಧೈರ್ಯವನ್ನು ಕುಂದಿಸದಿರಲಿ. ಹಿಂದೆ...ನಾವು ಯಾವ ಕೆಚ್ಚಿನಿಂದ ಜೀವದ ಹಂಗನ್ನು ತೊರೆದು ಹೋರಾಡುತಿದ್ದೆವೋ ಆ ಚಿಚ್ಛಕ್ತಿಯನ್ನು ಯಾವ ಕಾರಣಕ್ಕೂ ಬಿಟ್ಟುಕೊಡಬಾರದು....

ಇಲ್ಲಿಯ ಸೈನಿಕವಲಯದಲ್ಲಿ ಭಾರತೀಯರ ಅಸಹಕಾರ ಚಳವಳಿ ಕೇವಲ ಮಕ್ಕಳಾಟದಂತೆ ಹಾಸ್ಯಾಸ್ಪದ. ಎಲ್ಲರ ಕಣ್ಣುಗಳಲ್ಲಿ ಮೂಡುವ ಜಾಗರಖೇದ ಒಮ್ಮೆ ನಗುಮೂಡಿಸಿದರೂ ಇನ್ನೊಮ್ಮೆ ಖೇದರಾಗಹೊಮ್ಮಿಸುತ್ತದೆ. ಮದ್ದು

ಗುಂಡುಗಳ ಮೂಲಕ ಸ್ವಾತಂತ್ರ್ಯಸಂಗ್ರಾಮ ಹೂಡಿದವರಿಗೆ ನಮ್ಮವರ ವಿಧಾನ ನಗೆಪಾಟಲಾಗಿದ್ದಲ್ಲಿ ಆಶ್ಚರ್ಯವೇನೂ ಇಲ್ಲ .. ಮುಖ್ಯವಾಗಿ ಭಾರತೀಯರಿಗೆ ಸ್ವಾತಂತ್ರವೇನೆಂಬುದೇ ತಿಳಿಯದು. ಇದೆಲ್ಲಾ ಪುಂಡು ಪೋಕರಿಗಳ ತರಲೆ ಎಂದು ವ್ಯಾಖ್ಯೆ ಹೂಡಿ, ಅಪಹಾಸ್ಯ ಮಾಡಿ ನಗುತ್ತಾರೆ. ಈಗ ನಗುವಷ್ಟು ನಗಲಿ, ಅನಂತರ ಅವರಿಗೇನೇ ಅರ್ಥವಾಗುತ್ತದೆ, ಸ್ವತಂತ್ರ್ಯ ಚಳವಳಿಯ ಮಂತ್ರ- ಭಾರತೀಯರು ತಾವು ಹೊತ್ತ ಹೊಣೆಯನ್ನು ನಿರ್ವಹಿಸುವುದರಲ್ಲಿ ಪಡೆದ ಅಮೂಲ್ಯವಾದ ಅನುಭೂತ ಶಾಂತಿ ಎಲ್ಲೆಡೆಯೂ ತರಂಗಿತವಾಗುತ್ತಿರುವುದನ್ನೂ ಸಹ ಈ ಜನಸಮುದಾಯ ಅರ್ಥಮಾಡಿಕೊಳ್ಳುತ್ತಿಲ್ಲವಲ್ಲಾ ಅದೇ ಆಶ್ಚರ್ಯ....ದಿನವೆಲ್ಲಾ ಇದೇ ವಿಚಾರದ ಮೇಲೆ ಚರ್ಚೆ. ಕಿವಿಕಿವುಡಾಗುವಷ್ಟು ವ್ಯಾಖ್ಯೆ. ಕೊನೆ ಮೊದಲಿಲ್ಲದ ಪ್ರಶ್ನಾವಳಿ. ಒಮ್ಮೆ ವಿಷಯ ಅದ್ಭುತವಾದರೆ ಇನ್ನೊಮ್ಮೆ ತುಚ್ಛ. ಈ ಮಜವನ್ನೆಲ್ಲ ಸ್ವತಃ ಸವಿದು ನೋಡಬೇಕೇ ಹೊರತು ಹೇಳಿಕೇಳಿ ನೀನು ಆನಂದಿಸಲಾರೆ. ಅದು ಮಾತ್ರವಲ್ಲ. ಬರೆಯ ಬಲ್ಲವರಿಗೆ ವಿನಾ ಇತರರಿಗೆ ವರ್ಣಿಸಲಸದಳ. ಅಸಹಕಾರ ಚಳವಳಿ ಭಾರತಕ್ಕೆ ಸ್ವಾತಂತ್ರ್ಯ ಗಳಿಸಿಕೊಟ್ಟಲ್ಲಿ ಅದಕ್ಕಿರುವ ಪ್ರಚಂಡ ಸ್ವಾಗತ ವರ್ಣನಾತೀತ, ಊಹಾತೀತ.

ಕಾಂಗ್ರೆಸ್ಸಿನ ಮಹಾನಾಯಕರುಗಳ ಬಗ್ಗೆ ಅನಿರ್ವಚನೀಯ ಗೌರವಿದೆ. ಸುಭಾಸ್ ಬೋಸರ ದಿಟ್ಟ ಯೋಜನೆಗೂ ಅಪಾರವಾದ ಶ್ರದ್ಧಾಭಿಮಾನವಿದೆ. ಗಾಂಧೀಜಿಯವರ ಬಗ್ಗೆಯಂತೂ ಹೇಳತೀರದ ಸೀಮಾತೀತವಾದ ಭಕ್ತಿ ಗೌರವಗಳಿವೆ. ಆ ಪಾರವಿಲ್ಲದ ಕೀರ್ತಿ ನಮಗೆ ಅದೆಷ್ಟು ಸಂತಸ ನೀಡುತ್ತದೋ ದೇವರೇ ಬಲ್ಲ. ಅದಕ್ಕಿಂತ ನಮಗಿನ್ನೇನು ಬೇಕು ಪೂವಿ ?

ಆದರೆ ..ಆದರೆ ..

ನಮ್ಮ ದೇಶದಲ್ಲಿ ಇರುವಷ್ಟು ಶಕ್ತಿಹೀನರು, ಅಂಗಹೀನರು, ಧರ್ಮಹೀನರು ಇನ್ನಾವ ದೇಶದಲ್ಲೂ ಇಲ್ಲವೇನೋ....ಮರಳಿನ ಮೇಲೆ ಮಹಲು ಕಟ್ಟಲಿರುವ ಗಾಂಧೀಜಿಯವರ ಪವಾಡಖಂಡಿತವಾಗಿಯೂ ಅದ್ಭುತವಾದುದು.

ಮಗುವಿಗೆ 'ಕಾರಿಯಪ್ಪ' ಎಂದು ಹೆಸರಿಸಿದುದು ತುಂಬ ಸಂತೋಷ. ನನ್ನ ಅಭಿಪ್ರಾಯವೂ ಅದೇ ಆಗಿತ್ತು. ನಿನ್ನ ಕಾಗದ ತಲುಪಿದಾಗ ಆದ ಆನಂದ ಅಷ್ಟಿಷ್ಟಲ್ಲ. ನಾವು ಅದೇತಾನೇ ಅರಣ್ಯ ದೇಶದಿಂದ ಹಿಂದಿರುಗಿದ್ದೆವು.

ಅದ್ಭುತ ಸೌಂದರ್ಯವುಳ್ಳ ಅದರ ಆಕರ್ಷಣೆ ನನ್ನ ಜೀವಮಾನದಲ್ಲಿ ಮರೆಯು ವಂತಿಲ್ಲ. ಪೂರ್ವ ಸಮುದ್ರದಿಂದ ಅಪರ ಸಮುದ್ರದವರೆಗೂ ವ್ಯಾಪ್ತವಾದ ಪಚ್ಚಸಮುದ್ರದ ರಮಣೀಯ ದೃಶ್ಯ ಈಗಲೂ ಕಣ್ಣಿಗೆ ಕಟ್ಟುತ್ತಿದೆ. ಹಸುರು ಕ್ಕುವ ವೃಕ್ಷರಾಜಿ ಗರುಕೆ ಹಾಸಿನ ನೆಲದಮೇಲೆ ದಟ್ಟ ನೆರಳಿನ ತಂಪು ಮನಃ ಪ್ರಾಣಗಳಿಗೆ ಅದೆಷ್ಟು ಮುದವನ್ನೀಡಿತೋ....ಅದೆಷ್ಟು ಬಾರಿ ನಿಮ್ಮನ್ನೆಲ್ಲ ನೆನೆಸಿಕೊಂಡೆನೋ ಹೇಳಲಾರೆ. ಕೇವಲ ಅದರ ಅಂಶಮಾತ್ರ ಸೌಂದರ್ಯವನ್ನು ಸವಿದ ನಮಗೆ ಇಷ್ಟು ಆನಂದ ಮೂಡಿರಬೇಕಾದರೆ ಇನ್ನು ಪೂರ್ತಿ ಪ್ರದೇಶ ವನ್ನು ಮನಃಪೂರ್ತಿ ಸವಿದವರಿಗೆಂತಿರಬಹುದೋ ದೇವರಿಗೇ ಗೊತ್ತು. ಕೆಂದ ಳಿರು ಹೊಂದಳಿರುಗಳ ಅನುಪಮಕಾಂತಿ, ಲೀಲಾಲೋಲ ಮಾರುತ ಮೊಲ್ಲೆ ಮೊಗ್ಗುಗಳನ್ನು ಮುದ್ದಿಡುವ ಸೊಬಗು, ಪ್ರಯತ್ನಿಸಿದರೂ ಮರೆಯುವಂತಿಲ್ಲ ಈಗಲೇ ಪತ್ರ ಉದ್ದವಾಯಿತು. ಇಲ್ಲಿಗೆ ಮುಗಿಸುವೆ....

ಆ ಪತ್ರದ ನಿರೀಕ್ಷಣೆಯಲ್ಲಿ ಎಷ್ಟೆಷ್ಟು ದಿನಗಳು ಉರುಳಿದ್ದುವೋ.... ಯಾವಯಾವ ಕನಸುಗಳನ್ನು ಮನಸ್ಸು ಕೋರಿತ್ತೋ.... ಕೊನೆಗೂ ಬಹಳ ದಿನಗಳನಂತರ ಪಡೆದ ಕಾಗದ, ಕಾತರಯುಕ್ತ ಹೃದಯ, ಸ್ನೇಹ-ಪ್ರೀತಿ ಪ್ರಾದುರ್ಭೂತ ಚಿತ್ತ ಒಂದೊಂದಕ್ಕೂ ಅದೆಷ್ಟು ಹೊಂದಾಣಿಕೆ ಮೂಡಿತೆಂದರೆ ಆತನನ್ನು ಈಗಿಲ್ಲಿ ಸಂದರ್ಶಿಸಿದ ಸೌಭಾಗ್ಯವೇ ಅನುಭೂತವಾದಂತೆ ಮಂದ ಮಧುರ ಸ್ಮಿತವದನೆಯಾಗಿ ವಿವಶಳಾದಳು—ಪೂವಿ. ಹೃದಯ ಕಾಂತಾರ ಸಹಜ ಅನುಭಾವದಿಂದ ತುಂಬಿಹೋಯಿತು. ಚಿತ್ತ ಸಾಮ್ರಾಜ್ಯದಲ್ಲಿ ನಾನಾ ವಿಚಾರ ಸರಣಿಗಳು ಕಲಕಲ ಗೈದುವು. ಅಂದಿನಿಂದ ಉದ್ವಿಗ್ನತೆ ಅಳಿದು ಶಾಮಕ ಶಾಂತಿ ನೆಲೆಗೊಂಡಿತು. ಎದೆಯ ಭಾರವನ್ನೆಲ್ಲಾ ಒಂದೇ ಬಾರಿಗೆ ಇಳುಹಿದಂತೆ ದೀರ್ಘವಾದ ಉಸಿರು ಹರಿದು ಬಂತು.

ಕಾಗದವನ್ನು ಹಿಂದೆ ಮುಂದೆ ತಿರುಗಿಸಿ ನೋಡಿದಳು. ಅದು ರೂಪು ಗೊಂಡದ್ದು ಎಂದೋ, ಎಷ್ಟು ದಿನಗಳ ದೀರ್ಘ ಪಯಣ ಬೆಳೆಸಿತ್ತೋ ಎಂಬುದನ್ನರಿಯಲು ತಾರೀಖನ್ನು ನೋಡಿ ನಿರ್ಧರಿಸಬೇಕಾಗಿರಲಿಲ್ಲ. ಎಷ್ಟೆಷ್ಟು ಟಪ್ಪಾಲು ಕಟ್ಟೆಗಳಲ್ಲಿ ತಂಗಿತ್ತೊ ಅಷ್ಟಷ್ಟು ಮುದ್ರೆಯನ್ನು ಮೈಗೆ ಪೂಸಿ ಕೊಂಡಿತ್ತು, ನೋಡಿ, ಹಾಗೇ ಮಡಿಸಿ ಲಕ್ಕೋಟೆಯಲ್ಲಿಟ್ಟಳು.

ದೃಷ್ಟಿ ಎರಡನೆಯ ಪತ್ರದ ಮೇಲೆ ಹರಿಯಿತು.

ಆ ಕಾಗದವನ್ನು ಮಾದು ಜೇಲರನಕಣ್ಣು ತಪ್ಪಿಸಿ ಸಹ ಪಾಟಿಗಳ ಮುಖೇನ ಅಂಚೆಗೆ ಹಾಕಿಸಿದ್ದ,

... ಬಹಳಕಾಲ ಪರ್ಯಂತ ಚೊಕ್ಕ ದಾಸ್ಯದಲ್ಲಿ–ದಟ್ಟದಾರಿದ್ರ್ಯದಲ್ಲಿ ಮೂಕ ಪ್ರಾಣಿಗಳಂತೆ ಕಾಲಹರಣ ಮಾಡಿದ ಜನಸಮುದಾಯ ಈಗಲಾದರೂ ನವಹುರುಪಿನಿಂದ ಸ್ವಾತಂತ್ರ್ಯೋದಯಕ್ಕಾಗಿ ಮುನ್ನುಗ್ಗುತ್ತಿರುವುದಂತೂ ಹಿಡಿಸಲಾರದಷ್ಟು ಸಂತಸ. ಈ ವಿಜ್ಞಾನಯುಗದಲ್ಲಿ ಏಕತಾನ ವಿಕಾಸದ ಜಾಗೃತ ಜೀವನದಲ್ಲಿ ಭಾರತೀಯರೂ ದೀನಾದೀನರಾಗಿ ಬಾಳುವುದೆಂದರೆ ಎಂತಹ ಅಸಹ್ಯ ...ಅವಮಾನ ...

ಧೃವದಿಂದ ಧೃವದವರೆಗೆ ದಿಗಂತದಿಂದ ದಿಗಂತದವರೆಗೆ ಬೃಹತ್ ಬ್ರಹ್ಮಾಂಡದ ಸೃಷ್ಟಿ ಸಂವಿಧಾನವನ್ನೂ ಗೃಹಗಳ ಗುಣವಿಶೇಷವನ್ನೂ ಮನನ ಮಾಡುತ್ತಿರುವ ಈ ಅದ್ಭುತ ಜೀವನಯೋಗದಲ್ಲಿ ...ಶತಶತಮಾನಗಳಿಂದ ದಾಸ್ಯ ಜೀವನದ ಸ್ಥಿತಿಯನ್ನು ನಮ್ಮವರು ಅರ್ಥಮಾಡಿಕೊಂಡಿರಲಿಲ್ಲವಲ್ಲಾ ಎಂಬುದು ಅತ್ಯಂತ ವಿಶಾದಕರ, ಮೇಲಾಗಿ ಆಂದೋಳನದ ಶುಭಸಮಯದಲ್ಲಿ ಬಹುತೇಕ ಮಂದಿ ಚಳವಳಿಗೆ ವಿರುದ್ಧ ಮುಖವಾಗಿ ನಿಂತಿರುವುದು ಎಂತಹಲಜ್ಜಾಸ್ಪದ ? ನಮ್ಮ ನಮ್ಮ ಸಂಸರ್ಗ ವ್ಯವಧಾನವು ವಿರುದ್ಧ ಮುಖಿಗಳಿಗೆ ಕೈಗನ್ನಡಿ ಹಿಡಿದು ಅವರ ಅಸಂಭಾವ್ಯ ಕನಸುಗಳನ್ನೂ, ವಿಚಿತ್ರ ಭಾವಭಂಗಿಗಳನ್ನೂ ದಮನ ಮಾಡುವುದರಲ್ಲಿ ಅನುಮಾನವಿಲ್ಲ....ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ವರ್ತಿಸುವವರಿಗೂ ಕೊರತೆಯಿಲ್ಲ. ಒಂದುವೇಳೆ ಬುದ್ಧಿ ಕುರುಡಾದರೂ ಕಣ್ಣು ಕುರುಡೇ ? ಭಾರತಮಾತೆಯ ಶುಭಚರಣಗಳ ನೆಲೆ, ನಮಗೆ ಆಶ್ರಯ ನೀಡಿರುವ ಹಸುರೊಸರುವ ಮಡಿಲು ಕಣ್ಗೋಚರಿಸದೇ ? ನಿರ್ಲಜ್ಜ ....ನಿರ್ಲಕ್ಷ್ಯ ನಿಕೃಷ್ಟ....ನಿಘಾತ...ನಿಷ್ಪ್ರಯೋಜಕಬುದ್ಧಿ ಯಾರಿಂಗೂಸಲ್ಲ ; ಇಂದಿನ ಪರಿಸ್ಥಿತಿಯನ್ನು ನೆನೆದರೆ ರಕ್ತದ ಕಣಕಣವೂ ಕುದಿಯುತ್ತದೆ; ಮೈ ರೋಮರೋಮವೂ ನಿಮಿರಿ ನಿಲ್ಲುತ್ತದೆ. ತನುಮನಗಳು ರೋಷದ ಬೀಡಾಗುತ್ತವೆ. ದೇವರೇ ನಮ್ಮವರ ಕಣ್ತೆರೆಸಬೇಕು.

ಇನ್ನು ಈ ಜೈಲಿನ ಸ್ಥಿತಿಗತಿಯನ್ನು ಹೇಳುವುದೂ ಸಹ ಅಗತ್ಯವಿದೆ. ಆದರೆ ಅದಕ್ಕೆಲ್ಲಾ ಬಿಡುವು ದೊರೆಯುವುದು ಕಷ್ಟ. ಜೈಲು ಬಿರಿಯುವಷ್ಟು ಜನ ಕಿಕ್ಕಿರಿ ತುಂಬಿದ್ದಾರೆ. ಅವರಿಗೆಲ್ಲಾ ಶಾಂತಿ ಶಿಸ್ತುಗಳ ಬಗ್ಗೆ ತಿಳಿಯ

ಹೇಳಿ ಅವರನ್ನು ತಹಬಂದಿಯಲ್ಲಿಡುವುದು, ಮುಂದಿನ ಕಾರ್ಯಕ್ರಮಗಳ ಬಗ್ಗೆ ಗುಪ್ತ ಸಭೆ ನಡೆಸುವುದು, ಹೊರಗಣ ಚಟುವಟಿಕೆಗಳೊಡನೆ ಗೋಪ್ಯ ವ್ಯವಹಾರ ನಡೆಸುವುದು ಇವುಗಳಿಗೆಲ್ಲ ಸಮಯ ಒದಗಿಸುವುದೇ ಕಷ್ಟ. ಮಧ್ಯ ರಾತ್ರಿಯವರೆವಿಗೂ ನಮ್ಮ ವ್ಯವಹಾರ ನಡೆಯುತ್ತದೆ. ಬೆಳಗ್ಗೆ ನಾಲ್ಕು ಗಂಟೆಗೆ ಏಳದಿದ್ದಲ್ಲಿ ನೀರು ದೊರೆಯುವುದು ಕಷ್ಟ. ಪ್ರಾತಃರ್ವಿಧಿಯನ್ನು ಮುಗಿಸಿ ಬಟ್ಟೆಯೊಗೆದುಕೊಂಡರೆ ದೊಡ್ಡ ವ್ಯವಹಾರವನ್ನು ಕೊನೆಗಾಣಿಸಿ ದಂತೆ. ತದನಂತರ ದಿನಚರಿಗೆ ಗಮನ ಕೊಡುತ್ತೇವೆ ಆದರೂ ಸಮಯ ಸಾಲುವುದಿಲ್ಲ. ಎಷ್ಟೋ ಕಾರ್ಯ ಕ್ರಮಗಳನ್ನು ಮುಂದೂಡಬೇಕಾಗುತ್ತದೆ; ಇನ್ನು ಗಲಾಟೆ ಗದ್ದಲಗಳಿಗಂತೂ ಇತಿಮಿತಿಯೇ ಇಲ್ಲ. ಒಂದೆರಡು ಘಳಿಗೆ ಗಳಾದರೂ ಶಾಂತಿ ಸಮಾಧಾನಗಳು ದೊರೆಯುವಂತಿಲ್ಲ. ನಮ್ಮ ಊಟ ಉಪ ಚಾರಗಳನ್ನು ವರ್ಣಿಸದಿರುವುದೇ ಲೇಸು, ಎಲ್ಲರೂ ಅನಾರೋಗ್ಯದಿಂದ ನರಳುತ್ತಿದ್ದಾರೆ. ವೈದ್ಯಕೀಯ ಸೌಲಭ್ಯವೂ ಅಷ್ಟಕ್ಕಷ್ಟೆ. ಅಲ್ಪಾಹಾರದಿಂದ ಜೀವಧಾರಣೆ ಮಾಡುವುದೊಳ್ಳೆಯದು.... ಊಟ ಬಲ್ಲವನಿಗೆ ರೋಗವಿಲ್ಲ ಎಂದು ಯಾವ ಮಹಾನುಭಾವ ನುಡಿ ಮುತ್ತನ್ನು ಚೆಲ್ಲಿದರೋ ಅವು ಎಷ್ಟು ಅನು ಭವ ಪೂರ್ಣವಾದುವು !....

ಮೂರನೆಯ ಪತ್ರಾವಳಿ....

....ಯಾವ ಯಾವ ಜನ್ಮದ ಭಾಗ್ಯದಿಂದ ಐ. ಎನ್. ಎ. ಸೇರಿಕೊಂ ಡೆನೋ ದೇವರಿಗೇ ಗೊತ್ತು. ನಾನೀಗ ಸುಭಾಷ್ ಬಾಬುಗಳ ಸಮೀಪವರ್ತಿ. ಅವರ ಕಾಗದ ಪತ್ರ ವ್ಯವಹಾರಗಳನ್ನು ನೋಡಿಕೊಳ್ಳುವೆ. ಅವರು ಬರೆಸುವ ಕಾಗದಗಳು ಧೀರೋದಾತ್ತ ವಾಣಿಯಿಂದ ತುಂಬಿ ಹೋಗಿರುತ್ತವೆ... ಮಾತಿನ ಚಿಗಿ....ಬರವಣಿಗೆಯ ಶೈಲಿ.. ಅದ್ಭುತಭಾವಧಾರೆ . ವಿಚಾರಶಕ್ತಿ.... ಬುದ್ಧಿ ಮಥನ .. ಇವು ಸಾಮಾನ್ಯ ವ್ಯಕ್ತಿಯಲ್ಲಿರುವುದು ಅಸಂಭವ...

ಆಧುನಿಕ ಜಗತ್ತಿನ ಏಕತಾನತೆಯು ಮಾನವಶಕ್ತಿಯನ್ನು ಜಡ ಯಾಂತ್ರಿಕ ಕೌಶಲದಲ್ಲಿ ವಿನಿಯೋಗಿಸಿ, ಆರ್ಥಿಕ ಮತ್ತು ರಾಜಕೀಯ ವ್ಯವ ಹಾರಿಕ ಮಹಾಪ್ರವಾಹವನ್ನು ಅಲ್ಲಲ್ಲೆ ತಡೆಗಟ್ಟಿ ಹಾಕಿ, ತಡೆದು ಅಂತಸ್ತತ್ತ್ವ ಮತ್ತು ಸಾಮಾಜಿಕ ಸಂಘಟನೆಗಳ ಊರ್ಧ್ವಮುಖತೆಯನ್ನು ತಗ್ಗಿಸುತ್ತಿದೆ.... ಈಗಿನ ಸಂದರ್ಭದಲ್ಲಿ ಜನ ಮರುಳೋ ಜಾತ್ರೆ ಮರುಳೋ ಊಹಿಸುವುದು

ಕಷ್ಟ. ನಾನು ಹೇಳುವುದರಲ್ಲಿ ಆಗ್ರಹ ಅಭಿನಿವೇಶ ಇದೆಯೆಂದು ನಿನಗನ್ನಿಸುವುದೇನೋ... ವಿಜ್ಞಾನ ಮತ್ತು ಸಾಹಿತ್ಯ ಪಾಶ್ಚಾತ್ಯ ಭೂಮಿಯಲ್ಲಿ ಪ್ರಬುದ್ಧವಾಗಿ ಬೆಳೆದು ಚೇತನ ಭೂಮವಾಗಿದೆ. ಕಲೆ, ದರ್ಶನಗಳ ಸುಂದರ ಪ್ರವೃತ್ತಿ ಮಾನವಕೋಟಿಯನ್ನು ನಿತಾಂತ ನಿದ್ರೆಯಿಂದ ಎಚ್ಚರಗೊಳಿಸಿದೆ. ಇನ್ನವರು ಎಂದೂ ಮೋಹನಿದ್ರೆಗೊಳಗಾಗರು. ಅತ್ಯಂತ ಗಮನಾರ್ಹ ವಿಷಯವೆಂದರೆ ವಿಶ್ವದ ಏಕತಾನದ ಮುನ್ನಡೆ. ವಿಜ್ಞಾನವು ಮಾನವ ಸಮುದಾಯಕ್ಕೆ ದಿನೇ ದಿನೇ ನವೋನವ ವಿಮರ್ಶಕತಾ ಶಕ್ತಿಯನ್ನು ನೀಡುತ್ತಿದೆ. ಅಲ್ಲಿ ಬಹುತೇಕವಾಗಿ ಸಾಮಾನ್ಯಜನ ಪ್ರಾಚೀನ–ಅರ್ವಾಚೀನ ವಿಚಾರಶಕ್ತಿಗಳನ್ನು ಕೂಲಂಕಶವಾಗಿ ವಿಮರ್ಶೆ ಮಾಡಬಲ್ಲರೆಂದರೆ...ಅತ್ಯಂತ ಗಮನೀಯವಾದ ವಿಚಾರವೇ ಸೈ. ಪಾಶ್ಚಾತ್ಯರ ಸಾಮರ್ಥ್ಯದ ಮೂಲವನ್ನು ಕುರಿತು ಯೋಚಿಸಿದರೆ ಹೊಮ್ಮುವುದು ಅವರ ಪರಮೇಕಾಂತ ದೃಷ್ಟಿ ಮತ್ತು ಪರಿಕಲ್ಪನೆಯ ದೃಢ ಸಂಕಲ್ಪ...

ನಾನಾ ವಿಚಾರವಾಹಿನಿಯನ್ನು ತುಲನಾತ್ಮಕವಾಗಿ ವಿಮರ್ಶಿಸಿ ಬರೆಯುವಷ್ಟು ಸಮಯವಾಗಲೀ ಸಹನೆಯಾಗಲೀ ಈಗ ಇಲ್ಲ. ಆದರೂ ಸಹ ದೂರ, ಬಹು ದೂರ ಬಂದು ತಿಳಿದುಕೊಂಡ ಕೆಲವು ವಿಷಯಗಳನ್ನು ನಿನ್ನ ಸಮಯಸ್ಫೂರ್ತಿಗಾಗಿ ಬರೆಯುತ್ತಿರುವೆ.

೧೯೧೭ರಲ್ಲಿ, ಮಹಾಸಂಗ್ರಾಮದ ಮಧ್ಯೆ ಬ್ರಿಟಿಷ್ ಚಕ್ರಾಧಿಪತ್ಯಕ್ಕೂ ಭಾರತಕ್ಕೂ ಇದ್ದಂತಹ ಸಂಬಂಧದಲ್ಲಿ ಹೊಸದೊಂದು ಕಲ್ಪನೆಯನ್ನು ಪ್ರಕಟಿಸಿದುದು ನಿನಗೆ ಜ್ಞಾಪಕವಿರಬಹುದು ಆದರೆ ಆ ಗುರಿ ಆದರ್ಶದ ಕ್ಷೇತ್ರದಲ್ಲಿ ಉಳಿಯಿತು. ಕಾರ್ಯದಲ್ಲಿ ಇಳಿಯಲಿಲ್ಲ. ಆತ್ಮವಿಮರ್ಶೆಯ ಮನೋಧರ್ಮ ಬ್ರಿಟನ್ನಿಗೆ ಈ ಯುಗದಲ್ಲಿ ಬರುವುದಿಲ್ಲ. ಕ್ರೈಸ್ತ ಧರ್ಮಕ್ಕೆ ಅಪಕೀರ್ತಿಯಂತೆ ಬೃಹತ್ಪ್ರಮಾಣದ ರಕ್ತಪಾತ ನಡೆಸುತ್ತಿದೆ. ಪಶ್ಚಾತ್ತಾಪವೇ ಆಗಲಿ, ಕಾರುಣ್ಯವೇ ಆಗಲಿ ಈ ಕಟುಕರ ಹೃದಯದಲ್ಲಿ ಎಂದಾದರೂ ಸಂಜನಿಸುತ್ತದೆ ಎಂದು ಭಾವಿಸುವುದೂ ಸಹ ಅಪ್ರಯೋಜನವೇ. ನಾವು ಚಿರದಾಸ್ಯದಿಂದ ಬಿಡುಗಡೆ ಹೊಂದಬೇಕಾದರೆ ಸ್ವಶಕ್ತಿಯಿಂದಲೇ ವಿನಾ ಬ್ರಿಟಿಷರ ನ್ಯಾಯದೃಷ್ಟಿಯಿಂದಲ್ಲ.

ಈ ಎಲ್ಲಾ ಕಾರಣಗಳಿಂದಲೇ ಸುಭಾಸ್‌ಬಾಬುಗಳು ಸತ್ಯಾಗ್ರಹಕ್ಕಿಂತ

ಬಾಹುಬಲದಲ್ಲಿ ಹೆಚ್ಚು ನಂಬುಗೆ ಇಟ್ಟುಕೊಂಡಿದ್ದಾರೆ. ಅವರ ನೀತಿಯನ್ನು ನಾವು ಅಕ್ಷರಶಃ ಒಪ್ಪಿಕೊಂಡಿದ್ದೇವೆ. ಮನೆಯಲ್ಲಿ ಎಲ್ಲರಿಗೂ ನಾನು ಐ. ಎನ್. ಎ. ಸೇರಿಕೊಂಡು ತಪ್ಪು ಮಾಡಿದೆ ಎನ್ನಿಸಿರಬಹುದು. ಆದರೆ ನನಗಿದರಲ್ಲಿ ಸಂಪೂರ್ಣ ಆತ್ಮ ಸಂತೋಷವುಂಟು. ನೀವು ಇದನ್ನು ಸಾರ್ವಭೌಮಿಕ ಮನೋವೃತ್ತಿ ಎನ್ನಬಹುದು....ಹೇಳದೆ ಕೇಳದೆ ಹೋಗಿ ತಂದೆ ತಾಯಿಯರಿಗೆ ಅನ್ಯಾಯ ಮಾಡಿದ ಎನ್ನಬಹುದು. ಆದರೆ ನನ್ನಲ್ಲಿ ಅಂತಹ ದುರ್ಭಾವನೆ ಎಳ್ಳಷ್ಟೂ ಇಲ್ಲ. ನಾನು ರಾಷ್ಟ್ರಮಾತೆಯ ಕರೆಗೆ ಓಗೊಟ್ಟಿರುವೆ. ನಮಗೆ ಸ್ವಾತಂತ್ರ್ಯ ಲಭಿಸಿದನಂತರ ಊರಿಗೆ ಬಂದು ನಿಮ್ಮೆಲ್ಲರ ಆಶಯದಂತೆಯೇ ನನ್ನ ಭವಿಷ್ಯವನ್ನು ನಿರ್ಧರಿಸುವೆ...

ಆ ಮುಹೂರ್ತದಲ್ಲಿ ತ್ರಿಮೂರ್ತಿಗಳು ಮನಃಪಟಲದಲ್ಲಿ ಮೂಡಿನಿಂತರು.

ಪೂವಿ ಮಂತ್ರಮುಗ್ಧಳಂತೆ ಯಾವುದೋ ಅಂತರಾಳವರ್ತೀ ವಿಚಿತ್ರ ಜಡಿಮೆಯಲ್ಲಿ ಮೈಮರೆತು ಕುಳಿತುಕೊಂಡಳು. ನಿಶ್ಚಲ ಶರೀರ ನಿರಾತಂಕವಾಗಿ ಉಸಿರಾಡುತಿತ್ತು. ನಾನಾ ವಿಷಯಗಳ ಸಮೃದ್ಧಿಯಲ್ಲಿ ತಪ್ತಜೀವ ಮುಗ್ಧ ದುಗ್ಧವಾಗಿತ್ತು. ದೇಹಾಂತರಿಕ ಕಮನೀಯ ಕಠೋರ ಪರಿತಾಪವೋ, ಸ್ತ್ರೀ ಸ್ವಾಭಾವಿಕ ಸಂಕೋಚ-ಭಯ-ಭಕ್ತಿಗಳೋ ಅಥವಾ ಇನ್ನಾವ ಮಾಯಾ ಮಮತೆಯೋ ಚಿದಾಕಾಶದಲ್ಲಿ ಕಾರ್ಮೋಡಗಳ ತೆರೆಯನ್ನು ದಟ್ಟವಾಗಿ ಹರಡಿ ಶಾರದೀಯ ಮುಖಮಂಡಲ ಕಳಾಹೀನವಾಗಿ ಮೇಘಪುಂಜಾಂತರ್ಗತ ಚಂದ್ರ ದೀಪ್ತಿಯಂತಾಯಿತು. ಕ್ರಮಕ್ರಮೇಣ ನಯನ ಮಾರ್ಗದಿಂದ ಶರೀರ ಪ್ರಕೃತಿಯನ್ನು ಪ್ರವೇಶಿಸುವ ಪರಿದೃಶ್ಯಮಾನಧಾರೆ ಸಮಸ್ತ ಸುಖದುಃಖಗಳ ಕಲುಷ ಕಾಲಿಮೆಯನ್ನು ಧವಲಿತಗೊಳಿಸುತ್ತಿರುವಂತೆ ಭಾವಧಾರೆ ಪರಿವರ್ತನಗೊಳ್ಳುತಿತ್ತು.

ಪೂವಿ ಎದ್ದುನಿಂತಾಗ ದೃಷ್ಟಿಯ ನೇರಕ್ಕೆ ಹಸುರು ಬೇಲಿಯ ಮೈಸಿರಿಯಲ್ಲಿ ಹುದುಗಿ ಲೀಲಾವಿಲಾಸದಲ್ಲಿ ನಿಮಗ್ನರಾಗಿದ್ದ ಶುಕ ದಂಪತಿಗಳು ದೃಷ್ಟಿಗೋಚರಿಸಿದರು.

೧೬

ಯೂರೋಪಿನಲ್ಲಿ ಹಿಟ್ಲರನ ಯುದ್ಧ ಸಾಗಿಯೇ ಇತ್ತು.

ಬಾಂಬು ...ಗುಂಡು ..ಚೀತ್ಕಾರ....ಹಾಹಾಕಾರ....

ಎರಡನೆಯ ಮಹಾಯುದ್ಧದ ಬಿಸಿ ಪ್ರಪಂಚವನ್ನೇ ಅಲ್ಲೋಲಕಲ್ಲೋಲಗೊಳಿಸಿತ್ತು. ವ್ಯವಸಾಯ ಕ್ಷೇತ್ರ ಒಣಹವೆಯಿಂದ ದಹಿಸತೊಡಗಿತು, ಬೆಲೆಗಳು ಗಗನಕ್ಕೇರಿದುವು. ಬಡ ಜನತೆ ಕ್ರಿಮಿಕೀಟಗಳಂತೆ ಸಾಯುತಿತ್ತು. ಹೆಂಗಸರು ಮಕ್ಕಳು ದಿಕ್ಕಾಣದಾದರು. ದೇಶದಲ್ಲಿ ಕಂಬನಿಯ ಕಾಲುವೆ ಚಿಲುಮೆಯಂತೆ ಉಕ್ಕಿ ಹರಿಯ ತೊಡಗಿತು. ಭಾರತದಾದ್ಯಂತ ಚಳವಳಿಯ ಕಿಚ್ಚು-ನಿರ್ಧೂಮ ಅಗ್ನಿಜ್ವಾಲೆ ನಾಲಿಗೆಯನ್ನು ಚಾಚಿ ಚಾಚಿ ಸಿಕ್ಕಿದುದನ್ನೆಲ್ಲ ಅವ್ಯಾಹತವಾಗಿ ಕಬಳಿಸುತಿತ್ತು....ಅನಿಶ್ಚಿತ ಪರಿಸ್ಥಿತಿ....ಬಾಳಿನಗೋಳು... ಪರಿತಪಿಸುವ ಚಿತ್ತ..ರೋಗಪೀಡಿತ ಜನ.ಫಲಶ್ರುತಿ ಅಶಾಂತಿ-ಅಶೀಲ-ಅನೀತಿ.

ಬೇಜವಾಬ್ದಾರಿ ...ದಬ್ಬಾಳಿಕೆ....

ಧಿಕ್ಕಾರ....ಜೈಕಾರ....

ಸಾವುನೋವು ...ನೋವುಸಾವು....

ಪ್ರಸ್ತುತ ಪರಿಸ್ಥಿತಿಯಲ್ಲಿ ಈ ಕರ್ಮಕಾಂಡ ಎಂದಿಗೆಕೊನೆಗೊಳ್ಳುವುದೋ ಅದೇ ಅಸ್ಪಷ್ಟ. ತಿಮ್ಮಯ್ಯ ಯೋಚನಾಕ್ರಾಂತನಾಗಿ ಕೈಯ್ಯಲ್ಲಿ ತ್ರಿವರ್ಣರಂಜಿತ ಧ್ವಜವನ್ನಾಂತು ಮುನ್ನಡೆಯುತಿದ್ದ. ಹೃದಯ ಸಮುದ್ರದಲ್ಲಿ ಅಲೆಅಲೆಯಾಗಿ ಏಳುವ ಭಾವತರಂಗಿಣಿಯ ಪದವಿನ್ಯಾಸದ ನೂಪುರಗಳ ಕಿಂಕಿಣಿನಾದವನ್ನು ಆಲೈಸಿದರೆ ಸ್ಪಷ್ಟವಾಗಿ ಕೇಳಿಬರುವ ವಿಚಾರದೀಪ್ತಿ 'ಗಾಂಧಿ–ಇರ್ವಿನ್ನರ ಒಪ್ಪಂದ ಕಾಂಗ್ರೆಸ್ಸಿನ ಮೊದಲ ತಪ್ಪು ಹೆಜ್ಜೆ' ಎಂಬುದು. ಎಷ್ಟೇ ಯೋಚಿಸಿದರೂ ಎಷ್ಟೇ ತರ್ಕಿಸಿದರೂ ಅದು ಹೃದಯವ್ಯಾಪ್ತಿಯಾಗುತ್ತಿದೆ....ಗಾಂಧೀಜಿ ಹೇಗೆ ಒಪ್ಪಿಕೊಂಡರು ? ಭಾರತರಾಜಕಾರಿಣಿಗಳು ಹೇಗೆ ಬೆಂಬಲ ನೀಡಿದರು ಎಂಬುದೇ ಅರ್ಥವಾಗುತ್ತಿಲ್ಲ. ಬ್ರಿಟನ್ ಒಳಗಿಂದೊಳಗೆ ವಿಷಬೀಜಬಿತ್ತಿ ಚಳವಳಿಯನ್ನು ಬುಡಮೇಲು ಮಾಡಲು ಕಾಲಾವಕಾಶ

ಮಾಡಿಕೊಳ್ಳುತ್ತಿದೆ ಎಂಬುದನ್ನು ನಮ್ಮವರು ಅರಿತುಕೊಳ್ಳಲಿಲ್ಲವೇ ? ಅದೇ ಆಶ್ಚರ್ಯ...ಉಂಡ ಮನೆಗೆ ದ್ರೋಹ ಬಗೆಯುವುದರಲ್ಲಿ ಬ್ರಿಟನ್ ಅಗ್ರಗಣ್ಯ. ಅದರೊಂದಿಗೆ ಯಾವ ಒಪ್ಪಂದವೂ ಸಾರ್ಥಕವಾಗುವುದಿಲ್ಲ. 'ಫ್ರೆಡರಿಕ್ ದಿ ಗ್ರೇಟ್' ಪ್ರಜಾಕೋಟಿಗೆ ತುಂಬ ಉಪಕಾರ ಮಾಡಿದ್ದಾನೆಂದು ಇತಿಹಾಸ ಹೇಳುತ್ತದೆ. ಆದರೆ ಅವನು ತನ್ನ ಅಂತ್ಯಕಾಲದಲ್ಲಿ ಈ ಬುದ್ಧಿಹೀನ ಮಾನವಗುಂಪಿನ ಅವಶ್ಯಕತೆಗಳನ್ನು ಪೂರೈಸುತ್ತ-ಅವರ ಕಾವಲನ್ನು ಕಾಯುತ್ತ ತನ್ನಕಾಲವೆಲ್ಲ ವ್ಯರ್ಥವಾಗಿ ಕಳೆದುಹೋಯಿತು ಎಂದು ವ್ಯಸನಪಟ್ಟಿದ್ದಾನೆ...ಇನ್ನು ಗಾಂಧೀಜಿಯವರ ಕತೆ ಏನಾಗಬೇಡ ?

ತಲೆಯಲ್ಲಿ ಯೋಚನೆ ಸುಳಿಸುತ್ತಿತ್ತು. ತಿಮ್ಮಯ್ಯ ದಿಟ್ಟಹೆಜ್ಜೆ ಮುಂದಿಟ್ಟ. ಪಕ್ಷಿಗಳಿಂಚರ ಕೇಳಿ ಬರುತ್ತಿದೆ.. ಗಾಳಿ ತಣ್ಣಗೆ ತೀಡುತ್ತಿದೆ... ವಾತಾವರಣ ಸುಖಕರವಾಗಿದೆ. ಮೈಯ್ಯಲ್ಲಿ ಕಾಕಿಯ ಉಡುಪು, ಕಣ್ಣಿಗೆ ಕನ್ನಡಕ,. ತಲೆಯಲ್ಲಿ ಕಾಕಿಯ ಟೋಪಿ, ಕೈಯಲ್ಲಿ ಕಾಗದದಿಂದ ಸುತ್ತಿದ ತ್ರಿವರ್ಣಧ್ವಜ, ನಡಿಗೆಯ ಶಿಸ್ತು ಒಂದೊಂದೂ ವ್ಯಕ್ತಿಗೆ ಶೋಭೆಯನ್ನೀಡಿವೆ. ನಿಯಮಿತ ಸ್ಥಳವನ್ನು ತಲುಪಿದಾಗ ಹೊತ್ತು ಮೀರಿತೇನೋ ಎಂಬ ತಳಮಳ ಪೂರಿತ ಭಾವನೆಯಿಂದ ನೋಟವನ್ನು ಗಡಿಯಾರದ ಕಡೆ ಹೊರಳಿಸಿದರೆ ತಾನಲ್ಲಿಗೆ ನಿಯಮಿತ ಕಾಲಕ್ಕೆ ಸ್ವಲ್ಪ ಮುಂದಾಗಿಯೇ ಬಂದಿರುವುದು ಗಮನಕ್ಕೆ ಬಂದು ಮನಸ್ಸಿಗೆ ಸಮಾಧಾನ ಮಾಡಿತು. ಕೆಲಸಗಾರರು ಆಗಲೇ ಕಸ ಉಡುಗುತಿದ್ದಾರೆ. ಸ್ವಯಂಸೇವಕರು ಕುರ್ಚಿ ಮೇಜುಗಳನ್ನು ಹೊಂದಿಸುತಿದ್ದಾರೆ. ನಡೆಯಬೇಕಾದ ಕೆಲಸ ಇನ್ನೂ ಬಹಳವಿದೆ. ಧ್ವಜವನ್ನು ಮೇಜಿನ ಮೇಲಿಟ್ಟು ತೋಳು ಮಡಿಸಿ ಕಾರ್ಯರಂಗಕ್ಕಿಳಿದ ತಿಮ್ಮಯ್ಯ. ನೂರಾರು ಕೈಗಳು ವೇದಿಕೆಯೊಂದನ್ನು ಚಟುವಟಿಕೆಯಿಂದ ಆಗಿಂದಾಗಲೇ ನಿರ್ಮಾಣಗೈದುವು. ನವ ಪ್ರತಿಷ್ಠಿತ ಧ್ವಜಸ್ತಂಭ ಸ್ವಸ್ಥಾನದಲ್ಲಿ ನಿಮಿರಿ ನಿಂತಿತು. ಸಹಸ್ರ ಸಹಸ್ರ ಮಂದಿ ಕೂಡಬಹುದಾದಂತಹ ಸುವಿಶಾಲವಾದ ಸ್ಥಳದಲ್ಲಿ ಸಂಭ್ರಮದಿಂದ ಕೂಡಿತು ಜನವಾರಿಧಿ. ಶಕ್ತಿಯ ಕಣಕಣಕ್ಕೂ ಕಾಯಕಲ್ಪಗೊಳಿಸುವಂತಹ ಅಪೂರ್ವ ಸನ್ನಿವೇಶ.

ಕ್ಲುಪ್ತಕಾಲಕ್ಕೆ ಸರಿಯಾಗಿ ಸಿಂಗಪುರಿಗಳೂ, ಜಪಾನೀಯರೂ, ಬೃಹದ್ ಸಂಖ್ಯೆಯಲ್ಲಿ ಭಾರತೀಯರೂ, ಭಾರತಾಭಿಮಾನಿಗಳಾದ ಇಂಗ್ಲೀ

ಷರೂ ಎಳೆಗಳನ್ನು ಸೇರಿಸಿ ಹೊಸೆದಂತೆ ಅಲ್ಲಿ ನೆರೆದರು. ಆವರಣವೆಲ್ಲ ಜನ ಕೋಟಿಯಿಂದ ತುಂಬಿ ಹೋಯಿತು.

....ಬಾನ್ ಭಿತ್ತಿಯಲ್ಲಿ ಥಳಥಳಿಸುವ ತರುಣಾರುಣ.

....ಸಿಂಗಪುರದ ಪವಿತ್ರಭೂಮಿ; ಕ್ಯಾತೆ ಸಿನಿಮಾಮಂದಿರ.*

...ಶ್ರಮಬಿಂದುಗಳಿಂದ ನಿಮಜ್ಜಿತವಾದ ಹಣೆಗಳ ಮೇಲೆ ಎಂದೆಂದೂ ಮಣಿಯದ ದೃಢನಿಶ್ಚಯ ಫಲಕ.

ನೇತಾಜಿ ಸುಭಾಸ್‌ಚಂದ್ರಬೋಸರು ತಮ್ಮ ಅನುಯಾಯಿಗಳೊಡನೆ ಸ್ವತಂತ್ರ ಭಾರತದ ಧೀರ ಪ್ರಜೆಯಂತೆ ಆಗಮಿಸಿದರು. ಪ್ರಫುಲ್ಲ ವದನದಲ್ಲಿ ಜ್ವಲಿಸುವ ಕೆಚ್ಚಿನ ಕಿಚ್ಚು ; ಜ್ವಲಿತ ಗ್ರಹಗಳಂತೆ ಶೋಭಿತ ನಯನದ್ವಯ ಗಳು ; ವ್ಯಕ್ತಿತ್ವಕ್ಕೆ ಕಳೆಗೂಡಿಸಿದ ಮಿಲಿಟರಿ ಸಮವಸ್ತ್ರ; ನೋಡಿದ ಪ್ರಥಮ ನೋಟಕ್ಕೆ ಎರಡೂ ಕೈಗಳನ್ನು ಗೌರವಪೂರ್ಣವಾಗಿ ಜೋಡಿಸಬಹುದಾ ದಂತಹ ಅಪೂರ್ವ ದಿವ್ಯತೇಜ....ಭವ್ಯಬಂಧುರ ಭಾವ....

ಜನಕೋಟಿಯ ಹರ್ಷೋದ್ಗಾರ ; ಕರತಾಡನಗಳ ರುದ್ರರವ.

ಹಿರಿಯ ರಾಜಕಾರಿಣಿಗಳೂ ಪತ್ರಿಕಾವರದಿಗಾರರೂ ಮುಂದಿನ ಸಾಲು ಗಳಲ್ಲಿ ಮಂಡಿಸಿದರು. ರುದ್ರಗಂಭೀರ ಸನ್ನಿವೇಶ ಎಲ್ಲರ ಮುಖಮಂಡಲ ಗಳಿಗೂ ತೇಜದ ರಂಗೋರೆಯಿತು.

ಸುಶ್ರಾವ್ಯ ಸುಲಲಿತ ಸ್ತ್ರೀಕಂಠ'ವಂದೇಮಾತರಂ'ಗೀತೆಯನ್ನು ಹಾಡಿತು.

ಅನಂತರ,

ಸುಭಾಸ್ ಚಂದ್ರಬಾಬುಗಳು ಧ್ವಜಾರೋಹಣ ಮಾಡಿದರು.

ದೇಶಭಕ್ತರೂ, ವಯೋವೃದ್ಧರೂ, ಜ್ಞಾನವೃದ್ಧರೂ ಆದ ರಾಸಬಿಹಾರಿ ಗಳೊಡನೆ ಸುಭಾಸರು ವೇದಿಕೆಯನ್ನೇರಿದರು. ರಾಸ ಬಿಹಾರೀ ಬಾಬುಗಳು ಅಸ್ಖಲಿತ ವೀರವಾಣಿಯಲ್ಲಿ ಇಂತು ಬಿನ್ನಯಿಸಿಕೊಂಡರು.

"ನೇತಾಜಿಯವರೇ, ಸೋದರರೇ, ಸೋದರಿಯರೇ,

ಇಂದು, ಅಂದರೆ ೧೯೪೩ನೇ ಇಸವಿ, ಅಕ್ಟೋಬರ್ ೨೧ನೇ ತೇದಿ... ಭಾರತ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡಬಹುದಾದ ಒಂದು ಅಮೋಘವಾದ ದಿನ. ಈ ದಿವಸ ನಾವೆಲ್ಲರೂ ಕಲೆತು ನೇತಾಜಿಯವರ

*Cathay Cinema Theatre

ನೇತೃತ್ವದಲ್ಲಿ ಸ್ವತಂತ್ರ ಭಾರತದ ಸರಕಾರವನ್ನು ಸ್ಥಾಪನೆ ಮಾಡಲಿದ್ದೇವೆ. ನೂರಾರು ವರ್ಷಗಳಿಂದ ಯಾವ ಅಮೂಲ್ಯ ವಸ್ತುವನ್ನು ಭಾರತ ಕಳೆದು ಕೊಂಡಿತ್ತೋ ಅದಿಂದು ಬೆಳ್ಳಿಯ ಚುಕ್ಕಿಯಂತೆ ಮೂಡಿ ಬರುತ್ತಿದೆ. ನಮ್ಮ ಈ ತಾತ್ಕಾಲಿಕ ಸರಕಾರವನ್ನು ಕೊರಿಯಾ, ಮಂಚೂರಿಯಾ, ಐರ್ಲೆಂಡ್, ಜರ್ಮನಿ, ಜಪಾನ್, ಬರ್ಮಾ, ಫಿಲಿಫೈನ್ಸ್, ಇಟಲಿ, ಚೀನಾ ಮುಂತಾದ ದೇಶಗಳು ಮಾನ್ಯ ಮಾಡಲಿವೆ. ಸಶಸ್ತ್ರ ಹಸ್ತಗಳಿಂದಲ್ಲದೆ ಬ್ರಿಟಿಷರ ಧೂರ್ತ ಸರಕಾರವನ್ನು ತೊಲಗಿಸುವುದು ಅನಿವಾರ್ಯ ಎಂಬುದನ್ನು ಈಗ ಭಾರತ ಜನತೆ ಅಕ್ಷರಶಃ ಅರಿತುಕೊಂಡಿದೆ. ತತ್ಪರಿಣಾಮವಾಗಿ ಭಾರತೀಯ ಸುಪುತ್ರ ವೀರಯೋಧ ನೇತಾಜಿ ಸುಭಾಷರ ನೇತೃತ್ವದಲ್ಲಿ ನಾವು ಭಾರತದ ಸ್ವಾತಂತ್ರ್ಯ ಘೋಷಣೆ ಮಾಡಲಿದ್ದೇವೆ..."

ಬೋಲೋ ಭಾರತ್ ಮಾತಾಕಿ ಜೈ !

ಜೈ....! ! !

ಒಡನೆ ಸಹಸ್ರ ಕಂಠಗಳ ಹರ್ಷೋದ್ಗಾರ ಮತ್ತು ಕರತಾಡನಗಳೊಂದುಗೂಡಿ ಗಗನಭೇರಿಯಂತೆ ಮೊಳಗಿ ಕರ್ಣಪಟಲಗಳಿಗೆ ಅತ್ಯಂತ ವಿಜೃಂಭಣೆಯಿಂದ ತಾಗಿದುವು. ಭಾವೋದ್ವೇಗದಿಂದ ಮೈ ಪುಳಕಿತವಾಗಿ, ಬಿಸಿನೆತ್ತರು ನರನಾಡಿಗಳಲ್ಲಿ ತೀವ್ರತರವಾಗಿ ಹರಿದಾಡಿತು. ರೋಮ ರೋಮಗಳು ಕದಂಬ ಕೇಸರದಂತೆ ಉದ್ಬುದ್ಧವಾದುವು.

....ಇಡೀ ಜೀವಮಾನವೇ ಶೋಭಿಸುವಂತಹ ಕಾಲಮಾನ.

...ಕೃತಕೃತ್ಯರಾಗುವ ಪುಣ್ಯಯೋಗ.

....ಪಿಶಾಚ ಹಸ್ತದಿಂದ ಬಿಡುಗಡೆ ಹೊಂದುವ ಸುಯೋಗ.

....ಸ್ವಾತಂತ್ರ್ಯ ಸುಗ್ಗಿಯ ಸುವರ್ಣ ದಿನ.

ಆ....ಹಾ !

ಪೂರ್ವ ಏಷ್ಯಾದ ಭಾರತೀಯರ ಸುಭದ್ರ ಸಂಘಟನೆಯು "ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್"ಗೆ ಜನ್ಮಧಾರಣೆ ಮಾಡಿ ಅದರ ಅಧ್ಯಕ್ಷತೆಯನ್ನು ನೇತಾಜಿಯವರಿಗೆ ವಹಿಸಿತು. ಅಧ್ಯಕ್ಷ ಪೀಠದಿಂದ ಸುಭಾಷರ ಧೀರೋದಾತ್ತವಾಣಿ ಶ್ರೀಕಂಠದಲ್ಲಿ ಮೊಳಗಿತು,

"....ಮಹಾತ್ಮಾಗಾಂಧಿಯವರು ೧೯೧೫ನೆಯ ಇಸವಿ ಮೇ ೨೫ರಲ್ಲಿ

ಸತ್ಯಾಗ್ರಹಾಶ್ರಮವನ್ನು ಸ್ಥಾಪಿಸಿ ಭಾರತ ಸಂಸ್ಕೃತಿಯ ದ್ಯೋತಕವಾದ ಸತ್ಯ-ಧರ್ಮಗಳ ಪರಿಪಾಲನೆಗಾಗಿ ಕ್ರಾಂತಿಯನ್ನೂ ಯುದ್ಧಮಾರ್ಗವನ್ನೂ ಬದಿಗೊತ್ತಿ, ಅಸಹಕಾರ ಚಳವಳಿ, ಕಾನೂನು ಭಂಗ, ಸತ್ಯಾಗ್ರಹ ಮುಂತಾದ ಮಾರ್ಗಗಳಲ್ಲಿ ಬುದ್ಧಿ ಶ್ರದ್ಧೆಗಳಲ್ಲಿ ತೊಡಗಿಸಿ, ನಮ್ಮ ಸ್ವಾತಂತ್ರ್ಯದಾಹದ ಅತೀವ ಕೆಚ್ಚಿನಲ್ಲೂ ಶಾಂತಿ-ಶಿಸ್ತುಗಳನ್ನು ಸಾರೋದ್ಧಾರವಾಗಿ ಪಾಲಿಸಿ ಕೊಂಡು ಬರಲು ಅಹೋರಾತ್ರಿ ಶ್ರಮಿಸಿದ್ದಾರೆ. ಕಾಂಗ್ರೆಸ್ ಮಂತ್ರಿ ಮಂಡಲಗಳು ನಮ್ಮವರು ಸಮರ್ಥರೆಂಬುದನ್ನು ತೋರಿಸಿ ಕೊಡಲು ದಕ್ಷತೆ ಯಿಂದ ಸರಕಾರ ನಡೆಸಿವೆ. ಆದರೂ ಇದುವರೆವಿಗೆ ಸ್ವಾತಂತ್ರ್ಯ ಕನಸಾ ಗಿಯೇ ಉಳಿದಿದೆ. ಹೀಗೇ ಇದ್ದರೆ ಸ್ವಾತಂತ್ರ್ಯ ಬರುವ ಸಂಭವವೂ ಇಲ್ಲ. ಆದುದರಿಂದ ಗುಂಡನ್ನು ಗುಂಡಿನಿಂದ ಎದುರಿಸುವ ಎದೆಗಾರಿಕೆಯನ್ನು ನಾವು ಹೊಂದಿದರೇನೇ ಸ್ವಾತಂತ್ರ್ಯ. ಭಾರತ ಜನನಿಯ ಬಂಧವಿಮೋಚನೆಗಾಗಿ ಇಂದು ಜನ್ಮ ತಳೆದ "ಇಂಡಿಯನ್ ನ್ಯಾಷನಲ್ ಆರ್ಮಿ" ಯನ್ನು ಬಲ ಯುತಗೊಳಿಸಿ. ಅಂತಿಮ ಹೋರಾಟ ನಡೆಸಿ ನೆತ್ತರನ್ನು ಚೆಲ್ಲಿ ಸೂಸಿ ನಾವು ಸ್ವಾತಂತ್ರ್ಯ ಪಡೆಯುವ....! ಜೈ ಹಿಂದ್ !"

ಜೈ ಹಿಂದ್ !!!

ಕರತಾಡನಗಳ ರುದ್ರಮನೋಹರ ರವ !!

ಒಕ್ಕೊರಲಿನ ಹರ್ಷೋದ್ಗಾರ !!

ಮಂತ್ರಮುಗ್ಧ ಸಭಿಕರ ದೃಢಶಾಂತ ಗಂಭೀರ ಮುಂದೆ ಅಲೆಯಲೆಯಾಗಿ ಹರಿದಾಡುವಾಗ ಮಾನಸಿಕ ಮಧುರಚ್ಛವಿ ಮುಖಮಂಡಲಗಳಲ್ಲಿ ಹೊಮ್ಮು ತಿತ್ತು. ಜನಸಂದಣಿಯ ಸ್ತಬ್ಧತೆ ಶ್ರದ್ಧೆಗೌರವಗಳನ್ನು ಪ್ರತಿಪಾದಿಸುತಿತ್ತು.

ಸುಭಾಸ್ ಚಂದ್ರಬೋಸರು ಉತ್ಸುಕ ಪ್ರಜಾಕೋಟಿಯ ಸಮಕ್ಷಮ ದಲ್ಲಿ (ಸ್ವತಂತ್ರ) ಭಾರತದ ತಾತ್ಕಾಲಿಕ ಸರಕಾರದ ಪ್ರಧಾನಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು; ಅನಂತರ ಇತರ ಎಂಟು ಮಂದಿ ಸಹ ಮಂತ್ರಿಗಳಾಗಿ ನಿಯಮಿತ ರೀತಿಯಲ್ಲಿ ಪ್ರಮಾಣವಚನ ಕೈಗೊಂಡರು.

ನೇತಾಜಿಯವರು ತಮ್ಮ ಸರಕಾರದ ಇತರ ಮಂತ್ರಿಗಳನ್ನು ಸಮ ಯೋಚಿತವಾಗಿ ಸಭೆಗೆ ಪರಿಚಯಮಾಡಿಕೊಟ್ಟರು. ಕೊನೆಯ ಪ್ರಕರಣ ವಾಗಿ ಸುಭಾಸರ ಧೀರವಾಣಿ ಮೊಳಗಿತು "ಜೈ ಹಿಂದ್ !"

ಒಡನೆ ಸಭಿಕರ ಒಕ್ಕೊರಲಿನ ಧ್ವನಿ ಹೊರಹೊಮ್ಮಿತು "ಜೈ ಹಿಂದ್!"

ಸಮಿಾಪ ಗಿರಿವನ ಪ್ರದೇಶ ಮರುದನಿಕೊಟ್ಟಿತು. "ಜೈಹಿಂದ್ !"

ಆ ಸಭೆ, ಆ ಜಾಗೃತಶಕ್ತಿ ಭಾರತಾಂಬೆಯ ಶುಭಚರಣಗಳಲ್ಲಿ ರಕ್ತದ ಪ್ರತಿಕಣವನ್ನೂ ಸಮರ್ಪಿಸುವುದಾಗಿ ಪ್ರಮಾಣವಚನ ನೀಡಿತು.

ಸುಭಾಸರ ಸಿಂಹವಾಣಿ ವೇದಿಕೆಯಿಂದ ಮೊಳಗಿತು "ಚಲೋ ಡೆಲ್ಲಿ!"

ನುಡಿ ನಭೋಭೇರಿಯಾಗಿ ಏರಿ ನಾಡು ಹರ್ಷಗೊಂಡಿತು. ನೀರವದ ಮಧ್ಯೆ ಭಾರತ ಸ್ತ್ರೀಕಂಠವೊಂದು ರಾಷ್ಟ್ರಗೀತೆಯನ್ನು ಸುಶ್ರಾವ್ಯವಾಗಿ ಹಾಡಿತು.

ಸಭೆ ವಿಸರ್ಜನೆಯಾದರೂ ಕೈಗೆ ಇನಿತೂ ಬಿಡುವಿಲ್ಲ. ಕಾಗದ ಪತ್ರ ಗಳ ವಿತರಣೆ, ಮುಂದಿನ ಮಿಾಟಿಂಗಿನ ಸಿದ್ಧತೆ, ಕರ್ತವ್ಯದ ಹೊಣೆ ಹೀಗೆ ಬಗೆ ಬಗೆಯ ಹೊರೆ ತಲೆಯನ್ನೇರಿತು. ತಿಮ್ಮಯ್ಯ ಯಂತ್ರದಂತೆ ದುಡಿಯು ತ್ತಿದ್ದ. ಕೆಲಸ ಸದ್ದಿಲ್ಲದೆ ಸಾಗುತಿತ್ತು.

ತನ್ನ ಹೆಸರಿಗೆ ಬಂದಿದ್ದ ಕಾಗದವೊಂದನ್ನು ಜೇಬಿನಲ್ಲಿಟ್ಟುಕೊಂಡು ರಾತ್ರಿ ತನ್ನ ಕೊಠಡಿಗೆ ಬಂದನಂತರ ವಿರಾಮವಾಗಿ ಓದಿದ. ಅದುವರೆಗೆ ಬಿಡುವೇ ಆಗಿರಲಿಲ್ಲ.

....ರಾಷ್ಟ್ರದಾದ್ಯಂತ ನಡೆಯುತ್ತಿರುವ ಆಂದೋಳನವನ್ನು ಗಮನಿಸಿ ದರೆ ರೋಷ-ಸಂಕಟಗಳು ಒಂದೇ ಸಲ ಉದಿಸುತ್ತವೆ. ನಾನು ಮಿಲಿಟರಿಗೆ ಸೇರಿ ಖಂಡಿತ 'ತಪ್ಪು' ಮಾಡಿಬಿಟ್ಟೆ. ಆ ಉತ್ಸಾಹ ಆ ಹುರುಪು ಇದರಲ್ಲಿ ಬರಲಾರವು. ಇನ್ನು ಆರೇಳು ತಿಂಗಳು ಕಳೆದರೆ ಈ ಸರ್ವಿಸಿಗೆ ನಮೋ ನ್ನಮಃ. ಆನಂತರ ಸಾರ್ವಜನಿಕ ಕ್ಷೇತ್ರವೇ ನನ್ನ ಕ್ಷೇತ್ರ ...ಅಲ್ಲಿ ಜಿಗಿ ಯುವ ಜಿಂಕೆಯೂ ನಾನೆ...ಹಾರುವ ಹಕ್ಕಿಯೂ ನಾನೆ. ಇನ್ನೊಮ್ಮೆ ಅಸಹಕಾರ ಚಳವಳಿಯಲ್ಲಿ ಧುಮುಕಬೇಕೆಂಬ ಬಯಕೆ ತುಂಬ ಇದೆ. ಅಷ್ಟ ರೊಳಗಾಗಿ ದೇಶ ಸ್ವಾತಂತ್ರ್ಯವನ್ನು ಪಡೆಯುವ ಸೂಚನೆಗಳು ಕಾಣಿಸುತ್ತಿವೆ. ಅಷ್ಟಾದರೆ ಸಾಕು. ಬಂಧಮುಕ್ತ ಭಾರತದಲ್ಲಿ ಉಸಿರಾಡುವ ಇಚ್ಛೆ ಎದೆಯನ್ನು ಆವರಿಸಿದೆ. ನಾನು ಸರ್ವಿಸಿಗೆ ಸೇರಿ ಐದನೆಯ ವರ್ಷ ನಡೆಯುತ್ತಿರುವು ದರಿಂದ ಬಿಟ್ಟುಕೊಟ್ಟಾರೆಂದು "ಸರ್ವಿಸಿನಿಂದ ಬಿಡುಗಡೆ ಮಾಡಿ" ಎಂದು ಅರ್ಜಿ ಬರೆದುಕೊಂಡೆ. ಅದರಿಂದ ಏನೂ ಪ್ರಯೋಜನವಾಗಲಿಲ್ಲ. ಒಂದು

ವೇಳೆ ಬಿಡುಗಡೆಯಾಗಿದ್ದಿದ್ದರೆ ನಾನು ಧುಮುಕುತ್ತಿದ್ದುದೇ ಅಸಹಕಾರ ಚಳವಳಿಗೆ....

ನಿನಗೆ ಸಂಸಾರ ತಾಪತ್ರಯವೇನೂ ಇಲ್ಲ. ನೀನಿಲ್ಲಿ ನಿರ್ಮಲ ಚಿತ್ತ ದಿಂದಿರಬಹುದು. ನಮ್ಮ ಸಂಸಾರ ಅತ್ಯಂತ ಆರ್ಥಿಕ ಮುಗ್ಗಟ್ಟಿನಿಂದ ನರಳು ತ್ತಿದೆ. ಮೂದು ಮನೆಯ ಕಡೆ ಇದ್ದಿದ್ದರೆ ಹೀಗಾಗುತ್ತಿರಲಿಲ್ಲ. ಈ ಸಲವೂ ಬೆಳೆ ಬಂದಿಲ್ಲವಂತೆ ಅಕ್ಕಿ ರಾಗಿಯನ್ನೂ ಕೊಂಡು ತರುವುದಾಗಿದೆ ಎಂದು ಬರೆ ದಿದ್ದರು ಅವ್ವ. ಈಗ ಸಾರಿಗೆ ಸೌಕರ್ಯ ಕೆಟ್ಟಿರುವುದರಿಂದ ಕಾಲಕಾಲಕ್ಕೆ ಕಾಗದ ಪತ್ರಗಳು ಬರುತ್ತಿಲ್ಲ....ತುರ್ತು ಕಾರ್ಯಗಳ ಉಗಮದಿಂದ ಸಂಬಳ ಕ್ಲುಪ್ತ ಕಾಲದಲ್ಲಿ ದೊರೆಯುತ್ತಿಲ್ಲ. ಮೂರು ತಿಂಗಳಿಂದ ಊರಿಗೆ ಹಣ ಕಳುಹಿಸಲೂ ನನಗೆ ಸಾಧ್ಯವಾಗಲಿಲ್ಲ. ಮಕ್ಕಳಿಗೆಷ್ಟು ಕಷ್ಟವಾಗಿದೆಯೋ ದೇವರಿಗೇ ಗೊತ್ತು. ಮನೆಯ ವಿಚಾರ ಮನವನ್ನು ಹಿಂಡುತ್ತಿದೆ. ರಾತ್ರಿ ಕಣ್ಣಿಗೆ ನಿದ್ದೆ ಹತ್ತುವುದಿಲ್ಲ....ಹಗಲು ಉಂಡ ಅನ್ನ ಜೀರ್ಣವಾಗುವುದಿಲ್ಲ. ಅದೇ ನೇರಕ್ಕೆ ದೇಶದ ವಿಚಾರ ಗಮನಿಸಿದರೆ ತುಂಬ ಸಂಕಟವಾಗುತ್ತದೆ...

ಇನ್ನು ಯಾವ ಘಳಿಗೆಯಾದರೂ ನಮ್ಮನ್ನು ಯುದ್ಧಕ್ಕೆ ಕಳುಹಿಸ ಬಹುದು. ಇದುವರೆಗೆ ಆರೋಗ್ಯ ಚೆನ್ನಾಗಿರಲಿಲ್ಲವಾದುದರಿಂದ ನಮಗೆ ರಜೆ ದೊರಕಿತ್ತು. ಇನ್ನುಮೇಲೆ ದೊರೆಯಲಾರದು. ಮುಂದಿನ ಕತೆ ಏನಾಗುತ್ತದೋ ಅದೂ ಹೇಳುವಂತಿಲ್ಲ....ಸುಖವಾಗಿದ್ದರೆ ಇನ್ನೊಮ್ಮೆ ಬರೆಯುವೆ....

ತಿಮ್ಮಯ್ಯ ಕಾಗದವನ್ನು ಪುನಃಪುನಃ ಓದಿಕೊಂಡ. ಅವನು ಸುಖವಾಗಿ ರಲಿ ಎಂದು ಹಾರೈಸಿತು ಎದೆಯ ಹಂಬಲ.

"ಆದರೆ....ಈ ಜೀವನವನ್ನು ಪರಿಶೀಲನಾ ದೃಷ್ಟಿಯಿಂದ ನೋಡಿದರೆ, ತುಲನಾತ್ಮಕವಾಗಿ ವಿಮರ್ಶಿಸಿದರೆ ಪ್ರಧಾನ ಅಂಶವಾಗಿ ಗಮನಿಸುತ್ತಿರುವ 'ಸುಖ' ಅತ್ಯಂತ ಅಲ್ಪವಾಗಿ ಕಂಡು ಬರುವುದು. ಕೇವಲ ಈ ಅಲ್ಪ ವಿಷಯ ವನ್ನು ಕಾಪಾಡಲೋಸುಗ ಅತ್ಯಂತ ಮಹತ್ತಾದ ಕೆಲಸಗಳನ್ನು ಬಿಡುವುದು ಸರಿಯಲ್ಲ." ಎಂದು ಯಾರೋ ಕಿವಿಯ ಸನಿಹದಲ್ಲೇ ಕೂಗಿ ಹೇಳಿ ದಂತಾಯಿತು.

ತಿಮ್ಮಯ್ಯ ಚಿಂತಾಮಗ್ನನಾಗಿ ಹಾಸಿಗೆಯ ಮೇಲೆ ಅಡ್ಡಾದ.

ಹೊತ್ತು ಹನ್ನೆರಡರ ಅಂಚನ್ನು ದಾಟಿತ್ತು.

ಕಿಟಕಿಯಲ್ಲಿ ತೇಲಿ ಬಂದ ತಂಗಾಳಿ ಅಲೆಯಲೆಯಾಗಿ ಮುಖಮೈಗಳನ್ನು ಮುದ್ದಿಟ್ಟು ಹೋಯಿತು.

೨೭

....ಸುಜಲಾಂ, ಸುಫಲಾಂ, ಮಲಯಜ ಶೀತಲಾಂ.

....ವನಶ್ರೀ ಎಂದಿನಂತೆಯೇ ಸಸ್ಯ ಶ್ಯಾಮಲೆಯಾಗಿದ್ದಾಳೆ.

ಹಸುರುಡೆಯುಟ್ಟು ವರ್ಣರಂಜಿತ ವನಸುಮಗಳ ವಾಸಂತೀ ಉತ್ತರೀಯವನ್ನು ಹೊದ್ದು ನವೀನ ಶೋಭೆಯಿಂದ-ಶ್ರೀಮಂತ ಗಾಂಭೀರ್ಯದಿಂದ ಪರಿಶೋಭಿಸುತಿದ್ದಾಳೆ. ಅಲೆಯಲೆಯಾಗಿ ಹಬ್ಬಿದ ಮಲೆಗಳ ಸಾಲು ತಲೆದೂಗುವ ತಳಿರಶೋಭೆ-ವಿಗಲಿತ ಕುಸುಮದಳರಾಜಿ ವನಭೂಮಿಯನ್ನು ಆಮೋದಮಗ್ನವಾಗಿಸಿವೆ. ಲೀಲಾಲೋಲ ಪಕ್ಷಿಸಂಕುಲ ಮುದವೆತ್ತು ಕೊರಳಿಂಚರವನ್ನು ಛಂದೋಮಯವಾಗಿ ಸುಶ್ರಾವ್ಯವಾಗಿ ಹರಿಯಬಿಡುತ್ತಿವೆ.

ಆದರೆ ...

ಜೀವನ ಶ್ರದ್ಧೆ ಇದ್ದರಷ್ಟೇ ?

ಚಳವಳಿ-ಆಂದೋಳನಗಳು ಒಮ್ಮೊಮ್ಮೆ ಬಿಸಿಯೇರುತ್ತವೆ ; ಕೆಲವೊಮ್ಮೆ ತಣ್ಣಗಾಗುತ್ತವೆ ; ಅನೇಕ ವೇಳೆ ಗೂಂಡಾವೃತ್ತಿಗಳು ಕ್ರಾಂತಿಯ ಕಹಳೆಯನ್ನು ಊದುತ್ತವೆ. ಎಲ್ಲಿಂದ ಎಲ್ಲಿಯವರೆಗೂ ಗಲಾಟೆ-ಗದ್ದಲ, ಅಶಾಂತಿ-ಅಶ್ರದ್ಧೆ. ಬಂದೀಖಾನೆಗಳು ತುಂಬಿ ಹೋಗಿರುವುದರಿಂದ ಅರೆಸ್ಟು ಮಾಡಿದವರನ್ನು ಜೇಲಿನಕಡೆ ಒಯ್ಯದೆ, ಚೆನ್ನಾಗಿ ಥಳಿಸಿ ಕಾಡುಮೇಡುಗಳ ಕಡೆ ಕರೆದೊಯ್ದು ದೂರ ಪ್ರದೇಶಗಳಲ್ಲಿ ಬಿಟ್ಟು ಬರಲಾಗುತಿತ್ತು. ಶಾಂತಿ ಶಿಸ್ತು-ಸತ್ಯಗಳು ಧೂಳೀಪಟವಾಗಿದ್ದುವು. ಅರಾಜಕತೆಯಲ್ಲಿ ಆಡಳಿತ ಯಂತ್ರ ಹದಗೆಟ್ಟು ನಿಂತು ಹೋಗಿತ್ತು. ಜನಸಂಮರ್ದವೆಲ್ಲವೂ ಪರ ಪ್ರಾಂತಗಳವರೆಗೂ ಧೀಂಕಿಡುವಂತೆ ಸ್ವಾತಂತ್ರ್ಯ ಘೋಷಣೆ ಮಾಡುತಿತ್ತು ಜಗತ್ತಿನ ತೀವ್ರಾಸಕ್ತಿ ಭಾರತದ ಚಳವಳಿ ಕ್ಷೇತ್ರದಲ್ಲಿ ನೆಲೆನಿಂತಿತ್ತು. ಸೋಲು ಗೆಲುವುಗಳ ನಿರೀಕ್ಷಣೆಯಲ್ಲಿ ಪ್ರತಿ ಕ್ಷಣಗಳೂ ಉರುಳುತ್ತವೆ. ಆದರೆ, ಕೊನೆ ಎಂದಿಗೊ___ಅದೇ ಅಸ್ಪಷ್ಟ.

ಹೊತ್ತು ಉರುಳಿತು. ಸಂಜೆ ಹೆಜ್ಜೆ ಇಡುತ್ತಿದೆ.

ದಿಗಂತದಲ್ಲಿ ಸಂಧ್ಯಾರಾಗ ಮೈದೋರಿ ಹೆಪ್ಪುಗಟ್ಟಿತ್ತು.

ಊಟ್ಟಲುಡುಗೆಯನ್ನು ಮೊಣಕಾಲಿನವರೆಗೂ ಮಡಿದುಕಟ್ಟಿ ಪೊನ್ನಮ್ಮ, ಪೂವಿಯರು ಭತ್ತದ ಗದ್ದೆಯಲ್ಲಿ ಕಳೆ ಕೀಳುತಿದ್ದರು. ಗದ್ದೆ ತೋಟಗಳ ಕೆಲಸಗಳಿಗೆ ಬರುತಿದ್ದ ನೆರೆಹೊರೆಯವರು ಈಗ ಬರುತ್ತಿಲ್ಲ. ಬೆಳಗಿನಿಂದ ಒಂದೇ ಸಮನೆ ಕೀಳುತಿದ್ದರೂ ಮುಗಿಯಲಿಲ್ಲ. ಕತ್ತಲಾಗುವ ಮುನ್ನ ಹಿಡಿದ ಗಣ್ಣವನ್ನು ಮುಗಿಸುವ ಆಲೋಚನೆ ಮೈಮನಗಳಿಗೆ ಶಕ್ತಿಯನ್ನು ನೀಡಿತ್ತು.

ಅರಹೊಟ್ಟೆ ಕವಳ, ಕಣ್ಣಿಗೆ ಅರನಿದ್ದೆ, ವಿಶ್ರಾಂತಿಗೆ ಅರ್ಧಚಂದ್ರ. ಮೇಲಾಗಿ ಅನಾರೋಗ್ಯ. ಈಗೀಗ ನೀರೌಷಧವೂ ದೊರೆಯುತ್ತಿಲ್ಲ. ಆಸ್ಪತ್ರೆಯಲ್ಲಿ ಡಾಕ್ಟರು ಪತ್ತೆಯೇ ಇರುತ್ತಿರಲಿಲ್ಲ. ಕಾಂಪೌಂಡರ್ ಖಾಲಿ ಶೀಸೆಯನ್ನು ತೋರಿ ಬಿಡುವ. ಡಾಕ್ಟರಿದ್ದರೂ ಸಣ್ಣ ಪುಟ್ಟ ಕಾಯಿಲೆಗಳಿಗೆ ಗಮನ ಕೊಡುವಷ್ಟು ಸಮಯವಾಗಲೀ, ಸಹನೆಯಾಗಲೀ ಇದ್ದರಷ್ಟೆ? ರಾಷ್ಟ್ರದ ನಿಯಂತ್ರಣವೇ ಹದಗೆಟ್ಟಿರುವಾಗ ಯಾರಿಗೆ ಯಾರು? ... ಮೇಲಾಗಿ, ನಾಗರಿಕತೆ ಸೋಂಕದ ಜೀವನ, ಆದಮನೀಯವಾದ ಬದುಕಿನ ಶ್ರದ್ಧೆ ಒಂದಕ್ಕೊಂದು ಹೊಯ್ದಾಡುತ್ತಲೇ ಇರುತ್ತವೆ. ಅತೀವ ಶ್ರಮದಿಂದ ದೇಹದಾದ್ಯಂತ ನರನಾಡಿಗಳು ಪಟ್‌ಪಟ್ಟನೆ ತುಂಡುಗಡಿಯುತ್ತಿರುವಂತೆ ನೋಯುತ್ತಿರುತ್ತವೆ. ಒಮ್ಮೆ ಮುಗಿದರೆ ಸಾಕು ಎಂದು ಘೀಳಿಡುತಿತ್ತು ಜೀವ. ಆದರೂ ಕೆಲಸ–ಬೊಗಸೆ ಮುಗಿಯುವಂತಿಲ್ಲ.

ಮುದವೆತ್ತ ಲಾವ–ತಿತ್ತಿರಿ ಪಕ್ಷಿಗಳು ಅಲ್ಲಲ್ಲೇ ಜಿಗಿದಾಡುತ್ತ ಹಾಡುತ್ತಿವೆ. ಪಡುವಣ ಮಟ್ಟೆಯಲ್ಲಿ ಸೂರ್ಯ ತಂಗಿದ. ವಾಯುಮಂಡಲದಲ್ಲಿ ಶೈತ್ಯ ಸಂಚಾರವಾಗತೊಡಗಿತು. ಕಾವೇರಿ ತರಂಗಗಳು ಮೃದು ಮಧುರವಾಗಿ ಜುಳುಜುಳು ನಿನಾದದೌತಣವನ್ನು ಕರ್ಣ–ಜಿಹ್ವೆಗಳಿಗೆ ಊಡಿಸುತ್ತಿವೆ. ಆದರೆ ಅದನ್ನೆಲ್ಲಾ ನೋಡಿ–ಕೇಳಿ ಆನಂದಿಸುವಷ್ಟು ಚಿತ್ತಸ್ವಾಸ್ಥ್ಯ ಇದ್ದರಷ್ಟೇ? ಪ್ರಕೃತಿ ವ್ಯಾಪಾರ ಅದರ ಪಾಡಿಗೆ ಅದು ನಡೆಯುತಿತ್ತು. ಕಿತ್ತ ಕಳೆಯನ್ನು ಗದ್ದೆಯಂಚಿನಲ್ಲಿ ಹಾಕಿ,ಕೊಯ್ದ ಹಸುರು ಹುಲ್ಲಿನ ಕಂತೆಯೊಡನೆ ಇಬ್ಬರೂ ಮನೆಗೆ ಹೊರಟಾಗ ಬಳಲಿ ಬೆಂಡಾಗಿ ಬಾಯಾರಿ ಜೀವ ಹಣ್ಣಾಗಿತ್ತು. ಆ ದೂರದ ಹಾದಿಯನ್ನು ನಡೆಯಲಾರದಷ್ಟು ಬಲ ಕುಂದಿತ್ತು. ಭಾರವಾದ ಶರೀರವನ್ನು ಹೊರಲಾರದೆ ಹೊತ್ತಂತೆ ಕಾಲುಗಳು ನಿಧಾನವಾಗಿ ನಡೆಯುತ್ತಿದ್ದುವು. ಹೆಬ್ಬಯಲನ್ನು ದಾಟ ಕೆಳಮಟ್ಟೆಯ ಸಮೀಪಕ್ಕೆ

ಬಂದಾಗಲೇ ಮಕ್ಕಳು ಮೇಲಿನಿಂದ ಕೇಕೆ ಹಾಕಿದರು. ಬೆಳಗಿನಿಂದ ತಾಯಂದಿರನ್ನು ಕಾಣದಿದ್ದುದರಿಂದ ಈಗ ಒಮ್ಮೆಲೇ ಎತ್ತಿಕೊಳ್ಳಲಿ ಎಂಬಷ್ಟು ಹುರುಪು...ಎಳೆತುಟಿಗಳು ನಗುವಿನ ವಿಮಲಧಾರೆಯನ್ನು ಚೆಲ್ಲಿದುವು. ಭಾರವಾದ ಹೊರೆಯನ್ನು ಹೊತ್ತು ಮೆಟ್ಟಿಲುಗಳನ್ನು ಏರುವುದೇ ಕಷ್ಟವಾಗಿತ್ತು. ಆದರೂ ಮೇಲೆ ಬರುವುದನ್ನೇ ಕಾದಿದ್ದ ಮಕ್ಕಳು ಓಡಿ ಬಂದು ನಿರಿಯನ್ನು ಹಿಡಿದು ಅಪ್ಪಿಕೊಂಡುವು. ಚಿಟ್ಟೆ ಜಗಲಿಯಂಚಿನ ಮೇಲೆ ಕುಳಿತು ಹರಿದ ಗಾಳಿ ಪಟದ ದುರಸ್ತಿ ಕೈಕೊಂಡಿದ್ದ.

"ಮೊದಲಿಷ್ಟು ಕೈಕಾಲು ತೊಳೆದುಕೊಳ್ಳೋಣ. ಅನಂತರ ಎತ್ತಿಕೊಳ್ಳುವುದು." ಎಂದಳು ಪೊನ್ನಮ್ಮ.

ಅಲ್ಲೇ ನಿಂತಿದ್ದ ಕಾವೇರಿ ಆತಂಕಪೂರ್ಣ ದನಿಯಲ್ಲಿ–"ಹೀಗೆ ಒಂದೇ ಸಮನೆ ನೀರಿನಲ್ಲಿಳಿದು ಕಳೆಕಿತ್ತು ದೇಹಸ್ಥಿತಿ ಕೆಟ್ಟರೇನು ಗತಿ ? ಮೊದಲೇ ಸೋತು ಸುಣ್ಣವಾಗಿದ್ದೀರಿ. ಇದುವರೆವಿಗೆ ಅನುಭವಿಸಿದುದೇ ಸಾಕಾಗಿದೆ; ಮತ್ತಷ್ಟು ಆರೋಗ್ಯ ಕೆಡಿಸಿಕೊಳ್ಳುವುದು ಬೇಡ. ಮಾದೇವ ಕೊಟ್ಟಷ್ಟೆ ಉಂಡರಾಯಿತು."

"ಕಳೆ ತುಂಬಿ ಹೋಗಿದೆ. ನಾವು ಕೀಳದಿದ್ದರೆ ಮಾದೇವ ಏನು ಕೊಟ್ಟಾನು ? ತಪ್ಪು ನಮ್ಮದೇ ಆಗುತ್ತದೆ."

"ಆದರೂ ಸಹ ..." ಮುಂದೆ ಏನೋ ಹೇಳಲು ತೊಡಗಿ ಸುಮ್ಮನಾದಳು ಕಾವೇರಿ.

ಗಂಭೀರ ಮುಖಮುದ್ರೆಯಲ್ಲಿ ಶುಷ್ಕ ನಗುವನ್ನು ಸೂಸಿ ನುಡಿದಳು ಪೊನ್ನು "ಹಾಗೆಲ್ಲ ಯೋಚಿಸುತ್ತ ಕುಳಿತರೆ ಆಗುತ್ತದೆಯೇ ಅವ್ವಾ? ಮಾಡುವ ಕೆಲಸ ಮಾಡಲೇ ಬೇಕಲ್ಲ? ಅದರಲ್ಲೂ ಸಕಾಲದಲ್ಲಿ ಮಾಡದಿದ್ದಲ್ಲಿ ಮಾಡಿಯೂ ಪ್ರಯೋಜನವಿಲ್ಲ. ನಡೆಯುವಷ್ಟು ಕಾಲ ನಡೆಯಲಿ ಬಿಡಿ. ನಮಗೇನೂ ಆಗುವುದಿಲ್ಲ."

"ನಮ್ಮ ಎದೆಯಲ್ಲಿ ಇಷ್ಟು ಧೈರ್ಯವಿರುವುದೂ ಸಹ ಒಳ್ಳೆಯದೇ" ಪೂವಿ ಮುಗುಳು ನಕ್ಕಳು.

"ಈ ಕಾಲದಲ್ಲಿ ಔಷಧೋಪಚಾರ ದೊರೆಯುವುದಿಲ್ಲ ...ಕಾಯಿಲೆ ಬಿದ್ದರೆ ಕಷ್ಟ. ನನಗೆ ಅದೇ ಭಯ." ಒಂದೆರಡು ಘಳಿಗೆ ಸುಮ್ಮನಿದ್ದು ನಂತರ

ಮುಂದುವರಿದಳು "ಜಂಬೂರು ಶೇಷು ಮಗ ಗಣಪತಿ ಮಲೇರಿಯಾದಿಂದ ತೀರ ಸುಸ್ತಾಗಿದ್ದಾನಂತೆ. ಹೋಗಿ ನೋಡಿಕೊಂಡು ಬರುವ ಉದ್ದೇಶವಿತ್ತು. ಮನೆಯಲ್ಲಾರೂ ಇರಲಿಲ್ಲವಾದುದರಿಂದ ಸುಮ್ಮನಾದೆ."

"ನೆರೆಮನೆಯ ಮಾಚಮ್ಮನಿಗೆ ಹೇಳಬಹುದಾಗಿತ್ತು."

"ಅವಳು ತಾನೆ ಸುಖವಾಗಿದ್ದಾಳೆಯೆ? ಇನ್ನೂ ನರಳುವುದು ತಪ್ಪಲಿಲ್ಲ."

"ಬಿಡಿ; ಬೆಳಿಗ್ಗೆ ಹೋಗಿ ನೋಡಿಕೊಂಡು ಬರೋಣ."

ಪೊನ್ನು ಪೂವಿಯರು ಒಳಹೋಗಿ ಕೈಕಾಲು ತೊಳೆದುಕೊಂಡು ಬಂದರು. ಮುಖಬಿಂಬದಲ್ಲಿ ಕಾಣಿಸುತಿದ್ದ ಆಯಾಸ ಮಾಯವಾಗಿತ್ತು. ಕಣ್ಣುಗಳಲ್ಲಿ ಮಿಂಚುತಿದ್ದ ಸಹಜಭಾವದ ದೀಪ್ತಿ ಶ್ರದ್ಧೆ ಅನುಭಾವದ ತರಂಗಗಳಿಗೆ ಬಡಿದು ಮೂಡಿದಂತಿತ್ತು.

"ಯುದ್ಧರಂಗದ ಕಲುಷಿತ ವಾತಾವರಣದಿಂದ ಕಾಯಿಲೆ ಕಸಾಲೆಗಳು ಹುಟ್ಟಿಕೊಳ್ಳುತ್ತಿವೆ. ಮನೋದಧಿಯ ವಿಚಿತ್ರ ಕಲ್ಪನೆ.... ನಿಜ ಜೀವನದ ಕಟುಸತ್ಯ ಒಂದಕ್ಕೊಂದು ಪೂರಿತವಾಗಿವೆ. ಅಂತಲೇ ಈ ಹಠಾತ್ಪರಿಣಾಮದಿಂದ ಉದ್ದೇಶ ಸಾಧನೆಗೆ ಅವಕಾಶವೇ ದೊರೆಯುತ್ತಿಲ್ಲ" ಎಂದಳು ಸ್ವಾಮಿನಿ.

"ಏಕೆ ಅಷ್ಟು ಕಳವಳ ? ನಿಮ್ಮ ಉದ್ದೇಶವು ಸುಭದ್ರವಾದ ತಳಹದಿಯ ಮೇಲೆಯೇ ನಿಂತಿದೆ ಬಿಡಿ; ಖಂಡಿತ ಈ ಲೋಕಕ್ಕೆ ನೀವು ಅತೀತ ವ್ಯಕ್ತಿಗಳು. ಆತ್ಮವಿಮರ್ಶೆ ಎಂಬುದು ಎಲ್ಲಕಡೆಯೂ ಲಭ್ಯವಲ್ಲ. ಅಂದಿಂದಿಗೂ ನಾವು ಕಂಡುಕೊಂಡಿರುವ ಸೃಷ್ಟಿಯ ಸತ್ಯ ಸಾಮಾನ್ಯವಾದುದಲ್ಲ. ಅದನ್ನು ಅರ್ಥೈಸುವುದೂ ಕಷ್ಟವೇ." ನುಡಿ ಹೊರಬಿದ್ದಾಗ ಕಂಠಸ್ವರ ನಸು ಕಂಪಿಸಿತು. ಪೂವಿ ಮುಂದುವರಿದಳು "ವಿಚಕ್ಷಣೆ ಎಂಬುದು ಅಗೋಚರವಲ್ಲ. ಬ್ರಿಟನ್ ವ್ಯಾಪಾರದ ನೆವದಲ್ಲಿ ಕಡಲನ್ನು ದಾಟಿ ಬಂದಾಗ ಚೀನಾ ಭಾರತ ಗಳು ಅದರ ಹಿನ್ನೆಲೆಯಲ್ಲಿದ್ದ ಪಾಪ ವಿಶೇಷವನ್ನು ಅರಿಯಲಿಲ್ಲ. ಜಪಾನು ಅರಿತುಕೊಂಡಿತು. ಅದರ ಬೌದ್ಧಿಕ ವಿಶೇಷ ಇಂದು ಜಗದ್ವಲಯದಲ್ಲಿ ಸಮಾನ ಗೌರವವನ್ನು ಸಂಪಾದಿಸಿಕೊಟ್ಟಿದೆ."

ವೃದ್ಧ ಜನನಿ ಪ್ರಶಂಸೆಯನ್ನು ಗಮನಿಸಿದರೂ ಗಮನಿಸದಂತೆ ಸುಮ್ಮನೆ ಮುಗುಳುನಕ್ಕಳು. ಚಿದಾಕಾಶದಲ್ಲಿ ಚಲಿಸುತಿದ್ದ ಯೋಚನೆಯಲೆ ತರಂಗ ತರಂಗವಾಗಿ ಹರಿದಾಡುತಿತ್ತು.

ಪೂರ್ವಗಗನದಂಚಿನಲ್ಲಿ ಅಮೃತಾಂಶುವಿನ ಅಭ್ಯುದಯವಾಯಿತು. ಹಾಲ್ಗಡಲೇ ಹರಿದು ಬಂದಂತೆ, ರಜತಾದ್ರಿಯೇ ದ್ರವೀಭೂತವಾದಂತೆ ರಂಜಿತ ವಾದ ಧವಳಾಮೃತಧಾರೆಯಲ್ಲಿ ಭುವನಮಂಡಲ ಆಪ್ಲಾವಿತವಾಯಿತು. ಗೂಡುಗಳಲ್ಲಿ ಸುಖನಿದ್ದೆಯಲ್ಲಿದ್ದ ಪಾರಿವಾಳಗಳು ಬೆಳಗಾಯಿತೇನೋ ಎಂಬ ವಿಭ್ರಮೆಯಿಂದ ಕಣ್ತೆರೆದು ಮೆಲುದನಿಯಲ್ಲಿ ಮರ್ಮರಿಸುತ್ತ ರೆಕ್ಕೆಗಳನ್ನು ಬಡಿಯತೊಡಗಿದುವು....ಆ ಮುಹೂರ್ತದಲ್ಲಿ ಸರಿದು ಹೋದ ಕತ್ತಲೆಯ ಕಾಳಿಕೆ ಇನ್ನೆಷ್ಟು ಪರಿತಾಪ ಹೊಂದಿದಳೊ....

ಸಂಧ್ಯಾದೀಪ ಉರಿಯುತಿದ್ದರೂ ಶಿಖೆಯಲ್ಲಿ ಕುಡಿ ಕಟ್ಟಿದುದರಿಂದ ಬೆಳಕು ಮಂದಮಂದವಾಗಿತ್ತು. ಕಡ್ಡಿಯಿಂದ ಕುಡಿಯನ್ನು ಕೆಡವಿ ಜ್ಯೋತಿ ಯನ್ನು ಉಜ್ವಲಗೊಳಿಸಿ ಒಳಹೋದಳು ಪೊನ್ನು. ಪೂವಿ ಮಗುವಿನೊಡನೆ ಹಿಂಬಾಲಿಸಿದಳು....ಮಕ್ಕಳ ಮುಖದಲ್ಲಿ ಹೊಮ್ಮುತಿದ್ದ ಚಂದನರಾಗ ದಾರಿದ್ರ್ಯದೇವತೆಯ ಕಾರುಣ್ಯಾಶ್ರಯದಲ್ಲಿ ದಿನೇ ದಿನೇ ನಶಿಸುತಿತ್ತು. ಕರೆಯುವ ಹಸುವಿಗೆ ಆರೈಕೆ ಸಾಲದೆ ಹಾಲು ಬತ್ತಿರುವುದೊಂದಾದರೆ ಮಲೇ ರಿಯಾ ಕಪಿಮುಷ್ಟಿ ಇನ್ನೊಂದು. ಮಕ್ಕಳಗೋಳು ಹೃದಯವನ್ನು ಭೈರಿಗೆ ಯಂತೆ ಕೊರೆಯುವುದು....ಮನವನ್ನು ಗಾಣಕ್ಕೆ ಕೊಟ್ಟಂತೆ ಹಿಂಡುವುದು.

ಪ್ರಯತ್ನಿಸಿದರೂ ರಾತ್ರಿ ಕಣ್ತುಂಬ ನಿದ್ದೆ ಬರುವುದಿಲ್ಲ. ಶಾರೀರದ ದುರ್ಬಲತೆ ನಿದ್ದೆಗೆ ಶರಣಾದರೂ ಮಾನಸಿಕ ಅಶಾಂತಿ ಅದನ್ನು ಅನುಭವಿಸಲು ಅವಕಾಶ ಕೊಡುವುದಿಲ್ಲ. ಏನೋ ಒಂದು ರೀತಿಯಲ್ಲಿ, ಮತ್ತೆ ಮೋಹನಕಾರೀ ಜಡಿಮೆಯಂತೆ, ಯೋಚನಾ ಜಗತ್ತಿನ ಅಲಸವಿಲಸತೆಯಿಂದ ಅಭಿಭೂತ ವಾದಂತೆ ವೈಮನಸ್ಯ ಸನ್ನಿವೇಶದಲ್ಲಿ ಹೊತ್ತು ತಾನೇ ತಾನಾಗಿ ಉರುಳು ವುದು. ಬೆಳಕು ಮೂಡಿ ಕಣ್ತೆರೆದಾಗ ನಿದ್ದೆ ಬಂದಿತ್ತೇನೋ ಎಂದುಕೊಳ್ಳು ವುದು ನಿತ್ಯವಾಡಿಕೆಯಾಗಿದೆ.

ಒಳಗಡೆ ಅಗ್ನಿಸಾಕ್ಷಿಯಾಗಿ ಊಟದ ಹಂಚಿಕೆ ನಡೆದಿತ್ತು. ಬೆಳಗಿನ ಖಾದ್ಯ ಸ್ವಲ್ಪ ಉಳಿಸಿದ್ದು, ಅದರಲ್ಲೇ ತುತ್ತಿನ ವಿನಿಯೋಗ ನಡೆಸಿದಳು ಪೂವಿ. ಪ್ರತಿತಿಂಗಳೂ ಅಂಗಡಿಗೆ ಪಾವತಿಯಾಗುತಿದ್ದ ಹಣ ನಾಲ್ಕಾರು ತಿಂಗಳಿಂದ ನಿಂತು ಹೋಗಿದ್ದರಿಂದ ದವಸ ಧಾನ್ಯ ಬರುವುದು ನಿಂತುಹೋಗಿದೆ. ಕಾವೇರಿ ಒತ್ತೆ ಇಟ್ಟ ಕಡಗದ ಬೆಲೆಗಿಂತಲೂ ಮಿಕ್ಕಿಹೋಯಿತೆಂದು ಅಂಗಡಿ

ಕಾರನ ಗಲಾಟೆ....ನಿಜವಾಗಿಯೂ ಅಷ್ಟಾಗಿರಲಿಲ್ಲವಾದರೂ ಅದರಲ್ಲಿ ಆದಷ್ಟು ನುಂಗುವ ಹೇಯ ಮನೋವೃತ್ತಿ ಅವನದು. ಸ್ವಾಮಿನಿ ಇನ್ನೊಂದು ಒಡವೆಯನ್ನು ಗುಪ್ತವಾಗಿ ಅವನಲ್ಲಿಟ್ಟು ಮಕ್ಕಳಿಗೆ ಉಣಿಸಿಡುತಿದ್ದುದು ಪ್ರಾಯಶಃ ಗೃಹಿಣಿಯರಿಗೆ ತಿಳಿದೇ ಇರಲಿಲ್ಲವೇನೋ...

ಪಶ್ಚಿಮಾಕಾಶದ ನೀಲಪಟಲದಲ್ಲಿ ಅರ್ಧಚಂದ್ರವು ಬೆಳಗುತಿದ್ದ.

ಮಾದೇವನ ದೇಗುಲದಲ್ಲಿ ಮಹಾಮಂಗಳಾರತಿಯ ಘಂಟಾರವ ಸಂಭ್ರಮ ಘೋಷವು ಕರ್ಣಪಟಲಗಳ ಮೇಲೆ ಪ್ರತಿಧ್ವನಿಸಿತು.... ಕಾವೇರಿ ಇಲ್ಲಿಂದಲೇ ಕರಗಳನ್ನು ಜೋಡಿಸಿಕೊಂಡು ಅತ್ಯಂತ ದೈನ್ಯತೆಯಿಂದ ಹೇಳಿಕೊಂಡಳು,

"ನಾವು ನಿನ್ನನ್ನೆಂದೂ ಮರೆಯಲಿಲ್ಲ ಮಾದೇವ ! ನೀನು ಮಾತ್ರ ನಮ್ಮನ್ನು ಮರೆತು ಬಿಟ್ಟಿದ್ದೀ ! ಅದೇ ನಮಗೆ ಸಂಕಟ."

ನೀರವತಾ ಮೋಹಕತೆಯಲ್ಲಿ ಗಂಟೆಯ ಮನೋರಮರವ ಮತ್ತೆಮತ್ತೆ ಮೊಳಗುತಿತ್ತು.

ಶುಕ್ಲವಸನಧಾರಿಣೀ ಕಾವೇರಿ ಐಮರದ ಮೇಲೆ ಕುಳಿತುಕೊಂಡಳು. ನೆಟ್ಟನೋಟ ಸುತ್ತಮುತ್ತ ಹರಿದಾಡಿತು. ಆ ಶೀರ್ಣಿತ ಗೃಹ ಹಲವಾರು ವರ್ಷಗಳಿಂದ ಸುಣ್ಣಗಾರೆಗಳನ್ನು ಕಂಡಿರಲಿಲ್ಲ. ಗಾರೆ ಅಲ್ಲಲ್ಲಿ ಕಳಚಿ ಬಿದ್ದು ಗೋಡೆಗಳು ಹಳ್ಳ ತಿಟ್ಟುಗಳಾಗಿವೆ. ಐಮರದ ಬದಿಯಲ್ಲಿ ನೆಲ ಕಿತ್ತುಹೋಗಿ ಅದರ ಸಣ್ಣ ಬಿರುಕಿನಿಂದ ಹಸುರು ಸೂಸುವ ಹುಲ್ಲು ಹಣಿಕಿ ನೋಡುತ್ತಾ ಜೀವನೀಶಕ್ತಿಯ ವಿಜಯ ಘೋಷಣೆ ಮಾಡುತಿತ್ತು. ಕಾಲಪುರುಷನ ಮಹಾ ಮಹಿಮೆಯಲ್ಲಿ ಮೂಡಿ ಬಂದ ನಾನಾ ಅವಸ್ಥೆಗಳು ಒಂದು ಸುಸ್ಥಿತಿಗೆ ಬರಬೇಕಾದರೆ ಇನ್ನೆಷ್ಟು ಕಾಲವೋ.. ಹೇಗೆ ಆರ್ಥಿಕ ಸಮಸ್ಯೆಯನ್ನು ಬಗೆ ಹರಿಸಿಕೊಳ್ಳಬೇಕೋ ಅರ್ಥವಾಗುತ್ತಿಲ್ಲ. ದುರ್ವಹ ಚಿಂತಾಭಾರವನ್ನು ಹೊರಲಾರದ ದೇಹ ದುರ್ಬಲವಾಗುತಿತ್ತು. ಜಾನಿಕೆಯ ಉತ್ಕಟವೇಗ ಚಿತ್ತಶಾಂತಿಯನ್ನು ಕಲಕುವುದರಿಂದ ಯೋಚನೆಯಲೆಗಳೂ ಛಿದ್ರವಿಚ್ಛಿದ್ರವಾಗುತ್ತವೆ. ಆದರೂ ಆ ಅಪೂರ್ವ ಮುಖಭಂಗಿಯಲ್ಲಿ ಎಂತಹ ಆತ್ಮದಾನದ ದೃಢತೆ...?"

ವೇಳೆ ಕಳೆಯಿತು. ದಿನಚರಿಯ ಪ್ರಕರಣ ಮುಗಿಯುವುದರಲ್ಲಿದೆ.

ಒಳಗಡೆ ಅವರಿಬ್ಬರೂ ಪಾತ್ರೆಗಳನ್ನು ತೊಳೆದು ಕಸವುಡುಗುವುದರಲ್ಲಿ ದ್ದಾರೆ. ಚಿಕ್ಕವರಿಬ್ಬರೂ ಆಗಲೇ ಹಾಸಿಗೆ ಸೇರಿದ್ದು....ನಿತಾಂತ ಶಾಂತಿಯಲ್ಲಿ ಗೃಹವಲಯ ವಿಶ್ರಮಿಸಿತ್ತು. ಚಿಟ್ಟೆ ಒಲೆಯ ಬಳಿ ಬೆಚ್ಚಗೆ ಕುಳಿತಿದ್ದನೋ ಏನೋ...ಹೊರಗಡೆ ಒಬ್ಬಳೇ ಕುಳಿತು ಬೇಸರ ಹೊಂದಿದ ಕಾವೇರಿ ಕರೆದಳು.

"ಚಿಟ್ಟೇ !"

"ಬಂದೇ ಅವ್ವಾ !"

ಅಲ್ಲಿಂದಲೇ ಎಳೆದನಿಯಲ್ಲಿ ಉತ್ತರಿಸಿದ ಚಿಟ್ಟೆ.

"ಬಾಪ್ಪಾ, ಅಲ್ಲೇನು ಮಾಡುತ್ತಿ ?"

ಚಿಟ್ಟೆ ಎದ್ದು ಬಂದ. ಕಣ್ಣು ಮುಖಗಳಲ್ಲಿ ನಿದ್ದೆಯ ಮಂಪರ ತುಂಬಿ ಬಂದಿತ್ತು, ಆಕಳಿಸುತ್ತ ಮೈಗೆ ಮೈ ಹಚ್ಚಿ ನಿಂತ. ಮೈದಡವಿ ಅಪ್ಪಿಹಿಡಿದು ಕೊಂಡು ಕೇಳಿದಳು ಕಾವೇರಿ "ಮಲಗುವುದಿಲ್ಲವೇ ? ಒಂಬತ್ತು ಗಂಟೆಯಾಯಿತು ?"

ಆ ಮಾತು ಹೊರಬಿದ್ದೊಡನೆ ಗಮನ ಜೂಲಿಯ ಕಡೆ ಹರಿಯಿತು. ಒಮ್ಮೆ ಸುತ್ತಲೂ ನೋಡಿ ತಟ್ಟನೆ ಕೇಳಿದ ಚಿಟ್ಟೆ "ಜೂಲಿ ಎಲ್ಲಿ ? ಇನ್ನೂ ಒಳಗೆ ಬಂದಿಲ್ಲವಲ್ಲಾ ?"

ಅಷ್ಟೇ ನಿರಾಸಕ್ತಿಯಿಂದ ನುಡಿದಳು ಜನನಿ "ಎಲ್ಲೋ ಹೊರಗಡೆ ಇರಬಹುದು."

"ಜೂಲೀ....!" ಉಚ್ಚಸ್ವರದಲ್ಲಿ ಕೂಗಿದ ಚಿಟ್ಟೆ.

ಎಲ್ಲೂ ಅದರ ಸುಳಿವಿಲ್ಲ. ಕಾದುನೋಡಿ ಮತ್ತೆ ಎಳೆದನಿ ಹರಿಯಿತು. "ಜೂಲೀ....ಜೂಲೀ !"

"ದೇಹಬಾಧೆ ಕಳೆಯಲು ಹೋಗಿರಬಹುದು, ಬಿಡು."

ಪೊನ್ನು ಪೂವಿಯರು ಹಿಂದಣ ಕದ ಮುಚ್ಚಿ ಒಳ ಬಂದರು. ಪ್ರಶ್ನ ಪೂರ್ಣನೋಟ ಅವರೆಡೆಗೂ ಹರಿಯಿತು. ಮೌನಭಾಷೆಯಲ್ಲಿ ದೃಷ್ಟಿಗಳು ಮಾತಾಡಿಕೊಂಡುವು. ಯಾರಿಗೂ ಆ ಮುಹೂರ್ತದಲ್ಲಿ ವಿಶೇಷವೆನಿಸ ದಿದ್ದರೂ ಎಲ್ಲಿಗೆ ಹೋಗಿರಬಹುದೆಂಬ ಯೋಚನೆಯಂತೂ ಮೂಡಿತು. ಸ್ತ್ರೀಸುಲಭ ಭೀರುತೆಯು ವಿದ್ಯುದ್ವೇಗದಿಂದ ಮನಸ್ಸಿನ ಅಸ್ತಿತ್ವವನ್ನು

ಅಲುಗಿಸ ಹತ್ತಿತು. ಆದರೂ ನಸು ಧೈರ್ಯವನ್ನು ಪ್ರದರ್ಶಿಸುತ್ತ ನುಡಿದಳು ಕಾವೇರಿ,

"ಅದೆಲ್ಲಿ ಹೋದೀತು ? ಕಳವಳವೇಕೆ ?"

ನುಡಿಯೇನೋ ಹೊರಬಿತ್ತು. ಆದರೆ ಮನೋ ಜಗತ್ತಿನಲ್ಲಿ ಅರ್ಥ ಭರಿತವಾದ ಭಯ–ಕಳವಳಗಳು ಆಗಲೇ ಅಸ್ತಿತ್ವ ಪಡೆದಿದ್ದುವು. ಎದ್ದು ಹೋಗಿ ಮನೆಯೊಳಗೆಲ್ಲಾ ಒಂದು ಸುತ್ತು ಹಾಕಿ ಬಂದಳು. ಚಿಟ್ಟೆ ಸೆರಳ ನಂತೆ ಹಿಂಬಾಲಿಸಿದ.

"ಜೂಲೀ....! ಜೂಲೀ....!

ಧ್ವನಿ ಹಲವಾರು ಬಾರಿ ಮೊಳಗಿತು.

ಮುಂದಣ ಜಗಲಿ, ಹೊರಗಡೆ ಅಂಗಳ, ಹೂದೋಟ ಎಲ್ಲೆಡೆಯೂ ನೋಡಿದ್ದಾಯ್ತು. ಪೂವಿ, ಪೊನ್ನಮ್ಮ ಹುಡುಕುವಿಕೆಯಲ್ಲಿ ಪಾಲ್ಗೊಂಡರು. ಕರೆ ಮೇಲಿಂದ ಮೇಲೆ ಹೊಮ್ಮಿತು. ಚಿಟ್ಟೆ ಆತಂಕಪೂರ್ಣ ಧ್ವನಿಯಲ್ಲಿ ಅಂದ "ದಿನವೂ ಇಲ್ಲೇ ಮಲಗಿರುತಿತ್ತು ಅವ್ವಾ ! ಈ ಹೊತ್ತಿನಲ್ಲಿ ಅದು ಇನ್ನೆಲ್ಲಿ ಹೋದೀತು ?"

"ನಾಯಿಗಳು ನಮ್ಮಂತಲ್ಲ. ಕತ್ತಲೆಯಲ್ಲೂ ನೋಡಬಲ್ಲವು".

ವೃದ್ಧ ಜನನಿ ಸಾಂತ್ವನ ಪೂರ್ವಕವಾಗಿ ನುಡಿದಳು. ಹಾಗೊಂದು ಸಮಾಧಾನ ಹೇಳದಿದ್ದರೆ ಅವನು ನಿದ್ದೆ ಮಾಡುವುದಿಲ್ಲವೆಂಬುದು ಗೊತ್ತು. ಆದರೂ ಅದು ಹಾಗೆ ತಪ್ಪಿಸಿಕೊಳ್ಳುತ್ತಿರಲಿಲ್ಲವಾದ್ದರಿಂದ ಏನೋ ಒಂದು ಬಗೆಯ ಒಡಲ ಸಂಕಟ....ಏನು ಮಾಡುವುದೆಂಬ ಯೋಚನೆ....ಏನಾಗಿ ದೆಯೋ ಎಂಬ ಚಿಂತೆ...

ಚಿಟ್ಟೆ ಜಗಲಿಯಂಚಿನಲ್ಲಿ ನಿಂತು ಗದ್ಗದ ಸ್ವರದಲ್ಲಿ ಪುನಃಪುನಃ ಕರೆದ. ದನಿ ವನದೇಶದ ನಿಶ್ಶಬ್ದತೆಯನ್ನು ಸೀಳಿಕೊಂಡು ಧೀಂಕಿಟ್ಟಿತು. ಉತ್ತರ ಮಾತ್ರ ಎಲ್ಲಿಂದಲ್ಲೂ-ಯಾರಿಂದಲೂ ಕೇಳಿಬರುತ್ತಿಲ್ಲ. ನಿತಾಂತ ಶಾಂತಿ ಯಿಂದ ಕೂಡಿದ ಹೊರಜಗತ್ತಿನಲ್ಲಿ ಕಗ್ಗತ್ತಲು ಹೆಪ್ಪುಗಟ್ಟಿತ್ತು. ಗಿಡ ಮರಗಳ ರೂಪುರೇಷೆ ಅಸ್ಪಷ್ಟವಾಗಿ ಕಾಣಿಸುತಿದ್ದವು. ನಭೋಮಂಡಲದಲ್ಲಿ ಅಗಣಿತ ಅಸ್ಖಲಿತ ತಾರಾಕೋಟಿ. ನಿರ್ಜಲ ನಿರ್ಮಲ ಮುಗಿಲುಗಳ ರಾಶಿರಾಶಿ.

"ಹೊತ್ತು ಮೀರಿದೆ. ಈಗ ಇನ್ನೇನೂ ಮಾಡುವಂತಿಲ್ಲ. ಬೆಳಗ್ಗೆ ನೋಡೋಣ." ಎಂದಳಾ ಜನನಿ.

"ರಾತ್ರಿ ಬಂದರೂ ಬರಬಹುದು." ವಿಜಾತೀಯವಾದ ಧ್ವನಿಯಲ್ಲಿ ನುಡಿದಳು ಪೊನ್ನಮ್ಮ.

"ಹೌದು ಮಗೂ ; ಈಗ ಮಲಗು. ಬೆಳಗ್ಗೆ ನೋಡೋಣ; ತಾಳ ಗಟ್ಟೆಯ ಕಡೆ ಹೋಗಿದ್ದರೂ ಇರಬಹುದು." ಪೂವಿ ಮಗನಿಗೆ ಸಮಾಧಾನ ಮಾಡಲೆಂದೇ ಆ ನುಡಿಯನ್ನು ಹೊರಹಾಕಿದಳು. ಆದರೆ ಅದೆಲ್ಲವನ್ನೂ ಮೀರಿ ಚಿಟ್ಟೆಯ ಚಿತ್ತ ಶೋಕವ್ಯಾಕುಲತೆಯಿಂದ ತುಂಬಿಹೋಗಿತ್ತು. ಅದ ರೊಂದಿಗೆ ಅತೀವ ಗೆಳೆತನ ಬೆಳೆಸಿದ್ದು- ಅದಿಲ್ಲದ ಪ್ರಪಂಚ ಶೂನ್ಯವಾಗಿ–ವ್ಯರ್ಥವಾಗಿ–ಅಸಾರ್ಥಕವಾಗಿ ತೋರಿತು. ದುಃಖಿತ ಕಂಠದಿಂದ ಕರೆದ "ಜೂಲೀ... ಜೂಲೀ..."

ಸ್ತ್ರೀಮಂಡಲಿ ಸಂತೈಸಿತು. ಚಿಟ್ಟೆ ಅಳುತ್ತಳುತ್ತಲೇ ನಿದ್ದೆಹೋದ. ಈಗ ಬರಬಹುದು...ಇನ್ನೊಂದು ಘಳಿಗೆಗೆ ಬರಬಹುದು... ಎಂಬ ಚಿಂತನೆ ಯಿಂದ ಕಿವಿಗಳು ನಿಮಿರಿದ್ದುವು. ಎಷ್ಟೇ ಆಲೈಸಿದರೂ ಅದರ ಬೊಗಳುವಿಕೆ ಕಿವಿಗೆ ಬೀಳುತ್ತಿಲ್ಲ. ಒಮ್ಮೆ ಮಂಪರ....ಇನ್ನೊಮ್ಮೆ ನಿದ್ದೆ....ಮತ್ತೊಮ್ಮೆ ಚಿಂತೆ ರಾತ್ರಿ ಹೇಗೆ ಉರುಳಿತೋ ತಿಳಿಯದು....ಅಂತೂ ಬೆಳಗಿನ ಝಾವದ ಮಂದ ಮಧುರ ಶೀತಲವಾಯು ತೀಡಗೊಡಗಿತು. ಕಾವೇರಿ ಎದ್ದು ಹಾಸಿಗೆಯ ಮೇಲೆ ಕುಳಿತುಕೊಂಡಳು. ನೋಟ ಕಿಟಕಿಯಲ್ಲಿ ತೂರಿ ನಕ್ಷತ್ರಖಚಿತ ಆಗಸ ದಲ್ಲಿ ನೆಟ್ಟಿತು. ಎದೆಯಾಳದಲ್ಲಿ ಬಿಸಿಯುಸಿರು ಎಣೆಯಿಲ್ಲದೆ ಹರಿದಾಡುತಿತ್ತು.

ಆಗೊಮ್ಮೆ ಈಗೊಮ್ಮೆ ಕೋಳಿಗಳು ಕೂಗುತ್ತಿವೆ. ನೆರೆಮನೆಯಂಗಳ ದಲ್ಲಿ ನಾಯಿಗಳು ಆಗಾಗ ಬೊಗಳುತ್ತಿವೆ. ಆದರೆ ಜೂಲಿಯ ಧ್ವನಿ ಎಲ್ಲೂ ಕೇಳಿಸುತ್ತಲೇ ಇಲ್ಲ....

"ಏಕೆ ಎದ್ದಿರಿ ಅವ್ವಾ !"

"ನಿದ್ದೆ ಬರಲಿಲ್ಲ...." ಮನಸ್ಸು ನೀರುಂಡ ಅರಳೆಯಂತಾಗಿತ್ತು–ಜನನಿ ನಿಡಿದಾದ ಉಸಿರು ಬಿಟ್ಟಳು.

"ನಾನು ಆಗಿನಿಂದಲೂ ಆಲೈಸಿದೆ. ಜೂಲೀ ಧ್ವನಿ ಎಲ್ಲೂ ಕೇಳಿಸುತ್ತಿಲ್ಲ. ನಿಮಗೇನಾದರೂ ಕೇಳಿಸಿತೇ ?"

"ಇಲ್ಲ....ಏನಾಯಿತೋ ಏನೋ...."

"ಯಾರಾದರೂ ಕಟ್ಟಿರಬಹುದೇನೋ" ತನ್ನ ಅಭಿಪ್ರಾಯವನ್ನು ಹಾಸಿಗೆಯಿಂದಲೇ ಹೊರಹಾಕಿದಳು ಪೊನ್ನಮ್ಮ.

"ಹಾಗಾಗಿದ್ದರೆ ಪರವಾಯಿಲ್ಲ ; ಬಿಚ್ಚಿದಾಗ ಬಂದೀತು."

"ಇನ್ನೇನಾಗಿರಲು ಸಾಧ್ಯ ? ಅದು ಹೊರಗಡೆ ಎಲ್ಲೂ ನಿಲ್ಲುವುದಿಲ್ಲ."

"ನನಗೂ ಅದೇ ಬಗೆಯ ಶಂಕೆ."

"ಅದಿದ್ದರೆ ಮನೆಯಲ್ಲಿ ಒಬ್ಬ ಗಂಡಸಿದ್ದಷ್ಟು ಧೈರ್ಯ...ಸಧ್ಯ ಹಿಂದಿರುಗಿದರೆ ಸಾಕಾಗಿದೆ."

ಜೂಲಿ ಸುಮ್ಮಸುಮ್ಮನೆ ಎಲ್ಲೂ ಉಳಿಯುವುದಿಲ್ಲ. ನಿಜವಾಗಿಯೂ ಇದರಲ್ಲಿ ಏನೋ ಒಂದು ಸಕಾರಣವಿದೆ."

"ಖಂಡಿತ...."

"ಅದಕ್ಕೇನೂ ಅಪಾಯವಾಗದಿದ್ದರೆ ಸಾಕು."

ಇದೇ ಪ್ರಕಾರ ಸಾಗಿತು ಮಾತುಕತೆ- ಅನಂತರ ವ್ಯವಸಾಯರಂಗ ದಿಂದ ಮಿಲಿಟರಿ ಕ್ಷೇತ್ರದವರೆಗೆ ಮನೆಮಾರಿನಿಂದ ಹಿಡಿದು ರಾಜಕೀಯರಂಗ ಮತ್ತು ಭವಿತವ್ಯದವರೆಗೆ ಮಾತುಕತೆ ನಡೆದುವು....ಅಂತಿಮವಾಗಿ ಮುಂಬೆಳಕು ಮೂಡಣದಲ್ಲಿ ಮೂಡಿದಾಗ ಮೂವರೂ ಎದ್ದು ಹೊರಗಡೆ ಬಂದರು. ಅಂಗಳ ದಲ್ಲಿ–ಕೊಟ್ಟಿಗೆಯಲ್ಲಿ ಎಲ್ಲಿ ಹುಡುಕಾಡಿದರೂ ನಾಯಿಯ ಸುಳಿವಿಲ್ಲ. ಬೆಳ ಗಾಗೆದ್ದ ಮೇಲೆ ಚಿಟ್ಟಿ ಮತ್ತೆ ಮುಸು ಮುಸು ಅಳಲು ಆರಂಭಿಸಿದ. ಅವನನ್ನು ಸಂತೈಸುತ್ತ ಮಾದೇವನ ದೇವಸ್ಥಾನ, ಆದರಾಚೆಯ ದಿನಸಿ ಅಂಗಡಿ, ಕೋಆಪರೇಟಿವ್ ಸೊಸೈಟಿ, ನೆರೆಯ ಮನೆಗಳು, ಗದ್ದೆ, ತೋಟ, ಕೆಳಮಟ್ಟಿ, ಬಯಲು ಹೀಗೆ ಒಂದೊಂದನ್ನೂ ಸುತ್ತಾಡಿ ಬಂದಳು ಕಾವೇರಿ. ಚಿಟ್ಟಿ ಅಜ್ಜಿಯ ಕೈಹಿಡಿದುಕೊಂಡು ಎಳೆದನಿಯಲ್ಲಿ ಹೆಸರಿಡಿದು ಕರೆಯುತ್ತಲೇ ಸುತ್ತಾಡಿದ. ಎಲ್ಲೆಲ್ಲಿ ಹುಡುಕಿದರೂ ಜೂಲಿಯ ಸುಳಿವಿಲ್ಲ. ಏನಾಯಿ ತೆಂಬುದೂ ಹೊಳೆಯದು. ಯೋಚಿಸಿ ಯೋಚಿಸಿ ಮಸ್ತಿಷ್ಕ ಮಂಕಾಯಿತು.

ತೀವ್ರ ಕಳವಳ–ಕಾತರತೆಯಿಂದ ಕೂಡಿದ ಹಗಲು ಉರುಳಿತು.

ಸಂಜೆಯ ಹೊತ್ತಿನಲ್ಲಿ ಇದ್ದಕ್ಕಿದ್ದಂತೆಯೇ ಮನೆಯ ಬಾಗಿಲಿನಲ್ಲಿ ತಾಳಗಟ್ಟಿ ಮಂಜುನಾಥ ಪ್ರತ್ಯಕ್ಷನಾದ. ತಾರುಣ್ಯದ ತೀವ್ರ ಹುಮ್ಮಸು

ನರನಾಡಿಗಳಲ್ಲಿ ಹರಿದಾಡುತಿತ್ತು, ಬಂದವನೇ ಕೇಳಿದ "ನಿಮ್ಮ ನಾಯಿ ಇಲ್ಲವಂತೆ, ಹೌದಾ ?"

"ಹೌದಪ್ಪ, ನಿನ್ನೆಯಿಂದ ಕಾಣಿಸುತ್ತಲೇ ಇಲ್ಲ." ಧ್ವನಿ ಆತಂಕಪೂರ್ಣ ವಾಗಿ ಹರಿದು ಬಂತು.

"ಹಳ್ಳದಂಚಿನಲ್ಲಿ ಮೊನ್ನೆ ಹುಲಿ ಹೆಜ್ಜೆ ನೋಡಿದ್ದೆ. ಇದೇನಾದರೂ ಆಕಡೆ ಹೋಗಿತ್ತೇ ಹೇಗೆ ?...ನೀವು ಕಟ್ಟಿ ಹಾಕಿದ್ದರೆ ಚೆನ್ನಾಗಿತ್ತು."

"ಜೂಲೀ ಅಷ್ಟು ದೂರ ಹೋಗುವುದೇ ಇಲ್ಲ."

"ನಾಯಿ ವಿಚಾರ ಹೇಳುವುದಕ್ಕಾಗುವುದಿಲ್ಲ....ಬಂದರೆ ಕಟ್ಟಿಹಾಕಿ ಬಿಡಿ."

"ಅದೂ ನಿಜವೇ" ಎಂದುಕೊಂಡಳು ಕಾವೇರಿ ; ಆಕ್ಷಣ ಕ್ರಿಯಾ ಶಕ್ತಿಯೇ ಉಡುಗಿದಂತಾಯಿತು.

"ಸಧ್ಯದಲ್ಲಿಯೇ ನಮ್ಮವರಿಗೆ ಬಿಡುಗಡೆಯಾಗುವ ಸಂಭವವುಂಟು. ಹೇಳಿ ಹೋಗೋಣವೆಂತಲೇ ಬಂದೆ." ಇದ್ದ ಹಲ್ಲುಗಳನ್ನೆಲ್ಲಾ ಒಮ್ಮೆಗೇ ಪ್ರದರ್ಶಿಸಿ ಹೇಳಿದ ಮಂಜುನಾಥ್.

"ಹೌದೇ ? ಹೇಗೆ ತಿಳಿಯಿತು ?"

"ದೇಶಕ್ಕೆ ಸ್ವಾತಂತ್ರ್ಯ ಲಭಿಸುವ ಸಂಭವವಿದೆ !"

"ಅಷ್ಟಾದರೆ ಸಾಕಲ್ಲ, ನಾವು ಪತ್ರಿಕೆ ಓದಿ ಎಷ್ಟು ದಿನಗಳಾದುವೋ. ಯಾವ ವಿಚಾರವೂ ತಿಳಿಯುವುದಿಲ್ಲ."

"ನೋಡೋಣ. ಇದೆಲ್ಲಾ ಉಹಾಪೋಹ. ಇನ್ನೊಂದೆರಡು ವಾರ ಗಳಲ್ಲಿ ಎಲ್ಲಾ ತಿಳಿಯುತ್ತೆ."

"ಸ್ವಾತಂತ್ರ ಲಭಿಸಿದರೆ ಯುದ್ಧಕ್ಕೆ ಕಳುಹಿಸಿರುವ ನಮ್ಮ ರೆಜಿಮೆಂಟನ್ನು ಹಿಂದಕ್ಕೆ ಕರೆಸಿಕೊಳ್ಳಬಹುದಲ್ಲವೇ ?" ಅತ್ಯಂತ ಆಸಕ್ತಿಯಿಂದ ಪ್ರಶ್ನೆ ಹೊರ ಬಿತ್ತು.

ಒಡನೆ ಉಚ್ಚ ಸ್ವರದಲ್ಲಿ ಉತ್ತರಿಸಿದ ಮಂಜುನಾಥ್ "ಇದ್ದರೂ ಇರ ಬಹುದು ನೋಡಿ, ನಮ್ಮವರನ್ನು ಹೇಳಿ ಕೇಳಿ ಕಳುಹಿಸಿದ್ದಾರೆಯೇ ಅವರು? ಎಲ್ಲೆಲ್ಲಿ ನಮ್ಮ ತೀವ್ರ ವಿರೋಧವಿದೆಯೋ ಅಲ್ಲೆಲ್ಲಾ ಬದಲಾವಣೆಯಾಗಲೇ ಬೇಕಲ್ಲ ?...ನೋಡೋಣ."

ಕಾವೇರಿ ಸಮ್ಮತಿಸೂಚಕವಾಗಿ ಸುಮ್ಮನಾದಳು.

ಮುಂದೆರಡು ದಿನಗಳು ಸದ್ದಿಲ್ಲದೆ ಸಂದರೂ ನಾಯಿಯ ಸುಳಿವು ದೊರೆಯಲಿಲ್ಲ.

ಮೂರನೆಯ ದಿನ ಬೆಳಿಗ್ಗೆ ಅವನೇ ಬಂದು ಹೇಳಿದ "ಅವ್ವಾ, ನಿಮ್ಮ ಜೂಲಿ ಹುಲಿ ಪಾಲಾಗಿದೆ ! ಇಲ್ಲೇ ನದೀ ಪಾತ್ರದಲ್ಲಿ-ಹೆಬ್ಬಲಸಿನ ಮರದಡಿ ಅದನ್ನು ತಿಂದು ತಲೆಬಾಲ ಬಿಟ್ಟು ಹೋಗಿದೆ ಹುಲಿ...! ನೀವಿನ್ನೂ ಹುಡುಕುವುದರಲ್ಲಿದ್ದೀರಿ !"

"ಅಯ್ಯೋ, ಶಿವನೇ !"

ಸ್ವಾಮಿನಿಯ ಕಣ್ಣುಗಳಲ್ಲಿ ಕಟ್ಟೆಯೊಡೆದಂತೆ ನೀರು ತುಂಬಿ ಬಳಬಳ ಸುರಿಯಿತು.

"ನಮಗಿದ್ದ ಒಂದೇ ಒಂದು ಗಂಡು ಪಾತ್ರವನ್ನೂ ಭಗವಂತ ಕಿತ್ತುಕೊಂಡನೇ ?"

ಒಳಗಿದ್ದ ಗೃಹಿಣಿಯರು ದನಿಕೇಳಿ ಭಾವೋದ್ವೇಗದಿಂದ ಹೊರಬಂದರು. ಚಿಟ್ಟೆ ಉಕ್ಕಿಬಂದ ದುಃಖದಿಂದ ಬಿಕ್ಕಿ ಬಿಕ್ಕಿ ಅಳತೊಡಗಿದ.

ಎಲ್ಲರ ಮುಖದ ಮೇಲೂ ವ್ಯಸನದ ಕಪ್ಪುಛಾಯೆ ಹೆಪ್ಪುಗಟ್ಟಿತು. ಚಿಟ್ಟೆಯನ್ನು ಸಂತೈಸುತ್ತ ದುಃಖತಪ್ತ ವಾಣಿಯಲ್ಲಿ ನುಡಿದಳು ಪೂವಿ,

"ಹೋಗಲಿ ಬಿಡು ಮಗೂ, ಇನ್ನೊಂದು ನಾಯಿ ತರೋಣ."

ಅಳುತ್ತಳುತ್ತಲೇ ಅಂದ ಚಿಟ್ಟೆ "ಉಹೂ, ಜೂಲಿಯೇ ಬೇಕು !"

ಒಂದು ಘಳಿಗೆ ಮೌನಪೂಜೆ ನಡೆಯಿತು-ಹೃದಯ ತಂತುಗಳಲ್ಲಿ ನೆತ್ತರು ಹೆಪ್ಪುಗಟ್ಟಿದಂತೆ.

ಆದರೆ...

೨೮

....ನಿನಗೆ ಬಹಳ ದಿನಗಳಿಂದ ಬರೆಯಬೇಕೆಂದಿದ್ದೆ. ಆದರೆ....ಆಗಲೇ ಇಲ್ಲ. ಅನಿರೀಕ್ಷಿತವಾಗಿ ನಮ್ಮ ಎದೆಗೆ ಬಡಿದ ಬರಸಿಡಿಲು ಎಲ್ಲಾ ಆಸೆ-ಆಕಾಂಕ್ಷೆಗಳನ್ನೂ, ಧ್ಯೇಯೋದ್ದೇಶಗಳನ್ನೂ ಬುಡಮೇಲು ಮಾಡಿತು. ಈಗ ಏನು ಮಾಡಬೇಕೆಂಬುದೇ ತೋಚುತ್ತಿಲ್ಲ. ಕೈಕಾಲು ತುಂಡುಗಡಿದು ಕೂರಿಸಿದಂತಾಗಿದೆ ನಮ್ಮ ಪರಿಸ್ಥಿತಿ. ಇತ್ತೀಚೆಗೆ....ವಿಶ್ವವಿಖ್ಯಾತ ನೇತಾಜಿ, ನಮ್ಮ ಅನನ್ಯ ಅಗ್ರಗಣ್ಯ ಗುರು ಕಣ್ಮರೆಯಾದಾಗಿನಿಂದ ಮನಸ್ಸು ಒಡೆದು ನುಚ್ಚು ನೂರಾದ ಕನ್ನಡಿಯಂತಾಗಿದೆ. ಹೃದಯ ಬಿಸಿಲಟ್ಟದ ಮಂಜಿನಂತೆ ಕರಗಿ ಸಹಸ್ರಸಹಸ್ರ ಸ್ರೋತಗಳಾಗಿ ಹರಿದುಹೋಗುತ್ತಿವೆ. ಎಷ್ಟೇ ಪ್ರಯತ್ನಿಸಿದರೂ ಸಾವರಿಸಿಕೊಳ್ಳುವುದು ಸಾಧ್ಯವಾಗುತ್ತಿಲ್ಲ. ಹಾ....! ನನ್ನ ಕತೆ ಒತ್ತಟ್ಟಿಗಿರಲಿ. ರಾಷ್ಟ್ರಕ್ಕೆ ಎಂತಹ ಅಗಾಧವಾದ ನಷ್ಟ? ಯಾವ ತಪ್ಪಿಗಾಗಿ ಭಾರತಿ ಇಂತಹ ಘೋರ ಪುತ್ರಶೋಕಕ್ಕೊಳಗಾದಳು? ಭಗವಂತ ಏಕೆ ಇಷ್ಟು ನಿಷ್ಕರುಣಿಯಾದ? ಯಾವ ಉದ್ದೇಶಕ್ಕಾಗಿ ಈ ದುಸ್ಥಿತಿಯ ಉಗಮ? ಕಾರ್ಯಕಾರಣಗಳ ಚೌಕಟ್ಟಿನಲ್ಲಿ ಜಗತ್ತು ಮುಂದುವರಿಯುತಿದ್ದರೂ ಧ್ಯೇಯೋದ್ದೇಶಗಳಿಗೆ ಬೆಲೆಯೇ ಇಲ್ಲವಲ್ಲಾ? ಅದೇ ದುಃಖ; ಅದೇ ಸಂಕಟ. ಮುಂದೆ ನಮ್ಮ ಕತೆಯೇನು? ಯಾವರೀತಿ ಮುಂದುವರಿಯಬೇಕು ಅರ್ಥವಾಗುತ್ತಿಲ್ಲ. ನಮ್ಮ ಚಟುವಟಿಕೆಗಳೆಲ್ಲ ಅಲ್ಲಿಂದಲ್ಲೆ ಸ್ತಬ್ಧವಾಗಿವೆ. ಮತಿಮತಿಗಳಲ್ಲಿ ಹಾಹಾಕಾರವೆಬ್ಬಿಸಿ ಮಂಗಳಮಾಯುವಾಯ್ತು-ದಿವ್ಯಾತ್ಮ. ಇಂದಿಗೂ ತನುಮನಧನಗಳನ್ನೆಲ್ಲ ಧಾರೆಯೆರೆಯಬಲ್ಲ ಪುಣ್ಯಾತ್ಮರು ಆ ದಿವ್ಯ ತೇಜದ ಪ್ರತೀಕ್ಷೆಯಲ್ಲಿ ಅಹೋರಾತ್ರಿ ಕಳೆಯುತಿದ್ದಾರೆ. ಅವರ ಚಿತಾಭಸ್ಮವನ್ನು ಕಣ್ಣಾರೆ ಕಂಡಮೇಲೂ ಜನಮನದಲ್ಲೆದ್ದ ಸಮಸ್ಯೆ-ಅನುಮಾನ ಪರಿಹಾರವಾಗಿಲ್ಲ. ಕೆಲವರಿಗಂತೂ ಇಂದು-ನಾಳೆ ಬಂದೇ ಬರುತ್ತಾರೆಂಬ ದೃಢ ನಂಬುಗೆ ಇದೆ. ಭಗವಂತ ಪ್ರಸಾದಿಸಿದರೆ ಸಾಕು. ಅವರ ಬಗೆಗೆ ಹಬ್ಬಿದ ಸುದ್ದಿ ರೆಕ್ಕೆ ಮುರಿದುಕೊಂಡು ಕುಕಲ್ಪನೆಯಾಗಲಿ ಎಂದು ಹಂಬಲಿ

ಸುವೆ. ಭಾರತ ಲಕ್ಷ್ಮಿಯ ಔರಸಪುತ್ರನ ಬಗ್ಗೆ ನಿಜ ಸುದ್ದಿ ಹೊರಬೀಳಲಿಲ್ಲ ವೆಂದರೆ ಎಂತಹ ಆಶ್ಚರ್ಯ ? ಆ ಮಹಾನಾಯಕನ ಸ್ವಾತಂತ್ರ್ಯದಾಹ, ಆಸೆಯ ಕಿಡಿ ಹೀಗೆ ಇಷ್ಟು ಬೇಗನೆ ಮಣ್ಣಿನ ಹುಡಿಯಲ್ಲಿ ಬೆರೆತು ಹೋಗುವು ದೆಂದು ಯಾರು ತಿಳಿದಿದ್ದರು ? ಉಜ್ವಲ ಚೇತನ ಮಾಂತ್ರಿಕವಾಗಿ ಅದೃಶ್ಯ ನಾದೀತೆಂದು ಯಾರು ಭಾವಿಸಿದ್ದರು ? ಅದಕ್ಕೆ ಕಾರಣವಾದದೂ ಏನು ? ಹೇಡಿಯಂತೆ ಅಡಗಿಕೊಳ್ಳಬಹುದಾದ ಚೇತನವೇ ಅದು ? ಅಂತೂ, ಆಶ್ಚರ್ಯ-ಪರಮಾಶ್ಚರ್ಯ ! ನಂಬಲೂ ಆರೆ, ಬಿಡಲೂ ಆರೆ.

ಉದ್ರೇಕ-ಉದ್ವೇಗ-ಉನ್ಮಾದಗಳಿಂದ ತರಂಗಿತವಾದ ವಾತಾವರಣ ಅಂತರ್ನಿಹಿತ ಪ್ರೀತಿವಾತ್ಸಲ್ಯಗಳ ಆರ್ದ್ರತೆಯನ್ನು ಸೂಜಿಗಲ್ಲಿನಂತೆ ಸೆರೆ ಹಿಡಿಯುತ್ತಿರುವ ಸಂಧಿ ಸಮಯದಲ್ಲಿ ಧೀರಯೋಧ-ಅಪ್ರತಿಮ ಸಾಹಸಿ ಇಲ್ಲ ವಾದುದು ಕಣ್ಣನ್ನು ಕಟ್ಟಿ ಕಾಡಿಗೆ ಬಿಟ್ಟಂತಾಯಿತು-ನಮ್ಮ ಪಾಡು. ನಾನೀಗ ಭಾರತ ಮಿಲಿಟರಿ ಪಡೆಯನ್ನು ಸೇರಿಕೊಳ್ಳುವುದೇ ? ಅಥವಾ ಸಾಮಾಜಿಕ ಸೇವಾ ಕ್ಷೇತ್ರಕ್ಕಾಗಲೀ ರಾಜಕೀಯ ಕ್ಷೇತ್ರಕ್ಕಾಗಲೀ ಇಳಿಯು ವುದೇ ಎಂಬ ಯೋಚನೆಯ ಮತ್ತಿನಲ್ಲಿ ಸಿಕ್ಕಿಕೊಂಡಿರುವೆ. ಎಷ್ಟು ಯೋಚಿಸಿ ದರೂ ಕದಡಿ ಬಗ್ಗಡವಾದ ಚಿತ್ತ ನಿರ್ಣಯಿಸದು. ಮನಸ್ಸು ತಿಳಿಯಾಗುವ ವರೆಗೆ ಸುಮ್ಮನಿರುವ ಯೋಚನೆ ಮಾಡಿರುವೆ. ಅಪ್ಪ ಊರಿಗೆ ಬಾರೆಂದು ಬರೆಯುತ್ತಲೇ ಇದ್ದಾರೆ. ನಾಣಯ್ಯನೂ ಸಹ ಹಾಗೆಂದು ಬರೆಯುತ್ತಾನೆ. ಹೋದರೇನೋ ಜೀವನ ವೃತ್ತಿಗೆ ಕೊರತೆಯಿಲ್ಲ. ಆದರೆ ಮನದಲ್ಲಿರುವ ಆಶಾ ಕಿರಣವನ್ನು ಈಗಾಗಲೇ ಬಿಟ್ಟುಕೊಡಲು ಹೃದಯ ಮುಂದಾಗದು. ಇಂದು ಸುಭಾಸ್ ಬಾಬು ನಮ್ಮ ಬಳಿ ಇಲ್ಲವಾದರೂ ಅವರ ಅಮರ ಚೇತನ ನಮ್ಮ ಬಳಿಯಲ್ಲಿಯೇ ಸುಳಿಸುತ್ತುತ್ತಿರುತ್ತದೆ. ಅಂದಮೇಲೇಕೆ ಚಿಂತೆ ? ಅವರು ಯಾವ ಹಾದಿಯಲ್ಲಿ ಮುನ್ನಡೆಯಲು ನಮಗೆ ಆದೇಶ ನೀಡುತ್ತಾರೋ ಆ ಉದಾತ್ತ ಧ್ಯೇಯೋದ್ದೇಶಗಳಿಗೆ ಕಿಂಚಿತ್ತೂ ಲೋಪವಾಗದ ರೀತಿಯಲ್ಲಿ ನಡೆಯುವುದು ನಮ್ಮ ಕರ್ತವ್ಯ ಮತ್ತು ಧರ್ಮ. ಆ ಧೀರೋದಾತ್ತ ದಿವ್ಯ ಚಿತ್ರಕಲ್ಪನೆ ನಮ್ಮ ಬತ್ತಿದ ಕಣ್ಣುಗಳಿಗೆ ಶೀರ್ಣಿತ ಮನೋದಧಿಗೆ ಉಜ್ವಲ ಬೆಳಕು ನೀಡುತ್ತದೆ. ಶುಷ್ಕ ಅಂತರಂಗದಲ್ಲಿ ಅಭಿಮಾನವೆಂಬ ಅಂತರ್ವಾಹಿನಿ ಪೂರ್ಣ ಪ್ರವಾಹದಿಂದ ಹರಿಯುತ್ತದೆ. ಧೈರ್ಯ-ಶೌರ್ಯ-ಮಾಧುರ್ಯ-

ಗಾಂಭೀರ್ಯಗಳು ಇಲ್ಲೇ, ಈ ಬಳಿಯಲ್ಲೇ ಹರಿದಾಡುತ್ತಿರುತ್ತದೆ. ಅಂದ ಮೇಲೆ ಅದನ್ನು ನಮ್ಮದಾಗಿಸಿಕೊಳ್ಳುವುದೇನೂ ದೊಡ್ಡದಲ್ಲ. ಸಾಧನೆಗೆ ಇನ್ನೇಕೆ ಅಂಜಬೇಕು ? ಮತ್ತೇಕೆ ಈಗಾಗಲೇ ಬಾಳನ್ನು ನಿರ್ಣಯಿಸುವ ಹೊಣೆಗಾರಿಕೆಯನ್ನು ಹೊತ್ತುಕೊಳ್ಳಬೇಕು?...ಈ ಜೀವನ ಉಚ್ಚ-ತುಚ್ಛ ಗಳ ನಡುವೆ ಹೊಯ್ದಾಡುವ ಹಾಯಿದೋಣಿ. ಯಾವುದೇ ತೀರವನ್ನು ಮುಟ್ಟಿಸುವುದು ವಿಧಾತನ ದಿವ್ಯ ಸಂಕಲ್ಪ—ಆತನ ಮುಂದೆ ಈ ವ್ಯಕ್ತಿತ್ವ ತೀರ ಅಲ್ಪ; ಯೋಜನೆಗಳು ಅಭದ್ರ.

ನಮ್ಮ ರಾಷ್ಟ್ರ ನಾನಾ ವರ್ಣವಿಭೇದಗಳಿಂದ ಕೂಡಿದ್ದು...ಎಲ್ಲಿ ಕೈ ಹಾಕಿದರೂ ಎಲ್ಲಿ ಯಾವ ಎಳೆಯನ್ನು ಜಗ್ಗಿದರೂ ತೊಡಕುಗಳ ಮೇಲೆ ತೊಡಕುಗಳು ಮೂಡುತ್ತವೆ ; ಸಮಸ್ಯೆಗಳ ಮೇಲೆ ಸಮಸ್ಯೆಗಳು ಏಳುತ್ತವೆ. ಭಿನ್ನ ಭಿನ್ನ ಧರ್ಮಗಳು ; ಕ್ಲಿಷ್ಟಕರ ವ್ಯವಹಾರಗಳು; ಜಾಗ್ರತ ಸತ್ಯದ ಸಂಕಷ್ಟ ; ಜಾತಿಯ ತೊಡಕು; ಭಾಷೆಗಳ ಅಭಿಮಾನ; ಇಂತಿಂತಹ ಕರ್ಮ ವಿಶೇಷಗಳನ್ನೆಲ್ಲ ಸೂಕ್ಷ್ಮಾತಿಸೂಕ್ಷ್ಮವಾಗಿ ಪರಿಹರಿಸುವ ಜಾಣ್ಮೆ-ತಾಳ್ಮೆಗಳು ಬೇಕು. ಇಂಗ್ಲೀಷರ ದಮನ ನೀತಿ 'ಸಮಸ್ಯೆ'ಗಳನ್ನು ಅಲ್ಲಿಂದಲ್ಲೇ ಮರ್ದನಗೈಯುತಿತ್ತು. ಇನ್ನು ಹಾಗಾಗದು. ಪ್ರತಿಯೊಂದು ಸಮಸ್ಯೆಗೂ ಪರಿಹಾರವನ್ನು ಕಂಡುಕೊಳ್ಳುವುದು ಸೂಕ್ತ. ಆದರೆ ಇದೆಲ್ಲ ಎಷ್ಟರಮಟ್ಟಿಗೆ ಸಾಧ್ಯ ಎಂಬುದನ್ನು ಕಾದುನೋಡಬೇಕು. ಒಂದನ್ನು ಪರಿಹರಿಸುವಾಗ ಇನ್ನೊಂದನ್ನು ಮೂಡಿಸದಿರುವುದು ಜಾಣ್ಮೆಯ ಉದ್ದೀಪನೆ.

ಅಂದಿಂದಿಗೂ ನಾನು ಜನಾಭಿಪ್ರಾಯದ ಕಡೆಗೆ ಹೆಚ್ಚುಹೆಚ್ಚಾಗಿ ಗಮನಕೊಡುತ್ತಿರುವೆ. ಎಲ್ಲೂ ಯಾವ ಸಂದರ್ಭದಲ್ಲೂ ಒಮ್ಮತ ಮೂಡು ವುದು ಕಷ್ಟ. ಒಮ್ಮತವಿಲ್ಲದಿದ್ದರೆ ಬೃಹದ್ ಯೋಜನೆಗಳು ಹೇಗೆ ನಡೆಯು ತ್ತವೆ? ವರ್ಗಭೇದ, ವರ್ಣಭೇದ, ಅಭಿಪ್ರಾಯಭೇದಗಳಿಂದ ಯಾವ ಕೆಲಸವೂ ಸುಗಮವಾಗಿ ಸಾಗುತ್ತಿಲ್ಲ. ಇ ದು ವ ರೆ ವಿ ಗೆ ನೇತಾಜಿಯವರೊಂದಿಗೆ ಎಷ್ಟು ದೇಶಗಳು, ಎಷ್ಟು ನಗರಗಳು, ಎಷ್ಟು ಗ್ರಾಮಗಳು, ಎಷ್ಟು ಹಳ್ಳಿಗಳು ಸುತ್ತಿ ಬಂದಿರುವೆನೋ ಆ ಸರ್ವಾಂತರ್ಯಾಮಿಗೇ ಗೊತ್ತು. ಎಲ್ಲಿಂದ ಎಲ್ಲಿಯವರೆಗೆ ನೋಡಿದರೂ ಅಭಿಪ್ರಾಯಭೇದ ಅಂದಮೇಲೆ ನಮ್ಮ ದೇಶದ ಕತೆ ಏನಾಗಬೇಡ ?

ಪ್ರಸ್ತುತ, ರಾಜಕೀಯ ಕ್ಷೇತ್ರದಲ್ಲಿ ಎದ್ದ ಬಿರುಗಾಳಿಯನ್ನು ಗಮನಿಸಿದರೆ ಇಲ್ಲಿ ಉಳಿಯಲು ಮನಸ್ಸು ಬರುವುದಿಲ್ಲ. ಆದರೆ ಈಗಲೇ–ನೇತಾಜಿಯವರು ಅದೃಶ್ಯರಾದ ತರುಣದಲ್ಲೇ ಅವರ ಉಜ್ವಲ ಧ್ಯೇಯೋದ್ದೇಶಗಳಿಗೆ ತಿಲಾಂಜಲಿಯನ್ನೀಯಲು ಖಂಡಿತ ಮನಸ್ಸು ಬರುವುದಿಲ್ಲ. ಏನೇ ಇರಲಿ, ಇನ್ನೇನೇ ಬರಲಿ, ಒಂದು ಇಂಚೂ ಅವರ ಹಾದಿಯಿಂದ ನಾನು ಸರಿಯಲಾರೆ. ನೇತಾಜಿಯವರು ಬದುಕಿದ್ದಾರೆಂಬ ಪೂರ್ಣ ವಿಶ್ವಾಸ ನನಗುಂಟು. ಆದರೆ ಎಲ್ಲಿ ಹೇಗೆ ? ಎಂದು ನೀನು ಪ್ರಶ್ನಿಸಿದೆಯಾದರೆ ಉತ್ತರಿಸುವುದು ನನ್ನಿಂದ ಸಾಧ್ಯವಾಗದು. ಆ ದೃಢ ವಿಶ್ವಾಸದ ಮೇಲೆಯೇ ಅವರನ್ನರಸುವ ಕಾರ್ಯದಲ್ಲಿ ನಾನು ತೊಡಗಿರುವೆ. ಎಂದಾದರೂ ಎಲ್ಲಾದರೂ ಕಿಂಚಿತ್ ಸುಳಿವು ಸಿಕ್ಕಿದರೆ ನಿನಗೆ ಖಂಡಿತ ಬರೆಯುವೆ....

ಆದರೆ ...ಮುದ್ದೂ,

ಇದುವರೆವಿಗೂ ಈ ಜೀವ ಎಷ್ಟು ಚಟುವಟಿಕೆಯ ಬೀಡಾಗಿತ್ತೋ ಈಗ ಅಷ್ಟೇ ಸಪ್ಪೆಯಾಗಿದೆ. ಏನೇ ಮಾಡಿದರೂ, ಹೇಗೇ ಇದ್ದರೂ ಕೈಕಾಲುಗಳಿಗೆ ಯಾವ ರೀತಿಯ ಚಟುವಟಿಕೆಯನ್ನು ಹೊಂದಿಸಿಕೊಳ್ಳಬೇಕೆಂಬುದೇ ಅರ್ಥವಾಗುತ್ತಿಲ್ಲ. ಯಾರ ಮುಂದಾಳತ್ವ ಪಡೆಯಬೇಕೋ ತಿಳಿಯುತ್ತಿಲ್ಲ. ನಮ್ಮವರೆಲ್ಲಾ ದಿಕ್ಕಾಪಾಲಾಗಿದ್ದಾರೆ. ಈಗ ನಾನು ಏಕಾಂಗಿ.

ತಿಮ್ಮಯ್ಯನ ಕಾಗದವನ್ನು ಅತ್ಯಂತ ಉತ್ಸುಕತೆಯಿಂದ...ನಿತಾಂತ ಶ್ರದ್ಧೆಯಿಂದ ಓದಿಕೊಂಡ ಮುದ್ದಪ್ಪ. ಅವನು ಜಪಾನೀಯರ ಸೆರೆಯಾಳಾಗಿ ಹತ್ತಿರಹತ್ತಿರ ಎರಡು ವರ್ಷಗಳು ಸಂದು ಹೋಗಿವೆ. ಭಾರತದ ಮಿಲಿಟರಿ ವಲಯಕ್ಕೂ ಜಪಾನೀ ಸರಕಾರಕ್ಕೂ ಮಾತುಕತೆಗಳೇನೋ ನಡೆಯುತ್ತಿವೆ. ಆದರೆ ಯಾವುದೂ ಇನ್ನೂ ನಿರ್ಣೀತವಾಗಿಲ್ಲ .. ಅಥವಾ ಆಗುವುದೇ ಇಲ್ಲವೋ.

ಕೈಗಳು ಕೆಲಸ ಕಾರ್ಯಗಳಲ್ಲಿ ಚಟುವಟಿಕೆ ವಹಿಸಿದ್ದರೂ ತಲೆಯಲ್ಲಿ ಹಲವು ತರ್ಕವಿತರ್ಕಗಳು ತುಂಬಿರುತ್ತವೆ. ವನ್ಯ ಕೇಸರಿ ಬೋನಿಗೆ ಬಿದ್ದೀತೆಂದು ಭಾವಿಸಿರದ ತೀವ್ರತರ ಪ್ರಗತಿಗಾಮಿಗೆ ಜೇಲಿನ ಜೀವನ ಬೇಸರ ತಂದಿದೆ. ನವಚೈತನ್ಯದ ವಯೋಮಾನ ಅನ್ಯಥಾ ವ್ಯರ್ಥವಾಗಿ ಕಳೆಯುತ್ತಿರುವುದು ಒಡಲಿಗೆ ಸಂಕಟ ಮೂಡಿಸುವುದು.

ಅನಂತರ...

ವೃದ್ಧ ಜನನಿಯ ಬಿಸುಸುಯ್ಲು ನೆಚ್ಚಿನ ಮಡದಿಯ ಕಂಬನಿ ಸ್ಮೃತಿ ಪಥದಲ್ಲಿ ಮೂಡಿ ಭಾವಸಾತರಂಗಗಳನ್ನು ಬಡಿದೆಬ್ಬಿಸಿತು- ತರ್ಕವಿತರ್ಕಗಳ ಸಮಾವೇಶದಲ್ಲಿ ಅದೆಷ್ಟು ಹೊತ್ತು ಉರುಳಿತೋ ..ಸಾಮಾಜಿಕ ಪ್ರಾಕಾರ ದಲ್ಲಿ ಜೀವನದ ಶಾಂತಿಯ ನೆಲೆಯಲ್ಲಿ ಗೆಳೆಯರ ವೃಂದದ ಸಂಭ್ರಮ ಕೂಟದಲ್ಲಿ ಚಿತ್ತ ಸುಳಿದಾಡಹತ್ತಿತು. ಕ್ಷಣಕ್ಷಣಗಳು ಅಳಿದುವು. ಘಳಿಗೆ ಘಳಿಗೆ ಗಳು ನಿರಾತಂಕವಾಗಿ ಉರುಳಿದುವು. ಮನೋದಧಿಯಲ್ಲಿ ಮುದ್ದುಮಕ್ಕಳು ನಲಿದಾಡಿದುವು. ಕೈಚೀಲವನ್ನೇ ಮಗುವಿನಂತೆ ಭಾವಿಸಿ ಮೃದುವಾಗಿ ಅಪ್ಪಿ ಹಿಡಿದು ಪ್ರೇಮಪರವಶನಾದ....ಹೃದಯರಂಗದಲ್ಲಿ ಲಾಸ್ಯವಾಡುವ ಭಾವ ತರಂಗಿಣಿಯ ರುದ್ರಲಾಸ್ಯದ ನೂಪುರಗಳ ಟಂಟಣಿನಾದ ಕರ್ಣಪಟಲಗಳಿಗೆ ಅಲೆಯಲೆಯಾಗಿ ತಾಗುತ್ತಿದೆ–ವಿಶಾದ ಪೂರ್ವಕವಾಗಿ, ಕ್ಲೇಶಪೂರಿತವಾಗಿ....

...ತಪ್ಪು...ತಪ್ಪು...ತಪ್ಪು ಮಾಡಿದ್ದಿ !

ಹಾ...!

ಒಂದು ಘಳಿಗೆ ಒಂದೇ ಒಂದು ಘಳಿಗೆ ತನ್ನಲ್ಲೇ ಪರಿತಾಪವನ್ನು ಅನು ಭವಿಸಿದ. ಅಂತರ್ನಿಹಿತ ಭಾವವಿಭಾವಗಳ ಸಮುದಾಯದಿಂದ ದೀರ್ಘವಾದ ನಿಟ್ಟುಸಿರೊಂದು ಮೆಲ್ಲನೆ ತಪ್ಪಿಸಿಕೊಂಡಿತು. ಭಾರವಾದ ಹೃದಯವನ್ನು ಹೊರಲಾರದೆ ಹೊತ್ತು ಕರ್ತವ್ಯಶೀಲನಾದ.

ಠಣ್.ಠಣ್.ಠಣ್.ಠಣ್.ಠಣ್ !

ಘಂಟಾ ನಿನಾದ ಮನೋರಮರವದಿಂದ ಮೊಳಗಿದೊಡನೆ ಯೋಚನಾ ಜಗತ್ತಿನ ಕ್ರಮವಿಹೀನ ಭಾವನೆಗಳು ದೂರ ಸಿಡಿದು ಬಿದ್ದುವು. ಮಮಕಾರದ ಅಂತರಾಳದಿಂದ ಹೊರಬಿದ್ದಾಗ....ಈ ಜೀವನವನ್ನು ಯಾರಾದರೂ ನಿರ್ಣಯಿಸ ಬಲ್ಲೆ ಎಂದರೆ ಅದು ಮೂರ್ಖತನವಾದೀತು. ನಮ್ಮಲ್ಲಿ ಎಷ್ಟೇ ಮೇದಾಶಕ್ತಿ ಇದ್ದರೂ ನಿರ್ಣೈಸುವವ ಬೇರೆ ..ಎಂದು ಯಾರೋ ಕರ್ಣಪಟಲಗಳ ಸನಿಹ ದಲ್ಲಿಯೇ ಕೂಗಿ ಹೇಳಿದಂತಾಯಿತು.

ಕೆಲವು ಕ್ಷಣ ಕಣ್ಣುಗಳು ತಾನಾಗಿಯೇ ಮುಚ್ಚಿಕೊಂಡುವು.

ಠಣ್.ಠಣ್.ಠಣ್.ಠಣ್.ಠಣ್ !

ಆ ಮಹಾರವ ಕೇಳಿ ಬರುತ್ತಲೇ ಇತ್ತು. ಖೈದಿಗಳು ಕೆಲಸವನ್ನು ಬಿಟ್ಟು ಹೊರಟರು. ಒಂದು ಸಣ್ಣ ಓಣಿಯ ಮೂಲಕ ನೂರಿನ್ನೂರು ಗಜ

ಗಳಷ್ಟು ನಡೆದರೆ ಎದುರಿಗೆ ಸಿಕ್ಕುವುದು ಒಂದು ದೊಡ್ಡ ಹಜಾರ. ಆ ಹಜಾರ ಸಿಕ್ಕುವವರೆಗೆ ಈ ಓಣಿಯಲ್ಲಿ ನಡೆಯುವುದೇ ಹಿರಿಯ ಸಮಸ್ಯೆ. ಒಟ್ಟೊಟ್ಟಾಗಿ ನಾಲ್ಕು ಮಂದಿ ನಡೆಯಬಹುದಾದ ತಾವಿನಲ್ಲಿ ಖೈದಿಗಳು ಕಿಕ್ಕಿರಿ ತುಂಬಿ ಬಿಡುವುದರಿಂದ ಉಸಿರು ಕಟ್ಟುತಿತ್ತು ; ಜೀವ ನರಳುತಿತ್ತು ; ಕೆಳಗೆ ಬಿದ್ದು ಕಾಲ್ತುಳಿತಕ್ಕೆ ಸಿಕ್ಕಿ ಸಾಯುವ ಸಂಭವವಿರುವುದನ್ನು ಅರಿತಿದ್ದರೂ ನುಗ್ಗುವುದನ್ನು ಬಿಡರು. ಕೂಗು ಗಲಾಟೆ ಗದ್ದಲಗಳು ನಿರಾಮಯವಾಗಿ ನಡೆಯುತ್ತವೆ. ನಾನಾ ದೇಶೀಯರು ನಾನಾ ಭಾಷೆಗಳಲ್ಲಿ ಕರ್ಕಶ ದನಿಯನ್ನು ಹರಿಯಬಿಟ್ಟು ರೂಕ್ಷ ಪದಗಳನ್ನು ಇತಿಮಿತಿ ಇಲ್ಲದೆ ಹರಿಸುತ್ತಾರೆ. ಕೆಲವೊಮ್ಮೆ ಕಿವಿಗಳಿಗೆ ಅರಳೆ ಇಟ್ಟುಕೊಳ್ಳುವ ಯೋಚನೆಯೂ ಮೂಡುತ್ತದೆ. ಎಷ್ಟೇ ಪ್ರಯತ್ನಿಸಿದರೂ ಗಲಾಟೆ ಗದ್ದಲಗಳಿಂದಾಗಿ ಮನಸ್ಸಿಗೆ ಶಾಂತಿ ಪಡೆಯಲಾಗುವುದಿಲ್ಲ...

ಎಷ್ಟೇ ಕೆಲಸವಾದರೂ ಮಾಡಬಹುದು ; ಈ ಗಲಾಟೆ ಮಾತ್ರ ಬೇಡ ಎಂದು ಚೀರುತ್ತದೆ ಚಿತ್ತ.

ಆದರೂ ಪರಿಸ್ಥಿತಿಗೆ ಹೊಂದಿಕೊಳ್ಳಲೇ ಬೇಕಲ್ಲ ?....ಎನ್ನುತ್ತದೆ ವಿವೇಕ.

ಸಣ್ಣ ಓಣಿಯನ್ನು ದಾಟಿ 'ವರ್ಕ್‌ಶಾಪಿನ' ಬದಿಯಲ್ಲಿದ್ದ ವಿಶಾಲವಾದ ಶೆಡ್ಡಿಗೆ ಬರಬೇಕಾದರೆ ಅರ್ಧ-ಮುಕ್ಕಾಲು ಗಂಟೆಯಾದರೂ ಹಿಡಿಯಿತೇನೋ- ಅಲ್ಲಿ ಸಂಜೆಯ ಊಟ. ಕೈಗಾಡಿಯಲ್ಲಿ ತಟ್ಟೆಗಳನ್ನು ಒಟ್ಟಿದ್ದರು. ಒಂದೆಡು ಹಿಡಿ ಕದಾನ್ನ ಯಾವುದೋ ವ್ಯಂಜನದೊಂದಿಗೆ ಮಿಶ್ರಣವಾಗಿತ್ತು. ಜೀವಧಾರಣೆಯ ಪ್ರಶ್ನೆಯಿಲ್ಲದಿದ್ದರೆ ಆ ಊಟವೇ ಬೇಡವಾಗಿತ್ತು. ಒರಟು ಕೈಗಳು ಯಾಂತ್ರಿಕವಾಗಿ ತಟ್ಟೆಗಳನ್ನೆಸೆದು ಹೋದುವು. ಆಗ....ಆಗ ಮಡದಿಯ ಮೃಣಾಲ ತಂತು ಸಮನ್ವಿತ ಹಸ್ತಗಳು ಅಕ್ಷಿಪಟಲದ ಮೇಲೆ ಸುಳಿದಳಿದುವು, ರುಚಿಯೋ-ಅರುಚಿಯೋ ಶುಚಿಯೋ-ಅಶುಚಿಯೋ ಎಲ್ಲರೂ ತುತ್ತು ನುಂಗಿದರು. ಎಳೆಯ ಜೀವ, ಹಸಿವು ಬಾಯಾರಿಕೆಗಳ ಛೀಳು, ಚಪಲ ಚಿತ್ತ; ಒಂದೊಂದೂ ಒಂದೊಂದೆಡೆಗೆ ಎಳೆಯುತ್ತವೆ. ಒಂದೆರಡು ಘಳಿಗೆ ಭಾವೋದ್ವೇಗದಲ್ಲಿ ಹಾಗೇ ಕುಳಿತ. ಕಪೋಲಪಾಲಿಯಲ್ಲಿ ಚಂದನ ವೂರೆದಂತೆ ರಂಗು ಮೂಡಿತು, ಕಣ್ಣುಗಳು ಕೆಂಪು ತಳೆದುವು.

ಎಲ್ಲರ ಮುಖದಮೇಲೂ ಉದಾಸೀನತೆ–ಉತ್ಸಾಹಹೀನತೆಗಳು ವ್ಯಾಪ್ತ ವಾಗಿ ಹರಡಿವೆ, ಕೆದರಿದ ಕೂದಲು, ಮಾಸಲು ಬಟ್ಟೆ, ಕೊಳಕು ಮೈ, ಮುಖದಮೇಲೆ ತಿಂಗಳಬೆಳೆ, ಕಾಂತಿಯುಳಿದ ಕಣ್ಣುಗಳು, ಶಕ್ತಿಹೀನ ಶರೀರ ಮಾನವತೆಯ ತುಳಿತವನ್ನು ಸಾರಿ ಹೇಳುತ್ತಿರುವಂತಿವೆ. ಘೋರ ವಿಾರಿದ ಸ್ವಾರ್ಥಪರರ ಪ್ರಗತಿಯ ಕಣಕಣವನ್ನೂ ತುಳಿದು ಹೊಸಕಿ ಆದರ್ಶಕ್ಕೆ ಎಳ್ಳುನೀರು ಬಿಡುತ್ತದೆ. ಈ ಮಾಯಾ ಜಗತ್ತಿನ ವಿಚಿತ್ರ ಜಾಲದಲ್ಲಿ, ಮಾಯಕತೆಯ ವ್ಯಾಮೋಹದಲ್ಲಿ ಮನುಷ್ಯತ್ವವೇ ನಶಿಸಿಹೋಗಿದೆ....

ಕ್ರಮವಿಹೀನವಾದ ಆಲೋಚನೆಗಳ ಸುಳಿಯಲ್ಲಿ ಸಿಕ್ಕಿ ಯಾಂತ್ರಿಕ ವಾಗಿ ತುತ್ತು ನುಂಗಿದ ಮುದ್ದಪ್ಪ.

ಎದುರುಗಡೆ ಕುಳಿತಿದ್ದ ಖೈದಿ ಉಚ್ಚಸ್ವರದಲ್ಲಿ ಬಿತ್ತರಿಸಿದ,

"ಇಲ್ಲಿ ಕಾಲರಾ ವಿಪರೀತವಾಗಿ ಹರಡುತ್ತಿದೆಯಂತೆ. ಈ ಅನ್ನದಲ್ಲಿ ಇನ್ನೆಷ್ಟು ಕ್ರಿಮಿಗಳು ಸೇರಿಕೊಂಡಿವೆಯೋ, ದೇವರೇ ಬಲ್ಲ."

"ಕಾಲರಾ ಮಾತ್ರವೇನು ? ಪ್ಲೇಗೂ ಬಹಳ ಹರಡುತ್ತಿದೆಯಂತೆ. ಈ ಮೂರ್ಖರಿಗೆ ರೋಗಗಳ ನಿಯಂತ್ರಣಕ್ಕಿಂತಲೂ ಖೈದಿಗಳ ನಿಯಂತ್ರಣ ಹೆಚ್ಚಾಗಿದೆ !"

"ಹಳ್ಳಿ ಹಳ್ಳಿಗಳಿಗೆ ಕಾಲರಾ ಹರಡುತಿದ್ದರೂ ವೈದ್ಯಕೀಯ ಸೌಲಭ್ಯದ ಕಡೆ ಅಷ್ಟಾಗಿ ಗಮನ ಕೊಟ್ಟಿಲ್ಲವೆಂದರೆ ಎಂತಹ ಆಶ್ಚರ್ಯ ?"

"ಜನ ಕುರಿಗಳಂತೆ ಸಾಯುತಿದ್ದಾರಂತೆ !"

"ಮಾನವತೆಗೆ ಬೆಲೆ ಇದ್ದರೆ ತಾನೆ ?"

"ಛೀ ! ಛೀ ! ಎಂತಹ ಅನ್ಯಾಯ ?"

"ಇಲ್ಲಿಗೇನಾದರೂ ಆ ರೋಗಗಳು ತಟ್ಟಿದುವು ಎಂದರೆ ನಮ್ಮ ಕತೆ ಏನಾಗಬೇಡ ? ನಾವು ನೊಣಗಳಂತೆ ಉದುರಿ ಹೋಗುವುದೇ ಸೈ !"

"ಯಾವ ಜನ್ಮದ ಕರ್ಮಸಿದ್ಧಿಯೋ ?"

"ಹಾಗೆನ್ನುತ್ತ ಕೈಕಟ್ಟಿ ಕುಳಿತರೆ ಆಗುವುದೇ ಅಷ್ಟು !"

"ಏನು ಮಾಡುವುದಕ್ಕಾಗುತ್ತೆ ? ನಮ್ಮ ಕೈಯ್ಯಲ್ಲೇನಿದೆ ? ಒಂದಿಂಚು ಆಚೆ ಸರಿಯುವಂತಿಲ್ಲ. ಸರಿದರೆ ವಿದ್ಯುಚ್ಛಕ್ತಿಯ ಮುಳ್ಳು ಬೇಲಿಗೆ ಬಲಿ ಯಾಗುತ್ತೇವೆ."

ಒಡನೆ ವಿದ್ಯುಚ್ಛಕ್ತಿ ಪ್ರವಹಿಸುವ ಮುಳ್ಳುತಂತಿ ಬೇಲಿಯು ಬೃಹದ್ ಪ್ರಾಕಾರ ಅಕ್ಷಿಪಟಲದ ಮೇಲೆ ಸುಳಿದಳಿಯಿತು. ಇಡೀ "ಕ್ಯಾಂಪಸ್" ಆದರ ಕಾವಲಿನಲ್ಲಿತ್ತು. ಯಾವ ಖೈದಿಯೇ ಆದರೂ ಗೇಟಿನ ಮೂಲಕ ವಿನಾ ಇನ್ನಾವ ಮಾರ್ಗದಲ್ಲೂ ಹೊರ ಹೋಗುವಂತಿರಲಿಲ್ಲ...ಯೋಚಿಸುತ್ತ ಒಂದು ಗುಟುಕು ನೀರೆತ್ತಿ ಕುಡಿದ ಮುದ್ದಪ್ಪ. ಕೊಳಕು ನೀರು ನಾಲಿಗೆಯನ್ನು ಸೋಕಿದಾಗ ದೇಹದಾದ್ಯಂತ ಇರುವೆಗಳು ಕುಟುಕಿದಂತಾಯಿತು.

ಪಕ್ಕದಿಂದ ಕರ್ಕಶ ದನಿಯೊಂದು ಕಿವಿಯನ್ನು ತಾಗಿತು,

"ಕೆಲವು ದಿನಗಳಾದರೆ ಅಥವಾ ಕೆಲವು ತಿಂಗಳುಗಳಾದರೆ ಪರವಾಯಿಲ್ಲ. ಇನ್ನೂ ಯಾವ ಇತ್ಯರ್ಥವೂ ಆಗದೆ ವರ್ಷಾನುಗಟ್ಟಲೆ ನಾವು ಇಲ್ಲಿ ಕಳೆಯುವುದೆಂದರೆ ಹೇಗೆ ? ನಾವು ಮನುಷ್ಯರೋ ಅಥವಾ ಕುರಿಗಳೋ ?"

"ಯಾರನ್ನು ಕೇಳುವುದು ?"

"ಒಂದು ಕಾಲದಲ್ಲಿ ರಾಷ್ಟ್ರಕ್ಕಾಗಿ ಹೋರಾಡುತಿದ್ದೆವು. ನಾನಾ ಕಿರುಕುಳ-ಹೊಡೆತ ಬಡಿತ-ವೇದನೆಗಳನ್ನು ಲೀಲಾಜಾಲವಾಗಿ ಸಹಿಸುತಿದ್ದೆವು. ಈಗ ನಮ್ಮ ವ್ಯಕ್ತಿತ್ವಕ್ಕೆ ಬೆಲೆಯೇ ಇಲ್ಲ"

"ಹೋಗಲಿ, ಬಿಡು ಮುದ್ದೂ ! ಆಗ ರಾಷ್ಟ್ರಕ್ಕೆ ಯಾರು ದ್ರೋಹ ಮಾಡಿದ್ದರೋ, ಯಾರು ಚಳವಳಿಗೆ ವಿರೋಧವಾಗಿದ್ದರೋ, ಯಾರು ಇಂಗ್ಲೀಷರ-ದೇಶಿಯ ರಾಜರ ಬಾಲ ಬಡುಕರಾಗಿದ್ದರೋ ಅವರಿಂದು ಆರಾಮವಾಗಿದ್ದಾರೆ !"

ಮುದ್ದಪ್ಪನ ತುಟಿಗಳಲ್ಲಿ ಸಣ್ಣ ತಿರಸ್ಕಾರದ ನಗೆ ಅರಳಿತು.

"ಇದೇ ಇಂದಿನ ಜಡ ನಾಗರಿಕತೆಯ ವ್ಯವಹಾರ ! ನಾಗರಿಕತೆಯ ಉಪಾಸಕರಾರೂ ಈ ಧೋರಣೆಯಿಂದ ಹೊರತಾಗರು !"

ಸುತ್ತ ಮುತ್ತಿನವರೆಲ್ಲ ಘಕಘಕನೆ ನಕ್ಕರು. ನುಡಿದಾತ ತನ್ನ ಉಬ್ಬು ಹಲ್ಲುಗಳನ್ನೆಲ್ಲಾ ಸ್ವಚ್ಛಂದವಾಗಿ ಪ್ರದರ್ಶಿಸಿದ. ಕಣ್ಣುಗಳು ಭಾವೋದ್ವೇಗದಿಂದ ವಿಸ್ಫಾರಿತವಾದುವು.

ಮುದ್ದಪ್ಪ ಮಾತಾಡಲಿಲ್ಲ. ಅಸಹನೀಯ ಭಾವವಿಭಾವಗಳಿಂದ ಹೃದಯ ಕುಂಡ ಬಿಸಿಲಟ್ಟಿದ ಮಂಜಿನಂತಾಯಿತು....ಆನಂದ-ಸುಖ-ಶಾಂತಿ ಎಂಬುದು ನಮ್ಮ ಹಣೆಯಲ್ಲಿ ಬರೆದಿದ್ದರೆ ಸಸ್ಯಶ್ಯಾಮಲೆಯಾದ ಮಾತೃ

ಭೂಮಿಯ ಉಡಿಯಲ್ಲಿ ಖಂಡಿತ ರಕ್ಷೆ ಪಡೆಯುತ್ತೇವೆ. ಯಾವ ಶುಭಚರಣ ಗಳಲ್ಲಿ ನಮ್ಮನ್ನು ನಾವು ಅರ್ಪಿಸಿಕೊಂಡು ಮುಂದುವರಿಯುತಿದ್ದೆವೋ ಆ ಶುಭಚರಣಗಳೇ ಈಗಲೂ, ಈ ಖೈದಿಯ ಸ್ಥಿತಿಯಲ್ಲಿಯೂ ನಮ್ಮನ್ನು ನಿತ್ಯ ಕರ್ಮಚಾರಿಯನ್ನಾಗಿ ಮಾಡಿವೆ. ಅದು ವ್ಯಕ್ತಿತ್ವಕ್ಕೆ ಅನುಭೂತವಾದ ಒಂದು ಅನನ್ಯ ಗುಣ ವಿಶೇಷ.

ಯೋಚನಾವಳಿಯಲ್ಲಿ ಸಿಕ್ಕಿ ಮಾತೃಭೂಮಿಯ ದಿವ್ಯ ಚರಣಗಳ ನೆನವರಿಕೆಯಲ್ಲಿ ಮೈಮರೆತಾಗ ಆ ಕೊನೆಯ ತುತ್ತನ್ನು ನುಂಗುವುದೂ ಸಹ ಮರೆತುಹೋಯಿತೋ ಏನೋ...

"ಮೈಯಲ್ಲಿ ಹುಷಾರಿಲ್ಲವೇ ಮುದ್ದೂ ?"

ಕರುಣಕಾತರ ಸ್ವರ ಸನಿಹದಿಂದ ಹರಿದು ಬಂದಾಗ ಅಂಬರದಲ್ಲಿ ಅಲೆಯುತಿದ್ದ ಗಮನ ಸರ್ರನೆ ಹಿಂತಿರುಗಿ ಬಂತು. ಮುದ್ದಪ್ಪ ನಸು ಮಿಡುಕಿ ನೋಟವನ್ನು ಅತ್ತ ಹೊರಳಿಸಿದ. ಕೇಳಿದವನು ಮೈಸೂರಿನವನೇ ಆದ ಭೈರಾಜಿ.

"ಏನಿಲ್ಲಪ್ಪಾ, ಎಲ್ಲೋ ಗಮನ ಹರಿದಿತ್ತು ಅಷ್ಟೆ." ತುಟಿಗಳಲ್ಲಿ ಶುಷ್ಕ ನಗೆ ಅರಳಿ ಮಾಯವಾಯಿತು.

"ಯಾರನ್ನು ಅಲಕ್ಷಿಸಿದರೂ ಅನ್ನ ದೇವರನ್ನು ಅಲಕ್ಷಿಸಬಾರದು ಕಂಡೆಯಾ ?"

ಎದೆಯ ಹಕ್ಕಿ ಉಲಿಯಿತು...ನಿಜ ; ಅನ್ನದೇವರನ್ನು ಅಲಕ್ಷಿಸಿದರೆ ನೆಲೆಯೇ ಇಲ್ಲ.

ಆ ಸಾಮೂಹಿಕ ಕರ್ಮಾಚರಣೆಯಲ್ಲಿ ಕೇಳಿ ಬರುತಿದ್ದ ಸರಸರ ಸದ್ದು ಆತನನ್ನೂ ಸಹ ಕರ್ಮಚಾರಿಯನ್ನಾಗಿ ಮಾಡಿತು. ತುತ್ತುಗಳು ಯಾಂತ್ರಿಕ ವಾಗಿ ಕರಗಿದುವು. ತಾನು ಮನಃಪೂರ್ವಕವಾಗಿ ಸ್ವೀಕರಿಸಿದ ಏಕಾಂತ ದುಃಖದಿಂದ ಒಂದಲ್ಲ ಒಂದು ರೀತಿಯಲ್ಲಿ ಕಲ್ಯಾಣವೇ ಆಗಬಹುದು ಎಂಬ ಸಮಾಧಾನವೂ ಇಲ್ಲದಿಲ್ಲ. ಏನೋ ಒಂದು ರೀತಿಯಲ್ಲಿ ಸ್ವಪ್ನಾ ಲೋಕದ ಆಕರ್ಮಣ್ಯನಂತೆ ಕೊನೆಯ ತುತ್ತನ್ನು ನುಂಗಿ, ನೀರಿನ ಲೋಟೆಯನ್ನೆತ್ತಿ ಕಣ್ಮುಚ್ಚಿ ಆಪೋಷಣೆ ಮಾಡಿ ಎದ್ದು ನಿಂತಾಗ ಚಿತ್ತ ಹಗ್ಗಕಿತ್ತ ಗೂಳಿ ಯಂತಾಗಿತ್ತು.

ಅಂದು,

ಕೊಡಗಿನ ರಾಜಕೀಯ ಕ್ಷೇತ್ರದಲ್ಲಿ ಅಹಿಂಸಾವಾದಿಗಳ ಮೇಲೆ ೧೪೪ನೇ ಸೆಕ್ಷನ್ ಜಾರಿಗೆ ತಂದಾಗ ಮುಂದಿಟ್ಟ ಹೆಜ್ಜೆಯನ್ನು ಹಿಂತೆಗೆಯದೆ ಲಾಠಿ ಏಟು ತಿಂದು ಮೈಚರ್ಮ ಸುಲಿಸಿಕೊಳ್ಳುವಾಗ ಅಂತರಂಗದ ಕಿಡಿ ಒಂದಕ್ಕೆ ಹತ್ತಾಗಿ ಜ್ವಲಿಸುತಿತ್ತು. ಆತ್ಮಾಭಿಮಾನಕ್ಕೆ ಯಾವ ಗಾಯವೂ ಉಂಟಾಗುತ್ತಿರಲಿಲ್ಲ. ನಿಷ್ಕಲ್ಮಷ ಚರಿತ್ರೆ, ಧಾರ್ಮಿಕ ಉತ್ತೇಜನ, ಕರ್ತವ್ಯ ನಿಷ್ಠೆಯ ಮಹಾನುಭೂತಿ ಇದುವರೆವಿಗೆ ಹೆಜ್ಜೆಯನ್ನು ದಿಟ್ಟ ಹಾದಿಯಲ್ಲಿ ನಡೆಸಿದೆ; ಮುಂದೆಯೂ ಸಹ. ದೇಶರಕ್ಷಣೆಯ ಹೆಸರಿನಲ್ಲಿ ರಿಜರ್ವ್ ಪೋಲೀಸಿ ನವರ ಮದ್ದು ಗುಂಡುಗಳು ಕೆಲಸ ಮಾಡುತ್ತಿರುವಾಗಲೂ ಎದೆ ಅಳುಕಿರಲಿಲ್ಲ; ಅನಂತರ ಕೋವಿಯ ಒಡೆಯನಾದಾಗಲೂ ಜೀವ ಸೋಲಲಿಲ್ಲ.

ಅಂದಮೇಲೆ....?

ಈಗೇಕೆ ಕೊರಗು ? ಪ್ರೂವಿ ಕಲಿತ ಹೆಣ್ಣು ; ಆಕೆಗೆ ಹೊಸದಾಗಿ ತಿಳಿ ವಳಿಕೆ ಕೊಡಬೇಕಾದ ಪ್ರಮೇಯವೇ ಇಲ್ಲ. ಮಾದೇವ ಮಾಡಿಸಿದಂತಾಗುತ್ತೆ. ಸಮಸ್ತವನ್ನೂ ಆತನಲ್ಲಿ ಅಡವಿಟ್ಟರಾಯಿತು....ಎನ್ನುತ್ತದೆ ಅಂತರ್ನಿಹಿತ ಧೀಶಕ್ತಿ.

ಮುದ್ದಪ್ಪ ವಿನೀತನಾಗಿ ಎದ್ದ. ಹಸಿವು ಇಂಗದ ಎಷ್ಟೋ ಮಂದಿ ಕೈಬೆರಳುಗಳನ್ನು ನೆಕ್ಕುತ್ತ ಊಟದ ವಿತರಣೆದಾರರನ್ನು ಬಾಯಿಗೆ ಬಂದಂತೆ ಶಪಿಸುತಿದ್ದುದು ಕಿವಿಗೆ ಬಿತ್ತು. ಇನ್ನೂ ಕೆಲವರು ಕಿವಿಯ ಮೇಲೆ ಲಕ್ಕೆ ಹೊಡೆಯುವಂತೆ ರೂಕ್ಷ ದನಿಯಲ್ಲಿ ಮನಸ್ವೀ ಮಾತಾಡುತಿದ್ದರು. ಮುದ್ದಪ್ಪ ಸ್ವಲ್ಪಕಾಲ ಅಭಿಭೂತಾವಸ್ಥೆಯಲ್ಲಿ ಮೈಮರೆತಂತೆ ನಿಂತ. ಬೆವರು-ಕೊಳಕು ಗಳ ದುರ್ಗಂಧ ಮೂಗಿಗೆ ತಟ್ಟುತಿತ್ತು—ಜೀವ ಒಳಗಿಂದೊಳಗೇ ಚಡಪಡಿಸು ವಂತೆ. ಧೈರ್ಯ—ಸ್ಥೈರ್ಯ ಎಷ್ಟೇ ಇದ್ದರೂ ಈ 'ನಿರ್ಬಂಧ' ಒಮ್ಮೆ ತಪ್ಪಿ ದರೆ ಸಾಕು ಎಂದು ತನಗೆ ತಾನೇ ಅಂತರಾತ್ಮಪೂರ್ವಕವಾಗಿ ಹೇಳಿಕೊಂಡ.

....ಆಗೆಲ್ಲ ಜೀವ ಬಂಧ ಏನೋ ಒಂದು ಬಗೆಯ ಉಪೇಕ್ಷೆಯನ್ನು ಮಾಡಿಸಿತ್ತು. ಈಗ ಭಕ್ತಿ ಶ್ರದ್ಧೆಗಳನ್ನು ತುಂಬಿ ಹೃದಯವನ್ನು ಬಿರಿಸು ವಂತಿದೆ. ದೇಶ ಕಾರ್ಯದಲ್ಲಿ ತೊಡಗಿ ವಾದವಿವಾದಗಳಿಂದ, ವಿಭಿನ್ನ ಅಭಿ ಪ್ರಾಯಗಳಿಂದ ಜೀವನದ ನಿಜ ಸ್ವರೂಪ, ಆತ್ಮ ನಿವೇದನೆ, ಅಂತರಂಗದ

ಸತ್ಯ ಇವುಗಳನ್ನು ಸ್ವತಃ ಕಂಡುಕೊಂಡಿರಲಿಲ್ಲ. ಇದುವರೆವಿಗೂ ಸುಪ್ತ ವಾಗಿದ್ದ ಅಂತರ್ನಿಹಿತ ಪ್ರೇಮ–ಪಶ್ಚಾತ್ತಾಪಾಗ್ನಿಜ್ವಾಲೆ ಧಗಧಗಿಸಿ ಶತ-ಸಹಸ್ರ ಆಲೋಚನಾ ತರಂಗಗಳಲ್ಲಿ ದೇಹ ಸಮೇತ ತೇಲಿ ಹೋಗುತ್ತಿರು ವಂತೆ ಉದ್ಭಾಸಿತವಾಯಿತು. ಜೀವನ ಕಾಂತಾರದ ಉದಿತೋದಿತ ಸುಂದರ ಉದ್ಯಾನದಲ್ಲಿ ತಳವೂರಿದ ಮುಳ್ಳುಕಂಟಿ ಸುತ್ತಮುತ್ತ ಹರಗೈ ಚಾಚುತ್ತ ಬೆಳೆಯುವುದರಲ್ಲಿ ಒಂದು ಆತ್ಯಂತಿಕ ನೈಜತೆಯೇ ಕಾಣಿಸುತಿತ್ತು.

...ಶಸ್ತ್ರಗಳ ಝಣತ್ಕಾರದಲ್ಲಿ ಹೊಮ್ಮುವ ಜೀವನಸಂಗೀತದ ಸೊಬಗೇ ಬೇರೆ. ಮೃತ್ಯುವಿನ ಹೊಸ್ತಿಲ ಮೇಲೆ ನಿಂತು ಯಶಸ್ಸನ್ನು ಗಳಿಸುವುದ ರಲ್ಲಿಯೇ ವಿಶೇಷವಿದೆ. ಧೀಶಕ್ತಿ ಪುಷ್ಟಿಗೆ–ಆತ್ಮವಿಶ್ವಾಸಕ್ಕೆ ಪರಾಜಯುವೇ ನಾಂದಿ...ಎಂದು ಕೂಗಿ ಹೇಳುತ್ತದೆ–ಅಂತರ್ವಾಣಿ.

ಮುದ್ದಪ್ಪ ಧ್ಯಾನ ಗದ್ಗದನಾಗಿ ನಿಂತ. ದೇಹದಲ್ಲಿ ಉಷ್ಣರಕ್ತ ಪ್ರವಹಿತ ವಾಗುತಿತ್ತು.

ಖೈದಿಗಳೆಲ್ಲರೂ ಕೈತೊಳೆಯುಲೋಸುಗ ನಲ್ಲಿಯ ಬಳಿಗೆ ದನಗಳಂತೆ ನುಗ್ಗುತಿದ್ದರು.

ವ್ಯಗ್ರತೆ–ಶಾಂತತೆ–ಸಮಾಧಾನ–ಉದಾಸೀನ ಇವುಗಳ ಅದ್ಭುತ ಸಮುದಾಯುದಲ್ಲಿ ಭಾವವಿಭಾವಗಳ ಅಕಾಂಡತಾಂಡವಲಹರಿ ಎಲ್ಲೆಡೆಯೂ ಹರಿದಾಡುತಿತ್ತು. ಕೈ ತೊಳೆದವರೆಲ್ಲ ಮಣ್ಣಿನ ತಟ್ಟೆಯ ಸಹಿತ ಆ ಚಿಕ್ಕ ಓಣಿಯ ಮೂಲಕ ಒಳಗಡೆ ಸಾಗುತಿದ್ದರು. ಓಣಿಯಲ್ಲಿ ದೂರದೂರಕ್ಕೊಂದು ದೀಪವಿದ್ದುದರಿಂದ ಬೆಳಕು ಮಂದಮಂದವಾಗಿತ್ತು. ಮುದ್ದಪ್ಪ ಕೈ ಬಾಯಿ ತೊಳೆದನೋ ಅಥವಾ ಹೃದಯದ ಗಾಯವನ್ನು ಪ್ರಕ್ಷಾಲನೆ ಮಾಡಿದನೋ ದೇವರೇ ಬಲ್ಲ. ಮುಂದಿನವರನ್ನು ಯಥಾಕ್ರಮ ಹಿಂಬಾಲಿಸಿದ. ಪಾದರಕ್ಷೆ ಗಳ 'ಲರಕ್ ಲರಕ್' ರವನೆದ್ದು ಮಾಡುಮುಟ್ಟುವಂತೆ ಮೊಳಗಿ ಅಲ್ಲಿಂದಲ್ಲೇ ಲಯ ಹೊಂದುತಿತ್ತು. ಓಣಿಗೆ ಗವಾಕ್ಷಿಗಳಿರಲಿಲ್ಲವಾದುದರಿಂದ ಪ್ರಾಣಪಕ್ಷಿಗೆ ಗಾಳಿಯು ಇಲ್ಲ. ಉಸಿರನ್ನು ಒತ್ತಿಹಿಡಿದು ಓಣಿಯನ್ನು ದಾಟಿ ಬಲಕ್ಕೆ ತಿರುಗಿದರೆ ದೊಡ್ಡ ಹಜಾರ; ಭದ್ರವಾದ ಬಾಗಿಲು. ಎಲ್ಲರೂ ಒಳ ಹೋಗು ತ್ತಲೂ ಪಹರೆಯುವ ಕದ ಮುಚ್ಚಿದ. ಬಹಳ ಎತ್ತರದಲ್ಲಿ ಸಣ್ಣ ಸಣ್ಣ ಕಿಟಕಿ ಗಳಿದ್ದುವು. ಸಾವಿರಾರು ಮಂದಿ ಉಸಿರಾಡಿದ ಗಾಳಿ ಅತ್ಯಂತ ಕಲುಷಿತ

ಪಾಗಿ ಉಚ್ಛ್ವಾಸ-ನಿಶ್ವಾಸಗಳು ಅಲ್ಲಲ್ಲೆ ಸಿಕ್ಕಿಕೊಂಡಂತೆ ಭಾರಾಕ್ರಾಂತ ವಾಗಿವೆ. ಅರಹೊಟ್ಟೆ ಕದಾನ್ನ ಉಂಡು ಬಳಲಿ-ಬೆಂಡಾದ ದೇಹಪ್ರಕೃತಿ ವಿಶ್ರಾಂತಿಗಾಗಿ ಛೀಳಿಡುತಿತ್ತು. ಆ ಮೂಲೆಯ ಸ್ಥಳ ತನಗೆ ಸಿಕ್ಕಿದ್ದರೆ ಅನು ಕೂಲ ಎಂಬಷ್ಟು ಆಲೋಚನೆ. ಆದರೆ ಅಲ್ಲಿದ್ದವ ಬಿಡಬೇಕಲ್ಲ, ನೂರಿನ್ನೂರು ಮಂದಿ ವಿಶ್ರಮಿಸ ಬಹುದಾದ ಕಡೆ ಸಾವಿರಾರು ಮಂದಿಗೆ ಅವಕಾಶ....ಒಬ್ಬರ ಮೇಲೊಬ್ಬರು ಬೀಳದೆ ವಿಧಿಯಿಲ್ಲ. ನಿದ್ದೆ ಬಂದರಂತೂ ಸರಿ; ಇಲ್ಲದಿದ್ದದಲ್ಲಿ ರಾತ್ರಿಯನ್ನು ಕಳೆಯುವ ಗೋಳು ದೇವರೇ ಬಲ್ಲ.

ಮುದ್ದಪ್ಪ ಜನರ ಮಧ್ಯೆ ನುಗ್ಗಿ ಗೋಡೆಯ ಬದಿಗೆ ಸರಿದ. ಗೋಡೆಯ ಮಗ್ಗುಲಾಗಿ ಮಲಗಿದರೆ ಉಸುರಿನ ದುರ್ಗಂಧ ತಪ್ಪಿಸಿಕೊಳ್ಳಬಹುದು ಎಂಬ ಆಶಯ. ಒರಟು ನೆಲ-ಮೈ ಚೆಲ್ಲುವಷ್ಟೂ ಜಾಗವಿಲ್ಲದ ಇಕ್ಕಟ್ಟು. ಹೇಗೋ ಮೈಮುದುಡಿ ಮಗ್ಗುಲಾದ. ಅದುವರೆಗೆ ಅದುಮಿ ಹಿಡಿದಿದ್ದ ಉಸಿರೆಲ್ಲ ಒಮ್ಮೆಲೇ ಹೊರಬಿತ್ತು...ಯಾವ ಜನ್ಮದ ಕರ್ಮವೋ ಈ ಪಾಡು, ಎನಿಸಿ ಒಂದೆರಡು ಘಳಿಗೆ ಕಣ್ಮುಚ್ಚಿದ. ಎದೆಯಾಳದಲ್ಲಿ ಅತ್ಯಂತ ವೇದನೆ ಯಿಂದ ಬಿಸಿಯುಸಿರು ಹರಿದಾಡಿತು, ತನ್ನ ದುರಾದೃಷ್ಟವನ್ನು ತಾನೇ ಹಳಿದುಕೊಂಡ...ಸುಳ್ಳು-ಅನೀತಿ-ಅಧರ್ಮಗಳ ಆಶ್ರಯದಲ್ಲಿ ರಚಿತವಾದ ಸಮಾಜ ವ್ಯವಸ್ಥೆಯಲ್ಲಿ ಧರ್ಮಾನುಸಾರವಾಗಿ ಕಲ್ಯಾಣ ಕಾರ್ಯವನ್ನು ಕೈ ಕೊಳ್ಳಬೇಕೆಂದರೂ ಸುಳ್ಳನ್ನೇ ಮರೆಹೋಗಬೇಕಾಗಬಹುದು. ಅಂದಮೇಲೆ ?

ಮನದಾಳದಲ್ಲಿ ವಿಚಾರಮಥನ ನಡೆಯುತ್ತಲೆ ಇತ್ತು. ಎತ್ತರದಲ್ಲಿದ್ದ ಸಣ್ಣ ಕಿಟಕಿಯಲ್ಲಿ ಪೂರ್ಣಚಂದ್ರಮ ಕಾಣಿಸುತ್ತಲಿದ್ದ. ಅವನನ್ನು ನೋಡು ತ್ತಲೂ ಮನಸ್ಸಿಗೆ ಏನೋ ಒಂದು ಬಗೆಯ ಶಾಂತಿ. ಆದರೆ, ಸುತ್ತಮುತ್ತಿನ ಮಾತುಕತೆಗಳು ಕಿವಿಗಳನ್ನು ಕಿವುಡಾಗಿಸುತ್ತವೆ. ಪಕ್ಕದ ವಟಾರದಿಂದಲೂ ಸದ್ದು ಗದ್ದಲ ಕೇಳಿಬರುತಿತ್ತು. ಆ ಬೃಹದ್ ವಲಯದಲ್ಲಿ ಇನ್ನೆಷ್ಟು ಮಂದಿ ಕೊಳೆಯುತಿದ್ದಾರೋ ದೇವರೇ ಬಲ್ಲ.

ಹಾ....!

ಗಮನ ಗತಕಾಲಕ್ಕೆ ಜಿಗಿದೋಡಿತು ...ತಿಮ್ಮಯ್ಯ ಐ. ಎನ್. ಎ. ಸೇರಿಕೊಳ್ಳುವ ಮುನ್ನ ಅಂದಿದ್ದ "ಮುದ್ದೂ, ಶಾಂತಿ-ಸಂಧಾನಗಳ ಹೆಸರಿನಲ್ಲಿ

ಎಷ್ಟು ಕಾಲದಿಂದ ನಮ್ಮ ರಾಷ್ಟ್ರ ನರಳುತ್ತಿದೆ ? ಮೈಯ್ಯಲ್ಲಿ ಶಕ್ತಿ ಇದ್ದು, ತಲೆಯಲ್ಲಿ ಮಿದುಳಿದ್ದು ನರಳುವುದೆಂದರೆ ಎಂತಹ ಅವಮಾನ ?"

"ನೀನೇನೋ ಹಾಗೆನ್ನುತ್ತಿ. ಅಂದರೆ...."

ಮಾತನ್ನು ಮುಂದುವರಿಯಗೊಡದಂತೆ ಶಿವಮ್ಮಯ್ಯ ನಡುವೆ ಬಾಯಿ ಹಾಕಿದ "ಯಾರದೋ ಧ್ಯೇಯಕ್ಕೆ ಯಾರೋ ಬಲಿಯಾಗುತ್ತಿರುವುದು ಎಂತಹ ವಿಚಿತ್ರ ?...ದ್ವೇಷ ಹಿಂಸೆಗಳಿಗೆ ಮೈಯೊಡ್ಡಿ ಆತ್ಮವಂಚನೆ ಮಾಡಿಕೊಳ್ಳುವುದನ್ನು 'ಕರ್ತವ್ಯ' ಎನ್ನುವಿಯಾ ? ದೀಕ್ಷಾಬದ್ಧರಾಗಿ, ಆಶಾತೀತರಾಗಿ, ಮೃತ್ಯುವಿಗೆ ತುತ್ತಾಗಿ ಮಾನವ ಜನ್ಮವನ್ನು ನಿರರ್ಥಕಗೊಳಿಸುತ್ತ ಜೈಲು ಯಾತ್ರೆ ಕೈಗೊಳ್ಳುವ ತ್ಯಾಗಿಗಳ ಪ್ರಾಣರಕ್ಷಣೆ ನಿಜವಾದ ಕರ್ತವ್ಯವಲ್ಲವೆ ? ಯಾವ ಅಮೋಘವಾದ ಗೌರವಾದರಕ್ಕೆ ಪಾತ್ರರಾಗಬೇಕೆಂದು ಆಶಿಸಿ ಈ ಸಾಮೂಹಿಕ ಕೊಲೆಯ ಮಹಾಯಜ್ಞ ಕುಂಡಕ್ಕೆ ಸಮಿತ್ತನ್ನು ಒದಗಿಸುತ್ತಿರುವಿರಿ ? ಎಷ್ಟೋ ಮಂದಿ ತಮ್ಮ ಪ್ರಾಣವನ್ನು ವಿನಾ ಮತ್ತೇನನ್ನೂ ತಮಗಾಗಿ ಉಳಿಸಿಕೊಂಡಿಲ್ಲ ಎಂಬುದು ತಿಳಿಯದೇ ? ಇದಕ್ಕೆಲ್ಲಾ ಪರಿಹಾರ ಕಂಡುಕೊಳ್ಳದೆ ಮುನ್ನುಗುವುದು ಎಂತಹ ಅವಿವೇಕ ? ಮನುಷ್ಯರಾಗಿ ಹುಟ್ಟಿ ಮಾನವತೆಯನ್ನು ಅರಿತುಕೊಳ್ಳದಿದ್ದರೆ ಹೇಗೆ ? ನಿಜಕ್ಕೂ ಹೇಳುವುದಾದರೆ ನಾವು ಬಯಸುತ್ತಿರುವ ಸ್ವಾತಂತ್ರ್ಯ ಜೀವನ್ಮೃತ್ಯುವಿಗಾಗಿ ಅಲ್ಲ; ಜೀವನ ವಿಕಾಸಕ್ಕಾಗಿ !"

"ಅಲ್ಲ ಅಂದವರಾರು? ಯೋಚಿಸಿ ನೋಡು, ಈ ಅವಿಶ್ವಾಸ-ಅನುಮಾನ ಅಹಂಕಾರ ಶ್ರೇಯಸ್ಸಿನ ಹಾದಿಯಲ್ಲಿ ಖಂಡಿತ ಮುಳ್ಳುಬೇಲಿ ! ದುಡುಕು ಎಂದೂ ಒಳ್ಳೆಯದಲ್ಲ...ಪ್ರತಿಯೊಂದು ಹೆಜ್ಜೆಯನ್ನೂ ನಿಯಮಿತ ವ್ಯಾಪ್ತಿಯಲ್ಲಿಯೇ ಇರಿಸಬೇಕು. ಪ್ರಜಾ ಶ್ರೇಯಸ್ಸಿನ ಹೆಸರಿನಲ್ಲಿ ಪ್ರಜಾಕಂಟಕರಾಗುವುದು ಬೇಡ. ಇದು ಅಣುಬಾಂಬಿನ ಯುಗ. ಹೆಜ್ಜೆ ಕೊಂಚ ಹಿಂಚುಮುಂಚಾದರೂ ಅಪಾಯ ಕಾದಿರುತ್ತೆ !"

"ಅಹಿಂಸೆಯ ಹೆಸರಿನಲ್ಲಿ ಹೇಡಿಯಂತೆ ಸಾಯುವುದಕ್ಕಿಂತ ಅಣುಬಾಂಬಿಗೆ ಎದೆಯೊಡ್ಡುವುದು ಲೇಸು !"

ಆ ವಿಚಾರ ಸರಣಿ ಮನದಲೆಯಲ್ಲಿ ತೇಲಿ ಬರುತ್ತಲೂ ಎದೆಯಾಳದಲ್ಲಿ ಕಸಿವಿಸಿ ತುಂಬಿ ಹೋಯಿತು. ಅರ್ಥ ಭರಿತ ಉಷ್ಣೋಧಿಕ ಜ್ವಾಲೆಯಲ್ಲಿ

ತನು ಬೇಯುಹತ್ತಿತು. ಮುದ್ದಪ್ಪ ನೀಳವಾದ ನಿಟ್ಟುಸಿರು ಬಿಟ್ಟ....

ಆ ನಾದದಲ್ಲಿ ಎಂತಹ ಅರ್ಥವಿದೆ ?

ಆದರೆ !

ವಕ್ಷಪ್ರದೇಶದಲ್ಲಿ ಇದ್ದಕ್ಕಿದ್ದಂತೆಯೇ ಹೃದಯ ಮೃದಂಗ ಈಗಲೀಗ ಬಿರಿಯುವಂತೆ ಉದ್ಘೋಷಿಸಹತ್ತಿತು.

ಡಬ್. ಡಬ್. ಡಬ್. ಡಬ್.

ಹೃದಯದಾವೇಗವನ್ನು ತಡೆದುಕೊಳ್ಳಲಾರದೆ ಎರಡೂ ಕೈಗಳನ್ನು ಜೋಡಿಸಿಕೊಂಡು ಮಾದೇವನನ್ನು ಮನಃಪೂರ್ತಿ ಸ್ಮರಿಸಿ "ಹೆಂಡತಿ ಮಕ್ಕಳ ಪುನರ್ದರ್ಶನವಾಗುವವರೆಗೆ ಈ ಹೃದಯ ಒಡೆದು ಹೋಗದಿದ್ದರೆ ಸಾಕು." ಎಂದು ಅತ್ಯಂತ ದೀನಾದೀನನಾಗಿಬೇಡಿಕೊಂಡ.

ಇರುಳು ಉರುಳಿತು; ಬೆಳಗಿನ ತಂಗಾಳಿ ತೀಡುತ್ತಿದೆ.

ಯಾವುದೋ ಕಂಡರಿಯದ ವಾಹನದಲ್ಲಿ ಸಾಗಿತ್ತು–ತೀರದ ಹಾದಿ.

ದೂರ....ದೂರ....ದೂರ. ಅದೆಷ್ಟು ದೂರವೋ...ಆ ಹಾದಿ! ಪಯಣಿಸಿದಷ್ಟೂ ಮುಗಿಯದು. ಅಂತೂ, ಆ ಕೊನೆಯನ್ನು ಮುಟ್ಟಿದಾಗ ಇಳಿದುದು ಬಂಜರು ಭೂಮಿಯಲ್ಲಿ! ಮುಳ್ಳುಕಂಟಿ ಗಿಡಗೆಂಟಿಗಳು ಒಣಕಡ್ಡಿಗಳಾಗಿ ನಿಂತ ಹಳ್ಳತಿಟ್ಟುಗಳ ತಾಣ ಸುಡು ಬಿಸಿಲಿನಿಂದ ಕಾದು ಕೆಂಡದಂತೆ ಸುಡುತಿತ್ತು. ಆಶ್ಚರ್ಯ ತೃಷಿತಲೋಚನಗಳಿಂದ ಸುತ್ತಮುತ್ತ ನಿಟ್ಟಿಸುತ್ತ ಏಕಾಂಗಿಯಾಗಿ ಮುಂದುವರಿದ. ಅಪರಿಚಿತ ಸ್ಥಳದಲ್ಲಿ ಗೊತ್ತು ಗುರಿಯಿಲ್ಲದ ನಡೆ. ಏನೋ ಒಂದು ರೀತಿಯಲ್ಲಿ ಯಾಂತ್ರಿಕವಾಗಿ ನಡೆಯುವ ಕಾಲುಗಳು...ಹೊಂಡದ ಏರಿಯಲ್ಲಿ ನಡೆಯುವಾಗ ಕಾಲಡಿಯ ಮಣ್ಣು ಕುಸಿದು ಕುಕ್ಕರಿಸಿ ಹೊಂಡಕ್ಕೆ ಬಿದ್ದ ಅದರ ದಂಡೆ ಹುಡಿಮಣ್ಣಿನಿಂದ ಕೂಡಿದುದರಿಂದ ಮೇಲೆ ಹತ್ತಲು ಉಪಾಯ ಕಾಣಲಿಲ್ಲ. ಹೊಂಡ ಆಳವಾಗಿರಲಿಲ್ಲವಾದರೂ ಹತ್ತಲು ಮಾರ್ಗ ಇಲ್ಲದೆ ಚಡಪಡಿಸಿದ. ಒಂದಃ ಊರುಗೋಲಾದರೂ ಇದ್ದಿದ್ದರೆ ಊರಿ ಹತ್ತ ಬಹುದಾಗಿತ್ತು....ಆ ಯೋಚನೆ ಮೂಡಿದೊಡನೆಯೇ ಕೈಯಲ್ಲಿದ್ದ ಕೋವಿಯನ್ನು ಊರಿ ಅದರ ಸಹಾಯದಿಂದ ದಿಡಕ್ಕೆ ನೆಗೆದು ಕೋವಿಯನ್ನು ಮೇಲೆ ಕಿದುಕೊಂಡ. ಅದರ ನಳಿಕೆಯೊಳಗೆ ಸೇರಿಕೊಂಡಿದ್ದ ಮಣ್ಣು–ಮರಳನ್ನು ಕೊಡವಿ ಹೆಗಲಮೇಲೆ ಹೊತ್ತು ಧೀರ ಯೋಧನ ಭಂಗಿಯಲ್ಲಿ ಉದ್ದಾಮಭಾವ

ದಿಂದ ಮುಂದುವರಿದ. ಮರುಳುಗಾಡಿನಂತೆ ಎಲ್ಲಿಂದ ಎಲ್ಲಿಯವರೆಗೂ ಹುಡಿ ಮಣ್ಣಿದ್ದು ಹೆಜ್ಜೆ ಇಟ್ಟಲ್ಲಿ ಹೂತುಕೊಳ್ಳುವ ವಿಚಿತ್ರವನ್ನು ಸಂವೇದನಾ ಶೂನ್ಯನಂತೆ ನಿಟ್ಟಿಸಿದ. ಆ ಮುಹೂರ್ತದಲ್ಲಿ, ಆ ಸಂದಿಗ್ಧ ಪರಿಸ್ಥಿತಿಯ ಇತೀ ಹಾಸವೇನೆಂಬುದು ಮಾತ್ರ ಅರ್ಥವಾಗದು; ಎಷ್ಟೇ ಯೋಚಿಸಿದರೂ ಹೊಳೆ ಯುತ್ತಿಲ್ಲ. ಕುತೂಹಲಭರಿತ ಚಿತ್ತ, ಆಶ್ಚರ್ಯ ತೃಷಿತ ಲೋಚನಗಳು ಏಕೀ ಭವಿಸಿವೆ. ಇನ್ನು ಸಮಸ್ಯೆ ಬಗೆ ಹರಿಯುವುದೊಂದು ಬಾಕಿ. ಆದರೆ, ಹಾ...! ಮತ್ತೆ ಜಾರಿತು ಮಣ್ಣು. ಈ ಸಲ ಕುಸಿದುದು ಸಣ್ಣ ಹೊಂಡಕ್ಕೆ. ಮೊಣ ಕಾಲೆತ್ತರದ ಆ ಹೊಂಡವನ್ನು ಕೋವಿಯ ಸಹಾಯದಿಂದಲೇ ಹತ್ತ ಬೇಕಾ ಯಿತು. ಅದೇ ಸಮಯದಲ್ಲಿ ಅಲ್ಲಿಗೆ ಬಂದ ಕಾವೇರಿ ದೃಢ ಶಾಂತ ಸ್ವರದಲ್ಲಿ ಕೂಗಿ ಹೇಳಿದಳು,

"ಮುದ್ದೂ, ಈ ಸುಡು ಬಿಸಿಲಲ್ಲಿ ಏಕೆ ದೂರ ಪಯಣ? ಇಂದಿಗೆ ಸಾಕು, ಆ ಅಗಳನ್ನು ಹಾರಿ ಈ ಕಡೆ ಬಂದು ಬಿಡು."

ಆ ಅಕ್ಕರೆಯ ನುಡಿ ಅದೆಷ್ಟು ಸಂತಸವನ್ನು ತಂದಿತೋ....ಮುದ್ದಪ್ಪ ಮೃದು ಮಂದಹಾಸ ಬೀರಿದ.

ಅಲ್ಲೇ ಸನಿಹದಲ್ಲಿ ಅದೇ ಅವ್ವ....ಅದೇ ತೀರದ ಹಾದಿ....ಪಯಣಿ ಸಲು ಮಾದು-ಪೂವಿಯರು ಸಜ್ಜಿತರಾಗಿದ್ದಾರೆ...ನೋಟ ಹಾದಿಯ ಕಡೆ ಹರಿಯಿತು. ಆದರೆ ಅದೆಂದಾದರೂ ಕೊನೆಗೊಳ್ಳುವುದುಂಟೇ? ಅಷ್ಟು ದೂರ ಪಯಣಿಸಲಾರೆ ಎಂದು ಚೀರಿತು ಚೇತನ.

ಹಾ...!

ಮುದ್ದಪ್ಪ ಕಣ್ತೆರೆದು ನಿರಿನಿರಿ ನಿಟ್ಟಿಸಿದ.

ಕಿಟಕಿಯಲ್ಲಿ ಬೆಳುದಿಂಗಳು ಬೆಳ್ಳನೆ ಹರಿದಿತ್ತು; ಚಂದ್ರನು ಗೋಚರಿಸಲಿಲ್ಲ.

೨೯

...ಕಾಲ ಮಾನ ಉರುಳುತ್ತಲೇ ಇತ್ತು.

...ಅದರೊಂದಿಗೆ ಕಷ್ಟಸುಖಗಳು ಕ್ಷಯಿಸುತ್ತಲೇ ಇದ್ದುವು.

ಪ್ರಕೃತಿಯು ವೈಶಿಷ್ಟ್ಯದಲ್ಲಿ ಭಯಂಕರ ವ್ಯಾಘ್ರ ಸಹ ಮುದ್ದು ಮೋಹನ ಮಗು....ಪ್ರಕೃತಿಗೆ ಕ್ರೂರ-ಸೌಮ್ಯಗಳ ಪರಿಭೇದವಿಲ್ಲ ; ಮೇಲು–ಕೀಳುಗಳ ವಿಶೇಷವೂ ಇಲ್ಲ. ಎಲ್ಲರ ಮೇಲೂ ಕೃಪಾಕಟಾಕ್ಷ ಬೀರಿ ಉಡಿಯಲ್ಲಿಟ್ಟು ಪ್ರೇಮಾದರಗಳಿಂದ ಪರಿಪೋಷಿಸುತ್ತಾಳೆ.

ಅಂತಲೇ ವ್ಯಾಘ್ರಮಹನೀಯ ಎಲ್ಲೋ ಹುಟ್ಟಿ, ಬೆಳೆದು ವನದೇಶದಲ್ಲಿ ಸ್ವಚ್ಛಂದವಾಗಿ ಸಂಚರಿಸಿ ಅಲ್ಲಲ್ಲಿ ಬೇಟೆಯಾಡಿ ಒಡಲು ತುಂಬಿ, ಪ್ರಾಂತ್ಯ ದಿಂದ ಪ್ರಾಂತಕ್ಕೆ ವಲಸೆ ಬಂದು ನೆರೆ ನಾಡಿಗೆ ದಾಟುವ ಮುನ್ನ ಹಲವಾರು ಮನೆಗಳ ಮುಖ್ಯ ಅತಿಥಿಯಾಗುವುದು ವಾಡಿಕೆ. ಕೆಲವೊಮ್ಮೆ ವರ್ಷಾನು ವರ್ಷಗಳು ಹುಲಿಗಳ ಸೊಲ್ಲಿಲ್ಲದೆ ದನಕರುಗಳು ನೆಮ್ಮದಿಯಿಂದ ಬದುಕುತಿ ದ್ದುವು. ಇನ್ನು ಕೆಲವುವೇಳೆ ಅವು ತಣ್ಣಗೆ ಇಲ್ಲೆ ತಂಗುವುದರಿಂದ ದನಕರು ಗಳಿಗೆ ವ್ಯಾಘ್ರಸ್ವಪ್ನ! ಈ ಸಲ ವಲಸೆ ಬಂದ ಹುಲಿ ಸಪ್ತವಾರಗಳನ್ನು ಅಲ್ಲೇ ಕಳೆದಿತ್ತು. ವಾರಕ್ಕೊಂದೆರಡು ಮನೆಗಳ ಭರ್ಜರಿ ಔತಣಗಳಿಸಿ ಆರಾಮ ವಾಗಿ ವನದೇಶದಲ್ಲಿ ತಳ ಊರಿತು !

ಇದುವರೆಗೆ ನಿರ್ಭಯದಿಂದ ಎಲ್ಲೆಲ್ಲೂ ಸಂಚರಿಸುತಿದ್ದ ಶಾಂತಿವೀರರು ಹೆಬ್ಬುಲಿಯ ಹಗರಣದಿಂದ ಭಯಭೀತರಾದರು. ಜನ ಜಂಗುಳಿ ಕಾಡು ಮೇಡು ಗಳಿಂದ ಸೌದೆ ತರಲು ಅಂಜಿದರೆ, ಗೋವಳರು ಹಸುಗಳನ್ನು ದೂರ ಅಟ್ಟಲು ಅಂಜಿದರು. ಅದು ಕೆಲವೊಮ್ಮೆ ಪುರಜನರ ದೃಷ್ಟಿಗೆ ತೆಕ್ಕನೆ ಬಿದ್ದು ಗಲಿಬಿಲಿ ಮೂಡಿಸಿತು, ತೋಟಗಾರರು–ಕೋವಿಗಾರರು ಎಷ್ಟೇ ಶ್ರಮ ವಹಿಸಿದರೂ ಬೇಟೆಯಾಡಲು ದಕ್ಕಲಿಲ್ಲ. ಪ್ರಾಂತವನ್ನು ಬಿಟ್ಟು ಹೋಗಲೂ ಒಲ್ಲದು. ಅದು ಓಡಾಡಿದ ಹಲವಾರು ಹೆಜ್ಜೆಯ ಗುರುತುಗಳನ್ನು ನೋಡಿದಾಗ ಬಳಿ ಯಲ್ಲಿ ಮರಿಯೊಂದು ಪುಟ್ಟ ಪುಟ್ಟ ಹೆಜ್ಜೆಯಿಟ್ಟು ನಡೆದು ಹೋದ ಕುರುಹು

ಗಳನ್ನು ಕಂಡು ಜನಮನಕ್ಕೆ ಇನ್ನಷ್ಟು ಗಾಬರಿ. 'ತಾಯಿಹುಲಿ' ಎಂದರೆ ಭಯಂಕರ ಭೀತಿಯ ಅಭಿವ್ಯಕ್ತಿ ತಾನೇ ?

ಈ ತನಕ ಎಲ್ಲೆಡೆಯೂ ಎಣೆಯಿಲ್ಲದೆ ವಿಜೃಂಭಿಸುತ್ತಿದ್ದ ಚಳವಳಿಗಾರರ ಸುದ್ದಿ ಎಲ್ಲಡಗಿತೋ...ಊರಿನಲ್ಲಿ ಯಾರ ಬಾಯಿಯಲ್ಲಿ ನೋಡಿದರೂ ಹುಲಿಯ ಸುದ್ದಿ ; ದೃಷ್ಟಿಗೆ ಬಿದ್ದ ಬಗೆ; ಎತ್ತುಗಳನ್ನು ಕೊಂದ ಬಗೆ; ನದೀ ಪಾತ್ರದಲ್ಲಿ ಓಡಾಡಿದ ಬಗೆ ರುದ್ರರೌದ್ರವಾಗಿ ಬಾಯಿಂದ ಬಾಯಿಗೆ ಹಬ್ಬುತಿತ್ತು.

ರಾಜದಂಡದ ಭಯ ದುರ್ಬಲಚಿತ್ತದ ವಿಕಲ್ಪ ಎಂದು ಘಂಟಾಘೋಷ ವಾಗಿ ಸಾರುತಿದ್ದ ಜನತೆಗೆ ವ್ಯಾಘ್ರದ ಭಯ ದುರ್ಬಲ ಹೃದಯದ ವಿಪಾಕವೇ ಆಯಿತು. ಉನ್ಮತ್ತ ಚಳವಳಿ ಕ್ಷೇತ್ರದ ಸಚೇತಕರು ವ್ಯಾಘ್ರದ ಯೋಚನೆ ಯಲ್ಲಿ ತೊಡಗಿದರು.

ಈ ನೆಲೆಯಲ್ಲಿ ರೈತರು ಪಡುತ್ತಿದ್ದ ಪಾಡು ಕಡಿಮೆಯದಲ್ಲ. ತಮ್ಮ ತಮ್ಮ ದನಕರುಗಳನ್ನು ಮನೆಯಂಗಳದಲ್ಲಿ, ಹತ್ತಿರದ ಬಯಲಿನಲ್ಲಿ ಅಥವಾ ಗದ್ದೆಯ ಕೋಗಿನಲ್ಲಿ ತಡೆಹಿಡಿಯುವ ಕಷ್ಟದೊಂದಿಗೆ ಪುಷ್ಕಳವಾಗಿ ಹುಲ್ಲು ಮೇವು ಒದಗಿಸುವ ಭಾರವು ಹೆಗಲೇರಿತು. ಈ ಕಠಿಣ ಪ್ರಸಂಗದಲ್ಲಿ ಕಾವೇ ರಿಯ ಸಂಸಾರ ಬಹಳವಾಗಿ ಬಳಲಿತು. ಅಲ್ಲಿ ಇಲ್ಲಿ ಕೊಯ್ದು ತರುವ ಹುಲ್ಲು ಒಂದು ಹೊತ್ತಿಗೂ ಬಾರದು. ಒಣಹುಲ್ಲು ಮುಗಿದು ಎಂದೋ....ಮಕ್ಕಳಿಗೆ ಉಣಿಸಿಕ್ಕುವ ಭಾರದೊಂದಿಗೆ ಈ ಗೋಳೂ ಹೆಣೆದುಕೊಂಡಿತು.

ಈ ಲೋಕದೊಡನೆ ಯಾವ ಸಂಪ್ರವವೂ ಬೇಡ ಎನ್ನುವಂತಿಲ್ಲ. ಏನೇ ಇರಲಿ, ಪರಿಸ್ಥಿತಿಗೆ ಹೊಂದಿ ಕೊಂಡರೇನೇ ಜೀವನ. ಗದ್ದೆ–ತೋಟಗಳ ಕೆಲಸ ಕಾರ್ಯಗಳು ಅಸಮರ್ಪಕವಾದುದರಿಂದ ಬೆಳೆಯೂ ಅಸಮರ್ಪಕ... ಭುಜಮೂಲದಲ್ಲಿ ಬಲವಿಲ್ಲದಿದ್ದರೂ, ಕಷ್ಟನಷ್ಟಗಳನ್ನನುಭವಿಸುತ್ತ ಮರು ಭೂಮಿಯಲ್ಲಿ ಪಯಣಿಸುವ ಸಾಹಸಿಯಂತೆ ಸಾಹಸಪೂರ್ವಕವಾಗಿ ಮುಂದು ವರಿಯುವುದು ಅನಿವಾರ್ಯ....ನಾನಾ ಈತಿಬಾಧೆಗಳ ಸಮುದಾಯದಲ್ಲಿ ಒಂದೊಂದು ದಿನ ಕಳೆಯುವುದೆಂದರೂ ಕತ್ತಿಯಲುಗಿನಮೇಲೆ ಹರಿದಾಡಿದಂತೆ ನಲುಗುತಿತ್ತು–ಜೀವ. ಇನ್ನು ಒಣಹುಲ್ಲು ಕೊಂಡುಕೊಳ್ಳದೆ ಗತ್ಯಂತರವಿಲ್ಲ. ಬೆಲೆ ನೋಡಿದರೆ ವಿಪರೀತ. ಯಾವರೀತಿ ಭರಿಸಬೇಕೋ ಅರ್ಥವಾಗುತ್ತಿಲ್ಲ.

ತಾಳಗಟ್ಟೆ ಮಂಜುನಾಥನ ಮನೆಗೆ ಹೋಗಿ ಕೇಳಿದರೆ ಕೊಟ್ಟಾನೇನೋ.... ಅಂದಿಂದಿಗೂ ಆ ಮನೆಗೂ ಈ ಮನೆಗೂ ಹೊಂದಿಕೊಂಡ ಸ್ನೇಹಾಭಿಸಾರ ಭವ್ಯವಾದದ್ದು. ಅದರಲ್ಲಿ ಉಲ್ಲಾಸೋನ್ಮಾದಗಳು ಸತತ ಹರಿದಾಡಿವೆ; ಮತ್ತೇಕೆ ಸಂಕೋಚ ? ಎಂಬ ಪ್ರಶ್ನೆ ಮನದಲ್ಲೆದ್ದಾಗ 'ಸಾಧು' ಎನಿಸಿದರೂ ಭಾರವಾದ ಕಾಲುಗಳನ್ನು ಎಳೆದುಕೊಳ್ಳುತ್ತ ಹೊರಟಳು ಕಾವೇರಿ. ಇದು ವರೆಗೆ ಎಷ್ಟೇ ಕಷ್ಟನಷ್ಟಗಳನ್ನು ಅನುಭವಿಸಿದರೂ, ಇನ್ನೆಷ್ಟೇ ಸುಖ ದುಃಖ ಗಳನ್ನು ಯೋಚಿಸಿದರೂ ಯಾರ ಮುಂದೆಯೂ ಬಿಕ್ಕೆಯನ್ನು ಬೇಡಿರಲಿಲ್ಲ. ಇಂದು ಹಸುಕರುಗಳ ಹಸಿದ ಒಡಲಕ್ರಂದನ ಅದನ್ನು ವಿನಮ್ರತೆಯಿಂದ ಮಾಡಿಸುತ್ತಿದೆ. ಮೇಲಾಗಿ, ಬೇಡುವುದಕ್ಕಿಂತ ಸಾವು ಹಿತ ಎಂದು ಬಿನ್ನೈಸಿ ಕೊಳ್ಳುತ್ತಿದೆ ಅಂತರ್ವಾಣಿ....ತಾನೊಬ್ಬಳೇ ಆಗಿದ್ದಲ್ಲಿ ಹಾಗೆನ್ನಬಹುದಾ ಗಿತ್ತು. ಆದರೆ ತನ್ನ ಸಂಸಾರ....? ಸಣ್ಣ ಪುಟ್ಟ ಮುತ್ತಿನಂತಹ ಮಕ್ಕಳು ? ಆ ಯೋಚನೆ ಚಿತ್ತಭಿತ್ತಿಯಲ್ಲಿ ಮೂಡಿದೊಡನೆ ಅನಿರೀಕ್ಷಿತವಾಗಿ ಉಕ್ಕಿಬಂದ ಕಂಬನಿಯನ್ನು ಯಾರಿಗೂ ತೋರಗೊಡದಿರಲು ಶ್ರಮಬಿಂದು ನಿಮಜ್ಜಿತ ಹಣೆ ಯನ್ನು ತೀಡಿಕೊಳ್ಳುವ ನೆವದಲ್ಲಿ ನಿವಾರಿಸಿಕೊಂಡು ಮೆಟ್ಟಿಲಿಳಿದಳು. ಅಲ್ಲಿಂದ ಹತ್ತು ಹೆಜ್ಜೆ ನಡೆದು ಅಂಗಳವನ್ನು ದಾಟುವುದರೊಳಗಾಗ ಚಿಟ್ಟೆ ಹಿಂದುಗಡೆ ಓಡಿ ಬಂದ. ಎಳೆದನಿ ಮನಮೋಹಕವಾಗಿ ಮೊಳಗಿತು,

"ಅವ್ವಾ ! ನಾನೂ ಬ ರುವೆ.

"ಈಗ ಬೇಡ ಮಗೂ ! ತುಂಬ ಬಿಸಿಲಿದೆ."

"ಪರವಾಯಿಲ್ಲ ಅವ್ವಾ !"

ಚಿಟ್ಟೆ ಹಿಡಿದ ಹಠಬಿಡದೆ ಒಂದುಗೂಡಿ ಹೆಜ್ಜೆ ಹಾಕಿದ. ಕೆಳಮಟ್ಟೆಯ ಹೆಬ್ಬಯಲನ್ನು ದಾಟಿ ಗದ್ದೆಯಂಚಿನಲ್ಲಿ ಅರ್ಧ ಫರ್ಲಾಂಗ್ ನಡೆದರೆ ತಾಳಗಟ್ಟೆ. ಮಾದಯ್ಯನೊಂದಿಗೆ ಅರೆಸ್ಟಾದ ಬೆಳ್ಳಿಯಪ್ಪ ಇನ್ನೂ ಜೈಲಿನಲ್ಲೇ ಇದ್ದಾನೆ. ಅಣ್ಣ ತಮ್ಮಂದಿರು ಒಟ್ಟಿಗೆ ಇದ್ದು ಮಂಜುನಾಥ್ ಅರೆಸ್ಟಾಗದೆ ಉಳಿದುದರಿಂದ ಅವರ ಮನೆಯ ವ್ಯವಹಾರಕ್ಕೆ ಯಾವ ಕುಂದೂ ಉಂಟಾಗಿರಲಿಲ್ಲ. ಹಾದಿ ಸವೆಯುತಿದ್ದಂತೆ ಹೋಗುವುದೇನೋ ಸರಿ, ಕೇಳುವುದು ಹೇಗೆ ಎಂಬ ಆತ್ಮ ಸಂಕೋಚ ಕ್ಷಣೇ ಕ್ಷಣೇ ವರ್ಧಿಸುತಿತ್ತು. ಕಾಲಡಿಗೆ ಸಿಕ್ಕಿ ಸದ್ದುಗೈವ ದರು ಗೆಲೆಗಳ ಸಣ್ಣರವ ಜಲ್ಲಿ-ಕಲ್ಲು ಮರಳುಗಳ ಲರಕ್ ಲರಕ್ ಶ್ರುತಿಯೊಂದಿಗೆ

ಸ್ವಚ್ಛಂದವಾಗಿ ದನಿಗೂಡಿಸುತಿತ್ತು. ಅಭಿಶಸ್ತ ಹೆಜ್ಜೆಗಳ ಗತಿ ಮಂದಮಂದ ವಾಗಿದ್ದರೂ ತನ್ನನ್ನು ತಾನು ಸಂಬಾಳಿಸಿಕೊಳ್ಳುತ್ತ ಮುಂದುವರಿದಳು– ಮುರಿದ ಬಂಡಿಯನ್ನು ಕ್ರೇನಿನ ಸಹಾಯದಿಂದ ಎಳೆದೊಯ್ಯುವಂತೆ. ಚಿಟ್ಟಿ ಕೈಹಿಡಿದುಕೊಂಡು ಹೆಜ್ಜೆ ಹಾಕುತಿದ್ದ. ನೂರು ಮಾರು ಹಾದಿ ಸ್ವಲ್ಪ ಹೊತ್ತಿನೊಳಗಾಗಿ ಕರಗಿತು. ಮಂಜುನಾಥ್ ತಲೆಬಾಗಿಲಲ್ಲೇ ಎದುರಾದ ಮುಖ ಭಾವ ಪ್ರಸನ್ನವಾಗಿತ್ತು.

"ಬನ್ನಿ ಅವ್ವಾ!" ಆತ್ಮೀಯತೆಯಿಂದ ಸ್ವಾಗತಿಸುತ್ತ ತುಟಿಗಳ ಮೇಲೆ ಸುಹಾಸವನ್ನು ಸೂಸಿ, ಐಮರದ ಮೇಲೆ ಕೂಡಿಸಿ ಸನಿಹದಲ್ಲಿ ತಾನೂ ಕುಳಿತ. ಗೃಹಿಣಿ ಬೆಳಗಿನ ತಂಬಿಗೆಯ ನೀರಿನೊಡನೆ ಹೊರಬಂದಳು. ಪರಸ್ಪರ ಕುಶಲ ಪ್ರಶ್ನೆಗಳಾದ ನಂತರ– "ನೀವು ಇಲ್ಲಿಗೆ ಬಂದು ಎಷ್ಟು ಕಾಲವಾಗಿತ್ತೋ." ಎಂದಳು ಗೃಹಿಣಿ ಔಪಚಾರಿಕವಾಗಿ.

"ನಮಗೆ ಅಷ್ಟು ಸಮಯವಾದರೂ ಎಲ್ಲಿದೆ ?"

"ಅದು ಹೌದು." ಎಂದುಕೊಂಡಳಾಲಲನೆ; ತುಟಿಗಳು ಬಿರಿಯಲಿಲ್ಲ.

"ನಾನೊಂದು ಉದ್ದೇಶಕ್ಕಾಗಿ ನಿಮ್ಮಲ್ಲಿಗೆ ಬಂದೆ. ಆದರೆ, ಹೇಳುವುದೇ ಸಂಕೋಚ."

"ಬಹುಶಃ ಹಣವನ್ನು ಸಾಲ ಕೇಳಲು ಬಂದಿರಬಹುದು"ಎಂದುಕೊಂಡ ಮಂಜುನಾಥ್. ಗೃಹಿಣಿಯೂ ಹಾಗೆಂದೇ ಭಾವಿಸಿದಳು. ಆ ಮುಹೂರ್ತ ದಲ್ಲಿ ಒಂದೆರಡು ಘಳಿಗೆ ಯಾರ ತುಟಿಯೂ ಬಿರಿಯಲಿಲ್ಲ. ಕಸಿವಿಸಿ ತುಂಬಿದ ಚಿತ್ತ ಕರ್ತವ್ಯ ಭಾರದಿಂದ ಯೋಚನೆಗೆ ಶರಣಾಯಿತು. ನಿಃಸಂಜ್ಞನಂತೆ ಸ್ವಲ್ಪ ಹೊತ್ತು ಸುಮ್ಮನಿದ್ದು ಅನಂತರ ಮೌನ ಮುರಿದ,

"ಏನು ಹೇಳಿ ?...ನಿಮಗೆ ಈ ವಯಸ್ಸಿನಲ್ಲಿ ಇಷ್ಟು ತಾಪತ್ರಯ ಬರ ಬಾರದಿತ್ತು. ಮಕ್ಕಳಿಬ್ಬರೂ ದೇಶದ ಪಾಲಾದರು. ಕಷ್ಟಗಳು ಬಂದರೆ ಹೀಗೆಯೇ. ಒಂದರ ಮೇಲೊಂದು ಬರುತ್ತಲೇ ಇರುತ್ತವೆ...ಅನುಭವಿಸು ವವರ ಪಾಡು ದೇವರಿಗೇ ಪ್ರೀತಿ!"

"ದೇವರಿಗೆ ಪ್ರೀತಿಯಾದರೆ ಅಷ್ಟೇ ಸಾಕಲ್ಲ." ಮುಗುಳು ನಕ್ಕಳು. ವೃದ್ಧ ಜನನಿ, ಸಹಜ ಶಾಂತ ಮುಖಮುದ್ರೆಯ ಮೇಲೆ ಶ್ರಮಬಿಂದುಗಳು ತುಂತುರು ತುಂತುರಾಗಿ ಹೊಮ್ಮಿದ್ದುವು.

ಭಕ್ತಿ ಪ್ರದಾನವಾದ ಆ ವಿನಮ್ರ ಹಾಸ್ಯರಸವನ್ನು ಸವಿದು ನುಡಿದ ಮಂಜುನಾಥ್ "ವಿಧಿಲಿಖಿತ ದೃಢವಾಗಿರುವಾಗ ದೇವರಿಗೆ ಪ್ರೀತಿಯಾದರೂ ಒಂದೇ ಆಗದಿದ್ದರೂ ಒಂದೇ."

ಕಾವೇರಿ ಏನೋ ಹೇಳಲು ಪ್ರಯತ್ನಿಸಿದರೂ ಬಾಯಿಂದ ಮಾತುಗಳು ಹೊರಡದಾದುವು. ಮೆಲ್ಲನೆ ಕರವಸ್ತ್ರದಿಂದ ಮುಖವನ್ನು ಒರಿಸಿಕೊಂಡು ಸ್ನೇಹ ಪೂರ್ಣಭಾವವನ್ನು ಪ್ರೋಜ್ವಲಗೊಳಿಸುವಂತೆ ಒಂದೆರಡು ಘಳಿಗೆ ನಿಧಾನಿಸಿದ ನಂತರ,

"ಹುಲಿ ಕಾಟದಿಂದ ಹಸುವನ್ನು ಹೊರಗಡೆ ಬಿಡುವುದೇ ಕಷ್ಟ....ಈ ಕಾಲದಲ್ಲಿ ಹಸುರು ಹುಲ್ಲು ಸಿಗುವುದಿಲ್ಲ. ಒಣ ಹುಲ್ಲು ಮುಗಿದು ಹೋಗಿ ತುಂಬ ತಾಪತ್ರಯವಾಗಿದೆ, ಈಗ ಎಲ್ಲಾದರೂ ಕೊಳ್ಳದೆ ಗತ್ಯಂತರವಿಲ್ಲ. ನೀನು ಒಂದು ಗಾಡಿ ಹುಲ್ಲು ಕೊಟ್ಟೆಯಾದರೆ ಬಹಳ ಉಪಕಾರವಾಗುತಿತ್ತು." ಎಂದಳು ಜನನಿ.

ಅತ್ಯಂತ ಸಂಕೋಚಯುತವಾದ ಆ ಮಾತುಗಳು ಹೊರಡಬೇಕಾದರೆ ಎದೆಯಾಳದಲ್ಲಿ ಅದೆಷ್ಟು ಕಸಿವಿಸಿ ಮೂಡಿತೋ ಹೇಳುವಂತಿಲ್ಲ. ಬಹುಮೂಲ್ಯವಾದ ಮಾನಸಂಪುಟವನ್ನು ಬಿಟ್ಟುಕೊಡುವಾಗ ಯಾವುದೋ ಕಂಡರಿಯದ ದುರ್ದಮ್ಯ ಶಕ್ತಿ ತನ್ನ ಗಂಟಲನ್ನು ಅದುಮಿ ಹಿಡಿದಂತೆ ಭಾಸವಾಯಿತು.

"ಕೊಡುವುದೇನೋ ಸರಿ; ನನಗೆ ಹಣದ ಅಗತ್ಯ ತುಂಬ ಇದೆ ನಿಮ್ಮ ಕೈಯಲ್ಲಿ ಹಣವುಂಟೇ ?"

ಅವನು ತಟ್ಟನೆ ತೊಟ್ಟುಗಳಚಿದಂತೆ ಸ್ವಲ್ಪವೂ ವಿಚಲಿತನಾಗದೆ ಪ್ರಶ್ನಿಸಿದಾಗ ತನ್ನ ಕಿವಿಗಳನ್ನು ನಂಬಬೇಕೋ ಬೇಡವೋ ತಿಳಿಯಲಿಲ್ಲ ಕಾವೇರಿಗೆ. ತೊದಲಿದಂತೆ ಹೇಳಲಾರದೆ ಹೇಳಿದಳು "ಅದೇ ಈಗ ಕಷ್ಟಕ್ಕೆ ಬಂದಿದೆ. ಬೆಳೆ ಬಂದೊಡನೆಯೇ ಬತ್ತ ಕೊಡುವೆ. ಅದರ ಬಗ್ಗೆ ಯೋಚನೆ ಬೇಡ."

"ಅದು ತಿಳಿಯದೇ ? ಆದರೆ ನನಗೀಗಲೇ ಹಣದ ಅವಶ್ಯಕತೆ ಇತ್ತು. ಅದರಿಂದಾಗಿಯೇ ಹುಲ್ಲು ಕೊಡುವ ಯೋಚನೆ. ನಿಮಗಲ್ಲದಿದ್ದರೂ ಇನ್ನಾರಿಗಾದರೂ ಕೊಟ್ಟು ಹಣ ಪಡೆಯಲೇಬೇಕು."

ಒಡಕು ಘಟದ ಸ್ವರದಂತೆ ಹರಿದ ಧ್ವನಿ ತನುಮನಗಳನ್ನು ಈಟಿಯಂತೆ ಇರಿಯಿತು. ವಿಷಮ ಸ್ಥಿತಿಯಲ್ಲಿ ಒಂದು ಘಳಿಗೆ ಏನೆನ್ನಬೇಕೋ ಹೊಳೆಯ

ಲಿಲ್ಲ. ಎದೆಯ ನೆಲೆಯಲ್ಲಿ ಸರಾಗವಾಗಿ ಹರಿದಾಡುತಿದ್ದ ಉಸಿರು ಅಲ್ಲಿಂದಲ್ಲೆ ಸಿಕ್ಕಿಕೊಂಡಂತೆ ಭಾಸವಾಯಿತು. "ಎಲ್ಲಾದರೂ ಹಣದ ಏರ್ಪಾಡು ಮಾಡಿ ಕೊಂಡು ಬರುವೆ." ಎನ್ನುತ್ತ ಎದ್ದು ನಿಂತಳು. ಮಂಜುನಾಥ್ ಸತಿಯೊಡನೆ ತಲೆ ಬಾಗಿಲವರೆಗೂ ಬಂದು ಬೀಳ್ಕೊಟ್ಟ. ದಿನಸಿ ಅಂಗಡಿಯಲ್ಲಿ ಅಡವಿಟ್ಟ ಕಂಠಿಸರದ ಪರವಾಗಿ ಐವತ್ತು ರೂಪಾಯಿಗಳನ್ನು ಪಡೆಯುವುದು ಲೇಸೆಂಬ ಯೋಚನೆಯಲ್ಲಿ ಹಾದಿ ಸಾಗಿತು. ತನಗೀ ಸ್ಥಿತಿ ಬರುತ್ತೆ ಎಂಬ ಯೋಚನೆ ಒಮ್ಮೆಯೂ ಮೂಡಿರಲಿಲ್ಲ. ಅತೀವ ದುಃಖಾಬುಧಿಯಲ್ಲಿ ಶರೀರ ಮುಳು ಗೇಳುತಿತ್ತು. ಹೇಗೆಹೇಗೋ ಹೋಗಿ ಅಂಗಡಿಯಾತನ ಮುಂದೆ ವಿಷಯ ವನ್ನಿಟ್ಟಳು. ಅವನು ಮೊದಲು ಒಪ್ಪಲಿಲ್ಲ. ಅನಂತರ ನಾಲ್ಕಾರು ಬಾರಿ ಲೆಖ್ಖಾಚಾರ ಹಾಕಿ ಅಷ್ಟು ಹಣ ಕೊಟ್ಟರೂ ತನಗದರಿಂದ ಲಾಭವಿದೆ ಎಂಬು ದನ್ನು ಅರಿತುಕೊಂಡ ಮೇಲೆ ಹಣ ಕೊಡಲೊಪ್ಪಿದ. ಅಲ್ಲಿಂದ ಹಣವನ್ನೊಯ್ದು ಮಂಜುನಾಥನಿಗೆ ಕೊಟ್ಟು ಹುಲ್ಲು ತರಲು ಹೇಳಿ ಮನೆ ಮುಟ್ಟುವಷ್ಟರಲ್ಲಿ ಹಣ್ಣಾಗಿತ್ತು ಜೀವ. ಬಿಸಿಲಲ್ಲಿ ಸುತ್ತಿ ಚಿಟ್ಟೆಯ ಎಳೆಮುಖ ಕೆಂಪುಕೆಂಪಾ ಗಿತ್ತು. ಎಲ್ಲಾ ವಿಚಾರವನ್ನು ಪೊನ್ನು ಪೂವಿಯರಿಗೆ ಸ್ವಲ್ಪದರಲ್ಲಿ ಹೇಳಿ ಚಿಟ್ಟೆಯೊಡನೆ ನೀರುಮನೆಗೆ ಹೋದಳು. ಉಷ್ಣೋಧಿಕ ಜ್ವಾಲೆಯಲ್ಲಿ ಬೆಂದ ತನು ಹಂಡೆಯಷ್ಟು ತಣ್ಣೀರು ಸುರಿದರೂ ತಣಿಯದು. ಭಾರವಾದ ಹೆಜ್ಜೆ ಗಳನ್ನು ಎಳೆಯಲಾರದೆ ಎಳೆದುಕೊಂಡು ಹೊರಬಂದಾಗ, ಅಂಗಳದಂಚಿನ ಶಾಲ್ಮಲೀವೃಕ್ಷದ ನೆರಳಿನಲ್ಲಿ ಕಟ್ಟಿದ ಹಸು ದೊಡ್ಡದನಿಯಲ್ಲಿ ಕೂಗಿತು. ಸದ್ದಿ ಲ್ಲದ ಶಾಂತಿಯ ಮೇಲೆ ಗರಗರನೆ ಗರಗಸವನ್ನೆಳೆಯುವಂತೆ. ಏನೋ ಒಂದು ರೀತಿಯಲ್ಲಿ ಊಹಿಸಲೂ ಆಗದ, ಕಿಂಚಿತ್ ಕೃತಕೃತ್ಯತೆಯ ಸಮಾಧಾನದಲ್ಲಿ ಹುಬ್ಬೆತ್ತಿ ಹಸುವಿನ ಕಡೆ ದೃಷ್ಟಿಸಿ ನೋಡಿ ಒಳ ಬಂದಳು.

'ಪಾಪ' ಮೂಕಪ್ರಾಣಿಗಳು ಹಸಿದಿವೆ....ಎಷ್ಟು ಬೇಗ ಹುಲ್ಲು ತಂದರೆ ಅಷ್ಟು ಕ್ಷೇಮ. ಮಂಜುನಾಥ್ ತಡಮಾಡಲಾರನಷ್ಟೆ....ಎಂದುಕೊಳ್ಳುತ್ತಿರು ವಾಗಲೇ ಪೊನ್ನು ಎದುರಾದಳು.

"ಜಂಬೂರಿನಿಂದ ಗಣಪತಿ ಬಂದಿದ್ದ. ಈಗ ಜ್ವರ ಬಿಟ್ಟಿದೆಯಂತೆ. ಆದರೆ ಬಹಳ ನಿಶ್ಶಕ್ತ."

ಆ ಮಾತಿಗೆ ಕಾವೇರಿ ಏನೂ ಉತ್ತರ ಹೇಳಲಿಲ್ಲ ...ಮುಖದಲ್ಲಾಗುವ

ಮೂರ್ಪಾಡು ಸ್ವಚ್ಛ ಬೆಳಕಿನ್ನ ? ಕಾಣಿಸುತಿದ್ದರೂ ಏನೆಂಬುದನ್ನು ಊಹಿಸಲಾಗಲಿಲ್ಲ. ಆ ಶೀತಲಮೌನ ಮಾತ್ರ ಎದೆಯನ್ನು ಮುಟ್ಟಿತು. ಪೊನ್ನು ಒಂದು ಘಳಿಗೆ ಭಾವಧಾರೆಯ ನ್ನು ಗಮನಿಸಿ ಏನೋ ಒಂದು ರೀತಿಯಲ್ಲಿ ಅತ್ಯಂತ ಗೌರವಪೂರ್ವಕವಾಗಿ, ವೇದನಾಭರಿತ ಕಂಠದಿಂದ ನುಡಿದಳು "ಈ ವಯಸ್ಸಿನಲ್ಲಿ ನೀವು ತೆಗೆದುಕೊಳ್ಳು ವ ಶ್ರಮ ಬಹಳವಾಯಿತು."

"ಇದು ವಿಶೇಷವೇ ಅಲ್ಲ ಪೊನ ನ್ನು ! ನಿನ್ನ ಮಾತಿಂದ ದೇಶ ಸೇವಕರು ನನ್ನ ಜ್ಞಾಪಕಕ್ಕೆ ಬರುತ್ತಾರೆ. ದೇ ಶದ ಸ್ವಾತಂತ್ರ್ಯ ವಿನಾ ಮತ್ತೊಂದು ಧ್ಯೇಯವಿಲ್ಲದವರ ಮುಂದೆ ನಾವೆತ್ತ ? ಸಂಸಾರಕ್ಕೆ ಧಾರೆಯೆರೆದ ಸಾಮರ್ಥ್ಯ ನಿರ್ಮಲ ಭಾವ...ಅದಕ್ಕಿಂತಲೂ ಮಿಗಿ ಲಾದ ಅನುರಾಗಬಂಧ ಆ ಭೂಮದ ಮುಂದೆ ಕೇವಲ ಅಲ್ಪಸ್ವಲ್ಪ ಎನಿಸುವ ದಿಲ್ಲವೇ ? ಆದರೂ ಸಹ ...ನಿನ್ನ ಮುಂದೆ ಧರ್ಮಕರ್ಮ ಎಂಬು ದಂತೂ ಇಲ್ಲ ಎಂದೇನೂ ಹೇಳಲಾರೆ ಮಗಳೇ !"

"ಈ ಜಗತ್ತಿನಲ್ಲಿ ದಾಸ್ಯವಿಮುಕ್ತಿ ಸರ್ವೋತ್ಕೃಷ್ಟ ಸಾಧನೆಯೇ ಆದರೂ ವ್ಯಕ್ತಿಗತವಾದ ಸತ್ಯ-ಪ್ರೇಮ-ಸಾಮರ್ಥ್ಯ ಸಹ ಸಂಪೂರ್ಣ ಮಿಥ್ಯೆಯಲ್ಲ. ಸಂಸಾರಿಕವಾಗಿ ಸಾಮಾಜಿಕವಾ ಅಥವಾ ಸ್ವಾತಂತ್ರ್ಯೋದಯಕ್ಕಾಗಿ ತೆಗೆದುಕೊಳ್ಳುವ ಆಸ್ಥೆ-ಶ್ರಮ ಎಲ್ಲಿಯ ದು ? ಒಂದು ವಿಧವಾಗಿ ಯೋಚಿಸಿದರೆ ನಾವು ಬಯಸುವ ಸ್ವಾತಂತ್ರ್ಯ ಆನಂ ! ಸಾಕ್ಷಾತ್ಕಾರ, ಜೀವನ ವಿಕಾಸ ಎಲ್ಲವೂ ವ್ಯಕ್ತಿಬದ್ಧವಾದುದೇ ಅಲ್ಲವೇ ? ತೂವುದರಲ್ಲೂ ಹೆಚ್ಚು-ಕಡಿಮೆ ಎಂಬುದೇ ಇಲ್ಲ ಅವ್ವಾ ! ವ್ಯಕ್ತಿಗತ ಕಲ್ಯಾಣ ದೇಶಕ್ಕೆ ಪೂರಕ."

"ಅದು ಸಹಜ...."

ಕಾವೇರಿ ಆಕೆಯ ಅಭಿಪ್ರಾಯದೊಂದಿಗೆ ಏಕೀಭವಿಸಿ ಯೋಚಿಸಿದಳು. ...ನಾರೀ ಅಂತರಂಗ ಕಣ್ಣೀರಿನಿಂದ ತುಂಬಿ ತುಳುಕಾಡು ತಿದ್ದರೂ ಸಾವಿರ ಸ್ವಾತಂತ್ರ್ಯೋದಯಕ್ಕಿಂತಲೂ ಶಾಂತಿಯುತವಾದುದು. ಆದರೆ, ಈಗ ಆ ಅವಶ್ಯಕತೆಯನ್ನು ಗುರುತಿಸುವ ಸ್ಥಿತಿಯಲ್ಲಿರದ ಮನಸ್ಸಿಗೆ ಸಮರ್ಥನೆ ಅಥವಾ ಪ್ರತಿವಾದನೆ ಹೂಡುವ ಯೋಚನೆ ಸಹ ಮೂಡಲಿಲ್ಲ. ಏನೋ ಒಂದು ರೀತಿಯ ವಿಜಾತೀಯವಾದ ಧ್ವನಿಯಲ್ಲಿ ನುಡಿಯನ್ನು ಬಿಡಿಬಿಡಿಯಾಗಿ ಹೊರ ಹಾಕಿದಳು "ಎಲ್ಲವೂ ..ದೈವೇಚ್ಛೆ....ಪೊನ್ನೂ !" ದೈಹಿಕ ದುರ್ಬಲತೆಯಿಂದ

ನರನರವೂ ಚಟ್‌ಚಟ್ಟನೆ ತುಂಡುಗಡಿಯುತ್ತಿರುವಂತೆ ಭಾಸವಾಗುತಿತ್ತು. ಆದರೂ ಪ್ರಯತ್ನಪೂರ್ವಕವಾಗಿ ಮುಗುಳು ನಕ್ಕಳು. ಕಣ್ಣುಗಳ ಕಾಂತಿ ಭಾವೋನ್ಮತ್ತವಾಗಿತ್ತು.

ಸ್ವಲ್ಪ ಸಮಯದನಂತರ, ಮಂಜುನಾಥ್ ಜೋಡೆತ್ತಿನ ಹುಲ್ಲಿನ ಗಾಡಿಯನ್ನು ಕೊರಳಗೆಜ್ಜೆಗಳ ಮಧುಕರರವದೊಡನೆ ತಂದು ನಿಲ್ಲಿಸಿದ. ಸುಡು ಬಿಸಿಲಲ್ಲಿ ಒಣಹುಲ್ಲು ಮಿರುಗುತಿತ್ತು. ಎತ್ತುಗಳನ್ನು ನೊಗದಿಂದ ಕಳಚಿ ಕಂಬಕ್ಕೆ ಕಟ್ಟಿ ಉತ್ಸಾಹದಿಂದ ಅಂದ "ಸಧ್ಯದಲ್ಲೇ ಎಲ್ಲಾ ಚಳವಳಿಗಾರರನ್ನು ಬಿಡುಗಡೆ ಮಾಡುವ ಸೂಚನೆಗಳು ಕಂಡು ಬರುತ್ತಿವೆ. ಇಂಗ್ಲೀಷರಿಗೆ ತಮ್ಮ ಸರಕಾರವನ್ನು ಮುಂದುವರಿಸಿಕೊಂಡು ಹೋಗುವ ಎದೆಗಾರಿಕೆ ಈಗ ಇಲ್ಲ. ಎಲ್ಲಾ ಕಡೆಯಿಂದಲೂ ಹೊಡೆತಗಳು ಬೀಳುತ್ತಿರುವುದರಿಂದ ಆದಷ್ಟು ಹಣ್ಣಾಗಿ ಬಿಟ್ಟಿದ್ದಾರೆ!"

"ಅಷ್ಟಾದರೆ ಸಾಕಪ್ಪ."

ಕಾವೇರಿ ಸಮಾಧಾನದ ಉಸಿರನ್ನು ಬಿಟ್ಟಳು. ಮಂಜುನಾಥ್ ಮುಂದುವರಿದ, "ಬಿಡುವುದಷ್ಟೇ ಅಲ್ಲ ; ಬೇಶರತ್ತಾಗಿ ಬಿಡುವಂತಿದೆ !.... ಒಮ್ಮೆ ಬಿಡುಗಡೆಯಾಗಲಿ, ಅನಂತರ ಇವರ ಜನ್ಮ ಜಾಲಾಡದಿದ್ದರೆ ಕೇಳಿ !"

ಕಾವೇರಿ ಮಾತಾಡಲಿಲ್ಲ. ಚಿತ್ತ ಪ್ರಸ್ತುತ ಪರಿಸ್ಥಿತಿಯ ಪ್ರಕಾಂಡದಲ್ಲಿ ಅಂಡಲೆಯುತಿತ್ತು

ಗಾಡಿಗೆ ಬಿಗಿದ ಹಗ್ಗವನ್ನು ಬಿಚ್ಚುತ್ತ ಮಂಜುನಾಥ್ ತನ್ನ ವಿಚಾರ ಧಾರೆಯನ್ನು ಮುಂದುವರಿಸಿದ,

"ಈ ಧೂರ್ತರು ನಮ್ಮನ್ನು ಮಟ್ಟ ಹಾಕುವುದು ಎಷ್ಟು ಸುಲಭ ಎಂದು ಭಾವಿಸಿದ್ದರು ? ನಾವೆಷ್ಟು ಕೀಳಾಗಿ-ಹೀನವಾಗಿ ಕಾಣುತಿದ್ದರು ? ಎಷ್ಟು ಹಿಂಡಿ ಹೀರಿದ್ದಾರೆ....? ಅದೆಲ್ಲಾ ಒಂದಲ್ಲ, ಒಂದು ದಿನ ಬುಡಮೇಲಾಗಲೇ ಬೇಕಲ್ಲ? ಯಾವ ಜನವೇ ಆಗಲಿ, ಎಷ್ಟು ಕಾಲ ನರಕ ಹಿಂಸೆಯನ್ನು ಸಹಿಸಿಕೊಂಡಾರು? ಅಷ್ಟೂ ಅರ್ಥವಾಗಬಾರದೇ ಇವರಿಗೆ ? ಎಷ್ಟು ಮಂದಿಯನ್ನು ಗುಂಡಿಟ್ಟು ಕೊಲ್ಲಲು ಸಾಧ್ಯ ? ಎಷ್ಟು ಮಂದಿಯನ್ನು ಜೈಲುಗಳಲ್ಲಿ ತುಂಬಿಡಲು ಸಾಧ್ಯ ? ಇಂಥ ಅಂಧಕಾರ ದರ್ಬಾರು ಎಷ್ಟು ಕಾಲ ನಡೆದೀತು ಹೇಳಿ ? ರಾಷ್ಟ್ರದ ಬೊಕ್ಕಸ ಖಾಲಿಯಾಗುವವರೆಗೆ ಹೇಗೂ ನಡೆದೀತು. ಅನಂತರ ಬಿಡಲೇ

ಬೇಕಷ್ಟೆ...? ಅಷ್ಟೇ ಅಲ್ಲ; ಈ ಪ್ರಕರಣದಿಂದ ಜಗತ್ತೇ ಒಂದು ಒಳ್ಳೆಯ ಪಾಠ ಕಲಿಯಲಿದೆ ?"

"ಹೌದು...."

ಹುಲ್ಲಿನ ಹೊರೆಯನ್ನು ಒಂದೊಂದಾಗಿ ಇಳಿಸುತ್ತ ಸ್ವಲ್ಪ ಅಸಮಾಧಾನ ದಿಂದ ಪುನಃ ನುಡಿದ,

"ನೋಡಿ, ಇಲ್ಲಿನ ರೆಸಿಡೆಂಟ್ ಒಳ್ಳೆಯ ಶಿಕಾರಿಗಾರ. ಹುಲಿ ಉಪಟಳ ದಿಂದ ನಮಗೆ ತೊಂದರೆಯಾದುದು ಗೊತ್ತು. ಆದರೂ ಹೊರ ಹೊರಡಲಿಲ್ಲ, ಅವನು ಬೇಕಾಗಿಯೇ ಸುಮ್ಮನಿದ್ದಾನೆ. ಮೊನ್ನೆ ಶಿಕಾರಿಗೆ ಏರ್ಪಾಡು ಮಾಡಿದ್ದ ದಿನ ಹೋಗಿ ಕರೆದರೂ ಅವನು ಬರಲಿಲ್ಲ."

"ನಿಜವೇ ?"

"ಈತ ಇಲ್ಲಿಯ ಪಟ್ಟ ತನಗೆ ಶಾಶ್ವತ ಎಂದು ಭಾವಿಸಿದ್ದಾನೆ. ಒಮ್ಮೊಮ್ಮೆ ಇವನಿಗೆ ಒಂದು ಗೋಲಿ ಏಕೆ ಖರ್ಚುಮಾಡಬಾರದು ಎನ್ನಿಸುತ್ತೆ ನನಗೆ!"

"ಸರಿ; ನಿನ್ನ ಬಿಟ್ಟಾರೆಯೆ ? ಅದೆಲ್ಲಾ ಏಕೆ ಹೇಳು ?"

"ಅವನಿಗೇನು ಭಯ ಗೊತ್ತೆ ? ಶಿಕಾರಿಗೆಂದು ಕೂಡಿದರೆ ಎಲ್ಲಿ ಈ ಜನ ನನಗೇ ಗುಂಡಿಟ್ಟಾರೋ ಎಂದು. ಆದ್ದರಿಂದಲೇ ಹೊರ ಹೊರಡುವುದಿಲ್ಲ."

"ಅವನಿಗೇನಾಗಬೇಕು ? ದನಕರುವಿನ ಯೋಚನೆಯೇ ? ಅಥವಾ ಕಾಡುಮೇಡುಗಳಲ್ಲಿ ಸಂಚರಿಸಬೇಕೇ ? ಏತರ ಭಯ ? ವಾಸಕ್ಕೆ ಸಕಲ ಸೌಕರ್ಯವುಳ್ಳ ಬಂಗಲೆ ಇದೆ. ನೆಮ್ಮದಿಯಿಂದಿದ್ದರೆ ಸೈ."

"ನೋಡಿ, ಹೇಗಿದೆ ? ಎಲ್ಲಾ ಕಡೆ ಸಾಂಕ್ರಾಮಿಕ ರೋಗಗಳು ಹರಡು ತ್ತಿವೆ. ಏನಾದರೂ ಪ್ರಜೆಗಳಿಗೆ ರಕ್ಷಣೆ ಇದೆಯೆ ? ಹೀಗೂ ಸಾಯುವಷ್ಟು ಸಾಯಲಿ ಎಂಬುದೇ ಆಶಯ."

"ಹೌದಪ್ಪಾ ! ಅದೂ ಸಹ ಒಂದು ಯುಕ್ತಿಯೆ."

"ಈ ಅಲ್ಲೋಲ ಕಲ್ಲೋಲವೆಲ್ಲ ಸುಮ್ಮನೆ ವ್ಯಾಪಿಸಲಿಲ್ಲ. ಈ ಸಲ ಅವರ ದರ್ಪ ಇಳಿಸದಿದ್ದರೆ ಕೇಳಿ! ಅವರ ಕೋಟೆಯೊಳಗೆ ಮದ್ದು–ಗುಂಡು ಎಷ್ಟಾದರೂ ಇರಲಿ, ಒಂದಕ್ಕೆ ಹತ್ತಾಗಿ ಹುಟ್ಟಿಕೊಳ್ಳುವ ಕೆಚ್ಚು ನಮ್ಮಲ್ಲಿದೆ!"

"ಸರಿ; ಅವರಿಗೇನಾಗಬೇಕು ? ತಮ್ಮ ಗಂಟೇನಾದರೂ ಹೋಗು ತ್ತದೆಯೆ? ನಡೆಯುವಷ್ಟು ಕಾಲನಡೆದರೆ ದೋಚುವಷ್ಟು ದೋಚಬಹುದು...!

ನಮಗೆ ಈ ಪ್ರಕರಣ ಮುಗಿದರೆ ಸಾಕಾಗಿದೆ."

ಗಾಡಿ ಖಾಲಿಯಾದನಂತರ ಮಂಜುನಾಥ್ ಅಲ್ಲಿಂದ ಮನೆಗೆ ಹೊರಡುವ ಮುನ್ನ ಅಂದ,

"ಹಸುವನ್ನು ಸ್ವಲ್ಪ ದಿನ ಬಿಡಬೇಡಿ. ಹಸುರು ಹುಲ್ಲು ಇಲ್ಲದಿದ್ದರೂ ಚಿಂತೆಯಿಲ್ಲ."

"ಮುಖ್ಯವಾಗಿ ಹಸುರಿಲ್ಲದೆ ಹಾಲು ಬತ್ತಿಹೋಗಿದೆ. ಮಕ್ಕಳ ಗೋಳು ದೇವರಿಗೇ ಪ್ರೀತಿ."

"ದಿನಸಿ ಅಂಗಡಿಯಲ್ಲಿ ಹಾಲಿನಪುಡಿ ಸಿಗುತ್ತದೆ; ತಂದಿಟ್ಟುಕೋಡರೆ ಮಕ್ಕಳಿಗೆ ಅನುಕೂಲ. ಆಕಡೆ ಹೋದಾಗ ಒಂದು ಡಬ್ಬ ತಂದಿಟ್ಟುಕೊಳ್ಳಿ."

ಕಾವೇರಿ ಮಾತಾಡಲಿಲ್ಲ. ಸ್ಥಿತಿಗತಿ ಅರಿತೂ, ಎಷ್ಟು ಸರಾಗವಾಗಿ ನುಡಿದ ಎಂದುಕೊಂಡಳು. ಗಾಡಿ ಎತ್ತುಗಳು ಹೊರಟುವು. ಗೆಜ್ಜೆಸರಗಳ 'ಗ್ಯೆಲ್ ಗ್ಯೆಲ್' ಸದ್ದು ಕರ್ಣಾನಂದಕರವಾಗಿ ಮೊಳಗಿತು—ವಚ್ಚವನಧಾತ್ರೀ ಪ್ರತಿಧ್ವನಿ ಕೊಡುವಂತೆ.

ಒಳಗಡೆ ದಾರಿದ್ರ್ಯ ದೇವತೆಯ ಸಾನ್ನಿಧ್ಯದಲ್ಲಿ ಊಟದ ಹಂಚಿಕೆ ನಡೆಯುತಿತ್ತು. ಪ್ರಸಾದವನ್ನು ಹಂಚಿಕೊಳ್ಳುವಾಗ ಮಕ್ಕಳು ಹೆಚ್ಚಿನ ಭಾಗವನ್ನು ಯಾಚಿಸುತಿದ್ದರು. ಎಳೆದನಿಗಳ ಮೊರೆತ ಕರ್ಣಪಟಲಗಳನ್ನು ಕೋರೈಸುವಂತೆ ಸಾಗಿತು. ಒಡನೆ ಸ್ಮರಣೆಯ ಹಾದಿಯಲ್ಲಿ ಕಾರಿಯಪ್ಪ, ಮುದ್ದು, ಮಾದು ಸಾಗಿ ಹೋದರು. ಬಾಳುರಿಯ ಕುಂಡ ಕೆನ್ನಾಲಿಗೆಯನ್ನು ಚಾಚಿ ಸರ್ವಸ್ವವನ್ನೂ ನೆಕ್ಕುತ್ತಿರುವ ದೃಶ್ಯ ಅಕ್ಷಿಪಟಲದ ಮೇಲೆ ಲಾಸ್ಯ ವಾಡಿತು. ಸಂಕಟದಾಶ್ರಯದಲ್ಲಿ ಮೆಲ್ಲನೆ-ಬಹುಮೆಲ್ಲನೆ ತಲೆ ಸುತ್ತುತ್ತಿರು ವಂತೆ ತೋರಿ; ಹಾಗೇ ಅಲ್ಲಿದ್ದ ಕಾಲು ಮಣೆಯ ಮೇಲೆ ಕುಳಿತುಕೊಂಡಳು—ಕಾವೇರಿ.

"ತಟ್ಟೆ ಅಲ್ಲಿಗೇ ಕೊಡಲೇ ಅವ್ವಾ !"

ಧ್ವನಿ ಕಿವಿಯನ್ನು ತಾಗಿತು. ಆದರೆ ಅದರೆಡೆಗೆ ಗಮನ ಹರಿಸುವಷ್ಟು ಚಿತ್ತಸ್ವಾಸ್ಥ್ಯವಿರಲಿಲ್ಲವೇನೋ....

ಮಧ್ಯಾಹ್ನದ ಬಿಸಿಲು ಪ್ರಖರವಾಗಿಯೇ ಇತ್ತು.

ನಭೋಮಂಡಲದಲ್ಲಿ ವಿಲೋಲವಾಯು ತೀವ್ರಗತಿಯಲ್ಲಿಸಂಚರಿಸುತಿತ್ತು.

ಹಿಂದಿನ ಜಗಲಿಯಲ್ಲಿ ಗೃಹಿಣಿಯರು ಕುಳಿತು ಒಂದೆರಡು ಮೊರ ಅಕ್ಕಿಯನ್ನು ಸುರುವಿಕೊಂಡು ಹಸನು ಮಾಡುವುದರಲ್ಲಿ ನಿಮಗ್ನರಾಗಿದ್ದರು. ಪ್ರೌಢಾರುಣಛಾಯೆ ಒಳಗಡೆ ವ್ಯಾಪಿಸಿತ್ತು. ಕಾನನ ಕಾಂತಿಯಲ್ಲಿ ಅದ್ಭುತ ಶಾಂತಿ ಅನುಭೂತವಾಗಿತ್ತು. ಸಮೀಪದ ಬಿದಿರು ಮೆಳೆಗಳು ಒಂದಕ್ಕೊಂದು ಮುಸೆದುಕೊಳ್ಳುವ ಸಮಯದಲ್ಲಿ ಸುಯ್‌ಗುಟ್ಟುವ ಸದ್ದು ಸುಳಿಗಾಳಿಯ ಸುಯ್ಲಿನೊಡನೆ ಬೆರೆಯುತಿತ್ತು. ಬೂರುಗದ ಮರದಿಂದ ಉದುರಿದ ರೇಷ್ಮೆಯಂತಹ ಹತ್ತಿ ಗಾಳಿಯಲ್ಲಿ ತೇಲುತ್ತ ದೂರದೂರಕ್ಕೆ ಹೋಗಿ ಬೀಳುತ್ತಿವೆ. ಅಂಗಳ, ಜಗಲಿ ಮತ್ತು ಮನೆಯ ಮಾಡುಗಳ ಮೇಲೂ ಹೇರಳವಾಗಿ ಉದುರಿ ಕಣ್ಮನಗಳನ್ನು ತಣಿಸುವಂತಿದ್ದುವು.

ಅಂಗಳದ ತಣ್ಣೆಳಲಲ್ಲಿ ಸಣ್ಣಸಣ್ಣ ಕಂಬಗಳನ್ನು ನೆಟ್ಟು, ಮಾಡು ಹಚ್ಚಿ ಸಣ್ಣ ಎಲೆಮನೆಯೊಂದನ್ನು ನಿರ್ಮಿಸುವ ಉತ್ಸಾಹದಲ್ಲಿ ಚಿಟ್ಟೆ ತನ್ಮಯನಾಗಿದ್ದ. ಗಂಗೂ ಅವನು ಬಯಸಿದ ಕಡ್ಡಿಗಳನ್ನೂ ಎಲೆಗಳನ್ನೂ ಆರಿಸಿ ತಂದುಕೊಡುವುದರಲ್ಲಿ ಅತ್ಯಂತ ಶ್ರದ್ಧೆ ವಹಿಸಿದ್ದಳು. ಮಾಡಿನ ಮೇಲೆ ಎಲೆಗಳನ್ನು ಹೊದಿಸುತ್ತ ಚಿಟ್ಟೆ ಅಂದ,

“ನೀನು ಬರೀ ಒಣ ಎಲೆಗಳನ್ನು ಆರಿಸುತ್ತಿ. ಅವು ಗಾಳಿಗೆ ಹಾರಿ ಹೋಗುತ್ತವೆ. ಹಸುರು ಎಲೆಗಳಾದರೆ ಮಾಡಿನ ಮೇಲೆ ಭದ್ರವಾಗಿ ಕುಳಿತು ಕೊಳ್ಳುತ್ತವೆ.”

“ಹಸುರು ಸೊಪ್ಪು ನನಗೆಲ್ಲಿ ದೊರೆಯುತ್ತೆ ?” ಕೇಳಿದಳಾ ಬಾಲೆ.

“ಬಿಡು, ನಾನೇ ತರುವೆ.”

“ಹತ್ತಿ ಹೂ ಆರಿಸಿ ತಂದರೆ ಒಳಗಡೆ ಮೆತ್ತೆಯಂತೆ ಹಾಸಬಹುದು !”

ಆ ಅಭಿಪ್ರಾಯಕ್ಕೆ ಮನ್ನಣೆ ದೊರೆಯಿತು. ಇಬ್ಬರೂ ಉತ್ಸಾಹದಿಂದ ಆರಿಸತೊಡಗಿದರು. ಹಾಗೆ ಆರಿಸುತ್ತ ಮರದೆಡೆಗೆ ಹೋದಾಗ ಹಸುವಿನ ಹರಿದ ಹಗ್ಗ ಕಣ್ಗೋಚರಿಸಿತು. ಒಡನೆ ಚಿಟ್ಟೆ ಅಲ್ಲಿಂದಲೇ ಕೂಗಿದ,

“ಅವ್ವಾ! ಹಸು ಹಗ್ಗ ಹರಿದುಕೊಂಡು ಹೋಗಿದೆ !”

“ಹೌದೇ? ಇಲ್ಲೇ ಎಲ್ಲಾದರೂ, ಇರಬಹುದು ನೋಡು.” ಎನ್ನುತ್ತಲೇ ಗೃಹಿಣಿಯರು ಅಂಗಳಕ್ಕಿಳಿದರು. ಕರು ಒಣ ಹುಲ್ಲು ಮೆಲ್ಲುತಿತ್ತು. ಹರಿದ ಹಗ್ಗ ಅಂಕುಡೊಂಕಾಗಿ ಅಲ್ಲೇ ಬಿದ್ದಿತ್ತು. ಅಂಗಳ, ಕೊಟ್ಟಿಗೆ, ಹೆಬ್ಬಯಲು,

ಗದ್ದೆಯ ಕೋಗು, ದೇವಸ್ಥಾನದ ಅಂಗಳ ಮತ್ತು ಸಮೀಪದೆಡೆಗಳಲ್ಲೆಲ್ಲಾ ಹುಡುಕಾಡಿದರೂ ಹಸು ಪತ್ತೆಯಾಗಲಿಲ್ಲ. ಕಾವೇರಿ ಪೊನ್ನಮ್ಮನೊಂದಿಗೆ ಪುನಃ ಹೊರಟುದುದನ್ನು ನೋಡಿ ಉದ್ವೇಗದಿಂದ ನುಡಿದಳು ಪೂವಿ "ಹೊತ್ತಾಗಿದೆ! ದೂರ ಹೋಗಬೇಡಿ ಅವ್ವಾ !"

"ಇಲ್ಲ; ಐಮನೆ ಸೊಸೈಟಿ ಪೋಸ್ಟಾಫೀಸುಗಳ ಕಡೆ ಸ್ವಲ್ಪ ಹುಲ್ಲಿದೆ. ಅಲ್ಲಿಗೆ ಹೋಗಿದ್ದರೂ ಹೋಗಿರಬಹುದು. ನೋಡಿಕೊಂಡು ಬೇಗನೆ ಬಂದು ಬಿಡುತ್ತೇವೆ."

ಎಲ್ಲರ ಮನಸ್ಸೂ ಕಳವಳವನ್ನು ತುಂಬಿಕೊಂಡುವು. ದುಷ್ಟವ್ಯಾಘ್ರನ ಭಯಾನಕ ರೂಪ ಅಕ್ಷಿಪಟಲದ ಮೇಲೆ ಸುಳಿಸುಳಿದಳಿಯಹತ್ತಿತು...ಹಸು ಹಿಮ್ಮರಳಿದರೆ ಸಾಕೆಂದು ಹೃದಯ ಹಂಸೆ ಒಂದೇಸಮನೆ ಚೀರಿಟ್ಟುವು. ಚಿಟ್ಟೆ ಎಲಿಮನೆಯನ್ನು ಮರೆತು ಅವರೊಂದಿಗೆ ಹೊರಟ. ಬೇಡವೆಂದರೂ ಬಿಡದೆ ಅವನು ಹೊರಟುದುದನ್ನು ನೋಡಿ ಗಂಗಮ್ಮ "ನಾನೂ ಬರುವೆ !" ಎಂದು ರಾಗ ಎತ್ತಿದಳು. ಒಡನೆ ಪೂವಿ ಅವಳನ್ನೆತ್ತಿಕೊಂಡು ಸಂತೈಸುತ್ತಿದ್ದಂತೆಯೇ ಕಾವೇರಿಯ ನುಡಿ ಹೊರಬಿತ್ತು "ಬೇಗನೆ ಬರುತ್ತೇವೆ. ಮಕ್ಕಳನ್ನು ಒಳಗಡೆ ಇಟ್ಟುಕೊ."

ಪೂವಿ ಮಾತಾಡಲಿಲ್ಲ. ಮುಖಭಾವ ಸಮ್ಮತಿ ಸೂಚಿಸಿತು.

ಅಶಕ್ತ ಹೆಜ್ಜೆಗಳನ್ನು ಪ್ರಯತ್ನಪೂರ್ವಕವಾಗಿ ಮುಂದಿಡುತ್ತಾ ಬಿರುಬಿರನೆ ಸಾಗಿದಳು ಕಾವೇರಿ. ಎಡಬಲಗಳಲ್ಲಿ ಪೊನ್ನು ಚಿಟ್ಟೆಯರು ಹೆಜ್ಜೆ ಹಾಕಿದರು. ಹಿಂದಿನಿಂದ ಚಿಟ್ಟೆಯನ್ನು ನೋಡಿ ಅಳುತ್ತಲೇ ಕೂಗಿದಳು ಗಂಗಮ್ಮ "ನಾನೂ ಬರುವೆ ಅವ್ವಾ !"

"............"

ಪೂವಿ ಅಳುತಿದ್ದ ಮಗುವಿನೊಡನೆ ಕದಲದೆ ಅಲ್ಲಿಯೇ ನಿಂತಳು. ಹೃದಯ ಭಾರವಾಗಿತ್ತು...ಕಣ್ಣುಗಳು ದೂರದ ತಿರುವಿನವರೆಗೂ ಹಿಂಬಾಲಿಸಿದುವು...ರೆಪ್ಪೆಗಳು ಎವೆಯಿಕ್ಕದೆ ನಿಂತುವು....

ಭಯ-ಕಳವಳಗಳ ಕಾರುಣ್ಯಾಶ್ರಯದಲ್ಲಿ ಘಳಿಗೆಘಳಿಗೆಗಳು ನಿರಾತಂಕವಾಗಿ ನಿರ್ಗಮಿಸಿದುವು.

ಮೈಯಲ್ಲಿ ಊಹಿಸಲೂ ಆಗದಂತಹ ನಸುಕಂಪನದ ಅಲೆ ಹರಿದಾಡಿತು.

ಮಗು ಅಳುತ್ತಳುತ್ತ ಮೆಲ್ಲನೆ ಇನಿದನಿಯಲ್ಲಿ ಕೇಳಿತು "ಹಸು ಏಕೆ ಮೇಯಬಾರದು ?

"ಕಾಡಿನಲ್ಲಿ ಹುಲಿ ಇದೆ !" ಅತ್ಯಂತ ವಿಜಾತೀಯವಾದ ಧ್ವನಿಯಲ್ಲಿ ಪ್ರತ್ಯುತ್ತರ ಹೊಮ್ಮಿತು.

ಹುಲಿಯನ್ನು ಕಂಡಿರದಿದ್ದರೂ ಆ ಹೆಸರು–ವರ್ಣನೆ ಭೀಷಣಸ್ವರೂಪ ವನ್ನು ಎಳೆಮನಕ್ಕೆ ತುಂಬಿ ಭಯಭೀತಿ ಮೂಡಿಸಿತು. ಅಳುವನ್ನು ಅಲ್ಲಿಗೆ ಮರೆತು "ಮನೂ, ಇಲ್ಲೇ ಬಾ, ಕಾಡಿನಲ್ಲಿ ಹುಲಿ ಇದೆಯಂತೆ !" ಎಂದಳು. ಕಣ್ಣುಗಳು ಅರಳಿ ಭೀತಿಯ ಭಾವ ಚಿಮ್ಮುವಂತಿತ್ತು.

ಕಾರಿಯಪ್ಪನನ್ನು ಎಲ್ಲರೂ 'ಮನು' ಎಂಬ ಅಡ್ಡ ಹೆಸರಿನಿಂದ ಕರೆಯು ತಿದ್ದರು, ಈಗೀಗ ಅದೇ ಅನ್ವರ್ಥ ನಾಮವೂ ಆಗಿಬಿಟ್ಟಿದೆ. ಮುಂದೆಯೂ ಸಹ...ಆಗಬಹುದೇನೋ.

ಮೆಟ್ಟಲಿನ ಮೇಲೆ ಬೊಂಬೆಯಂತೆ ನಿಶ್ಶೇಷಭಾವದಿಂದ ನಿಂತಿದ್ದ ಅವನು ಏನೋ ಅರ್ಥವಾದವನಂತೆ ಮುಗುಳು ನಕ್ಕ. ಕಪೋಲಪಾಲಿ ಯಲ್ಲಿ ಸುಂದರವಾದ ಗುಳಿಗಳು ಮೂಡಿದುವು. ನೆಟ್ಟ ನೋಟ ಹಾದಿಯ ಕಡೆ ಹರಿದಿತ್ತು. ನಿಷ್ಕಂಪ ದೀಪ ಶಿಖೆಯಂತೆ ಹಾಗೇ ನಿಂತುದನ್ನು ನೋಡಿ ಗಂಗು ಪುನಃ ಕರೆದಳು, "ಅಲ್ಲೇ ನಿಂತಿದ್ದೀಯಲ್ಲ ; ಬಾ ಒಳಗೆ, ಮನೂ !"

ಮನು ನಿಂತ ಸ್ಥಳದಿಂದ ಕಿಂಚಿತ್ತೂ ಕದಲದೆ ಅಂದ "ನೋಡೋಣ, ತಾಳು. ಅಪ್ಪ ಹುಲಿ ಹಿಡಿದು ತರುತ್ತಾರೆ !"

"ಅದನ್ನು ತರುವುದಕ್ಕಾಗುತ್ತದೆಯೆ ? ನಮ್ಮನ್ನು ಕಂಡರೆ ಹಿಡಿದು ತಿನ್ನುತ್ತೆ, ಹುಲಿ !"

"ನಿಜವಾಗಿಯೂ ತಿನ್ನುತ್ತದೆಯೆ ?"

"ಹೌದಪ್ಪಾ, ಬೆಕ್ಕು ಇಲಿಯನ್ನು ಹಿಡಿದು ತಿಂದಂತೆ ತಿಂದು ಬಿಡುತ್ತೆ !" ಎಂದಳು ಪೂವಿ.

"ಹೌದಾ ?"

ತಕ್ಷಣ ಗಂಗೂ ತನ್ನ ದನಿಯನ್ನೂ ಹರಿಯಬಿಟ್ಟಳು ಹೌದಾ ?"

ಇಬ್ಬರಿಗೂ ಹುಲಿಯ ವಿಚಾರವನ್ನಷ್ಟು ಉಸುರಿ ಬೇಡದ ಪ್ರಕರಣ ವನ್ನು ಮುಗಿಸಿದಳು ಪೂವಿ. ಕಾತರಭರಿತ ಚಿತ್ತ ಹಸುವಿನ ಪ್ರತೀಕ್ಷೆಯಲ್ಲಿತ್ತು.

ಎಷ್ಟೇ ಪ್ರಯತ್ನಿಸಿದರೂ ಚಿಂತಾಭಾರದಿಂದ ಧೈರ್ಯದ ಕಾವು ಮೂಡದು ವಾತಾವರಣ ಅತ್ಯಂತ ಪ್ರಶಾಂತವಾಗಿತ್ತು. ಆದರೇನು ಚಿದಾಕಾಶದಲ್ಲಿ ಕಾರ್ಮೋಡಗಳೆದ್ದಿವೆ. ಬಿರುಗಾಳಿಯೂ ಬೀಸುತ್ತಿದೆ. ಯಾವಾಗ ಮಳೆಗರೆ ಯುತ್ತೋ ಊಹಿಸುವುದು ಕಷ್ಟ...

ಅಂಗಳದಲ್ಲಿ ಕಟ್ಟಿದ್ದ ಕರು ಹಾಲಿನ ಆಕರದಿಂದ ಕೂಗಿ ಕೊಳ್ಳುತಿತ್ತು. ಪೂವಿ ಅದನ್ನು ಕೊಟ್ಟಿಗೆಯಲ್ಲಿ ಕಟ್ಟಿ ಒಳಬಂದಳು. ಜೂಲಿ ಹೋದ ಮೇಲೆ ಮನೆಯೆಲ್ಲಾ ಬಣಬಣ. ಬೇರೆ ನಾಯಿ ತರುವುದಕ್ಕಿಂತ ಇಂದಿನ ಪರಿಸ್ಥಿತಿ ಯಲ್ಲಿ ಉಳಿತಾಯ ಲೇಸು. ಆದರೆ, ನಾಯಿ ಬೇಕೆಬೇಕೆಂಬುದು ನಿರ್ವಿವಾದ.

ಮಕ್ಕಳಿಬ್ಬರೂ ಮೊಗಸಾಲೆಯಲ್ಲಿ ಕುಳಿತು ಕಾಗದದ ದೋಣಿ ಮಾಡುವು ದರಲ್ಲಿ ನಿಮಗ್ನರಾಗಿದ್ದರು. ಪೂವಿ ಕಾತರಭರಿತ ದೃಷ್ಟಿಯನ್ನು ಹಾದಿಯ ಕಡೆ ಹರಿಸಿ ನಿಂತಳು. ಜಗಲಿಯ ಸಾಲುಗಂಬಗಳ ನೆರಳು ನೀಳವಾಗಿತ್ತು. ಸಂಜೆಯ ತಿಳಿಬೆಳಕು ನೆಲವನ್ನು ತಬ್ಬಿತ್ತು. ಅಂಗಳದಲ್ಲಿ ಹೂವಿಂದ ಹೂವಿಗೆ ಹಾರಾಡುವ ಚಿಟ್ಟೆಗಳು ಕಾಣಿಸುತ್ತಲೇ ಇಲ್ಲ.

ಕಾವೇರಿ ಹುಡುಕಲು ಹೊರಟಾಗ ನೆರೆಮನೆಯ ಮಾಚಮ್ಮ ಎದುರಾ ದಳು. ಗೃಹಿಣಿಯರು ಏಕೀಭವಿಸಿ ವಿಷಯವನ್ನು ಮುಂದಿಟ್ಟರು-"ಹಸು ಹೋದರೂ ಎಷ್ಟು ದೂರ ಹೋದೀತು ? ನಮಗೆ ಆ ಭಯ ಇಲ್ಲವೇ ಇಲ್ಲ. ಕಾಡಿನಲ್ಲಿ ಹುಲಿ ಒಕ್ಕಲಾಗಿರುವುದರಿಂದ ಚಿಂತೆಯಾಗಿದೆ."

"ಇಲ್ಲೇ ಎಲ್ಲಾದರೂ ಮೇಯುತ್ತಿರಬಹುದು. ಒಂದು ಸುತ್ತು ನೋಡಿ ಬರೋಣ. ನಾನೂ ಬರುವೆ."

"ಬಾ....ನನಗೂ ಬೇಸರವಾಗಿ ಬಿಟ್ಟಿದೆ...."

ನಾಲ್ವರೂ ಒಟ್ಟುಗೂಡಿ ಹೊರಟರು- ಚಿಟ್ಟುದೊಡ್ಡವರಂತೆಯೇ ನಡೆದ. ಹತ್ತಿರದಲ್ಲಿ ಹಸುರಿರಬಹುದಾದ ತಾವಿನಲ್ಲೆಲ್ಲ ಚಲಿಸಿತು ದೃಷ್ಟಿ ; ದರುಗೆಲೆ ಗಳ ಸಣ್ಣ ಶ್ರುತಿಯನ್ನು ಆಲೈಸಿತು ಕರ್ಣವೇಶ. ಮನೆ ಮನೆಯ ಗೋವ ಳರು ಹಸುಗಳನ್ನು ಕೊಟ್ಟಿಗೆಗೆ ಸೇರಿಸಿ ವಿಶ್ರಾಂತಿಯಲ್ಲಿದ್ದುದರಿಂದ ಎಲ್ಲಿಯೂ ಯಾರ ಸುಳಿವೂ ಇಲ್ಲ .. ಸುದ್ದಿಯೂ ದೊರೆಯಲಿಲ್ಲ.

ಕಾವೇರಿ ಸುತ್ತುಮುತ್ತಿನ ತಾವಿನಲ್ಲಿ ಅಲೆದಲೆದು ಸೋತು ಎಲ್ಲರೊಂದಿಗೆ ಮನೆ ಮುಟ್ಟಿದಾಗ ಮುಖದ ಕಳೆ ಇಳಿದು ಹೋಗಿತ್ತು. ದಿನಮಣಿ ಅಸ್ತಂಗತ

ನಾಗಿ ಅರೆ ತಾಸು ಉರುಳಿದರೂ, ಕತ್ತಲಾಗುವುದರೊಳಗೆ ಕರುವಿಗಾಗಿ-ತಿಂಡಿಗಾಗಿ ಓಡಿ ಬರುತ್ತೆ ಎಂಬ ಆಶಾಭಾವ ಬತ್ತಲಿಲ್ಲ. ಕುತೂಹಲ ತೃಷಿತ ಲೋಚನಗಳು ಘಳಿಗೆ ಘಳಿಗೆಗೂ ಹಾದಿಯ ಕಡೆ ಹರಿಯುತಿದ್ದುವು. ಲಕ್ಷ್ಯದ ಮೇಲೆ ಲಕ್ಷ್ಯವನ್ನಿಟ್ಟು ನಿಶ್ಶಬ್ದ ವಾತಾವರಣವನ್ನು ಗಮನಿಸುತಿತ್ತು ಚಿತ್ತ. ಆದರೂ ಕಣ್ಮನಗಳಿಗೆ ಗೋಚರಿಸುತಿದ್ದುದು ನಕ್ಷತ್ರಮಾಲಿನೀ ನಿಶಾದೇವಿ ಮುಂದಿಡುತ್ತಿದ್ದ ದಿಟ್ಟ ಹೆಜ್ಜೆ.

ಸದ್ದಿಲ್ಲದ ಶಾಂತಿ ಎಲ್ಲೆಲ್ಲೂ ಹೆಪ್ಪುಗಟ್ಟುತಿತ್ತು.

ಜೀವನಶಕ್ತಿಯ ಅಂತರ್ವಾಹಿನಿ ಅಲ್ಲಲ್ಲೆ ತಂಗುತ್ತಿರುವಂತೆ ಭಾಸವಾಯಿತು.

ಒಳ ಪ್ರಾಂಗಣದಲ್ಲಿ ಬೆಳಗುವ ತೂಗುದೀಪದ ಜ್ಯೋತಿ ಸಣ್ಣ ಸಣ್ಣ ಕಿರಣಗಳ ಸುವರ್ಣಧಾರೆಯನ್ನು ಚೆಲ್ಲುತಿತ್ತು. ಚಿಂತಾಕ್ರಾಂತ ಕುಟುಂಬ ಅಲ್ಲಿಯೇ ಕುಳಿತು ನಾನಾ ವಿಚಾರವನ್ನು ಚರ್ವಿತಚರ್ವಣಗೈಯ್ಯುತಿತ್ತು. ಒಮ್ಮೊಮ್ಮೆ ಕಂಠಾರೋಧವಾಗಿ ಮಾತುಕತೆ ತಂಡುಗಡಿಯುತ್ತಿದ್ದುದೂ ಉಂಟು....ಆದರೂ ಚೇತರಿಸಿಕೊಳ್ಳುವುದು ಅನಿವಾರ್ಯ.

“ಹಸು ಹಸಿದಿತ್ತು....ಹಸುರು ಹುಲ್ಲಿನ ಆಕರ ತಡೆಯಲಾರದೇ ಹಗ್ಗ ಕಿತ್ತುಕೊಂಡು ಹೋಗಿದೆ. ಹೊಟ್ಟೆ ತುಂಬಿದರೆ ಬಂದು ಬಿಡುತ್ತೆ ಅವ್ವಾ !”

ಇಂಥ ಒಂದು ಆಶಾಕಿರಣವೇ ಎಲ್ಲರನ್ನೂ ಸಾವಿನಂಚಿನವರೆಗೂ ಉಳಿಸಿಕೊಳ್ಳುವುದರಿಂದ ಆತ್ಮ ಪ್ರವಾಹದ ಅಲ್ಲೋಲ ಕಲ್ಲೋಲ ಧ್ವನಿ ಎಂದೆಂದೂ ತಂಗುವುದೇ ಇಲ್ಲ.

“ನಿಜ ಅವ್ವಾ ! ದೃಷ್ಟಾಂತಕ್ಕೆ ನಮ್ಮ ಸಂಸಾರವೇ ಸಾಕು”

ಆ ಮಾತು ಹೊರಬಿದ್ದಾಗ ಎಲ್ಲರ ಮುಖ ಬಿಂಬದಲ್ಲೂ ಎಳೆ ನಗು ಮಿನುಗಿ ಮಾಯವಾಯಿತು. ಇಂದು ದೈನಂದಿನ ಅರ್ಧಮಿಳ್ಳೆ ಹಾಲಿಗೂ ಸಂಚಕಾರ ಬಿತ್ತು. ಎಳೆ ಮಕ್ಕಳ ದೃಷ್ಟಿ ಹಾಲ್ಕುಡಿಕೆಯ ಮೇಲೆ ಹರಿದಾಗ ಪೂವಿ ಅತ್ಯಂತ ಸರಳವಾದ ಶಬ್ದಗಳಿಂದ ಕೂಡಿದ ಪುಟ್ಟ ಭಾಷಣವನ್ನು ಮಾಡಿ ಅವರನ್ನು ಮಲಗಿಸುವಷ್ಟರಲ್ಲಿ ಗಂಟೆ ಹತ್ತರ ಅಂಚನ್ನು ದಾಟಿತು. ಕದಗಳನ್ನೆಲ್ಲ ಮುಚ್ಚಿ ಹಾಸಿಗೆ ಸೇರಿದರೂ ಮನದಾಳದಲ್ಲಿ ಮುಸುಗಿದ್ದ ಚಿಂತೆ-ಶಂಕೆಗಳು ತೊಲಗಿರಲಿಲ್ಲ. ಎಷ್ಟೇ ಪ್ರಯತ್ನಿಸಿದರೂ ಕಣ್ಣಿಗೆ ನಿದ್ದೆ ಬಾರದು ;

ದೃಷ್ಟಿ ಹೊರಳಿಸಿದೆಡೆಯೆಲ್ಲಾ ಕಣ್ಣುಗಳನ್ನು ಕಗ್ಗತ್ತಲು ಕಿವಿಯುತಿತ್ತು. ನೆರೆಮನೆಯಂಗಳದಲ್ಲಿ ನಾಯಿಗಳು ಶೀತಲ ಶಾಂತಿಯನ್ನು ಛೇಡಿಸುವಂತೆ ಕರ್ಕಶ ಧ್ವನಿಯಲ್ಲಿ ಬೊಗಳುವುದು ಕೇಳಿಸುತಿತ್ತು. ಜೂಲಿ ಇದ್ದಿದ್ದರೆ....?

ಒಡನೆ ಬಿಸಿಯುಸಿರೊಂದು ತಪ್ಪಿಸಿಕೊಂಡಿತು.... ಈ ವೃದ್ಧ ಜೀವ ಇನ್ನೂ ಎಷ್ಟು ಕಾಲ ಸಂಸಾರದಲ್ಲಿ ಸಿಕ್ಕಿ ನರಳಬೇಕೋ ಅರ್ಥವಾಗುವುದಿಲ್ಲ. ತಾಪ–ಪರಿತಾಪಗಳ ಪ್ರಾಕಾರದಲ್ಲೇ ಜೀವನ ಕರಗುತ್ತಿದೆ. ತನಗೆ 'ಮುಕ್ತಿ' ಎಂಬುದು ಇನ್ನೊಂದು ಜನ್ಮಕ್ಕಾದರೂ ದೊರೆಯುತ್ತೋ ಅದೇ ಸಂದೇಹ... ಆ ಪ್ರಶ್ನೆಯೆದ್ದಾಗ ಕರುಳಿಗೆ ಚೂರಿ ಹೊಕ್ಕಂತಾಯಿತು.... ಸಂಸಾರದಿಂದ ಶಾಶ್ವತವಾಗಿ ತಪ್ಪಿಸಿಕೊಂಡು ಹೋಗುವುದರಿಂದ ಜನ್ಮ ಸಾಫಲ್ಯ ಪಡೆಯಲಾಗುವುದಿಲ್ಲ. ಎಲ್ಲೋ ಇದ್ದು ಶಾಂತಿ ಸಮಾಧಾನಗಳನ್ನು ಪಡೆಯುವುದೂ ಸಾಧ್ಯವಾಗದು. ಮುಕ್ತಿಗಾಗಿ ಬಯಸುವ ಜೀವ ಕೃತಕತ್ಯತೆಯ ಮೆಟ್ಟಿಲನ್ನು ಮೊದಲು ದಾಟುವುದು ಲೇಸು. ಆಶ್ರಿತರನ್ನು ಅಲಕ್ಷಿಸಿದರೆ ಹತ್ಯೆಗೈದಂತೆಯೇ ಎಂದು ಅಂತರ್ವಾಣಿ ಕೂಗಿಹೇಳುತ್ತಿದೆ. ಈ ಜೀವನಾಬ್ಧಿಯನ್ನು ಪರಿಶೀಲನಾ ದೃಷ್ಟಿಯಿಂದ ನೋಡಿದರೆ ಹೊಮ್ಮುವ ಕಮನೀಯ ಕಠೋರ ಸತ್ಯ ಅದೇ...

ಹಾ....!

ಅಂತರಂಗದಲ್ಲಿ ಲಾಸ್ಯವಾಡುವ ಭಾವತರಂಗಿಣಿಯ ಪದವಿನ್ಯಾಸದ ನೂಪುರಗಳ ಟಿಂಟಿಣಿನಾದವನ್ನು ಆಲೈಸುತ್ತ ಅದೆಷ್ಟು ಹೊತ್ತು ಉರುಳಿತೋ.

ಭಯ–ಕಳವಳಗಳ ಸಮುದಾಯದಲ್ಲಿ ವೀತರಾಗದ ಶ್ರುತಿಯಂತೆ, ವಿದ್ಯುಚ್ಛಕ್ತಿಯ ಕಾವಿನಂತೆ ಸಮಸ್ತ ಚೇತನ ಮಂಡಲವನ್ನು ಮೃತ್ಯು ಭೀತಿ ಆವರಿಸುತಿತ್ತು. ನಾರೀಸುಲಭ ಸುಕೋಮಲ ಭಾವನೆ ನಲುಗಿ ಲುಪ್ತವಾಗಿ ಹೋಗಿದ್ದುದರಿಂದ ಜೀವನೀಶಕ್ತಿ ಬಳಲಿದಂತೆ ಉಸಿರಾಡುತಿದ್ದುವು. ಕೃಷ್ಣ ಪಕ್ಷದ ಸಮಕ್ಷಮದಲ್ಲಿ, ಶೀತಲ ಶಾಂತಿಯ ಉಡಿಯಲ್ಲಿ ನಿಮಿಷ ನಿಮಿಷಗಳು ನಿರಾತಂಕವಾಗಿ ಉರುಳುತಿದ್ದುವು. ತೂಗು ದೀಪದ ಜ್ಯೋತಿಯಲ್ಲಿ ಹೊಮ್ಮುವ ಶಾಂತಿಪ್ರದ ಮಂದಕಾಂತಿ ನಯನಗಳನ್ನು ಸ್ನಿಗ್ಧಗೊಳಿಸುತಿತ್ತು. ಮಗ್ಗುಲಲ್ಲಿ ಮಕ್ಕಳು ನಿದ್ದೆಗೈದಿದ್ದರೂ ಹಿರಿಯರ ಬಳಿ ಸುಳಿಯಲಿಲ್ಲ ನಿದ್ರಾದೇವಿ. ತಮ್ಮತಮ್ಮೊಳಗೆ ಜೀವನಪರಿಸ್ಥಿತಿಯನ್ನು ಕುರಿತು ಅದೆಷ್ಟು ಹೊತ್ತು ವಿಮರ್ಶಿಸಿಕೊಂಡರೋ...ಕ್ರಮವಿಹೀನವಾದ ಯೋಚನೆಗಳು

ಅದೆಷ್ಟು ಬಗೆಯಲ್ಲಿ ತಲೆಯನ್ನು ಮುತ್ತಿದುವೋ....

ಮಧ್ಯರಾತ್ರಿ ಕಳೆಯಿತು. ಶೀತಲ ಗಾಳಿ ತೀಡುತ್ತಿದೆ. ನಾಯಿಗಳ ಸೊಲ್ಲು ಕೇಳಬರುತ್ತಲೇ ಇಲ್ಲ. ಎಲ್ಲೋ ದೂರದಲ್ಲಿ ನರಿಗಳ ಹಿಂಡು ಹುಯ್ಯ ಲಿಟ್ಟುದು ಕೇಳಿಬಂತು. ಗಮನ ಆ ಕಡೆ ಸರಿದಾಗ ಇಲ್ಲೇ ಎಲ್ಲೋ ಸಮೀಪದಲ್ಲಿ ಹಸು ಪ್ರಾಣಾಂತಕವಾಗಿ ಅರಚಿಕೊಂಡಂತೆ ಕೇಳಿಸಿತು. ಗಮನ ಅತ್ತ ಹೊರಳುವುದರೊಳಗಾಗಿ ಸೊಲ್ಲು ಅಡಗಿತು; ಮತ್ತೆ ಕೇಳಿಬರಲಿಲ್ಲ. ನಿಜವಾಗಿಯೂ ಹಸುವಿನ ಕೂಗೋ ಅಥವಾ ಭ್ರಾಂತ ಮನಸ್ಸಿನ ಕಲ್ಪನೆಯೋ ಊಹಿಸುವುದು ಕಷ್ಟ. ಕಾವೇರಿ ಎದ್ದು ಕಿಟಕಿಯಲ್ಲಿ ಹಣಿಕಿದಳು. ಕಗ್ಗ ತ್ತಲು ಕಣ್ಣುಗಳನ್ನು ಮುತ್ತಿತು, ಅತ್ಯಂತ ನಿರಾಶಳಾಗಿ ಹಿಂದಿರುಗಿ ಬಂದು ಹಾಸಿಗೆಯಮೇಲೆ ಕುಳಿತುಕೊಂಡೊಡನೆ ಪೂವಿ ಮಲಗಿದ್ದಲ್ಲಿಂದಲೇ ಕೇಳಿ ದಳು—"ಏನಮ್ಮಾ....?"

"ನನ್ನ ಮನಸ್ಸಿನ ಭ್ರಾಂತಿಯೋ ಏನೋ....ಹಸು ಇಲ್ಲೇ ಎಲ್ಲೋ ಅರಚಿಕೊಂಡ ಹಾಗೆ ಕೇಳಿಸಿತು. ನಿನಗೇನಾದರೂ ಕೇಳಿಸಿತೇ ?"

"ಹೌದು...! ನರಿ ಹುಯ್ಯಲಿಟ್ಟಾಗಲೇ ಅಲ್ಲವೇ ? ಅನಂತರ ಕೇಳಿ ಸಲಿಲ್ಲ."

"ಬಹುಶಃ ನಮ್ಮ ಭ್ರಾಂತಿಯೇ ಇರಬೇಕು....ನಾವು ಅದೇ ನೆನವರಿಕೆ ಯಲ್ಲಿದ್ದೇವಲ್ಲಾ, ನನಗೂ ಆಗ ಕೇಳಿಸಿದಂತಾಯಿತು." ದನಿಗೂಡಿಸಿದಳು ಪೊನ್ನು.

"ಏನೋ ನನಗೂ ಅರ್ಥವಾಗುತ್ತಿಲ್ಲ; ಮಾದೇವ ಮಾಡಿಸಿದಂತಾಗಲಿ."

ದನಿ ಎದೆಯಾಳದಿಂದ ಹರಿದು ಬಂತು. ಹೊದ್ದಿಕೆಯನ್ನು ಮೈಮೇಲೆ ಎಳೆದುಕೊಂಡಳು ಜನನಿ. ಕಣ್ಣುಗಳಿಗೆ ನಿದ್ದೆಯ ಮಂಪರ ಆವರಿಸಿತು ಕಾಳಗತ್ತಲೆಯನ್ನು ಭೇದಿಸಿ ಮಿನುಮಿನುಗುವ ನಕ್ಷತ್ರಲೋಕ ತೆರೆದ ಕಿಟಕಿ ಯಲ್ಲಿ ಕಂಗೊಳಿಸಿತು. ; ತನುಮನಗಳನ್ನು ಸಾಂತ್ವನಗೈಯ್ಯುವಂತೆ.

ಮನೋದಧಿಯಲ್ಲಿ ಅಶಾಂತಿಯ ತೆರೆ ವ್ಯಾಪಕವಾಗಿ ಹರಡುತಿತ್ತು.... ಇರುಳಿನ ಉತ್ತರಾರ್ಧ ಅರೆಬರೆ ನಿದ್ದೆಯ ಮಂಪರದಲ್ಲಿ ಕಳೆಯಿತೇನೋ. ಮುಂಬೆಳಕು ಮೂಡುವುದೇ ತಡ ಹಸು ಹಟ್ಟಿಗೆ ಬಂದಿರಬಹುದೆಂಬ ಆಲೋ ಚನೆಯಿಂದ ಬಾಗಿಲನ್ನು ತೆರೆದು ಅಂಗಳ, ಹಟ್ಟಿ, ಕೊಟ್ಟಿಗೆಗಳ ಕಡೆ ದೃಷ್ಟಿ

ಹಾಯಿಸಿ ಮೂವರೂ ಸಪ್ಪೆ ಮೋರೆಯಿಂದ ಒಳಬಂದರು.

"ಜೂಲಿ ಇದ್ದಾಗ ಕಳ್ಳಕಾಕರ ಬಗ್ಗೆ ಎಚ್ಚರ ವಹಿಸುತಿತ್ತು. ಸೂಕ್ಷ್ಮಾತಿಸೂಕ್ಷ್ಮವಾಗಿ ವಾಸನೆ ಹಿಡಿದು ಗದ್ದಲವೆಬ್ಬಿಸುತಿತ್ತು. ಈಗ ಸಹಾಯಕರೇ ಇಲ್ಲದಂತಾಗಿದೆ." ಎಂದು ಕಣ್ಣೊರೆಸಿಕೊಳ್ಳುತ್ತಲೇ ದಿನಚರಿ ಆರಂಭಿಸಿದಳು ಸ್ವಾಮಿನಿ. ಕರುವಿನ ಕೂಗಿನ ಕಳೆ ದೈನ್ಯ ನೋಟ ಮನವನ್ನು ಮುಳ್ಳಿನಂತೆ ಚುಚ್ಚುತಿತ್ತು. ಪೂವಿ ಕರುವನ್ನು ಕೊಟ್ಟಿಗೆಯಿಂದ ಕೊರಳ ಕಣ್ಣಿಯ ಸಹಿತ ತಂದು ಅಂಗಳದಲ್ಲಿ ಕಟ್ಟಿ, ಮೈಮೇಲೆ ಕೈಯಾಡಿಸಿ ಮುದ್ದುಗೈದು ಮುಂದೆ ಹುಲ್ಲು ಹಾಕಿದಳು.

ಬಾಲರವಿ ಅರುಣಕಿರಣಗಳನ್ನೆರಚುತ್ತ ಮೂಡಿ ಬಂದ ಚಿಲಿಪಿಲಿ ಹಕ್ಕಿಗಳು ಸುಪ್ರಭಾತವನ್ನು ಹಾಡಿದುವು. ಹೊತ್ತು ಮೇಲೇರುವುದರೊಳಗಾಗಿ ಬಿಳಿಗಿರಿ ತೋಟದ ಆಳು ದಿಡು ದಿಡು ಓಡುತ್ತಾ ಬಂದು ಕರೆದ "ಅವ್ವಾ ಅವ್ವಾ....!"

ಅತ್ಯಂತ ಕಾತರಯುತವಾದ ದನಿ ಮೃತ್ಯುಸೂಚಕವಾಗಿತ್ತು. ಒಮ್ಮೆಲೇ ಜಂಗಾಬಲವೇ ಬಿದ್ದು ಹೋದಂತಾಯಿತು. ವೃದ್ಧ ಜನನಿ ಮಾಡುತಿದ್ದ ಕೆಲಸವನ್ನು ಅಲ್ಲೇ ಬಿಟ್ಟು ಅತ್ಯಂತ ಗಾಬರಿಯಿಂದ ಹೊರಬಂದಳು. ಪೂವಿ ಪೊನ್ನುರವರೂ ಹಿಂದೆಯೇ ಕಳವಳದಿಂದ ಓಡಿಬಂದರು. ಕಾವೇರಿ ಒಂದೇ ಉಸಿರಿಗೆ ಕೇಳಿದಳು,

"ಏನಪ್ಪಾ ಅದು ?"

"ಸೂಜಿಗುಡ್ಡದ ಹರದಲ್ಲಿ ನಿಮ್ಮ ಹಸುವನ್ನು ಹುಲಿ ಹಿಡಿದಿದೆ !"

"ಅಯ್ಯೊ, ದೇವರೇ !"

ಮಧ್ಯ ರಾತ್ರಿ ಹಸು ಅರಚಿಕೊಂಡ ಪ್ರಾಣಾಂತಕ ದನಿ ಕರ್ಣಪಟಲಗಳಿಗೆ ಇದೇ ತಾನೆ ತಾಗಿದಂತೆ ಮತ್ತೆ ಮೊಳಗಿತು. ಒಂದೆರಡು ಕ್ಷಣ ಕಣ್ಣುಗಳಿಗೆ ಮಂಜು ಕವಿದಂತಾಯಿತು.

ದೂರದಲ್ಲೆಲ್ಲೋ ಕೋಗಿಲೆ ಇನಿದನಿಯಲ್ಲಿ ಹಾಡುತಿತ್ತು.

ಆದರೆ....

೩೦

ಪೂರ್ವ ದಿಕ್ತಟದಲ್ಲಿ ಬಾಲರವಿ ಮುಗಿಲ ಮಂಚವನ್ನೇರಿದ.

ವಾತಾವರಣ ಎಂದಿನಂತೆಯೇ ಇಂದು ಸುಮಧುರವಾಗಿತ್ತು. ಚಂಡ ಪ್ರಚಂಡ ವಿಲೋಲವಾಯು ತೀವ್ರಗತಿಯಲ್ಲಿ ತೀಡುತಿದ್ದ. ವನಶ್ರೇಣಿಯ ಎಲೆಗಳ ಮರ್ಮರ ಸದ್ದು ಕರ್ಣಪಟಲಗಳನ್ನು ಮುತ್ತುತಿತ್ತು. ತೋಟದ ತಂಪು ತನುಮನಗಳಿಗೆ ತಂಪೂರೆಯುತಿತ್ತು. ಆದರೂ ಚಿದಾಕಾಶದ ವಾತಾವರಣ ದಿನದಿನಕ್ಕೂ ಹದಗೆಡುತ್ತಲಿದ್ದು, ಈಗೀಗ ಸಹಿಸಿಕೊಳ್ಳುವ ಸಹನೆಯಾಗಲೀ ಎದುರಿಸುವ ಧೈರ್ಯವಾಗಲೀ ಉಳಿದಿಲ್ಲವೇನೋ ಎಂಬಷ್ಟು ಕಿನಿಸಿಗೆ....ಎಷ್ಟೇ ಪ್ರಯತ್ನಿಸಿದರೂ ಮನಃಪ್ರಾಣಗಳು ಸೋಲುತ್ತವೆ. ಕಣ್ಣುಗಳು ಹನಿಯುತ್ತವೆ....

"ಸತ್ಯಮೇವ ಜಯತೇ" ಎಂದು ಉಲಿಯುತ್ತಲೇ ಇರುತ್ತದೆ ಕೊರಳು. ಆದರೆ ಅನುಭವಿಸುವುದು ಅಪಾರವಾದ ಪರಾಭವ....

ಕೊಟ್ಟಿಗೆಯಲ್ಲಿ ಕರುವಿನ ಗೋಳು....ಮನೆಯಲ್ಲಿ ಮಕ್ಕಳ ಗೋಳು.... ಆ ಗೋಳನ್ನು ನೋಡಲಾರದೆ ಕಂಬನಿ ಮಿಡಿಯುವ ತಾಯಂದಿರ ಗೋಳು. ಮನೆಯ ಸ್ಥಿತಿಗತಿಯನ್ನು ಗಮನಿಸುತ್ತಲೇ ಮೆಟ್ಟಿಲು ಹತ್ತಿದ ಮಾದು. ಮೊಟ್ಟಮೊದಲಿಗೆ ಅತ್ಯಾದರದಿಂದ ಸ್ವಾಗತಿಸಬೇಕಾಗಿದ್ದ ಜೂಲಿಯ ಸುಳಿವಿಲ್ಲ. ಅಂಗಳವೆಲ್ಲ ಬಣಬಣ....ಹೂಗಿಡಗಳು ಬಾಡಿ ಬತ್ತಿ ಶ್ರೀಹೀನವಾಗಿವೆ. ನೆಲದಲ್ಲಿ ಉದುರಿದ ದರುಗೆಲೆಗಳ ರಾಶಿ ರಾಶಿ. ಕಳೆ–ಕಸ–ಕಡ್ಡಿಗಳಿಗೂ ಕೊರತೆಯಿಲ್ಲ.

"ಅವ್ವಾ !" ಮೆಟ್ಟಿಲು ಹತ್ತುತ್ತಲೇ ಕರೆದ ಮಾದು.

"ಓ ...ಬಂದ್ಯಾ ಮಗನೇ ! ಈ ಸುಖದುಃಖಕ್ಕಾಗಿಯೇ ದೇವರು ನಿನಗೆ ಬಿಡುಗಡೆ ಮಾಡಿಸಿದನೇನೋ.... ಪೊನ್ನೂ ! ತಂಬಿಗೆ ನೀರು ತಾ ! ಮಾದು ಬಂದಿದ್ದಾನೆ !"

ಬತ್ತಿದ ಮುಖದಿಂದ ಮಾತುಗಳು ಬಳಬಳ ಹೊರಬಿದ್ದುವು. ಆ ಧ್ವನಿ

ಯಲ್ಲಿ ಸಂಭವಿಸಿದ ಲಘುಕಂಪನವನ್ನು ಬಹುಶಃ ಅತ್ಯಂತ ಉತ್ಸುಕತೆಯಲ್ಲಿದ್ದ ಮಾದು ಗಮನಿಸಲಿಲ್ಲವೇನೊ....ದೂರ ಪಯಣದ ಧೂಳು, ಸೀರಿಸೀಕಲಾದ ಮೈ, ಗುಳಿಬಿದ್ದ ಕಣ್ಣುಗಳು, ಮಾಸಿದ ಬಣ್ಣ, ಕೊಳಕು ಬಟ್ಟೆ. ಆದರೆ ಎಲ್ಲಕ್ಕೂ ಭೂಷಣವೋ ಎಂಬಂತೆ ತೇಜಪುಂಜವಾದ ಮುಖ; ಉಲ್ಕೆಯಂತಹ ನಯನ ಜ್ಯೋತ್ಯಾಗ್ನಿ ; ಆನಂದ ಸೂಸುವ ತುಟಿಗಳು....

ಆ ಮುಹೂರ್ತದಲ್ಲಿ ಕೆಟ್ಟ ಸುದ್ದಿಯನ್ನು ಮುಂದಿಡಲು ಯಾರ ಮನಸ್ಸೂ ಮುಂದಾಗಲಿಲ್ಲ. ಸ್ವಾಗತದ ಕುರುಹಾಗಿ ಮಂದಹಾಸವು ಮಂದ ಭಾವದಿಂದ ಮಿನುಗಿ ಮಾಯವಾಯಿತು. ಮಾದು ಅಜ್ಜಿಯ ಕಾಲುಮುಟ್ಟಿ ಆಶೀರ್ವಾದ ಪಡೆದ.

"ಯಾವಾಗ ಬಿಡುಗಡೆಯಾಯಿತು ಮಗೂ ?"

"ಮೊನ್ನೆ ಸಾಯಂಕಾಲ."

"ಎಲ್ಲರಿಗೂ ಬಿಡುಗಡೆಯಾಯಿತೇ ?"

"ಹೌದು." ಅತ್ಯಂತ ಉತ್ಸುಕನಾಗಿ ಮತ್ತೆ ಅಂದ "ದೇಶ ಸ್ವತಂತ್ರ ವಾದ ಮೇಲೆ ಯಾರಾದರೂ ಏಕೆ ಜೈಲಿನಲ್ಲಿದ್ದಾರು ?"

"ಇನ್ನಾದರೂ ನಮಗೆ ಶಾಂತಿ ಸಮಾಧಾನಗಳನ್ನು ಭಗವಂತ ಕರುಣಿ ಸಿದರೆ ಸಾಕು." ಬಯಸಿದಳು ಜನನಿ.

"ಯಾರ ಕತೆ ಏನಾಗಿದೆಯೋ ನಮಗಂತೂ ಒಂದಿನ ಶಾಂತಿ ಇರಲಿಲ್ಲ." ತೋಡಿಕೊಂಡಳು ಮಡದಿ.

"ಎಲ್ಲಾ....ದೇಶಕ್ಕಾಗಿ !"

ಮಾದು ಆನಂದ ಪ್ರಮತ್ತನಾಗಿ ಮುಂದಡಿ ಇಡುತ್ತ ಎಲ್ಲರ ಮುಖದ ಮೇಲಿನ ಕಹಿ ಮುದ್ರೆಗಳನ್ನು ಗಮನಿಸಿದರೂ ಏನೆಂಬುದದನ್ನು ಗ್ರಹಿಸಲಾರದೆ ಹೋದ. ಹೃದಯ ಕ್ಷೇತ್ರದಲ್ಲಿ ಸ್ವಾತಂತ್ರ್ಯೋದಯದ ಅಭೂತಪೂರ್ವ ಸಂತಸಕೃಷಿ ನಳನಳಿಸುತ್ತಿರುವಾಗ ಇತರೆ ವಿಷಯಗಳೆಲ್ಲ ಅತ್ಯಲ್ಪವಾಗಿಯೇ ಕಾಣಿಸುತ್ತಿವೆ....

ಹಿಂದುಗಡೆಯಂಗಳದಲ್ಲಿ ಆಟವಾಡುತಿದ್ದ ಚಿಟ್ಟೆಯ ಕಿವಿಗೆ ಚಿಕ್ಕಪ್ಪನ ದನಿ ಯಾವ ಮಾಯಕತೆಯಲ್ಲಿ ಬಿತ್ತೋ. ಬಿರುಗಾಳಿಯಂತೆ ಓಡಿ ಬಂದ. ಒಂದೇ ಉಸಿರಿಗೆ ಹೇಳಬೇಕಾದಂತಹ ವಿಷಯಗಳು ತಲೆಯಲ್ಲಿ ತುಂಬಿ

ಹೋಗಿವೆ. ಯಾವುದನ್ನು ಮುಂದೆ ಹೇಳಬೇಕೋ ಯಾವುದನ್ನು ಹಿಂದೆ ಹೇಳಬೇಕೋ ಅರ್ಥವಾಗದು. ಅತ್ಯಂತ ಉದ್ವೇಗದಿಂದ ಕೂಡಿದ ದನಿಯಲ್ಲಿ ಒಂದೇ ಉಸುರಿಗೆ ಬಿತ್ತರಿಸಿದ "ಚಿಕ್ಕಪ್ಪಾ! ನಮ್ಮ ಜೂಲಿ...ಹಸು ಎರಡನ್ನೂ ಹುಲಿ ತಿಂದಿದೆ!"

"ಹಾ...! ನಿಜವಾಗಿ?"

"ಹೌದು! ಖಂಡಿತಾ ಹೌದು, ಚಿಕ್ಕಪ್ಪಾ!"

"ಎಂದು? ಯಾವಾಗ? ಎಲ್ಲಿ?"

"ಇಂದೇ! ಇಲ್ಲೇ....ಗಾಡಿ ರಸ್ತೆಯ ಹರದಲ್ಲಿ ಹಸುವನ್ನು ತಿಂದಿದೆ!"

"ಇಂದು...?"

ಅನಂತರ ವಿಷಯವೆಲ್ಲಾ ವಿವರವಾಗಿ ಹೊರಬಿತ್ತು. ಮೂದು ನೈಮರ ವಟ್ಟಂತೆ ನಿಂತು ಕೇಳಿದ. ದೇಹದಾದ್ಯಂತ ಸಂತಾಪದ ಝರಿ ಹರಿದಾಡಿತು. ಇದುವರೆಗೆ ಜೇಲಿನಲ್ಲಿದ್ದು ಕೆಲಸ ಕಾರ್ಯಗಳಿಲ್ಲದೆ ಸಪ್ಪೆಯಾಗಿದ್ದ ಚೇತನ ಬಡಿದೆಬ್ಬಿಸಿದ ಫಣಿಯಂತಾಯಿತು. ದೂರ ಪಯಣದಿಂದ ದಣಿದಿದ್ದರೂ ಮುಖ ತೊಳೆದುಕೊಂಡು ಒಂದು ಗುಟುಕು ಚಹ ಕುಡಿಯುವಷ್ಟು ಸಹನೆಯು ಸಹ ಉಳಿಯಲಿಲ್ಲ. ಹಸು ಬಿದ್ದಲ್ಲಿಗೆ ಹೋಗಿ ಬರುವುದಾಗಿ ಹೊರಟ. ಅಣಿಯಾದ ತಂಬಿಗೆ ನೀರು ಪರಿತ್ಯಕ್ತ ಸ್ವರ್ಣಕಲಶದಂತಾಯಿತು. ಚಿಟ್ಟಿ ಹಸುವನ್ನು ತೋರುವುದಾಗಿ ಹಿಂದೆಯೇ ಬಂದುದರಿಂದ ಅವನಿಗಾಗಿ ಒಂದೆರಡು ಘಳಿಗೆ ನಿರೀಕ್ಷಿಸಿ, ಅವನು ಸಮೀಪಿಸುತ್ತಲೂ ಮುಂದುವರಿದ. ಆ ಹತ್ತು ಮಾರು ಹಾದಿ ಯಾವ ಮಾಯಕತೆಯಲ್ಲಿ ಕಳೆಯಿತೋ....ಬಿದ್ದ ಹಸು ಅಲ್ಲಿಂದಲೇ ಕಣ್ಣಿಗೆ ಬಿತ್ತು. ಕತ್ತು ಹಿಡಿದು ನೆತ್ತರು ಹೀರಿ, ತೊಡೆಯ ಭಾಗವನ್ನು ತಿಂದು ಹೋಗಿತ್ತು ಹುಲಿ. ಅಕಾಲ ಮೃತ್ಯುವಿಗೀಡಾದ ಅದನ್ನು ನೋಡಿದೊಡನೆಯೇ ಕಣ್ಣುಗಳು ತೇವವಾದುವು. ಒಂದೆರಡು ಘಳಿಗೆ ಮೌನವಾಗಿ....ಶೋಕಪೂರ್ಣ ಹೃದಯವಾಗಿ ಮೂರ್ತಿಮತ್ತಾಗಿ ನಿಂತ....ಹದ್ದು ಕಾಗೆಗಳು ಹಿಂಡು ಹಿಂಡಾಗಿ ಬಂದೆರಗುತ್ತಿವೆ. ಕ್ರಿಮಿಕೀಟಗಳೂ ಅವುಗಳೊಂದಿಗೆ ಪಾಲುಗೊಂಡಿವೆ. ಇನ್ನುಳಿದಿರುವುದು ಮುಂದಿನ ಅಂತ್ಯಸೇವೆ ಮಾತ್ರ. ಮನೆಯ ಸಮೀಪಕ್ಕೆ ಅಟ್ಟಿಸಿಕೊಂಡು ಬಂದು ಹಿಡಿದಿರುವ ವಿಚಾರ ಅತಿಶಯವೇ...ಜನ ಜಂಗುಳಿಯನ್ನ ನೋಡಿ ಪಳಗಿದ ಹುಲಿ

ಯಾದುದರಿಂದ ಸಾಧ್ಯವಾಗಿದೆ. ಅದನ್ನು ಕೊನೆಗಾಣಿಸದಿದ್ದಲ್ಲಿ ಊರಿಗೆ ಕೇಡು....ಎಂದು ಮುಂತಾಗಿ ಯೋಚನೆ ಬಂತು. ಕರ್ತವ್ಯ ಭಾರವನ್ನು ಶಿರಸಾವಹಿಸಿ ಚಿಟ್ಟೆಯೊಂದಿಗೆ ಹಿಂದಿರುಗಿದ. ಅವಸರವಸರವಾಗಿ ಪ್ರಾತರ್ವಿಧಿಗಳನ್ನು ಮುಗಿಸಿ ಹುಲಿ ಶಿಕಾರಿಗೆ ಅಣಿಯಾಗುತಿದ್ದಾಗ ಗೃಹಿಣಿಯರು ಹಲವು ಬಾರಿ ಎಚ್ಚರಿಕೆ ಹೇಳಿದರು. ಈಗಲೇ ಅಷ್ಟು ಅವಸರ ಬೇಡ. ಇನ್ನೆಂದಾದರೂ ಹೊಡೆಯಬಹುದು ಎಂಬ ಸೂಚನೆಯೂ ಬಂತು. ಯಾವುದಕ್ಕೂ ಮಣಿಯಲಿಲ್ಲ ಮಾದು. ಕಾವೇರಿ ಪೂವಿಯರು ಬೇಲಿ ಸಾಲಿನವರೆಗೂ ಬಂದರು. ಮಡದಿ ಕೆಳಮೆಟ್ಟಿಯವರೆಗೂ ಬಂದು "ನಮಗಿರುವ ಗಂಡಾಂತರಗಳೇ ಸಾಕಾಗಿವೆ. ದುಡುಕಿ ಈ ತೊಂದರೆಯನ್ನೂ ತಂದುಕೊಳ್ಳಬೇಡಿ." ಎಂದು ಕೇಳಿಕೊಂಡಳು. ಮಾದು ಎಲ್ಲರಿಗೂ ಒಂದೇ ಉತ್ತರ ನೀಡಿದ "ಈಗ ಒಬ್ಬೊಬ್ಬರೇ ಹುಲಿ ಶಿಕಾರಿಗೆ ಹೋಗುವುದಕ್ಕಾಗುತ್ತದೆಯೇ ? ಅದು ಇರುನೆಡೆಯ ಸುಳಿವು ಹತ್ತಿದರೆ ಸಾಕು. ಮಧ್ಯಾಹ್ನ ಶಿಕಾರಿ ಹೊಡುವುದೋ ಅಥವಾ ರಾತ್ರಿ ಮರಸು ಕೂರುವುದೋ ಎಂಬುದನ್ನು ಸ್ಥಳ ನೋಡಿ ನಿರ್ಧರಿಸಬೇಕಾಗಿದೆ. ಮೊದಲು ಹೆಜ್ಜೆಯ ಜಾಡು ಹಿಡಿಯುವುದೊಂದೇ ಗುರಿ."

ಮಾದು ತೀವ್ರಗತಿಯಲ್ಲಿ ಹೆಜ್ಜೆ ಹಾಕಿದ.

ಮಡದಿ ವ್ಯಾಪ್ತಿಗೆ ಮೀರಿ ಮಿಡಿಯುತಿದ್ದ ಹೃದಯವನ್ನು ಹೊತ್ತು ಮೆಟ್ಟಿಲನ್ನು ಹತ್ತಿದಳು. ಕಣ್ಣಂಚಿನಲ್ಲಿ ಸುಖ-ದುಃಖ-ಭೀತಿಗಳ ನೆರೆ ಉಕ್ಕುತಿತ್ತು... ಬಿಡುಗಡೆ ಹೊಂದಿದವರೆಲ್ಲ ಇಂದು ಮನೆಮನೆಯಲ್ಲಿ ಹಾಯಾಗಿರುವಾಗ ನಮಗೀ ಅವಸ್ಥೆ ಬಂತೆ ? ಎಂಬ ಯೋಚನೆ ಮನದಲೆಯುಲ್ಲಿ ಸುಳಿಸುತ್ತುತಿತ್ತು.

ಹೆಬ್ಬಯಲಿನಿಂದ ಕೊನೆಯ ಹೆಜ್ಜೆಯನ್ನು ತೆಗೆಯುವ ಮುನ್ನ ಮಾದು ಕರೆದು ಹೇಳಿದ "ಈಗಲೇ ಬಂದು ಬಿಡುವೆ." ಹಾಗೆಂದರೂ ಅಲ್ಲಿಂದ ಮುಂದೆ ಹಾದಿ ಹೇಗೆ ಕಳೆಯಿತೋ ತಾನರಿಯ....ತಾಳಗಟ್ಟೆಮನೆಯ ಮೆಟ್ಟಿಲನ್ನು ದಡದಡನೆ ಏರಿದಾಗ ಬೆಳ್ಳಿಯಪ್ಪ ತನ್ನ ಭಾವನಾದ ಬಿಚ್ಚಿಯಂಡ ಬೊಳ್ಳಪ್ಪ ಮತ್ತು ಮಂಜುನಾಥನೊಂದಿಗೆ ಜೇಲಿನ ಸುದ್ದಿಯನ್ನು ಕುರಿತು ಅತ್ಯಂತ ಉತ್ಸಾಹದಿಂದ ಸ್ವಾರಸ್ಯಕರವಾಗಿ ಮಾತಾಡುತಿದ್ದ. ಅಲ್ಲಿ ಒಮ್ಮಿಂದೊಮ್ಮೆಲೇ

ಪ್ರತ್ಯಕ್ಷನಾದ ಮಾದಯ್ಯನನ್ನು ನೋಡುತ್ತಲೂ ಆಶ್ಚರ್ಯಚಕಿತನಾದ ಬೆಳ್ಳಿ ಯಪ್ಪ ಹುಬ್ಬೇರಿಸಿ ಕೇಳಿದ,

ಇದೇನಪ್ಪಾ? ಹೆಂಡತಿ ಮಕ್ಕಳೊಂದಿಗೆ ಒಂದೆರಡು ಘಳಿಗೆಯಾದರೂ ಸಂತಸದಿಂದ ಇರದೆ ಕೋವಿ ಹೊತ್ತು ಹೊರಟೆ? ಕಾಡುಹಂದಿಯ ಗೀಳು ಆಗಲೇ ಹಿಡಿಯಿತೆ?"

"ಹಂದಿಯಲ್ಲ, ಹುಲಿಯದು...!"

ಮಾದು ಉದ್ವೇಗಗೊಂಡಿದ್ದರೂ, ತುರ್ತುಕ್ರಮಕ್ಕೆ ಕೈಹಾಕಿದ್ದರೂ ಯಾವ ಹಾವಭಾವವನ್ನೂ ಪ್ರಕಟಗೊಳಿಸದೆ ಶಾಂತ ಮನೋಹರ ಶೋಭೆ ಯಿಂದ ವಿಷಯವನ್ನು ಮುಂದಿಟ್ಟು "ನಡೆಯಿರಿ ಹೋಗುವ. ಇನ್ನು ಕೂಡು ವಷ್ಟು ಸಮಯವಿಲ್ಲ. ಈಗ ...ಮೊದಲು ಅದೆಲ್ಲಿದೆಯೆಂಬುದನ್ನು ಪತ್ತೆ ಹಚ್ಚಿ ಕೊಂಡರೆ ಅನಂತರ ಮುಂದಿನ ಕಾರ್ಯಕ್ರಮ..." ಮತ್ತೆ ಬೊಳ್ಳಪ್ಪನೆಡೆಗೆ ತಿರುಗಿ ನುಡಿದ "ನೀನಿಲ್ಲಿದ್ದುದು ಒಳ್ಳೆಯದಾಯ್ತು. ಬಾಪ್ಪಾ! ಎಲ್ಲರೂ ಒಟ್ಟುಗೂಡಿಯೇ ಹೋಗೋಣ."

"ನಾನು ಕೋವಿ ತಂದಿಲ್ಲ ಅಲ್ಲದೆ ನಾವಿಷ್ಟು ಜನ ಹೋಗಿ ಹುಲಿಯ ಹತ್ತಿರ ಸೆಣಸುವುದಕ್ಕಾಗುತ್ತದೆಯೇ? ಏನು ಕತೆ ಇದು?"

"ಸೆಣಸುವುದೇನಿದೆ? ಎಲ್ಲಿ ಸೇರಿಕೊಂಡಿದೆಯೆಂಬುದನ್ನು ತಿಳಿದು ಕೊಂಡು ಬರೋಣ, ಅಷ್ಟೆ."

"ಇಲ್ಲೇ ಎರಡು ಕೋವಿ ಇವೆ," ಎಂದ ಮಂಜುನಾಥ್.

"ತಾ...ಅವನ್ನೊಂದಿಷ್ಟು ಒರಿಸು. ಕತ್ತಲಾಗುವುದರೊಳಗಾಗಿ ಅದರ ಪತ್ತೆ ಹಚ್ಚಬೇಕು. ಏನೇ ಆಗಲಿ, ಅದರ ಜನ್ಮ ಇಲ್ಲಿಗೆ ಮುಗಿಸದಿದ್ದರೆ ಅದು ಮುಂದೆ ನಮ್ಮನ್ನೂ ಉಳಿಸುವುದಿಲ್ಲ!"

"ಹುಲಿ ಬಹಳ ಪಳಗಿದೆ. ಇದುವರೆಗೆ ಎಷ್ಟು ಬಾರಿ ಮರಸು ಕೂರ ಲಿಲ್ಲ? ಎಷ್ಟು ಕಡೆ ಕೋವಿ ಕಟ್ಟಲಿಲ್ಲ? ಬಹಳ ಸೂಕ್ಷ್ಮವಾಗಿ ತಪ್ಪಿಸಿ ಕೊಳ್ಳುತ್ತದೆ."

ಅದರ ಚಾಕಚಕ್ಯತೆಯನ್ನು ಬಣ್ಣಿಸುತ್ತ ನುಡಿದ ಬೊಳ್ಳಪ್ಪ. ಬೆಳ್ಳಿ ಯಪ್ಪ ಒಳಗಿನಿಂದ ಕೋವಿಗಳನ್ನು ತಂದ. ಮಾದು ತಾನು ತಂದಿದ್ದ ಕೆಲವು ತೋಟಗಳನ್ನು ಇಬ್ಬರಿಗೂ ನೀಡಿ ನುಡಿದ "ಇವುಗಳನ್ನು ತಂದು ಯಾವ

ಕಾಲವಾಗಿತ್ತೋ... ಈಗ ಉಪಯೋಗಕ್ಕೆ ಬರುತ್ತಿವೆ."

"ಸರಿ, ಎಲ್ಲಕ್ಕೂ ಕಾಲ ಪಕ್ವವಾಗಬೇಕಲ್ಲ ?"

ಇದೇ ತಾನೇ ಜೇಲಿನಿಂದ ಬಿಡುಗಡೆಯಾಗಿ ಬಂದ ಪತಿಯನ್ನು ಹುಲಿ ಶಿಕಾರಿಗೆ ಕಳುಹಿಸಿಕೊಡಲಿಚ್ಛಿಸದ ಮಡದಿ–ತಂಗಮ್ಮ ಹೊರ ತಲೆ ಹಾಕಿ ಹೇಳಿದಳು,

"ಬಂದಿರುವುದೇ ಈಗ ಮತ್ತೇಕೆ ಇಂತಹ ಭಾರೀ ಕೆಲಸ ಕೈಕೊಳ್ಳು ವಿರಿ ?"

"ಪರವಾಯಿಲ್ಲ, ಹೆದರಬೇಡ; ಈಗಲೇ ಬಂದು ಬಿಡುತ್ತೇವೆ. ಮಾದೇವ ನಮಗೆ ಬೆಂಗಾವಲಾಗಿದ್ದಾನೆ." ಎಂದ ಬೆಳ್ಳಿಯಪ್ಪ.

"ನಮಗಾಗಿ ಪ್ರಾರ್ಥಿಸಿರಿ." ಹಸನ್ಮುಖಿಯಾಗಿ ನುಡಿದ ಮಾದು. ನುಡಿ ಎದೆಯಾಳದಿಂದ ಹರಿದು ಬಂತು.

ಮೂವರೂ ಕೋವಿಹೊತ್ತು ಸಾಲಾಗಿ ಹೊರಟರು. ಎಳೆ ಬಿಸಿಲ ಕಾವಿಗೆ ಕೆನ್ನೆಯಲ್ಲಿ ರಂಗು ಹೊಮ್ಮುತಿತ್ತು. ಕುರುಚಲು ಗಿಡಗಳ ಮಧ್ಯೆ ಹೇರಿದ ಕಾಲು ಹಾದಿಯಲ್ಲಿ ಸಾಗಿತು–ಗೆಳೆಯ ಮಂಡಳಿ. ಹಸುರು ಹುಲ್ಲು ಹಾಸಿನ ಸುರಮ್ಯ ಹಾದಿ ಕಾಲ್ತುಳಿತಕ್ಕೆ ಸಿಕ್ಕಿ ಹಸುರು ಒಣಗಿ ಹೊನ್ನ ವರ್ಣಕ್ಕೆ ತಿರುಗಿದ್ದುದರಿಂದ ಅಂಕುಡೊಂಕಿನ ಮಧ್ಯರೇಖೆ ಮಣ್ಣಿನ ವಾಸನೆ ಯನ್ನು ಪೂಸಿಕೊಂಡಿತ್ತು. ಹಾದಿಯುದ್ದಕ್ಕೂ ಬೊಳ್ಳಪ್ಪನ ಬಾಯಿಯಲ್ಲಿ ಹುಲಿಯನ್ನು ಕುರಿತಾದ ಅನೇಕ ವರ್ಣನೆಗಳು ಹೊರಬಿದ್ದುವು. ಅನೇಕ ವೇಳೆ ಕೋವಿಯ ಕಟ್ಟಾಳುಗಳ ದೃಷ್ಟಿಗೆ ಬಿದ್ದರೂ ತಪ್ಪಿಸಿಕೊಂಡು ಹೋದ ಬಗೆ ರಸಪೂರ್ಣವಾಗಿ ಹೊಮ್ಮಿತು. ಮೂವರ ಮುಖಭಾವ ಒಮ್ಮೆ ಗಂಭೀರ ವಾದರೂ ಇನ್ನೊಮ್ಮೆ ಮಂದಹಾಸ ತಳೆಯುತಿತ್ತು.

ಮಾದು ತನ್ನ ಒಡಲ ಸಂಕಟವನ್ನೆಲ್ಲ ಕೊನೆಯ ಬಾರಿ ತೋಡಿಕೊಂಡ "ಮನೆಗೆ ಬರುವಾಗ ಎಷ್ಟೊಂದು ಉತ್ಸಾಹವಿತ್ತೋ ವಿಷಯ ತಿಳಿದೊಡನೆಯೇ ಎಲ್ಲಾ ಚೂರ್ಣವಿಚೂರ್ಣವಾಗಿ ಹೋಯಿತು. ನಾಯಿ ಇಲ್ಲದೆ ಮನೆ ಬರಿದು; ಹಸುವಿಲ್ಲದೆ ಕೊಟ್ಟಿಗೆ ಬರಿದು; ಹೆಂಗಸರು ಮಕ್ಕಳ ಮುಖ ನೋಡು ವಂತಿಲ್ಲ. ಇಂದು ನನಗಾದ ಸಂಕಟ ಅಷ್ಟಿಷ್ಟಲ್ಲ. ಒಂದರ ಮೇಲೊಂದು ಸಂಕಟ ತಂದೊಡ್ಡಿದೆ ವಿಧಿ."

"ಕಷ್ಟಗಳು ಬಂದರೆ ಹೀಗೆಯೇ...."

ಅಷ್ಟರೊಳಗಾಗಿ ಮೂವರೂ ಹಸು ಬಿದ್ದಿದ್ದ ಜಾಗಕ್ಕೆ ಬಂದಿದ್ದರು. ಹುಲಿಯೊಡನೆ ಸೆಣಸಿದ ತಾಪಿನಲ್ಲಿ ಹುಲ್ಲು ಗಿಡಗೆಂಟೆಗಳು ಮುರಿದು ಪುಡಿ ಪುಡಿಯಾಗಿದ್ದುವು. ಅಲ್ಲಲ್ಲಿ ಹೆಜ್ಜೆಯ ಗುರುತು ಉದುರಿದ ರೋಮಗಳು ಕಾಣಿಸಿದುವು. ಕುತೂಹಲ ತೃಷಿತ ನೋಟ ಎಲ್ಲೆಡೆಯೂ ಮತ್ತೆಮತ್ತೆ ಹರಿದಾಡಿತು. ಪ್ರಸ್ತುತ ಪರಿಸ್ಥಿತಿಯಲ್ಲಿ ಏಕೀಭವಿಸಿತು ಚಿತ್ತ. ಅಲ್ಲಿಂದ ಮುಂದೆ ಹಾದಿಯುದ್ದಕ್ಕೂ ಗಿಡಗೆಂಟೆಗಳು ಮುರಿದು ಬಿದ್ದುದರಿಂದ ದೂರ ದಿಂದ ಅಟ್ಟಿಸಿಕೊಂಡು ಬಂದಿದೆ ಎಂಬುದು ಖಚಿತವಾಯಿತು. ಕ್ರೂರದಂತಿ ಗಳಿಗೆ ಹಸು ಬಲಿಯಾದೆಡೆ ನೆತ್ತರು ಚೆಲ್ಲಿತ್ತು.

"ಹಸು ಆದಷ್ಟು ಸೆಣಸಿದೆ."

"ಪಾಪ ...!"

"ಹುಲಿ, ಈ ಪ್ರದೇಶ ಬಿಟ್ಟು ಇನ್ನು ಹೋಗುವುದೇ ಇಲ್ಲ. ಇಲ್ಲಿ ಸರಾಗವಾಗಿ ಆಹಾರ ದೊರೆಯುತ್ತಲಿದೆ."

"ಏನಾದರಾಗಲಿ ಮುಗಿಸಿ ಬಿಡೋಣ. ಮಧ್ಯಾಹ್ನ ಶಿಕಾರಿ ಕೂಡು ವುದು ಅಥವಾ ರಾತ್ರಿ ಮರಸು ಕೂರುವುದು ಯಾವುದು ಸೂಕ್ತವೋ ನಿರ್ಧರಿಸಿರಿ."

"ಅದಕ್ಕೆ ನಿನ್ನೆ ಹೆಚ್ಚು ಮಾಂಸಭಕ್ಷಣೆಗೆ ಸಮಯವಾಗಿಲ್ಲ. ಈ ರಾತ್ರಿ ಖಂಡಿತ ಬರುತ್ತೆ. ಇಲ್ಲಿ ಮರಸು ಕೂರುವುದಕ್ಕೆ ಸರಿಯಾದ ಮರಗಳೇ ಕಾಣಿಸುತ್ತಿಲ್ಲ."

"ಆ ಹೊಂಗೆ ಮರದಲ್ಲಿ ಕುಳಿತರೆ ಬಹಳ ದೂರವಾಗುತ್ತೆ ಅಲ್ಲವೆ ?"

"ಹೌದು...ಇಲ್ಲವಾದರೆ ಅದು ಕೂರುವುದಕ್ಕೆ ಬಹಳ ಅನುಕೂಲ ವಾಗಿತ್ತು."

ಹುಲಿ ಅಲ್ಲಿಂದ ಹಿಂದಿರುಗಿ ಕಾಡಿನೊಳಗೆ ಸೇರಿದ ಹೆಜ್ಜೆಯ ಜಾಡನ್ನರ ಸುತ್ತ ಅಲ್ಲಲ್ಲೇ ಸ್ವಲ್ಪ ಹೊತ್ತು ಅಡ್ಡಾಡಿದರು. ಅದು ನಡೆದು ಹೋದ ಕಡೆ ಹುಲ್ಲು ಹುಟ್ಟಿತ್ತಾದ ಕಾರಣ ಹೆಜ್ಜೆಗಳ ಗುರುತು ಕಾಣಸಿಗುವಂತಿರಲಿಲ್ಲ. ಗಿಡ ಗೆಂಟೆಗಳಿಗೆ ಅಂಟಿದ ರೋಮಗಳ ಜಾಡಿನ ಮೇಲೆಯೇ ಮುಂದುವರಿದರು. ಒಂದೆರಡು ಕಡೆ ಧೂಳಿನ ಮೇಲೆ ಹೆಜ್ಜೆಯ ಗುರುತು ಸ್ಪಷ್ಟವಾಗಿ ಕಾಣಿಸು ತಿತ್ತು. ಇನ್ನು ಕೆಲವೆಡೆ ಅಸ್ಪಷ್ಟವಾಗಿ ಮೂಡಿತ್ತು.

ಎಲ್ಲಿಂದ ಎಲ್ಲಿಯವರೆಗೂ ವಿಗಲಿತ ದರುಗೆಲೆ-ಒಣಕಡ್ಡಿಗಳ ರಾಶಿ ರಾಶಿ. ಹೆಜ್ಜೆ ಇಟ್ಟೆಡೆ ಲರಲರ-ಪಟಪಟ ಸದ್ದು ಮೂಡುವುದೆಂದು ದರಗಿಲ್ಲದೆಡೆಯೇ ಮೆಲ್ಲಮೆಲ್ಲನೆ ಹೆಜ್ಜೆಗಳನ್ನಿಡುತ್ತ, ಮೈಯೆಲ್ಲಾ ಮನಸ್ಸಾಗಿ ನಿರ್ವಹಿಸಿದ ಕಾರ್ಯಚಟುವಟಿಕೆ ಹೃದಯ ಕುಂಡಲಿನಿಗೆ ವಿದ್ಯುತ್ ಸರಬರಾಜು ಮಾಡಿ ದಂತೆ ಯಾವುದೋ ಒಂದು ಬಗೆಯ ನವೀನ ಶಕ್ತಿಯ ಪೂರಕದಿಂದ ರಕ್ತದ ಕಣಕಣವೂ ತುಳುಕುವಂತೆ ಭಾಸವಾಗುತಿತ್ತು. ಅನಿವಾರ್ಯ ಶ್ರದ್ಧೆ ರೋಮ ರೋಮವನ್ನೂ ಉದ್ಬುದ್ಧಗೊಳಿಸಿತು. ಹಗುರವಾದ ವನಚಾರೀ ವಾಯು ವಿನ ನವುರಾದ ತೆರೆಯನ್ನು ಭೇದಿಸಿ ಮುಂದಡಿ ಇಡುವಾಗ ಗಿಡಗೆಂಟಿಗಳ ಹರೆ ಗೈಗಳು ಮುಖ ಮೈಗಳನ್ನು ನೇವರಿಸುತಿದ್ದುವು. ಸಣ್ಣ ಮರ್ಮರ ಸದ್ದು ಮೊಳಗುತಿತ್ತು.

ಅಲ್ಲಿನ ಹೆಜ್ಜೆಯ ಜಾಡನ್ನನುಸರಿಸಿ ಸಣ್ಣ ದನಿಯಲ್ಲಿ ಮಾದು ಅಂದ,

"ಬೊಳ್ಳ್ಯ, ಇಲ್ಲಿ ನೋಡು ! ಹೆಜ್ಜೆ ಏಕ ಪ್ರಕಾರವಾಗಿ ಕೆಳತಿಟ್ಟಿನ ಕಡೆ ನಡೆದಿದೆ. ಇದೇ ನೇರಕ್ಕೆ ಮುಂದೆಯೂ ಹೋಗಿದ್ದರೆ ಹೆದ್ದಾರಿ ಕೆಳಗಿನ ಕಾಡೇ ಅದಕ್ಕೆ ಸ್ಥಳ."

"ಹೌದು. ಇನ್ನೆಲ್ಲೂ ದಟ್ಟವಾದ ಸ್ಥಳವಿಲ್ಲ....ಇಲ್ಲಿ."

"ನಿಜ....ಇನ್ನೆಲ್ಲಿಯೂ ಇಲ್ಲವೇ ಇಲ್ಲ. ತಂಗಿದರೆ ಅಲ್ಲೆ...."

ದನಕರುಗಳು ಓಡಾಡಿ ಹುಲ್ಲು ಸವೆದ ಕಾಲು ಹಾದಿಯಲ್ಲಿ ಕುಸುಮ ಧೂಲಿಯಿಂದ ಸಮಾವೃತವಾದ ಮಣ್ಣಿನ ಹುಡಿಯಲ್ಲಿ ಹರಡಿದ ಹುಲಿರೋಮ ಗಳು ಚಿತ್ರರಂಜಿತವಾಗಿರುವುದನ್ನು ನೋಡಿ ಮೆಲ್ಲನೆ ಹೆಜ್ಜೆಯ ಮೇಲೆ ಹೆಜ್ಜೆ ಯನ್ನಿಟ್ಟು ಸ್ವಲ್ಪ ಮುಂದುವರಿದರು. ಅಲ್ಲಿಂದ ಬಲಕ್ಕೆ ತಿರುಗಿದ ಹೆಜ್ಜೆಯ ಜಾಡು ಹಿಡಿದು ನೋಡಿದರೆ ಅವು ಹೆದ್ದಾರಿಯ ಕಡೆ ಹರಿಯದೆ ಉತ್ತಡ್ಕದ ಹೊಂಡ ಪ್ರದೇಶಕ್ಕೆ ಇಳಿದಿದ್ದುದು ಖಚಿತವಾಯಿತು. ತಮ್ಮ ಊಹೆ ಅರ್ಥಾತ್ ತಪ್ಪಾಗಿ ಮೈ ಬೆವರಿಳಿಯ ತೊಡಗಿದಾಗ ಭಯ ಭೀತ ನೋಟ ಹೊಂಡದ ಕಡೆ ಹರಿಯಿತು.

"ಓ....!"

"ಅದಿರುವುದು ಇಲ್ಲೇ ಸೈ ! ಇಲ್ಲಿಂದಾಚೆಗೆ ಹೋಗಲು ತಾವೇ ಇಲ್ಲ!" ಮೆಲ್ಲನೆ ಪಿಸುಗುಟ್ಟಿದ ಬೊಳ್ಳಪ್ಪ. ನಡೆಯಿರಿ ಹಿಂದಿರುಗೋಣ. ಇನ್ನು

ಮುಂದೆ ಹೋಗುವುದು ಬಹಳ ಅಪಾಯ !"

"ಹುಲಿ ತಂಗುವಷ್ಟು ಸ್ಥಳವೆಲ್ಲಿದೆ ಇಲ್ಲಿ ?"

"ಇನ್ನೆಲ್ಲಿಗೆ ಹೋಗಲು ಸಾಧ್ಯ ? ಇದರಾಚೆ ಬಯಲು ತಾನೆ ?"

ಆ ಪ್ರಶ್ನೆಯ ಮೇಲೆ ಮೂವರೂ ಮುಂದುವರಿಯದೆ ಅಲ್ಲೇ ನಿಂತರು. ತಕ್ಷಣ ನೋಟಗಳು ಅತ್ತಲೇ ಕೇಂದ್ರೀಕೃತವಾದವು. ಎಲ್ಲಿ ಹೆಜ್ಜೆಯಿಟ್ಟರೂ ಲರಲರ ಸದ್ದು ಮಾಡುತ್ತವೆ. ಕುರುಚಲು ಗಿಡಗಳ ಪ್ರಾಂತವಾದುದರಿಂದ ಸರಾಗವಾಗಿ ಓಡಾಡುವುದೂ ಕಷ್ಟ....ಏನು ಗತಿ ? ಎಂಬ ಯೋಚನೆಯೊಂದಿಗೆ ಕುತೂಹಲಭರಿತ ಲೋಚನಗಳು ಹೊಂಡ ಪ್ರದೇಶದ ಕಡೆ ಮತ್ತೆ ಹರಿದುವು ನಾಲ್ಕಾರು ಮರಗಳಿಂದ ಕೂಡಿದ ಅದು ಮುಳ್ಳು ಕಂಟೆಯ ದಟ್ಟ ಪ್ರಾಚೀರವನ್ನು ಹೊಂದಿತ್ತು. ಆ ಸ್ಥಳದಲ್ಲಿ ಹುಲಿ ತಂಗುವುದೆಂದರೆ ವಿಶೇಷವೇ. ಇನ್ನು ನಿಶ್ಶಬ್ದವಾಗಿ ಹೆಜ್ಜೆಯನ್ನು ಹಿಂತೆಗೆಯುವುದೊಳ್ಳೆಯದೆನಿಸಿದಾಗಲೇ ಅದೇ ತಾವಿನಿಂದ ಹುಲಿ ಎದ್ದು ಘರ್ಜಿಸಿತು ! ಇಲ್ಲಿಗೂ ಅಲ್ಲಿಗೂ ನಾಲ್ಕು ಮಾರು ಮಾತ್ರ ಅಂತರ ! ಇಲ್ಲಿ ಹುಲಿ ಇರಬಲ್ಲುದೆಂದು ಹಿಂದೆ ಯಾರಾದರೂ ಹೇಳಿದ್ದರೂ ನಂಬುತ್ತಿರಲಿಲ್ಲ ಬಹುಶಃ. ಈಗ ಒಮ್ಮೆಗೇ ಹುಲಿಯ ಬೋನಿನೊಳಗೆ ಬಿದ್ದಂತಾಗಿ ಹೃದಯ ಡಿಂಡಿಮ ಮೇರೆ ಮೀರಿ ಮಿಡಿದುವು. ತಕ್ಷಣ ಕೋವಿಗಳನ್ನು ಗುರಿ ಹಿಡಿದು ಅಲ್ಲೇ ನಿಂತರು. ಮರುಕ್ಷಣದಲ್ಲಿ ಮನುಷ್ಯಗಂಧದಿಂದ ರೊಚ್ಚಿಗೆದ್ದು ಭಯಂಕರ ಗರ್ಜನೆಯೊಡನೆ ಹುಲಿ ಹಾರಿ ಬಂತು–ಮೃತ್ಯುವೇ ಮೈವೆತ್ತು ಬಂದಂತೆ !

ಢಂ !

ಢಂ ! ಢಂ !

ಅನಿರೀಕ್ಷಿತ ಪ್ರಸಂಗದಿಂದ ಹಿಡಿದ ಗುರಿಗಳು ತಬ್ಬಿಬ್ಬಾದುವು. ಪೆಟ್ಟು ಬಿದ್ದರೂ ಆಯ ತಪ್ಪಿತು. ತಾನು ಸಾಯುವ ಮುನ್ನ ಶತ್ರುಗಳನ್ನು ಮುಗಿಸಿಬಿಡುವ ಛಲದಿಂದ ಘನಘೋರ ಗರ್ಜನೆಯೊಡನೆ ಹುಲಿ ಮೈ ಮೇಲೆ ಬಿತ್ತು ! ತರುಣರು ಕೋವಿ ಬಿಸುಟು ಕಡುಗತ್ತಿ ಹಿರಿದರು. ಇಕ್ಕಟ್ಟಿನ ತಾವಿನಲ್ಲಿ ಭಯಂಕರ ಕಾಳಗ ! ಕಾಡು-ನಾಡು ಮೊಳಗುವಂತಹ ಚೀತ್ಕಾರ !

ದರ್ಪ–ಪೌರುಷಗಳ ಸಂಮರ್ದ....ಸಂಘರ್ಷಣೆ....ಸಂವಿಧಾನ....

–ಭೀಷಣ ಸನ್ನಿವೇಶದಲ್ಲಿ–ಅತ್ಯಂತ ಇಕ್ಕಟ್ಟಿನ ಮಟ್ಟಿಯಲ್ಲಿ ಭಯಂಕರ

ವೇದನೆಯೊಡನೆ ದುಷ್ಟ ವ್ಯಾಘ್ರಹೋರಾಡಿ ಸತ್ತಾಗ ಭಯಂಕರ ಕಾಳಗ ಕೊನೆಗೊಂಡಿತು. ಮುಂದಿದ್ದ ಮಾದಯ್ಯನಿಗೆ ತೊಡೆ ಹರಿದು ನೆತ್ತರು ಹರಿಯುತಿತ್ತು. ಮೈಕೈಗಳಿಗೂ ಹುಲಿಯುಗುರು ತಾಗಿ, ಮುಳ್ಳುಕಡ್ಡಿಗಳು ತರಚಿ ಗಾಯಗಳಾಗಿದ್ದುವು. ಬೊಳ್ಳಪ್ಪ ಮತ್ತು ಬೆಳ್ಳಿಯಪ್ಪ ಸಹ ಈ ಗಂಡಾಂತರದಿಂದ ಹೊರತಾಗಲಿಲ್ಲ. ಮೂವರೂ ರಕ್ತದ ಕೋಡಿಯಲ್ಲಿ ಮಿಂದರೂ ಒಬ್ಬರನ್ನೊಬ್ಬರು ಗಾಢಾಲಿಂಗನ ಮಾಡಿಕೊಂಡರು. ವನದೇಶದ ವಿಶ್ರಾಂತಿಧಾಮದಲ್ಲಿ ಆರಾಮವಾಗಿ ಮೈಕೆಡೆದ ವೀರಯೋಧನಂತೆ ಸತ್ತ ಹುಲಿ ಆತ್ಮವಿಶ್ವಾಸದ ನೈಜತೆಯಲ್ಲಿ ನೆಲದ ಮೇಲೆ ಒರಗಿತ್ತು. ಆ ಮುಹೂರ್ತ ಉದ್ವೇಗಪೂರ್ಣವಾಗಿದ್ದರೂ ಶಾಂತಿ ಸಂಭ್ರಮಗಳಿಂದ ಕೂಡಿತ್ತು. ಎಲ್ಲೆಲ್ಲೋ ಚದರಿ ಬಿದ್ದಿದ್ದ ಕತ್ತಿಕೋವಿಗಳನ್ನು ಹೆಕ್ಕಿಕೊಂಡು ಉಷ್ಣರಕ್ತದ ನವಶಕ್ತಿಯೊಡನೆ ಹೊರಟಾಗ ಮನಃಪ್ರಾಣಗಳು ಅತ್ಯಾನಂದದಿಂದ ಪುಳಕಿತವಾದುವು. ಮೂವರೂ ಕೋವಿ ಹೊತ್ತು ಸಾಲಾಗಿ ಹೊರಟರು.

ಹುಲಿಯ ಗರ್ಜನೆ, ಗುಂಡುಗಳ ಮೊರೆತ ನಾಡಿನ ಬೀಡನ್ನೇ ಬಡಿದೆಬ್ಬಿಸಿತು. ಅನೇಕರು ಕೋವಿಗಳನ್ನು ತಡಕುತ್ತಿರುವಾಗಲೇ ಸದ್ದು-ಗದ್ದಲ ಇದ್ದಕ್ಕಿದ್ದಂತೆಯೇ ನಿಂತು ಹೋದುದರಿಂದ ಮನಮನಗಳಲ್ಲೂ ಮತಿಮತಿಯಲ್ಲೂ ಕಿಂಕರ್ತವ್ಯತೆ ತುಂಬಿ ಹೋಯಿತು. ಎಲ್ಲಿ ಯಾವ ಕಡೆ ಸದ್ದು ಮೊಳಗಿತೆಂಬುದನ್ನು ಊಹಿಸುವುದು ಕಷ್ಟ. ಕೋವೀಧಾರಿಗಳನೇಕರು ಏನು ಮಾಡುವುದೆಂದು ಯೋಚಿಸುತ್ತಲೇ ಮನೆಗಳಿಂದ ಹೊರಬಿದ್ದರು. ಭಯ-ಉದ್ವೇಗಳಿಂದ ಉಷ್ಣೋಧಿಕ ಜ್ವಾಲೆ ತನುಮನಗಳನ್ನು ಅವ್ಯಾಹತವಾಗಿ ಆವರಿಸಿತು. ಒಬ್ಬರಿಗೊಬ್ಬರು ಎಲ್ಲಿ ಏನು ? ಎಂದು ವಿಚಾರ ವಿನಿಮಯಮಾಡಿಕೊಳ್ಳುವುದರೊಳಗಾಗಿ ಬೇಟೆಗಾರರು ಗೆದ್ದ ಹೆಮ್ಮೆಯಿಂದ ಅಲ್ಲಿಂದಲೇ ಉಚ್ಚಸ್ವರದಲ್ಲಿ ಕೂಗು ಹಾಕಿದರು-ಕೂಊಹುಹುಹುಹುಹುಹುಹೂ !

ಕೊಂಬಿನ ಕಹಳೆಯಂತೆ ಮೊಳಗಿತು ಕೂಗು !

ಇಲ್ಲಿಂದಲೂ ಅನೇಕ ಕೂಗು-ಶಿಳ್ಳೆಗಳು ಹೊರಬಿದ್ದುವು. ಆ ಕಡೆಯಿಂದ ಪುನಃ ಪ್ರತ್ಯುತ್ತರ ಹೊಮ್ಮಿತು. ಸ್ತ್ರೀಜನ-ಬಾಲಚಮೂ ಪುಳಕಿತ ಹೃದಯರಾಗಿ ಹಾದಿಯ ನೇರಕ್ಕೆ ಧಾವಿಸಿದರು. ಮರುಘಳಿಗೆಯಲ್ಲಿ ಜನಸಂದಣಿ ನೆರೆಯಿತು. ಗೆಲುವಿನ ಛಾಯೆ ಎಲ್ಲರ ಮುಖದ ಮೇಲೂ ನಲಿದಾಡು

ತಿತ್ತು....ಕುತೂಹಲ ಕಾತರ ತೃಷಿತ ದೃಷ್ಟಿ ಉತ್ತರೀಶಟದೆಡೆಗೆ ಕೇಂದ್ರೀಕೃತವಾಗಿತ್ತು. ಹೃದಯ ಸಂಪುಟ ಸುಖ-ದುಃಖಗಳಿಂದ ಬಿರಿಯುವಂತಿತ್ತು.

ಇನ್ನಷ್ಟು ಹೊತ್ತಿನೊಳಗಾಗಿ ದೂರದ ತಿರುವಿನಲ್ಲಿ ರಕ್ತಸಿಕ್ತ ಬೇಟೆಗಾರರು ಕಣ್ಣಿಗೆ ಬಿದ್ದರು. ಜನಜಂಗುಳಿ ಅವರನ್ನು ಸುತ್ತುವರಿದಿತ್ತು. ನಗು–ಕೂಗು–ಹುಯಿಲು–ಮಾತುಕತೆ–ವಿಜಯೋತ್ಸಾಹ ತನುಮನಗಳನ್ನು ತುಂಬಿದುವು. ಕೆಲವಾರು ಹುಸಿಗುಂಡುಗಳು ಗೌರವ ಸೂಚಕವಾಗಿ ಹೊರಬಿದ್ದುವು. ಕೆಲವರು ಕುಣಿಯುತ್ತ ಬೆಂಬಲಿಸಿ ಹೆಜ್ಜೆ ಹಾಕುತಿದ್ದಾರೆ. ಆ ದೃಶ್ಯವೈಭವವನ್ನು ಸಂತಸದಿಂದ ಈಕ್ಷಿಸಿದರೂ ಕರುಳು ಕೊಯ್ಯುವಂತಿತ್ತು ಕೆನ್ನೀರಿನಿಂದ ತೊಯ್ದ ರಕ್ತಾಕ್ತ ಶರೀರ ಸಂಪತ್ತು.

ಗೃಹಿಣಿಯರು ಹಾದಿಯಿಂದ ಹಂದಲಿಲ್ಲ ; ಮೈಮರವಟ್ಟರೂ ಮನಸ್ಸು ಆನಂದದ ಬೀಡಾಗಿತ್ತು.

ನಾಯಿಗಳು ಕೊರಳೆತ್ತಿ ಬೊಗುಳುತ್ತಿದ್ದವು. ಕಿವಿಗಳು ಕೊರೈಸುವಂತೆ.

"ದೇವರು ದೊಡ್ಡವನು !"

ವೃದ್ಧ ಜನನಿ ಒಂದೇ ಮಾತಿನಲ್ಲಿ ಭಗವಂತನಿಗೆ ಕೃತಜ್ಞತೆಯನ್ನರ್ಪಿಸಿದಳು.

"ಹುಲಿ ಗರ್ಜಿಸಿದಾಗ ನನ್ನ ಜಂಗಾಬಲವೇ ಬಿದ್ದುಹೋಯಿತು. ಮಾದೇವ ಕಾಪಾಡಿದ."

ಆ ವೇಳೆಗಾಗಲೇ ತಾಳಗಟ್ಟೆಯಿಂದಲೂ ಗೃಹಿಣಿಯರು ಏದುತ್ತೇದುತ್ತ ಓಡಿ ಬಂದಾಗಿತ್ತು. ಕಾತರ–ಕಳವಳ–ಭಯಗಳ ಏಕೈಕ ಭೂಮಿಕೆಯಲ್ಲಿ ಶರೀರ ತಳಮಳಿಸಿ ಕುಸಿಯುವಂತೆ ಭಾಸವಾಯಿತು. ಹೃದಯದ ಬಡಿತ ಏರುಪೇರಾಗಿ ಹಾದಿಯಂಚಿನಲ್ಲಿ ಕುಸಿದಾಗ ಸನಿಹದಲ್ಲಿದ್ದವರು ಸಹಾಯ ಮಾಡಿ ಅಂದರು,

"ಅಷ್ಟೇಕೆ ಭಯ ? ಹುಲಿಯನ್ನು ಕೊಂದು ಬರುತಿದ್ದಾರೆ. ಮೂವರೂ ಬರುತ್ತಿರುವುದು ಕಾಣಿಸುತ್ತಿಲ್ಲವೇ ?"

"ಅಯ್ಯೊ, ನಾನೆಷ್ಟು ಹೆದರಿದ್ದೆ ?"

"ಎಲ್ಲರಿಗಾದುದೂ ಹಾಗೆಯೆ."

"ಅಬ್ಬಾ, ಯಮಧೈರ್ಯ !"

"ಪ್ರಾಣಕ್ಕೆ ಸಂಚಕಾರ ಒದಗಿದ್ದರೆ ನಮ್ಮಗತಿ ಏನಾಗಬೇಡ ?"

ಇತ್ಯಾದಿ, ಇತ್ಯಾದಿ.

ಮಾತಿನ ಸರಣಿ ಎಣೆ ಇಲ್ಲದೆ ಸಾಗುತಿದ್ದರೂ ದೃಷ್ಟಿಕರುಣ ಕಾತರವಾಗಿತ್ತು. ಸ್ತ್ರೀಜನ ಅವರು ಸಮೀಪಿಸುವುದನ್ನೆದುರು ನೋಡುತ್ತ ನಿಂತರು. ಹುಡುಗರ ದಳ ಓಡಿ ಹೋಗಿ ಬೇಟೆಗಾರರನ್ನುಸುತ್ತುವರಿದು ಉತ್ಸಾಹಪೂರ್ಣ ಮಾತುಕತೆಗಳನ್ನು ಮೈಯೆಲ್ಲಾ ಕಿವಿಯಾಗಿ ಆಲೈಸಹತ್ತಿತು. ಕೆಲವೇ ಕೆಲವು ನಿಮಿಷಗಳೊಳಗಾಗಿ ಬೇಟೆಗಾರರು ಸನಿಹಕ್ಕೈತಂದರು.

ಅಬ್ಬಾ ! ಭಯಾನಕ ದೃಶ್ಯ...ಮೇಲಾಗಿ ಜಯಿಸಿದ ಸಾಹಸದ ಕತೆ....

"ಮೊದಲು ಆಸ್ಪತ್ರೆಯ ಕಡೆ ಹೋಗಿ ಬನ್ನಿ. ಉಗುರಿನ ನಂಜು ಮೈಗೇರೀತು !"

"ಹೌದಪ್ಪಾ, ಹೌದು !"

ಕಾವೇರಿಯ **ಚಿತ್ತ** ದಶಕ ದಶಕ ದಶಕಗಳ ಪಾವಟಿಗೆಗಳನ್ನಿಳಿದು ಗತ ಕಾಲದಲ್ಲಿ ಹಕ್ಕಿಯಂತೆ ವಿಹರಿಸತೊಡಗಿತು. ಸ್ವರ್ಗೀಯ ತಿಮ್ಮಯ್ಯ ಒಳ್ಳೆಯ ಶಿಕಾರಿಗಾರ. ಆತನ ತಾರುಣ್ಯದ ದಿನಗಳಲ್ಲಿ ಎರಡು ಹುಲಿಗಳನ್ನೂ ಮೂರು ಚಿರತೆಗಳನ್ನೂ ಹೊಡೆದು 'ನಾಡುಮಂದಿ'ಯಲ್ಲಿ ಗೌರವ ಹೊಂದಿದ್ದ. ಅಂದು ನಡೆದ ನರಿಮಂಗಲ (ಹುಲಿಮದುವೆ) ಚಿತ್ರ ಅಕ್ಷಿ ಪಟಲದ ಮೇಲೆ ಚಲನಚಿತ್ರದಂತೆ ಸುಳಿಸುಳಿದಳಿಯಿತು. ಆ ಮುಹೂರ್ತದಲ್ಲಿ ಹೊಮ್ಮಿದ ಮಂಗಳಗಾನ ಕರ್ಣಪಟಲಗಳಿಗೆ ಚಿರನೂತನವಾಗಿ ತಾಗಿತು.

ಬಾಳೋ ಕೇಳಿ ಚಂಜಾದಿ
ಪಾಡುವ ಕತೆ ಕೇಳಿ
ಈ ನಾಡ್ ನಡುವುಲ್
ಬಾಂಗಾಡ್ ಬನತ್‌ಲ್
ಬಾಯಲಂದ ಪೆಬ್ಬುಲಿ
ಪುಯಿಪಗೊಂಡಡಗಿಂಜ
ಆ ಸುದ್ದಿ ಕೇಟತ್
ನಾಡಡಂಗ ಬಾಲರೊ

ಒಕ್ಟೋಬರುವಿನ ಕೊಂಡಿತ್
ಕಾಡ್ ಬೋಟಿ ಕೂಡ್ ಚಿ

....

ಆ ಸಾಲಿನಲ್ಲಿ ಇಂದು ನೊಮ್ಮಗ ಧೀರೋದಾತ್ತನಂತೆ ವಿಜೃಂಭಿಸಿದ.

೩೧

....ಎಲ್ಲಿಂದ ಎಲ್ಲಿಯವರೆಗೂ ಹಸುರಾಂತ ವನಶ್ರೀ.

....ಅಶೋಕ ಪುಷ್ಪಗಳ ರೇಣು ಚೆಲ್ಲಿ ಸೂಸಿ ರಂಗೋಲೀಮಯವಾದ ಪುಣ್ಯಭೂಮಿ.

ಯಾಕೋ ಏನೋ ಶ್ರುತಿ–ಸಂವೇದನೆಗಳು ಶೂನ್ಯವಾಗಿವೆ. ಅದಾವ ಮೋಹಕತೆಯಿಂದಲೋ ಮಾನವ ಸಂಮರ್ದವೆಲ್ಲವೂ ಮಂತ್ರಮುಗ್ಧವಾದಂತೆ ಯಂತ್ರಿತವಾದಂತೆ ಅಭಿಭೂತವಾಗಿ ಬಿಟ್ಟಿದೆ. ರಾಷ್ಟ್ರದಲ್ಲಿ ಚಳವಳಿಯ ಅಧ್ಯಾಯ ಮುಗಿದನಂತರ ಹಿಂದೂ ಮುಸ್ಲಿಂ ಮಾರಾಮಾರಿಯ ಪ್ರಕರಣ ಆರಂಭವಾಗಿತ್ತು. ಅನಂತರ....ಅನಂತರ ...ರಾಷ್ಟ್ರಪಿತನ–ಮಾನವೀಯತೆಗಾಗಿ ಅಹೋರಾತ್ರಿ ಶ್ರಮಿಸಿದ ಪುಣ್ಯಾತ್ಮನ ಕಗ್ಗೊಲೆ ! ಮಾನವ ನೆತ್ತರಿನ ಸೇಚನೆ ಹೊಂದಿ ಭಾರತವರ್ಷ ಭಯಂಕರ ರಕ್ತ ಕೇಸರಿಯಾದರೂ ಬ್ರಿಟಿಷರ ಯೌವನಮದ–ಸಂಪತ್ತಿಮದ ಧೂರ್ತತೆಗಳ ದುರ್ವಹ ಚಿರಾಚರಿತ ಭೀಷಣ ಸ್ವರೂಪ ರೆಕ್ಕೆ ಮುರಿದ ಪಕ್ಷಿಯಂತಾಯಿತು. ಭಾರತದಲ್ಲಿ ಆರಾಮವಾಗಿ ತಂಗಿದ್ದ ವಿದೇಶೀಯರು ತಮ್ಮ ತಮ್ಮ ದೇಶಗಳಿಗೆ ಹೊರಟಿದ್ದಾರೆ; ಕೆಲವರು ಆಗಲೇ ಹೋಗಿದ್ದರೆ ಇನ್ನು ಕೆಲವರು ಹೊರಡುವ ಸಜ್ಜಿನಲ್ಲಿದ್ದಾರೆ.

ರಾಷ್ಟ್ರದಲ್ಲಿ ತನ್ನದೇ ಆದ ರಾಜ್ಯಾಂಗದ ನಿರೂಪಣೆಯಾಗಿದೆ. ಜನಜೀವನದಲ್ಲಿ ನೆಮ್ಮದಿಯು ಮೂಡಿ ದಿನಚರಿ ಎಂದಿನಂತೆ ಸಾಗುತಿತ್ತು. ನಾಲ್ಕು ಮಂದಿ ಕೂಡಿದೆಡೆ ಮುಂದಿನ ರಾಜಕೀಯದ ಬೆಳವಣಿಗೆಯ ಬಗ್ಗೆ ಚರ್ಚೆಯೇಳುತಿತ್ತು, ಸಹಸ್ರ ಸಹಸ್ರ ಕಂಠಗಳು ಸಹಸ್ರ ಸಹಸ್ರ ಪ್ರಕಾರವಾಗಿ ಪ್ರತಿಕ್ರಿಯೆ ವ್ಯಕ್ತಪಡಿಸಿ ವಿವಿಧ ರೀತಿಯಲ್ಲಿ ವ್ಯಾಖ್ಯೆ ಹೂಡುತಿದ್ದುವು.

ಮಾದು ರಾಜಕೀಯದಿಂದ ಪೂರ್ಣ ವಿಮುಕ್ತನಾಗಿದ್ದ. ಭತ್ತದ ಕಾಮಗಾರಿ ತ್ರಾಸದಾಯಕವಲ್ಲದಿದ್ದರೂ ಏಲಕ್ಕಿಯ ತೋಟ ಸಂಪೂರ್ಣ ರೋಗಗ್ರಸ್ತವಾಗಿ ಫಸಲಿಲ್ಲದಂತಾಯಿತು. ಮೇಲಾಗಿ ಹೊರಲಾರದಂತಹ ಸಾಲದ ಹೊರೆ. ಎಷ್ಟೇ ಸಂಬಾಳಿಸಿಕೊಳ್ಳುತ್ತೇನೆಂದರೂ ಆರ್ಥಿಕ ಮುಗ್ಗಟ್ಟು

ದೈತ್ಯರೂಪವಾಗಿ ಅಡ್ಡನಿಂತಿದೆ. ಕಷ್ಟಕಾರ್ಪಣ್ಯಗಳ ಖಡ್ಗದಲುಗಿನ ಮೇಲೆ ಹರಿದಾಡುತ್ತದೆ ಜೀವನದಿ. ಪೂವಮ್ಮನ ತಾಯಿ ಹಾಸಿಗೆ ಹಿಡಿದಿದ್ದುದರಿಂದ ಪೂವಮ್ಮ ಮಕ್ಕಳೊಂದಿಗೆ ಅಲ್ಲೇ ಇದ್ದು ಬಿಟ್ಟಿದ್ದಾಳೆ. ಸಧ್ಯಕ್ಕೆ ಅವಳು ಹಿಂದಿರುಗುವ ಯೋಚನೆಯಲ್ಲಿಯೂ ಇರಲಿಲ್ಲ. ಮಾದು ಹಾಲಿಗಾಗಿ ಒಂದು ಎಳೆಗಂದಿ ಹಸುವನ್ನು ಸಾಲವಾಗಿ ಕೊಂಡು ತಂದಿದ್ದ. ಅದರ ಹಾಲಿನಿಂದ ಹೇಗೋ ದಿನಗಳೆಯುತ್ತವೆ. ಒಂದು ಕಾಲದಲ್ಲಿ ಹರಿದಾಡಿದ ಆನಂದೋಲ್ಲಾಸ, ಅದರ ಸ್ಮೃತಿ ಮನಸ್ಸಿನಿಂದ ಮರೆಯಾಗಿಲ್ಲ. ಮೈಯಲ್ಲಿ ಹರಿದಾಡುವ ಬಿಸಿ ನೆತ್ತರಿನ ಝರಿ, ಅದರ ತೀವ್ರವೇಗ ಕಡಿಮೆಯಾಗಿಯೂ ಇಲ್ಲ. ಆದರೆ, ಸಹಜೀವಿಯಾದ ದಾರಿದ್ರ್ಯದೇವತೆಯ ಪ್ರಸಾದವನ್ನು ಭುಜಿಸುವುದೇ ಕಡುಕಷ್ಟ. ನಾನಾಬಗೆಯ ಕಷ್ಟಕಾರ್ಪಣ್ಯಗಳ ವಿಷಚಕ್ರದಲ್ಲಿ ಸಿಕ್ಕಿ ನರಳುವಾಗ ದಿನಗಳು ಹೇಗೇ ಬಂದವೋ ಹೇಗೆ ಹೋದುವೋ ದೇವರಿಗೇ ಗೊತ್ತು. ಹನ್ನೆರಡು ಮಾಸಗಳು ಉರುಳಿ ಹೋದಮೇಲೆ ವರ್ತಮಾನ ಗತಿಸಿದುದರ ಅರಿವು ಮೂಡಿತು. ಮಡದಿ ತುಂಬು ಗರ್ಭಿಣಿ ; ವ್ಯವಹಾರ ಅಸ್ತವ್ಯಸ್ತ. ಮಡಿಕೇರಿ ಹತ್ತಿರವೇ ಆದರೂ ಹೋಗಿ ಪೂವಿಯನ್ನೂ, ಮಕ್ಕಳನ್ನೂ ನೋಡಿಕೊಂಡು ಬರುವಷ್ಟು ಸಮಯವು ದೊರೆಯಲಿಲ್ಲ. ಕೆಲಸ-ಕೆಲಸ. ಹಗಲೂ ರಾತ್ರಿ ಮಾಡಿದರೂ ಮುಗಿಯದ ಕೆಲಸ. ಲಾಭದ ಪರಾಮರ್ಶೆ ವ್ಯರ್ಥ. ಪೊನ್ನಮ್ಮ ಮಂಗಳೂರಿಗೆ ಹೋಗಲು ಬಯಸಿದುದರಿಂದ ಅಲ್ಲಿಗೆ ಕರೆದೊಯ್ದು ಬಿಟ್ಟು ಬಂದ. ಈ ಪ್ರಕಾರ ಅತ್ಯಂತ ನಿರಾಶಾದಾಯಕ ರೀತಿಯಲ್ಲಿ ಅದೆಷ್ಟೋ ದಿನಗಳು ಉರುಳಿದುವೋ....

ಇಂದು ಗದ್ದೆ ತೋಟಗಳ ಕೆಲಸ ಮುಗಿಸಿ ಬಂದವನೇ ಮಾದು ಅನಿರೀಕ್ಷಿತವಾಗಿ ಅಂದ,

"ಅವ್ವಾ, ಈವತ್ತು ಮಡಿಕೇರಿಗೆ ಹೋಗಿ ಪೂವಿಯನ್ನೂ ಮಕ್ಕಳನ್ನೂ ನೋಡಿಕೊಂಡು ಬರೋಣ ; ಎಲ್ಲರನ್ನೂ ನೋಡದೆ ಬಹಳ ದಿನಗಳಾದುವು. ನೀವು ಹೇಳುತ್ತಲೇ ಇದ್ದೀರಿ. ನನಗೆ ದಿನಗಳು ಓಡಿದುದೇ ತಿಳಿಯಲಿಲ್ಲ." ಎಂದ, ದನಿ ಎದೆಯಾಳದಿಂದ ಹರಿದು ಬಂತು.

"ಹೌದಪ್ಪಾ. ನಾನು ಅಂದಿನಿಂದಲೂ ಜ್ಞಾಪಿಸುತ್ತಲೇ ಬಂದೆ.... ನೀನೇ ಮನಸ್ಸು ಮಾಡಲಿಲ್ಲ. ಮಕ್ಕಳು ಹೇಗಿದ್ದಾರೋ...."

ಮನಸ್ಸು ಮಾಡದೆ ಏನು ? ಕೈಗೆ ಬಿಡುವಾಗಲಿಲ್ಲ. ಇಂದು ಏನೇ ಆಗಲಿ, ಹೋಗಿ ನೋಡಿ ಕೊಂಡು ಬರೋಣವೆಂದು ಕೆಲಸ ಅಷ್ಟಕ್ಕೆ ಮುಗಿಸಿ ಬಂದೆ."

ಹೊತ್ತು ಹತ್ತರ ಅಂಚಿನಲ್ಲಿತ್ತು; ತರುಣಾರುಣ ಬಾನೇರುವುದರಲ್ಲಿದ್ದ. ನೀಲಾಚಲಭಿತ್ತಿಯಲ್ಲಿ ಬೆಳ್ಮುಗಿಲುಗಳು ಅಲೆಯುಲೆಯಾಗಿ ಹಬ್ಬಿ, ದೂರ ದೂರದವರೆಗೂ ರಜತಚೂರ್ಣ ಮಿಶ್ರಿತ ಅಪಾರವಾದ ಪ್ರವಾಹದಂತೆ ಪ್ರವಹಿಸಿದೆ. ಒಂದೆರಡು ಘಳಿಗೆ ಅನಂತಾಕಾಶದಲ್ಲಿ ನೆಟ್ಟಿದ್ದ ದಿಟ್ಟಿಯನ್ನು ಇತ್ತ ಹೊರಳಿಸಿ, ಶಾಂತ ಸ್ನಿಗ್ಧ ಮನೋಹರ ಶೋಭೆಯಿಂದ ವೃದ್ಧ ಜನನಿ ನುಡಿದಳು. "ಸರಿ ಮತ್ತೆ ಈಗಲೇ ಹೊರಟರೆ ಸಂಜೆಯ ವೇಳೆಗೆ ಹಿಂದಿರುಗಬಹುದು."

ಜನನಿಯ ಕಣ್ಣಿನ ಕೆಳಗಣ ನೀಲರೇಖೆ ಇನ್ನೂ ನೀಲವಾಗಿದ್ದುದನ್ನು ನೋಡುತ್ತ ಮಾದು ಅಂದ "ನಿಮ್ಮ ಮುಖದಲ್ಲಿ ಆಯಾಸದ ಚಿಹ್ನೆ ತೋರುತ್ತಿದೆ. ನೀವು ಹೆದ್ದಾರಿಯ ತನಕ ನಡೆಯ ಬಲ್ಲಿರಾ ?"

ಪ್ರಶ್ನೆ ನಗು ತರಿಸಿತು. ಕ್ಷಣಿಕ ಮೌನದನಂತರ ನುಡಿದಳು ಕಾವೇರಿ,

"ಓ....ಅಷ್ಟು ಸೋಲಲಿಲ್ಲ ಬಿಡು."

ಮಾದು ತನ್ನ ಪ್ರಶ್ನೆಗೆ ತಾನು ಮುಗುಳು ನಕ್ಕು ನುಡಿದ ; ಅಕ್ಷರ ಅಕ್ಷರಗಳೂ ಅನೀರಿಕ್ಷಿತವಾಗಿ ಹೊಮ್ಮಿದುವು. "ನೀವಷ್ಟು ಶಕ್ತರೆಂಬುದು ಗೊತ್ತು. ಆದರೂ ಹೆಚ್ಚು ದಣಿಸಲು ಮನಸ್ಸು ಬರುವುದಿಲ್ಲ."ಸ್ನೇಹಮೃದುಲ ಹೃದಯದ ಹಾರೈಕೆಯನ್ನು ಹೊರಚೆಲ್ಲಿ ಪುನಃ ಮುಂದುವರಿದ "ಆ ಸಲ ಮಡಿಕೇರಿಗೆ ಬರುವುದಾಗಿ ಅವರಿಗೆ ಹೇಳಿ ಕಳುಹಿಸಿ ಅನಂತರ ಹೋಗಲಾಗಲಿಲ್ಲ ; ಒಂದು ಕಾಗದ ಬರೆಯುವಷ್ಟೂ ವಿರಾಮ ಸಿಗಲಿಲ್ಲ. ಏನೆಂದು ಕೊಂಡರೋ ಏನೋ...." ತುಟಿಗಳಲ್ಲಿ ಊಹಿಸಲೂ ಆಗದಂತಹ ಶುಷ್ಕ ನಗು ಮೂಡಿ ಮಾಯವಾಯಿತು.

ಅದೇ ಸಮಯದಲ್ಲಿ ಶಾಲ್ಮಲೀ ವೃಕ್ಷದ ತಣ್ಣೆಳಲಲ್ಲಿ ಯಾರದೋ ಕಾಲ ಸಪ್ಪಳ ಕೇಳಿಸಿತು. ಒಳಗಿದ್ದ ನಾಯಿ ಜಾಡು ಹಿಡಿದು ಹೊರಗಡೆ ಧಾವಿಸಿತು. ನೋಟ ಸಹಜವಾಗಿ ಹಾದಿಯ ಕಡೆ ಹೊರಳಿದಾಗ ಮಾಚವ್ವ ದೃಗ್ಗೋಚರಿಸಿದಳು, ಈಚೀಚೆಗೆ ಅವಳು ಕಾವೇರಿಯೊಂದಿಗೆ ಹೆಚ್ಚು

ಹೊತ್ತು ಕಳೆಯುತ್ತಾಳೆ. ಹೆಚ್ಚು ಕಡಿಮೆ ಎಂಟ್ಹತ್ತು ವರ್ಷಗಳಿಗೆ ಚಿಕ್ಕವಳಾದ ಅವಳನ್ನು ಕಂಡರೆ ಕಾವೇರಿಗೆ ಸೋದರೀಭಾವ. ಮಾದು ಸ್ವಾಗತಿಸುವಂತೆ ಮುಗುಳು ನಕ್ಕ. ಕಣ್ಣುಗಳಲ್ಲಿ ನಿರಾಶಾಪೂರ್ಣ ಶಾಂತಿ ಮಿನುಗುತ್ತಿತ್ತು, "ಇನ್ನಷ್ಟು ಹೊತ್ತಿನೊಳಗಾಗಿ ನಾನೇ ನಿಮ್ಮಲ್ಲಿಗೆ ಬರುತಿದ್ದೆ.... ನಾವಿಂದು ಮಡಿಕೇರಿಗೆ ಹೊರಟದ್ದೇವೆ.ಮಾಚಮ್ಮಾ" ಎಂದ.

"ಓ...! ಹೋಗಿ ಬನ್ನಿ ; ಮನೆಯಲ್ಲಿ ನಾನಿರುವೆ." ಎಂದಳಾಕೆ.

"ಸರಿ, ಇನ್ನೂ ಒಳ್ಳೆಯದೇ ಆಯಿತು" ಎಂದಳು ಕಾವೇರಿ. ಮನೋಜನ್ಯ ಭಾವಲಹರಿ ತಾನೇ ತಾನಾಗಿ ಹೊಮ್ಮಿತು. ಈ ಭವಸಾಗರದಲ್ಲಿ ನಿರ್ಲಕ್ಷ್ಯದಿಂದ ಹರಿಯುವ ಅಕರ್ಮಣ್ಯ ಜೀವನಗಳೇ ಸಾರ್ಥಕ ಪಡೆಯುತ್ತವೆ. ಆದರೆ, ನನ್ನ ಸಂಸಾರದ ವಿಚಾರ ನನಗೆ ಅರ್ಥವೇ ಆಗುವುದಿಲ್ಲ. ನಮ್ಮ ವ್ಯರ್ಥ ಸಾಹಸಕ್ಕೆ ಏನಾದರೂ ಬೆಲೆ ಇದೆಯೇ ಎಂಬುದೇ ಅಸ್ಪಷ್ಟ."

"ಯಾವುದಕ್ಕಿಲ್ಲ ? ಎಲ್ಲಾದಕ್ಕೂ ಉಂಟು. ಕೆಲವು ವೇಳೆ ಫಲಿಸುವುದು ನಿಧಾನವಾಗಬಹುದು ಅಷ್ಟೆ."

"ನಿಮ್ಮ ಉತ್ತರ ಸರಿ " ಎಂದ ಮಾದು.

ಮೂವರ ಮುಖದಲ್ಲೂ ಮುಗುಳು ನಗೆ ಮೂಡಿತು.

ಕಾವೇರಿ ಮೊಮ್ಮಕ್ಕಳಿಗೆ ಸಿಹಿಕಾರಗಳನ್ನು ಹೊಂದಿಸಿಕೊಳ್ಳುವುದರಲ್ಲಿ ನಿಮಗ್ನಳಾಗಿದ್ದಳು. ದಯಾರ್ದ್ರ ಹೃದಯದಲ್ಲಿ ಹಲವಾರು ಚಿಂತೆಗಳ ಸಂಗಮವಾಗಿತ್ತು. ಬಸ್ಸಿನ ವೇಳೆಗೆ ಹೆಚ್ಚು ಸಮಯವಿರಲಿಲ್ಲವಾದುದರಿಂದ ಕಾಲುಗಳಿಗೆ ಬಿರುಸು ಮೂಡಿತು. ನಾನಾ ವಿಚಾರಗಳನ್ನು ವಿಮರ್ಶಿಸುತ್ತಲೇ ಓಡಾಡಿದಳು ಜನನಿ.

ಈಚೆಗೆ ಮುದ್ದಪ್ಪನಿಂದ ಕಾಗದವೇ ಇಲ್ಲ. ಸರಕಾರಕ್ಕೆ-ಮಿಲಿಟರಿ ಕೇಂದ್ರಕ್ಕೆ ಬರೆದ ಪತ್ರಗಳಿಗೆ ಹೇಳಿ ಬರೆಯಿಸಿದಂತೆ ಒಂದೇ ರೀತಿಯ ಉತ್ತರ ಬರುತ್ತದೆ. ಪೆಂಗಾರಂಗ್ ಐಲೆಂಡಿನಲ್ಲಿ VIII Army ಶರಣಾಗತವಾದನಂತರ ಭಾರತ ರೆಜಿಮೆಂಟು ಎಲ್ಲಿ ಯಾವ ಕಡೆ ಉಳಿದಿದೆ ಎಂಬುದು ಕರಾರುವಾಕ್ಕಾಗಿ ತಿಳಿದು ಬರಲಿಲ್ಲವಾದುದರಿಂದ ಮನಸ್ಸಿಗೆ ಕಳವಳ. ವಿಷಯ ದಿನಕ್ಕೊಮ್ಮೆಯಾದರೂ ಚರ್ವಿತಚರ್ವಣವಾಗುವುದು. ಜನನಿಯು ತನ್ನಲ್ಲೇ ತಾನು ಮೆಲುಕು ಹಾಕುವುದನ್ನು ತುಟಿಗಳು ಹೊರಗೆಡಹದಿದ್ದರೂ, ಮುಖಭಾವ

ಹೊರಚೆಲ್ಲುತ್ತದೆ. ಹೃದಯ ತಂತುಗಳ ಅವಿರಳಶ್ರಾವೀ ಚೇತನವಾರಿ ದುಃಖ ಭೋಗಕ್ಕಾಗಿಯೋ ಹರಿದಾಡುವುದೋ ಏನೋ....

ಯೋಚನಾಮಗ್ನಳಾಗಿ ನುಡಿದಳು ಕಾವೇರಿ "ಮುದ್ದು ವಿಚಾರ ತಿಳಿದು ಬಂದಿದ್ದರೆ ಪೂವಿಗೆ ಎರಡು ಸಮಾಧಾನದ ಮಾತು ಹೇಳಿರಬಹುದಾಗಿತ್ತು. ಈಗ ಸುಮ್ಮನೆ ಹೋಗಿ ಬರುವುದಷ್ಟೆ ; ಪಾಪ, ಆಕೆಗೆ ನಾನಾ ಕಡೆಯಿಂದ ಪೆಟ್ಟು."

"ವಿಧಿ ಲಿಖಿತ ...!" ಮಾದು ಗಂಭೀರವಾಗಿ ನುಡಿದ.

"ಅಲ್ಲ ಅನ್ನುವಂತಿಲ್ಲ ; ಆದರೂ ಅದು 'ಅಂತಿಮ'ವಾಗಬಾರದು."

ಮಾದು ಜನನಿಯ ಮಾತಿಗೆ ತಲೆದೂಗಿದ. ಮುಖಭಾವ ಸಮ್ಮತಿ ಸೂಚಿಸಿತು....ಶಾಲಾ ಕಾಲೇಜುಗಳಲ್ಲಿ ಅಧ್ಯಾಪಕರುಗಳ ಮೆಚ್ಚಿಕೆ ಪಡೆದು, ಯುವಕ ಸಮಾಜದಲ್ಲಿ, ವ್ಯವಸಾಯ ಕ್ಷೇತ್ರದಲ್ಲಿ 'ಸಹಭಾಸ್' ಗಿರಿ ಹೊಡೆದು ತಪ್ಪು ಒಪ್ಪುಗಳನ್ನು ಸ್ವತಃ ವಿಶ್ಲೇಷಣೆ ಮಾಡಬಲ್ಲ ಬುದ್ಧಿಶಕ್ತಿ ವೃದ್ಧ ಜನನಿಯ ಪ್ರತಿಯೊಂದು ಸಲಹೆಗೂ ತಲೆಬಾಗುವುದು ಒಮ್ಮೊಮ್ಮೆ ತನಗೇ ಆಶ್ಚರ್ಯವೆನಿಸುವುದು. ತಪ್ಪು ಮಾಡಿದಾಗ ಒಪ್ಪಿಕೊಳ್ಳುವುದರಿಂದ ಅದರ ತೂಕ ಕಡಿಮೆಯಾಗುವುದೆಂಬ ಮಮತೆಯೊಂದಿಗೆ ಏಕೀಭವಿಸುತ್ತದೆ ಬುದ್ಧಿ ಸಂಪುಟ. ಅಂತಲೇ ಜನನಿಯ ಸಲಹೆಯನ್ನು ನಮ್ರತೆಯಿಂದ ಸ್ವೀಕರಿಸಿ ಬಿತ್ತರಿಸಿದ,

"ಈ ಜಗತ್ತಿನಲ್ಲಿ ಯಾವುದಕ್ಕೂ ಆದ್ಯಂತವಿಲ್ಲ ಅವ್ವಾ !"

ಕಃಪದಾರ್ಥವನ್ನು ಕಸದ ಬುಟ್ಟಿಗೆ ಹಾಕುತ್ತ ಮುಗುಳು ನಕ್ಕಳು ಜನನಿ. ನಿಶ್ಶಬ್ದ ಪ್ರಕೃತಿಯ ಅಂತರಾಳದಲ್ಲಿ ಏನೋ ಒಂದು ಬಗೆಯ ತುಮುಲಯುದ್ಧ ನಡೆಯುತಿತ್ತು. ಶ್ರಮಬಿಂದುಗಳಿಂದ ಸುಸಜ್ಜಿತವಾದ ಹಣೆಯ ಮೇಲೆ ಬಿಸಿಲು ಮಚ್ಚಿನಿಂದ ಸೂಸುವ ಹೊಂಬಿಸಿಲು ಬಿದ್ದು ಹನಿಗಳು ಮಿಂಚಿನಂತೆ ಮಿನುಗುತಿದ್ದವು. ಯೋಚನೆಯ ಒತ್ತಡದಿಂದ ಹೃದಯದಲ್ಲಿ ತುಳುಕುವ ರಕ್ತದ ಕಣಕಣವೂ ಕರ್ತವ್ಯವನ್ನು ಸಾರಿ ಹೇಳುವಂತಿತ್ತು. ಕಮಲದಂತಹ ಪ್ರಫುಲ್ಲ ಮುಖ ತೊಟ್ಟು ಕಳೆದಂತಾಗಿತ್ತು....ಕೈಗಳಿಗೆ ಬಿಡುವೆಂಬುದೇ ಇಲ್ಲವೇನೋ....ಯಾವುಯಾವುದೋ ಕೆಲಸ ಸಾಗುತ್ತಲೇ ಇದೆ. ಎಳೆಯರನ್ನು ಅಣಕಿಸುವಂತೆ ಅವಸರವಸರವಾಗಿ ಓಡಾಡುತಿದ್ದಾಳೆ.

ಮಾಚಮ್ಮ ಸಹಜಭಾವದಿಂದ ಹೇಳಿದಳು "ಏನಿದ್ದರೂ ನಾನು ಮಾಡಿಡುವೆ. ಈಗ ಮತ್ತೇಕೆ ಶ್ರಮ ?"

"ಇದೇನು ಹೆಚ್ಚಲ್ಲ ಮಾಚಮ್ಮ ; ಮನಸ್ಸಿಗೆ ಶಾಂತಿ ಇದ್ದಿದ್ದರೆ...."

ಏರಿದ ನಯನಪಕ್ಷ್ಮಗಳು ಇಳಿಯಲಿಲ್ಲ. ಮಾಚಮ್ಮ ಮಂತ್ರಮುಗ್ಧಳಂತೆ ಒಂದೆರಡು ಘಳಿಗೆ ನೋಡುತ್ತಲೇ ಇದ್ದಳೇನೋ ...ಅನಂತರ ತನ್ನನ್ನು ತಾನೇ ಸಾವಧಾನದಿಂದ ಸುಧಾರಿಸಿಕೊಂಡು ನುಡಿದಳು,

"ಬಿಡವ್ವಾ, ನಿಮ್ಮಂತಹವರು ಅಪರೂಪ !"

"ನೀನೇನು ಕಡಿಮೆ ?" ಹಾಸ್ಯ ಪ್ರಧಾನವಾಗಿ ನುಡಿದಳು ಕಾವೇರಿ. ಅನಂತರ ಮಾದಯ್ಯನ ಕಡೆ ತಿರುಗಿ ಅಂತರಾಳವರ್ತೀ ವಿಚಾರಮಂಥನವನ್ನು ಅಕ್ಷರಶಃ ಮುಂದಿಟ್ಟಳು "ಎಲ್ಲಾದರೂ ಹಣಕ್ಕೆ ಏರ್ಪಾಡುಮಾಡಿಕೊಂಡು ಪೂವಿಗಾಗಿ ಒಂದು ತೋಟ ಕೊಂಡುಕೊಳ್ಳುವುದು ಲೇಸು. ಅಥವಾ ಸ್ಥಳವನ್ನು ಕೊಂಡುಕೊಂಡರೆ ಕಾಡು ಕಡಿಸಿ ತೋಟ ಬೆಳೆಸಬಹುದು. ಅವಳಿಗೂ ಮಕ್ಕಳಿಗೂ ಏನಾದರೊಂದು ಸ್ಥಿತಿಗತಿ ಮಾಡಲೇಬೇಕು. ಇನ್ನು ಮುದ್ದಪ್ಪ ಬರುವುದು ಯಾವ ಕಾಲಕ್ಕೋ..."

"ಹೌದು ; ಎಲ್ಲಾದರೂ ನೋಡುವೆ."

"ಅದು ನಿನ್ನ ಮೊದಲ ಕರ್ತವ್ಯ."

ಹಾಗೆಂದು ಆಕೆ ಮರು ನುಡಿಯದಿದ್ದರೂ ಮುಖಭಾವ ಕೂಗಿ ಹೇಳಿತು. ಅವಳು ಒಳಗಡೆ ಹೋಗಿ ಮಕ್ಕಳಿಗೆ ತೆಗೆದುಕೊಂಡ ತಿಂಡಿ ತಿನಿಸನ್ನು ಕಾಗದದ ಪೊಟ್ಟಣದಲ್ಲಿ ಕಟ್ಟಿಕೊಳ್ಳತೊಡಗಿದಳು. ಮಾದು ಮುಖ ಮಜ್ಜನ ಮುಗಿಸಿ ಬಂದ. ಹೊತ್ತು ಹನ್ನೊಂದರ ಬಳಿಸಾರಿತ್ತು. ಹಳೆಯ ಸಣ್ಣ ಮೇಜಿನ ಮೇಲೆ ಊಟಕ್ಕೆ ಅಣಿಯಾಗಿತ್ತು. ಅಷ್ಟು ಮುಂಚೆ ಊಟಮಾಡುವ ಅಭ್ಯಾಸವಿಲ್ಲದಿದ್ದುದರಿಂದ ಮನಸ್ಸಿಲ್ಲದ ಮನಸ್ಸಿನಿಂದ ಮುಂದಾದ ..ಬೇಡ ಎನ್ನಲು ಬಾಯಿ ಬರಲಿಲ್ಲ. ಆ ಮಾತಾಮಯಿ ಎದುರಿಗೇ ಕುಳಿತಿದ್ದಾಳೆ. ನೆತ್ತಿಯ ಮೇಲೆ ನೇರವಾಗಿ ಹರಿದ ಸೀಮಂತ ರೇಖೆ ಚದುರಿದ ಬೆಳ್ಳಿಯ ಅಲಕರಾಶಿಯಿಂದ ಆಚ್ಛನ್ನವಾಗಿತ್ತು. ಕುಂಕುಮರಹಿತ ಲಲಾಟದ ಮೇಲೆ ಹರಿದಾಡುವ ಅಲೆಗೂದಲು ತಿಳಿಗಾಳಿಗೆ ಮೆಲ್ಲನೆ ಅಲುಗುತ್ತಿವೆ. ಕಾಡಿಗೆಯನ್ನಣಕಿಸುವ ಕಣ್ಣುಗಳಲ್ಲಿ ಭಾವಜ್ವಾಲೆ ತಾಂಡವವಾಡುತಿತ್ತು. ಒಂದೆರಡು ಸಲ ನಿಟ್ಟುಸಿ

ನೋಡಿ....ಸ್ವರ್ಗಲಕ್ಷ್ಮಿ ಸ್ವರ್ಗದಲ್ಲಿದ್ದಾಳೆಯೇ? ಅವಳಿರುವುದೇ ಇಲ್ಲಿ! ಎಂದು ಕೊಂಡ ಮಾದು. ಮುಖ ಇದ್ದಕ್ಕಿದ್ದಂತೆಯೇ ಪ್ರಸನ್ನವಾಯಿತು.

ಕೈ ತೊಳೆದು ಹೊರ ಬಂದಾಗ 'ಲಿಲ್ಲಿ' ಕಟ್ಟಿದ ಸರಪಣಿ ಸಮೇತ ಮೈಮೇಲೆ ಹಾರಿತು. ಜನನಿ ತಲೆಯ ಮೇಲೆ ಕೈಯಿಟ್ಟು ಮುದ್ದುಗೈದಳು. ಅದು ಅಲ್ಲಿಂದಲ್ಲೆ ಕೊಸರಾಡುತ್ತ ಹೊರಡುವ ಸುಳಿವನ್ನು ಹಿಡಿದು ಒಂದೇ ಸಮನೆ ಬೊಗುಳತೊಡಗಿತು.

"ನಾವು ಬಸ್ಸು ಹಿಡಿದ ಮೇಲೆ ಸ್ವಲ್ಪಹೊತ್ತು ಬಿಟ್ಟುಬಿಡು ಮಾಚಮ್ಮ. ಅದಕ್ಕೆ ಈಗಲೇ ಸಂಕಟವಾಗಿದೆ," ಎಂದೆನ್ನುತ್ತಲೇ ಹೊರ ಬಂದಳು ಕಾವೇರಿ.

ಆದರೂ ಅದು ಸುಮ್ಮನಿರಬೇಕಲ್ಲ, ಕಿವಿಕಿವುಡಾಗುವಷ್ಟು ಗದ್ದಲ ವೆಬ್ಬಿಸಿತು.

"ಕೆಳಮುಟ್ಟೆಯ ಕಡೆಯಿಂದ ಯಾರೋ ಬಂದಂತಾಯಿತು. ಬಹುಶಃ ಟಪ್ಪಾಲಿನವನೇ ಇರಬಹುದು."

ಆ ಮಾತು ಹೊರ ಬಿತ್ತೋ ಇಲ್ಲವೋ ಮಾದು ಬೇಲಿಯ ಬಳಿಗೆ ಹೋದ. ಊಹೆ ಸರಿಯಾಗಿತ್ತು. ಬಹಳ ದಿನಗಳ ನಂತರ ಬಂದ ಟಪ್ಪಾಲಿ ನವನನ್ನು ಅಭಿನಂದಿಸಿ ಕಾಗದವನ್ನು ತೆಗೆದುಕೊಂಡ. ಅವನು ನೀಡಿದ್ದು ಒಂದೇ ಒಂದು ಕಾಗದ. ಮಂಗಳೂರಿನ ಮುದ್ರೆ ಮತ್ತು ಹಸ್ತಾಕ್ಷರ ಗಮನ ವನ್ನು ತಕ್ಷಣ ಸೆಳೆದುಕೊಂಡಿತು. ಮಾದು ಆತುರದಿಂದ ಒಡೆಯು ವಾಗಲೇ ಮನದಲೆಯಲ್ಲಿ ಪೊನ್ನಮ್ಮನ ಚಿತ್ರ ಮೂಡಿತು. ಆಕೆಗೆ ಸುಖ ಪ್ರಸವವಾದರೆ ಸಾಕು ಎಂಬ ಹಾರೈಕೆಯಲ್ಲಿ ಒಡೆದ. ಹಸುರು ವರ್ಣರಂಜಿತ ಲಕೋಟೆಯೊಳಗೆ ಹರಿದ ಅಕ್ಷರ ಮಾಲೆ ಹೊರಗೆಡಹಿದ ಸುದ್ದಿಯೂ ಅದೇ. ಎರಡು ದಿನಗಳ ಹಿಂದೆ ಮಧ್ಯರಾತ್ರಿಯಲ್ಲಿ ಪೊನ್ನಮ್ಮನಿಗೆ ಹೆಣ್ಣು ಮಗು ಜನಿಸಿದ ಶುಭ ಸಮಾಚಾರವನ್ನು ಆಕೆಯ ತಮ್ಮ ಬರೆದು ಅಭಿನಂದಿಸಿದ್ದ... ನೋಡಿ ಸಂತಸ ಮೂಡಿದರೂ ಅವರು ಬಯಸಿದ್ದು ಗಂಡು.

"ಹೋಗಲಿ ಬಿಡು, ಸುಖ ಪ್ರಸವವಾಯಿತಲ್ಲ." ಎಂದಳು ತಾಯಿ.

"ಮಾದೇವನ ಇಚ್ಛೆ!"

ಗೋಡೆಯ ಮೇಲಿದ್ದ ಹಲ್ಲಿ ಲೊಚ ಲೊಚ ನುಡಿಯಿತು.

ಮಗ ಸೊಸೆ ಅಲ್ಲಿ ಮುಳುಗಡೆಯಾದ ಮೇಲೆ ಅಲ್ಲಿಂದ ಶುಭ ಸುದ್ದಿ

ಬಂದರೂ ಸಹ ಮನಸ್ಸಿಗೆ ಕಹಿಯನ್ನೂಡಿಸುತ್ತದೆ. ಏನೋ ಒಂದು ಬಗೆ ಯಲ್ಲಿ ಸುಖ ದುಃಖಗಳ ಹೋರಾಟ ಮುಖಭಾವದಲ್ಲಿ ಮುದ್ರಿತವಾಯಿತು. ಸ್ವಲ್ಪ ಹೊತ್ತು ನೀರವತೆಯಿಂದ ಚಿಂತಿಸಿದಳು ಕಾವೇರಿ....ಕಾರಿಯಪ್ಪ ಬಹಳ ಮಟ್ಟಿಗೆ ತಂದೆಯನ್ನೇ ಹೋಲುತಿದ್ದ. ಅದೇ ಎತ್ತರ, ಅದೇ ನಿಲುವು, ಅದೇ ಸನ್ಮೋಹನ ರೂಪು, ಒಮ್ಮೆ ನೋಡಿದವರಿಗೆ ಇನ್ನೊಮ್ಮೆ ನೋಡೋಣವೆನ್ನಿಸುವಂತಹ ಭವ್ಯತೆ. ಅದೇ ಹಾಸವಿಲಾಸ....ಹಾ ! ಒಂದೆರಡು ಕ್ಷಣ ಅಕ್ಷಿಪಟಲದ ಮೇಲೆ ತಿಮ್ಮಯ್ಯ ಕಾರಿಯಪ್ಪ ಸುಳಿದಳಿ ದರು. ಕಾವೇರಿ ಅದೇ ವಿಚಾರಮಗ್ನಳಾದಳೇನೋ. ಮಾದಯ್ಯನ ಗಮನ ಮಡದಿಯ ಬಳಿ ಸುಳಿಸುಳಿದಾಡುತಿತ್ತು.

ಕಾಲದಿಂದ ಕಾಲಾಂತರಕ್ಕೆ ಜಗಿದ ಗಮನವನ್ನು ಹತೋಟಿಗೆ ತೆಗೆದು ಕೊಳ್ಳುತ್ತ ಪ್ರಸನ್ನಮುಖಿಯಾಗಿ ಮಾದಯ್ಯನನ್ನು ಕುರಿತು ಕಾವೇರಿ, "ಈಗ ಮಂಗಳೂರಿಗೆ ಹೋಗುವ ಸಮಯವೂ ಕೂಡಿ ಬಂತಷ್ಟೆ....?"

"ಇಂದು ಹೇಗೂ ಮಡಿಕೇರಿಗೆ ಹೊರಟಿದ್ದೇವೆ. ಹೋಗಿಯೇ ಬರೋಣ ಹಾಗೇ ನಾಳೆ ಮಂಗಳೂರಿಗೆ ಹೊರಡಬಹುದು."

ಅದೇ ಕಾವೇರಿಯ ಆಶಯವೂ ಆಗಿತ್ತು. ಆಕೆ ಸಂತುಷ್ಟಳಾದಳು.

ಬಸ್ಸು ಹೆದ್ದಾರಿಗೆ ಬರಲು ಇನ್ನೂ ಅರ್ಧ ಗಂಟೆ ಇತ್ತು. ಹೊತ್ತು ನೆತ್ತಿಯ ಮೇಲೆ ಉರಿಯುತ್ತಿದೆ. ಪಶು ಪಕ್ಷಿಗಳೆಲ್ಲ ತಂಪನ್ನಾಶ್ರಯಿಸಿದ್ದುವು. ಮರಗಿಡಗಳ ಬುಡದಲ್ಲಿ ನೆರಳು ನೆಲೆ ನಿಂತಿತ್ತು. ಇಬ್ಬರೂ ಮೆಟ್ಟಿಲಿಳಿದರು. ನೋಟ ಬಾಲದ ಬಿಳಿಯ ನಾಯಿಯನ್ನು ಬೇಲಿಯ ಬಳಿ ಕಟ್ಟಲಾಗಿತ್ತು. ಹೊರಡುವ ಅವಸರದಲ್ಲಿ ಅದರೆಡೆಗೆ ಹೆಚ್ಚು ಗಮನ ಹರಿಸಲು ಸಮಯವೇ ಇಲ್ಲ. ಆದರೆ ಅದು ಒಂದೇ ಸಮನೆ ಬೊಗಳುತ್ತಿದೆ. ಅದರ ತಲೆಯ ಮೇಲೆ ಕೈಯಾ ಡಿಸಿ ಮುದ್ದುಮಾಡಿ "ಲಿಲ್ಲಿ....ಲಿಲ್ಲಿ ; ಶ್ ! ಗದ್ದಲ ಮಾಡಬೇಡ. ನಾವಿಂದೇ ಬಂದು ಬಿಡುತ್ತೇವೆ." ಎಂದ ಮಾದಯ್ಯ.

ಆದರೂ ಲಿಲ್ಲಿ ಕೇಳುವಂತಿಲ್ಲ.

ಕಾವೇರಿ ಮೈದಡವಿ ಮಾದಯ್ಯನ ಜೊತೆ ಹಾದಿಗಿಳಿದಳು.

"ಮುದ್ದಪ್ಪ ಮಡಿಕೇರಿಗೆ ಕಾಗದ ಬರೆದಿದ್ದರೆ ನಮಗೆ ವಿಚಾರ ತಿಳಿಯ ಬಹುದು."

"ಅಲ್ಲಿಗೂ ಬರೆಯಲಿಲ್ಲವಂತೆ. ನಿನ್ನೆ ಅಮ್ಮಿಟ್ಟೆ ಗಣೇಶ ಪೂವಿಯನ್ನು ಮಾತಾಡಿಸಿಕೊಂಡು ಬಂದಿದ್ದಾನೆ." ಎಂದ ಮಾದು ಒಂದು ಘಳಿಗೆ ತಡೆದು ಮುಂದುವರಿದ "ಅವನಿಗೆ ಕಾಗದ ಬರೆಯಲು ಅವಕಾಶ ಸಿಕ್ಕಿದ್ದರೆ ಬರೆದೇ ಬರೆಯುತಿದ್ದ."

"ಏನು ಗ್ರಹಚಾರವೋ...." ಮುಂದೆ ಮಾತು ಹೊರಡಲಿಲ್ಲ. ಭಾರವಾದ ಹೆಜ್ಜೆಗಳನ್ನು ತೆಗೆದಳು ಕಾವೇರಿ. ಬಯಲನ್ನು ದಾಟಿ ಗದ್ದೆಯಂಚಿಗೆ ಇಳಿಯುವವರೆಗೂ ಲಿಲ್ಲಿಯು ಆರ್ತಪೂರ್ಣ ದನಿಯಲ್ಲಿ ಗೋಳಿಡುತ್ತ ಕಂಠ ಬಿರಿಯುವಂತೆ ಮೇಲಿಂದ ಮೇಲೆ ಬೊಗಳುತ್ತಲೇ ಇದ್ದುದು ಕೇಳಿಸುತಿತ್ತು.

"ನಾಯಿ ನಾವು ಹಿಂದಿರುಗುವವರೆಗೂ ಹೀಗೇಯೇ ಗದ್ದಲ ಮಾಡಲೂ ಬಹುದು...."

ಅವನ ಊಹೆಗುತ್ತರವಾಗಿ ನುಡಿದಳು ಕಾವೇರಿ,

"ನಾವು ಬಿಚ್ಚಿ ಬಿಡುವುದಕ್ಕೆ ಹೇಳಿ ಬಂದುದೇ ತಪ್ಪಾಯಿತು........ ನಮ್ಮನ್ನು ಹುಡುಕುತ್ತ ಎಲ್ಲಾದರೂ ಹೊರಟು ಬಿಟ್ಟರೆ ಕಷ್ಟ"

ಅದು ಹೌದೆನಿಸಿತು ಮಾದುಗೆ. ಇನ್ನು ಮೇಲೆ ಹೋಗಿ ಬರುವುದಕ್ಕೆ ಹೊತ್ತಿರಲಿಲ್ಲವಾದುದರಿಂದ ಅದೇ ಯೋಚನೆಯಲ್ಲಿ ಹತ್ತು ಮಾರು ಹಾದಿ ಸಾಗುವುದರೊಳಗಾಗಿ ಜಂಬೂರು ಶೇಷು ಎದುರಾದ.

"ಓ, ನೀನು ಸಿಕ್ಕಿದ್ದು ಒಳ್ಳೆಯದಾಯಿತಪ್ಪ ಶೇಷು ! ಮನೆಯಲ್ಲಿ ನಾಯಿ ಕಟ್ಟಿ ಬಂದಿದ್ದೆ. ಅದನ್ನು ಬಿಡುವುದು ಬೇಡ ; ಹಾಗೇ ನೋಡಿಕೋ ಎಂದು ನಮ್ಮ ನೆರೆಮನೆ ಮಾಚಮ್ಮನಿಗೆ ಹೇಳು ಆಯಿತೇ ? ಇನ್ನೇನು ಇಷ್ಟರಲ್ಲೇ ಬಸ್ಸು ಬರುತ್ತೆ. ಹಿಂದಿರುಗಿ ಹೋಗಲು ಬಿಡುವಿಲ್ಲ."

"ಆಗಲಿ, ಹೋಗಪ್ಪಾ."

ಒಪ್ಪಿಗೆ ಸೂಚಿಸಿ ಒಂದೆರಡು ಮಾತುಗಳಲ್ಲಿ ಕ್ಷೇಮಸಮಾಚಾರ ತಿಳಿದಕೊಂಡು ಅವನು ಮನೆಯ ಕಡೆ ಹೊರಟ. ಇವರು ಪಯಣ ಮುಂದುವರಿಸಿದರು. ವಿಶಾಲವಾದ ಗದ್ದೆಯ ಕೋಗಿನಲ್ಲಿ ಬೇಸಿಗೆಯ ಬೆಳೆ ಹಚ್ಚ ಹಸುರಾಗಿ ನಳನಳಿಸುತಿತ್ತು. ಚಿಲಿಪಿಲಿ ಹಕ್ಕಿಗಳು ಅಲ್ಲಲ್ಲೇ ಚಿಲಿಪಿಲಿಗುಟ್ಟುತಿದ್ದುವು. ವನದೇಶದ ಮಧ್ಯೆ ಕಾಮಳ್ಳಿ, ಕೋಗಿಲೆಗಳ ಕೊರಳುಲಿಯೂ ಕೇಳಿ ಬರುತಿತ್ತು.

ಗದ್ದೆಯ ಪ್ರಾಂತವನ್ನು ದಾಟಿ ಹೆದ್ದಾರಿಗಿಳಿದಾಗ ನೆತ್ತಿ ಸುಡುತಿತ್ತು.

ಹಾದಿಯಂಚಿನಲ್ಲಿನ ಹೆಮ್ಮರದ ನೆರಳು ದುಂಡಗೆ ಹರಡಿ ಮಧುರ ಆಹ್ವಾನ ನೀಡುವಂತಿತ್ತು. ಕಾವೇರಿ ಕಲ್ಲಿನ ಮೇಲೆ ಕುಳಿತುಕೊಂಡಳು. ಅಂಕುಡೊಂಕಿನ ಹೆದ್ದಾರಿ ದೂರದ ತಿರುವಿನವರೆಗೂ ಕಣ್ಗೋಚರಿಸುತಿತ್ತು. ಬಸ್ಸಿನ ಆಗಮನವನ್ನು ನಿರೀಕ್ಷಿಸುತ್ತ ಕಣ್ಣುಗಳು ಸುತ್ತುಮುತ್ತ ಹರಿದಾಡಿದುವು. ಬೀಸಿ ಬರುವ ತಂಗಾಳಿಗೆ ಸಿಕ್ಕಿ ಚದುರಿದ ಅಲೆಗೂದಲು ಮುಖವನ್ನು ಮುತ್ತುತಿತ್ತು.

ಹೊತ್ತು ಲೀಲಾಜಾಲವಾಗಿ ಕರಗುತಿತ್ತು.

ಯಾವುದೋ ಅಪರಿಚಿತ ಪಕ್ಷಿ ಕೊರಳು ತುಂಬಿ ಹಾಡುತಿತ್ತು.

ಕೇಳುಕೇಳುತ್ತ ಅದೆಷ್ಟು ಹೊತ್ತು ಉರುಳಿತೋ....ಬಸ್ಸು ಮಾತ್ರ ಗೋಚರಿಸಲಿಲ್ಲ. ನಿಮಿಷಗಳುರುಳಿದುವು. ಗಂಟೆಗಂಟೆಗಳು ಕರಗಿದುವು.

....ನೀರವ...ನಿರ್ಜನ...ನಿಶ್ಶಬ್ದ.

ಪರ್ಣಾರ್ಣವದಲ್ಲಿ ತಂಗಾಳಿ ಅಲೆಯಲೆಯಾಗಿ ಸುಳಿದಾಡುತಿತ್ತು. ಅಶೋಕ ಕುಸುಮಗಳು ಉದುರಿ ಒಣಗಿ ಧೂಳೀಧೂಸರಿತವಾಗಿ ಚಿತ್ರವಿಚಿತ್ರವಾಗಿ ಹರಡಿ ವಿನೂತನ ಚಿತ್ರವನ್ನು ಚಿತ್ರಿಸಿತ್ತು....ಕಲ್ಪನೆಗೂ ಮೀರಿದ ಶೋಣಿತ ಶೋಭಾ ಶೈಲಿಯಲ್ಲಿ !

೩೨

... ಅಂದಿಂದಿಗೂ ನಿನಗೆ ಕಾಗದ ಬರೆಯಬೇಕೆಂದು ಎಷ್ಟೆಷ್ಟೋ ಪ್ರಯತ್ನ ಪಟ್ಟೆ. ಆದರೂ ಬರೆಯುವ ಸಾಧನ ದೊರೆಯಲಿಲ್ಲ. ಅಷ್ಟೇ ಅಲ್ಲ, ನಮಗೆ ಬರೆಯಲು ಅವಕಾಶ ಸಿಗುತ್ತಿಲ್ಲ. ಪತ್ರ ವ್ಯವಹಾರವನ್ನು ನಿಷಿದ್ಧಗೊಳಿಸಲಾಗಿದೆ. ಅಂದಮೇಲೆ ಇದುವರೆವಿಗೂ ಬರೆಯಲು ದೊರೆಯದ ಸಾಧನ ಈಗ ಹೇಗೆ ದೊರಕಿತೆಂದು ನೀನು ಕೇಳಿದೆಯಾದರೆ ವಿವರಣೆ ಕೊಡಲು ಎರಡು ಮೂರು ಪುಟಗಳಿಗಾಗುವಷ್ಟು ಸಾಮಗ್ರಿ ದೊರೆಯುತ್ತದೆ. ಆದರೆ ಅದನ್ನೆಲ್ಲ ಬರೆಯುವಷ್ಟು ಸಮಯವಾಗಲೀ ಸಹನೆಯಾಗಲೀ ಈಗ ಇಲ್ಲವೇ ಇಲ್ಲ.

ಇಲ್ಲಿ ನಾನಾ ದೇಶೀಯರು ನಾನಾ 'ಬ್ಯಾರಕ್' ಗಳಲ್ಲಿ ಬಂದಿಗಳಾಗಿದ್ದಾರೆ. ಎಲ್ಲರನ್ನೂ ಅವರವರ ಬ್ಯಾರಕ್‌ಗಳಲ್ಲೇ ಕೂಡಿಟ್ಟಿರುವುದರಿಂದ ಅವರಿಗೂ ನಮಗೂ ಯಾವ ಸಂಪರ್ಕವೂ ಇರುವುದಿಲ್ಲ. ಬ್ಯಾರಕ್‌ಗಳ ಹೊರ ವಲಯದಲ್ಲಿ ತಂತಿಯ ಬೇಲಿಯನ್ನು ಹೆಣೆದು ವಿದ್ಯುಚ್ಛಕ್ತಿ ಹರಿಸಿದ್ದಾರೆ. ಇಲ್ಲಿಂದ ತಪ್ಪಿಸಿಕೊಂಡರೂ ಅಲ್ಲಿ ತಪ್ಪಿಸಿಕೊಳ್ಳುವಂತಿಲ್ಲ. ನಮ್ಮ ಬ್ಯಾರಕ್ಕಿನ ವಿಷಯ ಬರೆಯುವುದೆಂದರೆ ನನ್ನಲ್ಲಿರುವ ಶಬ್ದ ಭಂಡಾರ ಸಾಲದೇನೋ ಎಂಬ ಅನುಮಾನ ಮೂಡುತ್ತದೆ. ದೊಡ್ಡ ವಠಾರ, ಯಾರಿಗೂ ಪ್ರತ್ಯೇಕ ಕೊಠಡಿಗಳಿಲ್ಲ. ಕಾಯಿಲೆ ಬಿದ್ದವರಿಗೆ ಪಕ್ಕದ ಅಂಗಳದಲ್ಲಿ ಒಂದು ಡೇರೆ ಇಳಿಸಿಬಿಟ್ಟರೆ ಮುಗಿಯಿತು. ಸುತ್ತಮುತ್ತ ಸುಭದ್ರವಾದ ಗೋಡೆ, ಎರಡಾಳೆತ್ತರದ ಮೇಲೆ ಕಬ್ಬಿಣದ ಕಿಟಕಿ ಎಂಬಂತಹ ಕಿಂಡಿಗಳಿವೆ. ಅವುಗಳಿಗೆ ಮುಚ್ಚಿ ತೆಗೆಯಬಹುದಾದಂತಹ ಕದಗಳಿವೆ. ಮಳೆಬಂದಾಗ ನೀರು ಒಳತೂರಿ ಬರುತ್ತದೆ. ಚಳಿಯಿಂದ ಹಿಮ ಸುರಿಯುವಾಗ ಮೈ ನಡುಗಿ ನೆತ್ತರು ಹೆಪ್ಪುಗಟ್ಟುತ್ತದೆ. ಬೇಸಿಗೆಯಲ್ಲಿ ಅವುಗಳಿಂದ ಪ್ರಯೋಜನವಿದೆ.

ದಿನಗಳು ಹೇಗೆ ಬರುತ್ತವೋ ಹೇಗೆ ಹೋಗುತ್ತವೋ ದೇವರಿಗೇ ಗೊತ್ತು. ಹಗಲಿಡೀ ದುಡಿಯುವುದೊಂದು ನಮಗೆ ತಿಳಿಯುತ್ತದೆ. ಮೇಲಾಗಿ,

ಒಂದೊಂದು ದಿನ ಕಳೆದಾಗಲೂ ಒಂದೊಂದು ಗಡುವನ್ನು ದಾಟಿದಷ್ಟು ಸಂತಸ ಮೂಡುವುದು. ಆದ್ದರಿಂದ ಹೆಚ್ಚಿನ ವಿವರಣೆ ಅನವಶ್ಯಕ. ಆದರೂ ಕೆಲವು ವಿಚಾರಗಳನ್ನು ಬರೆಯಲು ಅವಕಾಶವೊದಗಿಸಿಕೊಂಡಿರುವುದರಿಂದ ಬರೆಯುವೆ. ಊಟದ ವಿಚಾರ ಕೇಳು, ನಮ್ಮ ದೇಹ ಅನ್ನ ದೇವರನ್ನು ನಿರ್ಲಕ್ಷಿಸುವಂತಿಲ್ಲ. ದೈವಸೃಷ್ಟಿಯಲ್ಲಿ ಅನ್ನರಹಿತ ಪ್ರಾಣ ರೂಪಿಸಲ್ಪಟ್ಟಿದ್ದಿದ್ದರೆ ಮನುಷ್ಯ ಪರಮ ಸುಖಿಯಾಗಿರುತಿದ್ದ. ಭಗವಂತ ಈ ಒಂದು ಗಡುವಿನಲ್ಲೇ ನಮ್ಮನ್ನು ಆದ್ಯಂತವಾಗಿ ಆಳಿಯಬಲ್ಲ. ದಿನಕ್ಕೆರಡು 'ಊಟ' ಎಂಬ ಖಾದ್ಯಗಳು ದೊರೆಯುತ್ತವೆ. ಒಮ್ಮೊಮ್ಮೆ ಒಣಗಿದ ಮೀನು, ಸಮುದ್ರ ಕಪ್ಪೆಗಳು, ಕೆಲವೊಮ್ಮೆ ಸ್ವಲ್ಪ ಅನ್ನ, ಒಣರೊಟ್ಟಿ....ಜೊತೆಗೆ ಒಂದು ಮಣ್ಣಿನ ಬಿಂದಿಗೆ ನೀರು. ಆ ನೀರಿನಿಂದಲೇ ಹೊಟ್ಟೆ ತುಂಬಿಕೊಳ್ಳೋಣ ಎಂಬಷ್ಟು ಆಕರ....ಆದರೆ, ಅದರ ವಿಚಾರವನ್ನೂ ಒಂದಿಷ್ಟು ಬರೆಯುವುದಿದೆ ಕೇಳು, ಕೊಳಕು ತುಂಬಿದ ಆ ಅಶುದ್ಧ ನೀರು; ಕುಡಿಯುವುದಿರಲಿ, ಮುಟ್ಟುವುದಕ್ಕೂ ಅಸಹ್ಯ. ಹಾಗೆಂದು ಬಿಟ್ಟುಬಿಟ್ಟರೆ ಬೇರೆ ಗತಿಯಿಲ್ಲ. ದಿನವೆಲ್ಲ ಬಿಂದಿಗೆಯನ್ನು ಅಲುಗಿಸದೆ ಇಟ್ಟು, ಕೊಳಕುತನದಲ್ಲಿ ಸೇರಿಕೊಂಡು ತಿಳಿನೀರು ಮೇಲೆ ಉಳಿದನಂತರ ಬೊಗ್ಗಿಸಿ ಕೊಳ್ಳಬಹುದು. ಬಾಯಿಗೆ ಸುರಿದುಕೊಳ್ಳುವ ಮುನ್ನ ಅದರಲ್ಲಿನ ರೋಗಾಣುಗಳು ನಮ್ಮನ್ನು ಮುಟ್ಟದಿರಲಿ ಎಂದು ಮೊದಲು ಪ್ರಾರ್ಥಿಸಿಕೊಳ್ಳುತ್ತೇವೆ. ಭಗವಂತ ಇರುವುದು ಹೌದಾಗಿದ್ದರೆ ಖಂಡಿತ ನಮ್ಮ ಮೊರೆ ಮುಟ್ಟಿಯೇ ಮುಟ್ಟುತ್ತದೆ. ನೀನು ನನಗಾಗಿ ಪ್ರಾರ್ಥಿಸುತ್ತಿದ್ದಿ ಎಂಬುದು ನನಗೆ ಗೊತ್ತು. ಆ ಪ್ರಾರ್ಥನೆ ನಮ್ಮನ್ನು ಖಂಡಿತ ದಡ ಸೇರಿಸುತ್ತದೆ. ನೀನು ಯೋಚಿಸಬೇಡ. ನಾನು ಹೇಗಾದರೂ ಬಂದೇತೀರುವೆ. ಈ ವ್ಯವಹಾರ ಎಂದಾದರೂ ಕೊನೆ ಮುಟ್ಟಲಿದೆ. ಅದಕ್ಕಾಗಿ ಚಿಂತನೆ ಬೇಡ. ನಮ್ಮ ಆತ್ಮಶಕ್ತಿ ನಮ್ಮನ್ನು ಕಾಪಾಡುತ್ತದೆ. ದಿನನಿತ್ಯ ರೋಗಿಗಳಿಗಾಗಿ ತರುವ ನೀರೌಷಧವನ್ನು ನಾವೂ ಆಗಾಗ ತೆಗೆದು ಕೊಳ್ಳುತ್ತೇವೆ....ಸಕಲ ರೋಗಾಣುಗಳ ಅಲ್ಲಿಂದಲ್ಲೇ ಲಯ ಹೊಂದಲಿ ಎಂದು, ಅದು ರೋಗ ಹರಿಸುತ್ತದೋ ಬರಿಸುತ್ತದೋ ಕಾದು ನೋಡಬೇಕು.

ಪೂವಿ....

ಕೊಡಗಿನ ತಣ್ಣನೆಯ ವಾತಾವರಣದಲ್ಲಿ ಸ್ವಚ್ಛಂದವಾಗಿ ಬೆಳೆದು, ಚಿಗರಿಯಂತೆ ಜಿಗಿದಾಡಿ ಹಸುರುಂಡು ಹಸುರ್ಗಟ್ಟಿದ ಈ ಶರೀರಕ್ಕೆ ಗಿಡಮರಗಳನ್ನು ಕಂಡೊಡನೆ ಒಂದೆರಡು ಘಳಿಗೆ ನಿಂತು ವಿಶ್ರಮಿಸಿಕೊಳ್ಳೋಣ ವೆನಿಸುತ್ತದೆ. ಈ ವಿಶಾಲವಾದ ಪ್ರಪಂಚದಲ್ಲಿ ಎಷ್ಟೊಂದು ವೈವಿಧ್ಯಮಯ ಜೀವನವಿದೆಯೋ ಅದನ್ನು ಅನುಭವಿಸದ ಹೊರತು ಅರಿತುಕೊಳ್ಳಲಾಗುವು ದಿಲ್ಲ. ಅರಿತುಕೊಳ್ಳದೆ ವಿಶಾಲವಾದ ಭಾವಕೋಶದಲ್ಲಿ ವಿಹರಿಸಲಾರೆವು. ಇಲ್ಲಿ ಕೆಲವೊಮ್ಮೆ ವೃಕ್ಷವಾಟಿಕೆಯ ಮೇಲೆ ಸಾಂಧ್ಯರವಿಯ ಅರುಣ ಕಿರಣ ಗಳ ಹೊನ್ನಿನ ಜಾಲ ಹರಿದಾಗ ಎಷ್ಟೋಬಾರಿ ಮೈಮರೆತು ಕೊಡಗಿನಲ್ಲಿರು ವಂತೆ ಭಾವಿಸಿಕೊಳ್ಳುವೆ.. ಆಗ ಅನುಭವಿಸುವ ಅನಿರ್ವಚನೀಯ ಆನಂದ ತನುಮನಗಳನ್ನು ತುಂಬಿಬಿಡುವುದು. ಭಾವನಾಲೋಕದಲ್ಲಿ ಒಂದೆರಡು ಆನಂದಬಾಷ್ಪಗಳು ಚೆಲ್ಲಿದುದು ಸಹ ಗಮನಕ್ಕೆ ಬರುವುದಿಲ್ಲ. ಅನಂತರ... ಅನಂತರ ಹೃದಯ ಸಂತಸದ ಊಟೆಯಾಗಿ ಮಾನಸ ಸರೋವರವು ಉಕ್ಕೇರುವುದು

ಒಂದು ಕಾಲದಲ್ಲಿ ಈ ಜೀವನ ಅನಿಶ್ಚಿತ ದುಃಖಮಯ ಎಂದು ಯಾರಾದರೂ ಹೇಳಿದ್ದರೆ, ಬಹುಶಃ ನಾನು ನಂಬುತ್ತಲೇ ಇರಲಿಲ್ಲವೇನೋ. ನಾವು ಕೈಕೊಂಡ ದೀಕ್ಷೆ–ಧರ್ಮ–ಕರ್ತವ್ಯ–ನಮ್ಮನ್ನು ಯಾವ ರೀತಿ ದಿಟ್ಟ ಹಾದಿಯಲ್ಲಿ ನಡೆಸುತ್ತೋ ಅದು ಗುರಿ ಮುಟ್ಟಿಸಿಯೇ ತೀರುತ್ತೆ ಎಂಬ ದೃಢ ಭಾವನೆ ಈಗಲೂ ಇಲ್ಲ ಎಂದೇನಿಲ್ಲ....ಈ ದೇಹದಲ್ಲಿ ನೆತ್ತರಿನ ಕೊನೆಯ ಬಿಂದು ಇರುವವರೆಗೂ ಅದು ಇದ್ದೇ ತೀರುವುದು. ಈಗೀಗ ನನ್ನ ಇಂಗಿತ ದಲ್ಲಿ, ಆಲೋಚನೆಗಳಲ್ಲಿ ಒಂದು ವಿಧವಾದ ಮಾರ್ಪಾಡಾಗುತ್ತಿದೆ....ಅದ ನ್ನೆಲ್ಲಾ ಮೆಲುಕು ಹಾಕುತಿದ್ದರೆ ತಲೆ ಹಗುರವಾಗುವುದು. ಹೊಸರೀತಿಯ ಆಸೆಯೊಂದು, ಕೋರಿಕೆಯೊಂದು ತೀವ್ರತರವಾಗಿ ಮನದಲ್ಲಿ ಅರಳುತ್ತಿದೆ. ಬಹುಶಃ ಈ ಜೇಲಿನ ಜೀವನವೇ ಅದಕ್ಕೆ ಪುಷ್ಟಿ ನೀಡಿರಬಹುದು....ಯಾವು ದಾದರೂ ದೂರ ತೀರದಲ್ಲಿ-ಅತ್ಯಂತ ಪ್ರಶಾಂತ ವಾತಾವರಣದಲ್ಲಿ ನೆಲೆಸಿ ಶಾಂತಿ ಎಂದರೆ ಏನೆಂಬುದನ್ನು ಅರಿತುಕೊಳ್ಳಬೇಕು....ನಿಜಕ್ಕೂ ಈ ಮಾನವತೆಗೆ ಅರ್ಥವೇನು? ಇದರ ಚಾರಿತ್ರ್ಯವೇನು? ಇದನ್ನು ಯಾವ ರೀತಿಯಲ್ಲಿ ಉದ್ಧರಿಸ ಬೇಕು? ಎಂಬುದನ್ನು ಕೂಲಂಕುಷವಾಗಿ ಅರಿತುಕೊಂಡು ಸ್ವತಃ ಕಾರ್ಯ

ರೂಪಕ್ಕೆ ತರಬೇಕು ಎಂಬುದೊಂದಾದರೆ ಈ ಗುಲಾಮಗಿರಿಯಲ್ಲಿ ಏಕೆ ಸಿಲುಕಿದೆ? ಈ ಜೀವನ ಏಕೆ ಹೀಗೆ ಏರುಪೇರಾಗುತ್ತಿದೆ ಎಂಬುದು ಇನ್ನೊಂದು. ಈ ಬಗೆಯ ಪ್ರಶ್ನೆಗಳನ್ನು ಅತ್ಯಂತ ಸಹನೆಯಿಂದ ಪರಾಮರ್ಶಿಸುವಷ್ಟು ಸಹನೆ ಇಲ್ಲ ಎಂದೇನಿಲ್ಲ. ಪ್ರಶ್ನೆಗಿಂತ ಉತ್ತರ ನೀಡುವ ಬಾಧ್ಯತೆಯಿಂದ ತಪ್ಪಿಸಿಕೊಳ್ಳಲೂ ಆಗುವುದಿಲ್ಲ....ಒಳ ಗುಡಾರದಲ್ಲಿ ಕುಳಿತು ಕಣ್ಣೀರು ಕರೆಯುವುದಕ್ಕಿಂತ ಉತ್ತರವನ್ನರಸುವುದು ಲೇಸು.

ಇಷ್ಟೆಲ್ಲವನ್ನೂ ಬರೆಯಬೇಕಾದರೆ ಎಷ್ಟು ದಿನ ತೆಗೆದುಕೊಂಡಿದ್ದೇನೋ, ಬಿಡುವು ದೊರೆತಾಗ, ಯಾರೂ ಕಾಣದಂತೆ ಬರೆಯುವುದೆಂದರೆ ನೀನೇ ಊಹಿಸಿ ನೋಡು, ಈ ಮಾಸಲು ಕಾಗದ ಮತ್ತು ಅದರ ಮಡಿಕೆಗಳು ನಿನಗೆ ಸಾಕ್ಷ್ಯ ಕೊಡುತ್ತವೆ....ಅದಕ್ಕಿಂತ ಹೆಚ್ಚಿಗೆ ನಾನು ವಿವರಿಸಬೇಕಾಗಿಲ್ಲ.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಿದೆ. ಜನಕೋಟಿಯಲ್ಲಿ ಅತೀವ ಉತ್ಸಾಹ ಮೂಡಿರಬಹುದು....ಹೆಂಗಸರು ಮಕ್ಕಳು ಗಗನವಿಹಾರಿಗಳಾಗಿರಬಹುದು....ಆಡಳಿತ ವಿಚಾರದಲ್ಲಿ ತೀವ್ರಬದಲಾವಣೆಗಳು ಆಗುತ್ತಿರಬಹುದು, ಆದರೆ, ಹಿಂದೂ-ಮುಸ್ಲಿಂ ಮಾರಾಮಾರಿ ಎಂತಹ ಅನ್ಯಾಯ ? ಕಾಲಾನುಕಾಲಕ್ಕೂ ಒಂದಾಗಿ ಬಾಳಿ, ಒಂದಾಗಿ ದುಡಿದು ಪರಸ್ಪರ ಕಡಿದಾಡುವುದು ಎಂತಹ ಅವಿವೇಕ ? ಭಾರತಭೂಮಿ ಇನ್ನೊಂದು ರೀತಿಯಲ್ಲಿ ಕೆನ್ನೀರಿನಿಂದ ಇಷ್ಟು ಬೇಗನೆ ತೊಯ್ಯುವುದೆಂದು ಯಾರು ಕಂಡಿದ್ದರು ? ತುಂಬ ದುರದೃಷ್ಟಕರ....ಅದರಲ್ಲೂ ರಾಷ್ಟ್ರಪಿತ ಗಾಂಧೀಜಿಯವರ ಜೀವಿತದಲ್ಲಿಯೇ ಇಂತಹ ಮಾರಾಮಾರಿ...ಅವರಿಗೆ ಎಷ್ಟು ನೋವಾಗಿರಬೇಡ...? ಭಗವಂತ ಅವರಿಗೆ ದುಃಖ ಭರಿಸುವ ಶಕ್ತಿಯನ್ನು ಕೊಡಲಿ. ಅವರ ನೇತೃತ್ವದಲ್ಲಿ ನಮ್ಮ ದೇಶ ಸಮೃದ್ಧಿಗೊಳ್ಳತಕ್ಕದ್ದಿದೆ.

ಅಂತೂ, ಸಾರ್ವಜನಿಕ ಜೀವನ ಈಗೀಗ ಹತೋಟಿಗೆ ಬಂದು ಶಾಂತ ವಾತಾವರಣ ನೆಲೆಸಿತು ಎಂದುಕೊಳ್ಳುತ್ತಿರುವಾಗಲೇ ಬಂದ ಸುದ್ದಿಯಾದರೂ ಎಂತಾದ್ದು ? ಹಾ...ಹೃದಯವಿದ್ರಾವಕ....ಕೊನೆಗೂ ಗಾಂಧೀಜಿಯು ಪರ ಆಹುತಿ ! ಮೊದಲೇ ಅವರಿಗೆ ಶಾಂತಿ ಇರಲಿಲ್ಲವೇನೊ....ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಅವರನ್ನು ಕೊಲೆ ಮಾಡಿದ್ದು ಎಂತಹ ಪಾಪ ?

ಇನ್ನೆಂತಹ ಅವಿವೇಕ ? ದೇಶೀಯನೇ ಈ ಕ್ರಮ ಕೈಕೊಂಡಿರಬೇಕಾದರೆ ಹೇಳುವುದೇನು ? ನಾವು ಏನೇನು ಕನಸು ಕಂಡಿದ್ದೆವೋ ಅದೆಲ್ಲಾ ಬುಡ ಮೇಲಾಗುವುದೆಂದು ಯಾರು ತಿಳಿದಿದ್ದರು ? ....ಯೋಚಿಸಿದಷ್ಟೂ ಆಲೋಚನಾಜಗತ್ತು ಚಿಂತೆಯಿಂದ ತುಂಬಿ ತನು ಉಷ್ಣೋಧಿಕ ಜ್ವಾಲೆಯಲ್ಲಿ ಬೆಂದು ಹೋಗುತ್ತದೆ. ನಮ್ಮಂತಹವರ ಕತೆಯೇ ಹೀಗಿರಬೇಕಾದರೆ ಮಹಾತ್ಮಾಜಿಯವರ ಪುಣ್ಯಜೀವ ಎಷ್ಟು ನೊಂದಿರಬೇಡ....? ಜಗದೇಕ ವಂದ್ಯನಿಗೆ ನಮ್ಮವರು ನಂಜೂಡಿಸಿದುದೇ ಪರಮ ಸಂಕಟ....ಅವರಿಗೆ ಸ್ವರ್ಗದಲ್ಲಾದರೂ ಶಾಂತಿ ಸಿಕ್ಕಿದೆಯೋ ಇಲ್ಲವೋ ಅದೂ ಅನುಮಾನ. ದೇಶಕ್ಕಾಗಿ–ದಲಿತ ಜನತೆಗಾಗಿ ತನುಮನಗಳನ್ನು ತೇಯ್ದ ವ್ಯಕ್ತಿಗೆ ಆತ್ಮಶಾಂತಿಗೂ ಸಂಚಕಾರ ತಂದುದು ಎಂತಹ ದೌರ್ಭಾಗ್ಯ ಪೂವಿ...? ದುರ್ವಿಧಿ ಎಲ್ಲಿ ಹೊಂಚು ಹಾಕುತಿತ್ತೋ ? ಭಾರತಿ ಇಂತಹ ಪುತ್ರ ಶೋಕವನ್ನು ಹೊಂದಿಯಾಳೆಂದು ಕನಸಿನಲ್ಲಿಯೂ ಯೋಚಿಸಿರಲಿಲ್ಲ...ಭಗವಂತ ಅವರ ಆತ್ಮಕ್ಕೆ ಶಾಂತಿಯನ್ನೀಡಲಿ.

ಇನ್ನಾದರೂ ನಿಗಮಗೋಚರ ಎಲ್ಲರಿಗೂ ಸನ್ಮತಿಯನ್ನೀಯಲಿ.

ಈ ಜೇಲಿನಲ್ಲಿ ಕೊಳೆಯುತ್ತ, ಸ್ವದೇಶದ ಪ್ರಗತಿಯ ಬಗ್ಗೆ, ಆಡಳಿತ ವಿಚಾರಗಳ ಬಗ್ಗೆ, ಸ್ವಾತಂತ್ರ್ಯ ಭೋಗದ ಬಗ್ಗೆ ತಿಳಿದುಕೊಳ್ಳಲು ತನುಮನಗಳು ಎಷ್ಟು ಕಾತರವಾಗಿವೆ ಎಂಬುದನ್ನು ನೀನೇ ಯೋಚಿಸಿನೋಡು. ಆದರೆ ತಿಳಿದುಕೊಳ್ಳುವುದೇ ಕಷ್ಟ. ಯಾರೂ ಇಲ್ಲಿಗೆ ಕಾಗದ ಬರೆಯುವಂತಿಲ್ಲ. ಬರೆದರೂ ನಮಗೆ ತಲುಪಿಸುವುದಿಲ್ಲ. ತಿಮ್ಮಯ್ಯ ಬರೆದ ಕಾಗದ ಅತ್ಯಂತ ಗೋಪ್ಯವಾಗಿ ತೋಟಿಗಳ ಮೂಲಕ ಎಂದಾದರೊಮ್ಮೆ ಬರುತ್ತದೆ. ನೀನು ತಿಮ್ಮಯ್ಯನಿಗೆ ಬರೆದರೆ ಅವನ ಮೂಲಕ ಮನೆಯ ಸ್ಥಿತಿಗತಿಯನ್ನು ತಿಳಿದುಕೊಳ್ಳಬಹುದು. ಅವನಿಂದ ಪತ್ರ ಬಂದಾಗಲೆಲ್ಲ ನಿಮ್ಮ ಸುದ್ದಿಗಾಗಿ ಜೀವ ಕಾತರಿಸುತ್ತಿರುತ್ತದೆ.

ಅನೇಕಾನೇಕ ವಿಚಾರಗಳನ್ನು ಒಂದೇ ಬಾರಿಗೆ ಜೀರ್ಣಿಸಿಕೊಳ್ಳುತಿದ್ದ ತಲೆ ಈಗ ಮರವಟ್ಟಂತಾಗಿದೆ. ಯೋಚನಾಶಕ್ತಿ ಕುಂಠಿತವಾಗುತ್ತಿದೆಯೇನೋ ಎಂಬಷ್ಟು ಅನುಮಾನ ಮೂಡುತ್ತಿದೆ....ಇನ್ನೂ ಎಷ್ಟು ಕಾಲ ಹೀಗೆ ಕಳೆಯಬೇಕೋ ಅರ್ಥವಾಗುತ್ತಿಲ್ಲ....ಅಂತೂ ಜೀವನ ಮಾರ್ಗಯೋಗದಲ್ಲಿ

ಇದೊಂದು ಅತ್ಯಂತ ದುರದೃಷ್ಟಕರ ಘಟಕ. ಏನೆಲ್ಲಾ ಆಗಬೇಕೋ ಅದು ಆಗಿಯೇ ತೀರಬೇಕು. ಆಗಲಿ, ಏನೇನು ಆಗುತ್ತೋ ನೋಡೋಣ. ನಮ್ಮ ಆತ್ಮಬಲವೇ ಬಲ ; ಮಾನಸಿಕ ಸ್ಫೂರ್ತಿಯೇ ಸ್ಫೂರ್ತಿ.

....ಜಗತ್ತಿನ ಹಾಸ್ಯರೋದನಗಳನ್ನು ಸುಖದುಃಖಗಳನ್ನು ಪದ್ಮ ಪತ್ರದ ಸಲಿಲ ಬಿಂದುವಿನಂತೆ ಪ್ರಭಾವ ಶೂನ್ಯತೆಯಿಂದಯಾವ ಹೃದಯ ಭರಿಸುವುದೋ ಅದು ಎಂದೂ ಜಲಾಗಮನವನ್ನು ಬಯಸಿ ವರುಣನನ್ನು ಅಂಗಲಾಚದು ... ಅಂದರೆ ನೀನು ಒಪ್ಪಿಕೊಳ್ಳುವೆಯಷ್ಟೇ ? ಪೂವೀ....ದಿನ ನಿತ್ಯದ ಬವಣೆಗಳಿಗೆ ಧೃತಿಗೆಟ್ಟು ಘನನಿಬಿಡ ನೈರಾಶ್ಯಾಟವಿಯಲ್ಲಿ ಕಂಗೆಟ್ಟರೆ ದೊರಕುವುದು ಶೋಕವ್ಯಾಕುಲವೊಂದೇ ಎಂಬುದನ್ನೆಂದೂ ಮರೆಯಬಾರದು, ಏನೇ ಬರಲಿ, ಮನಸ್ಸಿಗೆ ಸುಖದುಃಖವನ್ನು ಅಂಟಿಸಿಕೊಳ್ಳಲೇಬೇಡ....ಈ ದುರ್ದಿನಗಳು ಬಹಳ ಕಾಲ ಇರುವುದಿಲ್ಲ. ಎಂದಿದ್ದರೂ ನಮ್ಮ ಹೆಜ್ಜೆ ಮಂಗಳದೆಡೆಗೆ ಸರಿಯಲೇಬೇಕು. ದೇವರಿದ್ದಾನೆ; ಯೋಚಿಸಬೇಡ ಪೂವೀ....

ಕಾಗದ ಯಾವಾಗ ಬಂತೋ....ಎಷ್ಟು ಬಾರಿ ಓದಿಕೊಂಡಳೋ ಎಂಬುದರ ಪರಿವೆಯೇ ಇರಲಿಲ್ಲ. ಪೂವಿ ಸ್ವಲ್ಪ ಹೊತ್ತು ಮೈ ಮರೆತು ಕುಳಿತುಕೊಂಡಳು. ಬರಿದಾದ ಹೃದಯ ದೇಗುಲ ಸುಖದುಃಖಗಳ ಪಾಲಾಗಿತ್ತು. ಕಣ್ಣುಗಳಲ್ಲಿ ಕೆಲವಾರು ದಪ್ಪದಪ್ಪ ಅಶ್ರುಬಿಂದುಗಳು ತಟಪಟನೆ ಉದುರಿ ವಕ್ಷಪ್ರದೇಶದಮೇಲೆ ವರ್ತುಲಾಕಾರದ ಅಚ್ಚೊತ್ತಿ ಪರಿನಿರ್ವಾಣ ಹೊಂದಿದುವು. ಚಿತ್ತ ಉತ್‌ಕ್ಷಿಪ್ತವಾಗಿತ್ತು. ಅಲುಗದೆ ಮಂತ್ರಮುಗ್ಧಳಂತೆ ಕುಳಿತಳು ಪೂವಿ.

ತಮ್ಮ ತಂಗಿಯರೊಂದಿಗೆ ಚಿಟ್ಟೆ ಚೆಂಡಾಟದಲ್ಲಿ ನಿಮಗ್ನನಾಗಿದ್ದ; ಮಕ್ಕಳ ಮೊಲು ಲಲ್ಲೆ ಕಿವಿಯ ಮೇಲೆ ಬೀಳುತಿತ್ತು.

ಆದರೆ, ಅದನ್ನು ಭರಿಸುವಷ್ಟು ಚಿತ್ತಸ್ವಾಸ್ಥ್ಯವಿರಲಿಲ್ಲ. ಮಂದ ಮಾರುತನ ಮೃದುಸ್ಪರ್ಶ ತನುಮನಗಳಿಗೆ ಪರಿಪುಷ್ಟಿ ನೀಡಿ ಕಾಯಕಲ್ಪ ಗೊಳಿಸುವಂತಿತ್ತು. ಆದರೂ, ಎದೆಯ ಸಂತಾಪ ಅಡಗಲಿಲ್ಲ; ಮನದ ಬೇಗೆ ಆರಲಿಲ್ಲ.

ಈಚೆಗೆ ಪೊನ್ನಮ್ಮನ ಆರೋಗ್ಯ ಕೆಟ್ಟುದುದರಿಂದ ನೋಡಿಕೊಂಡು ಬರಲು ಹೋಗಿದ್ದ ಮಾದಃ ಅಲ್ಲಿಂದ ಹಿಂದಿರುಗುವಾಗ ಎರಡು ವರ್ಷದ

ಹಸುಳೆ ಗಂಗಮ್ಮನನ್ನು ಕರೆತಂದಿದ್ದ. ಅವಳು ಚೇತರಿಸಿಕೊಳ್ಳುವವರೆಗೂ ಕಾದಿದ್ದು ಹಿಂದಿರುಗಿದ ಮೇಲೆ ಏಳೆಂಟು ದಿನಗಳೊಳಗಾಗಿ ಪುನಃ ರೋಗ ಉಲ್ಬಣಿಸಿರುವುದಾಗಿ ಸುದ್ದಿ ಬಂದಿತು. ಮಗುವನ್ನು ಇಲ್ಲೇ ಬಿಟ್ಟು ಮಾದು ಮತ್ತೆ ಧಾವಿಸಿದ. ಹೋಗಿ ಒಂದೆರಡು ದಿನಗಳು ಕಳೆದ ನಂತರ ಅವಳ ದೇಹಸ್ಥಿತಿ ಸುಧಾರಿಸಿಕೊಳ್ಳುವ ಸೂಚನೆಗಳಿವೆಯೆಂದು ಕಾಗದ ಬಂದಿತು. ಆದರೂ, ದಿನವೂ ಅದೇ ಯೋಚನೆ...ಮಾತಿಗೆ ಅದೇ ವಿಷಯ...ದುಃಖಕ್ಕೆ ಅದೇ ಆಗರ....

ಈಗ ಮೂವರು ಮಕ್ಕಳೂ ಮನೆಯ ತುಂಬ ಗದ್ದಲವೆಬ್ಬಿಸುತ್ತಾರೆ. ಆಟ ಪಾಟ ಚಿನ್ನಾಟಗಳಿಂದ ಮನೆ ಕಲಕಲಮಯವಾಗಿರುತ್ತದೆ. ಮನಸ್ಸು ಒಮ್ಮೆ ನೋವಿನ ಕತ್ತರಿಯಲ್ಲಿ ಸಿಕ್ಕಿಕೊಂಡರೂ ಇನ್ನೊಮ್ಮೆ ಚೇತನಗೊಳ್ಳು ವಷ್ಟು ರಂಜನೆ; ಮಾಡಿದಷ್ಟೂ ಬೆಳೆಯುವ ಕೆಲಸ.

ಏತನ್ಮಧ್ಯೆ,

ಪೊನ್ನಮ್ಮನ ಸ್ಥಿತಿ ಪುನಃ ಕೆಟ್ಟಿದೆಯಾಗಿ ಹಠಾತ್ತನೆ ಸುದ್ದಿ ಬಂದಿತು.

ವಿಧಿ ಕಣ್ಣಿಡದ ವಸ್ತುಗಳೇ ಇಲ್ಲವೇನೋ ಈ ಜಗತ್ತಿನಲ್ಲಿ ?

ಎಷ್ಟೇ ಆಸ್ಥೆ ವಹಿಸಿದರೂ ದಿನ ದಿನಕ್ಕೂ ಸ್ಥಿತಿ ಕೆಡುತ್ತಲೇ ಇತ್ತು. ಕಾವೇರಿ ಪೂವಿಯರು ಆಕೆಯ ಕ್ಷೇಮವನ್ನು ಬಯಸಿ ಮಾದೇವನ ಗುಡಿ ಯಲ್ಲಿ ನಂದಾದೀಪ ಕುಡಿಕಟ್ಟದಂತೆ ಉರಿಸಿದರು. ಪೂಜೆ ಪ್ರಾರ್ಥನಾದಿಗಳ ಆರ್ತಮೊರೆ ಗಂಟಲು ಕಟ್ಟಿಸುತಿತ್ತು. ವಿಧಿಯ ಕರಾಳ ಖಡ್ಗದಲುಗಿನ ಮೇಲೆ ಕ್ಷಣಕ್ಷಣಗಳು ಹರಿದಾಡುವಾಗ ನೈರಾಶ್ಯಪೂರ್ಣಭಾವ ಬೆಟ್ಟದಂತೆ ಬೆಳೆದು ಜೀವ ತಲ್ಲಣಿಸುತಿತ್ತು. ಕಣ್ಣುಗಳ ಕಟ್ಟೆಯೊಡೆದು ಕೋಡಿ ಹರಿಯುತಿತ್ತು.

ಅಂತರಂಗದಲ್ಲಿ ಬೀಸುವ ಪ್ರಚಂಡ ಬಿರುಗಾಳಿಗೆ ಸಿಕ್ಕಿ ಛಿದ್ರ ಹೃದಯ್ಯ ನಾಗಿ ನಿಶ್ಚೇಷ್ಟಿತನಂತೆ ಮಡದಿಯ ಬಳಿ ತದೇಕಭಾವದಿಂದ ಕುಳಿತ ಮಾದು. ದುಃಖಾಗ್ನಿಯಲ್ಲಿ ರೋಮರೋಮವೂ ಸುಡುತಿತ್ತು. ಸೀರಿಸೀಕಲಾದ ದೇಹ ಒಣಕಡ್ಡಿಯಂತೆ ಹೊದ್ದಿಕೆಯಡಿ ಕಷ್ಟದಿಂದ ಉಸಿರಾಡುವಾಗ ಮೋಹನೀಯ ಮುಖಮಂಡಲ ರಾಹುಗ್ರಸ್ತ ಚಂದ್ರನಂತೆ ಕಳಾಹೀನವಾಗಿತ್ತು. ಅಸಹ ನೀಯ ರೋಗವಿಶೇಷ ...ಅಂತರ್ನಿಹಿತ ದುಃಖಧಾರೆ....ಸಾವು ಬದುಕಿನ ನಿಶ್ಚಲ ಹೋರಾಟ....ಇನ್ನು ತೈಲಹೀನ ಜ್ಯೋತಿ ನಂದುವುದೊಂದು ಬಾಕಿ.

ಜೀವನ ಎಂದೂ ಪೂರ್ಣತೆಯನ್ನು ಪ್ರಾಸಾದಿಸದೇನೋ....

ಆದರೆ ...ಬದುಕು ಬಯಸುವುದು ಕಿಂಚಿತ್ ಶಾಂತಿ ?

....ಏನೋ ಒಂದು ಬಗೆಯ ಚೂರ್ಣವಿಚೂರ್ಣ ಭಾವ...ಏನೋ ಒಂದು ರೀತಿಯ ಭಿನ್ನವಿಭಿನ್ನ ಶಕ್ತಿ....ಮತ್ತೇನೋ ಒಂದು ತರದ ತುಮುಲ ಯುದ್ಧ....ಅನುಭವಿಸಲಾಗದ ಪ್ರಾಣಾಂತಕ ಹಿಂಸೆ....ತಾಳಲಾಗದ ನರಳು ವಿಕೆ....ದುರ್ಭರ ದಿನಗಳು ಹೇಗೆ ಬಂದುವೋ ಹಾಗೆಯೇ ಕಳೆದುವು, ಕಣ್ಣೀರಿನ ಕಾಲುವೆಯನ್ನು ವಿಚಿತ್ರ ಲೋಕಾಲಯದಲ್ಲಿ ಸಾಕ್ಷಿಯಾಗಿಟ್ಟು.

ಶುದ್ಧ ವೈಶಾಖ ಪೂರ್ಣಿಮಾ !

ಶಾಂತ ಸುಂದರ ಬೆಳದಿಂಗಳ ಮಂಗಳ ಧಾರೆ !

....ಆದರೆ__ಆದರೆ....ಆದರೆ ಜೀವನಾಟವಿ ಗಾಢಾಂಧಕಾರದಿಂದ ತುಂಬಿ ಹೋಗಿದೆ. ಹೊತ್ತಿಸುವೆನೆಂದರೂ ಬತ್ತಿ ಉರಿಯದು. ಕೆಡಹುವೆನೆಂದರೂ ಕುಡಿ ಅಳಿಯದು. ಕಿಂಕರ್ತವ್ಯತೆ ತುಂಬಿದ ಮನಕ್ಕೆ ಪ್ರಕಂಪಿತ ಸ್ಮಶಾನ ತುಲ್ಯ ವಾತಾವರಣದಲ್ಲಿ ಏನೂ ಹೊಳೆಯುತ್ತಿಲ್ಲ. ಮನಃಪ್ರಾಣಗಳ ಭಾವ ಧಾರೆ ಮುಖಮುದ್ರೆಯಲ್ಲಿ ತಟಿಶಟನೆ ತೊಟ್ಟಿಕ್ಕುತಿತ್ತು—ಸಹನೆ—ವಿವೇಕ—ಪರಿಜ್ಞಾನಗಳನ್ನು ಬದಿಗೊತ್ತಿ.

ಸಾಂಧ್ಯ ಮೇಘಮಂಡಲಗಳಲ್ಲಿ ಏನೋ ಒಂದು ಬಗೆಯ ಅಲಸಿಕೆ. ಪೂರ್ಣಿಮಾ ಚಂದ್ರಮ ಮೋಡಗಳ ಮಾಲೆಯಲ್ಲಿ ಅಡಗಿದ್ದಾನೆ. ಸುನೀಲ ನಭೋಮಂಡಲ ಶುಭ್ರವಾಗಿದ್ದರೂ ಶ್ರೀಹೀನತೆ ವ್ಯಾಪಿಸುತಿತ್ತು.

ಪೊನ್ನಮ್ಮ ಮಲಗಿದ್ದಾಳೆ. ನಯನ ಪಾತ್ರದಲ್ಲಿ ಅದ್ಭುತ ನಿಶ್ಚಲತೆ ನೆಲಸಿತ್ತು. ರಕ್ತರಹಿತವಾದ ಶರೀರ ಬಿಳಿಚಿಕೊಂಡಿತ್ತು. ದೀರ್ಘ ಸಂಚಿತ ಮನೋವೇದನೆ ದೂರದೂರವಾಗಿ ಮುಖದ ಮೇಲೆ ನಿರ್ಮಲಭಾವಧಾರೆ ಸಹಜ ಅನುಭಾವ ತರಂಗಗಳಿಗೆ ತಾಕಲಾಡುತ್ತ ಸಮಾಧಿಸ್ಥಿತಿಯನ್ನು ಅನುಭೂತಗೊಳಿಸುವಂತೆ ಗೋಚರಿಸುತಿತ್ತು. ಉಸಿರು ಆಗಾಗ ಸಿಕ್ಕಿಕೊಳ್ಳುವಂತೆ ತಡೆ ತಡೆದು ಹರಿದಾಡುತಿತ್ತು. ಮಾದು ತಲೆಯ ಮೇಲೆ ಕೈ ಹೊತ್ತು ಕುಳಿತಿದ್ದ. ಮನಸ್ತೃಪ್ತಿಯಿಂದ ಊಟಮಾಡಿ ಎಷ್ಟು ದಿನಗಳಾದುವೋ.... ನಿದ್ದೆಯಿಲ್ಲದೆ ಕಳೆದು ಎಷ್ಟು ಕಾಲವೋ....

ತನ್ನವರನ್ನು ಅತ್ಯಂತ ದುಃಖಾಂಬುಧಿಯಲ್ಲಿ ಮುಳುಗಿಸಿ ನಿಶ್ಚಲವಾಗಿ ಮಲಗಿದ್ದಳಾತರುಣಿ. ಅರೆಬರೆ ಜ್ಞಾನ ಅಥವಾ ನಿದ್ದೆಯ ಮಂಪರ ದೇಹದಾದ್ಯಂತ ವ್ಯಾಪಿಸಿಬಿಟ್ಟಿತ್ತು. ನಯನಗಳು ನಿಶ್ಚಲವಾಗಿವೆ. ಜೀವನಾಡಿ ಮೆಲ್ಲಗೆ ಮಿಡಿಯುತ್ತಿದೆ. ಸುತ್ತಮುತ್ತ ಬಂಧು ಜನ ನೆರೆದುಬಿಟ್ಟಿದ್ದಾರೆ. ಪಕ್ಕದ ಕೊಠಡಿಯಲ್ಲಿ ತಿಂಗಳ ಹಸುಗೂಸು ಪರಕೀಯರ ಆರೈಕೆಯಲ್ಲಿ ನಿದ್ದೆಗೈದಿತ್ತು–ದುಃಖ ಪರಿತಾಪಗಳಿಂದ ದೂರದೂರವಾಗಿ.

ಭೀಷಣ ರಾತ್ರಿಯುರುಳಿ ಮೂಡಣದಲ್ಲಿ ಮುಂಬೆಳಕು ಮೂಡಿತು.

ಹಕ್ಕಿಗಳು ಚಲಿಪಿಲಿಗುಟ್ಟಿದುವು.

ಪೊನ್ನಮ್ಮ ಕಣ್ತೆರೆದಳು. ಅವು ಯಾರಿಗಾಗಿಯೋ ತಡುಕುತ್ತಿವೆ ಎಂಬುದನ್ನರಿತು ಮಾದು ಕರೆದ "ಪೊನ್ನೂ... ಪೊನ್ನೂ...."

ಒಡನೆ ಸುತ್ತಮುತ್ತ ಅನೇಕ ಧ್ವನಿಗಳು ಮೊಳಗಿದುವು "ಪೊನ್ನೂ...." ಧ್ವನಿ ಅತ್ಯಂತ ಸಂಕಟಪೂರಿತವಾಗಿತ್ತು. ಕಣ್ಣುಗಳು ಬಳ ಬಳ ಕಂಬನಿಗರೆದುವು. ಅವಳು ಬಲು ಕಷ್ಟದಿಂದ ಒಂದು ಮಾತು ಹೊರ ಹಾಕಿದಳು,

"ಮಕ್ಕಳನ್ನು ಬಿಡಬೇಡಿ."

ಅದೇ ಸಮಯದಲ್ಲಿ ಭಾಗಂಡದಿಂದ ಧಾವಿಸಿ ಬಂದ ಕಾವೇರಿ ಪೂವಿಯರು ಮಕ್ಕಳೊಂದಿಗೆ ಹಾಸಿಗೆಯ ಬಳಿಗೆ ಬಂದರು. ಆ ಮುಹೂರ್ತದಲ್ಲಿ ಆಕೆಯ ಮುಖದಮೇಲೆ ಹರಿದಾಡುತಿದ್ದ ಆತ್ಮಶಾಂತಿ ನೋಡುವವರಿಗೆ ಇನ್ನು ಕಾಯಿಲೆ ಅರುಗಾದೀತೇನೋ ಎಂಬ ಆಶಾಭಾವನೆ ಮೂಡಿಸುವಂತಿತ್ತು. ಜ್ಯೋತಿ ಆರುವ ಮುನ್ನ ಉಜ್ವಲವಾಗುವುದೆಂಬುದನ್ನು ಯಾರೂ ಕಂಡುಕೊಳ್ಳಲಿಲ್ಲ. ಅದೇ ನೇರಕ್ಕೆ ಜನ್ಮಜನ್ಮಾಂತರಗಳನ್ನು ವಿನೂತನ ಅಭಿನವರಸದಲ್ಲದ್ದಿ ಪ್ಲಾವಿತಗೊಳಿಸಲು ಇನ್ನೊಂದು ಅನನುಭೂತ ಜಗತ್ತಿಗೆ ಪಯಣಿಸಲು ಸಿದ್ಧವಾಗುತಿತ್ತು ಶುದ್ಧಾತ್ಮ.

೩೩

ಧರ್ಮ-ಭಕ್ತಿ, ಜ್ಞಾನ–ದೀಕ್ಷೆ, ಸತ್ಯ-ಸೌಮನಸ್ಯ.

ಇಂತಿಂತಹ ಶಬ್ದಗಳಿಗೆ ಅರ್ಥವೇ ಇಲ್ಲವೋ ಅಥವಾ ಹೃದಯ ನಿಘಂಟು ಅದನ್ನು ಭರಿಸಲಾರದೋ ಎಂಬುದು ಅರ್ಥವಾಗುತ್ತಲೇ ಇಲ್ಲ. ವಿನಾಕಾರಣ ಜೀವನರಥಕ್ಕೆ ಹೊರಲಾರದ ಹೊರೆಯನ್ನು ಹೊರಿಸುವುದರಿಂದ ಇರಬಹುದಾದ ಅಲ್ಪಸ್ವಲ್ಪ ಶಾಂತಿಯೂ ಲಭಿಸದೆ ಹೋಗುತ್ತದೆ; ಎಂಬ ಭಾವನೆ ಈಗೀಗ ದಿನದಿನಕ್ಕೂ ಚಿತ್ರವಿಚಿತ್ರವಾಗಿ ಬೆಳೆಯುತ್ತದೆ. ಜೀವನವು ಬೆಳಕು ನೆರಳುಗಳ ಜೋಡಣೆ ಎಂಬುದರ ಕಟುಸತ್ಯ ಹೊಸದೇನಲ್ಲ. ಆದರೂ ಅನಂತವೂ, ಅನುಚಿತವೂ ಆದ ಈ ದುಃಖಭೋಗ ಜನ್ಮಜನ್ಮಾಂತರಗಳಿಗೂ ಸಾಕು. ಜೀವನಾರಣ್ಯದ ಅಂಧಕಾರ ಮಾರ್ಗದಲ್ಲಿ ಅನಿರೀಕ್ಷಿತವಾಗಿ ದಟ್ಟಡವಿಯ ಮಧ್ಯೆ ಮಡದಿಯು ಕೈ ಬಿಟ್ಟು ಹೋದಾಗಿನಿಂದ ಈ ಜಗತ್ತೇ ಶೂನ್ಯಮಯವಾಗಿದೆ. ಪರಲೋಕವಾಸೀ ಮಡದಿಯ ವಾತ್ಸಲ್ಯಪೂರಿತ ನೇತ್ರಗಳ ಉಜ್ವಲ ಭಾವಧಾರೆ...ಆಕೆ ಹಿಂದೆಯೇ ಬಿಟ್ಟುಹೋದ ಕುಂದ ಕುಟ್ಮಲಗಳು...ಎಲ್ಲೇ ಇದ್ದರೂ ಹೇಗೇ ಇದ್ದರೂ ಅಕ್ಷಿಪಟಲದ ಮೇಲೆ ಅಚ್ಚಳಿಯದೆ ಸುಳಿಯುತ್ತವೆ. ಮೇಲಾಗಿ ವೃದ್ಧ ಸ್ವಾಮಿನಿ, ಅಣ್ಣನ ಅನಾಥ ಗೃಹಿಣಿ ಮತ್ತು ಸಣ್ಣ ಸಣ್ಣ ಅಣುಗರು ಈ ಎಲ್ಲಾ ದೀನರನ್ನು ಅಲಕ್ಷಿಸುವಂತೆಯೂ ಇಲ್ಲ....ಈ ದುಃಖಭರಿತ ಜೀವನವನ್ನು ಹೇಗೆ ಉದ್ಧರಿಸಬೇಕೋ ಹೊಳೆಯದೆ ಗಂಭೀರ ಉದ್ಭ್ರಾಂತಿ ಮುಂಡಿಯೂರಿ ನಿಲ್ಲುವುದು. ಜೀವನಯೋಗ ಇಷ್ಟೊಂದು ದುಃಖವನ್ನು ಪ್ರಾಸಾದಿಸುವುದೆಂಬುದರ ಅರಿವಿದ್ದಿದ್ದರೆ ಈ ಜೀವನವೇ ಬೇಡವಾಗಿತ್ತು. ಯಾವ ತಪ್ಪಿಗಾಗಿ ಈ ಶಿಕ್ಷೆಯನ್ನು ಭಗವಂತ ಕೊಟ್ಟ ಎಂಬುದು ಯೋಚನಾತೀತವಾದುದು. ಅತೀವ ದುಃಖಾಂಬುಧಿಯಲ್ಲಿ ತೊಳಲಿ ಬಳಲುವಾಗ ಸಮಯೋಚಿತ ಪರಿಜ್ಞಾನ ಕರ್ತವ್ಯ ಮತ್ತು ದೃಢತೆಯನ್ನು ಬೋಧಿಸುತ್ತಲೇ ಇರುತ್ತದೆ. ಆದರೂ ಎಲ್ಲೋ ಅಲಕ್ಷಿತ ಅಲಸಿಕೆ ....ಇನ್ನೆಲ್ಲೋ ಪರಿತ್ಯಕ್ತ ಭೀಕರ ಜಡಿಮೆ ಅದಾವ ಮಾಯಕತೆಯಿಂದಲೋ

ಬಂದು ಸೇರಿ ದೇಹವ್ಯಾಪ್ತವಾಗತೊಡಗಿದೆ. ದಿನಗಳು ಯಥಾಕ್ರಮ ಓಡು ವಾಗ ಕೆಲಸಕಾರ್ಯಗಳು ಯಾಂತ್ರಿಕವಾಗಿ ನಡೆಯುತ್ತವೆ. ಯಾವುದರಲ್ಲೂ ಉದ್ದೇಶವಿಲ್ಲ; ಮಾಡಿದರೆ ಮಾಡಿದ; ಇಲ್ಲದಿದ್ದರೆ ಇಲ್ಲ; ಹೊರಹೋದರೆ ಅಲ್ಲೇ ; ಮನೆಯಲ್ಲಿದ್ದರೆ ಇಲ್ಲೇ.

ಕಾವೇರಿ ಪೂವಿಯರು ಮಂಗಳೂರಿಂದ ಹಿಂತಿರುಗುವಾಗ ತಿಂಗಳ ಮಗುವನ್ನು ಕರೆ ತಂದಿದ್ದರು. ಮಗು ಸುವರ್ಣ ವರ್ಣದಿಂದ ಕೂಡಿ, ಕೊಡ ಗಿನ ಕಿತ್ತಳೆಯಂತೆ ಬಹು ರಮ್ಯವಾಗಿತ್ತು. ಈಗ ಪೂವಿಯ ಹೊತ್ತೆಲ್ಲ ಮಕ್ಕಳ ಪೋಷಣೆಯಲ್ಲಿಯೇ ಕಳೆದು ಹೋಗುತ್ತದೆ. ಮನೆ ಮೆಟ್ಟಲಿಳಿಯಲೂ ಸಹ ಆಕೆಗೆ ಬಿಡುವು ದೊರೆಯುವುದು ಕಷ್ಟ. ಸ್ವಾಮಿನಿ ತನ್ನದೇ ಆದ ವ್ಯವಹಾರದಲ್ಲಿ ವಿಹರಿಸುತ್ತಾಳೆ. ಎಲ್ಲೆಲ್ಲಿ ತನ್ನಿಂದ ಸರಿಪಡಿಸುವುದು ಸಾಧ್ಯವೋ ಅಲ್ಲೆಲ್ಲಾ ಕೈಯಾಡಿಸುತ್ತಾಳೆ. ಆದರೂ ಆ ಸಂಸಾರಾರ್ಣವ ಕಗ್ಗತ್ತಲೆಯಿಂದ ತುಂಬಿ ಹೋಗಿದೆ. ಸರ್ವತ್ರ ಬೆಳಗಿಸಬೇಕಾದರೆ ಇನ್ನೆಂತಹ ಪ್ರಕಾಶಮಾನವಾದ ಜ್ಯೋತಿಯನ್ನು ಉರಿಸಬೇಕೋ ದೇವರೇ ಬಲ್ಲ. ಕುಡಿ ಯನ್ನು ಕೆಡವಿ ಮುನ್ನೂಂಕಿದರೂ ಅದೇ ಮಂದಗಾಮಿತ್ವ....ಏನು ಮಾಡ ಬೇಕೆಂಬುದೇ ಅರ್ಥವಾಗುವುದಿಲ್ಲ. ಯಾವುದೋ ಒಂದು ವಿಧವಾದ ಯೋಚಿಸಿ ದರೂ ಅರ್ಥವಾಗದ ವಿಚಿತ್ರ ಪರಿಮಳದಿಂದ ಕೂಡಿದ ಮೋಹನಕಾರೀ ಜಡಿಮೆ ಅಲ್ಲ, ಅಲ್ಲವೇ ಅಲ್ಲ. ನಿರ್ಲಕ್ಷ್ಯ ಉದಾಸೀನಗಳ ಸಮುದಾಯದಿಂದ ಹೊಮ್ಮಿದ ಗಂಭೀರತರ ವೈರಾಗ್ಯ ದೇಹವ್ಯಾಪ್ತವಾಗತೊಡಗಿತ್ತು. ಬೇಡ ವೆಂದರೂ ಬಿಡದು.

ಎಂದಿನಂತೆಯೇ ಆಕಾಶ ಮಂಡಲದಲ್ಲಿ ಸಂಧ್ಯಾಪದ್ಮಿನಿ ಬೆಳಗಿತು.

ಕಾವೇರೀ ನಿರ್ಝರ ಮಧುರ ಫೇನಪುಂಜೀಭೂತ ಮಾರುತ ಮಂದ ಮಂದಗತಿಯಲ್ಲಿ ಸುಯ್ಯನೆ ಸುಯ್ಯುತಿದ್ದಾನೆ—ಅಭ್ರಭೇದೀ ಶಿಖರಗಳ ಮೇಲೆ ತೀಡಿ—ತೀಡಿ....

ಶೈವಾಲಶೂನ್ಯ ಸರೋವರ ಸಮನ್ವಿತ ನೀಲಿಮಾ.

ಪರಂತು,

ಮುಖವೆಲ್ಲ ಬಾಡಿ-ಬತ್ತಿ ಶ್ರೀಹೀನನಂತೆ ಮಾದು ಮನೆಯ ಮುಂದಿನ ಮೆಟ್ಟಲಿನ ಮೇಲೆ ಕುಳಿತಿದ್ದ. ಪಕ್ಕದಲ್ಲಿ ಕಾವೇರಿ ಮಂಡಿಸಿದ್ದಳು, ಅಂಗಳದ

ಹಸರು ಹಾಸಿನಮೇಲೆ ಮೂವರು ಮಕ್ಕಳೂ ಮೇಳೈಸಿದ್ದರು. ಬಹುಶಃ ಪೂವಿ ಒಳಗಡೆ ಹಸುಮಗುವಿಗೆ ಹಾಲೂಡಿಸುತಿದ್ದಳೇನೋ...... ಈಗ ಚಿಟ್ಟೆ ಎತ್ತರವಾಗಿ ಬೆಳೆಯುತ್ತಿದ್ದಾನೆ. ಮನು ಬೆಳವಣಿಗೆಯಲ್ಲಿ ಚಟುವಟಿಕೆಯಲ್ಲಿ ಅಣ್ಣನಿಗೆ ಏನೇನೂ ಕಡಿಮೆಯಿಲ್ಲ. ಒಂದು ಕಾಲದಲ್ಲಿ ಮುದ್ದು ಮಾದು ಹೇಗಿದ್ದರೋ ಹಾಗೆಯೆ. ಬದುಕಿನ ರಸರುಚಿಯನ್ನೆಲ್ಲ ಮೈದುಂಬಿಸಿಕೊಂಡ ಹಂಸಗಮನೆ ಗಂಗೂ ದೀಪಾಲೋಕದ ಸೌಂದರ್ಯರಾಶಿಯಂತೆ ಕಂಗೊಳಿಸು ತ್ತಾಳೆ. ಚೆಲುವನ್ನು ಚೆಲ್ಲುವ ಎಳೆದುಟಿಗಳಲ್ಲಿ ತಿಳಿನಗುವನ್ನು ಹರಿಸಿ ಆನಂದದೊಡ್ಡೋಲಗದ ಅಧಿಪತಿಗಳಂತೆ ಆಟದಲ್ಲಿ ಪೂರ್ಣ ನಿಮಗ್ನರಾಗಿದ್ದರು. ಗಂಗೂ ಬೊಂಬೆಯೊಂದನ್ನು ತೊಡೆಯ ಮೇಲೆ ಮಲಗಿಸಿಕೊಂಡಿದ್ದಾಳೆ. ಬೊಂಬೆಯ ಮುಖದ ಮೇಲೆ ಹರಿದ ರೇಶಿಮೆಯಂತೆ ನವುರಾದ ಕೂದಲನ್ನು ಹಿಂದಕ್ಕೆ ತಳ್ಳಿ ಸಣ್ಣ ಟೋಪಿಯೊಂದನ್ನು ತೊಡಿಸಿ ಚಿಟ್ಟೆಗೆಂದಳು,

"ಒಳಗಡೆ ಮಗುವಿನ (ಬೊಂಬೆಯ) ಶಾಲು ಬಿಟ್ಬು ಬಂದೆ. ತಂದು ಕೊಡು, ಅದಕ್ಕೆ ಚಳಿಯಾಗುತ್ತೆ."

ಚಿಟ್ಟೆ ಅದನ್ನು ಮನಸ್ಸಿಗೆ ತಂದು ಕೊಳ್ಳದೆ ತನ್ನ ಚೆಂಡಾಟದಲ್ಲಿಯೇ ನಿರತನಾದ. ಪುನಃ ಕೇಳಿದಳು ಗಂಗೂ, ಆಗಲೂ ಅವನು ಮನಸ್ಸು ಮಾಡ ದುದನ್ನು ನೋಡಿದ ಮನು ತಾನೇ ಹೋಗಿ ತಂದು ಅದರ ಮೈ ತುಂಬ ಹೊದಿಸಿ, ಅಂದ "ನಿದ್ದೆ ಬಂದಿದೆ. ತಟ್ಟೆ ಜೋಗುಳ ಹಾಡು !"

"ಯಾವ ಜೋಗುಳ...?"

"ಆ ದಿನ ಚಿಕ್ಕವ್ವ ಹೇಳಿ ಕೊಟ್ಟಿದ್ದರಲ್ಲ, ಅದೇ !"

ಗಂಗೂ ಒಂದೆರಡು ಘಳಿಗೆ ಯೋಚಿಸಿ ಜ್ಞಾಪಿಸಿಕೊಂಡು ಎಳೆಯದನಿ ಯನ್ನು ಹರಿಯ ಬಿಟ್ಟಳು,

ಜೂವ ಜೂವ ಕುಞಿ ಯೇ
ಜೂ..............ಜೂ
ಈ ಮನೆರ ಬೊಳಕಾಯಿ
ದೇಶಕೊರ್ ತೋಣೆಯಾಯಿ
ಕೀರ್ತಿನಲ್ಲ ಪೆದಪೋಯಿ
ದೇವಂಗೊತ್ತ್ ಬಾಳ್‌ಲೊ

ಜೊ................ಜೊ

ಹಿರಿಯರಿಬ್ಬರೂ ಮೌನವಾಗಿ ಆಲೈಸಿದರು. ಮುದ್ದು ಮುದ್ದು ಮಾತು ಗಳಿಂದ ಅವಳು ಹಾಡಿ ಕೊಳ್ಳುತ್ತ ಬೊಂಬೆಯನ್ನು ತಟ್ಟಿ ಮಲಗಿಸುವ ಮಹಾ ಕಾರ್ಯದಲ್ಲಿ ನಿರತಳಾಗಿದ್ದಳು. ಒಮ್ಮೆ ಅವಳನ್ನು ನೋಡಿ ಸಂತಸವೆನಿಸಿದರೆ ಇನ್ನೊಮ್ಮೆ ದುಃಖದ ಬಿಸುಸುಯ್ಲು ಹೊಮ್ಮುತಿತ್ತು. ನೆಟ್ಟ ನೋಟ ಕೃತ ಕೃತ್ಯವಾದರೂ ತುಟಿಗಳು ಬಿರಿಯಲಿಲ್ಲ. ಬಹಳ ಹೊತ್ತು ಮೌನವಾಗಿ ಕರ ಗಿತು. ಆ ರುದ್ರಮೌನದ ದುರ್ಬರ ಸನ್ನಿವೇಶದಲ್ಲಿ ಕ್ರಮವಿಹೀನವಾದ ಆಲೋಚನೆಗಳು ಮನವನ್ನು ಮುತ್ತಿ ಶಾಂತಿಯನ್ನು ಧ್ವಂಸಗೊಳಿಸುತಿದ್ದುದು ಅಸಹನೀಯವಾಗಿ ತೋರಿತೋ ಏನೋ...ಮಾದು ಪ್ರಯತ್ನ ಪೂರ್ವಕ ವಾಗಿ ಮೌನ ಮುರಿದ ; ಮನೋದಧಿಯಲ್ಲಿ ಯಾವುದು ರೂಪುಗೊಳ್ಳು ತಿತ್ತೋ ಅದೇ ಹೊರಬಿತ್ತು.

"ಅವ್ವಾ, ವಿಘ್ನವೇ ನಮ್ಮ ಉಪಾಸ್ಯ ದೇವತೆ ! ಆಕೆ ಅನುಗ್ರಹಿಸಿದು ದನ್ನು ನಾವು ಪ್ರಸಾದವಾಗಿ ಸ್ವೀಕರಿಸಿಯಾಗಿದೆ. ಈ ಬದುಕಿನಲ್ಲಿ ನಮಗೆ ಇನ್ನೇನೂ ಉಳಿಯಲಿಲ್ಲ."

"ಹಾಗೆಂದರೆ ಹೇಗೆ ಮಾದು ? ಈ ಹಸು ಮಕ್ಕಳನ್ನೇನು ಮಾಡುವೆ?"

ವೃದ್ಧ ಜನನಿಯ ಅಂತರಾಳದಿಂದ ಹೊರಬಿದ್ದ ಧ್ವನಿ ವಿಕಂಪಿಸಿದು ದನ್ನು ಅವನು ಗಮನಿಸಲಿಲ್ಲವೇನೋ, ಏನೋ ಒಂದು ರೀತಿಯ ಉಪೇಕ್ಷೆ ಯಲ್ಲಿ ಉತ್ತರಿಸಿದ,

"ಎಲ್ಲವೂ ಭ್ರಮೆ....ಭ್ರಾಂತಿ !"

ಚಿತ್ತ ಉತ್ಕ್ರಾಂತವಾಗತೊಡಗಿತ್ತು. ಬಿಸಿಯುಸಿರೊಂದು ಮೆಲ್ಲನೆ ತಪ್ಪಿಸಿಕೊಂಡುದುದೂ ಸಹ ಗಮನಕ್ಕೆ ಬರಲಿಲ್ಲ. ನಿಶ್ಚಲ ನೋಟ ಹತ್ತಿರ ದಲ್ಲಿದ್ದರೂ ಏನನ್ನೂ ನೋಡದಂತಿತ್ತು. ಮಂತ್ರಿತ ಫಣಿಯಂತೆ ಸುಮ್ಮನೆ ಕುಳಿತ. ಆತನ ಉತ್ಸಾಹಹೀನತೆಯನ್ನು ಗಮನಿಸಿ ಜನನಿಯ ಹೃದಯ ದಣಿ ಯಿತು. ಆಕೆ ಏನೂ ಹೇಳಲಿಲ್ಲ. ಮಾದು ಸ್ವಲ್ಪ ಹೊತ್ತು ಯೋಚಿಸಿ ಅನಂತರ ಮುಂದುವರಿದ "ಮಕ್ಕಳ ವಿಚಾರ ಚಿಂತನೀಯವಾದುದೇ. ಅದನ್ನಿಲ್ಲ ಎನ್ನುವುದಿಲ್ಲ. ಆದರೆ, ನಾನೇ ಮಾಡುತ್ತೇನೆ ಎಂಬುದರಲ್ಲಿ ಅರ್ಥವಿಲ್ಲ."

"ಹಾಗೆಂದು ಉಪೇಕ್ಷಿಸಲಾದೀತೆ ?"

ಪ್ರಶ್ನೆಯಲ್ಲಿ ಅಮಾಯಕತೆ ತುಂಬಿ ಹೋಗಿದ್ದರೂ ಮುಖ ನಸುಗೆಂಪು ತಳೆಯಿತು. ತನ್ನನ್ನು ತಾನು ಹತೋಟಿಗೆ ತೆಗೆದು ಕೊಳ್ಳುತ್ತ ಪ್ರಯತ್ನ ಪೂರ್ವಕವಾಗಿ ನುಡಿದಳು "ಈ ಲೌಕಿಕ ವ್ಯವಹಾರದಲ್ಲೇ ಮುಳುಗಿ ಮಣ್ಣಾಗ ಬೇಕು ಎಂಬುದೇನೂ ನನಗಿಲ್ಲ. ನನ್ನ ಬದುಕು ಇಂದಿಗೇ ಮುಗಿದರೂ ಸರಿಯೆ. ಆದರೆ ನಾವು ಇರುವವರೆಗೆ ನಮ್ಮ ಕರ್ತವ್ಯ ಲೋಪವಾಗಬಾರದು. ಅದೇ ನನ್ನ ಆಶಯ."

ಮಾದು ಉತ್ತರಿಸಲಿಲ್ಲ.

ರುದ್ರ ಗಂಭೀರತೆ ನೆಲೆಸಿ ಹೊತ್ತು ಘನೀಭೂತವಾಯಿತು. ಮಕ್ಕಳ ಕೇಕೆ, ಎಳೆನಗು, ಮುದ್ದು ಮಾತುಗಳು ಕರ್ಣಪಟಲಗಳಿಗೆ ತಾಗುತಿದ್ದರೂ ಗಮನಕ್ಕೆ ಬಾರದಷ್ಟು ಭಾವಪರವಶತೆ ನೆಲೆಸಿತ್ತು. ಬಹಳ ಹೊತ್ತಿನ ನಂತರ ಮಾದು ಮೌನ ಮುರಿದ.

"ನೀವು ತಪ್ಪಾಗಿ ಭಾವಿಸುತ್ತಿರುವಿರಿ ಅವ್ವಾ ! ನಮ್ಮ ಜೀವನ ಧ್ಯೇಯ ಏನೆಂಬುದನ್ನು ಕಂಡು ಕೊಳ್ಳುವ ಮೊದಲೇ ಪ್ರಕರಣ ಮುಗಿದು ಹೋಗ ಬಹುದು ಅಂದಮೇಲೆ..."

ಆ ಕಠೋರ ವಿಡಂಬನೆ ದೇಹ ಪ್ರಕೃತಿಯನ್ನು ಮೆಲ್ಲಗೆ ಸ್ತಬ್ಧ ಗೊಳಿಸಿತು–ಆಕೆ ಸುಮ್ಮನಾದಳು.

"ಎಷ್ಟು ಶಕ್ತಿ ಸಾಮರ್ಥ್ಯವಿದ್ದರೂ ದೈವದಾಣತಿಯ ಮುಂದೆ ಎಲ್ಲ ವ್ಯರ್ಥ. ಸ್ವಾತಂತ್ರ್ಯೋತ್ಸವ ನಡೆಸಿದ ಮೇಲೆ ಇನ್ನು ನಮ್ಮ ನಮ್ಮ ಜೀವನ ವೃತ್ತಿ ನೋಡಿಕೊಂಡು ಹಾಯಾಗಿರೋಣವೆನ್ನಿಸಿ ಆ ಬಗ್ಗೆ ದೃಢನಿರ್ಧಾರಕ್ಕೆ ಬರುವ ಮೊದಲೇ ಬಾಳು ಬುಡಮೇಲಾಯಿತು. ಇನ್ನು ಒಡಕು ಘಟದ ಶ್ರುತಿಯಂತೆ ಹೊಮ್ಮುವ ಆ ನಾದ...? ದೇಶಸೇವೆಯಿಂದ ವಿಮುಖನಾದ 'ಪ್ರಸಂಗ' ಅನವಶ್ಯಕವಾದ ವೈರಾಗ್ಯ ಅಥವಾ ಉಪೇಕ್ಷೆ ಎನ್ನುವುದು ಆ ನಿನಾದದಲ್ಲೊಂದು....ಎಂದರೆ ಒಪ್ಪಿಕೊಳ್ಳುವಿರಷ್ಟೆ ? ಭಾರತ ಮಾತೆಯ ಶ್ರೀಚರಣಗಳಲ್ಲಿ ಪ್ರಾಣಾರ್ಪಣೆ ಮಾಡುವುದರಲ್ಲಿಯೇ 'ಔನ್ನತ್ಯ'ವಿದೆ ಎಂಬುದರಲ್ಲಿ ಇಂದು ಎಂತಹ ಸತ್ವವಡಗಿದೆ ? ...ಇದಕ್ಕೆ ನೀವೇನೆನ್ನುವಿರಿ ಅವ್ವಾ ?"

"ದೇಶವಾತ್ಸಲ್ಯ ಜೀವನವಾತ್ಸಲ್ಯ ಒಂದನ್ನುಳಿದು ಒಂದಿಲ್ಲ ಮಾದು !

ಯೋಚಿಸಿನೋಡು, ಇದಿದ್ದರೆ ಅದು, ಅದಿದ್ದರೆ ಇದು, ಇಲ್ಲದಿದ್ದರೆ ಎರಡೂ ಇಲ್ಲ !'

ಶೀತದೇಶದ ಶೈತ್ಯಕ್ಕಿಂತಲೂ ಶೀತಲವಾಗಿ ಹರಿದು ಬಂತು ದನಿ.

ಮಾದು ತಲೆ ಬಾಗಿದ. ಆ ಕಟು ಸತ್ಯದ ಮೂರ್ತರೂಪ ಸುತ್ತಮುತ್ತ ಸುಳಿದಾಡಿ ಹಲ್ಕಿರಿಯಿತು. ಒಂದು ಘಳಿಗೆ ತನ್ನಲ್ಲಿ ತಾನೇ ಮನೋವೇದನೆಯನ್ನನುಭವಿಸಿ ತಲೆಯೆತ್ತಿದಾಗ ಮುಖ ಮ್ಲಾನವಾಗಿತ್ತು. ಶೀರ ದಣಿದವನಂತೆ ಏನೋ ಒಂದು ಬಗೆಯ ನಿರಾಶಾಪೂರ್ಣ ವಿಶಾದವಾಣಿಯಲ್ಲಿ ತನ್ನ ಅಭಿಪ್ರಾಯವನ್ನು ಹೊರ ಹಾಕಿದ "ಜಗತ್ತಿನಲ್ಲಿ ಎಲ್ಲಾ ಬಗೆಯ ಅಂತರಂಗಗಳೂ ಸಮುದ್ರದ ಅಲೆಗಳಂತೆ ಮುಂದುಮುಂದಕ್ಕೆ ಸಾಗಿ ಹೋಗುತ್ತಲೇ ಇರುತ್ತವೆ- ಅದರಲ್ಲಿ ಸ್ತ್ರೀಪುರುಷರೆಲ್ಲ ಗಾಳಿ ಮಳೆಯಲ್ಲಿ ತೇಲುವ ಹುಲ್ಲು ಕಡ್ಡಿಗಳಂತೆ....ನೀರು ನುಗ್ಗಿದೆಡೆ ತೇಲಿ ಹೋಗುತ್ತಾರೆ. ಜೀವನದ ಆದರ್ಶ ಎಂಬುದೆಲ್ಲ ಬರೀ ಭ್ರಮೆಯಲ್ಲದೆ ಮತ್ತೇನು ? ಮಾನವತೆ, ಧರ್ಮ, ಪ್ರಾಣ, ಶಕ್ತಿಗಳೆಲ್ಲ ಯಥಾರೀತಿ ವ್ಯಯ ಹೊಂದುತ್ತವೆ ; ಈ ಜೀವನದಲ್ಲಿ ಹುರುಳೇ ಇಲ್ಲ...ನಾವು ಸುಮ್ಮನೆ ಹೆಣಗಿ ಸಾಯುತ್ತೇವೆ."

"ಅದು ಸಹಜವಾದರೂ ಯಾವುದನ್ನೂ ಅಲ್ಲಿಂದಲ್ಲೇ ಕೈ ಬಿಡುವಂತಿಲ್ಲ. ಕುಂಟುತ್ತ ನಡೆದರೂ ಶ್ರೀಶುಭಚರಣಗಳ ನೆಲೆಯನ್ನು ಕಂಡುಕೊಳ್ಳಲೇ ಬೇಕು, ಮಗೂ...ಜೀವನ ಎಂದೂ ಯಾರಿಗೂ ಶುಭವನ್ನೇ ಪ್ರಸಾದಿಸುವುದಿಲ್ಲ. ನಾವು ಸುಖದುಃಖಗಳನ್ನು ಹೊಂದಿಸಿಕೊಂಡು ಜೀವನ ಶಾಂತಿಯನ್ನು ಪಡೆಯಬೇಕಷ್ಟೆ."

...ಎಲ್ಲರೂ ಹಾಗೆಂದೆ ಹೇಳುತ್ತಾರೆ. ಅದೇನು ವಿಶೇಷವಲ್ಲ. ಆದರೆ ಈ ಬರಿದಾದ ಬಾಳನ್ನು ತುಂಬುವುದು ಹೇಗೆ ಎಂಬುದೇ ಪ್ರಶ್ನೆ....

ಯೋಚನೆ ತಲೆಯಲ್ಲಿ ಸುಳಿ ಸುತ್ತುತಿತ್ತು. ಮಾದು ಮಾತಾಡಲಿಲ್ಲ.

"ಈ ಸಂಸಾರದಲ್ಲಿ ಅಂದಿಂದಿಗೂ ಸಂಭವಿಸಿದ್ದು ಅದೇ...ದುಃಖ ಭೋಗದಲ್ಲೇ ಈ ಮನೆ ನಡೆದು ಬಂದಿದೆ. ಕಣ್ಣೀರಿನ ಕಾಲುವೆಯಲ್ಲಿ ಕೈ ತೊಳೆದಿದ್ದಾಗಿದೆ....ಹಾಗೆಂದು ಜೀವನವನ್ನು ಬದಿಗೊತ್ತುವುದೇ ? ಮಕ್ಕಳನ್ನು ಒಂದು ಸುಸ್ಥಿತಿಗೆ ತರುವವರೆಗೆ ಜೀವನ ರಥ ಹರಿಯಲೇಬೇಕು. ಏನು ಮಾಡೋಣ ? ಎಲ್ಲಾ ನಾವು ಪಡೆದುಕೊಂಡು ಬಂದ ಅಭಿಯೋಗ..."

ಧ್ವನಿ ಇದ್ದಕ್ಕಿದ್ದಂತೆ ಗದ್ಗದವಾಯಿತು. ಕಣ್ಣುಗಳಲ್ಲಿ ನೀರು ಫಳಫಳನೆ ತುಂಬಿ ಬಂತು. ವೃದ್ಧ ಜನನಿ ಇದುವರೆಗೆ ಎಷ್ಟು ದುಃಖವನ್ನು ಹುದುಗಿಟ್ಟು ಕೊಂಡು ಬಂದಿದ್ದಳೋ...ಎಷ್ಟು ಸಮಾಧಾನ ಹೇಳಿ ಸಂತೈಸುತಿದ್ದಳೋ ...ಅದೆಲ್ಲಾ ಇಂದು ಅನಿರೀಕ್ಷಿತವಾಗಿ ಕಟ್ಟೆಯೊಡೆದಂತೆ ಹೊರನುಗ್ಗಿ ಬಂತು. ಎಷ್ಟೇ ಪ್ರಯತ್ನಿಸಿದರೂ ತಡೆಹಿಡಿಯಲಾಗಲಿಲ್ಲ. ಹತ್ತು ಹದಿನೈದು ನಿಮಿಷ ಗಳು ಸದ್ದಿಲ್ಲದೆ ಉರುಳಿದುವು. ಮಾದಯ್ಯನ ಕಣ್ಣುಗಳಲ್ಲೂ ನೀರು ಧಾರಾ ಕಾರವಾಗಿ ಇಳಿಯುತಿತ್ತು.

"ದೇವರು ನಮಗೇಕೆ ಈ ಕಷ್ಟ ಕೊಟ್ಟ ?"

"ಎಂದಾದರೂ ಈ ಪ್ರಶ್ನೆಗೆ ಉತ್ತರ ಲಭಿಸುತ್ತದೆ. ಭಗವಂತ ಉದ್ದೇ ಶಿಸಿದ ಪ್ರಸಂಗಗಳನ್ನು ಯಾವನಾಲಿಗೆ ಪ್ರಶ್ನಿಸೀತು ? ಪ್ರಶ್ನಿಸಿದರೂ ಸಹ ಏನು ಪ್ರಯೋಜನ ?" ಹಠಾತ್ತಾಗಿ ಅನಿರೀಕ್ಷಿತವಾಗಿ ಪ್ರದರ್ಶಿತವಾದ ಮನೋದೌರ್ಬಲ್ಯವನ್ನು ಮರೆಸಲೆಂದೇ ಉತ್ತರ ಹೇಳಿದಳು ವೃದ್ಧೆ. ಕೈಗಳು ಯಾಂತ್ರಿಕವಾಗಿ ಕಂಬನಿಯನ್ನು ತೀಡಿಕೊಂಡುವು.

ಸಾಂಧ್ಯದೀಪ್ತಿ ಕರಗಿ ನಿಶಾಲಕ್ಷ್ಮಿ ಬೆಳ್ಳಿ ಚುಕ್ಕೆಯ ಕಪ್ಪು ಒಡಲಿನ ಸೀರೆಯನ್ನು ಧರಿಸಿದುದೂ ಸಹ ಗಮನಕ್ಕೆ ಬಂದಿರಲಿಲ್ಲ. ತಂಗಾಳಿ ತಣ್ಣಗೆ ತೀಡತೊಡಗಿತ್ತು. ಕತ್ತಲು ಕವಿದುದರಿಂದ ಮಕ್ಕಳು ಒಳಬಂದರು. ತೊಟ್ಟ ಲಲ್ಲಿ ಶಿಶು ಸುಖನಿದ್ದೆಯಲ್ಲಿತ್ತು; ಅದಕ್ಕೆ ಪ್ರತಿಕಕ್ಷಿಯೋ ಎಂಬಂತೆ ತೂಗು ದೀಪ ಉಜ್ವಲ ಜ್ಯೋತಿಯನ್ನು ಚೆಲ್ಲುತಿತ್ತು. ಮತ್ತೊಂದು ವಿಭಿನ್ನವಾದ ಜೀವನ ಜ್ಯೋತಿಯಂತೆ. ಮಾದು ತೊಟ್ಟಿಲ ಬಳಿ ನಿಂತು ಮಗುವಿನ ಮುಖ ವನ್ನು ನಿಟ್ಟಿಸಿದ. ತಾಯಿಲ್ಲದ ಅನಾಥ ಮಗು ದೊಡ್ಡಮ್ಮನ ಅಪಾರವಾದ ಆರೈಕೆಯಲ್ಲಿ ಸುಖಕರವಾಗಿ ಬೆಳೆದಿತ್ತು. ಶೋಕ-ಪರಿತಾಪಗಳನ್ನು ಮರೆತ್ತ ಆ ಅಖಂಡ ಜ್ಯೋತಿಯ ಪ್ರಭೆಯಲ್ಲಿ ತಲ್ಲೀನನಾಗಿ ಆನಂದಾನುಭೂತಿಯನು ಪಡೆಯ ಹತ್ತಿದ.

ಇದುವರೆವಿಗೂ ಮಗುವಿಗೆ ನಾಮಕರಣ ಮಾಡಿರಲಿಲ್ಲ. ಮಗು ಮುದ್ದು ಮುದ್ದಾಗಿ ಬೆಳೆಯುತಿತ್ತು. ಹಾವ–ಭಾವ, ರೂಪು–ರೇಷೆ, ಅಂದ ಚೆಂದಗಳೆಲ್ಲ ಸಂಪೂರ್ಣ ಪೊನ್ನಮ್ಮನನ್ನು ಹೋಲುತ್ತವೆ. ಅದು ನಕ್ಕಾಗ ಲಂತೂ ಪೊನ್ನಮ್ಮನ ಸ್ವರೂಪ ಮಿಂಚಿ ಮಾಯವಾಗುವುದು. ಆ ನತದೃಷ್ಟ ಮಗು ನಕ್ಕಷ್ಟೂ ನೋಡುವವರಿಗೆ ಸಂಕಟ.

ಒಮ್ಮೆ,

ನೆರೆಮನೆಗಳ ನಾಲ್ಕಾರು ಮಂದಿ ಸುಮಂಗಲಿಯರನ್ನು ಬರಮಾಡಿ ಕೊಂಡು, ಅವರ ಸಮಕ್ಷಮದಲ್ಲಿ ವಿಧಿವತ್ತಾಗಿ ಮಗುವಿನ ನಾಮಕರಣ ಮಹೋತ್ಸವವನ್ನು ನೆರವೇರಿಸಿದಳು ಪೂವಿ. ಒದಗಿ ಬಂದ ಜನ್ಮನಾಮ 'ತಂಗಮ್ಮ' ಉತ್ಸವ ಅತ್ಯಂತ ಸರಳವಾಗಿತ್ತು. ಬಹಳ ದಿನಗಳನಂತರ ಆ ಗೃಹದಲ್ಲಿ ಕಷ್ಟ ಸುಖಗಳನ್ನು ಸವಿದು, ಎಳೆನಗುವನ್ನು ಸೂಸಿ ಸುಮಂಗಲಿ ಯರು ಹೊರಟರು. ಮಾತಿನರವ ಸೂಸಿ ನಸುಗದ್ದಲವೆಬ್ಬಿಸಿದ ಅವರನ್ನು ಬೇಲಿಯವರೆಗೂ ಬೀಳ್ಕೊಡಲು ಬಂದ ಪೂವಿ ಮತ್ತು ಕಾವೇರಿಯರಿಗೆ ತಮ್ಮ ಕಣ್ಣುಗಳನ್ನೇ ತಾವು ನಂಬಲಾರದಷ್ಟು ಅಚ್ಚರಿ ಮೂಡಿಸುವಂತೆ ತಿಮ್ಮಯ್ಯ ಅಲ್ಲಿ ಪ್ರತ್ಯಕ್ಷನಾದ....! ಈಚೆಗೆ ಅವನಿಂದ ಕಾಗದವೇ ಆಗಲೀ ಸುದ್ದಿಯೇ ಆಗಲೀ ಬಂದಿರಲಿಲ್ಲ. ಏನಾದ ಎಂಬುದನ್ನು ಊಹಿಸುವುದೂ ಕಷ್ಟವಾಗಿತ್ತು. ತಾಯಿ ತಂಗಿಯರು ಅದೆಷ್ಟು ಬಾರಿ ಕಂಬನಿಗರೆದಿದ್ದರೋ....ಮನೋಜನ್ಯ ವಾದ ಕಲ್ಪನೆ-ಕುಕಲ್ಪನೆಗಳು ಎಷ್ಟು ಬಗೆಯಲ್ಲಿ ಬಾಯಿಂದ ಬಾಯಿಗೆ ಹರಿ ದಾಡಿದ್ದುವೋ, ಇಂದು ಅನಿರೀಕ್ಷಿತವಾಗಿ ಅವನನ್ನು ನೋಡುತ್ತಲೂ ಪೂವಿ ಮಂತ್ರಮುಗ್ಧಳಂತೆ, ಅಭಿಭೂತಳಂತೆ ಮೂರ್ತಿಯಾಗಿ ನಿಂತು ಬಿಟ್ಟಳು. ಆನಂದವಾರಿಧಿ ಹೃದಯ ಸಂಪುಟ ಬಿರಿಯುವಂತೆ ಉಕ್ಕಿ ಹರಿಯತೊಡಗಿತು. ತಿಮ್ಮಯ್ಯ ಪ್ರಸನ್ನಮುಖಿಯಾಗಿ ಎರಡೂ ಕೈಗಳನ್ನೂ ನೀಡಿ ತಂಗಿಯನ್ನು ಗಾಢಾಲಿಂಗನೆ ಮಾಡಿಕೊಂಡ. ಅವಳು ಎತ್ತಿಕೊಂಡಿದ್ದ ತಂಗಮ್ಮನನ್ನು ಅಲ್ಲೇ ಮೃದುವಾಗಿ ಅದುಮಿ ಹಿಡಿದು ಹೂಮುತ್ತಿಟ್ಟ.

ಪರಕೀಯನೊಬ್ಬ, 'ಅಮ್ಮ'ನನ್ನು ಬಿಗಿದು ಹಿಡಿದುಕೊಂಡುದುದು ಮಗುವಿಗೆ ಗಾಬರಿ ಮೂಡಿಸಿತು. ಒಡನೆ ಚೀರಿ ಗದ್ದಲವೆಬ್ಬಿಸಿದಳು.

"ಬಾ, ಮಗೂ ! ನಾನು ನಿನ್ನ ಮಾವ !"

ಮಕ್ಕಳೆಂದರೆ ಅತೀವ ಆನಂದದ ಸುಗ್ಗಿಯನ್ನುಣ್ಣುವ ಮನೋಭಾವ ಅವನದು. ಒಂದೆರಡು ಸಾಂತ್ವನದ ಮಾತಾಡಿ ಮತ್ತೊಮ್ಮೆ ಮುದ್ದಿಟ್ಟು ಕಾವೇರಿಗೆ ನಮಸ್ಕರಿಸಿ ಪಾದಧೂಳಿ ಸ್ವೀಕರಿಸಿದ. ಪೂವಿ ನಮಸ್ಕರಿಸಿ ಅತ್ಯಾನಂದದಿಂದ ಹೃತ್ಪೂರ್ವಕವಾಗಿ ಸ್ವಾಗತಿಸಿದಳು.

"ಬಾ ಅಣ್ಣ, ಒಳಗೆ."

ಆದರೆ, ಅವನ ಕಣ್ಣೆಲ್ಲ ಮಕ್ಕಳ ಮೇಲೆ. ಶುಭ್ರ ಉಡುಪಿನಿಂದ ಶೋಭಿತರಾದ ನಾಲ್ವರೂ ಕಣ್ಮನಗಳನ್ನು ಕ್ಷಣಾರ್ಧದಲ್ಲಿ ಸೆಳೆದಾಗಿತ್ತು. ಪ್ರೈಬಾಗಿ ಮಕ್ಕಳೊಂದಿಗೆ ಮಾತಾಡಿ ಪರಿಚಯ ಮಾಡಿಕೊಂಡು ಮುದ್ದಿಟ್ಟು ತನ್ನೆಡೆಗೆ ಸೆಳೆದುಕೊಂಡ.

"ಬಾಪ್ಪಾ, ಒಳಗಡೆ. ಆಮೇಲೆ ಅವರೊಂದಿಗೆ ಆಡುವೆಯಂತೆ." ಎಂದಳು ಜನನಿ. ಕಣ್ಣುಗಳಲ್ಲಿ ಆನಂದ ಬಾಷ್ಪ ತುಂಬಿ ಬಂತು. ತುಟಿಗಳಲ್ಲಿ ಮೃದುಮಂದ ಹಾಸ ಸಂಚರಿಸಿತು.

ಪೂವಿ ಪುನಃ ದನಿಗೂಡಿಸಿದಳು "ಅಂಗಳದಲ್ಲೇ ಉಳಿದಲ್ಲಾ, ಬಾ ಅಣ್ಣ."

"ಇಂತಹ ಮಕ್ಕಳೊಂದಿಗೆ ಕೂಡಿ ಆಡಿ ಎಷ್ಟು ದಿನಗಳಾಗಿತ್ತೋ... ಈಗ ಅಂದಿಂದಿನ ಸಂತಸವನ್ನೆಲ್ಲಾ ಒಂದೇ ಬಾರಿಗೆ ಹೀರಿಕೊಳ್ಳುವಷ್ಟು ಆತುರ ಮೂಡಿದೆ." ತಿಮ್ಮಯ್ಯ ಆನಂದೋಲ್ಲಾಸಗಳಿಂದ ನುಡಿದ. ದನಿಯಲ್ಲಿ ಹಾಲು ಸಕ್ಕರೆ ಹರಿದು ಬಂತು. ಪೂವಿಯನ್ನು ಅದುಮಿ ಹಿಡಿದುಕೊಂಡು ವಿಶಾದವಾಣಿಯಲ್ಲಿ ಅಂದ "ನೀನು ಏನೋ ಒಂದು ಬಗೆಯಾಗಿದ್ದಿ. ಆಗ ನಿನ್ನ ಕೆನ್ನೆಗಳಲ್ಲಿ ಕಾಣಿಸುತಿದ್ದ ಲಾಲಿಮೆ ಈಗ ಕಾಣಿಸುತ್ತಿಲ್ಲ. ಏನೇ ಇರಲಿ, ಮನಸ್ಸಿಗೆ ಹಚ್ಚಿಕೊಳ್ಳಬಾರದು. ಅದ್ಭುತ ಪ್ರಕೃತಿ ವ್ಯಾಪಾರದಲ್ಲಿ ನಮ್ಮದು ಯಾವ ಲೆಕ್ಕ ಪೂವಿ ?....ಎಲ್ಲವೂ ಕ್ಷಣಿಕ."

"..........."

"ನಿಮ್ಮನ್ನೆಲ್ಲಾ ನೋಡಬೇಕೆಂದು ಈ ಜೀವ ಎಷ್ಟು ಕಾಲದಿಂದ ಎಳೆದಾಡುತಿತ್ತೋ....?"

"ಆದರೂ, ಇಷ್ಟುದಿನ ಮಾಡಿದೆಯಲ್ಲಾ ?"

"ಯಾವುದೂ ನಾವು ಯೋಚಿಸುವಷ್ಟು ಸುಲಭವಲ್ಲ ಪೂವಿ."

"ನಿಜ....ಗೊತ್ತು. ಆದರೂ ಸಹ...."

"ಅಂದರೆ....?"

ಪೂವಿ ಹುಬ್ಬೆತ್ತಿ ನೋಡುತ್ತ ಭಾವಪೂರ್ಣ ಲೋಚನಗಳನ್ನು ಅರಳಿಸಿ ವೀಣಾನಾಡದಂತಹ ಝುಂಕೃತವಾಣಿಯಲ್ಲಿ ಕೇಳಿದಳು,

"ಐ. ಎನ್. ಎ. ವಿಸರ್ಜನೆಯಾಗಿ ಎಷ್ಟು ಕಾಲವಾಯಿತು ? ಇದು ವರೆವಿಗೆ ಏನು ಮಾಡುತಿದ್ದೆ ? ನೀನು ಬಯಸಿದಂದೇ ಬರಬಹುದಾಗಿತ್ತಲ್ಲ?"

"ಇದೆಯಲ್ಲ, ದೇಶ ನೋಡುವುದು...ಕೆಲಸಕಾರ್ಯ ಹುಡುಕಿಕೊಳ್ಳು ವುದು. ಇಲ್ಲಿಯವರೆಗೆ ಪಯಣಿಸಲು ಕಾಸಾದರೂ ಬೇಕಲ್ಲ ?"

"ದೇವರದಯದಿಂದ ನಿನಗೇನೂ ಕಡಿಮೆಯಾಗಿರಲಿಲ್ಲ. ಅಲ್ಲಿ ಕೆಲಸ ಮಾಡಿ ಕಾಸುಗಳಿಸಿ ಪಯಣಿಸುವ ಅವಶ್ಯಕತೆಯೂ ಇರಲಿಲ್ಲ. ಎಲ್ಲಾ ನೀನಾಗಿಯೇ ಮಾಡಿಕೊಂಡದ್ದು."

"ನಮಗಿಂತ ದೇಶ ದೊಡ್ಡದು ಪೂವಿ. ಅದನ್ನು ನಿನಗೆ ಹೇಳಬೇಕಾಗಿಲ್ಲ ವಷ್ಟೆ ?" ಸ್ವಲ್ಪ ಹೊತ್ತು ಸುಮ್ಮನಿದ್ದು ಪುನಃ ಮುಂದುವರಿದ "ನಮ್ಮ ಕೈಯಲ್ಲಿ ಏನುಂಟು ಪೂವಿ ? ನಾವೊಂದು ನೆನೆದರೆ ದೈವ ಇನ್ನೊಂದು ನೆನೆ ಯುತ್ತೆ....ಎಲ್ಲರೂ ಯೋಜನೆ ಹೂಡುತ್ತಾರೆ ; ನಾವೂ ಯೋಜನೆ ಹೂಡು ತ್ತೇವೆ ಅಷ್ಟೆ..."

ಒಡನೆ ಅವಳ ಕಣ್ಣುಗಳಲ್ಲಿ ಘಳಕ್ಕನೆ ನೀರಾಡಿತು.

"ಹಾ! ಅದು ಕೂಡದು ಭಗವಂತನ ಇಚ್ಛೆಗೆ ನಾವತ್ತು ಮಾಡುವು ದೇನು ?"

ಪೂವಿ ಉಕ್ಕಿ ಬಂದ ದುಃಖವನ್ನು ಬಹುಕಷ್ಟದಿಂದ ಪಡೆದುಕೊಂಡಳು. ಪ್ರೀತಿಯಿಂದ ತಂಗಿಯನ್ನು ಅದುಮಿ ಹಿಡಿದುಕೊಂಡು ತಿಮ್ಮಯ್ಯ ಮುಂದು ವರಿದ "ಮುದ್ದಪ್ಪನನ್ನು ನೋಡಬೇಕೆಂದು ಸಿಂಗಪುರಕ್ಕೆ ಹೋಗಿದ್ದೆ. ಆದರೆ ಭೇಟಿ ತೆಗೆದುಕೊಳ್ಳಲಾಗಲಿಲ್ಲ. ಅದಕ್ಕಾಗಿ ಎಷ್ಟೆಷ್ಟೋ ಪ್ರಯತ್ನಪಟ್ಟೆ. ಏನೇನೂ ಪ್ರಯೋಜನವಾಗಲಿಲ್ಲ. ಅವನೇ ಒಂದೆರಡು ಕಾಗದ ಬರೆದಿದ್ದ. ನಾನೂ ಒಂದೆರಡು ಬರೆದಿದ್ದೆ... ಅದು ನಿನಗೆ ಗೊತ್ತೇ ಇದೆಯಷ್ಟೆ ?"

"ಅವರಿಂದ ಎಂದಾದರೊಮ್ಮೆ ಕಾಗದ ಬರುತ್ತದೆ. ಬಿಡುಗಡೆಯ ವಿಚಾರ ಇನ್ನೂ ಏನೂ ನಿರ್ಧಾರವಾಗಿಲ್ಲ. ಬಿಡುತ್ತಾರೋ ಬಿಡುವುದಿಲ್ಲವೋ

ಅದೂ ತಿಳಿಯದು. ಸಂಕಟ....ಸಂಕಟ ಶರೀರವೆಲ್ಲ ಸಂಕಟದಿಂದ ತುಂಬಿ ಹೋಗಿದೆ."

"ಏನು ಮಾಡೋಣ ಹೇಳು? ಎಷ್ಟೇ ಸಂಕಟವಿದ್ದರೂ ನಮ್ಮ ಕರ್ತವ್ಯ ವನ್ನು ಬಿಡುವಂತಿಲ್ಲ. ಅದಕ್ಕಾಗಿ ನಿಶ್ಚಿಂತೆಯಿಂದಿರುವುದು ಲೇಸು. ನೀನು ಚಿಂತೆ ಹಚ್ಚಿಕೊಂಡರೆ ಮಕ್ಕಳಿಗೆ ಯಾರು ಆಧಾರ ?"

"ಅದು ಮುಖ್ಯ." ಕಾವೇರಿ ನಡುವೆ ಬಾಯಿ ಹಾಕಿದಳು. "ಇನ್ನು ದೇವರ ಮೇಲೆ ಭಾರ ಹಾಕಿ ನಮ್ಮ ಕರ್ತವ್ಯ ನಾವು ನಡೆಸಿಕೊಳ್ಳಬೇಕಾಗಿದೆ."

ಪೂವಿ ಮಾತಾಡಲಿಲ್ಲ. ನೋಟ ಹತ್ತಿರದಲ್ಲೇ ಹರಿದಾಡಿದರೂ ಏನನ್ನೂ ನೋಡದೆ ಅಂತರ್ಮುಖಿಯಾಗಿತ್ತು. ಆನಂದ ಭಾಗ್ಯದಿಂದ ತುಂಬಿ ತುಳುಕು ತಿದ್ದ ಜೀವನ ಮೌಲ್ಯವನ್ನು ವಿಧಿಯ ಕೈಯಲ್ಲಿ ಅಡವಿಟ್ಟು ಬದುಕಿನೊಡನೆ ಹೋರಾಡುವ ಸ್ಥೈರ್ಯವನ್ನು ಮನಸ್ಸು ನೆನೆಯುತಿತ್ತು....ಕಣ್ಣು ಪುನಃ ಪುನಃ ತುಂಬಿ ಬರುತಿದ್ದುವು. ತಿಮ್ಮಯ್ಯ ತಂಗಿಯನ್ನು ಸಂತೈಸಿ, ಜೀವನದ ಪರಿಸ್ಥಿತಿಯನ್ನೂ ಭವಿಷ್ಯವನ್ನೂ ಕುರಿತು ಮನಃಪೂರ್ತಿ ಮಾತಾಡಿದ. ಇಷ್ಟೊತ್ತಾದರೂ ಮಾದು ಕಾಣಬರುದನ್ನು ನೋಡಿ ಕೇಳಿದ ತಿಮ್ಮಯ್ಯ,

"ಮಾದಯ್ಯ ಕಾಣಿಸುವುದೇ ಇಲ್ಲವಲ್ಲ ?"

"ಪೊನ್ನು ಹೋದ ಮೇಲೆ ಹಾಗೆಯೆ. ಏನೋ ಒಂದು ರೀತಿಆಗಿಬಿಟ್ಟಿ ದ್ದಾರೆ. ಹೋದರೆ ಹೋದ ಕಡೆಯೆ. ಇದ್ದರೆ ಇದ್ದ ಕಡೆಯೆ. ಅವ್ವನಿಗೆ ಅವರ ಬೆನ್ನು ಬಿಡದೆ ಕಾಯುವುದೇ ಆಗಿದೆ. ಈ ವಯಸ್ಸಿನಲ್ಲಿ ಅವರಿಗೆ ಇಂತಹ ಗೋಳು."

"ಪಾಪ .. !"

ಅದೇ ಹೊತ್ತಿನಲ್ಲಿ ಮಾದು ಕೆಳಮಟ್ಟಿಯ ಮೆಟ್ಟಿಲುಗಳನ್ನು ಹತ್ತಿ ಅಂಗಳಕ್ಕೆ ಪದಾರ್ಪಣೆ ಮಾಡಿದ.

೩೪

ಠಣ್ . ಠಣ್ . ಠಣ್ . ಠಣ್ . ಠಣ್. ಠಣ್ !

ಠಣ್ . ಠಣ್ · ಠಣ್ . ಠಣ್ . ಠಣ್ . ಠಣ್ !

ದೇವಲೋಕದ ಅಪೂರ್ವ ಕರೆಯಂತೆ...ಅಲ್ಲ, ಅಲ್ಲ, ಅಲ್ಲವೇ ಅಲ್ಲ. ಮೃತ್ಯುಲೋಕದ ಯಮಧರ್ಮನ ಕರೆಯಂತೆ ಮೊಳಗಿತು ಅದೇ ಆ ಘಂಟಾ ನಾದ! ಮತ್ತೆ ಮತ್ತೆ ಪುನಃ ಪುನಃ ಮೊಳಗುತಿತ್ತು, ದೀಕ್ಷೆ–ಕರ್ತವ್ಯಗಳ ಹೆಸರನ್ನು ಹೇಳಿ...ಹೇಳಿ...ಹೇಳಿ...

ಒಡನೆ ಎಲ್ಲರೂ ಕೆಲಸವನ್ನು ಕೈಕೊಳ್ಳಲು ಹೊರಟರು. ಅದೇ ಓಣಿ.... ಅದೇ ಒತ್ತಡ...ಅದೇ ಸುದೀರ್ಘ ಪಯಣ, ಬೂಟಿನರವ, ಮಾತಿನರವ ಕಿವಿಯ ಮೇಲೆ ಅಪ್ಪಳಿಸಿ, ಮಾಡಿಗೆ ಬಡಿದು ಸಮುದ್ರದ ಮೊರೆಯಂತೆ ಅಲ್ಲಿಂದಲ್ಲೆ ಮೊರೆಯುತಿತ್ತು. ಓಣಿಯಲ್ಲಿ ಜನ ಒತ್ತಡ ಕ್ಷಣಕ್ಷಣಕ್ಕೂ ಹೆಚ್ಚುತಿತ್ತು. ಮುಂದಿನವರ ಮಂದಗತಿ ಹಿಂದಿನವರ ಅಸಹನೆಯನ್ನು ಕೆರಳಿಸಿ ಮುನ್ನುಗ್ಗುವಂತೆ ಮಾಡಿತು. ಇಕ್ಕಟ್ಟಿನ ಸ್ಥಳದಲ್ಲಿ ಉಸಿರು ಕಟ್ಟುತಿತ್ತಾದ ಕಾರಣ ಅಲ್ಲಿ ಬಹಳ ಹೊತ್ತು ಇರುವುದೂ ಸಹ ಕಷ್ಟವೇ. ಸಿಪಾಯಿಗಳು ಒಂದೇ ಸಮನೆ ನುಗ್ಗುತಿದ್ದರು. ಎಡ ಪಕ್ಕದ ಬಾಗಿಲು ತೀವ್ರ ಒತ್ತಡಕ್ಕೆ ಸಿಕ್ಕಿ ಬಿರಾಟ ತೆಗೆದುಕೊಂಡಿತು. ಪಕ್ಕದಲ್ಲಿದ್ದ ಮುದ್ದಪ್ಪ ಅದು ಪೂರ್ತಿ ತೆಗೆದುಕೊಳ್ಳದಂತೆ ಅಲ್ಲೇ ಅದುಮಿ ಹಿಡಿದುಕೊಂಡು ಸುತ್ತ ಮುತ್ತ ದೃಷ್ಟಿಯನ್ನು ಹಾಯಿಸಿದರು. ಎಲ್ಲರೂ ಒಬ್ಬರ ಮೇಲೆ ಒಬ್ಬರು ನಗುತ್ತಲೇ ಇದ್ದಾರೆ. ಯಾರಿಗೂ ಇತ್ತ ಪರಿವೆಯೇ ಇಲ್ಲ. ಸಾಲು ಕರಗಲು ಕೊನೆಯ ಪಕ್ಷ ಅರ್ಧ ತಾಸಾದರೂ ಬೇಕು; ಮುನ್ನುಗ್ಗಲು ಸ್ಥಳ ದೊರೆಯದವನಂತೆ ಅಲ್ಲೆ ನಿಂತು ಮೈ ನಜ್ಜುಗುಜ್ಜಾಗುವಂತೆ ಬಾಗಿಲಿಗೆ ವಾಲಿ ನಿಂತ. ಹೃದಯ ಸಂಪುಟದಲ್ಲಿ ಉಸಿರು ಸಿಕ್ಕಿಕೊಂಡಂತೆ ಭಾಸವಾಯಿತು.

ಮುದ್ದಪ್ಪ ಅಡಿಗಣ್ಣಿನಿಂದ ಸಿಪಾಯಿಗಳನ್ನು ಗಮನಿಸುತಿದ್ದು ಸಮಯ ವನ್ನು ಸಾಧಿಸಿ,ಬಾಗಿಲನ್ನು ಸ್ವಲ್ಪಮಾತ್ರ ತೆರೆದು ಹೊರಬಿದ್ದು ಭದ್ರವಾಗಿ ಬಾಗಿ

ಲನ್ನು ಮುಚ್ಚಿಕೊಂಡ. 'ಅನ್ಯಮನಸ್ಕರಾದ ಸಹಪಾಠಿಗಳು ಇತ್ತ ನೋಡ ಲಿಲ್ಲ. ಆದರೇನು? ಮೈಯಲ್ಲಿ ಸೈನಿಕ ಉಡುಪು. ಅತ್ತಿತ್ತ ಹಣುಕುವುದೂ ಸಹ ಕಷ್ಟವೇ. ಆ ಹರಿದು ಮಾಸಿದ ಉಡುಪು ಎಲ್ಲಿದ್ದರೂ ಸೈನಿಕ ಖೈದಿ ಎಂಬು ದಕ್ಕೆ ಸಾಕ್ಷಿ ಕೊಡುತ್ತವೆ. ಏನು ಮಾಡುವುದೆಂದು ಯೋಚಿಸುತ್ತ ನಿಂತ. ಅಲ್ಲಲ್ಲೇ ಶೇಖರವಾದ ಮಲ ಮೂತ್ರಗಳ ದುರ್ಗಂಧ ಮೂಗಿಗೆ ಬಡಿಯು ತಿತ್ತು. ಇಲ್ಲಿಂದ ತಪ್ಪಿಸಿಕೊಂಡರೂ ಪ್ರಾಕಾರದಿಂದಾಚೆ ಹೋಗುವುದೆಂದರೆ ಪೂರ್ವಜನ್ಮ ಪಡೆದಂತೆಯೇ. ಮುಂಬಾಗಿಲ ಕಡೆ ಇಣುಕುವುದೂ ಕಷ್ಟವೇ. ಹಿಂಬಾಗಿಲ ಪರಿಚಯವಿಲ್ಲ. ಯಾವ ಕಡೆಗಿದೆ ಎಂಬುದೂ ತಿಳಿಯದು. ಅಲ್ಲಿಯ ಕೆಲಸಗಾರರ ಮಾತುಕತೆಯಿಂದ ಹಿಂಬಾಗಿಲು ಇದೆ ಎಂಬುದು ತಿಳಿದಿತ್ತು. ಆದರೆ ವಿದ್ಯುಚ್ಛಕ್ತಿಯ ತಂತಿಯ ಬೇಲಿ ಹರಿಹಾಯುವುದು ಎಲ್ಲಾದರೂ ಸಾಧ್ಯವೇ ?

ಹಾ...!

ಆ ಪ್ರಶ್ನೆಯೆದ್ದಾಗ...ಒಳ ಹೋಗಿ ಬಿಡೋಣ. ಇಲ್ಲಿಯ ಹೊಡೆತ ಬಡಿತ ತಿಂದು ಸಾಯುವುದು ಬೇಡ ; ಎಲ್ಲರಿಗೂ ಆದದ್ದು ನನಗೂ ಆಗುತ್ತೆ ಎಂಬ ವಿವೇಚನೆ ದಂಗೆ ಎದ್ದಿತು. ಆದರೆ....ಆದರೆ ಪ್ರಯತ್ನಿಸದೆ ವಿಧಿವತ್ತಾಗಿ ಹೊರಬಿದ್ದಿರುವಾಗ ಹೆದರುವುದೇಕೆ ? ಎಂಬ ಯೋಧಧೈರ್ಯ ಹೆಜ್ಜೆಗಳನ್ನು ಮುನ್ನೂಕುವುದರಲ್ಲಿಯೇ ಉದ್ಯುಕ್ತವಾಗಿದೆ. ದೃಷ್ಟಿಯ ನೇರಕ್ಕೆ ಬೃಹತ್ ವಠಾರದ ಶೂನ್ಯ ಸ್ಥಳ ಕಂಗೊಳಿಸುತಿತ್ತು. ಸಂಜೆಗತ್ತಲೆಯ ವಿರುದ ಹೋರಾಡುತ್ತ ಅಲ್ಲಲ್ಲಿ ವಿದ್ಯುದ್ದೀಪಗಳು ಉರಿಯುತಿದ್ದುವು. ಇನ್ನು ಸ್ವಲ್ಪ ಹೊತ್ತು ಕಳೆದರೆ ದೀಪಗಳ ನೆಲೆಯಿಂದ ದೂರ ದೂರವಾಗಿ ನಡೆದಲ್ಲಿ ಯಾರ ಕಣ್ಣಿಗೂ ಬೀಳಬಾರದೇನೋ....ಎಂಬ ಯೋಚನೆ. ಆದರೆ ಯಾವ ಕ್ರಮ ಕೈಕೊಳ್ಳುವುದಕ್ಕೂ ಮನಸ್ಸಾಗುತ್ತಿಲ್ಲ. ಗೋಡೆಗಾಂತು ಸ್ವಲ್ಪ ಹೊತ್ತು ನಿಂತ. ಕತ್ತಲು ವರ್ಧಿಸುವುದನ್ನು ಕಾತರಯುಕ್ತ ದೃಷ್ಟಿ ನಿಟ್ಟಿಸುತ್ತಲೇ ಇತ್ತು. ಗೇಟಿನ ಮೂಲಕ ವಿನಾ ಇನ್ನಾವ ಎಡೆಯಿಂದಲೂ ಹೊರ ಹೋಗು ವಂತಿಲ್ಲ ಎಂಬುದು ಗೊತ್ತು. ಹೊರಬಿದ್ದಾಗಿದೆ ಪಾರಾಗುವುದು ಹೇಗೆ ಎಂಬ ಯೋಚನೆ ತಲೆಯಲ್ಲಿ ಸುಳಿ ಸುತ್ತುತಿತ್ತು. ದೃಷ್ಟಿ ಹರಿಯುವಷ್ಟು ದೂರವೂ ಕಾಣಿಸುತ್ತಿರುವ ಆ ವಠಾರ ಇನ್ನೆಷ್ಟು ದೂರ ಹಬ್ಬಿದೆಯೋ ಊಹಿ

ಸುವುದು ಕಷ್ಟ, ಬಾಗಿಲ ಬಳಿಯಿಂದ ಸರಿದು ಮಹಡಿಯ ಸಾಲು ಮೆಟ್ಟಿಲುಗಳ ಅಡಿಯಲ್ಲಿ ನುಸುಳಿ ಉಸಿರು ಹಿಡಿದು ಕುಳಿತ. ಅರೆತಾಸಿನೊಳಗಾಗಿ ಕಗ್ಗತ್ತಲು ದಟ್ಟೈಸಿತು. ಅಲ್ಲಿಯ ಕೆಲಸಗಾರರು ಹಗಲಿನ ಪಾಳಿ ಮುಗಿಸಿ ಹೋಗುತಿದ್ದುದು ಕಾಣಿಸಿತು. ಒಡನೆ ಅವರು ಹಿಡಿದ ದಿಕ್ಕನ್ನು ದೃಷ್ಟಿ ಇಟ್ಟು ಗಮನಿಸಿದ. ಆದರೆ ಅವರು ಮಬ್ಬು ಬೆಳಕಿನಲ್ಲಿ ಸ್ವಲ್ಪ ದೂರ ಹೋದನಂತರ ಕಣ್ಮರೆಯಾದರು.

ಮೊದಲು ಕಾಕಿಯುಡುಪುಗಳನ್ನು ಅಡಗಿಸದ ಹೊರತು ಗತ್ಯಂತರವಿಲ್ಲ. ಅವು ಯಾರ ಕಣ್ಣಿಗೆ ಬಿದ್ದರೂ ಗುಂಡಿಗೆ ಬಲಿಯಾಗಬೇಕಾತ್ತದೆ. ಎಲ್ಲಾದರೂ ಕಳಚಿ ಬಿಸಾಡುವುದೆಂದರೂ ಒಬ್ಬ ಖೈದಿ ಓಡಿ ಹೋಗಿದ್ದಾನೆಂದು ಸಾಕ್ಷಿ ಸಹ ಕೊಡುತ್ತದೆ. ಏನು ಮಾಡಲಿ ? ಹೇಗೆ ಇದರ ಪರಿಹಾರ ?

ಆ ಗತಿಗಾಣದ ಪ್ರಶ್ನೆ ಮನವನ್ನು ಭೈರಿಗೆಯಂತೆ ಕೊರೆಯುತಿತ್ತು. ಏನೋ ಒಂದು ಬಗೆಯ ಅನಿರ್ವಚನೀಯ ಅಜ್ಞಾತ ಶಂಕೆ ವ್ಯಾಪಕವಾಗಿ ಹರಡುತಿತ್ತು. ಮೈಯಲ್ಲಿ ಕೆಲವೇ ಕೆಲವು ನಿಮಿಷಗಳ ಮೊದಲು ಧುಮಿಧುಮಿಸುತಿದ್ದ ಹುರುಪು ಮಾಯವಾಗಿ ಹೃದಯ ಮೃದಂಗ ಭಯಭೀತಿಯ ಆಗರವಾಯಿತು. ಆ ಗುಹ್ಯ ಸ್ಥಾನದಿಂದ ತಪ್ಪಿಸಿಕೊಳ್ಳಬಹುದಾದ ಹಾದಿ ಯಾವುದೋ, ದಿಕ್ಕು ದೆಸೆಗಳು ಯಾವ ಕಡೆಗಿವೆಯೋ ದೇವರಿಗೇ ಗೊತ್ತು. ಅಂಗಳದಲ್ಲಿ ದೂರದೂರದಲ್ಲಿದ್ದ ವಿದ್ಯುದ್ದೀಪಗಳು ಅಷ್ಟೇನೂ ಪ್ರಕಾಶಮಾನವಾಗಿಲ್ಲ. ಆದರೂ ಖೈದಿಯುಡುಪಿನಲ್ಲಿ ಮುಂದೆ ಹೆಜ್ಜೆಯಿಡುವುದು ಕಷ್ಟ. ಗೋಡೆಯ ಮಗ್ಗುಲಿಗೆ ಉದ್ದಕ್ಕೂ ಮೈಚಾಚಿದ ನೆರಳು ಸ್ವಲ್ಪ ಆಶಾದಾಯಕವಾಗಿತ್ತು. ಖೈದಿಗಳಿಗೆ ಊಟ ಕೊಟ್ಟು ಹೋಗುವವರೋ ಅಥವಾ ಹಗಲಿನ ಪಾಳಿ ಮುಗಿಸಿ ಹೋಗುವವರೋ ಅಲ್ಲಲ್ಲಿ ವಿರಳವಾಗಿ ಕಾಣಿಸುತ್ತಾರೆ. ಬ್ಯಾರಕ್ ಒಳಗಡೆ ಸಂತೆಯ ಗದ್ದಲಕ್ಕೂ ಮಿಾರಿದ ಸೈನಿಕರ ಮಾತಿನ ಮೊರೆತ. ಹೊರಗಡೆ ಅದಕ್ಕನುಗುಣವಾಗಿ ಕಾವಲು ಪಡೆಯ ದರ್ಪಪೂರ್ಣ ಕೂಗು ಗದ್ದಲಗಳ ಶ್ರುತಿಮೇಳ.

ಅಪೂರ್ವ ಸನ್ನಿವೇಶದಲ್ಲಿ ಉದ್ವಿಗ್ನ ಚಿತ್ತ–ಹತಬುದ್ಧಿಗಳಿಂದ ಮುದ್ದಪ್ಪ ಮಯಣದ ಮೂರ್ತಿಯಂತೆ ಮರವಟ್ಟು ನಿಂತ. ಕ್ಷಣಕ್ಷಣಗಳು ಎಣೆಯಿಲ್ಲದೆ ಕರಗಿದುವು; ನಿಮಿಷ ನಿಮಿಷಗಳು ನಿರಾತಂಕವಾಗಿ ಉರುಳಿದುವು. ದುರ್ದಮ್ಯ

ಮಾನಸಿಕ ವೇಗಕ್ಕೆ ಸಿಲುಕಿ ದೇಹದಾದ್ಯಂತ ನಸು ಕಂಪನದ ಅಲೆ ಹರಿದಾಡಿ ಹೋಯಿತು. ಮಸ್ತಕ ರಂಗದಲ್ಲಿ ಯೋಚನಾ ತರಂಗಗಳು ಮುತ್ತುತ್ತಿದ್ದುವು. ಆದರೂ ಇನ್ನು ತಡಮಾಡುವಂತಿಲ್ಲ. ಓಡಾಡುವ ಮಂದಿ ಕಣ್ಮರೆಯಾದೊಡನೆಯೇ ಕಾಕಿಯುಡುಪನ್ನು ಕಳಚಿ ಹಿಂದುಮುಂದಾಗಿ ಸಣ್ಣಗಿ ಮಡಿಚಿ, ಒಳ ಅಂಗಿಯಲ್ಲಿ ಸೇರಿಸಿದ. ಅನಂತರ ಸ್ವಲ್ಪ ಧೈರ್ಯ ಮೂಡಿತು· ಮೈಯೆಲ್ಲಾ ಮನಸ್ಸಾಗಿ–ಕಣ್ಣಾಗಿ ಹೆಜ್ಜೆ ತೆಗೆದ. ಗೋಡೆಯ ಮಗ್ಗುಲಿನ ನೆರಳಿನಲ್ಲಿ ಸ್ವಲ್ಪದೂರ ಸರಾಗವಾಗಿ ಸಾಗಿತು ಹಾದಿ. ನಸು ದೂರದಲ್ಲಿ ಯಾರೋ ಮೂವರು ಹೊಗುತಿದ್ದುದು ಕಾಣಿಸಿತು. ನಡಿಗೆಯನ್ನು ಚುರುಕುಗೊಳಿಸಿ ಅವರನ್ನು ಲಕ್ಷ್ಯವಿಟ್ಟು ಗಮನಿಸಿದ. ಅವರು ನೇರವಾಗಿ ನಡೆದನಂತರ ಬಲಕ್ಕೆ ತಿರುಗಿದರು. ಮುಂದೆ ಕಾಣಿಸಲಿಲ್ಲ. ಕಾತರ ದೃಷ್ಟಿ ನಿರಾಶೆಗೊಂಡಿತು.

ಯೋಚಿಸುವಷ್ಟು ಸಮಯವಿಲ್ಲದಿದ್ದರೂ ತಲೆಯಲ್ಲಿ ಒಳಿತು ಕೆಡುಕುಗಳ ಮಿಶ್ರಣ ತುಂಬಿ ಹೋಗಿತ್ತು. ಹೊರಬಿದ್ದಾಗಿದೆ. ಹಾದಿ ಹುಡುಕಲೇಬೇಕು. ಮೈಲಿ ಮೈಲಿ ಹಬ್ಬಿದ ಆ ಪಠಾರದಲ್ಲಿ ಹಾದಿ ಗಾಣದೆ ಎಲ್ಲಾದರೂ ನುಗ್ಗುವುದು ಅಪಾಯ ಎಂಬ ಯೋಚನೆ ತಲೆಯಲ್ಲಿ ತುಂಬಿತ್ತು. ಅದೇ ಹಾದಿ ಹಿಡಿದು ಬಲಕ್ಕೆ ತಿರುಗಿದ ಮುಂದೆ ಬಹಳ ದೂರದಲ್ಲಿ ಅತ್ಯಂತ ಎತ್ತರವಾದ ಪ್ರಾಕಾರದ ಗೋಡೆಗೆ ಹೊಂದಿದಂತೆ ಬೀಗ ಮುದ್ರಿತ ಬೃಹತ್ ಗೇಟು ಅದರ ಪಕ್ಕದಲ್ಲಿ ಚಿಕ್ಕ ಗೇಟು ಇದ್ದುದು ಕಾಣಬಂತು. ಬಾಗಿಲಿನಲ್ಲಿ ಪಹರೆಯವರು ಕಾಯುತಿದ್ದಾರೆ. ಒಳಗಡೆಯಿಂದ ಹೊರಹೋಗುವ ಕೆಲವರು ಚಿಕ್ಕ ಗೇಟಿನ ಮೂಲಕ ಹೊರಬಿದ್ದರು. ಕಾವಲಿನವರಿಗೆ ಯಾವ ಪರವಾನಗಿಯನ್ನೂ ಅವರು ತೋರದುದರಿಂದ ಪರಸ್ಪರ ಪರಿಚಯವೇ ಪರವಾನಗಿ ಎಂಬುದು ಸ್ಪಷ್ಟವಾಯಿತು....ಆಚೆಗೆ ಹೋಗಬಹುದಾದ ಇನ್ನೊಂದು ಗುಂಪು ಕಾಣಸಿಕ್ಕರೆ ಅವರೊಂದಿಗೆ ಸೇರಿಕೊಂಡು ಆಚೆಗೆ ದಾಟಿಕೊಳ್ಳಬಹುದೇನೋ ಎಂಬ ಯೋಚನೆಯಿಂದ ಮನಸ್ಸು ಪುಳಕಗೊಂಡಿತು...ದೀಪ್ತಲಲಾಟ ತುಂತುರು ತುಂತುರು ಹನಿಗಳಿಂದ ಪ್ರದೀಪ್ತವಾಯಿತು. ಕಣ್ಣುಗಳು ಪ್ರಫುಲ್ಲ ಪದ್ಮಿನಿಯಾದುವು.

ಅದೇ ಸಮಯದಲ್ಲಿ ವಿದ್ಯುಚ್ಛಕ್ತಿ ಕಡಿದು ದೀಪಗಳು ಇದ್ದಕ್ಕಿದ್ದಂತೆಯೇ ಆರಿ ಕಗ್ಗತ್ತಲಿನ ತೆರೆ ದಟ್ಟವಾಗಿ ಹಬ್ಬಿತು. ಕಣ್ಣುಗಳನ್ನು ಅರಳಿಸಿ ನೋಡಿದ. ಓಡಾಡುವ ಮಂದಿಯ ಮಸುಕು ರೂಪು, ಮಾತುಕತೆ, ಮೆಲು ನಡಿಗೆ ಗಮನಕ್ಕೆ ಬಂದಾಗ ಅಂತರಂಗ ತನ್ನನ್ನು ನಿಶ್ಶೇಷ ಭಾವನೆಯಿಂದ ಅರ್ಪಿಸಿಕೊಂಡಿತು. ನಾಲ್ಕಾರು ಮಂದಿ ಬಲಮಗ್ಗುಲಿಂದ ಗೇಟಿನ ಕಡೆಗೆ ಹೋಗುತಿದ್ದರು. ಕತ್ತಲೆಯಲ್ಲಿ ಅಭ್ಯಾಸ ಬಲದಿಂದ ನಡೆಯುತ್ತಿದುದರಿಂದ ನಡಿಗೆ ನಿಧಾನವಾಗಿತ್ತು. ಒಡನೆಯೇ ಹೃದಯ ಕುಂಡಲನಿ ಉಕ್ಕೇರಿ ಬಂತು. ಸರ್ರನೆ ಸರಿದು ಆ ಗುಂಪಿನಲ್ಲಿ ಸೇರಿಕೊಂಡ. ಕತ್ತಲೆಯಲ್ಲಿ ಹಿಂದಿಂದೆಯೇ ನಡೆಯುತಿದ್ದ ಅವನನ್ನು ಯಾರೂ ಗಮನಿಸಲಿಲ್ಲ. ಗೇಟಿನ ಬಳಿಗೆ ಹೋಗ ತ್ತಲೂ ಅವರವರು ಪರಸ್ಪರ ಮಾತಾಡಿ ಪರಿಚಯ ಹೇಳಿಕೊಂಡರು. ಕಾವಲು ಗಾರರ ಬಳಿ ಸಣ್ಣ ಟಾರ್ಚ್ ಇತ್ತು. ಮಂದ ಬೆಳಕು ಬೀರಿ ದಾರಿಗರಿಗೆ ಚಿಕ್ಕ ಗೇಟನ್ನು ತೆರೆದ. ಅವರ ಜೊತೆ ಮುದ್ದಪ್ಪ ನಿರಾತಂಕವಾಗಿ ಹೊರ ಬಿದ್ದು ಕತ್ತಲೆಯಲ್ಲಿ ಕರಗಿ ಹೋದ. ರಸ್ತೆಯಲ್ಲಿ ಜನ ಸಂದಣಿ ತುಂಬಿತ್ತು. ವಾಹನಗಳು ತೀವ್ರಗತಿಯಲ್ಲಿ ಹರಿದಾಡುತಿದ್ದುವು. ಅವುಗಳ ಪ್ರಕಾಶಮಾನ ವಾದ ಬೆಳಕು ಪಾದಚಾರಿಗಳಿಗೆ ಸಹಾಯಕವಾಗಿತ್ತು.

ಅಪರಿಚಿತ ದೇಶ....ಅಪರಿಚಿತ ಭಾಷೆ...ಅಪರಿಚಿತ ಪಥ...

ನೂರಾರು ಪಥಿಕರಲ್ಲಿ ಇವನೂ ಒಬ್ಬ. ಕಾವಲು ಪಡೆಯವರು ಹಿಂಬಾ ಲಿಸಿ ಬಂದಾರೊ ಎಂಬ ಯೋಚನೆ, ಹಿಂತಿರುಗಿ ನೋಡಿದರೆ ಪಥಿಕರಿಗೆ ಅನು ಮಾನ ಬರಬಹುದೇನೊ ಎಂಬ ಚಿಂತೆ, ಅನ್ಯ ದೇಶದಲ್ಲಿ ಕೈಯಲ್ಲಿ ಕಾಸಿಲ್ಲದೆ ಮಾಡುವುದೇನು ? ಅನ್ಯಥಾ ಹೊರಬಿದ್ದು ತಪ್ಪು ಮಾಡಿದೆ ಎಂಬ ವಿವೇಚನೆ ವಿಧಿಬಾಗಿಲು ತೆಗೆದು ಹೊರದಬ್ಬಿದೆ ಏನಾದರಾಗಲಿ ಎಂಬ ಸಮಾಧಾನ, ಅಂತಃಶಕ್ತಿಯಿಂದ ಪ್ರಭಾವಿತ ಹೆಜ್ಜೆಗಳು; ಮಸ್ತಕರಂಗದಲ್ಲಿ ಭಾವವಿಭಾವಗಳ ಅಕಾಂಡತಾಂಡವ ನೃತ್ಯ... ಏನೇ ಇದ್ದರೂ, ಆಗ ವಿಮರ್ಶಿಸುವಷ್ಟು ಸಮಯ ವಾಗಲೀ ಸಹನೆಯಾಗಲೀ ಇರಲಿಲ್ಲ, ಪಥ ಕಲ್ಪನೆ ಇರಲಿಲ್ಲವಾದರೂ ಪಥಿಕ ಹಿಂಜರಿಯುವಂತಿಲ್ಲ, ಲೋಕವಿಹಾರೀ ಸಮೀರ ಚಾಮರ ಬೀಸಿದಾಗ ಶ್ರಾಂತ ಶರೀರ ಹುರುಪುಗೊಳ್ಳುವುದು, ತುಳಿದ ಅಜ್ಞಾನ ಪಥ ನಿರ್ಜನ ಪ್ರದೇಶಕ್ಕೆ ಒಯ್ದುದರೆ ಸಾಕೆಂಬ ಹಾರೈಕೆ. ಆದರೆ ನಡೆದಷ್ಟೂ ಜನವಲಯ ಕರಗದು.

ಎಲ್ಲಿಂದ ಎಲ್ಲಿಯವರೆಗೂ ಮನೆಗಳು, ಅಂಗಡಿಗಳು, ಹೋಟೆಲುಗಳು, ಆಫೀಸುಗಳು, ಕಾರಖಾನೆಗಳು, ಭವ್ಯ ಭವನಗಳು ಇತ್ಯಾದಿ....ಇತ್ಯಾದಿ.

ಒಮ್ಮೆಂದೊಮ್ಮೆಲೇ ವಿದ್ಯುಚ್ಛಕ್ತಿಯ ದೀಪಗಳು ಧಗ್ಗನೆ ಹೊತ್ತಿ ಕೊಂಡುವು.

ಘನ ತಿಮಿರ ಸಾಮ್ರಾಜ್ಯದಲ್ಲಿ ವಿಹರಿಸಿದ ಲೋಚನಗಳನ್ನು ಪ್ರಕಾಶ ಮಾನವಾದ ಬೆಳಕು ತಿವಿದು ಬೆಳಗಿತು. ಒಂದೆರಡು ಬಾರಿ ಮುಚ್ಚಿ ತೆರೆದು ಅವು ಗಳಿಗೆ ನೆರವು ನೀಡಿದ. ಅಪರಿಚಿತ ಲೋಕ ಕಣ್ಣಿಗೆ ಬಿತ್ತು.

ಅತೀತಯುಗದ ಅತೀತಮಾರ್ಗಯೋಗದಲ್ಲಿ ಗುರಿಮುಟ್ಟುವ ನೆಚ್ಚಿಲ್ಲ ದಿದ್ದರೂ ನಡಿಗೆಯನ್ನು ನಿಧಾನಗೊಳಿಸಿದರೆ ತೇಜಸ್ಸಿಗೆ ಪೆಟ್ಟು. ಸಾಧಕ–ಬಾಧಕಗಳ ಪ್ರಕಾರದಲ್ಲೇ ಸಾಗುತ್ತದೆ ಹಾದಿ. ವರ್ಗಭೇದ–ಕಲಹಭೇದ ಗಳ ಕೂರಿಗೆ ಚುಚ್ಚುತ್ತಿರುತ್ತವೆ. ಅನೀತಿ–ಅನ್ಯಾಯಗಳ ಧೋರಣೆ ನಡೆ ಯುತ್ತಿರುತ್ತದೆ. ಆದರೂ ಮಾರ್ಗಯೋಗ ಜನ್ಮಾಂತರ ಕರ್ಮ....

ಎಲ್ಲಾದರೂ ನಾಲ್ಕಾರು ಮಂದಿಯೊಂದಿಗೆ ವಾಸಿಸಿ ನಾಲ್ಕು ಕಾಸು ಗಳಿಸಿಕೊಳ್ಳುವಂತಾದರೆ ಮಾತ್ರ ಅನಿರೀಕ್ಷಿತ ಬಿಡುಗಡೆಯಿಂದ ಪ್ರಯೋಜನ; ಇಲ್ಲದಿದ್ದಲ್ಲಿ ಜೇಲುವಾಸವೇ ಶತಪಾಲು ಉತ್ತಮ....ಆಶ್ರಯ ನೀಡುವಂತಹ ಪುಣ್ಯಾತ್ಮರು ಯಾರಾದರೂ ಲಭಿಸಿದರೆ ಭಾಗ್ಯೋದಯವಾಗುವುದು....ಮಾದೇ ವ ಅಷ್ಟು ಉಪಕಾರ ಮಾಡಿದ್ದರೆ....? ತಂದೆಯೇ ಅಷ್ಟು ಉಪಕಾರಮಾಡು!

ಅಂತರಾತ್ಮ ಎಡೆಬಿಡದೆ ಮೊರೆ ಇಡುತ್ತಲೇ ಇತ್ತು.

ತೀವ್ರಗತಿಯಲ್ಲಿ ಪಥಿಕ ಸಾಗುತ್ತಲೇ ಇದ್ದ. ಈಗೀಗ ನಡೆದೂ ನಡೆದೂ ಏದುಸಿರು ಬರತೊಡಗಿತು. ಕಾಲುಗಳು ಸೋತು ಹೋಗುತ್ತಿವೆ ; ಬಾಯೊಣಗುತ್ತಿದೆ. ಜೇಲುವಾಸ, ಕಠಿಣ ಜೀವನ, ಹೊಟ್ಟೆಗಿಲ್ಲದ ಬದುಕು ಶರೀರದ ಶಕ್ತಿಯನ್ನೆಲ್ಲ ಹಿಂಡಿ ಹಿಪ್ಪೆಯನ್ನಾಗಿಸಿದೆ ; ಇನ್ನು ಓಡುವ ತ್ರಾಣ ವಾದರೂ ಎಲ್ಲಿಂದ ಬರಬೇಕು ? ಆದರೂ ನಡಿಗೆ ಸಾಗುತಿತ್ತು. ದೂರ ದಲ್ಲೆಲ್ಲೋ ಸಿಡಿಲಿನ ಶಬ್ದ ಮೊಳಗಿದಂತೆ ಭಯಂಕರ ಸದ್ದು ಕೇಳಿಸಿತು. ಅದಕ್ಕೂ ಮಳೆಗಾಳಿಗೂ ಸಂಬಂಧವಿದ್ದಂತೆ ತೋರಲಿಲ್ಲ. ಆದರೂ ಆ ಘರ್ಜನೆ ಘನಘೋರವಾಗಿತ್ತು. ಏನಿರಬಹುದು ? ಎಂದು ಯೋಚಿಸುತ್ತಲೇ ಮುಂದು ವರಿದ. ಪಥಭ್ರಾಂತತೆಯೊಂದಿಗೆ ಮತಿಭ್ರಾಂತಿಯೂ ಉಂಟಾಯಿತು.

ಇಕ್ಕೆಲಗಳ ವಿದ್ಯುದ್ದೀಪಗಳ ಸಾಲು ಮಾರ್ಗದರ್ಶನ ಮಾಡಿಸುತ್ತಿವೆ. ಏನೇ ಇರಲಿ, ಶಸ್ತ್ರ ಕೊನೆಗಾಣುವವರೆಗೂ ನಡೆದರಾಯಿತು, ಎಂಬ ಕೆಚ್ಚು ಮೈಸೋತರೂ ವರ್ಧಿಸುತಿತ್ತು. ನೇತ್ರದ್ವಯಗಳು ಸಹಾನುಭೂತಿಯ ವರ್ಷಣದಿಂದ ತೊಯ್ದುವು. ಅನುಚಿತವಾದುದು ನಡೆದಂತೆ ಹೃದಯ ದುಃಖಿಸುತ್ತಲೇ ಇತ್ತು. ಆತಂಕಿತ ಚಿತ್ತ ಉತ್ಕ್ರಾಂತವಾಗಿ ಯೋಧ ಧೈರ್ಯವೆಲ್ಲ ಅಲ್ಲಿಂದಲ್ಲೇ ಲಯ ಹೊಂದಿದಂತೆ ತೋರುತ್ತಿದೆ....ಏತಕ್ಕಾಗಿ ಈ ಕಠಿಣ ಪರೀಕ್ಷೆಗೆ ಒಳಗಾಗುತ್ತಿರುವೆ ಎಂಬುದೂ ಸಹ ಅರ್ಥವಾಗುತ್ತಿಲ್ಲ. ಕಳವಳ–ಕಾತರ–ಕ್ಷೋಭೆಗಳು ಈ ಬಳಿಯಲ್ಲೇ ಸುಳಿಯುತ್ತಿವೆ. ಎಷ್ಟೇ ಪ್ರಯತ್ನಿಸಿದರೂ ಅವುಗಳ ಧಾಳಿಯಿಂದ ತಪ್ಪಿಸಿಕೊಳ್ಳುವಂತಿಲ್ಲ.

ಜನ ಅವಸರವಸರವಾಗಿ ಓಡಾಡುತಿದ್ದಾರೆ. ಬಾಗಿಲು ಮುಚ್ಚಲಿರುವ ಅಂಗಡಿಗಳಲ್ಲಿ ಚಟುವಟಿಕೆ ಕಡಿಮೆಯಾಗಿದೆ. ಆಗಲೇ ಕೆಲವು ಮುಚ್ಚಿವೆ. ಅನೇಕ ಮನೆಗಳ ಮುಂಬಾಗಿಲು ಹಾಕಲ್ಪಟ್ಟಿತ್ತು. ಅತ್ತಿತ್ತ ನೋಡುತ್ತ ನಡೆಯುವ ಭರದಲ್ಲಿ ಎಷ್ಟೋ ಬಾರಿ ಕಲ್ಲೆಡವಿದ. ಕಂಡರಿಯದ ಪಥದಲ್ಲಿ ದಿಕ್ಕು ದೆಶೆಗಳ ಪರಿವೆಯಿಲ್ಲದೆ ಮೈಲುಮೈಲುಗಳು ಕರಗಿದುವು. ಪೇಟೆಯ ವಲಯ ಕರಗಿದರೆ ಸಾಕು ಎಂದು ಘೀಳಿಡುತಿತ್ತು ಜೀವ. ಕ್ರಮಕ್ರಮೇಣ ಮನೆಮನೆಯ ವಿದ್ಯುದ್ದೀಪಗಳು ನಂದಿದುವು. ಸದ್ದುಗದ್ದಲ ಅಡಗಿ ನಗರ ನಿದ್ರಿಸಹತ್ತಿತು

ದೂರ ದಿಗಂತದಲ್ಲಿ ರೇಖಾಚಂದ್ರಮ ಮೂಡಿ ಬಂದ.

ಆಕಾಶ ಸರೋವರದಲ್ಲಿ ಸ್ವಚ್ಛ ನೀಲಕಾಂತಿ ಹೊಳೆಯುತಿತ್ತು.

ನಗರದ ವ್ಯಾಪ್ತಿ ಕಳೆದು ವಿದ್ಯುದ್ದೀಪಗಳು ದೂರದೂರವಾಗುತ್ತ ಕೊನೆಗೆ ಅಗೋಚರವಾದುವು. ಹೊರವಲಯ....ನಿರ್ಜನ ಪ್ರದೇಶ....ನೀರವ ಸಾಮ್ರಾಜ್ಯ....ಅತಿಯಾಗಿ ದಣಿದಿದ್ದ ಮೈ ವಿಶ್ರಾಂತಿಯನ್ನು ಬಯಸಿತು. ಮಣ್ಣಿನ ದಿಬ್ಬದ ಮೇಲೆ ಕುಸಿದ. ಒಂದೇ ಸಮನೆ ಏದುಸಿರು ಮೇಲೆ ಮೇಲೆ ಬರುತಿತ್ತು; ಮೈ ಬೆವರುತಿತ್ತು. ನರನರಗಳೂ ತುಂಡಾದಂತೆ ಉರಿಯುತ್ತಿವೆ...ಏನಾದರಾಗಲಿ ಸುರಕ್ಷಿತವಾದ ಸ್ಥಳ ಸೇರಿದೆ; ಸಾಕು ಎಂದುಕೊಳ್ಳುತ್ತ ಅಡ್ಡಾದ.

ಕತ್ತಲು....ಕತ್ತಲು....ಕಣ್ಣು ಹೊರಳಿಸಿದೆಡೆಯಲ್ಲಾ ಕತ್ತಲು ಕವಿಯು

ತ್ತದೆ. ಗಿಡಮರಗಳು ತಲೆಗೆದರಿ ನಿಂತ ಪಿಶಾಚಿಗಳಂತೆ ಕರ್ರನೆಯ ನ್ನೈ ತಳೆದಿವೆ. ಹೆಪ್ಪೊಡೆದ ಮರೆಯಿಂದ ಚಂದ್ರಮ ಹೊರಬಿದ್ದ ಮೇಲೆ ನಸು ಬೆಳಕು ಹರಿಯಿತು. ನಿಶಾಚರ ಪಕ್ಷಿಗಳು ಆಗಾಗ ಸಣ್ಣಗೆ ರೆಕ್ಕೆ ಒದರುತ್ತವೆ; ಒಮ್ಮೊಮ್ಮೆ ಕಾಡು ಬೆಕ್ಕುಗಳೂ ಕೋತಿಗಳೂ ಅರಚಿಕೊಳ್ಳುವುದು ಕೇಳಿಸುತಿತ್ತು; ಅದು ವಿನಾ ಎಲ್ಲೆಲ್ಲೂ ನಿಶ್ಶಬ್ದ. ಸ್ವಲ್ಪ ಹೊತ್ತು ಮಾತ್ರ ವಿಶ್ರಾಂತಿ ತೆಗೆದುಕೊಳ್ಳುವ ಯೋಚನೆ ಇತ್ತು. ಆದರೆ ಪ್ರಯತ್ನಿಸಿದರೂ ಏಳಲಾಗುತ್ತಿಲ್ಲ. ಹಾಗೇ ಬಿದ್ದುಕೊಂಡ. ಇನ್ನೂ ಮೇಲುಸಿರು ಮೇಲೇರಿ ಬರುತಿತ್ತು. ಹೃದಯ ವ್ಯಾಪ್ತಿಗೆ ಮೀರಿ ಮಿಡಿಯುತಿತ್ತು. ಉಷ್ಣೋಧಿಕ ಜ್ವಾಲೆಯಲ್ಲಿ ತನು ಬೇಯುತಿತ್ತು.

ಕಾಂತಿಹೀನ ಚಂದ್ರಮ...ದೇದೀಪ್ಯಮಾನ ನಕ್ಷತ್ರಗಳ ರಾಶಿ ರಾಶಿ.

ಬಾಹುಗಳು ಕತ್ತರಿಸಿದ ರೆಂಬೆಗಳಂತೆ ಎಡಬಲದಲ್ಲಿ ಬಿದ್ದಿದ್ದುವು. ಕಾಲುಗಳು ತುಂಡರಿಸಿದ ಕಂಗಿನ ತುಂಡುಗಳಂತೆ ಚಾಚಿದ್ದುವು...ಒಂದು ಕಾಲದಲ್ಲಿ ಆ ಶರೀರ, ಪದವಿಕ್ಷೇಪ, ಕಂಠಸ್ವರ, ಮಾತಿನ ಸರಣಿ, ದೀಪ್ತದೃಷ್ಟಿ ಉಡಿಗೆ ತೊಡಿಗೆ ಎಲ್ಲವೂ ಛಂದದಿಂದ ಪಡೆದಂತೆ ಛಂದೋಮಯವಾಗಿದ್ದುವು. ಇಂದು ಪರಿತ್ಯಕ್ತ ಜೀರ್ಣಿತ ಬೊಂಬೆ ಕಸದ ರಾಶಿಯನ್ನಲಂಕರಿಸಿದಂತಾಗಿತ್ತು. ಮುದ್ದಪ್ಪ ಬಹಳ ಹೊತ್ತು ಹಾಗೆ ಮಲಗಿದ- ಮನಶ್ಶಾಂತಿಯಾಗಲೀ ನಿದ್ರೆಯಾಗಲೀ ಬಳಿಯಲ್ಲಿ ಸುಳಿಯಲಿಲ್ಲ. ಕದ್ದಿಂಗಳಲ್ಲಿ ಅಸ್ಪಷ್ಟವಾಗಿ ಮೈದೋರುತಿದ್ದ ಚರಾಚರಗಳು ಮನಕ್ಕೆ ಭಯವನ್ನೂಡಿಸುತಿದ್ದುವು....ಯಾವುದೋ ಕಾಣದ ಕೈ ಹೃದಯವನ್ನು ಮೆಲ್ಲನೆಮೆಲ್ಲನೆ ಹಿಸುಕುತ್ತಿದೆ. ಎಲ್ಲಿಯದೋ ಅಸ್ಖಲಿತವಾಣಿ ಕಿವಿಯ ಸನಿಹದಲ್ಲಿಯೇ ಕೂಗಿ ಹೇಳುತ್ತಿದೆ...ಇಂದು ನಿನ್ನ ಕರಾಳ ದಿನ !

ಮುದ್ದಪ್ಪ ಜಡದೇಹಿಯಂತೆ ಬಿದ್ದಿದ್ದ. ನಿರ್ನಿಮೇಶನಯನಗಳು ಲಕ್ಷ್ಯವಿಟ್ಟು ಗಗನ ಮಂಡಲವನ್ನು ನಿಟ್ಟಿಸುತಿದ್ದುವು. ಮೇಲುಸಿರು ನಿಂತು ಉಚ್ಛ್ವಾಸ–ನಿಶ್ವಾಸಗಳು ಸರಾಗವಾಗಿ ನಡೆಯುತಿದ್ದುವು. ಆದರೂ ಏನೋ ಒಂದು ಬಗೆಯ ಸೋಲು–ಆಯಾಸ ದೇಹ ವ್ಯಾಪ್ತವಾಗಿ ಹರಡಿತ್ತು. ಪ್ರಯತ್ನಿಸಿದರೂ ಏಳಲಾಗುತ್ತಿಲ್ಲ...ಏನಾದರಾಗಲಿ. ಬ್ರಾಹ್ಮೀ ಮುಹೂರ್ತದಲ್ಲಿ ಎದ್ದರಾಯಿತು ; ಅಥವಾ ಸೂರ್ಯೋದಯಕ್ಕೆ ಸ್ವಲ್ಪ ಮುಂಚೆ ಹೊರಟರೆ

ಸಾಕು. ಒಂದು ವೇಳೆ ಸಿಕ್ಕಿಬಿದ್ದರೆ ಆರು ತಿಂಗಳೋ ವರ್ಷವೋ ಹೆಚ್ಚಾಗಿ ಬಂದೀಖಾನೆಯಲ್ಲಿಟ್ಟಾರು ಅಷ್ಟೇ ತಾನೆ ? ಈ ರೀತಿ ಕಳ್ಳಗತಿಯಲ್ಲಿರುವುದು ಎಷ್ಟು ಕಾಲ ಸಾಧ್ಯ ? ಹೀಗೆ ಅಡವಿ ಪಾಲಾಗುವುದಕ್ಕಿಂತ ಜೇಲಿನಲ್ಲಿರು ವುದು ಉತ್ತಮವಾಗಿತ್ತು ಎಂಬ ಯೋಚನೆ ಮನೋರಂಗದಲ್ಲಿ ಸುಳಿಸುತ್ತು ತಿತ್ತು. ಅಸಹನೀಯ ಅಶಾಂತಿಯಿಂದ, ಅದಮನೀಯ ಭಾವೋದ್ವೇಗದಿಂದ ರಕ್ತದ ಪ್ರತಿಕಣವೂ ತುಳುಕುತ್ತಿರುವಂತೆ ಭಾಸವಾಯಿತು. ಮಂದ ಸಮೀರ ಶೀತಲ ಚಾಮರವಾಡಿಸಿದಾಗ ಕರುಣಾದ್ರವ್ಯವೇ ಹರಿದು ಬಂದಂತಾಗಿ ಸ್ವಲ್ಪ ಹಗುರವೆನಿಸುವುದು.

ಆದರೂ ಗಂಟಲಾರಿ ಬರುತಿತ್ತು. ನಾಲಗೆಯಿಂದ ಒರಿಸಿದಷ್ಟೂ ತುಟಿಗಳು ಒಣಗುತಿದ್ದುವು. ಹೃದಯಾಂತರಾಳದಲ್ಲಿನ ಸುಪ್ತವಾಣಿ "ನೀನು ಹಿಡಿದ ಮಾರ್ಗ ಸರಿಯಲ್ಲ!" ಎನ್ನುತಿತ್ತು. ಕರ್ಣಪಟಲಗಳ ಮೇಲೆ ಅದೆ ಧ್ವನಿ ಪುನಃಪುನಃ ಪ್ರತಿಧ್ವನಿಸುತ್ತಲೇ ಇತ್ತು. ಹಾಗೇ ಯೋಚಿಸಿದ.... ಒಂದೆರಡು ಘಳಿಗೆಗಳು ನಿರಾತಂಕವಾಗಿ ಉರುಳಿದುವು.

"ಹೆಜ್ಜೆ ಮುಂದಿಟ್ಟಾಗಿದೆ, ಮತ್ತೇಕೆ ಹಿಂತೆಗೆಯುವುದು ?" ಎಂಬ ಸಮಾಧಾನ ಉದ್ಭವಿಸಿತು.

"ಒಂದಲ್ಲ ಹತ್ತಲ್ಲ ನೂರು ಬಾರಿ ಯೋಚಿಸು" ಎನ್ನುತ್ತದೆ ಅಂತರಾತ್ಮ.

"ಇನ್ನು ಯೋಚಿಸಿ ಮಾಡುವುದೇನು ? ವಿಧಿ ಹೊರದಬ್ಬಿದೆ;"

"ವಿವೇಕಕ್ಕೆ ವಿವೇಚನೆಗೆ ಎಂದೂ ಸೋಲಿಲ್ಲ."

"ಆದರೆ...."

"ಆದರೆ ಎಂದಮೇಲೆ ಅದು ಎಂದೆಂದೂ ಆದರೆಯೇ !"

"ಹಾ...ಎದೆಯಾಳದಿಂದ ನಿಟ್ಟುಸಿರೊಂದು ಹೊರಹೊಮ್ಮಿತು.

ತೀವ್ರ ಆಹತವಾದ ಚಿತ್ತ ತರ್ಕವಿತರ್ಕಗಳ ಸಮುದಾಯದಲ್ಲಿ ಸಿಕ್ಕಿ ಸ್ತಬ್ಧವಾಯಿತು. ಯೋಚನೆಯ ಭಾರದಲ್ಲಿ ಮನಃಪ್ರಾಣಗಳು ತಲ್ಲಣಿ ಸಿದುವು. ಹೊರಬಿದ್ದಿದ್ದಂತೂ ಆಯಿತು. ಇನ್ನು ಯಾವ ರೀತಿ ಈ ಜೀವನವನ್ನು ಉದ್ಧರಿಸಿಬೇಕೋ....ಎಲ್ಲಿ-ಹೇಗೆ ಪರಿಹಾರ ಕಂಡುಕೊಳ್ಳ ಬೇಕೋ ಅರ್ಥವಾಗುತ್ತಿಲ್ಲ. ಸುಮ್ಮನೆ ಹಾಗೇ ಬಿದ್ದುಕೊಂಡ. ಅದೇ ಯೋಚನೆಯಲ್ಲಿ ಉಸಿರಾಡುತಿತ್ತು ಜೀವ.

ಈ ಭವಸಾಗರದಲ್ಲಿ ಇನಿತೂ ಲಕ್ಷ್ಯವಿಲ್ಲದೆ ಹರಿಯುತ್ತಿರುವ ಅಕರ್ಮಣ್ಯ ಜೀವನಗಳೇ ಸಾರ್ಥಕವಾಗುತ್ತಿರುವಾಗ ನನ್ನದು ಆಗಲಾರದೇ ಎಂಬ ಅತೀ ದೈನ್ಯಯುತವಾದ ಪ್ರಶ್ನೆಯೂ ತಲೆಯೆತ್ತುತ್ತಿತ್ತು. ಹೃದಯದಲ್ಲಿ ಸೆಣಸಿ ಸಾಯುವ ಅಭಿಲಾಷೆ ಇಲ್ಲ ಎಂದೇನಿಲ್ಲ. ಅದೇ ಜೀವನದ ಪರಮ ಸತ್ಯ ... ಎಂಬುದು ಸಹ ಆತ್ಮಗತ. ಆದರೆ 'ಸಾವು' ಎಂಬುದು ಅಸಾರ್ಥಕವಾಗ ಬಾರದು ಎಂಬ ಅಚಲ ನಿರ್ಧಾರ ಮನದಲ್ಲಿತ್ತು.

ಸಂಕಟ–ಬಾಯಾರಿಕೆ ಅತಿಯಾಗಿತ್ತು...ಅನುಭವಿಸಲಾರದ ಅತೀವ ಆಸೆ-ನಿರಾಸೆಗಳ ಘರ್ಷಣೆಯಲ್ಲಿ ಜಠರಾಗ್ನಿ ತೀವ್ರತರವಾಗಿ ಹಬ್ಬಿ ರೋಮ ರೋಮವನ್ನೂ ಸುಡುತಿತ್ತು. ಕೆಸರಿಯಲ್ಲಿ ಮುಳುಗಿದರೂ ತಂಪಾಗಲಾರ ದೇನೋ ಎಂಬಷ್ಟು ಕಾವು. ಕೈಕಾಲು ಹತಚೇಷ್ಟವಾದಂತೆ, ಮಿತಿಮೀರಿದ ಶೈತ್ಯದಿಂದ ಜಡೀಭೂತವಾದಂತೆ ಅಲುಗಿಸಲೂ ಬಾರವು. ಈಗಲೇ ಇಷ್ಟು ಬಳಲಿರುವೆ. ಇನ್ನು ಮುಂದಿನ ಪಾಡು ಹೇಗೆ ಎಂಬ ಚಿಂತೆ ; ಹೊರ ಬಿದ್ದು ದಕ್ಕೆ ಹೇಗಾದರೂ ಸ್ವದೇಶವನ್ನು ಸೇರಿದರೆ ಸಾಕು ಎಂಬ ನೊರೆ ; ಮಡದಿ ಮಕ್ಕಳನ್ನು ಸಂಧಿಸುವ ಕಾತರ....

....ಹೊತ್ತು ನಿರಾತಂಕವಾಗಿ ಉರುಳುತಿತ್ತು.

....ಎಲ್ಲೋ ದೂರದಲ್ಲಿ ನಾಯಿಗಳ ಬೊಗಳುವಿಕೆ ಕೇಳಿಸುತಿತ್ತು.

....ಗಿಡ ಮರಗಳಲ್ಲಿ ಕುಳಿತ ಗೂಬೆಗಳ ವಿಕಾರ ಧ್ವನಿ ಕಿವಿಗಳನ್ನು ಕೊರೆಯುತ್ತದೆ.

ಮೈ ಆಯಾಸದ ಬೀಡಾಗಿದ್ದರೂ ನಯನ ಪಕ್ಷ್ಮಗಳು ಸ್ಥಿರವಾಗಿವೆ. ಖಂಡ ಖಂಡಗಳೂ ತುಂಡುತುಂಡಾದಂತೆ, ರಕ್ತದ ಕಣಕಣವೂ ತುಳುಕು ವಂತೆ ಏನೋ ಒಂದು ಬಗೆಯ ಅಪೂರ್ವ ಅನುಭವ ಮೈಯಲ್ಲಿ ಹರಿದಾಡಿತು. ಅದೃಷ್ಟವೋ ದುರದೃಷ್ಟವೋ ಯಾವುದೋ ದೇಹದಾದ್ಯಂತ ಸರ್ವಾಧಿಕಾರ ನಡೆಸುತ್ತಿದೆ. ಏನೆಂಬುದು ಅರ್ಥವಾಗುತ್ತಿಲ್ಲ....ಎಲ್ಲೋ ದೂರದಲ್ಲಿ ದಡ ದಡ ಲಟ ಲಟ ಸದ್ದು ! ಕ್ಷಣ ಕ್ಷಣಕ್ಕೂ ಅದು ಸಮೀಪಿಸುತ್ತಲೇ ಇದೆ. ದೇವರೇ ಗತಿ !

ದಡ ದಡ ದಡ ದಡ...!

ಲಟ ಲಟ ಲಟ ಲಟ....!

ಬಸ ಬಸ ಬಸ ಬಸ....!

ಮೈ ನವಿರೆದ್ದಿತು. ಭಯ ಭೀತಿಯಿಂದ ಹೃದಯ ಬಿರಿಯುವಂತಾಯಿತು. ಹಾಗೇ ಅಲುಗದೆ ಉಸಿರಿಡಿದು ದೇವರನ್ನು ಧ್ಯಾನಿಸಿದ. ಸ್ವಲ್ಪ ಹೊತ್ತಿನೊಳಗಾಗಿ ಕಾಡುಪ್ರಾಣಿಗಳೋ ಊರು ಪ್ರಾಣಿಗಳೋ ಸನಿಹದಲ್ಲಿ ಒಗ್ಗಟ್ಟಾಗಿ ಹಿಂಡು ಹಿಂಡಾಗಿ ಓಡಿ ಹೋದುದು ಅನುಭವಕ್ಕೆ ಬಂದಿತು. ಸುದೈವದಿಂದ ಅವು ಮೈಮೇಲೆ ಬೀಳಲಿಲ್ಲ. ಒಂದೆರಡು ಮೂರು ಈಕಡೆ ಬಂದಿದ್ದರೆ ತನ್ನ ಗತಿ ಮುಗಿದು ಹೋಗುತಿತ್ತು ಎನಿಸಿದಾಗ ಕೊಂಕುಳಲ್ಲಿ ಮಗುವನ್ನಾಂತ ಪೂವಿ ಸ್ಮರಣೆಯ ಹಾದಿಯಲ್ಲಿ ಮೂಡಿ ನಿಂತಳು. ಒಡನೆ ನೇತ್ರದ್ವಯಗಳು ಅಶ್ರುಪೂರ್ಣವಾದುವು. ಎದೆಯ ಕಡಲು ಉಕ್ಕೇರಿ ಬಂತು. ಆ ತ್ಯಾಗಮಯಿ ತನ್ನ ಪ್ರತೀಕ್ಷೆಯಲ್ಲಿ ಅಪಾರವಾದ ಕಷ್ಟನಷ್ಟಗಳಿಗೊಳಗಾಗಿ ಜೀವಧಾರಣೆಮಾಡಿಕೊಂಡಿರುವಾಗ ನಾನಿಂತಹ ಅಪಾಯಕ್ಕೊಳಗಾದರೆ....? ಎಂಬ ಪರಿತಾಪ ಮನಃಪ್ರಾಣಗಳನ್ನು ತುಂಬಿತು. "ತಾಯ್ನಾಡನ್ನು ಸೇರುವವರೆಗೆ ಈ ಜೀವಕ್ಕೆ ಅಪಾಯ ತರಬೇಡ ಮಾದೇವ !" ಎಂದು ತನ್ನೊಳಗೇ ಪ್ರಾರ್ಥಿಸಿಕೊಂಡ. ಕಂಬನಿಸಿಕ್ತ ಆರ್ತನೊರೆ ಮತ್ತೆಮತ್ತೆ ಹೊಮ್ಮಿತು.

ಪುನಃಪುನಃ ಯಾವುದೋ ಪ್ರಾಣಿಗಳ ಓಡಾಟ, ಬಿಸಿಯುಸಿರಿನ ಬಸ ಬಸ ಸದ್ದು, ಕಾಲ್ಗೊರಸುಗಳ ಪಟತ್ಕಾರ, ವಿಚಿತ್ರ ಕೂಗು ಕಿವಿಗಳ ಮೇಲೆ ಅವ್ಯಾಹತವಾಗಿ ಬೀಳುತಿತ್ತು. ಮುದ್ದಪ್ಪ ಬಿದ್ದ ಸ್ಥಳದಿಂದ ಎದ್ದೇಳದೆ ನಿಶ್ಚೇಷ್ಟನಂತೆ ಬಿದ್ದುಕೊಂಡು ಆಲೈಸಿದ. ಹೃದಯ ವ್ಯಾಪ್ತಿಗೆ ಮೀರಿ ಮಿಡಿಯ ಹತ್ತಿತು. ಅಂತಃಸ್ಥಲದಲ್ಲಿ ಪ್ರತಿಷ್ಠಿತ ಧೈರ್ಯ ಸಂಪುಟ ಕುಸಿಯುತ್ತಿದ್ದುದು ಅನುಭವಕ್ಕೆ ಬಂದಿತು.

ಹೊತ್ತು ಸುದೀರ್ಘವಾಗಿ ಉರುಳಿ ಬ್ರಾಹ್ಮೀ ಮುಹೂರ್ತ ಕಳೆದು ತಂಗಾಳಿಯ ಸಂಚಾರ ತೀವ್ರವಾಗ ತೊಡಗಿತು.

ಕದ್ದಿಂಗಳ ನಸು ಬೆಳಕನ್ನು ಮುಂಬೆಳಕೆಂದು ಭ್ರಮಿಸಿ ಕೆಲವು ಪಕ್ಷಿಗಳು ರೆಕ್ಕೆಗಳನ್ನು ಬಡಿದು ತಮ್ಮ ಚಟುವಟಿಕೆಯನ್ನು ತೋರಿದುವು. ಮತ್ತೆ ಕೆಲವು ಕ್ಷಣಗಳಲ್ಲಿ ಅವು ನಿದ್ದೆಗೈದುವೋ ಏನೋ. ಸದ್ದು ಹಾಗೆಯೇ ಅಡಗಿ ಹೋಯಿತು. ನಿದ್ದೆಯ ಮಂಪರ ಕಣ್ಣುಗಳನ್ನು ಮುತ್ತುತಿತ್ತು. ಆದರೂ ಕಣ್ಣು ಮುಚ್ಚುವಷ್ಟು ವ್ಯವಧಾನವಿರಲಿಲ್ಲ. ಅಪರರಾತ್ರಿ ಕಳೆಯಿತು. ವಾತಾ

ವರಣ ಅತ್ಯಂತ ಶಾಂತಶೀಲವಾಗಿತ್ತು. ಇನ್ನು ಅಲ್ಲಿಂದ ಹೊರಡುವುದು ಒಳ್ಳಿತು ಎಂಬ ಯೋಚನೆ ಮೂಡಿದರೂ ಕಂಡರಿಯದ ತಾವಿನಲ್ಲಿ, ಅದರಲ್ಲೂ ಕತ್ತಲೆಯಲ್ಲಿ ಪಯಣಿಸುವುದು ಸರಿಯಲ್ಲ ಎಂಬ ಯೋಚನೆಗೆ ಶರಣಾಗಿ ಸುಮ್ಮನಾದ. ಹೊತ್ತು ಉರುಳಿದಷ್ಟೂ ಗಾಳಿ ಶೀತಲವಾಗ ತೊಡಗಿತು. ಬೆಳಗಾಗುವುದರೊಳಗಾಗಿ ಖಾಕಿಯುಡುಪನ್ನು ಎಲ್ಲಾದರೂ ಅಡಗಿಸುವುದು ಮುಖ್ಯ. ಎಲ್ಲಾದರೂ ಕೆರೆಕಟ್ಟೆಗಳಿದ್ದರೆ ಮುಳುಗಿಸಿ ಬಿಡ ಬಹುದು. ಅಥವಾ ಒಂದು ಬೆಂಕಿಕಡ್ಡಿಯಾದರೂ ದೊರೆತಿದ್ದರೆ....?

ಆದರೆ....ಆದರೆ...ಒಳ ಉಡುಪು ಸಹ ಹರಿದು ಮಾಸಿ ಹೋಗಿವೆ. ಮೇಲಂಗಿಯಿಂದ ಮಾನವಾದರೂ ಮುಚ್ಚುತಿತ್ತು. ಅನಂತರ ಅದೂ ಇದೂ ಆ ಯೋಚನೆ ಬಂದೊಡನೆ ದೇಹದಾದ್ಯಂತ ಚಿಂತೆಯ ಅಲೆ ಹರಿದಾಡಿ, ಹೋಯಿತು. ಯಾವ ರೀತಿಯಲ್ಲಿ ಈ ಅಪಾಯದಿಂದ ಪಾರಾಗಬೇಕೋ ಬಗೆಹರಿಯುತ್ತಿಲ್ಲ. ಮೈಯ್ಯಲ್ಲಿ ರಕ್ತದ ಒತ್ತಡ ಹೆಚ್ಚಿತೋ ಏನೋ ತಲೆ ಕಲ್ಲುಹೊತ್ತಂತೆ ಭಾರವಾಯಿತು....ಉಸಿರು ಅಲ್ಲಲ್ಲೆ ಸಿಕ್ಕಿಕೊಂಡಂತೆ ಭಾಸ ವಾಯಿತು. ಏಳಲಾರದೆ ಎದ್ದು ಕುಳಿತ. ಕ್ರಿಮಿ ಕೀಟಗಳು ಕಚ್ಚಿ ಕಚ್ಚಿ ನೆತ್ತರು ಹೀರುತ್ತಿವೆ. ಕಾಡು ಪ್ರಾಣಿಗಳು ತಮ್ಮ ಸ್ವರ ವಿಶೇಷದಿಂದ ಭಯ ಚಕಿತ ಮನಕ್ಕೆ ಕಾವೂಡಿಸುತ್ತಿವೆ. ಎದ್ದು ಹೋರಾಡೋಣವೆಂಬ ಮನಸು ದಿಕ್ಕು ದೆಶೆಗಳ ಅರಿವಿಲ್ಲದೆ ಕತ್ತಲೆಯಲ್ಲಿ ಪಯಣಿಸುವಂತಿಲ್ಲ. ಸುತ್ತಮುತ್ತಿನ ಭೂವಲಯವನ್ನೂ, ಗಿಡಗೆಂಟೆಗಳ ವೈಶಿಷ್ಟ್ಯವನ್ನೂ, ಪ್ರಾಣಿವರ್ಗದ ವಿಶೇಷವನ್ನೂ ಆ ಮುಸುಕು ಬೆಳಕಿನಲ್ಲಿ ಅತ್ಯಂತ ಆಸಕ್ತಿಯಿಂದ ಗಮನಿಸಿದ. ಕ್ಷಣ ಕ್ಷಣ ಪ್ರತಿ ಕ್ಷಣ ಮುಂಬೆಳಕು ಮೂಡಣದಲ್ಲಿ ಮೈದೋರ ಹತ್ತಿತ್ತು ಆದರೂ ಎದ್ದು ಪಯಣಿಸಬೇಕಾದರೆ ಇನ್ನರ್ಧ ಗಂಟೆಯಾದರೂ ಬೇಕು. ಸಣ್ಣ ಸಣ್ಣ ಕ್ರಿಮಿಕೀಟಗಳೂ ಮೈಯ್ಯನ್ನು ಮುತ್ತುತ್ತಿದ್ದುವು. ಉಜ್ಜಿ ಹಾರಿಸಿ ದೂರಗೊಳಿಸಿದರೂ ನೆತ್ತರಿನ ಪಿಪಾಸೆ ಬಳಿಗೆ ಸೆಳೆಯುತಿತ್ತು. ಅವು ಗಳ ನಿವಾರಣೆ ಅಸಾಧ್ಯವಾದಾಗ ಅಲ್ಲಿಂದ ಎದ್ದು ಸ್ವಲ್ಪ ದೂರ ಹೋಗಿ ಕುಳಿತ. ಕಾಣದೆ ಕಲ್ಲೆಡವಿ ಉಗುರು ಹರಿಯಿತೇನೋ....ಬೆರಳು ನೋಯುತಿತ್ತು. ಆದರೆ ಅದರೆಡೆಗೆ ಗಮನ ಹರಿಸುವಷ್ಟು ಚಿತ್ತಸ್ವಾಸ್ಥ್ಯ ಇದ್ದರಷ್ಟೆ ?

ಮುಂದೇನು ?

ಪ್ರಶ್ನೆ ಮನದಲೆಗಳನ್ನು ಹೊಡೆದೆಬ್ಬಿಸಿತ್ತು. ವಿಚಾರವಾಹಿನಿ ತಲೆಯಲ್ಲಿ ಸುಳಿಸುತ್ತುತಿತ್ತು. ಉತ್ತರವಿನ್ನೂ ಸಿಕ್ಕಿರಲಿಲ್ಲ. ಎದ್ದು ಮುಂದಿನ ಪಯಣ ಕೈಕೊಂಡ ಮೂಡಣದಲ್ಲಿ ಮುಂಬೆಳಕು ಹೆಚ್ಚುತಿದ್ದಂತೆ ಪ್ರದೇಶ ಮಸುಕು ಮಸುಕಾಗಿ ದೃಗ್ಗೋಚರಿಸುತಿತ್ತು. ಬಯಲು ಪ್ರಾಂತವಾದರೂ ಕುರುಚಲು ಗಿಡಗಳು ಮುಳ್ಳುಕಂಟಿಗಳು ಕಡಿಮೆಯೇನಿಲ್ಲ. ನಡೆದಷ್ಟೂ ಮುಗಿಯದು, ಓಡಿದಷ್ಟೂ ಕಳೆಯದು ವಿದೇಶೀ ಭೂವಿಸ್ತಾರ. ದೂರದೂರ ದಿಗಂತದವರೆಗೆ ಹಬ್ಬಿದ ಪ್ರಕೃತಿಯ ಶುಭಚರಣಗಳ ನೆಲೆಯನ್ನು ನೇರ ದೃಷ್ಟಿಯಿಂದ ನಿಟ್ಟಿಸುತ್ತ ಸ್ವಪ್ನಾವೇಶದಲ್ಲಿ ನ್ಯೈಮರೆತಂತೆ ಓಡತೊಡಗಿದ.

ಪ್ರಶಾಂತ ವಾತಾವರಣ, ತಂಪೂರೆವ ತಂಬೆಲರು, ಮಂಜು ಮುಸುಕಿದ ದಿಗ್ವಲಯ, ನವ ಕುಸುಮಕುಟ್ಮಲಗಳು, ಚೈತ್ರಮಾಸದ ವೈಖರಿಯಲ್ಲಿ ಶೋಭಿಸುವ ಪ್ರಕೃತಿ....

ಆದರೂ ಹೃದಯ ಕ್ಷೇತ್ರದಲ್ಲಿ ಅದಮನೀಯ ಪ್ರಚ್ಛನ್ನಸಮರ ನಡೆಯುತಿತ್ತು.ಉದ್ದುದ್ದವಾಗಿ ಬೆಳೆದ ಅಲಕರಾಶಿ ಹಣೆಯನ್ನು ಮುಚ್ಚಿತ್ತು. ಉದ್ಬುದ್ಧ ರೋಮರಾಜಿ ಜಾಜಿಯ ಮುಳ್ಳಿನಂತೆ ನಿಮಿರಿ ನಿಂತಿವೆ. ಮೂಳೆ ಮೂಳೆಯಾದ ದೇಹ ಒಳಉಡುಪಿನಲ್ಲಿ ದಾರಿದ್ರ್ಯದೇವತೆಯನ್ನು ಪ್ರದರ್ಶಿಸಿದಂತಿತ್ತು. ಕಣ್ಣಾಲಿಗಳು ರಂಗು ಕಳೆದಿದ್ದುವು. ಕಣ್ಣಿನ ಸುತ್ತ ಕಾಡಿಗೆಯೊರೆದಂತೆ ಕಪ್ಪು ಕಡೆದು, ದುಂಡಗೆ ಊದಿಕೊಂಡಿತ್ತು. ಗಾಳಿಗಡರಿ ಹಣೆಕಣ್ಣುಗಳನ್ನು ಮುಚ್ಚುತಿದ್ದ ಅಲಕರಾಶಿಯನ್ನು ಹಿಂದಕ್ಕೆ ತಳ್ಳುತ್ತ ಮುಂದುವರಿದ. ಜಗತ್ತು ಇನ್ನೂ ಸುಖ ನಿದ್ದೆಯಲ್ಲಿರುವಾಗಲೇ ಕಾಗೆಗಳು ಎದ್ದು ಹಾರಾಟ ನಡೆಸಿವೆ. ಪಕ್ಷಿಗಳು ಗದ್ದಲವೆಬ್ಬಿಸಿವೆ. ಕೋತಿಗಳ ಹಿಂಡು ಅಲ್ಲಲ್ಲಿ ಕಾಣಸಿಗುತ್ತವೆ. ಹಳ್ಳ-ತಿಟ್ಟು, ಗಿಡ-ಮರ, ಕಾಡು-ಮೇಡು, ಗುಡ್ಡ-ಬೆಟ್ಟ, ಸಾನು ಪ್ರದೇಶದ ಸುವಿಶಾಲವಾದ ಬಂಜರು ಭೂಮಿಯ ಮೇಲೆ ದೂರ ದೂರ-ಬಹಳ ದೂರ ಸಾಗಿತು ಹಾದಿ. ಮೂಡಣದಲ್ಲಿ ಮೂಡಿ ಬಂದ ಬಾಲರವಿ ಬಾನೇರ ತೊಡಗಿದ. ಹೊಂಗಾಂತಿಯ ಹೊಂಗಿರಣಗಳ ಜಾಲ ಭುವಿಯನ್ನು ತೊಯ್ಸಿತ್ತು. ದೂರ ದೃಷ್ಟಿಯ ಕಕ್ಷೆಯಲ್ಲಿ ಮನಮೋಹಕ ಸುಂದರ ದೃಷ್ಟಿ... ದೂರ-ಬಹಳ ದೂರದಲ್ಲಿ ಪಚ್ಚವರ್ಣದ ಪುಷ್ಕರಣಿ ಶೈವಾಲ ಜಾಲಾವೃತ ಮಲಿನ ವಾರಿರಾಶಿ.

ಒಡಲ ತೃಷೆ ಕಡಲನ್ನು ಕಂಡಷ್ಟು ಹಿತವನ್ನುಂಡಿತು. ಓಡುತ್ತಲೇ ಹೋದ. ನಿರ್ಜನ–ನೀರವ–ನಿರ್ಮಲ ವಾತಾವರಣದಲ್ಲಿ ಬೀಳುವ ಒಂದೊಂದು ಪದ ಘಾತವೂ ಸತ್ ಶಾಂತಿಯ ಶಿರದ ಮೇಲೆ ಸುತ್ತಿಗೆಯ ಪೆಟ್ಟಿನಂತೆ ದಡ್ ದಡ್ಡನೆ ಬೀಳುತಿತ್ತು. ದರುಗೆಲೆಗಳ ಲರಲರ ಸದ್ದು ತಕ್ಕ ಶ್ರುತಿಯನ್ನು ಮೀಟುತಿತ್ತು. ಓಡಿ ಓಡಿ ಪುಷ್ಕರಣಿಯ ತಟಾಕವನ್ನು ತಲ್ಪಿದಾಗ ಮೇಲು ಸಿರು ತಿದಿಯೊತ್ತಿದಂತೆ ಬರುತಿತ್ತು. ತೆಪ್ಪನೆ ತುಂಡುಗಡಿದಂತೆ ತಟದಲ್ಲಿ ಕುಸಿದು ಕುಳಿತ. ನೀರಿನಮೇಲೆ ಇನಿತೂ ತಾವಿಲ್ಲದಂತೆ ಪಾಚಿ ತುಂಬಿ ಹರಡಿ ಹೆಪ್ಪುಗಟ್ಟಿತ್ತು. ಮೇಲುಸಿರು ಬಿಡುತ್ತ ಕೈಯಿಂದ ಪಾಚಿಯನ್ನು ಅತ್ತಿತ್ತ ಸರಿಸಿ ಬೊಗಸೆ ತುಂಬ ನೀರೆತ್ತಿ ಹಿಡಿದ. ನೋಡಿದರೆ ಥಳಥಳಿಸುವ ಶುದ್ಧ ವಾದ ನೀರು. ಇದುವರೆಗೆ ದುರ್ಗಂಧಯುಕ್ತ ಜಲವನ್ನು ಸೇವಿಸಿದ್ದುದರಿಂದ ಅದು ಶುದ್ಧವಾಗಿ ತೋರಿತೋ ಏನೋ....ಅಂತೂ ಪರಮ ಸಂತೋಷದಿಂದ ಎರಡೂ ಕೈಗಳಿಂದ ಬೊಗಸೆಯೆತ್ತಿ ಗಟಗಟನೆ ಹೊಟ್ಟೆ ತುಂಬ ಕುಡಿದ. ಅನಂತರ ಕಾಕಿಯುಡುಪಿನಲ್ಲಿ ಕಲ್ಲಿಟ್ಟು ಸುತ್ತಿ ಬಿಚ್ಚಿ ಹೋಗದಂತೆ ಗಂಟು ಹಾಕಿ ಕೆರೆಯ ಆಳಕ್ಕೆ ಬೀಳುವಂತೆ ಜೋರಾಗಿ ಬೀಸಿ ಎಸೆದ; ಅದು ಬಿದ್ದೊಡನೆ ಉಂಗುರುಂಗುರವಾಗಿ ಅಲೆಗಳನ್ನೇಳಿಸಿ ಗುಳುಗುಳು ಸದ್ದು ಮಾಡುತ್ತ ಮುಳುಗಿ ಹೋಯಿತು. ಒಂದು ಬಗೆಯಲ್ಲಿ ಭಾರವಿಳಿಸಿಕೊಂಡರೂ ಇನ್ನೊಂದು ಬಗೆಯಲ್ಲಿ ಇಮ್ಮಡಿ ಭಾರ ಹೊತ್ತಂತಾಗಿ ನಿಡಿದಾದ ಉಸಿರನ್ನು ಬಿಟ್ಟು, ಒಂದೆರಡು ಘಳಿಗೆ ಕಣ್ಣುಗಳನ್ನು ಮುಚ್ಚಿ ಏಕಾಗ್ರತೆಯಿಂದ ಚಿಂತಿಸಿದ. ಸುಖ–ದುಃಖಗಳನ್ನು ಬದಿಗೊತ್ತಿ ಸ್ವಲ್ಪ ಹೊತ್ತು ವಿರಾಮ ಪಡೆಯಲಾಶಿಸಿತು ಉತ್ಕ್ರಾಂತ ಚಿತ್ತ. ನಡೆದು ನಡೆದು ದಣಿದ ಕಾಲುಗಳನ್ನು ನೀರಿಗೆ ಚಾಚಿ ವಿಶ್ರಾಂತಿ ನೀಡಿದಾಗ ಇದುವರೆಗೆ ತೆಗೆದುಕೊಂಡ ಶ್ರಮವೆಲ್ಲ ಶತ್ರುವಿನಂತೆ ಮೈಮೇಲೆ ಧಾಳಿ ನಡೆಸಿತು. ಮೈಕೈ ಉರಿ–ಸೋಲು. ಅಲ್ಲೇ ಅರ್ಧ ಗಂಟೆ ಮಲಗಿ ಬಿಡೋಣ ಎಂಬಷ್ಟು ಆಯಾಸ.

ಆದರೆ...

ಹೋಗುವುದೆಲ್ಲಿಗೆ ? ಯಾವ ಹಾದಿ ಹಿಡಿಯುವುದು? ಏನು ಮಾಡಿದರೆ ಇಲ್ಲಿಂದ ಸರಾಗವಾಗಿ ಪಾರಾಗಬಲ್ಲೆ ? ಎಂಬ ಹಿಂಸ್ರ ಪ್ರಶ್ನೆ ಅಂತರಂಗ

ದಲ್ಲಿ ಮೂಡಿತ್ತು. ಭವಿತವ್ಯದ ಭವ್ಯತೆ ಕೈಬೀಸಿ ಕರೆಯುತಿತ್ತು. ಆದರೆ ಹಾದಿ ನಿಚ್ಚಳವಾಗಿ ಹೊಳೆಯದು. ಸಹಜ ಅನುಭಾವ ನಿತ್ಯ ನೂತನ ಚಿತ್ರ ವಿಚಿತ್ರ, ತರಂಗಗಳಿಗೆ ಕ್ಷಣಕ್ಷಣವೂ ತಾಕಲಾಡುವಾಗ ದುರ್ದಮನೀಯವಾದ ಮರ್ಮಾಂತಿಕ ವೇದನೆಯನ್ನು ಸಾಹಸಪೂರ್ವಕವಾಗಿ ಬದಿಗೊತ್ತಿ ಭುಗಿ ಲೇಳುತಿದ್ದ ಅಭಿಶಕ್ತಿ ಸ್ತಬ್ಧವಾದಂತೆ, ಮೇಲುಸಿರೊತ್ತಿ ಗಂಟಲು ಕಟ್ಟಿದಂತೆ ಭಾಸವಾಯಿತು. ಕಾಂತಿಯುತವಾದ ಕಣ್ಣುಗಳಲ್ಲಿ ಚಂದನಪೂರೆದಂತೆ ಲಾಲಿಮೆಯುಕ್ಕುತಿತ್ತು. ಅತ್ಯಂತ ಬಣ್ಣಗೆಟ್ಟ ಮುಖಬಿಂಬ ಮ್ಲಾನ ವಾಗಿತ್ತು...

ಅರ್ಥಹೀನ... ಶಸ್ತ್ರಹೀನ.... ನಿಸ್ಸಂಘ.... ನಿಷ್ಕಪಟ. ಆದರೇನು ? ಈ ವಿಚಿತ್ರ ಜಗತ್ತಿನಲ್ಲಿ ಅದು ಅಂತಹ ಅಮೂಲ್ಯವೇನಲ್ಲ...

ಅಶಾಶ್ವತ ಶರೀರ ವಲಯವನ್ನು ಆಶ್ರಯಿಸಿಕೊಂಡ ಜೀವ ಅನಿರೀಕ್ಷಿತ ವಾಗಿ ಅಜ್ಞಾತಭಯದಿಂದ ತಲ್ಲಣಿಸಿ ಹೋಗಿದೆ. ಎಂದೂ ಕಂಡರಿಯದ ಭಯ ಇಂದೇಕೆ ಎಂಬುದು ತನಗೇ ಅರ್ಥವಾಗುತ್ತಿಲ್ಲ. ಬೀಸುಗಾಳಿಯೊಡನೆ ಸ್ಪರ್ಧೆ ಹೂಡುವಂತೆ ಓಡತೊಡಗಿದ. ಕೆದರಿದ ಕೂದಲು, ಕೊಳಕು ಮೈ, ಉದ್ರೇಕಿತ ಮನಃಪ್ರಾಣಗಳು, ರಂಗುರಂಗಿನ ಅರಳುಗಣ್ಣುಗಳು ಪರೋಡೆ ಖೋರನಿಗೆ ಉಪಮಾನವಾಗುವಂತಿದ್ದುವು.

ಕ್ಷಣ ಕ್ಷಣಕ್ಕೂ–ಮುಂದೋಡಿದಷ್ಟೂ ವೈವಿಧ್ಯಮಯವಾಗಿ ಮೈ ದೋರುವ ಪ್ರಕೃತಿ–ಹೊಸ ಜಗತ್ತಿನ, ಹೊಸ ರೂಪಿನ, ಹೊಸ ತೇಜಸ್ಸಿನ ಮಾತೃರೂಪಿಣಿ ಆರ್ದ್ರ ಹೃದಯದಿಂದ ಕಾರುಣ್ಯಲಹರಿಯನ್ನು ಸೂಸುತಿದ್ದಾಳೆ. ಭಯಂಕರ ಮೃತ್ಯುವಿನೆಡೆಗೆ ಧಾವಿಸುವ ಸೃಷ್ಟಿಯ ವಿಚಿತ್ರ ಶಿಶುವನ್ನು ಗಮ ನಿಸಿ ಆಕೆ ವಿಶಾದಪೂರ್ಣವಾಣಿಯಲ್ಲಿ ಕೂಗಿ ಹೇಳಿದಳು"ನಿಧಾನಿಸು ಮಗುವೇ! ಈ ಜಗತ್ತಿನ ವಿಕಟ ಕರುಣಾಜನಕರಂಗ ಅನಂತವೂ ಅಭೇದ್ಯವೂ ಆದುದು!"

ವಾಣಿ ಮೊಳಗಿತು. ಸುತ್ತುಮುತ್ತಿನ ಬೆಟ್ಟಗಳು ಮರುದನಿ ಕೊಟ್ಟುವು. ಕರ್ಣಪಟಲಗಳ ಮೇಲೆ ಅದೇ ಧ್ವನಿ ಪುನಃಪುನಃ ಪ್ರತಿಧ್ವನಿಸುತ್ತಿದೆ !

ಆದರೆ ಮುಂದುವರಿಯಬೇಕೋ ಹಿಂದುಳಿಯಬೇಕೋ ಅರ್ಥವಾಗು ತ್ತಿಲ್ಲ. ಈ ಜೀವನ ನಾಟಕದ ಅಂಕ ಮೊದಲನೆಯದೂ ಅಲ್ಲ ; ಕೊನೆ ಯದೂ ಅಲ್ಲ. ತಾನೇ ತಾನಾಗಿ ಏನನ್ನೂ ನಿರ್ಧರಿಸಲಾರ ಗಾಳಿ ಬೀಸಿದೆಡೆ

ತೂರಿ ಹೋಗುವ ದರುಗೆಲೆಯಂತಾಗಿದೆ ಪರಿಸ್ಥಿತಿ. ಎಷ್ಟು ಯೋಚಿಸಿದ ರೇನು ? ಎಷ್ಟು ಚಿಂತಿಸಿದರೇನು ? ಪ್ರಕೃತಿಯಲ್ಲಿ ಭೀಭತ್ಸ ದೃಶ್ಯ ಸಲ ಸಲಕ್ಕೂ ಮೈದೋರುತ್ತಲೇ ಇರುತ್ತದೆ. ಜೀವದಯೆ–ಭ್ರಾತೃಭಾವ–ಪರೋ ಪಕಾರ–ಸಹಜೀವನ–ಧರ್ಮಾಚರಣೆ ಇಂತಿಂತಹ ವಿಚಾರಧಾರೆ ಪ್ರಪಂಚ ದಾದ್ಯಂತ ಅಂದಿಂದಿಗೂ ಹರಿಯುತ್ತಲೇ ಇದೆ. ಜ್ಞಾನನಿಧಿಯ ಭಂಡಾರ ದಿನದಿದಿನಕ್ಕೂ ಬೆಳೆಯುತ್ತಿದೆ. ಮಹದ್ಗ್ರಂಥಗಳ ಭವ್ಯ ಸೃಷ್ಟಣೆಯಾಗಿದೆ. ಮಹಾತ್ಮರುಗಳು ಅದಕ್ಕಾಗಿ ಜೀವ ತೇದಿದ್ದಾರೆ. ಆದರೆ... ಈ ಜಡಜಗತ್ತು ಎಲ್ಲವನ್ನೂ ಈ ಕಿವಿಯಿಂದ ಕೇಳಿ ಆ ಕಿವಿಯಿಂದ ಹೊರಬಿಡುತ್ತದೆ.

—ಅಂದೇ ಜನನಿ–ಕಾವೇರಿ ಅಂದದ್ದೇನು ?

"ಮಗೂ, ಅನ್ಯಥಾ ಭಾವಿಸದಿದ್ದರೆ ಒಂದು ಮಾತು ಹೇಳುವೆ. ನಮ್ಮ ಶಕ್ತಿಕಣದ ಕೊನೆಯ ತುಣುಕು ಇರುವವರೆಗೆ ಅದರ ಸದುಪಯೋಗ ಹೊಂದು ವುದೇ ಜೀವನ ಧರ್ಮ. ಅರ್ಥಾತ್ ಸ್ವಾಮಿಕಾರ್ಯ–ಸ್ವಕಾರ್ಯ ಎರಡರ ಹಿತವೂ ಒಂದಿಗೇ ಸಾಧಿತವಾದರೆ ವ್ಯಕ್ತಿಗೆ ಉತ್ತಮ ಭವಿಷ್ಯ ಮಾತ್ರವಲ್ಲ, ಪಾರಮಾರ್ಥಿಕ ಸತ್ಯವೂ ಕರತಲಾಮಲಕವಾಗುವುದು."

—ಪೂವಿಯ ವಿನಮ್ರ ವಿಶ್ಲೇಷಣೆಯೇನು ?

"ಜೀವನಧರ್ಮ ನಿಮಗೇನು ಬೋಧಿಸುತ್ತದೋ ನಮಗೂ ಅದನ್ನೇ ಬೋಧಿಸುತ್ತದೆ. ನಾನು ಹೊತ್ತ ಹೊಣೆ ನನ್ನದು ; ನೀವು ಹೊತ್ತ ಹೊಣೆ ನಿಮ್ಮದು. ಅದರಲ್ಲಿ ಲೋಪವಿರಬಾರದು."

ಹಾ...!

ಎದೆಯ ನೆಲೆಯಲ್ಲಿ ಹರಿದಾಡುವ ಬಿಸಿನೆತ್ತರು ಅಲ್ಲಲ್ಲೇ ಹೆಪ್ಪುಗಟ್ಟುತ್ತಿ ರುವಂತೆ ಭಾಸವಾಯಿತು. ನರನಾಡಿಗಳು ಕಟ್‌ಕಟ್ಟನೆ ತುಂಡುಗಡಿಯುತ್ತಿ ರುವಂತೆ ತೋರಿತು. ಅಡಿಯಿಂದ ಮುಡಿಯವರೆಗೂ ಅನಿರ್ವಚನೀಯ ಸಂಕಟಾವತರಣ. ಬಹುಶಃ ಭಗವಂತ ಸಂಕಟದಿಂದಲೇ ಈ ಶರೀರವನ್ನು ನಿರ್ಮಿಸಿದ್ದಾನೋ–ಏನೋ.

ದೂರದಲ್ಲಿ-ಹಾದಿಗಡ್ಡಲಾದ ಅತ್ಯಂತ ವೇಗಗಾಮಿನಿಯಾದ ನದಿ ಯೊಂದು ಭೋರ್ಗರೆಯುತ್ತ ಹರಿಯುತಿತ್ತು. ಹೆಬ್ಬಂಡೆಗಳಿಂದ ಕೂಡಿದ ಇಕ್ಕಟ್ಟಿನ ತಾಣ. ಗಿಡಮರಗಳಿಂದ ತುಂಬಿದ ವಿಶಾಲ ತಟಾಕದ್ವಯ.

ಕಾಲಿಟ್ಟೆಡೆ ಹೂತುಕೊಳ್ಳುವ ಮರುಳಿನ ರಾಶಿ. ಶೀತಲ ಶುಭ್ರವಾರಿ.... ನೋಡಿ ಅದೆಷ್ಟು ಆನಂದ ಮೂಡಿತೆಂದರೆ.... ಒಮ್ಮೆಂದೊಮ್ಮೆಲೇ ಕಾವೇರೀನದಿಯನ್ನು ಕಂಡಷ್ಟು ಮಹಾನಂದ-ಪವಿತ್ರ ಭಾವನೆ ಮೈಗೂಡಿಕೊಂಡುವು. ಎರಡೂ ಕೈಗಳಿಂದ ನಮಸ್ಕರಿಸಿ, ಕೈಕಾಲು ತೊಳೆದುಕೊಂಡು, ಮುಖಮಜ್ಜನಮಾಡಿ ಹೊಟ್ಟೆ ತುಂಬುವಷ್ಟು ನೀರು ಕುಡಿದು ಕಾಲುಗಳನ್ನು ನೀರಿಗೆ ಚಾಚಿ ಕುಳಿತು ಕೊಂಡ. ನೋಟ ಆ ದೃಶ್ಯಮಾನ ಜಗತ್ತಿನಲ್ಲಿ ಎವೆಯಿಕ್ಕದೆ ಹರಿದಾಡಿತು.

ನದೀಪಾತ್ರದಲ್ಲಿ ಉದ್ದಕ್ಕೂ ಅಪೂರ್ವಮರಗಳು. ಜನಗಳಾಗಲೀ ಪ್ರಾಣಿಗಳಾಗಲೀ ಓಡಾಡಿದ ಗುರುತು ಎಲ್ಲೂ ಕಾಣಿಸುತ್ತಿಲ್ಲ. ಹತ್ತಿರದಲ್ಲಿ ಯಾವ ಹಳ್ಳಿಯೂ ಇಲ್ಲವೇನೋ. ಇದ್ದಿದ್ದರೆ ಜನಜಾಪತ್ತು ಓಡಾಡಿದ ಗುರುತು ಕಂಡೇ ಕಾಣಿಸುತಿತ್ತು ಎಂಬ ಯೋಚನೆಯಿಂದ ಜನಭಯ ದೂರ ವಾಗಿ ಮನಸ್ಸಿಗೆ ಹಾಯೆನಿಸಿತು. ಇಲ್ಲೆಲ್ಲಾದರೂ ಹಣ್ಣು ಹಂಪಲು ಸಿಗು ವಂತಿದ್ದರೆ ಒಂದೆರಡು ದಿನ ಹಾಯಾಗಿ ಇಲ್ಲೇ ಕಳೆದು ಮುಂದಿನ ಪಯಣಕ್ಕೆ ಸಜ್ಜಾಗಬಹುದಿತ್ತು, ಎಂಬ ಭಾವನೆಯಿಂದ ನೋಟವನ್ನು ಗಿಡಮರಗಳ ಮೇಲೆ ಹರಿಸಿದ. ಎಲೆ ಎಲೆಯನ್ನೂ ಅರಸಿ ಅತ್ಯಂತ ನಿರಾಸೆಯಿಂದ ನೋಟ ಹಿಮ್ಮರಳಿದಾಗ ವನಪಕ್ಕಿಗಳಿಂಡಿನ ಮಧುರವಾಣಿ ಕಿವಿಗೆ ಬಿತ್ತು. ಗಮನ ವನ್ನು ಅತ್ತಲೇ ಹರಿಯಬಿಟ್ಟು ಮೂರ್ತಿಮತ್ತಾಗಿ ಕುಳಿತ. ಎದೆಯಾಳ ದಿಂದ ನಿಟ್ಟುಸಿರೊಂದು ತನಗರಿಯದಂತೆಯೇ ತಪ್ಪಿಸಿಕೊಂಡಿತು.

ಆ ನಿರ್ಜನ ಪ್ರದೇಶದಲ್ಲಿ, ನಿತಾಂತ ಸುಖಶಾಂತಿಯಲ್ಲಿ ಬದುಕು ನಿರಾಳ ವಾದರೂ ತಾನಲ್ಲಿ ಉಳಿಯುವಂತಿಲ್ಲ. ಮುಂದೇನು ಮಾಡಬೇಕೋ ಬಗೆ ಹರಿ ಯುತ್ತಿಲ್ಲ. ಹಸಿವು ಕಾಡುತಿತ್ತು. ಕ್ರಮರಹಿತ ಆಲೋಚನೆಗಳು ತಲೆ ಯನ್ನು ಮುತ್ತುತಿದ್ದುವು. ಹಣ್ಣು-ಹೀಚು-ಮಿಡಿಗಳಿಗಾಗಿ ಮತ್ತೆಮತ್ತೆ ಅರಸುತಿತ್ತು ದೀನ ನೋಟ.

ಆದರೆ....?

೩೫

....ಯಾವ ಯಾವ ಜನ್ಮಫಲಗಳಿಂದ ಉಪಾರೂಢವಾಗಿದೆಯೋ ?

...ಆದರೇನು....?

....ಮನುಷ್ಯ ಪ್ರಯತ್ನ ಅಲ್ಪವೇನೂ ಅಲ್ಲವಲ್ಲ ?

ತಾಯಿ-ಕಾವೇರೀ ನದಿ ಸಮನ್ವಿತ ಪುಣ್ಯವಾರಿಯಲ್ಲಿ ಭವಿಷ್ಯವನ್ನು ಅಡವಿಟ್ಟು, ಆಕೆಯ ಉಡಿಯಲ್ಲಿ ಅನಾಥ ಶಿಶುವಿನಂತೆ ಆಶ್ರಯ ಪಡೆದ. ಜಲರಾಶಿಯ ಮೃದು ಮಧುರ ಮಂಜುಳಗಾನದೊಂದಿಗೆ ವನವಿಹಾರೀ ಪಕ್ಷಿಗಳ ಇನಿಗಾನ. ಪುಷ್ಪಲತೆಗಳನ್ನು ಸುತ್ತುವರಿದ ಮಧುಕರ ಶ್ರೇಣಿ. ಘ್ರಾಣೇಂದ್ರಿಯವನ್ನು ಮನಸ್ಸೀ ಮುತ್ತುವ ಅಪೂರ್ವ ಪುಷ್ಪಸೌರಭ. ಝುಂಝಾವಿಲೋಡಿತ ದರುಗೆಲೆಗಳ ಅವಿರಲ ವರ್ಷಣ. ಆ ಅತ್ಯಂತ ಮನಮೋಹಕ ವಾತಾವರಣದಲ್ಲಿ ಮುದ್ದಪ್ಪ ಮೈಮರೆತ. ರಾಗಮಯ ದೇವತೆಯ ಸಾಕ್ಷಾತ್ಕಾರದಲ್ಲಿ ಹೃದಯ ತುಂಬಿ ಬಂತು. ಮಂತ್ರಮುಗ್ಧ ವಿಶೇಷ ವೈಖರಿಯಲ್ಲಿ ಅದೆಷ್ಟು ಹೊತ್ತು ಉರುಳಿತೋ. ನದಿನೀರಿನಲ್ಲಿ ಕಸಕಡ್ಡಿಗಳು ತೇಲಿ ಹೋಗುತಿದ್ದುವು. ಫೇನಪುಂಜರಾಶಿ ಅಲ್ಲಲ್ಲಿ ಹೆಪ್ಪುಗಟ್ಟಿದಂತೆ ತೋರುತಿತ್ತು. ಎದ್ದು ಈಜಾಡಿ ಸ್ನಾನಮಾಡಿ ತೀರಕ್ಕೆ ಬಂದು ಬಟ್ಟೆಗಳನ್ನು ಒಗೆದು ಹಿಂಡಿ ತೊಟ್ಟುಕೊಂಡ. ಬಹುಶಃ ಭಾರತಗಡಿ ದಾಟಿದ ಮೇಲೆ ಅಂತಹ ಶುಭ್ರಸ್ನಾನ ದೊರೆತಿರಲಿಲ್ಲವೇನೋ...

ಹೊಟ್ಟೆ ಹಿಡಿಯುವಷ್ಟು ನೀರು ಕುಡಿದಿದ್ದುದರಿಂದ ಹಸಿವು ಅಷ್ಟಾಗಿ ಕಾಣಿಸುತ್ತಿರಲಿಲ್ಲ. ಅಲ್ಲಿಂದೆದ್ದು ನದೀ ಪಾತ್ರದಲ್ಲಿಯೇ ನಡೆದು ಹೋಗುವ ಮನಸ್ಸಾಯಿತು. ಮೇಲ್ಗಡೆ ಹೋಗಲೇ ಕೆಳಗಡೆ ಹೋಗಲೇ ಎಂಬ ಪ್ರಶ್ನೆ ಮೂಡಿ ಸ್ವಲ್ಪ ಹೊತ್ತು ಯೋಚಿಸಿದ. ಏರುಮುಖವಾಗಿ ನಡೆಯುವುದಕ್ಕಿಂತ ಇಳಿಮುಖವಾಗಿ ನಡೆಯುವುದು ಸುಲಭವಾದುದರಿಂದಲೋ ಏನೋ. ಆದೇಶವೀಯದಿದ್ದರೂ ಕಾಲುಗಳು ಅತ್ತಲೇ ನಡೆದುವು. ಉದ್ದಕ್ಕೂ ನದೀ

ಪಾತ್ರದ ಹೆಮ್ಮರಗಳ ಸಾಲು, ತಣ್ಣನೆಯ ತಂಪು ಪ್ರದೇಶ. ವಾರಿಧಾರೆಯ ಜುಳು ಜುಳು ಮಂಜುಳಗಾನ:

ನಡಿಗೆ ನಿರಾತಂಕವಾಗಿ ಸಾಗಿ ಮೈಲು ಮೈಲುಗಳು ಕರಗಿದುವು.

ಆದರೆ, ಆ ಜೀರ್ಣಿತ ರೂಪು ಗಂಗೆಯ ತಡಿಯಲ್ಲಿ ಓಡೋಡಿ ಬರುತಿದ್ದ ಶಿಷ್ಯ ಪೀಡಕನಾದ ಕುಕರ್ಮಿಗೆ ಉಪಮಾನವಾಗುವಂತಿತ್ತು.

ಹಣೆಯ ಮೇಲೆ ತುಂತುರು ತುಂತುರಾಗಿ ಮೂಡಿದ ಬೆವರಿನ ಬಿಂದುಗಳು ಧಾರೆ ಧಾರೆಯಾಗಿ ಇಳಿದುವು. ತಂಪಿನಾಗರದಲ್ಲಿ ಹೆಚ್ಚು ಆಯಾಸ ತೋರ ಲಿಲ್ಲವಾದ್ದರಿಂದ ತನ್ನ ನಡಿಗೆ ನಿಧಾನವಾಗಿದ್ದು ಹಾದಿ ಸಾಗುತ್ತಲೇ ಇಲ್ಲ ಎಂಬ ಭಾವನೆಯೇ ಹೊರತು ಕಳೆದ ಹಾದಿಯ ಪರಿವೇ ಇಲ್ಲ. ದೂರದೃಷ್ಟಿ ಜಾಗೃತಚಿತ್ತ ಮೈಗಾವಲಾಗಿವೆ. ಕ್ರಮರಹಿತ ಆಲೋಚನೆಗಳ ಹಿಂಡು ಮಸ್ತಿಷ್ಕವನ್ನು ತುಂಬಿ ಧಾಳಿ ನಡೆಸುತ್ತಿವೆ. ಆದರೆ ಯಾವುದೂ ತಲೆಯಲ್ಲಿ ನೆಲೆಗಾಣಲಿಲ್ಲ. ಚಿಂತಾಭಾರದಿಂದ ಶರೀರ ಒಮ್ಮೊಮ್ಮೆ ಡೋಲಾಯಮಾನ ವಾಗುತ್ತಿರುವಂತೆ ಉದ್ಭಾಸಿತವಾಗುತಿತ್ತು.

ಕ್ಹೂಊಊ !

ಎಲ್ಲೋ ದೂರದಲ್ಲಿ ರೈಲಿನ ಕೂಗು ! ನಿಶ್ಯಬ್ದತೆಯ ಅಭಿವ್ಯಕ್ತಿಯನ್ನು ಕಡಿದು ಕೋರೈಸುವಂತೆ ಪುನಃಪುನಃ ಮೊಳಗಿತು ಅದೇ ಕೂಗು ! ಸದ್ದು ಮೊಳಗಿದೆಡೆಗೆ ನೋಟ ತಟ್ಟನೆ ಹರಿಯಿತು. ಎಲ್ಲಿ ನೋಡಿದರೂ ಎಷ್ಟೆಷ್ಟು ಅರಸಿದರೂ ರೈಲಾಗಲೀ ಅದರ ಹಳಿಗಳಾಗಲೀ ಕಂಗೊಳಿಸುತ್ತಲೇ ಇಲ್ಲ. ಕ್ಷಣಕ್ಷಣಕ್ಕೂ ಸದ್ದು ಹತ್ತಿರ ಹತ್ತಿರ ಐತರುತಿತ್ತು. ಬಹುಶಃ ಸ್ವಲ್ಪ ತಗ್ಗು ಪ್ರದೇಶದಲ್ಲಿ ಹಳಿ ಹರಿದಿರಬಹುದು ಎಂದುಕೊಂಡ. ಅವನ ಊಹೆ ನಿಜ ವಾಗಿತ್ತು. ದೂರ ಬೆಟ್ಟದ ತಪ್ಪಲಲ್ಲಿ ಹರಿದ ಹಳಿ ದೃಷ್ಟಿಯ ಮಟ್ಟಕ್ಕಿಂತ ಸ್ವಲ್ಪ ತಗ್ಗಿನಲ್ಲಿತ್ತು. ಕೆಲವು ಸಮಯದ ನಂತರ ಗುಜುಗುಜು ಸದ್ದು ಸ್ಪಷ್ಟ ವಾಗುತ್ತಾ ಬಂದು ದೂರದಲ್ಲಿ ರೈಲು ಸಿಂಗಳ ಕಾಯದಲ್ಲಿ ಕಾಣಿಸಿಕೊಂಡಿತು, ಪಕ್ಕದಲ್ಲಿದ್ದ ಕುರುಚಲುಗಿಡಗಳ ಬುಡದಲ್ಲಿ ಅಡಗಿ ಕುಳಿತು ಅತ್ತ ದೃಷ್ಟಿ ಯನ್ನು ಹಾಯಿಸಿದ. ಪ್ರೌಢಾರುಣನ ಪೀತಾಭರಶ್ಮಿಯ ಸಂಸರ್ಗದಿಂದ ಥಳ ಥಳಿಸುತ್ತ ಹೊನ್ನಿನ ಜಾಲದಲ್ಲಿ ನಿರ್ಮಿತ ಕೆಂಪಿನ ಕಂಠಾಭರಣದಂತೆ ಕಂಡು ಬಂದ ರೈಲಿನ ಸುಂದರ ದೃಶ್ಯ ದರ್ಶನೀಯವಾಗಿತ್ತು. ಅದನ್ನೇ ನೆಟ್ಟ ದೃಷ್ಟಿ

ಯಿಂದ ಎವೆಯಿಕ್ಕದೆ ನೋಡಿದ. ಯುದ್ಧಖೈದಿಯಾದಾಗಿನಿಂದ ಹೊರ ಪ್ರಪಂಚದ ಸಂಸ್ರವವೇ ಇಲ್ಲದಿದ್ದ ಮನಃಪ್ರಾಣಗಳು ಪುಳಕಿತಗೊಂಡಿದ್ದುವು. ಸ್ವಾತಂತ್ರ್ಯಕ್ಕಾಗಿ, ಮಾನವತೆಯ ನಿಜಜೀವನಕ್ಕಾಗಿ ಬೌದ್ಧಿಕ ಶಕ್ತಿ ಕಾತರಿಸಿ ಅನಿರೀಕ್ಷಿತವಾಗಿ ಸ್ಥೂಲಸ್ಥೂಲ ಅಶ್ರುಬಿಂದುಗಳು ಒಂದರ ಹಿಂದೆ ಒಂದ ರಂತೆ ಉರುಳಿದುವು. ಮರುಘಳಿಗೆಯಲ್ಲಿ ತನ್ನ ಹತೋಟಿ ತಪ್ಪಿದುದರ ಅರಿವು ಮೂಡಿ "ಛಿ !" ಎನ್ನಿಸಿತು. ಒಡನೆ ಎರಡೂ ಕೈಗಳಿಂದ ಕಣ್ಣುಗಳನ್ನು ತೀಡಿಕೊಂಡ. ಭಾರವಾದ ಹೃದಯದಿಂದ ನೀಳವಾದ ನಿಟ್ಟುಸಿರು ತಪ್ಪಿಸಿ ಕೊಂಡಿತು. ಸರಾಗವಾಗಿ ಉಸಿರಾಡುತ್ತ ತುಂಬುಗಣ್ಣಿನ ನೋಟವನ್ನು ಸುತ್ತ ಮುತ್ತ ಹರಿಸಿದ. ಆ ಉದ್ದಾಮ ಮನೋಹರ ದೃಶ್ಯ ಚಿಂತಾಪಾರಾಯಣತೆ ಯಲ್ಲಿ ಮನಸ್ಸಿಗೆ ಹಿತವನ್ನುಂಟುಮಾಡುವಂತಿತ್ತು. ಶಾಂತಶೀತಲ ಪ್ರಕೃತಿಯ ನಿಮ್ನೋನ್ನತ ಹಸುರು ಪ್ರಾಂತದಲ್ಲಿ ಹರಿಯುವ ರೈಲು ಬುಸುಗುಟ್ಟುವ ಹೆಬ್ಬಾವಿನಂತೆ ಕಂಗೊಳಿಸುತಿತ್ತು. ಶೀಘ್ರಗತಿಯಲ್ಲಿ ಓಡುತಿದ್ದ ಅದು ದೂರ ಸೀಮಾ ಕ್ಷೇತ್ರವನ್ನು ಹೊಕ್ಕು ಮಾಯವಾಯಿತು.

ಕ್ಕುಊಊ ! ಕ್ಕೂಊಊಊ !

ದೂರ ಪ್ರಾಂತ್ಯದಲ್ಲಿ ಮೊಳಗಿದ ಆ ಅಸ್ಖಲಿತವಾಣಿ ಯಾವ ಮಹಿಮಾ ಮಯ ಮಂತ್ರವನ್ನು ಬಿತ್ತರಿಸಿತೋ ಏನೋ. ಮನಃಪ್ರಾಣಗಳಲ್ಲಿ ನವ ಚೇತನದ ಸಂಚಾರ ಸರ್ರನೆ ಆರಂಭವಾಯಿತು. ಮೈ ರೋಮ ರೋಮಗಳೂ ನಿಮಿರಿ ನಿಂತುವು. ನೋಟ ದೂರದಲ್ಲಿ ಚಲಿಸುತಿತ್ತು. ಎಲ್ಲಿಂದಲೋ ಒದಗಿಬಂದ ದುರ್ದಮ್ಯಶಕ್ತಿ ದುರ್ವಿಧಿಯ ಪಾಶದಂತೆ ಎಳೆಯುತಿತ್ತು. ಹುರು ಪಿನಿಂದ ಮುನ್ನಡೆದು ಹಸಿವಿನಿಂದ ಬಳಲಿದ್ದರೂ ಶರೀರ ಹಗುರವಾಯಿತು. ಏಕನಿಷ್ಠೆಯಿಂದ ಸಾಗಿತು ಹಾದಿ.

ಅಂತೂ, ಜಗ್ಗದೆ ಬಹುದೂರ ನಡೆದಮೇಲೆ ದೂರದಲ್ಲಿ ಹೆಂಚಿನ ಮಾಡುಗಳ ಗುಂಪು ಕಾಣಿಸಿತು...ಬಹುಶಃ ನಿಲ್ದಾಣವೇ ಇರಬೇಕು. ಅಲ್ಲಿಗೆ ಹೋಗಲೋ ಬೇಡವೋ ಎಂಬ ದ್ವೈದೀಭಾವವಿಭಾವಗಳ ತಾನವಿತಾನದಲ್ಲಿ ಸ್ವಲ್ಪಹೊತ್ತು ಮುಂದುವರಿಯದೆ ನಿಂತ. ಸಣ್ಣಗೆ ತಲೆ ತಿರುಗುತ್ತಿರುವಂತೆ ಭಾಸವಾಯಿತು.

....ಹೋಗದಿದ್ದರೆ ಹೇಗೆ ? ಎಷ್ಟು ಕಾಲ ನದೀಪಾತ್ರದಲ್ಲಿರಲಾದೀತು ? ಜನವಸತಿ ಇರುವೆಡೆ ಇದ್ದು ದುಡಿದು ನಾಲ್ಕು ಕಾಸು ಗಳಿಸಿಕೊಳ್ಳದ ಹೊರತು ಭಾರತಕ್ಕೆ ಹಿಂದಿರುಗುವುದು ಹೇಗೆ ? ಇಲ್ಲಿದ್ದು ಮಾಡುವುದೇನು ?

ಆ ಪ್ರಶ್ನೆಗಳೆದ್ದೊಡನೆಯೇ ಧೂರ್ತಧೈರ್ಯದಿಂದ ಹೆಜ್ಜೆ ತೆಗೆದ. ಸ್ವಲ್ಪ ಹೊತ್ತಿನೊಳಗಾಗಿ ತಾಣ ಹತ್ತಿರವಾಗತೊಡಗಿತು. ಅನಂತರ ಅಲ್ಲಿ ಓಡಾಡುವ ಜನ ಕಣ್ಣಿಗೆ ಬಿದ್ದರು. ಸ್ವಲ್ಪ ಸಮೀಪಕ್ಕೈದುತ್ತಲೂ ಏನೋ ಒಂದು ರೀತಿಯ ಅಳಕು ಎದೆಯಲ್ಲಿ ಮೂಡಿ ಹೃದಯವ್ಯಾಪ್ತಿಗೆ ಮೀರಿ ಮಿಡಿಯಹತ್ತಿತು. ಆದರೆ, ಕಳ್ಳರಂತೆ ಕಳ್ಳಗತಿಯಲ್ಲಿ–ಅಶಕ್ತರಂತೆ ಕರುಣಾಜನಕ ರೀತಿಯಲ್ಲಿ ಖಂಡಿತ ಸಾನಿರಲಾರೆ, ಮೈಯಲ್ಲಿ ರಕ್ತದ ಕೊನೆಯ ಕಣ ಇರುವತನಕ ಯೋಧನಂತೆ ಮುನ್ನುಗ್ಗಿ ಯೋಧನಂತೆಯೇ ಸಾಯುವೆ....ಅಂದುಕೊಂಡ. ಆ ಕ್ಷಣ ವಿಚಿತ್ರ ಆನಂದ ದೀಪ್ತಿಯಿಂದ ಕಣ್ಣುಗಳು ಪ್ರದೀಪ್ತವಾದುವು. ಯೋಧಗತಿಯಲ್ಲಿ ಮುಂದಡಿ ಇಟ್ಟ.

ಅದೊಂದು ಚಿಕ್ಕ ನಿಲ್ದಾಣ. ಜನವಸತಿಯು ಹೆಚ್ಚೇನಿರಲಿಲ್ಲ. ನೂರಿನ್ನೂರು ಮನೆಗಳಿದ್ದರೆ ಹೆಚ್ಚು. ಎಲ್ಲವೂ ಸರ್ವೇಸಾಮಾನ್ಯ ಮನೆಗಳು. ಹೆಚ್ಚು ಚಟುವಟಿಕೆಯೂ ಕಾಣಿಸುತ್ತಿಲ್ಲ. ನಿಲ್ದಾಣದಲ್ಲಿ ಗಂಟುಮೂಟೆ ಇಳಿಸಿದರೆ ಒಂದೆರಡು ಡಾಲರ್‌ಗಳನ್ನು ಸಂಪಾದಿಸಿಕೊಳ್ಳಬಹುದು ಎಂಬ ಯೋಚನೆಯಿಂದ ಅಲ್ಲಿಗೆ ಹೋದ. ರೈಲು ಆಗಲೇ ಹೊರಟು ಹೋಗಿದ್ದುದರಿಂದ ನಿಲ್ದಾಣದಲ್ಲಿ ಕೆಲಸವೇನೂ ಇರಲಿಲ್ಲ. ದೇಶೀಯರು ಈತನನ್ನು ಗಣನೆಗೆ ತೆಗೆದುಕೊಳ್ಳದೆ ತಮ್ಮ ತಮ್ಮ ಕೆಲಸದಲ್ಲಿ ಕ್ರಮಶಃ ನಿಮಗ್ನರಾಗಿದ್ದರು. ಅವರಲ್ಲಿಗೆ ಹೋಗಿ ವಿನಮ್ರನಾಗಿ ತಾನು ಕೆಲಸಮಾಡುವುದಾಗಿ ಇಂಗ್ಲಿಷಿನಲ್ಲಿ ಕೇಳಿಕೊಂಡ. ಭಾಷೆ ತಿಳಿಯದ ಆ ಗ್ರಾಮ್ಯ ಮಂದಿ ಗಮನಿಸಲಿಲ್ಲ. ಸ್ವಲ್ಪ ಹೊತ್ತು ರಸ್ತೆಯ ಬದಿಯಲ್ಲಿ ನಿಂತ. ಸುರಿವ ಸ್ವೇದಧಾರೆಯಿಂದ ಮುಖ ಮೈ ಸಿಕ್ತವಾಯಿತು. ಹಾಗೇ ಯೋಚಿಸಿ ಯಾಂತ್ರಿಕವಾಗಿ ಊರೊಳಗೆ ಹೆಜ್ಜೆ ಹಾಕಿದ. ನಾಲ್ಕೈದು ಸುತ್ತು ಸುತ್ತುವುದರೊಳಗಾಗಿ ಅದರ ವ್ಯಾಪ್ತಿ ಮುಗಿದು ಹೋಯಿತು.

ಊರಿನ ಮಧ್ಯೆ ರಸ್ತೆಯ ಬದಿಯಲ್ಲಿ ಹೊಸ ಮನೆಯೊಂದನ್ನು ಕಟ್ಟಲಾಗುತಿತ್ತು. ಅಲ್ಲಿ ಹಲವಾರು ಮಂದಿ ಕೆಲಸ ಮಾಡುತಿದ್ದರು. ಅವರನ್ನು

ನೋಡಿದೊಡನೆಯೇ ಮನದಲ್ಲಿ ಆಶಾಂಕುರವಾಯಿತು. ಅವರ ಬಳಿಗೆ ಹೋಗಿ ಇಂಗ್ಲಿಷಿನಲ್ಲಿ ಅನುನಯದಿಂದ ಕೇಳಿದ ಮುದ್ದಪ್ಪ,

"ದಯವಿಟ್ಟು ಸ್ವಲ್ಪ ಈಕಡೆ ಗಮನ ಕೊಡುವಿರಾ ?"

ಅವರು ಮಾತಾಡದೆ ಮಿಕಿಮಿಕಿ ನೋಡಿದರು.

ಮುದ್ದಪ್ಪ ಪುನಃ ಅಂಗಲಾಚಿದ.

ಇಟ್ಟಿಗೆಗಳನ್ನು ಕಟ್ಟಡದ ಮೇಲಕ್ಕೆ ಒಯ್ಯುತ್ತಿದ್ದ ಹುಡುಗನೊಬ್ಬ ಅಪರಿಚಿತನನ್ನು ಕಂಡು ಅನುಮಾನಪೂರ್ವಕವಾಗಿ ನಿಟ್ಟಿಸಿ ನೋಡುತ್ತತುಂಡು ತುಂಡು ಇಂಗ್ಲಿಷಿನಲ್ಲಿ ಕೇಳಿದ,

"ಏನಪ್ಪಾ, ಇಲ್ಲಿ ಏಕೆ ನಿಂತಿದ್ದಿ ?"

"ಕೆಲಸ ಹುಡುಕಿಕೊಂಡು ಬಂದಿರುವೆ....ನೀವು ಕೂಲಿ ಕೊಡುವಿರಾದರೆ ಮಾಡುವೆ."

"ಯಜಮಾನ ಈಗ ಇಲ್ಲ. ಮನೆಗೆ ಹೋಗಿದ್ದಾರೆ."

"ಯಾವಾಗ ಬರುತ್ತಾರೆ ?"

"ಸ್ವಲ್ಪ ಹೊತ್ತಿನನಂತರ ಬರಬಹುದು."

"ದಯವಿಟ್ಟು ನನಗೆ ಕೆಲಸಕೊಡಿಸಿ ಉಪಕಾರ ಮಾಡಿರಿ. ನನಗೆ ಕೆಲಸ ವಿಲ್ಲದೆ ತೊಂದರೆಯಾಗಿದೆ." ದನಿಯಲ್ಲಿ ದೈನ್ಯತೆಯ ತನಿರಸ ಹರಿದು ಬಂತು.

ಹುಡುಗ ಹೊಸಬನ ಸ್ಥಿತಿಗತಿಯನ್ನು ಒಂದೆರಡು ಘಳಿಗೆ ಅವಲೋಕಿಸಿದ. ಹೃದಯ ದ್ರವಿತ ಮಂಜಿನಂತಾಯಿತು. ಸ್ವಲ್ಪಯೋಚಿಸಿ "ಸ್ವಲ್ಪ ಹೊತ್ತು ಇರು, ನೋಡೋಣ." ಎಂದ.

ಅಲ್ಲಿಯಾರೂ ಅನುಮಾನಿಸಲಿಲ್ಲವಾದುದರಿಂದ ಮುದ್ದಪ್ಪ ಎಲ್ಲರೊಂದಿಗೆ ನಿರ್ಭಯದಿಂದ ವ್ಯವಹರಿಸಲು ಮುಂದಾದ. ತನ್ನ ಗ್ರಹಗಣಗಳು ಪ್ರಸನ್ನವಾಗಿದ್ದಂತೆ ತೋರಿತು. ಹೇಗಾದರೂ ಮಾದೇವ ಪಾರು ಮಾಡಿದರೆ ಸಾಕು ಎನ್ನಿಸಿ ಆಶಾಭರಿತ ಲೋಚನಗಳಿಂದ ಯಜಮಾನನ ಆಗಮನವನ್ನು ಎದುರು ನೋಡುತ್ತ ಕುಳಿತುಕೊಂಡ.

ಸ್ವಲ್ಪಹೊತ್ತು ನಿರಾತಂಕವಾಗಿ ಉರುಳಿತು.

ಅತ್ಯಂತ ವಿಮನಸ್ಕನಾಗಿದ್ದ ಮುದ್ದಪ್ಪ ಭಯಂಕರ ಜಠರಾಗ್ನಿಯಲ್ಲಿ ಬೇಯುತಿದ್ದ. ಹಸಿವಿನ ಬೇಗೆಯಿಂದ ನರನರಗಳೂ ಸುಟ್ಟು ಸಂಕುಚಿತ

ಗೊಳ್ಳುತ್ತಿರುವಂತೆ ಭಾಸವಾಗುತಿತ್ತು. ಹಣೆಯ ಮೇಲೆ ಸಹಸ್ರ ಸಹಸ್ರ ಹನಿಗಳಾಗಿ ಮೂಡಿದ್ದ ಶ್ರಮಬಿಂದುಗಳು ಧಾರೆಧಾರೆಯಾಗಿ ಇಳಿಯುತ್ತಿದ್ದುವು.

ಹುಡುಗ ಇಟ್ಟಿಗೆಗಳನ್ನು ತೆಗೆದುಕೊಂಡು ಅಟ್ಟಣೆಯನ್ನು ಏರಿ ಮೇಲೆ ಹೋದ. ನೋಟ ಅವನನ್ನು ಹಿಂಬಾಲಿಸಿತು. ಕೆಲಸಗಾರರ ಕುತೂಹಲ ತೃಷಿತ ನೋಟ ಆಗುಂತಕನ ಮೇಲೆ ಆಗಾಗ ಹರಿಯುತಿತ್ತು. "ಯಾರೋ ವಿಚಿತ್ರ ವ್ಯಕ್ತಿ" ಎಂಬ ಚಿಂತನೆಯಲ್ಲಿ ಕೆಲಸವು ಸಾಗುತಿತ್ತು. ಅರ್ಧ ತಾಸು ಕಳೆದನಂತರ ಆ ಗುಂಪಿನ ಒಡೆಯ ಬಂದ. ಹುಡುಗ ಒಡೆಯನ ದನಿ ಕೇಳಿ ದೊಡನೆಯೇ ಕೆಳಗಡೆ ಬಂದ ಅಪರಿಚಿತ ವ್ಯಕ್ತಿಯ ವಿಚಾರವನ್ನು ವರದಿ ಮಾಡಿದ. ವಿಷಯ ತಿಳಿದ ಯಜಮಾನ ಅತ್ಯಂತ ಆಸಕ್ತಿಯಿಂದ ಬಳಿಗೆ ಬಂದು ಕೇಳಿದ,

"ಏನಪ್ಪಾ, ಯಾರಿಗಾಗಿ ಕಾಯುತಿದ್ದಿ ?"

"ಯಜಮಾನನಿಗಾಗಿ...."

"ನಾನೇ ಯಜಮಾನ ...ಏನು ಬೇಕು ಹೇಳು ?"

"ನೀವು ಕೆಲಸ ಕೊಟ್ಟರೆ ಮಾಡುವೆ. ನಾನು ತುಂಬ ಕಷ್ಟದಲ್ಲಿರುವೆ." ಅತ್ಯಂತ ದೈನ್ಯತೆಯಿಂದ ದನಿ ಹರಿದು ಬಂತು.

ಯಜಮಾನ ಸ್ವಲ್ಪ ಯೋಚಿಸಿದ. ಆತನಿಗೆ ಅಗ್ಗ ದರದಲ್ಲಿ ಕೆಲಸ ಮಾಡುವವರ ಅಗತ್ಯವಿತ್ತು. ಒಮ್ಮೆ ಅಡಿಯಿಂದ ಮುಡಿಯವರೆಗೂ ನಿಟ್ಟಿಸಿ ನೋಡಿ, ಅತ್ಯಂತ ಸೂಕ್ಷ್ಮವಾಗಿ ಗಮನಿಸಿ ನುಡಿದ "ದಿನಕ್ಕೆ ಎರಡು ಡಾಲರ್ ಕೊಡುವೆ, ಮಾಡುವುದಾದಲ್ಲಿ ಆಗಬಹುದು."

ಅಷ್ಟು ಸಹಕಾರ ತೋರಿದ್ದೇ ಸಾಕಾಗಿತ್ತು ; ಮುದ್ದಪ್ಪ ಸಂತುಷ್ಟ ನಾದ. ನುಡಿ ಸಮಾಧಾನಪೂರ್ವಕವಾಗಿ ಹೊರಬಿತ್ತು "ಎಷ್ಟಾದರೂ ಕೊಡಿ ಸ್ವಾಮಿ !"

"ಹಾಗಾದರೆ ಮಾಡು. ಕಟ್ಟಡ ಕಟ್ಟುವವರಿಗೆ ಇಟ್ಟಿಗೆಗಳನ್ನು ಒಯ್ದು ಕೊಡಬೇಕು. ಅದು ನಿನ್ನಿಂದ ಆಗುತ್ತದೆಯೆ ?"

"ಆಗಲಿ, ಮಾಡುವೆ."

ಬಳಲಿದ ಜೀವ ಅಂತರಂಗದಲ್ಲಿ "ಮಾಡಲಾರೆ" ಎಂದು ಚೀರಿಡುತಿತ್ತು. ಅತೀವ ಆಯಾಸ ನರನರಗಳಲ್ಲೂ ತನ್ನಿರುವನ್ನು ಸಾರಿ ಹೇಳುತಿತ್ತು. ಆದರೂ

ಸಹ ಹಸಿದು ಘೀಳಿಡುವ ಒಡಲಿಗೆ ವರ್ಷಾನುಕಾಲ ಕದಾನ್ನ ತಿಂದು ನಂಜಾಡಿದ ಶರೀರಕ್ಕೆ ಯಾವ ರೀತಿಯಿಂದಲಾದರೂ ಅನ್ನದಾನ ಮಾಡದಿದ್ದಲ್ಲಿ ಬದುಕುಳಿಯುವ ಸಂಭವ ಸಹ ಕಡಿಮೆ. ತಲೆಯಲ್ಲಿ ಹಿಡಿಸಲಾರದಷ್ಟು ಯೋಚನೆಗಳನ್ನು ತುಂಬಿಕೊಂಡೇ ಕೆಲಸಕ್ಕೆ ಮುಂದಾದಾಗ ಆ ಹುಡುಗ ಬುಟ್ಟಿಯನ್ನೆತ್ತಿದ. ಕೈ ಕೆಲಸ ಮಾಡುವಾಗ ಚಿತ್ತ ಗತಕಾಲಕ್ಕೆ ಪಕ್ಷಿಯಂತೆ ಹಾರಿ ಜೀವನದಾದ್ಯಂತ ಸಂಚರಿಸಿ ಅಂದಿಂದಿಗೂ ಸಂಭವಿಸಿದ ಹಾಸ್ಯ ರೋದನಗಳನ್ನೂ ಸುಖದುಃಖಗಳನ್ನೂ ಏಕಪ್ರಕಾರವಾಗಿ ಸವಿಯತೊಡಗಿತು. ಆ ವಿಸ್ತಾರ ಕಾವ್ಯದಲ್ಲಿ ದೊರೆತ ಮಹಾಮೌಲ್ಯ ಅಲ್ಪ. ಒಡನೆ ತುಟಿಗಳಲ್ಲಿ ಸಣ್ಣ ತಿರಸ್ಕಾರದ ನಗು ಮಿನುಗಿ ಮಾಯವಾಯಿತು. ಶರೀರ ಯಾಂತ್ರಿಕವಾಗಿ ಬಿಸಿಯುಸಿರು ಬಿಡುತ್ತ ಕೆಲಸವನ್ನು ನಿರ್ವಹಿಸಿತು. ಇಟ್ಟಿಗೆಗಳನ್ನು ಹೊತ್ತು ಮೇಲೆ–ಕೆಳಗೆ ಓಡಾಡುವಾಗ ಕೈಕಾಲುಗಳು ಕಳಚಿಬೀಳುವಷ್ಟು ಆಯಾಸ ತೋರುತಿತ್ತು. ಬಗ್ಗಿ ಏಳುವಾಗ ತಲೆ ಗರಗರ ಸುತ್ತುತಿತ್ತು. ಆದರೂ ಎರಡು ಡಾಲರ್ ದೊರೆತರೆ ಹಸಿದ ಹೊಟ್ಟೆಗೊಂದಿಷ್ಟು ಕವಳ ನೀಡಬಹುದೆಂಬ ಮಹದಾಸೆ ಸಂಕಷ್ಟವನ್ನು ಸಹಿಸಿಕೊಳ್ಳುವ ಶಕ್ತಿ ನೀಡಿತು. ಕೆಲಸ ಮುಗಿದಾಗ ಅಭ್ರಮಣಿ ಪಶ್ಚಿಮ ಪ್ರಾಂತದಲ್ಲಿ ಸಿಂಧೂರ ಮನೋಹರ ಶೋಭೆಯಿಂದ ವಿಶ್ರಾಂತಿ ಪಡೆಯುತಿದ್ದ. ಯಜಮಾನನಿಗಾಗಿ ಎಲ್ಲೆಡೆಯೂ ದೃಷ್ಟಿ ಹಾಯಿಸಿ ನೋಡಿ....ಎಲ್ಲೂ ಕಾಣಿಸದಿದ್ದಾಗ ಜೊತೆಯ ಕೆಲಸಗಾರರನ್ನು ಕೇಳಿದರೆ, ಅವರು ಯಜಮಾನ ಮನೆಗೆ ಹೋಗಿದ್ದಾನೆಂದು ಕೈ ಬಾಯ್ ಸನ್ನೆಯ ಮೂಲಕ ತಿಳಿಸಿದರು. ಆಗ ಮುದ್ದಪ್ಪನಿಗಾದ ಸಂಕಟ ಅಷ್ಟಿಷ್ಟಲ್ಲ. ಮೊದಲು ಹರುಕು ಮುರುಕು ಇಂಗ್ಲಿಷಿನಲ್ಲಿ ಮಾತಾಡಿದ ತರುಣನ ಕಡೆಗೆ ಹೋಗಿ ಕೇಳಿದ,

"ಏನಪ್ಪಾ ? ಯಜಮಾನ ಎಲ್ಲಿ ?"

"ಅವನು ಆಗಲೇ ಮನೆಗೆ ಹೋಗಿಬಿಟ್ಟಿದ್ದಾನೆ."

"ಇಲ್ಲಿ ನನ್ನ ಕೂಲಿ ಕೊಡುವವರಾರು ?"

"ಈಗ...?"

"ಹೌದು.... ಈಗಲೇ."

"ಈಗಲೇ ಎಂದಾದರೂ ಸಿಗುವುದುಂಟೇ ? ಅದಕ್ಕೆಲ್ಲಾ ಕಾಲಾವಕಾಶ ಬೇಡವೇ ?"

"ಅಂದರೆ ?"

"ಅಲ್ಲಪ್ಪಾ, ಇಂದು ಬಂದಿದ್ದಿ, ಅದರಲ್ಲೂ ಅರ್ಧ ದಿನ ಮಾತ್ರ ಕೆಲಸ ಮಾಡಿದ್ದಿ. ಅಷ್ಟರೊಳಗಾಗಿ ಬೇಡಿದರೆ ಹೇಗೆ ?"

"ಹಾಗಾದರೆ...." ಮುಂದೆ ಮಾತು ಹೊರಡಲಿಲ್ಲ. ಸಂಕಟದ ಝರಿ ನರನಾಡಿಗಳಲ್ಲಿ ವ್ಯಾಪಕವಾಗಿ ಹರಿದಾಡಿತು. ಯೋಚನೆಯಲೆಗಳು ಅಲ್ಲಿಂದಲ್ಲೇ ಸ್ತಬ್ಧವಾದಂತೆ ಭಾಸವಾಯಿತು. ಏನು ಮಾಡಬೇಕೋ ಬಗೆ ಹರಿಯಲಿಲ್ಲ. ದೈಹಿಕ ಶ್ರಮ ರೋಮ ರೋಮಗಳಲ್ಲೂ ಧೀಂಕಿಡುತಿತ್ತು....

"ಈಗ ಅಷ್ಟು ತುರ್ತಾಗಿ ಹಣ ಕೇಳಿದರೆ ಆದೀತೇನಯ್ಯಾ...? ನಿನ್ನ ಕೆಲಸ ನೋಡಿ, ಅದು ಸಮರ್ಪಕವಾಗಿದ್ದರೆ ಯಜಮಾನ ಕೊಟ್ಟಾನು. ಈಗಲೇ ಕೊಡಿ ಎಂದರೆ ಹೇಗೆ ? ಒಂದು ವೇಳೆ ಯಜಮಾನ ಇಲ್ಲಿದ್ದರೂ ಈಗಿಂದೀಗಲೇ ನಿನಗೆ ಹಣ ದೊರೆಯುವುದು ಕಷ್ಟ...."

"ಅಂದರೆ....?"

"ವಾರದ ಕೊನೆಯಲ್ಲಿ ಅಥವಾ ತಿಂಗಳ ಕೊನೆಯಲ್ಲಿ ಸಿಗಬಹುದು."

ಮುದ್ದಪ್ಪನಿಗೆ ಅತ್ಯಂತ ನಿರಾಸೆಯಾಯಿತು. ಒಡಲ ಸಂಕಟ–ಆಯಾಸ ತನುಮನಗಳನ್ನು ಹಿಂಡಿ ಹೀರುತಿದ್ದುವು. ಏನು ಹೇಳಬೇಕೋ ಹೊಳೆಯಲಿಲ್ಲ. ಕಣ್ಣುಗಳಲ್ಲಿ ತೆಕ್ಕನೆ ರಂಗು ಮೂಡಿ, ಸ್ವಲ್ಪ ಹೊತ್ತು ಸಾವರಿಸಿಕೊಳ್ಳುತ್ತ ನಿಂತ. ತನ್ನ ಬಗೆಗೆ ತನಗೇ ಕನಿಕರ ಮೂಡಿತು. ಮೊದಲೇ ಮಾತಾಡಿಕೊಳ್ಳದೆ ಪೆದ್ದನಂತೆ ಕೆಲಸ ಮಾಡಿ ಶರೀರವನ್ನು ಇನ್ನಷ್ಟು ದಣಿಸಿದ್ದಾಯಿತು. ಛೀ ! ಎಂಥಹ ದಡ್ಡತನ....ಅಷ್ಟೂ.... ಯೋಚಿಸಲಾರದೆ ಹೋದೆ.

ತನ್ನನ್ನು ತಾನು ಹಳಿದುಕೊಳ್ಳುತ್ತಲೇ ಕೇಳಿದ,

"ಇಲ್ಲಿ ಇನ್ನಾರೂ ನನಗೆ ಸಂಬಳವನ್ನು ಕೊಡಲಾರರೇ ?"

"ಇಲ್ಲ ...ಇಲ್ಲ ; ಅವರೇ ಬರಬೇಕು."

"ಇಂದಿಗೆ ಯಾರಾದರೂ ಒಂದು ಡಾಲರ್ ಕೊಟ್ಟದ್ದು ಅದನ್ನು ನಾಳೆ ಯಜಮಾನನಮೂಲಕ ತೆಗೆದುಕೊಳ್ಳುವಿರಾದರೆ ತುಂಬ ಉಪಕಾರವಾದೀತು."

"ಇಲ್ಲಪ್ಪಾ, ನಮ್ಮದೇ ನಮಗೆ ಕಷ್ಟ. ನಾವೆಲ್ಲಿಂದ ನಿನಗೆ ಕೊಡೋಣ?"

"ಊಟ ಮಾಡಿ ಎರಡು ದಿನಗಳಾದುವು."

"ನಮಗೂ ಅಂತಹ ಪ್ರಸಂಗಗಳು ಯಾವಾಗಲೂ ಬರುತ್ತಿರುತ್ತವೆ."

ಮುದ್ದಪ್ಪ ಮಾತಾಡಲಿಲ್ಲ. ಎದೆಯಾಳದಿಂದ ನಿಟ್ಟುಸಿರೊಂದು ಹೊರ ಹೊಮ್ಮಿತು. ಇನ್ನೊಬ್ಬ ಹಿರಿಯ ಕೈಸನ್ನೆಯಲ್ಲಿ ಹೇಳಿದ,

"ಹೋಗು....ಸುಮ್ಮನೆ ಏಕೆ ನಿಂತಿದ್ದಿ ?"

"ಯಜಮಾನನಿಂದಲ್ಲದೆ ಈ ಸಮಸ್ಯೆ ಬಗೆಹರಿಯದು, ನೀನು ಇಲ್ಲಿ ಬೇಡುವುದು ವ್ಯರ್ಥ."

"ಇನ್ನು ನೀನಿಲ್ಲಿ ಕಾಯುವುದು ಪ್ರಯೋಜನವಿಲ್ಲ" ಶರಣ ದನಿ ಗೂಡಿಸಿದ.

ಮುದ್ದಪ್ಪ ಹತಾಶನಾದ. ರೈಲು ನಿಂತಾಗ ನಿಲ್ದಾಣದಲ್ಲಿ ಕೂಲಿ ಮಾಡಿದ್ದಿದ್ದರೆ ಚೆನ್ನಾಗಿತ್ತು. ಸುಮ್ಮನೆ ಇಲ್ಲಿ ಬೇಸ್ತು ಬಿದ್ದೆ. ಎಂದುಕೊಂಡು ಅಲ್ಲೇ ಪಕ್ಕದಲ್ಲಿದ್ದ ಕಲ್ಲಿನ ಮೇಲೆ ಕುಳಿತುಕೊಂಡ. ಕೆಲಸಗಾರರು ತೊಟ್ಟಿಯಲ್ಲಿ ಕೈಕಾಲು ತೊಳೆದುಕೊಂಡು ಕಳಚಿಟ್ಟಿದ್ದ ಉಡುಪು ತೊಟ್ಟು ತಮ್ಮ ತಮ್ಮ ಕೈಚೀಲಗಳೊಡನೆ ಹೊರಟರು. ದೇಶೀಯ ಭಾಷೆಯಲ್ಲಿ ತನ್ನ ಬಗ್ಗೆ ಏನೇನೋ ಮಾತಾಡಿಕೊಂಡುದುದು ಕಿವಿಗೆ ಬಿತ್ತು....ಪೂರ್ತಿ ಅರ್ಥವಾಗದಿದ್ದರೂ ಸಾರಾಂಶ ಗ್ರಹಿಸಿದ. ಮನಃಪ್ರಾಣಗಳಲ್ಲಿ ಉಷ್ಣೋಷ್ಣ ಅಲೆಗಳು ಒಂದೇ ಸಮನೆ ಏಳತೊಡಗಿದುವು. ನಿಶ್ಶಕ್ತಿಯಿಂದ ಶರೀರ ಕುಸಿಯುವಂತಿತ್ತು. ಹೊಟ್ಟೆಯ ತುಂಬ ನೀರಾದರೂ ಕುಡಿಯೋಣವೆಂದರೆ ತೊಟ್ಟಿಯಲ್ಲಿಳಿದು ಹಲವಾರು ಕೆಲಸಗಾರರು ಕೈಕಾಲು ತೊಳೆದಿರುವುದರಿಂದ ಅದು ಕಲಕಿ ಬಗ್ಗಡವಾಗಿತ್ತು. ಸ್ವಲ್ಪ ಹೊತ್ತು ಕಳೆದರೆ ತಿಳಿಯಾದೀತೇನೋ ಎಂಬ ಯೋಚನೆಗೆ ಶರಣಾಗಿ ಗೋಡೆಯ ಮಗ್ಗುಲಲ್ಲಿದ್ದ ಮಣ್ಣಿನ ರಾಶಿಯ ಮೇಲೆ ಉರುಳಿಕೊಂಡ. ಅತ್ಯಂತ ಬಳಲಿದ ಮೈ ವಿಶ್ರಾಂತಿಯನ್ನು ಬಹುವಾಗಿ ಬಯಸಿತು. ಅನಾಥನಂತೆ, ಭಿಕಾರಿಯಂತೆ, ಅಶಕ್ತನಂತೆ ವ್ಯರ್ಥಕಾಮನಾಗಿ ಆಶ್ರಯಹೀನನಾಗಿ ಮಲಗಿದಾಗ ನಿಶ್ಚೇಷ್ಟ ಶರೀರದಲ್ಲಿ ಪ್ರಾಣ ಈಗಲೀಗ,ಚಿಮ್ಮುತ್ತಿರುವಂತೆ ಭಾಸವಾಗುತಿತ್ತು. ಎದ್ದು ಸಮಸ್ಥಳವನ್ನು ನೋಡಿ ಮಲಗೋಣವೆಂದರೂ ಸಾಧ್ಯವಾಗದು. ಹೊತ್ತು ಹೇಗೆ ಉರುಳಿತೋ

ತಾನರಿಯ. ಜೇಲಿನವಾಸ ಇದಕ್ಕಿಂತ ನೂರು ಪಾಲು ಸಾವಿರ ಪಾಲು ಉತ್ತಮವಾಗಿತ್ತು. ಬಡಜೀವಕ್ಕೆ ಕಿಂಚಿತ್ ನೆಮ್ಮದಿಯೂ ಇತ್ತು ಬದುಕಿಗೊಂದು ಉದ್ದೇಶವೂ ಇತ್ತು....ಈಗ ?"

ಪ್ರಶ್ನೆ ಕರುಳನ್ನು ಕೊರೆಯುತ್ತಿತ್ತು.

ತನಗರಿಯದಂತೆಯೇ ಹೊಮ್ಮಿದ ದೀರ್ಘನಿಶ್ವಾಸ ವಾಯುಮಂಡಲದಲ್ಲಿ ಸೇರಿ ಹೋಯಿತು.

ಊರೊಳಗೆ ಪ್ರಕಾಶಮಾನವಾದ ವಿದ್ಯುದ್ದೀಪಗಳು ಬುಗ್ಗನೆ ಹೊತ್ತಿ ಉರಿಯತೊಡಗಿದುವು. ಶಾಂತಶೀಲ ಗಗನಾಂಬಿಕೆ ಕಪ್ಪುದುಕೂಲವುಟ್ಟು ನಕ್ಷತ್ರಗಳ ಕೊರಳಹಾರ ಧರಿಸಿದಳು. ಹೃದಯ ಕಲ್ಲು ಹೊತ್ತಂತೆ ಭಾರವಾಯಿತು. ನೆಟ್ಟ ನೋಟ ಗಗನ ಭಿತ್ತಿಯಲ್ಲಿ ವಿಹರಿಸಿ, ನಕ್ಷತ್ರಗಳ ಮಿಂಚುಂಡು ತಲೆಗೆ ಮತ್ತೇರಿದಂತಾಗಿ ಹಾಗೇ ಕಣ್ಮುಚ್ಚಿದ. ಗಂಟಲಾರಿದ್ದರೂ ಎದ್ದು ನೀರು ಕುಡಿಯಲು ಮನಸ್ಸಾಗಲಿಲ್ಲ. ಜಠರಾಗ್ನಿ ಮೈಯನ್ನು ಧಗಧಗ ಧಹಿಸುತ್ತಿತ್ತು. ಅನೀರಿಕ್ಷಿತವಾಗಿ ಕಣ್ಣುಗಳು ತಟತಟ ಹನಿತುವು. ಹೆಮ್ಮೋಡಗಳ ತೆರೆಮರೆಯಲ್ಲಿ ಅಡಗಿದ ಕೃಷ್ಣಪಕ್ಷದ ಚಂದ್ರಮ ಹೊರಬಂದಾಗ ಹರಿದ ಕದ್ದಿಂಗಳ ಹೊಳೆಯಲ್ಲಿ ಸುತ್ತಮುತ್ತಿನ ದೃಶ್ಯ ಅಸ್ಪಷ್ಟವಾಗಿ ಮೈದೋರಿತು. ನೆರೆಹೊರೆ ಗೃಹನಿವಾಸಿಗಳ ಮಾತುಕತೆ–ಆನಂದಲಹರಿ ಬುಗ್ಗೆ ಬುಗ್ಗೆಯಾಗಿ ಹೊಮ್ಮುತ್ತಿದ್ದುವು. ಖಾದ್ಯಗಳ ಸುವಾಸನೆ, ಪಾತ್ರೆಗಳ ಝಣಿ ಜಣಿ, ಬಾಗಿಲುಗಳ ಸದ್ದು, ನಾಯಿಗಳ ಬೊಗಳುವಿಕೆ ಇಂದ್ರಿಯಗತವಾದುವು. ದೊಡ್ಡ ದನಿಯಲ್ಲಿ ಶಿಳ್ಳೆ ಹಾಕುತ್ತಾ ಬಂದ ರೈಲು ನಿಲ್ದಾಣದಲ್ಲಿ ನಿಲ್ಲದೆ, ಬಿಟ್ಟ ಬಾಣದಂತೆ ಸಾಗಿ ಹೋದುದು ಅನುಭವಕ್ಕೆ ಬಂದಿತು. ದಿಗಂತರದಿಂದ ದಿಗಂತರಕ್ಕೆ ಸಾಗಿ ಹೋಗುವ ತಂಗಾಳಿ ಮಂದಮಂದವಾಗಿ ತೀಡುತಿತ್ತು. ಒಮ್ಮೆ ಜೊಂಪು, ಇನ್ನೊಮ್ಮೆ ಎಚ್ಚರ, ಮತ್ತೊಮ್ಮೆ ನಿದ್ದೆ ದುಃಸ್ವಪ್ನ ಹೀಗೆ ಏನೋ ಕಡುಹಿಂಸೆ. ಕಣ್ಣು ಬಿಟ್ಟರೆ ಕವಿದ ಕತ್ತಲೆ ತಿವಿಯುತ್ತದೆ. ಮುಚ್ಚಿದರೆ ಒಳ ಮನಸ್ಸು ಕಾಡುವುದು. ಮನೆ ಮನೆಗಳ ದೀಪಗಳು ಆರಿದನಂತರ ಒಮ್ಮಿಂದೊಮ್ಮೆಲೇ ಕತ್ತಲು ದಟ್ಟೈಸಿದಂತಾಯಿತು. ಸನಿಹದಲ್ಲಿ ಬೀದಿಯ ದೀಪಗಳೂ ಇರಲಿಲ್ಲ. ಕ್ರಮ ಕ್ರಮೇಣ ಕಣ್ಣುಗಳಿಗೆ ಅಭ್ಯಾಸವಾದನಂತರ ಮಸುಕಾಗಿ ಸುತ್ತಮುತ್ತಿನ ಪ್ರಪಂಚ

ದೃಷ್ಟಿಗೆ ಬಿತ್ತು. ಹಾಗೆ ಕಣ್ಮುಚ್ಚಿದ. ಒಂದೆರಡು ನಿಮಿಷ ಕಳೆಯುವುದರೊಳಗಾಗಿ ಬೀದಿಯ ನಾಯಿಯೊಂದು ಸಣ್ಣಗೆ 'ಕುಯ್' ಗುಟ್ಟುತ್ತ ಬಳಿಗೆ ಬಂತು. ಮುದ್ದಪ್ಪ ಅಲ್ಲಿಂದಲೇ ಗದರಿಸಿದರೂ ಅದು ಮಣಿಯಲಿಲ್ಲ. ಆದ್ದರಿಂದ ತಾನೇ ಹಿಂದಿಂದಕ್ಕೆ ಸರಿದ. ಅವನು ಸರಿದಷ್ಟೂ ಅದು ಹತ್ತಿರಕ್ಕೆ ಬಂದು ಮಗುವಿನಂತೆ ಮೈಗೆ ಮೈ ಹಚ್ಚಿ ಮಲಗಿಕೊಂಡಿತು. ಅದರ ದುರ್ಗಂಧ ಘ್ರಾಣೇಂದ್ರಿಯನ್ನು ಮುತ್ತಿ ಅಸಹ್ಯ ಮೂಡಿದಾಗ "ಥೂ! ಹಾಳಾದ್ದು!" ಎಂದು ಸಿಡುಕಿ ಅಲ್ಲಿಂದ ಎದ್ದು ಗೋಡೆಯ ಮಗ್ಗುಲಿಗೆ ಹೋಗಿ ಮಲಗಿಕೊಂಡ. ಅದು ಅಲ್ಲಿಗೂ ಬಿಡದೆ ಬಂದು ಮಗ್ಗುಲಲ್ಲೇ ಮಲಗಿಕೊಂಡಿತು. ಒಂದು ರೀತಿಯಲ್ಲಿ ಅಸಹ್ಯವಾದರೂ ಇನ್ನೊಂದು ರೀತಿಯಲ್ಲಿ ಅನಾಥನಿಗೆ ಅತ್ಯಾದರ ತೋರಿ ಆತ್ಮೀಯ ಗೆಳೆಯನಂತೆ ವರ್ತಿಸಿತಲ್ಲಾ ಎಂಬ ಕಿಂಚಿತ್ ಆತ್ಮಸಮಾಧಾನವು ಮೂಡದಿರಲಿಲ್ಲ.

....ಮೈಗೆ ಕಲ್ಲು ಮಣ್ಣು ಮರಳುಗಳ ಅಸಹನೀಯ ಒತ್ತಡ.

....ಮನಃಪ್ರಾಣಗಳಿಗೆ ಸುಖದುಃಖಗಳ ಅದಮನೀಯ ವ್ಯಂಜನ.

....ಘ್ರಾಣೇಂದ್ರಿಯ ಬಿರಿಯುವಂತಹ ಶ್ವಾನಗಂಧ.... ಹಸಿ ಮಣ್ಣಿನ ವಾಸನೆ.

ಯಾವ ಕಡೆ ತಿರುಗಿದರೂ, ಹೇಗೆ ಮಲಗಿದರೂ ಅದರಿಂದ ತಪ್ಪಿಸಿಕೊಳ್ಳಲಾಗಲಿಲ್ಲ, ಜೀವ ಪ್ರಾಣಾಂತಕ ರೀತಿಯಲ್ಲಿ ನರಳಿತು. ಮನಸ್ಸು ತನ್ನಲ್ಲೇ ಪರಿತಪಿಸಿತು. ಯಾವುದೋ ಕೀಟ ಕಿವಿ ಕೊರೈಸುವಂತೆ ಚೀರಿಡುತ್ತಿತ್ತು. ಜೀೀೀೀೀಯ್ ! ಜೀೀೀೀೀೀೀಯ್ !! ಜೀೀೀೀೀೀಯ್ !!!

ಅಯ್ಯೊ, ಒಂದಿಷ್ಟು ಅರಳೆಯಾದರೂ ಇದ್ದಿದ್ದರೆ....?

ಹಾ....!

ಸ್ವಲ್ಪ ಹೊತ್ತಿನೊಳಗಾಗಿ ನಿದ್ದೆಯಲ್ಲಿ ಮೈಮರೆತ ಗೆಳೆಯನಾಯಿ ಕನಸಿನಲೋಕದಲ್ಲಿ ಮುಳುಗಿ ಮುರುಮುರುಗುಟ್ಟಿತು. ಮುದ್ದಪ್ಪ ದಿಟ್ಟಿಯನ್ನು ಗಗನದೆಡೆಗಟ್ಟಿ, ವಕ್ಷಸ್ಥಳದಮೇಲೆ ಕೈಗಳೆರಡನ್ನೂ ಕಟ್ಟಿ ನೇರವಾಗಿ ಮಲಗಿದ. ಅತ್ಯಂತ ಪ್ರಶಾಂತ ವಾತಾವರಣ, ಸದ್ದಿಲ್ಲದ ಮಹಾಶಾಂತಿ, ಚಿತ್ರಮಯವಾದ ಗಗನಧಾತ್ರಿ. ಇವನ್ನು ಪರಿತಾಪದುಂಬಿದ ಮನಸ್ಸಿಗೆ ಎಲ್ಲಿ

ಹೇಗೆ ಅಳವಡಿಸಿಕೊಳ್ಳಬೇಕೋ ಅರ್ಥವಾಗುತ್ತಿಲ್ಲ. ಕಾತರಭರಿತ ಹೃದಯ ಭಾವಾತ್ಮಕವಾಗಿ—ರಚನಾತ್ಮಕನಾಗಿ—ಪ್ರಾಣಾತ್ಮಕವಾಗಿ ಎಡೆಬಿಡದೆ ಮಿಡಿಯುತಿತ್ತು.

....ಈತನಕ ನಡೆದು ಬಂದ ಹಾದಿಯನ್ನು ಅವಲೋಕಿಸಿದರೆ ಭಾರತದ ಗಡಿರೇಖೆಯನ್ನು ದಾಟಿದುದು ನಿಜವಾಗಿಯೂ ಸ್ವರ್ಣರೇಖೆಯನ್ನು ದಾಟಿದಂತಾಯಿತು. ಅನಂತರ...ಅಂತಹ ಸುಂದರ ನೆಲೆಯನ್ನು ಎಲ್ಲೂ ಕಾಣಲಿಲ್ಲ. ಭಾರತಾತ್ಮಜೆ ಕೊಡಗು"ಸಿರಿಲಕ್ಷ್ಮಿ" ಅಂದರೆ ಅತಿಶಯೋಕ್ತಿಯಲ್ಲ ...ಬಹುಶಃ ನನ್ನದು ಅತೀವ ಅಂಧಾಭಿಮಾನವಿರಬಹುದು ಅಥವಾ ಭಕ್ತಿ ಇರಬಹುದು. ಆದರೂ "ತ್ಯಾಗ" ಎಂಬುದು ಹೊರತೇನಲ್ಲವಲ್ಲ ? ಆ ಬಡತಾಯಿ ನಮಗೆ ನೀಡಿದ ಅಭೂತಪೂರ್ವ ಕರೆ ಕುಟೀರಯಜ್ಞಕ್ಕಾಗಿ ಮಾತ್ರವೇನು ? ಲೋಕ ಕಲ್ಯಾಣಕ್ಕಾಗಿಯೂ ಇದೆ. ನಾವು ಮುಂದಿಡುವ ಪ್ರತಿಯೊಂದು ಹೆಜ್ಜೆಯೂ ಅದನ್ನು ಪ್ರತಿಪಾದಿಸುತ್ತಲೇ ಇದೆ. ಆದರೆ, ಸ್ವಾರ್ಥಪರರು ಅರ್ಥಮಾಡಿಕೊಳ್ಳುವ ರೀತಿಯೇ ಬೇರೆ.

ನಮ್ಮ ರಾಷ್ಟ್ರದಾದ್ಯಂತ ಪಕ್ಷಿನೋಟ ಚೆಲ್ಲಿ ನೋಡಿದರೆ ರಾಜಾರಾಮ ಮೋಹನರಾಯನ ಕಾಲದಿಂದ ಹೆಚ್ಚೇನೂ ಮುಂದುವರಿದಿಲ್ಲ. ಈ ಅರ್ಥಹೀನ ತ್ಯಾಗಗಳು "ತ್ಯಾಗ" ಎನಿಸುವುದೇ ಇಲ್ಲವೇನೋ...

ಎದೆಯ ನೆಲೆಯಲ್ಲಿ ಹೊಮ್ಮಿದ ಭಾವಶ್ರದ್ಧೆ ನರನಾಡಿಗಳಲ್ಲಿ ಹರಿದಾಡಿ ಮನವನ್ನು ಪರಿಮಳದಂತೆ ಮುತ್ತಿತು. ಪ್ರಸಕ್ತ ಪರಿಸ್ಥಿತಿಯಲ್ಲಿ ಮೇಲಾಗಿ ಭವಿಷ್ಯದ ಚಿಂತನೆಯಲ್ಲಿ ಮುಳುಗಿ ಜಾಗ್ರತವಾಗಿತ್ತು, ಹೃದಯ ಸಾಮ್ರಾಜ್ಯದ ಶ್ರೀಕುಂಡಲಿನಿ.

ಒಂದೆರಡು ನಿಮಿಷಗಳು ನಿರಾತಂಕವಾಗಿ ಉರುಳಿದುವು.

ಯಾವುದೋ ಪಕ್ಷಿ ವಿಕರಾಳ ಸ್ವರದಲ್ಲಿ ಕೂಗಿತು. ಮುದ್ದಪ್ಪ ಆಲೈಸಿದ. ಅದೇ ದನಿ ಪುನಃ ಪುನಃ ಹೊಮ್ಮಿತು—ಎದೆಯ ನೆತ್ತರು ಹೆಪ್ಪುಗಟ್ಟುವಂತೆ.

ಇದ್ದಕ್ಕಿದ್ದಂತೆಯೇ ಮೇಲಿನಿಂದ ಹಸಿಗೋಡೆಯ ಸ್ವಲ್ಪಭಾಗ ಕಳಚಿ ಬಿತ್ತು !

ಜೀವ ಪ್ರಾಣಾಂತಕ ನೋವಿನಿಂದ ಚೀರಿತು. ನಾಯಿ ಕರ್ಕಶದನಿಯಲ್ಲಿ ಕೂಗಹತ್ತಿತು ಬೀದಿ ಬೀದಿಗಳಿಗೂ ಕೇಳಿಸುವಂತೆ.

ಕಯ್! ಯ್ ಯ್ ಯ್ ಯ್...!

ಸುತ್ತ ಮುತ್ತಿನ ಗೃಹಶ್ರೇಣಿ ದುಃಖಸ್ಖಲಿತವಾಣಿಯಲ್ಲಿ ಮರುದನಿಗೊಟ್ಟಿತು. ಇನ್ನಾರೂ ಓಗೊಡಲಿಲ್ಲ.

೨೬

....ಪ್ರಕೃತಿಯ ಉಡಿಯಲ್ಲಿ ನಾಡು ತೊಟ್ಟಿಲ ಶಿಶುವಿನಂತೆ ಸ್ವಸ್ಥವಾಗಿತ್ತು.

....ಕಷ್ಟಸುಖಗಳ ರುದ್ರಮಧುರ ಸನ್ನಿವೇಶದಲ್ಲಿ ಜಗತ್ತು ಆಲೋಡಿತವಾದರೂ ಕಾಲಪುರುಷ ಕ್ಷಣವೂ ನಿಲ್ಲಲಾರ....

ತಿಂಗಳಮಾಸಗಳ ಕತೆ ಒತ್ತಟ್ಟಿಗಿರಲಿ, ವರ್ಷಮಾನಗಳು ಹೇಳದೆ ಕೇಳದೆ ಉರುಳಿ ಹೋದುವು. ಚಿಟ್ಟಿ ಮನು ಮಡಿಕೇರಿಯ ಶಾಲೆ ಸೇರಿ ಅಜ್ಜಿಯ ಮನೆಯಲ್ಲಿ ಉಳಿದರು. ಮಕ್ಕಳ ಸಹವಾಸದಲ್ಲಿ ಸ್ವರ್ಗಸೌಖ್ಯವನ್ನು ಪಡೆಯಲಾಶಿಸುವ ತಿಮ್ಮಯ್ಯ ಸೋದರಳಿಯಂದಿರೊಡನೆ ವಾರಕ್ಕೋ ತಿಂಗಳಿಗೋ ಬಾಗುಂಡಕ್ಕೆ ಬಂದು ಒಂದೆರಡುದಿನ ತಂಗಿದ್ದು, ದುಃಖದ ಬೀಡಿನಲ್ಲಿ ನಗೆಯ ಹೊನಲನ್ನು ಹರಿಸಿ ಹೋಗುತಿದ್ದ. ಆತನಿಗೆ ಮದುವೆಯೂ ಆಗಿದೆ. ಮಗುವೂ ಆಗಿದೆ. ಆದರೂ ಅವನು ಮಗುವಿಗಿಂತ ಮಗು.

ಮಾದು ಈಚೆಗೆ ಸ್ವಲ್ಪ ಸ್ವಲ್ಪವಾಗಿ ಸುಧಾರಿಸಿಕೊಂಡಿದ್ದ. ರುದ್ರ ಪದಘಾತಗಳಿಗೆ ಸಿಕ್ಕಿ ಹುಡಿಹುಡಿಯಾದ ದರುಗೆಲೆಯಂತೆ ಚೂರ್ಣೀಕೃತ ಸಂಸಾರ ಆಹತ ಮನೋಗತಿಗೆ ವಿಹಾರಸ್ಥಾನವಾದರೂ ಬದುಕು ಅನಿವಾರ್ಯ..ಜೀವನ ಅವಶ್ಯ... ಸಾಮಾಜಿಕವಲಯದಲ್ಲಿ ಕಷ್ಟಸುಖಗಳಿಗೆ ತಲೆಗೊಟ್ಟು, ನೂತನ ಸುಧಾರಣೆಗಳ ಯೋಜನೆಗಳಲ್ಲಿ ಎಡೆಬಿಡದೆ ಸಿಕ್ಕಿಕೊಳ್ಳುವ. ಸಮಯಸಂದರ್ಭಗಳಲ್ಲಿ ಸ್ವಂತ ಕೆಲಸ ಕಾರ್ಯಗಳು ಹಿಂದೆ ಉಳಿಯುತ್ತವೆ. ಆಗ....ಕಾವೇರಿ ಪೂವಿಯರು ಹೊಣೆಗಾರಿಕೆ ಹೊರುವುದು ಸರ್ವೇಸಾಮಾನ್ಯ. ಸಾಮಾಜಿಕ ರಂಗ, ಗೆಳೆಯರ ವೃಂದ ಹೆಜ್ಜೆ ಹೆಜ್ಜೆಗೂ ಸಂಕೋಲೆ ತೊಡಿಸಿ ಎಂದಿಗೂ ಶಾಶ್ವತವಾಗಿ ತಪ್ಪಿಸಿಕೊಳ್ಳದಂತೆ ಎಚ್ಚರ ವಹಿಸುತ್ತವೆ. ಸಹಕಾರ–ಸಹಾನುಭೂತಿಗಳು ಒಂದಕ್ಕೊಂದು ಕೊಂಡಿಯಂತೆ ಹೆಣೆದುಕೊಂಡು ಎಲ್ಲೋ ಇದ್ದು ಇಲ್ಲಿನ ರಸಾಸ್ವಾದನೆ ಮಾಡಲು ಅವಕಾಶ ಕೊಡುತ್ತಿಲ್ಲ. ಒಮ್ಮೆ ಬೇಸರವೆನಿಸಿದರೆ ಇನ್ನೊಮ್ಮೆ ತಾನಾಗಿ ತಲೆಕೊಡುವುದು ಅಭ್ಯಾಸವಾಗಿಹೋಗಿತ್ತು.

ಬಿಟ್ಟಂಗಾಳ ರಾಮಕೃಷ್ಣ, ತಾಳಗಟ್ಟ ಮಂಜುನಾಥ್, ಅಮ್ಮಟ್ಟೆ ಗಣೇಶ, ಜಂಬೂರು ಶೇಷು ತಾಳಗಟ್ಟ ಬೆಳ್ಳಿಯಪ್ಪ ಕಾಂಗ್ರೆಸ್ಸಿನ ನಾನಾ ಚಟುವಟಿಕೆಗಳಲ್ಲಿ ಸಕ್ರಿಯ ಪಾತ್ರ ವಹಿಸುತ್ತಾರೆ. ಕಾಂಗ್ರೆಸ್ಸಿನ ವ್ಯಾಪ್ತಿ ಮೂಲೆ ಮೂಲೆಗೂ ಪ್ರಚಂಡವಾಗಿ ಹಬ್ಬಿದ್ದು, ಆಗಾಗ ಕಾಂಗ್ರೆಸ್ ಕಛೇರಿಯಲ್ಲಿ ಕಾರ್ಯನಿರ್ವಾಹಕ ಪರಿಷತ್ತು ಕೂಡಿ, ರಚನಾತ್ಮಕ ಕಾರ್ಯಕ್ರಮಗಳನ್ನು ರೂಪಿಸುತಿತ್ತು. ತರುಣದಮನಿಗಳಲ್ಲಿ ಬಿಸಿನೆತ್ತರು ಹುಮ್ಮಸ್ಸಿನಿಂದ ಹರಿದಾಡುತಿತ್ತು. ಮಾದಯ್ಯನಿಗೆ ಕಾಂಗ್ರೆಸ್‌ನ ಚಟುವಟಿಕೆಗಳಲ್ಲಿ ಮತ್ತೆ ಭಾಗವಹಿಸಬೇಕೆಂದು ಗೆಳೆಯರ ಒತ್ತಾಯ ಪೂರ್ಣ ಮನವಿ...ಸ್ನೇಹ ಪೂರ್ಣ ಸಲಹೆ....

"ಈಗ ರಾಷ್ಟ್ರೀಯ ಸರಕಾರ ರಾಜ್ಯವಾಳುತ್ತಿದೆ. ನಮ್ಮವರು ಬುದ್ಧಿವಂತರಾದರೆ ದೇಶ ಖಂಡಿತ ಸುಧಾರಿಸಿಕೊಳ್ಳುತ್ತದೆ. ಮತ್ತೇಕೆ ನಮ್ಮ ಹಸ್ತಕ್ಷೇಪ ? ಕೆಲವು ಕಾಲಿ ಕಾದು ನೋಡುವ ಸಹನೆ ಇರಲಿ, ಅಷ್ಟೇಕೆ ಕಾತರ ?" ಎಂಬುದು ಮಾದಯ್ಯನ ವಾದ.

...ಆದರೆ ಇತರರು ಕೇಳಬೇಕಲ್ಲ ?

"ಈ ಪ್ರಭಾವಯುತ ವಾತಾವರಣದಲ್ಲಿ ನಿನ್ನ ನಿಲುಮೆ ನಿಜವಾಗಿಯೂ ಆಶ್ಚರ್ಯಕರ! ಬಹುಶಃ ನಿನ್ನದು cold blood !"

ಮಾದು ಗಟ್ಟಿಯಾಗಿ ನಕ್ಕುಬಿಟ್ಟ.

"ಪರವಾಯಿಲ್ಲ...ಹೊಟ್ಟೆ ತುಂಬಿದ ಮೇಲೆ ದ್ರಾಕ್ಷಿ ಹುಳಿ !"

"ಹೊಟ್ಟೆಗಿದ್ದರೆ ತಾನೆ ತುಂಬುವುದು ?"

ಎಳೆನಗುವಿನ ಲಹರಿ ಪುನಃ ಎಲ್ಲರ ತುಟಿಗಳಲ್ಲಿ ಹರಿದಾಡಿತು.

"ನಿಮ್ಮ ಹುರುಪು ನೋಡುತಿದ್ದಂತೆ ಹುಚ್ಚೆದ್ದ ಕುದುರೆಯ ನೆನಪು ಬರುತ್ತದೆ. ಹಾಗೆಂದು ಪ್ರಗತಿಯ ಮಾರ್ಗದಲ್ಲಿ ನಡೆದ ಲೌಕಿಕ ವ್ಯವಹಾರ ತಪ್ಪು ಎನ್ನಲಾರೆ. ಎಲ್ಲರೂ ಹಿಡಿಯುವ ಸರಿಯಾದ ಮಾರ್ಗದಲ್ಲಿ ನನ್ನ ಸಹಕಾರವಿಲ್ಲ ಎಂದೇನಿಲ್ಲ."

ಮಂದಗಾಮಿತ್ವ !

"ಕೇಳು...ಕೇಳು!"

"ಆಯಿತು....ನೀವಿದನ್ನು 'ಮಂದಗಾಮಿತ್ವ' ಅನ್ನಿ; ಅಥವಾ 'ಪ್ರತಿಗಾಮಿತ್ವ' ಎಂದಾದರೂ ಅನ್ನಿ. ನನ್ನದೇನೂ ಅಡ್ಡಿಯಿಲ್ಲ. ಈ ದಿನಗಳಲ್ಲಿ ಕಾಂಗ್ರೆಸ್ಸಿನ ಚಟುವಟಿಕೆಗಳಿಂದ ದೂರ ಇರಬೇಕೆಂಬ ನನ್ನ ಇಚ್ಛೆ ಖಂಡಿತ ಅಸಾಧುವಲ್ಲ" ಮಾದು ಪ್ರತಿವಾದನೆ ಹೂಡಿದ.

"ಛೆ! ಹಾಗೆಂದವರುಂಟೇ ? ಯೋಚಿಸಿನೋಡು... ನಮ್ಮ ಕರ್ತವ್ಯ ಎಂದೆಂದಿಗೂ ಮುಗಿಯದು. ಕಂಡರಿಯದ ಪಥದಲ್ಲಿ ನೆಗೆದೋಡುವ ಹೋರಿಗಳಿಗೆ ಮಾರ್ಗದರ್ಶನ ಮಾಡದಿದ್ದರೆ ಹೇಗೆ ? ಕಣ್ಣಿದ್ದೂ ಕುರುಡರಾಗುವುದು ಸರಿಯಲ್ಲ" ಎಂದ ಬಿಟ್ಟಂಗಾಳ ರಾಮಕೃಷ್ಣ.

"ಅಷ್ಟು ದೊಡ್ಡ ಮಾತಾದರೂ ಏಕೆ ?"

"ದೇಶ ನಮ್ಮದು; ವ್ಯವಹಾರ ನಮ್ಮದು. ನಾವು ನೋಡಿಕೊಳ್ಳದಿದ್ದರಾದೀತೇ ?"

"ಬೇಕಾದಷ್ಟು ಮಂದಿ ಹಿರಿಯರಿದ್ದಾರೆ. ಅಷ್ಟೇಕೆ ಆತಂಕ ?"

"ಇರಲಿ, ಅವರಿಗೂ ಬೇಕಾದಷ್ಟು ಕೆಲಸವಿದೆ. ಇದು ನಮ್ಮ ಕ್ಷೇತ್ರ; ನಾವು ನೋಡಿಕೊಳ್ಳಲೇಬೇಕು."

"ಕೇಂದ್ರ ಸರಕಾರ ರಾಜ್ಯಸರಕಾರಗಳಿಗೆ ಮಾರ್ಗದರ್ಶಿ. ನೆಹರೂಜೀಯ ಆದರ್ಶಗಳ ಆಧಾರವೇ ಆಡಳಿತ ಸೂತ್ರ. ಮತ್ತೇಕೆ ಆತುರ ?"

ಹಾಗಾದರೆ...

"ನಮ್ಮ ಹೊಣೆ ಏನೇನೂ ಇಲ್ಲವೆಂದೇ ?"

"ಇಲ್ಲ ಎಂದೇನೂ ಹೇಳಲಾರೆ. ಆದರೆ ಆತುರ ಸರಿಯಲ್ಲ."

"ಆತುರದ ಪ್ರಶ್ನೆ ಅಲ್ಲವೇ ಅಲ್ಲ. ಪ್ರಗತಿಯ ಪ್ರಶ್ನೆ."

ಪೌರುಷೇಯವಾದ ವಾತಾವರಣ ಆತನಲ್ಲಿ ಅಹಂಕಾರಪೂರ್ಣ ಪ್ರತಿಕೂಲತೆಯನ್ನು ಬಡಿದೆಬ್ಬಿಸಿತು. ತುಟಿಗಳಲ್ಲಿ ಅಮಾಯಕವೂ ಸ್ವಚ್ಛವೂ ಆದ ಎಳೆನಗುವನ್ನು ಹರಿಸಿ ಶಾಂತ ಮುದ್ರೆಯಿಂದ ನುಡಿದ ಮಾದು,

"ಆತುರ....ಕಲ್ಪನೆ....ತೀವ್ರಾಕಾಂಕ್ಷೆಯ ಹುಚ್ಚು !"

"ನೀನು ಕೇವಲ ಇಂಗ್ಲಿಷಿನವರ ಪ್ರತಿಧ್ವನಿಯಂತೆ ಮಾತನಾಡುತ್ತಿ !"

"ಖಂಡಿತ !" ಅಮ್ಮಟ್ಟೆ ಗಣೇಶ ಅನುಮೋದಿಸಿದ.

ಎಳೆನಗು ಎಲ್ಲರ ಮುಖದ ಮೇಲೂ ಮತ್ತೆ ನಲಿದಾಡಿತು.

"ಉದಾಸೀನ ಬೇಡ, ಬಹಳ ಕಷ್ಟದಿಂದ ಗಳಿಸಿದ ಸ್ವಾತಂತ್ರ್ಯ...ಅದು ಅನುಗಾಲ ಉಳಿಯಬೇಕು" ದನಿ ಒತ್ತಾಯಪೂರ್ವಕವಾಗಿ ಹೊರಬಿತ್ತು.

ಮಾದು ಮಂದಹಾಸ ಬೀರಿದ. ಉಜ್ವಲ ನೇತ್ರಗಳು ನಿಶ್ಚಲವಾಗಿ ಬೆಳಗಿದುವು. ಮುಖಮುದ್ರೆ ಗಂಭೀರವಾಗಿತ್ತು. ಯೋಚನಾಪರವಶನಾಗಿ ಸ್ವಲ್ಪ ಹೊತ್ತು ಸುಮ್ಮನಿದ್ದು ಅನಂತರ ಅಂದ "ಸ್ವಲ್ಪ ಕಾಲ ನನಗೆ ದಯ ವಿಟ್ಟು ವಿರಾಮಕೊಡಿ."

"ಹಾಗೆಂದರೆ ..."

ಕೂಲಂಕಶವಾಗಿ ತನ್ನಲ್ಲೇ ಯೋಚಿಸಿದ ಮಾತುಕತೆಗಳ ಸಾರಾಂಶ ವನ್ನು ವಿಮರ್ಶಿಸಿಕೊಳ್ಳುತ್ತ ಮುಗುಳು ನಗೆಯೊಡನೆ ನುಡಿದ "ನಾನು ಈಗಲೇ ಏನೂ ಹೇಳಲಾರೆ."

"ಏನೇ ಇದ್ದರೂ, 'ಹನಿಗೂಡಿದರೆ ಹಳ್ಳ' ಎಂಬ ನುಡಿಮುತ್ತನ್ನಾದರೂ ಅರ್ಥಮಾಡಿಕೊ."

"ಹೌದಪ್ಪಾ, ಇಷ್ಟೊಂದು ಮಂದಿಯ ಆಶಯ ಸುಮ್ಮನೆ ಮೂಡಲಿಲ್ಲ."

"ದಯವಿಟ್ಟು ಕ್ಷಮಿಸಿ."

ಮಾದು ಎದ್ದು ನಿಂತ. ಯಾವ ಸಂದರ್ಭದಲ್ಲೂ ಆತ ಇಷ್ಟೊಂದು ಕಠಿಣವಾಗಿರಲಿಲ್ಲವೆಂಬುದು ಗೆಳೆಯರಿಗೆ ಮಾತ್ರವಲ್ಲ, ಸ್ವತಃ ಅಂತರಾತ್ಮನಿಗೂ ಅರ್ಥವಾಗಿತ್ತು. ಕಂಠಶೋಷಣೆ ಮಾಡಿ ಗೆಳೆಯರು ಹೊರಟರು. ಬೆಳಗ್ಗೆಯಿಂದ ಒಂದೇಸಮನೆ ಕಲಕಲಮಯವಾಗಿದ್ದ ವಾತಾವರಣ ಒಮ್ಮಿಂದೊಮ್ಮೆಲೇ ತಣ್ಣ ಗಾಯಿತು. ಮಾದು ಬೇಲಿಯವರೆಗೂ ಹೋಗಿ ಆತ್ಮೀಯತೆಯಿಂದ ಬೀಳ್ಕೊಟ್ಟ. ಎಲ್ಲರೂ ಸಾಲಾಗಿ ಹೊರಟರು ಕೆಳಮೆಟ್ಟಿಯ ಮೆಟ್ಟಿಲನ್ನು ಇಳಿದ ಮೇಲೆ ಜಂಬೂರು ಶೇಷು ಮೇಲಕ್ಕೆ ಕೇಳಿಸುವಂತೆ ಉಚ್ಚ ಸ್ವರದಿಂದ ಕರೆದು ಹೇಳಿದ "ಮಾದೂ! ನಾಳೆ ಬೆಳಿಗ್ಗೆ ಮನೆಯಲ್ಲಿರುತ್ತಿ ತಾನೆ? ನಿನ್ನ ಬಳಿ ಸ್ವಲ್ಪ ಕೆಲಸವಿದೆ, ಬೆಳಿಗ್ಗೆ ಎಂಟೂವರೆಯೊಳಗಾಗಿ ಬರುವೆ ಆದೀತೆ?"

"ಆಗಲಿ, ಬಾ" ಮೇಲಿಂದ ಮಾದು ಕೂಗಿ ಹೇಳಿದ.

ಗಂಗ–ತಂಗ ಅಲ್ಲೇ ಅಂಗಳದಲ್ಲಿ ಆಟ ಆಡಿಕೊಂಡಿದ್ದರು.

ಮಾದು ಹಾಗೇ ನಿಟ್ಟಿಸುತ್ತ ಒಂದು ಘಳಿಗೆ ಮೈಮರೆತಂತೆ ನಿಂತ. ಹಾರುವ ಚಿಟ್ಟೆಗಳಂತೆ ಓಡಾಡುವ ಮನಮೋಹಕ ಮಕ್ಕಳು ತುಂಬು ನಿರಿಯ

ಲಂಗ ತೊಟ್ಟು, ಚಿನ್ನದ ರೇಖೆಯಂತಹ ಎಳೆನಗು ಚೆಲ್ಲಿ ದುಃಖದಗ್ಧ ಜೀವ ನಾಡಿಯನ್ನು ಪ್ರೇಮೋನ್ಮಾದದಿಂದ ಮಿಡಿಸಿದರು. ಎರಡು ಹೆಜ್ಜೆ ಮುಂದು ವರಿದು ನೈಬಾಗಿ ಆನಂದ ವಿನಮ್ರತೆಯಿಂದ ಎಳೆಗೆನ್ನೆಗಳಿಗೆ ಹೂಮುತ್ತ ನೊತ್ತಿದ. ಆದರೆ, ಮರುಕ್ಷಣದಲ್ಲಿ ಸ್ವರ್ಗೀಯ ಮಡದಿಯ ಅನುಸಂಗದ ದಿವ್ಯಚಿತ್ರಾತ್ರ ಚಿತ್ತಭಿತ್ತಿಯಲ್ಲಿ ಮೊನಚು ಮುಳ್ಳಿನಿಂದ ಕೊರೆದು ಚಿತ್ರಿಸಿ ದಂತಾಗಿ ಅತೀವ ಸಂಕಟಾತಿರೇಕದಿಂದ ಮುಖಮಂಡಲ ಬಾಡಿಹೋಯಿತು. ಒಂದು ಘಳಿಗೆ—ಕೇವಲ ಒಂದೇ ಒಂದು ಘಳಿಗೆಯ ಹಿಂದೆ ವಿಜೃಂಭಿಸುತಿದ್ದ ಪ್ರೇಮಭಾವ ಸಂಕಟರೂಪ ತಾಳಿತು. ಏನೋ ಹೇಳಬೇಕೆಂದಿದ್ದ ತುಟಿಗಳು ಹಾಗೇ ಬಿಗಿದುಕೊಂಡುವು. ಒಂದೆರಡು ಕ್ಷಣ ಕಣ್ಣು ಮುಚ್ಚಿ ತನ್ನ ನೋವನ್ನು ತಾನೇ ನುಂಗಿಕೊಂಡ. ಹೃದಯ ಹೆಗ್ಗಲ್ಲು ಹೊತ್ತಂತೆ ಭಾರಾ ಕ್ರಾಂತವಾಯಿತು. ಕೈಕಾಲುಗಳು ಯಾಂತ್ರಿಕವಾಗಿ ಚಲಿಸಿದುವು.

ಮಕ್ಕಳು ತಂದೆಯ ಸ್ಥಿತಿಯನ್ನು ಅಚ್ಚರಿಯಿಂದ ಗಮನಿಸಿದರು. ಏನೆಂಬುದು ಹೊಳೆಯದೆ ಮನಸ್ಸು ಪೆಚ್ಚಾಯಿತು. ಇಂತಹ ಪ್ರಸಂಗ ಗಳು ಅಂದಿಂದಿಗೂ ಎಷ್ಟೋ ಬಾರಿ ನಡೆದಿವೆ. ಆಗ ಮಕ್ಕಳು ತಾವೇನೋ ಅಪಚಾರವೆಸಗಿದಂತೆ ಕಂಗಾಲಾಗುವರು. ಅಂತಹ ಸಂದರ್ಭಗಳಲ್ಲಿ ಕಾವೇರಿ ಮಕ್ಕಳಿಗೆ ಹಸಿಗಾಯದ ಅಸಹನೀಯ ಬಿಸಿ ತಾಗದಂತೆ ಸಂಪೂರ್ಣ ಎಚ್ಚರ ವಹಿಸಿ ಅತೀ ಕ್ಷೀಣಶ್ರಾಂತ ಕಂಠದಿಂದ "ಇಗೋ....ನಿಮ್ಮ ಆಟವೆಲ್ಲ ಇಲ್ಲೇ ಉಳಿಯಿತು." ಎಂದು ಸೂಕ್ಷ್ಮಾತಿಸೂಕ್ಷ್ಮವಾಗಿ ಮಕ್ಕಳ ಗಮನವನ್ನು ಸೆಳೆದುಕೊಂಡು ಪುನರಪಿ ಆಟಪಾಟಾದಿಗಳಿಗೆ ಹಚ್ಚುವಳು.

ಈ ಬಗೆಯ ಅಪೂರ್ವ ಸನ್ನಿವೇಶದಲ್ಲಿ ಪೂವಿಯ ನಿಶ್ಶಬ್ದ ಪ್ರಕೃತಿಯ ಅಂತರಾಳದಲ್ಲಿ ಅಜ್ಞಾತ ಕೋಲಾಹಲಪೂರ್ಣ ಅನುಕಂಪ ಹೃದಯಂಗಮ ವಾಗಿ ನಡೆಯುತಿತ್ತು. ನಿಶ್ಚಲ ದೃಷ್ಟಿ ಮಕ್ಕಳ ಮೇಲೆ ಭಾವಪೂರ್ಣವಾಗಿ ಚಲಿಸಿ ಪ್ರೇಮವಾರಿಯ ಸೇಚನೆಗೈದು ಬಲುಮೆಯಿಂದ ಮುದ್ದಿಡುತಿತ್ತು.

ಮಾದು ಅಂತರ್ನಿಹಿತ ತಳಮಳವನ್ನು ತಾಳಲಾರದೆ ಮೆಟ್ಟಿಲಿಳಿದು ಗದ್ದೆ ತೋಟಗಳ ಕಡೆ ಹೊರಟ. ಆತನ ಮುಖಭಾವವನ್ನೂ ನಡಿಗೆಯ ರೀತಿಯನ್ನೂ ನೋಡುತಿದ್ದ ಪೂವಿಯ ದಯಾಪೂರ್ಣ ಹೃದಯದಿಂದ ನಿಟ್ಟು ಸಿರೊಂದು ಮೆಲ್ಲನೆ ತಪ್ಪಿಸಿಕೊಂಡಿತು. ಏನೋ ಹೇಳಬೇಕೆಂದು ಪ್ರಯತ್ನಿ

ಸಿದರೂ ತುಟಿಗಳು ಬಿರಿಯಲಿಲ್ಲ, ತದೇಕಚಿಂತನೆಯಲ್ಲಿ ತೀವ್ರ ಮುಳುಗಿ ಸುಮ್ಮನಾದಳು. ಚಿತ್ರಭಿತ್ತಿಯಲ್ಲಿ ಮುದ್ದಪ್ಪ ಪೊನ್ನಮ್ಮ ಮೂಡಿ ನಿಂತರು. ದುಃಖಭರಿತ ಬಿಸಿಯುಸಿರು ಅಂತರಂಗದಲ್ಲಿ ಬಡಬಾಗ್ನಿಯಂತೆ ಪ್ರಾಣಕುಂಡ ಲಿನಿಯನ್ನು ಸುಡುತಿತ್ತು.

....ಮುದ್ದಪ್ಪನ ವಿಚಾರ ಇನ್ನೂ ಅಜ್ಞಾತವಾಗಿಯೇ ಉಳಿದು, ಜೇಲ ರನ ಕಣ್ಣು ತಪ್ಪಿಸಿ ಅಪರೂಪವಾಗಿ ಬರುತಿದ್ದ ಕಾಗದಗಳು ನಿಂತು ಹೋಗಿ ಯಾವ ಕಾಲವೋ....ಯೋಚನಾತೀತವಾದ ವಿಚಾರ ಸರಣಿಯಲ್ಲಿ ಭಾವನಾ ತೀತವಾದ ಭಾವಧಾರೆಯಲ್ಲಿ ಅನವರತ ಮುಳುಗೆದ್ದ ಮಡದಿಯ ಕಮನೀಯ ಮೂರ್ತಿ ಕಮರಿ ಶೀರ್ಣಿತವಾಗಿ ದರ್ಶಕರ ಮನಸ್ಸು ದ್ರವಿತ ಮೋಘವಾಗು ವಂತಿತ್ತು. ಆದರೂ ಕಳೆದುಳಿದ ದೂರದಾಸೆಯು ದೂರದೂರ ಗಮ್ಯಸ್ಥಾನದಲ್ಲಿ ನೆಲೆಗೊಂಡ ಶ್ರೀ ಶುಭಚರಣಗಳನ್ನು ಕುರಿತು ಅಭಿಶಪ್ತ ಹೆಜ್ಜೆಗಳ ಕ್ರಮಗತಿ ಯಲ್ಲಿ ನೀರಸವಾಗಿ–ಯಾಂತ್ರಿಕವಾಗಿ ದಿನವೊಂದು ಗತಿಸಿದಾಗ ಶ್ರುತಿಸಂವೇದ ನೆಗಳು ಶೂನ್ಯವಾಗಿ ತೋರಿದರೂ, ಸುಪ್ತ ಅದಮನೀಯ ಆಶಾಭಾವ ನಿರಾಸೆಯ ಕಡಲಲ್ಲಿ ಮುಳುಗೆದ್ದು ಹೃದಯ ಪುಷ್ಪವನ್ನು ದಳದಳವಾಗಿ ಸುಡು ತ್ತಿರುವಾಗಲೂ, ಯಾರ ಪ್ರತೀಕ್ಷೆಯಲ್ಲಿ ಅತ್ಯಂತ ಕಠಿಣವಾದ ದುರ್ದಿನಗಳು ಉರುಳಿದುವೋ ಆತ ಪುನರಾಗಮಿಸಲಾರ ಎಂಬ ನಿರ್ಧಾರವಂತೂ ಮೂಡ ಲಿಲ್ಲ. ದೀಕ್ಷೆ-ಸಂಸ್ಕಾರ ಮಾನವೀಯತೆಗೆ ಪರಿಪುಷ್ಟಿ ನೀಡಿದ್ದರೂ, ಬೌದ್ಧಿಕ ಭಾವಾತ್ಮಕ ಶ್ರದ್ಧೆ ತುಂಬಿದ್ದರೂ ನೆಲೆಯರಿತು ಮುಂದಿಟ್ಟ ಶುಭಚರಣಗಳು ಜಾರಿ ವಿಧಿಯ ವ್ಯಘಾತಗಳಿಗೆ ಸಿಕ್ಕಿ ನುಚ್ಚು ನೂರಾಗುವಾಗ ಆ ನಿತ್ಯಕರ್ಮ ಚಾರಿಣಿ ಧೃತಿಗೆಡುವುದಿಲ್ಲ ಎಂದೇನಿಲ್ಲ. ಆಕೆಯೂ ಸಹ ಕೇವಲ ಸಾಮಾನ್ಯ ಸ್ತ್ರೀ ; ಮಾನವ ಮಾತ್ರಳು ಸಹ.

ಆಗಸದಲ್ಲಿ ತಾರೆಗಳ ತುಂಬು ಸಭೆ ನಡೆದಿತ್ತು. ಸನ್ಮಾನ್ಯ ಅರ್ಧ ಚಂದ್ರಮ ಅಧ್ಯಕ್ಷ ಪೀಠದಲ್ಲಿ ಅಭಿಷಿಕ್ತನಾಗಿದ್ದಾನೆ. ಶೈವಾಲ ಜಾಲ ಮುಕ್ತ ಕಮಲಿನಿಯಂತೆ ಸ್ವಚ್ಛ ನೀಲಿಮಾ ಕಾಂತಿ. ಶುಕ-ಸಾರಿಕೆ, ಲಾವಾ-ತಿತ್ತಿರ ಪಕ್ಷಿ ಸಂಗಡಗಳು ಸುಖನಿದ್ರೆಯಲ್ಲಿದ್ದುವು. ಅದ್ಭುತ ಶಾಂತಿಯ ಮಹಾ ವ್ಯಾಪ್ತಿಯಲ್ಲಿ–ವನವನಾಂತರಗಳ ಸಮ್ಮೋಹನಕಾರಿ ಜಡಿಮೆಯಲ್ಲಿ ಚರಿಸಿ ಹಸುರುಂಡು ಹಸುರಾಂತ ಮಂದ ಮಾರುತ ಲೋಧ್ರರೇಣುವಿನಿಂದ ಸಂಸ್ಕಾರ

ಹೊಂದಿ ಮುಂಬರಿದಾಗ ಇನ್ನೆಂತಹ ಮೋಹಕ ಶೈಲಿ ಅನುಭೂತವಾಗಿತ್ತೋ. ಈ ವಿಚಿತ್ರಲೋಕದಲ್ಲಿ ಇಂತಹ ಮಹತ್ಪೂರಿತ ಶಾಂತಿ ದೊರೆಯುತ್ತದೆ ಎಂದು ಯಾರಾದರೂ ಹೇಳಿದ್ದರೆ ನಂಬುವುದಕ್ಕೇ ಆಗುತ್ತಿರಲಿಲ್ಲವೇನೋ....ಆದರೆ ಅದು ಪ್ರತ್ಯಕ್ಷವಾಗಿಯೇ ಇದೆ–ಕನ್ನಡಿಯೊಳಗಿನ ಅದ್ಭುತ ಗಂಟೆನಂತೆ. ಲೋಕಾಲಯದ ಭಾಸಮಾನ ತಡಿಯಲ್ಲಿ ಎಷ್ಟೊಂದು ಮೋಹಕತೆ-ಮಾರ್ದವತೆ–ಆಕರ್ಷತೆ ಇದೆಯೋ ಅಷ್ಟೇ ಸಂಕಟಾವತರಣವೂ ಇದೆ ಎಂಬುದು ಹೊಸದೇನಲ್ಲ. ಪ್ರಯತ್ನಿಸಿದಷ್ಟೂ ದೂರ ಸರಿವ ಬಿಸಿಲ್ಗುದುರೆಯಂತೆ ವಂಚಿಸುವಾಗ ಸುಡುಹಗಲಿನ ದಳ್ಳುರಿಗಿಂತ ರಾತ್ರಿಯ ಶಾಂತಿಯುರಿ ಮುಳ್ಳಿನ ಪಂಕಕ್ಕಿಂತಲೂ ಮಿಗಿಲು

ಬಾಳು....ಬದುಕು.

ಬದುಕು....ಬಾಳು.

ಒಂದನ್ನುಳಿದು ಒಂದಿಲ್ಲವಾದರೂ ಒಂದಕ್ಕೊಂದು ಹೊಂದಾಣಿಕೆಯೇ ಇಲ್ಲ. ಎಷ್ಟೇ ಜಾಗ್ರತರಾಗಿದ್ದರೂ ಈ ವಿಶಾಲ ಪ್ರಪಂಚದಲ್ಲಿ 'ಶಾಂತಿ' ಎಂಬ ಅಸಾದೃಶ್ಯ ವಸ್ತುವನ್ನು ಪಡೆಯುವುದು ಅಷ್ಟು ಸುಲಭವೂ ಅಲ್ಲ— ಜೀವನ ಕಾಂತಾರದ ಗಾಢಾಂಧಕಾರ ಮಾರ್ಗಯೋಗದಲ್ಲಿ ಉಜ್ವಲವಾದ ನವಕಾಂತಿಯನ್ನು ಸೃಷ್ಟಿಸಿಕೊಂಡು ದೂರಗಮ್ಯದೆಡೆಗೆ ನೇರವಾಗಿ ಧಾವಿಸಲು ಭಾರತ ರಮಣಿಯರು ಎಂದಾದರೂ ಶಕ್ತರಾಗಬಲ್ಲರೇ....? ಆ ಮಹಾಕ್ರಾಂತಿಯ ಪವಿತ್ರ ಯಜ್ಞಕುಂಡದಲ್ಲಿ ಇನ್ನೆಷ್ಟು ಮಂದಿ 'ಹವಿಸ್ಸು' ಮತ್ತು 'ಸಮಿತ್ತು' ಆಗಲಿರುವರೋ ಆ ದೇವಾದಿದೇವನೊಬ್ಬನೆ ಬಲ್ಲ....

ಪೂವಿ ವಿಚಾರವಾಹಿನಿಯ ಮಹಾಪೂರದಲ್ಲಿ ಮುಳುಗೆದ್ದು ನಿಟ್ಟುಸಿರು ಬಿಟ್ಟಳು.

ಅಂಗಳದ ಬದಿಯಲ್ಲಿ ರಂಜದ ಮರದ ಕೆಳಗಡೆ ಮಣ್ಣಿನ ಮನೆಯೊಂದನ್ನು ಕಟ್ಟುವುದರಲ್ಲಿ ನಿಮಗ್ನರಾಗಿದ್ದ ಮಕ್ಕಳನ್ನು ಕೂಗಿ ಕರೆದಳು ಪೂವಿ,

"ಇಬ್ಬರೂ ಒಳಗಡೆ ಬನ್ನಿ ; ಮೈ ಕೈ ನೋಡುವಂತಿಲ್ಲ. ಮೊದಲು ಸ್ನಾನ ; ಅನಂತರ ಆಟ."

"..."

ಒಮ್ಮೆ ಕರೆದರೆ ಅವರು ಹೆಂದುವವರಲ್ಲವೆಂಬುದು ಅನುಭವ ವೇದ್ಯ. ಅಂತಲೇ ಮತ್ತೆ ಒತ್ತಾಯಿಸಿದಳು ಪೂವಿ "ಬಟ್ಟೆಯೆಲ್ಲಾ ಕೊಳಕು.ಇದೆಂಥಹ ಕರ್ಮ? ಬರುತ್ತೀರೋ ಇಲ್ಲವೋ?"

"ಇನ್ನಿಷ್ಟು ಕಟ್ಟುವುದಿದೆ....ಅದನ್ನು ಮುಗಿಸಿಯೇ ಬರುತ್ತೇವೆ. ಉತ್ಸಾಹಿತ ಕೋಮಲ ಸ್ವರ ಶಾಂತ ಮನೋಹರವಾಗಿ ಹರಿಯಿತು. ಗಂಗಾ ಹಾಗೆಂದಮೇಲೆ ತಂಗ ಕದಲುವವಳೇ ಅಲ್ಲ. ಪೂವಿ ಮಕ್ಕಳ ಪ್ರತೀಕ್ಷೆಯಲ್ಲಿ ಜಗಲಿಯ ಕಂಬಕ್ಕೆ ಮೈಯೊರಗಿ ನಿಂತುಕೊಂಡಳು. ಮಾಳಿಗೆಯ ಜಾಲರಿಯ ಸಂದಿಯಿಂದ ತೂರಿ ಬರುವ ಬಿಸಿಲ್ಕೋಲುಗಳು ಮುಖ ಮೈಗಳ ಮೇಲೆ ಅಲ್ಲಲ್ಲಿ ವರ್ತುಲಾಕಾರವಾಗಿ ಅಚ್ಚೊತ್ತಿ ನೆರಳು ಬೆಳಕಿನ ಬಲೆಯನ್ನು ನೆಯ್ದಿದ್ದುವು ಎಲ್ಲೋ ಅಲಕ್ಷಿತ ಅಪ್ಸರ ಸೌಂದರ್ಯದೀಪ್ತಿ ವನದೇಶಕ್ಕೆ ಸಿಡಿದು ಹೆಣ್ಣಾಗಿ ಮೈವೆತ್ತು ಬಂದಂತಿದ್ದ ಪೂವಿ ನಿಂತ ನಿಲುವಿನಲ್ಲಿ ಬಹಳ ಹೊತ್ತು ಯೋಚನಾಮಗ್ನಳಾದಳು. ಸ್ತಬ್ಧ ಚಿತ್ರ ಚಿಂತಾಸ್ನಾನ ಮಾಡುವಾಗ ಸುನೇತ್ರದ್ವಯಗಳಲ್ಲಿ ತಾತ್ಕಾಲಿಕ ಸ್ಫೂರ್ತಿ ಸಾಮಾನ್ಯತರವಾಗಿ ನಲಿಯುತಿತ್ತು.

"ಅಮ್ಮಾ....!"

"......."

"ಅಮ್ಮಾ....ಅಮ್ಮಾ!"

"ಏನಮ್ಮಾ?"

"ಈ ಮನೆ ನೋಡಿ."

"...."

"ಹೇಳಿ ಹೇಗಿದೆ?"

"ಓ....ತುಂಬ ಚೆನ್ನಾಗಿದೆ! ಇನ್ನೇನು ಮುಗಿಯಿತಲ್ಲ, ಇಬ್ಬರೂ ಒಳಗೆ ಬನ್ನಿ."

ಹುಡುಗಿಯರಿಬ್ಬರೂ ಏಕೀಭವಿಸಿ ಉತ್ಸಾಹಪೂರ್ಣ ಧ್ವನಿಯಲ್ಲಿ ಉತ್ತರಿಸಿದಳು,

"ಆಯಿತು....ಈಗಷ್ಟೆ ಬಂದು ಬಿಡುತ್ತೇವೆ!"

ಹಾಗೆಂದರೂ ಆ ಮನೆ ಕಟ್ಟಿ ಮುಗಿಯಲಿಲ್ಲ. 'ಆಯಿತು ಆಯಿತು'

ಎನ್ನುತ್ತಿರುವಂತೆಯೇ ಹೊತ್ತು ನೀರಿನಂತೆ ಕರಗುತಿತ್ತು. ಪೂವಿ ಮಕ್ಕಳಿಗಾಗಿ ಕಾದು ಒಳ ಬಂದಾಗ, ಐಮರದ ಮೇಲೆ ಕುಳಿತು ಪುಸ್ತಕಾವಲೋಕನದಲ್ಲಿ ಮುಳುಗಿದ್ದ ಕಾವೇರಿ ಕೇಳಿದಳು,

"ಮಕ್ಕಳು ಒಳ ಬಂದರೇ ?"

"ಇಲ್ಲ ...ಆಯಿತು ಎನ್ನುತ್ತಲೇ ಇದ್ದಾರೆ."

"ಹೋಗಲಿ ಬಿಡು. ರಜೆ ಇದೆ. ಆಟ ಆಡಿಕೊಳ್ಳಲಿ."

ಪೂವಿ ಮುಗುಳು ನಕ್ಕಳು.

ಶ್ವೇತಾಂಬರ ಧಾರಿಣಿ ಕಾವೇರಿಯ ತಿಲಕರಹಿತ ಲಲಾಟದ ಮೇಲೆ ಅಂಡಲೆಯುವ ಅಲಕ ರಾಶಿ ಬೆಳ್ಳಿಯ ಎಳೆಗಳಂತೆ ಹೊಳೆಯುತಿದ್ದುವು. ಮುಖ ಬಿಂಬದ ಉಜ್ವಲಕಾಂತಿ ಪ್ರೇಕ್ಷಕರ ನಯನಮಾರ್ಗದಿಂದ ಹೃದಯಕುಂಡಲನಿಯನ್ನು ಪ್ರವೇಶಿಸಿ ಕಲುಷವನ್ನು ಧವಲಿತಗೊಳಿಸುವಂತಿತ್ತು. ಸ್ವಲ್ಪ ಹೊತ್ತು ಸುಮ್ಮನಿದ್ದು ಶಾಂತ ಸ್ವರದಲ್ಲಿ ಹೇಳಿದಳು ಅವಳು.

"ಮಾನವ ಜನ್ಮದಲ್ಲಿ 'ಬಾಲ್ಯ' ಎಂಬುದು ಉತ್ತಮ ಘಟಕ. ಈಗ ಎಷ್ಟು ಸುಖಶಾಂತಿ ಪಡೆದುಕೊಳ್ಳುವರೋ ಅಷ್ಟೇ ಮಹಾಭಾಗ್ಯ. ಮುಂದಿನ ಕತೆ ಯಾರು ಬಲ್ಲರು ?"

"ಹಾಗೆಂದರೆ ಸ್ನಾನ–ಊಟ ಏನೂ ಇಲ್ಲದೆ ಇದ್ದಾರು;"

"ಅದಕ್ಕೆಷ್ಟು ಸಮಯಬೇಕು ? ಅನಂತರ ಮಾಡಿದರಾಯಿತು."

ಇಬ್ಬರ ಮುಖದಲ್ಲೂ ಸುಖದುಃಖಗಳ ತೆರೆ ಹಂದಾಡಿ ಹೋಯಿತು. ಪೂವಿ ಒಳಹೋಗುತ್ತ ಅಂದಳು "ನನ್ನದಿನ್ನೂ ಪೂಜೆ ಆಗಲಿಲ್ಲ. ಮಕ್ಕಳಿಗಿಷ್ಟು ಸ್ನಾನಮಾಡಿಸಿ ಹೋಗುವ ಮನಸ್ಸಿತ್ತು. ಇದುವರೆಗೆ ಕಾದರೂ ಆಟ ಮುಗಿಯಲಿಲ್ಲ."

"ನೀನು ಮಕ್ಕಳನ್ನಷ್ಟೇ ನೋಡುತಿದ್ದರೆ ಈ ಮನೆ ನಡೆಯದು ಪೂವಿ. ಮಾದು ಮನೆಯಲ್ಲಿದ್ದರೆ ಇದ್ದ. ಇಲ್ಲದಿದ್ದರೆ ಇಲ್ಲ. ಸಂದರ್ಭೋಚಿತವಾಗಿ ನಾಲ್ಕು ಮಾತು ಹೇಳಿ ನೋಡು. ಕೆಲಸಕ್ಕೆ ಬಾರದ ಈ ಶಿಥಿಲ ಶರೀರಕ್ಕೆ ಎಷ್ಟೊಂದು ಶ್ರದ್ಧೆ-ಗೌರವತೋರುತ್ತಿ? ಆದರೆ...."ಒಂದೆರಡು ನಿಮಿಷ ಸುಮ್ಮನಿದ್ದು ಪುನಃ "ಭಗವಂತನ ಅಮೃತ ಭರಣಿಯಿಂದ ಯಾರೂ ಎಲ್ಲವನ್ನೂ ಹೊಂದಿರುವುದಿಲ್ಲ. ಆದರೂ ಎಲ್ಲ ಅಂತರಂಗದಲ್ಲೂ 'ಮೋಹಾಶಕ್ತಿ' ಎಂಬುದು

ಇದ್ದೇಇರುತ್ತದೆ. ದಿನ ನಿತ್ಯ ಅದರ ಶೇಖರಣೆಯಾಗದೆ ಹೋದರೆ ಎಂತಹ ಅಗಾಧವಾದ ನಷ್ಟ ? ನಮ್ಮ ಕುಟುಂಬ ನರಳುತ್ತಿರುವುದೇ ಆ ಅತೀವ ನಷ್ಟ ದಿಂದ..."

ಆ ಕ್ಷರ ಅಕ್ಷರವೂ ಅಂತರಾಳಕ್ಕಿಳಿಯಿತು. ಪೂವಿ 'ನಿಜ' ಎಂದು ಕೊಂಡಳು ಮಾತಾಡಲಿಲ್ಲ. ಚಿತ್ತ ಮುದ್ದಪ್ಪನ ಬಳಿ ಸುಳಿದಾಡಿ ಅಂತರಂಗದ ವೇದನೆಯನ್ನೆಲ್ಲಾ ನಿವೇದಿಸಿಕೊಂಡಿತು. ಮೂರ್ತಿಮತಿಯಂತೆ, ಮಂತ್ರ ಮುಗ್ಧಳಂತೆ ಹಾಗೇ ನಿಂತು ಕೊಂಡಳು. ಮುಖಭಾವ ನಿಸ್ಸಹಾಯಕತೆ ಯನ್ನು ಸೂಚಿಸುತಿತ್ತು. ಎದುರಿನ ಪ್ರಕೃತಿಯು ಅಂತರಾಳದಲ್ಲಿ ಹರಿದಾಡುವ ಯೋಚನಾತರಂಗಗಳನ್ನು ದುಃಖದಗ್ಧಭಾವದಿಂದ ಗ್ರಹಿಸಿದಳು ಪೂವಿ. ಹೇಗೆ ಯಾವ ರೀತಿಯಲ್ಲಿ ಸುಧಾರಿಸಿಕೊಳ್ಳಬೇಕೆಂಬುದೇ ಹೊಳೆಯುತ್ತಿಲ್ಲ. ತನ್ನದೇ ತನಗೆ ಸರ್ವತ್ರ ಭಾರವಾಗಿರುವಾಗ ತಾನಾದರೂ ಏನು ಮಾಡಬಲ್ಲೆ ಎಂದೆನಿಸಿ ಒಂದು ಘಳಿಗೆ ಭಾವಾವಿಷ್ಟಳಾದಳು. ಅಂತರ್ಗತ ಆತ್ಮಪ್ರವಾಹದ ಅಲ್ಲೋಲ ಕಲ್ಲೋಲ ಕಲಕಲ ಧ್ವನಿಯನ್ನು ಅತ್ಯಂತ ತನ್ಮಯತೆಯಿಂದ ಆಲೈಸು ನಂತಿತ್ತು ಸಂಭ್ರಾಂತ ಚಿತ್ತ.

"ನೀನೆಲ್ಲಾ ಮಾಡಬಲ್ಲೆ ಪೂವೀ....ನಿನ್ನ ಮಾತಿಗೆ ಗೌರವವಿದೆ." ಜನನಿಯ ಅಭಿಪ್ರಾಯ ನಿತಾಂತ ಶಾಂತಿಯಿಂದ ಹೊರಬಿತ್ತು. ಕಣ್ಣುಗಳ ಶ್ರಾಂತಭಾವ...ಸಮಸ್ತ ಕಲ್ಯಾಣ ಯಾವುದರಿಂದ ಸಾಧಿತವಾಗುವುದೋ ಅದೇ ಪರಮ ಸತ್ಯ, ಸರ್ವ ಶ್ರೇಷ್ಠ....ಎಂದು ಕೂಗಿ ಹೇಳುವಂತಿತ್ತು.

ಆ ಅನಿರೀಕ್ಷಿತ ಮಾತಿನಿಂದ ಪೂವಿ ಸಂದಿಗ್ಧಾವಸ್ಥೆಗೆ ಸಿಲುಕಿದಂತೆ ಅಪ್ರತಿಭಳಾಗಿ ನುಡಿದಳು,

"ನಾನು ಏನು ಮಾಡಲಿ ಅವ್ವಾ ? ಮಾದು ನನ್ನ ಮಾತು ಕೇಳ ಯಾರೇ ?"

ನುಡಿಯೇನೋ ತೊಟ್ಟು ಕಳಚಿದಂತೆ ಹೊರಬಿತ್ತು. ವಿಷಯುವನ್ನು ತನ್ನಲ್ಲಿಯೇ ಪುನಃಪುನಃ ವಿಮರ್ಶಿಸಿಕೊಂಡಳು. ಆದರೂ ಸಮಯೋಚಿ ತವೂ ಸಮಂಜಸವೂ ಆದ ಉತ್ತರ ಹೃದಯ ನಿಘಂಟಿನಲ್ಲಿ ದೊರೆಯುವುದು ಕಷ್ಟ...ಏನೋ ಒಂದು ರೀತಿಯಲ್ಲಿ ಮಂತ್ರಿತಳಂತೆ ಹಾಗೇ ನಿಂತಿದ್ದಾಳೆ. ಅವಳನ್ನು ಹುಬ್ಬೆತ್ತಿ ನೋಡಿದ ವೃದ್ಧ ಜನನಿ ಏನನ್ನೋ ಹೇಳಲು ಬಯಸಿ

ದ್ದರೂ ತುಟಿಗಳು ಬಿರಿಯಲಿಲ್ಲ. ಆಲೋಚನಾ ತರಂಗಗಳ ಉಗ್ರರಭಸಕ್ಕೆ ಸಿಕ್ಕಿ ಹೃದಯ ಸಂಘರ್ಷಣೆಗೊಳಗಾಗಿತ್ತು. ಊಹಾತೀತವಾದ ಲಘು ಕಂಪನ ತನುಮನಗಳಲ್ಲಿ ಹರಿದಾಡಿ........ ಸ್ವಲ್ಪ ಹೊತ್ತು ಗಂಭೀರ ಮೌನವು ರಾಜ್ಯವಾಳಿತು. ಪೂವಿ ಪೂಜೆಗೆ ಹೋಗಲು ಬಯಸಿದ್ದ ಳೇನೋ........ಹಾಗೇ ಹಿಂದಿರುಗಿ ಬಂದಳು. ಆ ಮಂಗಳಚರಣ ಭಂಗಿ ಯನ್ನು ನಿಶ್ಯೇಷ ಭಾವದಿಂದ ನಿಟ್ಟಿಸಿ ಕವಿಗಳು 'ಸ್ತ್ರೀ' ಯನ್ನು 'ಮರಾಳ ಗಾಮಿನಿ' ಎಂದು ಏಕೆ ಕರೆದರು ಎಂಬುದು ಈಗ ಅರ್ಥವಾಯಿತು ಎಂದು ಕೊಂಡಳು ಸ್ವಾಮಿನಿ.

"ಇಂದು ಮನೆಗೆ ಬಂದಮೇಲೆ ನೀವೇ ನಾಲ್ಕು ಹಿತವಾದ ಮಾತು ಹೇಳಿ ಬಿಡಿ. ಆಗ ನಾನೂ ಒಂದೆರಡು ಮಾತು ಹೇಳಿ ನೋಡುವೆ."

"ಈ ಜೀವನ ಶಾಂತಿ ಇದ್ದಿದ್ದರೆ ನೆಮ್ಮದಿಯಿಂದ ಕಣ್ಣು ಮುಚ್ಚಬಹು ದಾಗಿತ್ತು." ಎಂದಳು ಜನನಿ. ನುಡಿ ಎದೆಯಾಳದಿಂದ ಹರಿದುಬಂತು. ಮುಖ ಬಿಂಬದಲ್ಲಿ ಅಶಾಂತಿಯ ಕಪ್ಪುಛಾಯೆ ಅಲೆಯಲೆಯಾಗಿ ಹರಿದಾಡಿತು. ಒಂದು ಘಳಿಗೆ ಸುಮ್ಮನಿದ್ದು ಅನಂತರ ಮುಂದುವರಿದಳು "ಆದರೆ ನನ್ನ ಹಣೆಯಲ್ಲಿ ಅಂತಹ ಅದೃಷ್ಟರೇಖೆ ಬರೆದಿದೆಯೋ, ಇಲ್ಲವೋ. ಅದೇ ನನಗೆ ಸಂದೇಹ."

ಆಗ ಪೂವಿ ದೃಢ ಕಂಠದಿಂದ ಹೇಳಿದಳು,

"ನಮ್ಮಿಂದಾಗುವಂತಿದ್ದರೆ ಯಾವುದು ಅದೃಷ್ಟವೋ ಅದು 'ಅಸಂಭವ' ವೇಕೆ ಆಗಬೇಕು ? ಮನೆಗೆ ಬರಲಿ, ಒಮ್ಮೆ ವಿಷಯವನ್ನು ಚರ್ಚಿಸಿಯೇ ಬಿಡೋಣ."

ಕಾವೇರಿಯ ತುಟಿಗಳು ಬಿರಿಯಲಿಲ್ಲ; ಮುಖಭಾವ ಸಮ್ಮತಿ ಸೂಚಿ ಸಿತು.

ಪೂವಿ ತನ್ನ ಇಷ್ಟದೈವವಾದ ಕೊಳಲಕೃಷ್ಣನ ಪೂಜೆಗೆ ಹೊರಟಿರು ವಾಗ ಮಕ್ಕಳಿಬ್ಬರೂ ಒಳಬರುತ್ತಿದ್ದುದನ್ನು ಕಂಡು, ಹೆಜ್ಜೆ ತೆಗೆಯದೆ ಅಲ್ಲೆ ನಿಂತು "ಇಬ್ಬರೂ ಈಗ ಕೈಕಾಲು ತೊಳೆದುಕೊಳ್ಳಿ; ಅನಂತರ ಸ್ನಾನ ಮಾಡಿದರಾಯಿತು" ಎಂದಳು. ಸಿಂಧೂರಯುಕ್ತ ಬೈತಲೆಯ ಮೇಲೆ ಅಲೆ ಗೂದಲು ತೆರೆ ಆಚ್ಛನ್ನವಾಗಿತ್ತು.

ಮಕ್ಕಳಿಬ್ಬರೂ ಬಚ್ಚಲು ಮನೆಯಕಡೆ ಓಡಿದರು.

ವೃದ್ಧ ಜನನಿ ಅದೇ ವಿಚಾರದಲ್ಲಿ ಸಂಪೂರ್ಣ ನಿಮಗ್ನಳಾದಳು. ಎಡಗೈ ಶಿರೋಭಾರವನ್ನು ಹೊತ್ತಿತ್ತು. ಅಂತರ್ನಿಹಿತ ಭಾವಜ್ವಾಲೆ ತನು ಮನಗಳನ್ನು ಆವರಿಸುತಿತ್ತು. ಆಕೆ ಏನೂ ಹೇಳಲಿಲ್ಲ.

ಹಸುರಾಂತ ವನವಲಯದಲ್ಲಿ ಪಕ್ಷಿಪಂಗಡಗಳ ಸಭೆ ನಡೆದಿತ್ತೇನೋ. ಚಿಲಿಪಿಲಿರಾಗ ಅವಿರಳವಾಗಿ, ಹೃದಯಂಗಮವಾಗಿ ಕೇಳಿ ಬರುತ್ತಲೇ ಇತ್ತು.

೩೭

....ಸಾಂಧ್ಯದೀಪ್ತಿ ನಭೋಮಂಡಲದಲ್ಲಿ ತುಂಬಿ ಹರಡಿತ್ತು.

....ವಿದ್ಯುತ್ ದೀಪಗಳು ಮನೆಮನೆಯಲ್ಲಿ ಮಂದ ಮಂದ ಕಾಂತಿಯಿಂದ ಉರಿಯುತ್ತಿವೆ.

ದೂರ ಭವಿಷ್ಯತ್ತಿನಲ್ಲಿ ಜೀವನ ದೀಪ್ತಿ ಉಜ್ವಲವಾಗಿ ಉರಿಯುವುದು ಅಸಂಭವವೇನಲ್ಲ. ಮುಖ್ಯವಾಗಿ ಮಾದೇವನ ದಯೆ ಇದ್ದರೆ ಸಾಕು... ಯೋಚಿಸುತ್ತ ನಿಟ್ಟುಸಿರು ಬಿಟ್ಟಳು ಕಾವೇರಿ. ಮುಖಮಂಡಲದಲ್ಲಿ ಅಸಂಖ್ಯಾತ ರೇಖೆಗಳ ಮಧ್ಯೆ ಗೋಚರಿಸುತಿದ್ದ ಭಾವಧಾರೆ ಹೃದಯ ಕುಂಡಲಿನಿಯಿಂದ ಅಲೆಯಲೆಯಾಗಿ ಬಂದು ಹೋಗುತ್ತಿರುವಂತೆ ಭಾಸವಾಗುತಿತ್ತು. ಸುಖದುಃಖಗಳ ಮೂರ್ತರೂಪ ಎದೆಯರಂಗದಲ್ಲಿ ನಿತ್ಯ ನೂತನ ಶೈಲಿಯಿಂದ ಲಾಸ್ಯವಾಡುವಾಗ ಹೊಮ್ಮುವ ಪದವಿನ್ಯಾಸದ ಕಿಂಕಿಣಿನಾದ ಕರ್ಣದೇಶಗಳಿಗೆ ಸ್ಪಷ್ಟವಾಗಿ ತಾಗುತಿತ್ತು. ಕಾವೇರಿ ಮೈಮರೆತವಳಂತೆ ಹಾಗೇ ಕುಳಿತಿದ್ದಾಳೆ. ಈಚೆಗೆ ಅವಳ ದೇಹ ಪ್ರಕೃತಿ ತುಂಬ ಸುಸ್ತಾದಂತೆ ಕಳವಳಕಾರಕವಾಗಿದ್ದುದರಿಂದ ಔಷಧಿ–ಚಿಕಿತ್ಸೆ ನಡೆಯುತ್ತಿದೆ....ಅತೀವ ಶ್ರದ್ಧೆ, ಅತುಲ ಆಸ್ಥೆ ಈ ಬಳಿಯೇ ಸುಳಿದಾಡುತ್ತಿರುತ್ತವೆ.

"ಕಾವೇರಿ ಸಂಕ್ರಮಣ" ಆಚರಿಸಿ ನಾಲ್ಕು ದಿನಗಳು ಸಂದುವು. ನಾಡಿನಾದ್ಯಂತ ಸಂತಸದೌತಣವನ್ನು ನೀಡಿದ ಕಾವೇರಿ ಸಂಕ್ರಮಣ ಮನೋಲ್ಲಾಸಕರವಾಗಿ ಕಳೆಯಿತು. ಮಡಿಕೇರಿಯಿಂದ ಮನೆಗೆ ಬಂದಿದ್ದ ಚಿಟ್ಟಿಮನು ನೆರೆಮನೆ ಬಾಲಕರೊಂದಿಗೆ ಬಾಲೋಚಿತವಾದ ಆಟಪಾಠಗಳಲ್ಲಿ ಮುಳುಗಿ,ಆನಂದವಾಗಿ ಹೊತ್ತು ಕಳೆದು ಎಲ್ಲರಿಗೂ ಸುಗ್ಗಿಯ ಸಗ್ಗದ ಅಮೃತ ಪಾನ ಮಾಡಿಸಿದರು. 'ನೆಲ್ಲಕ್ಕಿ ನಡು ಬಾಡೆ' ಯಲ್ಲಿ 'ಕಣಿ' ಪೂಜಿಸಿ ಎಲ್ಲರ ಆಶೀರ್ವಾದ ಪಡೆದು ತಂಗಿಯರಿಗೆ ಮುದವನ್ನೀಡಿ ಚಿಗರಿಗಳಂತೆ ಜಿಗಿದಾಡಿ ನಿರ್ಗಮಿಸಿದ ಮೇಲೆ ಯಥಾರೀತಿ ಮನೆಯೆಲ್ಲ ಬಣಬಣ. ಗದ್ದೆ ತೋಟಗಳ ಕಡೆಹೋದ ಮಾದು ಇನ್ನೂ ಮನೆಗೆ ಮರಳಿರಲಿಲ್ಲ. ಬಾಲಕಿಯರಿಬ್ಬರೂ ಸರ

ಸ್ವತೀ ವರಪ್ರಸಾದವನ್ನು ಹಂಚಿಕೊಳ್ಳುತ್ತ ಗಂಭೀರಲೋಕದಲ್ಲಿ ಮುಳುಗಿದ್ದಾರೆ. ಐಮರದಮೇಲೆ ಕುಳಿತು ಭಾವನಾಲೋಕದಲ್ಲಿ ಮುಳುಗಿ ಅವರೆಡೆಗೆ ಆಗಾಗ ದಿಟ್ಟಿಯನ್ನು ಹೊರಳಿಸುತ್ತಿದ್ದ ಪೂವಿಯ ಚಿತ್ತ ವಿವಶವಾಗಿತ್ತು. ಎದ್ದು ಕೈಗೊಂದು ಪುಸ್ತಕವನ್ನು ತೆಗೆದುಕೊಂಡಳು. ಹಾಳೆಗಳನ್ನು ತಿರುವಿ ಹಾಕಿದರೂ ಚಿತ್ತ ವಿಷಯವನ್ನು ಸಂಗ್ರಹಿಸುತ್ತಿಲ್ಲ. ಏನೋ ಒಂದು ಬಗೆಯ ಕಿಸಿಸಿಗೆ - ಇನ್ನೇನೋ ಒಂದು ಬಗೆಯ ಬೇಸರ. ಪುಸ್ತಕವನ್ನು ಮುಚ್ಚಿ ನೋಟವನ್ನು ಗವಾಕ್ಷಿಯ ಕಡೆ ಹರಿಸಿದಳು. ಅಭ್ರಮಣಿ ಅಸ್ತಂಗತನಾಗಿ ಅರ್ಧ ತಾಸಾದರೂ ಕಳೆದಿತ್ತೇನೋ. ಪ್ರಶಾಂತ ಬೆಳಕಿನ ಮಂಗಳ ವರ್ಷ ಧಾರೆಯಲ್ಲಿ ಮಿಂದ ಜಗತ್ತು ಪುನೀತವಾಗಿದೆ. ವನವನಾಂತರಗಳ ಹಸುರಿನ ಮೇಲೆ ಹರಿದ ಸುಂದರ ಸರಳ ಪ್ರದೀಪ್ತಿ ಶಿವನ ನೀಲ ತುಟಿಗಳ ಮೇಲೆ ಹರಿದ ಸ್ಮಿತಧಾರೆಯಂತೆ ಕಂಗೊಳಿಸುತಿತ್ತು. ಅಂಗಳವೆಲ್ಲ ರೇಶಿಮೆಯ ವರ್ಣರಂಜಿತ ಹಾಸು–ಹೊಕ್ಕಿನ ರೇಖೆಗಳಂತೆ, ಚಿತ್ರಮಯ ರಂಗೋಲಿಯಂತೆ, ಚಿತ್ರಕಾರನ ಕುಂಚಕ್ಕೆ ಮೈಯಾಂತ ನವರೂಪಿನಂತೆ ನೆರಳು-ಬೆಳಕಿನ ಜೋಡಣೆಯಾಗಿತ್ತು. ಆ ಸೌಂದರ್ಯರಾಶಿಯನ್ನು ನೋಡುತ್ತಿದ್ದಂತೆ ಹೊರಜಗತ್ತು ಮನಃಪ್ರಾಣಗಳನ್ನು ಸೂಜಿಗಲ್ಲಿನಂತೆ ಸೆಳೆದುವು. ಸಂಧ್ಯಾ ಶಾಂತಿಯನ್ನು ಮೈದುಂಬಿಕೊಂಡ ಸೀಕರಸಿಕ್ತ ವೀಚಿವಾಯು ಮಂದಾರ ಪುಷ್ಪಗಳನ್ನು ಮುದ್ದಿಸುತ್ತಾ ಮಂದಗತಿಯಲ್ಲಿ ತೀಡುತಿದ್ದ. ಪೂವಿ ಅಲ್ಲಿಂದೆದ್ದು ಹೊರ ಬಂದಳು. ಅಂಗಳದಲ್ಲಿ ನಳನಳಿಸುವ ಹೂಗಿಡಗಳು ಕಣ್ಮನಗಳನ್ನು ಆಕರ್ಷಿಸುವಂತಿವೆ. ಧವಳಾಯಮಾನ ಸುಂದರ ಗುಲಾಬಿ ಸೇವಂತಿಗೆ ಮಲ್ಲಿಗೆಗಳು ಸಾಯಂ ಸಮಯದ ಮೋಹಕತೆಯಲ್ಲಿ ಮೈಮರೆತು ಆನಂದ ಪ್ರಮತ್ತವಾಗಿವೆ. ಅಲ್ಲೇ ಪದಚಾರಣ ಮಾಡುತ್ತ ಮನವನ್ನು ಗತಕಾಲಕ್ಕೆ ಹರಿಯ ಬಿಟ್ಟಳು-ಪೂವಿ.

ಹಿಂದೆ, ವಿವಾಹ ಪೂರ್ವ ಕಾಂಗ್ರೆಸ್ಸಿನ ಚಳವಳಿಯ ಚಟುವಟಿಕೆಯಲ್ಲಿ ಭಾಗಸ್ಥಳಾಗಿದ್ದ ಒಂದು ಸಂದರ್ಭದಲ್ಲಿ–ಮುದ್ದಪ್ಪ ನಾಣಯ್ಯ ಸರಕಾರಿ ಆಫೀಸುಗಳಲ್ಲಿ ಪಿಕೆಟಿಂಗ್ ನಡೆಸಲು ಸಿದ್ಧರಾಗುತಿದ್ದ ಸಮಯದಲ್ಲಿ ನಾಣಯ್ಯನ ಮನೆಯ ಮಹಡಿಯ ಮೇಲೆ ಮುದ್ದಪ್ಪ ಭಾವೋದ್ವೇಗದಿಂದ ಅಂದಿದ್ದ,

"ನಾಣಯ್ಯಾ. ಇಂಗ್ಲಿಷರ ರಾಕ್ಷಸೀಮನೋವೃತ್ತಿ ನನಗಂತೂ ಬಹಳ ಆಶ್ಚರ್ಯ. ಈ ದೇಶವನ್ನು ಕೊಂಡುಕೊಂಡವರಂತೆ ಅಥವಾ ಅದ

ಕ್ಕಿಂತಲೂ ಮಿಗಿಲಾಗಿ ನಮ್ಮ ಮೇಲೆ ಹಣ ತೆತ್ತವರಂತೆ ಪೈಶಾಚಿಕ ದರ್ಬಾರ್ ನಡೆಸುತ್ತಿದ್ದಾರೆ !"

"ಹೊನ್ನು...ಹೊನ್ನು...ಹೊನ್ನು ! ಹೊನ್ನು ಬಿಟ್ಟು ಕೊಟ್ಟಾರೇ ನಯ್ಯಾ ?" ನೋಟ ಪೂವಿಯಕಡೆ ಹರಿದು ವಿಷಯ ಇದ್ದಕ್ಕಿದ್ದಂತೆಯೇ ಬೇರೆ ದಿಕ್ಕು ಹಿಡಿಯಿತು. "ಹೊನ್ನು ಹೆಣ್ಣು ಮಣ್ಣು ಎಲ್ಲಿದ್ದರೂ, ಹೇಗೆ ಇದ್ದರೂ ಕಿತ್ತಾಟಕ್ಕೆ ಸಾಂದಿ !"

ಮೂವರ ಮುಖದಲ್ಲೂ ನಗು ಒಡೆದು ಮೂಡಿತು.

ಪೂವಿ ಉತ್ತರಿಸಿದಳು,

"ಹೊನ್ನು ಹೆಣ್ಣು ಮಣ್ಣು 'ಪ್ರಚೋದನಕಾರಿ' ಎಂದು ಬೆರಳು ಮಾಡುವುದಕ್ಕಿಂತ ನಿಮ್ಮ ನಿಮ್ಮ ಅಂತರ್ಯದ 'ತಮಸ್ಸ'ನ್ನು ಹಿಡಿದೋಡಿಸುವುದು ಲೇಸು."

"ತಮಸ್ಸಿನ ಕತೆ ಒತ್ತಟ್ಟಿಗಿರಲಿ, ಹೊನ್ನು ಹೆಣ್ಣು ಮಣ್ಣು ಸೂಜಿಗಲ್ಲಿದ್ದಂತೆ ; ನಮ್ಮನ್ನು ಅತ್ತಿತ್ತ ಸರಿಯಲು ಬಿಟ್ಟರಷ್ಟೆ ?"

"ಸರಿ ಸರಿ, ಎಲ್ಲಾ ನಿಮ್ಮ ಮನೋದೌರ್ಬಲ್ಯ !"

"ಆ ಆಕರ್ಷಣೆ ಇಲ್ಲದಿದ್ದರೆ ......ನಾವೆಂದೂ ಸೋಲುವುದಿಲ್ಲ ಬಿಡು."

"ಆ ಆಕರ್ಷಣೆಯೇ ಇರಲಿ, ಏನೇ ಇರಲಿ ಗೆಲ್ಲುವ ಪಣ ತೊಡಿ. ಅದೇ ಜೀವನದ ಸಾರ್ಥಕ್ಯ."

"ಮಹರ್ಷಿ ವಿಶ್ವಾಮಿತ್ರ ಪಣ ತೊಟ್ಟಿರಲಿಲ್ಲವೇ ?" ಎಂದ ನಾಣಯ್ಯ.

"ಹೌದು....ಅವನನ್ನು ತಪೋರಂಗದಿಂದ ಎಳೆದವರು ನೀವು !" ಹಾಸ್ಯ ಪ್ರಧಾನವಾಗಿ ನುಡಿದ ಮುದ್ದಪ್ಪ. ಹೊಳಪುಗಣ್ಣಿನ ಮೇಗಡೆ ಹುಬ್ಬುಗಳು ಏರಿ ಇಳಿದುವು.

"ನಾನಲ್ಲಪ್ಪಾ !"

ಒಡನೆ ನಗುವಿನಲೆ ಉಕ್ಕಿ ಹರಿಯಿತು.

ನಾಣಯ್ಯ ಸವಾಲು ಹಾಕಿ ದ,

"ಇಲ್ಲಿ ಕೇಳು ! ಮುದ್ದಪ್ಪನನ್ನು ಸೆಳೆದಿಲ್ಲ ಎಂದು ಖಂಡಿತ ನೀನು ಸಾಬೀತು ಮಾಡಲಾರೆ !"

ಆ ಮುಹೂರ್ತ ಎಲ್ಲರ ಮುಖಮಂಡಲದ ಮೇಲೂ ಮಾಂಗಲ್ಯದ ಮಳೆಗರೆಯಿತು.

ಪೂವಿ ಯೋಚನಾಮಗ್ನಳಾಗಿ ಹಾಗೇ ನಿಂತಳು. ಆ ಸವಿನೆನಪು ಚಿತ್ತಭಿತ್ತಿಯಲ್ಲಿ ಚಲನಚಿತ್ರದಂತೆ ಸುಳಿದಳಿಯಿತು. ತಂಗಾಳಿಗೆ ಸಿಕ್ಕಿ ಅಸ್ತವ್ಯಸ್ತವಾಗಿ ಹಣೆಯನ್ನು ಮುತ್ತಿದ ಆಲಕ ಜಾಲವನ್ನು ಹಿಂದಕ್ಕೆ ತಳ್ಳಿ ಹಳೆಯ ವಿಚಾರವನ್ನು ಮತ್ತೆ ಮೆಲುಕು ಹಾಕಿದಳು. ವಿಧಿ ಚಳವಳಿ ಕ್ಷೇತ್ರದಲ್ಲಿ ಒಂದುಗೂಡಿಸಿ ಮಿಲಿಟರಿ ಕ್ಷೇತ್ರದಲ್ಲಿ ಬೇರ್ಪಡಿಸಿತು. ಇನ್ನಾದರೂ ಒಟ್ಟುಗೂಡಿಸಿದರೆ ಸಾಕು. ಆದರೆ ಆತನ ಉದ್ದೇಶವೇನಿದೆಯೋ.......?

ಪ್ರಾಚೀ ದಿಗ್ವಧು ನಯನಾಕರ್ಷಿತಳಾಗಿದ್ದಾಳೆ. ವರ್ಣವರ್ಣಾಂತರ ಉತ್ತರೀಯ ಹೊದ್ದು ಬೆಳ್ಳಿ ಜರಿಯ ಸೀರೆಯುಟ್ಟು ನಿಂತ ನಿಲುವಿನಲ್ಲಿ ಅದೆಂತಹ ಮೋಹಕತೆ ಮೂಡಿಸಿದ್ದಳೋ......ಬಯಸಿದರೂ ದೃಷ್ಟಿಯನ್ನು ಹಿಂತೆಗೆಯಲಾಗಲಿಲ್ಲ. ದೃಷ್ಟಿ ಲಕ್ಷ್ಯ ವಸ್ತುಗಳನ್ನು ಅಮೋಘವಾದ ಭಾವ ರಶ್ಮಿಯಲ್ಲಿ ಅದ್ದುತ್ತಿರುವಾಗಲೂ ಅಂತರ್ನಿಹಿತ ಪರಿತಾಪ ದೇಹಧರಿತ್ರಿಯನ್ನು ಮೆಲ್ಲಮೆಲ್ಲನೆ ಸುಡುತ್ತಿತ್ತು. ಹಾಗೇ ಎಷ್ಟು ಹೊತ್ತು ಏಕಾಂಗಿಯಾಗಿ ಅಡ್ಡಾಡಿದಳೋ......ಅದು ಪ್ರಾಯಶಃ ಅವಳ ಅಂತರಾತ್ಮಕ್ಕೆ ಗೊತ್ತಿರಲಾರದು. ಅನುಭೂತ ಅದ್ಭುತ ಶಾಂತ ಸಾಮ್ರಾಜ್ಯದಲ್ಲಿ ಕಪೋತ–ಕಲವಿಂಕ–ಲಾವಾ–ತಿತ್ತಿರಿ–ಚಂಡೋಲ ಮುಂತಾದ ಸುಂದರ ಪಕ್ಷಿಗಳಿಂಚರವು ಸಮ್ಮೋಹನಕರವಾಗಿ ಕರ್ಣದೇಶಗಳ ಮೇಲೆ ಬೀಳುತಿತ್ತು. ಬಣ್ಣದ ಚಿಟ್ಟೆಗಳು ಹೂವಿಂದ ಹೂವಿಗೆ ಹಾರಾಡಿ ಮಧುಬೇಟೆ ನಡೆಸಿದ್ದುವು. ದೃಷ್ಟಿ ಬಣ್ಣದ ಚಿಟ್ಟೆಯನ್ನು ಮೀರಿ ಹಸುರಿಂದ ಹಸುರಿಗೆ ಹರಿಯಹತ್ತಿತು, ಗದ್ದೆಯ ಕೋಗಿನಲ್ಲಿ ಹೊಂಬಣ್ಣಕ್ಕೆ ತಿರುಗಿದ ಭತ್ತದ ತೆನೆಗಳು ತಲೆದೂಗುತ್ತಿದ್ದುವು. ದೂರ ದೂರದಂಚಿನವರೆಗೂ ಹಬ್ಬಿದ ಪ್ರಕೃತಿಯ ವೈಭವದಲ್ಲಿ ಅಂತರ್ದೃಷ್ಟಿ ಪ್ಲಾವಿತಗೊಳ್ಳುತಿತ್ತು. ಸ್ವಲ್ಪ ಹೊತ್ತಿನೊಳಗಾಗಿ ಕೆಳಮಟ್ಟೆಯ ನೇರಕ್ಕೆ ಹೆಬ್ಬಯಲಿನ ಹಾದಿಯಲ್ಲಿ ಮಾದು ಕಾಣಿಸಿಕೊಂಡ. ದೂರದಲ್ಲಿ ಸಣ್ಣ ಕಡ್ಡಿಯಂತೆ ಗೋಚರಿಸುತ್ತಿದ್ದ ಅವನು ಸ್ಪಷ್ಟವಾಗಹತ್ತಿದ. ಒಂದು ಕಾಲದಲ್ಲಿ ಮುದ್ದಪ್ಪ ಆ ಹಾದಿಯಲ್ಲಿ ಹಾಗೇ ಕಾಣಿಸಿಕೊಳ್ಳುತ್ತಿದ್ದ. ತನುಮನಗಳು ಇಲ್ಲಿಂದಲೇ ಅಲ್ಲಿಗೆ ಚಿಮ್ಮುತಿದ್ದುವು. ಆದರೆ.......ಈಗ ?....ಈಗ ?

ಕಣ್ಣುಗಳಲ್ಲಿ ಸಣ್ಣ ರೇಖೆಯಂತೆ ರಜತವಾರಿ ಹರಿದಾಡಿತು.

ಒಂದೆರಡು ಕ್ಷಣ ಕಣ್ಣು ಮುಚ್ಚಿ ನಿಂತು ತನ್ನನ್ನು ತಾನೇ ಸುಧಾರಿಸಿ ಕೊಂಡಳು ಪೂವಿ. ಯಾವುದೋ ಕಾಣದ ಕೈ ಹೃದಯವನ್ನು ಹಿಸುಕುತ್ತಿರು ವಂತೆ ಭಾಸವಾಯಿತು........ಪೊನ್ನು ಉಳಿದಿದ್ದರೆ ನಾನು ಮಕ್ಕಳೊಂದಿಗೆ ಮಡಿಕೇರಿಯಲ್ಲೇ ಇರಬಹುದಾಗಿತ್ತು. ದೇವರು ನನಗೆ ಎಲ್ಲಾ ರೀತಿ ಯಿಂದಲೂ ತೊಂದರೆ ಕೊಟ್ಟ ; ಎಂದುಕೊಳ್ಳುತ್ತ ನಿಟ್ಟುಸಿರು ಬಿಟ್ಟಳು. ಮಾದು ಮೆಟ್ಟಲನ್ನು ಹತ್ತಿ ಮೇಲೆ ಬಂದ. ಇಬ್ಬರ ತುಟಿಗಳಲ್ಲೂ ಊಹೆಗೂ ನಿಲುಕದ ಹುಸಿನಗು ಮಿನುಗಿ ಮಾಯವಾಯಿತು.

"ಮಕ್ಕಳೆಲ್ಲಿ ?" ಪ್ರಸಂಗೋಚಿತವಾಗಿ ಕೇಳಿದ ಮಾದು.

"ಒಳಗಿದ್ದಾರೆ."

ಅಲ್ಲೇ ಜಗುಲಿಯ ಮೇಲೆ ಕುಳಿತ ಮಾದು ಅಂದ.

"ಗೋಣಿಕೊಪ್ಪಲಿನಲ್ಲಿ ಇಪ್ಪತ್ತು ಎಕರೆ ಕಾಫಿ ತೋಟ ಇದೆ. ಸಾಲ ತೆಗೆದು ಅದನ್ನು ಕೊಂಡುಕೊಳ್ಳುವೆ. ಚಿಟ್ಟಿ–ಮನುಗಾಗುತ್ತೆ. ನೀನು ಏನು ಹೇಳುತ್ತೀ ?"

"ಅವರಿನ್ನೂ ಚಿಕ್ಕವರು, ಮುಂದೆ ಅವರ ಭಾವನೆ ಹೇಗೆ ಬೆಳೆಯು ತ್ತದೋ ಹೇಳುವುದು ಹೇಗೆ ?"

"ಒಂದು ವೇಳೆ ಅವರು ಕಾಫಿ ವ್ಯವಸಾಯ ಇಷ್ಟಪಡದೆ ಹೋದರೂ ಸಹ ಓದು ವಿದ್ಯೆಗೊಂದು ದಾರಿ ಬೇಕಲ್ಲ ?....ಮುಂದೆ ನಿನಗೂ ಮುದ್ದಪ್ಪನಿಗೂ ಒಳ್ಳೆಯ ನೆಲೆಯಾಗುತ್ತೆ."

"ಅದೇನೋ ಸರಿಯೆ."

"ಒಳ್ಳೆ ಬೆಳೆ ಬಂದರೆ ನಾಲ್ಕಾರು ವರ್ಷಗಳಲ್ಲಿ ಸಾಲ ತೀರಿಕೊಳ್ಳ ಬಹುದು."

"ನಿಮಗೆ ಇಲ್ಲಿಂದ ಹೋಗಿ ನೋಡಿಕೊಳ್ಳುವ ತೊಂದರೆ ಹುಟ್ಟಿಕೊಳ್ಳು ತ್ತದೆ........ದಿನವೂ ಓಡಾಡಬೇಕು."

ಈಗ ದಿನಕ್ಕೆ ಎಷ್ಟು ಮೈಲಿ ಓಡಾಡುತ್ತಿಲ್ಲ?.......ಈ ಎಂಟು ಮೈಲಿ ಹೆಚ್ಚಲ್ಲ ಪೂವೀ."

"ಮಾರುವುದು........ಖಚಿತವೇ ?"

"ಅದು ಖಚಿತ ನೀನು ಬಂದರೆ ಹೋಗಿ ನೋಡಿಕೊಂಡು ಬರಬಹುದು."

"ನೀವು ನೋಡಿದ ಮೇಲೆ ಸಾಕಲ್ಲ, ನಾನೇಕೆ ಇನ್ನು ?"

"ಆದರೂ ತೆಗೆಯುವುದು ನಿನಗಷ್ಟೆ ?"

ಪೂವಿ ಮಾತಾಡಲಿಲ್ಲ. ಭವಿಷ್ಯದ ಯೋಚನೆಯಲ್ಲಿ ಮುಳುಗಿತ್ತು ಚಿತ್ತ.

ಜಗಲಿಯ ಮೇಲೆ ಮಂಡಿಸಿದ್ದ ಲಿಲ್ಲಿ ತಟ್ಟನೆ ಎದ್ದು ಹೋಗಿ ಮೆಟ್ಟಿಲಿನ ಬಳಿ ನಿಂತು ಒಂದೆರಡು ಕ್ಷಣ ಬೊಗಳಿ ಕೆಳಗಿಳಿದು ಓಡಿಹೋಯಿತು. ಯಾರಿರಬಹುದೆಂದು ಊಹಿಸಲಾಗದೆ ಮಾದು ಮೆಟ್ಟಿಲಿನ ಬಳಿಗೆ ಹೋದ. ದೂರದಲ್ಲಿ ಯಾರೋ ಇಬ್ಬರು ಅಣುಗರೊಂದಿಗೆ ಬರುತ್ತಿದ್ದುದು ಕಾಣಿಸಿತು. ಹೊತ್ತು ಮಸುಕಾದುದರಿಂದ ಗುರುತು ಹತ್ತಲಿಲ್ಲ. ಪೂವಿ ಒಳಹೋದಳು; ಮಾದು ಅಲ್ಲೇ ನಿಂತ. ಹತ್ತು ನಿಮಿಷ ಉರುಳುವುದರೊಳಗಾಗಿ ಅವರು ಕೆಳಮೆಟ್ಟಿಯ ಬಳಿಗೆ ಬಂದರು. ನೋಡಿದರೆ ತಿಮ್ಮಯ್ಯ, ನಾಣಯ್ಯ, ಚಿಟ್ಟಿ, ಮನು, ಮೊನ್ನೆಯಷ್ಟೆ ಹೋಗಿದ್ದ ಹುಡುಗರು ಮತ್ತೇಕೆ ಬಂದರೆಂಬುದು ಆಶ್ಚರ್ಯವಾಯಿತು. ಹಾಗೇ ಒಂದು ಘಳಿಗೆ ಮರವಟ್ಟಂತೆ ನಿಂತ. ಎಂದಿನಂತೆ ತಿಮ್ಮಯ್ಯ ನಾಣಯ್ಯನ ಮುಖದಲ್ಲಿ ಗೆಲುವಿರಲಿಲ್ಲ. ಏನೆಂಬುದು ಅರ್ಥವಾಗದೆ, ಸುಮ್ಮನೆ ಪ್ರಾಸಂಗಿಕವಾಗಿ "ಬನ್ನಿ ಒಳಗೆ" ಅಂದ.

ಹುಡುಗರು ಕುಣಿಯುತ್ತಾ ಒಳಗಡೆ ಓಡಿದರು.

ಮೂವರೂ ಮಂದಬೆಳಕಿನಲ್ಲಿ ಹೊರಗಡೆ ಜಗಲಿಯ ಮೇಲೆ ಕುಳಿತುಕೊಂಡರು.

"ನಿಮ್ಮನ್ನು ನೋಡಿ, ನನಗೆ ಸ್ವಲ್ಪ ಆಶ್ಚರ್ಯವೇ ಆಯಿತು ...ಮನೆಯಲ್ಲಿ ಎಲ್ಲರೂ ಕ್ಷೇಮವಷ್ಟೇ ?" ಮಾದು ಕುಶಲ ಪ್ರಶ್ನೆ ಆರಂಭಿಸಿದ.

"ಕ್ಷೇಮ..." ನೀರಸ ಧ್ವನಿಯಲ್ಲಿ ಪ್ರತ್ಯುತ್ತರ ಹೊಮ್ಮಿತು.

"ಏಕೆ ? ಏನೋ ಒಂದು ರೀತಿಯಾಗಿದ್ದೀರಿ ?"

ನಾಣಯ್ಯನನ್ನು ಪ್ರತಿಯಾಗಿ ಪ್ರಶ್ನಿಸಿದ ಮಾದು; ಮನಃಪ್ರಾಣಗಳ ಸಂಭ್ರಮವೇಗ ತುಸು ಮೊಟಕಾಗಿ ಸಮ್ಯಕ್ ದೃಷ್ಟಿ ಕಾತರಭಾವ ಸೂಸಿತು. ಅವುದೋ ಭಾವಗೋಚರವಾದ ವಿಚಾರ ಕ್ಷಿತಿಯಲ್ಲಿ ಒಲಿಯುವ ಮಸುಗತ್ತಲೆಯಂತೆ ಬಲಿಯುತಿತ್ತು, ಚಿಂತಾಸರತೆಯಿಂದ–ಧ್ಯಾನಗದ್ಗದದಿಂದ ಪ್ರಕೃತಿಯ

ಪರಿವರ್ತನೆಯನ್ನು ಗಮನಿಸುತ್ತ ಕೇಳಿದ ಮಾದು,

"ಒಳಗಡೆ ಹೋಗೋಣವೇ ?"

"ಬೇಡ ; ಇಲ್ಲೇ ತಣ್ಣಗಿದೆ." ಎಂದ ನಾಣಯ್ಯ.

"ಮುದ್ದಪ್ಪನಿಂದ ಏನಾದರೂ ಸುದ್ದಿ ಬಂದಿದೆಯೇ ?"

ತಿಮ್ಮಯ್ಯನ ಪ್ರಶ್ನೆಗೆ ಉತ್ತರವಾಗಿ ಮಾದು ಗೋಣು ಅಲ್ಲಾಡಿಸಿ 'ಇಲ್ಲ' ಎಂದು ಸೂಚಿಸಿದ; ಮಾತಾಡಲಿಲ್ಲ.

"ಕೊನೆಗೂ ಭಾರತ ಸರಕಾರದಿಂದ ಉತ್ತರ ಬಂದಿದೆ; ನೋಡು."

ತಿಮ್ಮಯ್ಯ ಜೇಬಿನಿಂದ ಕಾಗದವನ್ನು ತೆಗೆದು ಕೈಗೆ ಕೊಟ್ಟ. ಭಾರತ ಸರಕಾರದ ಮಿಲಿಟರಿ ಕ್ಷೇತ್ರದಿಂದ ಬಂದಿದ್ದ ಕಾಗದವು ಆರಂಭದಲ್ಲೇ ವಿಶಾದ ಪೂರ್ವಕವಾಗಿ ಪ್ರಾರಂಭಿಸಿತ್ತು. ಅದರಲ್ಲಿದ್ದುದು ಕೇವಲ ಕೆಲವು ಪಂಕ್ತಿಗಳು ಮಾತ್ರ.

....ಮುದ್ದಪ್ಪ ಸಿಂಗಪುರದ ಬ್ಯಾರಕ್‌ನಲ್ಲಿ ಕಾಲರಾದಿಂದ ಗತಿಸಿದ ನೆಂದು ಅಲ್ಲಿಂದ ಸುದ್ದಿ ಬಂದಿದೆ. ಭಾರತ ಸರಕಾರ ನಿಮ್ಮ ಕುಟುಂಬಕ್ಕೆ ತೀವ್ರ ಅನುತಾಪವನ್ನು ವ್ಯಕ್ತಪಡಿಸುತ್ತದೆ.

ಅಯ್ಯೋ ದೇವರೇ !

ಮಾದು ಗರಬಡಿದವನಂತೆ ಕುಳಿತ. ಶೋಕ ಛಾಯಾವೃತ ಮುಖ ನಸುಗಪ್ಪು ತಳೆಯಿತು. ಮುಂದೆ ಮಾತು ಹೊರಡದೆ ನೀರಸ ಶಾಂತಿಯಲ್ಲಿ ರುದ್ರ ಮೌನ ರಾಜ್ಯವಾಳಿತು. ಅನಂತರ ಮಾದು ತಾನೇ ಮೌನ ಮುರಿದ, ದನಿ ವಿಜಾತೀಯವಾಗಿತ್ತು.

"ಬಹಳ ದಿನಗಳಿಂದ ಕಾಗದವಿರಲಿಲ್ಲವಾದುದರಿಂದ ನನಗೆ ಸ್ವಲ್ಪ ಅನುಮಾನವೇ ಆಗಿತ್ತು....ಸುಮಾರು ಎರಡು ಮೂರು ವರ್ಷಗಳಿಂದ ಸುದ್ದಿಯೇ ಇಲ್ಲ ನೋಡಿ."

"ಪೂವಿಗೆ ಈಗ ಏನೂ ಹೇಳುವುದು ಬೇಡ."

"ನಿಜ...ಅವ್ವನಿಗೂ ಏನೂ ಹೇಳುವುದು ಬೇಡ."

"ನಿಜ...ಅವ್ವನಿಗೂ ಏನೂ ಹೇಳಬೇಡಿ."

ಅದೇ ಸಮಯಕ್ಕೆ ಪೂವಿ ಹೊರಗೆ ಬಂದಳು. ಹಿಂದೆಯೇ ಕಾವೇರಿಯೂ ಆಗಮಿಸಿದಳು. ಸ್ವಾಗತದ ಕುರುಹಾಗಿ ತುಟಿಗಳಲ್ಲಿ ಹೂನಗೆ ಚೆಲ್ಲುತಿತ್ತು. ಇಬ್ಬರೂ ಏನೂ ಅರಿಯದವರಂತೆ ಎದ್ದು ಕಾವೇರಿಗೆ ನಮಸ್ಕ

ರಿಸಿ ಪಾದಧೂಳಿಯನ್ನು ಸ್ವೀಕರಿಸಿದರು. ಪೂವಿ ಚಿಕ್ಕಪ್ಪ ಅಣ್ಣಂದಿರಿಗೆ ನಮಸ್ಕರಿಸಿದಳು. ಕಣ್ಣಾಲಿಗಳಲ್ಲಿ ಆನಂದ ದ್ರವ್ಯ ಮಿನುಗಿತು.

"ಒಳಗಡೆ ಬನ್ನಿ."

"ಇಲ್ಲೇ ತಣ್ಣಗಿದೆ."

ದೀಪದ ಬತ್ತಿಯನ್ನು ಎತ್ತರಿಸಿ ಪ್ರಕಾಶಗೊಳಿಸಿದನಂತರ ಕುಶಲ ಪ್ರಶ್ನೆಯನ್ನು ಕೇಳಿದಳು ಪೂವಿ. ತಮ್ಮವರ ಭೇಟಿಯಿಂದ ಮೂಡಿದ ಮುಖ ಮಂಡಲದ ಪ್ರಸನ್ನದೀಪ್ತಿ ತೂಗು ದೀಪದ ಪುಣ್ಯರಶ್ಮಿಯೊಂದಿಗೆ ಸ್ಪರ್ಧೆ ಹೂಡುತಿತ್ತು. ನಾಣಯ್ಯ ದನಿಯನ್ನು ತಗ್ಗಿಸಿ ನುಡಿದ,

"ಭಾಗಮಂಡಲದ ಕಡೆ ಹೋಗುವ ಖಾಲಿ ಕಾರು ಇತ್ತು. ನಿಮ್ಮನ್ನು ನೋಡದೆ ಬಹಳ ದಿನಗಳಾದುದರಿಂದ ಹೊರಟೆ......ನನ್ನ ಹಿಂದೆ ತಿಮ್ಮಯ್ಯ, ಹುಡುಗರೂ ಹೊರಟರು."

"ಓ...ಹಾಗೇನೂ ?"

"ನಾಳೆ ಕಾರು ವಾಪಸು ಹೋಗುತ್ತೆ. ಅದರಲ್ಲೇ ಹೊರಟು ಬಿಡುತ್ತೇವೆ."

"ಅಪರೂಪಕ್ಕೆ ಬಂದಿದ್ದೀರಿ. ಎರಡು ದಿನ ಇದ್ದೇ ಹೋಗಿ." ಎಂದಳು ಪೂವಿ.

"ನೀನೇ ಹೊರಡು, ಸ್ವಲ್ಪ ದಿನ ಇದ್ದು ಬರುವಿಯಂತೆ."

"ಇಲ್ಲಿ ಯಾರು ?"

"ನೆರೆಮನೆ ಮಾಚಮ್ಮನಿಗೆ ಹೇಳಿದರಾಯಿತು."

"ಪಾಪ, ನಮ್ಮಿಂದಾಗಿ ಅವರಿಗೆ ಯಾವಾಗಲೂ ತೊಂದರೆ."

"ಪರವಾಯಿಲ್ಲ."

ಒಡನೆ ಮಾದಯ್ಯನ ಚಿತ್ತ ಅಳಿದ ಸತಿ ಪೊನ್ನಮ್ಮನ ಬಳಿ ಸುಳಿದಾಡಿತು. ಖಿನ್ನ ಮುಖಿಯಾಗಿ ಸುಮ್ಮನೆ ಕುಳಿತ. ಅಂದಿಂದಿಗೂ ಸಂಭವಿಸಿದ ಮಾರಣ ಹೋಮ ಸ್ಮರಣೆಯ ಹಾದಿಯಲ್ಲಿ ಸಾಗಿ ಹೋಯಿತು. ಪೊನ್ನಮ್ಮ ಸಗ್ಗವನ್ನಡರಿ ಸುಖಿಯಾದಳು. ಇನ್ನೂ ಪತಿಯ ಪ್ರತೀಕ್ಷೆಯಲ್ಲಿರುವ ಪ್ರಾಯ ಮಿಳಿಯದ ಹೆಣ್ಣು ಪೂವಿಯ ಗತಿಯೇನು ? ಮಕ್ಕಳು ಬೆಳೆಯುವವರೆಗೆ ಆಕೆ ಯಾರ ಮರೆಯಲ್ಲಿರಬೇಕು ? ಎಂಬ ದುಃಖಪೂರ್ಣ ಪ್ರಶ್ನೆ ಮನವನ್ನು

ಮಿಂಚಿನಂತೆ ಹೊಕ್ಕಿತು. ಯೋಚನಾಕ್ರಾಂತನಾಗಿ ಕುಳಿತ ಮಾದು. ತಿಮ್ಮಯ್ಯ ಯಾಂತ್ರಿಕನಾಗಿ ಒಳಬಂದ–ಭಾಸಮಾನ ತಡಿಯಲ್ಲಿ ಯಂತ್ರ ಮಾನವ ಚಲಿಸಿದಂತೆ. ಏನೋ ಒಂದು ರೀತಿಯಲ್ಲಿ ಮಂತ್ರ ಮುಗ್ಧನಂತೆ ನಾಣಯ್ಯ ಹಿಂಬಾಲಿಸಿದ. ಯಾರ ಮುಖದಲ್ಲೂ ಪ್ರಸನ್ನತೆಯು ಸುಳಿವಿರ ಲಿಲ್ಲ. ಆದರೆ, ಅದೇ ಪೂವಿಗೆ ತಮ್ಮವರನ್ನು ನೋಡಿ ಇಮ್ಮಡಿ ಉತ್ಸಾಹ.... ಸಂಭ್ರಮ ವಿಶೇಷ....ಆನಂದದಿಂದ ಮಾತಾಡುವ ಚಪಲ...

....ವಾತದಿಂದ ನರಳುವ ತಾಯಿ, ತಿಮ್ಮಯ್ಯನ ಮಗು. ತಂದೆಯ ಕ್ಷೇಮ, ಗದ್ದೆ ತೋಟಗಳ ವ್ಯವಹಾರ, ತಮ್ಮಂದಿರ ಅಂಗಡಿಯ ವ್ಯವಹಾ ರಿಕೆ, ನಾಣಯ್ಯನ ಸಂಸಾರ. ಒಂದೇ–ಎರಡೇ ? ಇನ್ನೂ ಏನೇನೋ ವಿಚಾರ ಸರಣಿಗಳು ತಲೆಯಲ್ಲಿ ತುಂಬಿ ಹೋಗಿವೆ. ಆದರೆ, ತಿಮ್ಮಯ್ಯನ ಗಾಂಭೀರ್ಯ ಕುಶಲ ವ್ಯವಹಾರಕ್ಕೂ ಆಸ್ಪದ ಕೊಡಲಾರದಷ್ಟು ಘನತೆಯಿಂದ ಕೂಡಿದೆ. ಪೂವಿ ಸ್ವಲ್ಪ ಹೊತ್ತು ಅಲ್ಲಿದ್ದು ಒಳ ಹೋಗುವುದರಲ್ಲಿದ್ದುದನ್ನು ನೋಡಿ ತಿಮ್ಮಯ್ಯ ನುಡಿದ,

"ಅಮ್ಮ ನಿನ್ನನ್ನು ಕರೆತರಲು ಹೇಳಿದ್ದಾರೆ..."

"ಹೊರಡುವುದೇ ಕಷ್ಟ....ಮನೆಯಲ್ಲಿ ಯಾರೂ ಇಲ್ಲ." ನೀರಸ ದನಿ ಯಲ್ಲಿ ಉತ್ತರಿಸಿದಳು ಪೂವಿ.

"ಕೆಲವು ದಿನ ಸಹಾಯ ಮಾಡಲು ನೆರೆಮನೆಯವರಿಗೆ ಹೇಳಿದ ರಾಯಿತು."

"ಪದೇ ಪದೇ ಅವರಿಗೆ ಹೇಳುವುದೆಂದರೆ ತುಂಬ ಸಂಕೋಚ."

ಅವನು ಬರಬರುತ್ತಲೇ ಕರೆ ನೀಡಿದುದು ತುಸು ಅಚ್ಚರಿ ಮೂಡಿಸಿತು. ಸ್ವಲ್ಪ ಹೊತ್ತು ಸುಮ್ಮನಿದ್ದು "ನೋಡೋಣ" ಎಂದಷ್ಟು ನುಡಿದು ಒಳ ಹೋದಳು. ಕೊಠಡಿಯಲ್ಲಿ ಮಕ್ಕಳು ಕೇರಂ ಆಡುವುದರಲ್ಲಿ ನಿಮಗ್ನರಾಗಿ ದ್ದರು.

"ಬಂದವರೇ ಆಟದಲ್ಲಿ ತೊಡಗಿದ್ದೀರಿ ! ನಿಮಗೆ ಊಟ ತಿಂಡಿ ಏನೂ ಬೇಡವೇ, ಇಂದು ?" ಕೇಳಿದಳು ಪೂವಿ, ಮುಖದಲ್ಲಿ ಸಖೇದಾಶ್ಚರ್ಯದ ಕಳೆ ಬೆಳಗುತಿತ್ತು.

"ಊಟಕ್ಕೆ ಇನ್ನೂ ಹೊತ್ತಿದೆಯಲ್ಲಾ ?"

"ಹ್ದೂ....ಆಡಿ....ಆಡಿ..."ಎನ್ನುತ್ತ ಅವರ ಉತ್ಸಾಹಪೂರ್ಣ ಆಟದ ಮೇಲೆ ಗಮನವಿಟ್ಟು ಸ್ವಲ್ಪಹೊತ್ತು ಅಲ್ಲೇ ನಿಂತು ನೋಡಿ ಒಳಗಡೆ ಹೋದಳು ಅವಳು.

ಮರುದಿನ ತಿಮ್ಮಯ್ಯ ಪುನಃ ಒತ್ತಾಯ ಪೂರ್ವಕವಾಗಿ ಹೇಳಿದ,

"ಹೊರಡು ಪೂವಿ. ಸ್ವಲ್ಪ ದಿನ ಇದ್ದು ಬರುವಿಯಂತೆ."

ಪೂವಿ ಮಾತಾಡದೆ ಹುಬ್ಬೆತ್ತಿ ನೋಡಿದಳು. ಕಣ್ಣುಗಳ ಭಾವ 'ಅಷ್ಟೊಂದು ಒತ್ತಾಯವಾದರೂ ಏಕೆ' ಎಂದು ಕೂಗಿ ಹೇಳಿತು.

ಅಷ್ಟೇ ದೃಢ ಶಾಂತಭಾವದಿಂದ ನುಡಿದ ಮಾದು,

"ಅಷ್ಟೇಕೆ ಚಿಂತೆ ? ಮಾಚಮ್ಮನಿಗೆ ಹೇಳಿದರಾಯಿತು. ಮನೆಯಲ್ಲಿ ಈಗ ಸೊಸೆ ಇದ್ದಾಳೆ. ಯಾವ ತೊಂದರೆಯೂ ಇಲ್ಲ. ಇಲ್ಲಿ ಕೆಲವು ದಿನ ಇದ್ದು ಹೋಗುತ್ತಾರೆ;"

"ವೃಥಾ ತೊಂದರೆ...."

"ತೊಂದರೆ ಇಲ್ಲದ ದಿನಗಳು ಎಂದಾದರೂ ಬರುವುದುಂಟೆ ?"

"ಹೋಗಿ ಬಾ ಪೂವಿ, ನಿನಗೂ ಇದ್ದಲ್ಲೆ ಇದ್ದು ಬೇಸರವಾಯಿತು." ಎಂದಳು ಕಾವೇರಿ ; ವಿಜಾತೀಯವಾದ ಕಂಠಸ್ವರದಲ್ಲಿ ಅನಿರೀಕ್ಷಿತವಾಗಿ ಲಘುಕಂಪನ ಸಂಭವಿಸಿತು.

ಚಿಟ್ಟೆ–ಮನು ಓಡಿಬಂದು ನಡುವೆ ಬಾಯಿ ಹಾಕಿದರು "ಹೊರಡಿ, ಅಮ್ಮ. ನಾಳೆ ನಾಡಿದ್ದು ಶಾಲೆಗೆ ರಜ. ಗಂಗ–ತಂಗ ಬರುತ್ತಾರಂತೆ. ಅವರನ್ನೂ ಕರೆದುಕೊಳ್ಳಿ."

ಅದೇ ವೇಳೆಗೆ ಹುಡುಗಿಯರೂ ಅಲ್ಲಿ ಪ್ರತ್ಯಕ್ಷರಾಗಿ ತಾವು ಬರುವುದಾಗಿ ಗೋಗರೆದರು. ಇಬ್ಬರ ಕಣ್ಣುಗಳಲ್ಲೂ ಆಸೆಯ ಮಿಂಚು ಮಿಂಚುತಿತ್ತು. ದೈನ್ಯವೇ ಮೂರ್ತಿಯೆತ್ತಿ ಬಂದಂತೆ ಮತ್ತೆ ಬೇಡಿಕೆಯನ್ನು ಮುಂದಿಟ್ಟರು,

"ಅಮ್ಮಾ, ಹೋಗೋಣ. ನಾವೂ ಬರುತ್ತೇವೆ... ಖಂಡಿತಾ ಹೊರಡಿ,"

ಪೂವಿ ಮುಗುಳು ನಕ್ಕಳು. ತಿಲಕರಂಜಿತ ಲಲಾಟದ ಮೇಲೆ ಸಣ್ಣ ಸಣ್ಣ ಅಲೆಗೂದಲು ಹರಿದಾಡುತಿದ್ದುವು. ನೀಲವರ್ಣದ ಕೆಂಪು ಹೂವಂಚಿನ ಸೀರೆ ಮೈಯನ್ನಲಂಕರಿಸಿತ್ತು. ಸ್ವಲ್ಪಹೊತ್ತು ಯೋಚನಾಭಂಗಿಯಲ್ಲಿ

ಮೂರ್ತಿಮತ್ತಾಗಿ ನಿಂತಳು. ಅದೇ ಸಮಯದಲ್ಲಿ ನಾಣಯ್ಯ ತಿಮ್ಮಯ್ಯ ಒಳಬಂದರು. ಮಾದು ಪುನಃ ಉತ್ಸಾಹಪೂರ್ವಕವಾಗಿ ಅಂದ,

"ಎಲ್ಲರೂ ಹೊರಡಿ. ನಾಡಿದ್ದು ನಾನೇ ಬಂದು ಗಂಗ–ತಂಗ ಇಬ್ಬರನ್ನೂ ವಾಪಸ್ ಕರೆದುಕೊಂಡು ಬರುವೆ....ಮನೆಯ ಯೋಚನೆ ಬೇಡವೇ ಬೇಡ."

"ಹೂ....ಹೊತ್ತಾಯ್ತು." ನಾಣಯ್ಯ ದನಿಗೂಡಿಸಿದ.

ಪೂವಿ ಹೊರಡಲು ಒಪ್ಪಿ ಅಣಿಯಾದಾಗ ಮಕ್ಕಳು ನೂರ್ಮಡಿಯ ಉತ್ಸಾಹದಿಂದ ಬಟ್ಟೆಬರೆಗಳನ್ನು ಹೊಂದಿಸಿಕೊಳ್ಳತೊಡಗಿದರು. ಹಾಲ್ಗಲ್ಲದ ಮೇಲೆ ಸಂತಸದ ಖಳೆ ನಲಿದಾಡಿತು.

ದೂರ ದಿಗಂತದಲ್ಲಿ ಉದಯ ಗಿರಿಯ ಮಸ್ತಕದ ಮೇಲೆ ಬಾಲರವಿ ಮುಗಿಲ ದಿಣ್ಣೆಯನ್ನೇರುತಿದ್ದ. ಬೆಳಗಿನ ಶಾಂತ ಪ್ರಶಾಂತ ವಾತಾವರಣಕ್ಕೆ ನೈಗೊಟ್ಟು ಬಾಲಚಮೂ ಪೂವಿಯೊಡನೆ ಆನಂದೋತ್ಸಾಹದಿಂದ ಮಡಿಕೇರಿಗೆ ಹೊರಟಿತು.

ಕಾವೇರಿ ಮಕ್ಕಳನ್ನು ಬೀಳ್ಕೊಟ್ಟು ಬೇಲಿಯ ಬಳಿ ಏಕಾಂಗಿಯಾಗಿ ನಿಂತು ಗದ್ದೆಯ ಕೋಗಿನಲ್ಲಿ ಕಣ್ಮರೆಯಾಗುವವರೆಗೂ ನಿಟ್ಟಿಸಿದಳು. ಅವರೊಂದಿಗೆ ಹೊರಟಿದ್ದ ಮಾದು ಹಾಗೇ ತೋಟದ ಹಾದಿ ಹಿಡಿದಿ.

೩೮

....ಉನ್ಮತ್ತ ಸಾರಸಗಳ ಸರಸ ಕ್ರೇಂಕಾರ !

...ಭ್ರಮಂತ ಭ್ರಮರಗಳ ಮಧುರ ಝೇಂಕಾರ !

ಲೋಕವಿಹಾರೀ ಸಮೀರ ಒಯ್ಯೊಯ್ಯನೆ ತೀಡಿ ಸುಮ ಸಮುಚ್ಚಯ ಗಳನ್ನು ಮುದ್ದಿಸಿ,ತನಿಗಂಪನ್ನು ತರುಬಿ,ಎಲ್ಲೆಡೆಯೂ ಸಿಂಪಡಿಸುತ್ತ ಮಂದ ಮಂದ ಅಲೆಗಳಿಂದ ಜಗದ್‍ವಲಯದ ಶ್ರಾಂತಿಯನ್ನು ದೂರದೂರಗೊಳಿಸು ತಿದ್ದ. ಪೂರ್ವ ಪ್ರಾಂತದಲ್ಲಿ ಆವಿರ್ಭವಿಸಿದ ದಿವಸಲಕ್ಷ್ಮಿಯ ದೃತ ಸಂಚಾರಿತ ಪದವಿನ್ಯಾಸದಿಂದ ವಿಗಲಿತ ವನಸುಮರೇಣು ಎಲ್ಲಿಂದ ಎಲ್ಲಿಯವರೆಗೂ ಚೆಲ್ಲಿ ಸೂಸಿ ಚಿತ್ರರಂಜಿತವಾಯಿತು ಸಸ್ಯ ಸಮೃದ್ಧ ಪುಣ್ಯಭೂಮಿ.

ಜನಾಕೀರ್ಣ ಲೋಕಾಲಯದಲ್ಲಿ ಕಷ್ಟಸುಖಗಳ ಜೊಂತೆ ಇರುವುದು ಸಹಜವೇ ಆದರೂ, ಈಗೀಗ ಜೀವನ ಮರುಳುಗಾಡಿನ ಬಿಸಿಲುಗುದುರೆಯಂತೆ ನಿರಾಶಾಜನಕವಾಗಿ, ಅಸಹನೀಯವಾಗಿ ತೋರುತ್ತದೆ. ಏನೋ ಒಂದು ಬಗೆಯ ನಿರುತ್ಸಾಹ....ಇನ್ನೇನೋ ಒಂದು ರೀತಿಯ ಜಡಿಮೆ ...ಮತ್ತೇನೋ ಒಂದು ಬಗೆಯ ತಾತ್ಸಾರ. ಕೆಲಸ ಕಾರ್ಯಗಳು ಯಾಂತ್ರಿಕವಾಗಿ ನಡೆಯು ತ್ತವೆ. ಮಾದು ಮಂತ್ರಿತ ಮಾನವನಂತೆ ದುಡಿಯುತ್ತಾನೆ ..ದಿನಗಳು ಎಂದಿನಂತೆಯೇ ಓಡುತ್ತವೆ. ಬೆಳಗಿನ ಹೊಂಬಿಸಿಲಿಗೆ ಮೈಗೊಟ್ಟು...ಹೂಗಿಡ ಗಳ ಕಶಿಯಲ್ಲಿ ಅವನು ಯಥಾಕ್ರಮ ನಿರತನಾಗಿದ್ದ. ಯಜಮಾನನ ಅಂಕೆ ಯಲ್ಲಿನ ಕೂಲಿಯ ಕೈಂಕರ್ಯದಂತೆ ಆಸಡ್ಡೆಯಿಂದ ನಡೆಯುತಿತ್ತು-ಅವರ್ಜ್ಯ ನೀಯವಾದ ಸಾಮಾನ್ಯಕಾಯಕ. ಶ್ರಾಂತ-ಕ್ಲಾಂತ ಮನಃಪ್ರಾಣಗಳಿಗೆ ಮುಂದೆಂದಾದರೂ ಸತ್ ಶಾಂತಿಯು ದೊರಕೀತೆಂಬ ನಂಬಿಕೆಯೂ ಈಗೀಗ ಳಿದಂತಿಲ್ಲ. ಅಶಾಂತಿ-ಅಸಮಾಧಾನಗಳು ಹೃದಯಧರಿತ್ರಿಯನ್ನು ಕಾಳೋಗರ ದಂತೆ ಹೊಕ್ಕಿವೆ. ಎಷ್ಟೇ ಪ್ರಯತ್ನಿಸಿದರೂ, ಜೀವನಾಂಧಕಾರ ಮಾರ್ಗ ಯೋಗದಲ್ಲಿ ಪ್ರಚಂಡ ಅಲೆಗಳ ಮಧ್ಯೆ ಸಿಕ್ಕಿ ತಬ್ಬಿಬ್ಬಾಗುವುದುಂಟು. ಅಂತಹ

ಸಂದರ್ಭದಲ್ಲಿ ಧರ್ಮವು ಕರ್ಮವನ್ನು ಅಕ್ಷರಶಃ ಬೋಧಿಸುತ್ತದೆ....ಮಾನವತೆ ಸಭ್ಯತೆಯನ್ನು ಕ್ರಮಶಃ ಸಾರಿ ಹೇಳುತ್ತದೆ.

ಸಂಯಮ-ದೀಕ್ಷೆ, ರೀತಿ–ನೀತಿ, ಕರ್ತವ್ಯ–ಪವಿತ್ರತೆ ಇಂತಿಂತಹ ಶಬ್ದಭಂಡಾರದಿಂದ ತುಂಬಿದ ಹೃದಯನಿಘಂಟು ಇಂದು ಅರ್ಥಶೂನ್ಯವಾಗಿ ವಿಚಾರಹೀನವಾಗಿ ತೋರುವುದು. ಹೃದಯ ಕುಂಡಲಿನಿಯಲ್ಲಿ ಮೂಡಿ ನರನರಗಳಲ್ಲಿ ಪ್ರವಹಿಸುವ ಶಾಂತಿ ಮಂತ್ರ ಮುಖಮುದ್ರೆಯಲ್ಲಿ ತಟತಟನೆ ತೊಟ್ಟಿಕ್ಕುವಾಗ ಒಂದು ಬಗೆಯ ವಿಚಿತ್ರ ಪರಿಮಳವನ್ನು ಬೀರುತ್ತದೆ... ಅಕಲ್ಪಿತವೂ, ಅಜೇಯವೂ ಆದ ಜೀವನಯಾತ್ರೆಯಲ್ಲಿ ಏಕಾಂಗಿಯಾಗಿ ಇನ್ನೆಷ್ಟು ದೂರ ಪಯಣಿಸಬೇಕೋ ಗಮ್ಯಸ್ಥಾನದ ಶುಭ ಚರಣಗಳ ನೆಲೆ ಯಾವದಿಕ್ಕಿನಲ್ಲಿದೆಯೋ...ಎಂಬುದೂ ಸಹ ತಿಳಿಯುತ್ತಿಲ್ಲ.

ಗಿಡಗಳ ಕಶಿ, ಪಾತಿಯ ಅಗತೆ ಮುಗಿಸಿ ಒಳಬಂದಾಗ ಹೊತ್ತು ಊರ್ಧ್ವಗತಿಯಲ್ಲಿತ್ತು. ಅದೇ ತಾನೇ ಪ್ರತ್ಯಗ್ನ ಸ್ನಾನ ಮುಗಿಸಿ ಐಮರದ ಮೇಲೆ ಕುಳಿತು ಅಲಕರಾಶಿಯನ್ನು ಆರಿಸಿಕೊಳ್ಳುತಿದ್ದ ಕಾವೇರಿಯ ಉಡುಪು ಧವಳಕಾಂತಿಯನ್ನು ಒಸರುತಿತ್ತು. ಮಾಧು ಕೈಕಾಲು ತೊಳೆದುಕೊಂಡು ಬಂದು ಅಲ್ಲಿಯೇ ಕುಳಿತ. ಪೂವಿ ಒಳಬಾಗಿಲಿನಿಂದ ತಲೆಹಾಕಿದಳು. ಕೈಯಲ್ಲಿ ಚಹದ ಟ್ರೇ ಇತ್ತು. ಅವಳ ತೆಳ್ಳನೆಯ ತನುಲತೆ ಶ್ವೇತಾಂಬರದಿಂದ ಸಮಾವೃತವಾಗಿತ್ತು. ತಿಲಕಹೀನ ಲಲಾಟ, ಕರಿಮಣಿರಹಿತ ಕೊರಳು ವಿಧವಾ ಭಾಗ್ಯವನ್ನು ಸ್ತ್ರೀತ್ವಕ್ಕೆ ಅಳವಡಿಸಿದ್ದುವು. ಕಣ್ಣುಗಳಲ್ಲಿ ಮಿನುಗುತಿದ್ದ ತೇಜ ನಶಿಸಿ ಕಪೋಲಪ್ರಾಂತ ಗುಳಿ ಬಿದ್ದಿತ್ತು. ಹೆಜ್ಜೆಗಳು ಮಂದಗತಿಯಲ್ಲಿ ಹೊಸ್ತಿಲು ದಾಟಿದುವು. ಮಾದು ದೀರ್ಘ ಹೃದಯನಾಗಿ ನಸು ತಲೆಬಾಗಿದ್ದ ಅವಳು ಟ್ರೇಯನ್ನು ಯಾಂತ್ರಿಕವಾಗಿ ಮುಂದ ಹಿಡಿದಳು.

"ಇಲ್ಲಿಗೆ ತರುವಷ್ಟು ತೊಂದರೆಯೇಕೆ ತೆಗೆದುಕೊಂಡೆ? ನಾನೇ ಬಂದು ತೆಗೆದುಕೊಳ್ಳುತ್ತಿದ್ದೆ."

ಪೂವಿ ಉತ್ತರಿಸಲಿಲ್ಲ. ಟ್ರೇಯನ್ನು ಸ್ವಾಮಿನಿಯ ಪಕ್ಕದಲಿಟ್ಟು ಒಳ ಹೋದಳು.

"ನಾವು ಈ ಸಂಸಾರದಲ್ಲಿ 'ಶಾಂತಿ' ಎಂಬುದನ್ನು ಇದುವರೆಗೆ ಪಡೆಯಲೇ ಇಲ್ಲ. ಬಹುಶಃ ಅದು ನಮಗೆ ಮುಂದೆಯೂ ಲಭಿಸದೆ ಹೋಗ

ಬಹುದು. ಆದರೂ ಸಮುದ್ರದ ಪ್ರಚಂಡ ಅಲೆಗಳಂತೆ ಮುಂದುಮುಂದಕ್ಕೆ ಹೊಡೆದುಕೊಂಡು ಹೋಗುವುದರಲ್ಲೇ ಆತ್ಮೋನ್ನತಿ ಇದೆ. ದೀನರು-ದುಃಖಿಗಳು ಬಡವರು-ಭಿಕಾರಿಗಳು ತುಂಬಿಹೋಗಿರುವ ಈ ದೇಶದಲ್ಲಿ ಹಿಂದು ಳಿಯುವುದರಲ್ಲಿ ಅರ್ಥವೇ ಇಲ್ಲ. ತಬ್ಬಲಿ ಮಕ್ಕಳನ್ನು ದಡ ಹಚ್ಚದ ಹೊರತು ನಿನ್ನ ಕರ್ತವ್ಯ ಮುಗಿಯದು. ನೀನು ಈಗೀಗ ಎಲ್ಲದಲ್ಲೂ ಬಹಳ ಉದಾ ಸೀನ ತಳೆಯುತ್ತಿ ನನಗದೇ ವ್ಯಸನ." ಎಂದು ವೃದ್ಧ ಜನನಿ ವಿಶಾದಪೂರ್ಣ ದನಿಯಲ್ಲಿ ನುಡಿದಳು.

ಅಕ್ಷರ ಅಕ್ಷರವೂ ಎದೆಯಾಳಕ್ಕಿಳಿದು ಕಲಕಲ ಧ್ವನಿಗೈಯ್ಯುಹತ್ತಿತು. ಮಾದು ಮೌನವಾಗಿ ಚಹಪಾನ ಮಾಡಿದ.

ಸ್ವಾಮಿನಿ ಪುನಃ ದುಃಖಾಂತವಾಣಿಯಲ್ಲಿ ಮುಂದುವರಿದಳು"ಮುದ್ದಪ್ಪ ಹಿಂದಿರುಗುತ್ತಾನೆ. ಮಕ್ಕಳು ಹೇಗೂ ಪೂವಿಯನ್ನು ಹೊಂದಿಕೊಂಡಿವೆ. ಅವರನ್ನು ಅವಳೊಂದಿಗೆ ಬಿಟ್ಟು, ಈ ಜೀವನವನ್ನು ಇನ್ನೊಂದು ರೀತಿಯಲ್ಲಿ ಉದ್ಧರಿಸುವ. ಎಂದುಕೊಂಡಿದ್ದೆ ...ಈಗ ನೋಡಿದರೆ...."

ಮಾದು ಪ್ರತಿ ಹೇಳುವ ಯೋಚನೆಯನ್ನೂ ಮಾಡಲಿಲ್ಲ. ಒಂದು ಕಾಲದಲ್ಲಿ ಎಂತಹ ಬಿಸಿರಕ್ತ ಧಮನಿಗಳಲ್ಲಿ ಹರಿದಾಡುತಿತ್ತೋ....ಎಂತಹ ಪೌರುಷೇಯ ಸ್ಫುರಿ ಒಸರುತಿತ್ತೋ ಅವೆಲ್ಲ ಗಾಳಿಗೋಪುರದಂತೆ ಅಳಿಸಿ ಹೋಗಿದ್ದುವು. ಅನವಸ್ಥಿತವೂ, ಅಗಮ್ಯವೂ ಆದ ಜೀವನಯಾತ್ರೆಯನ್ನು ಕೈಕೊಳ್ಳುವಾಗ ಎಲ್ಲವೂ ಸುಗಮವಾಗಿ ಕಂಡಿತ್ತು. ಆಶ್ವಸ್ತ ಭಾವದಿಂದ ಹೃದಯ ಕುಂಡಲಿನಿ ತುಂಬಿಹೋಗಿತ್ತು.

ಆದರೆ...ಅವೆಲ್ಲವೂ ಈಗ ತೊಟ್ಟು ಕಳೆದ ಹೂವಿನಂತಾಗಿವೆ.

ಒಳಗಡೆ ಬಟ್ಟೆತೊಟ್ಟು ಶಾಲೆಗೆ ಹೊರಡಲು ತಯಾರಿ ನಡೆಸುತಿದ್ದ ಮಕ್ಕಳು ಕಲಹಂಸಗಳಂತೆ ಕಲಕಲರವಗೈಯ್ಯುತಿದ್ದುದು ಕೇಳಿಸುತಿತ್ತು. ಮಾದು ಇಲ್ಲಿಂದಲೇ ಕರೆದು ಹೇಳಿದ "ಹತ್ತುಗಂಟೆಯಾಯಿತು. ಇನ್ನೂ ಆಗಲಿಲ್ಲವೇ ?"

"ಆಯಿತು, ಆಯಿತು."

ಹಾಗೆಂದರೂ ಮಕ್ಕಳು ಹೊರ ತಲೆಹಾಕಲಿಲ್ಲ. ಒಳಗಡೆ ಪೂವಿ ಅವರನ್ನು ಹೊರಡಿಸಲು ಏನೇನೋ ಹೇಳುತಿದ್ದಾಳೆ. ಮಕ್ಕಳ ಮಾತು ಕೇಳಿ

ಸುತ್ತಿದೆ. ಆದರೂ, ಹೊರಗೆ ಹೊರಡದುದನ್ನು ನೋಡಿ ಮಾದು ಮತ್ತೆ ಕೂಗಿದ "ಇನ್ನೂ ಏನು ಮಾಡುತಿದ್ದೀರಿ ? ಆಗಲೇ ಹೊತ್ತಾಯಿತ್ತಲ್ಲ ?"

ಮಕ್ಕಳು ಹೊರಟರು.

ಶೀತದೇಶದ 'ಕೆಂಪು' ಎಳೆ ಮುಖಬಿಂಬಗಳಲ್ಲಿ ಹೊಮ್ಮುತಿತ್ತು. ತಂದೆಯ ನೇತ್ರದ್ವಯಗಳು ಅತ್ತಲೇ ಹರಿದುವು-ಲಕ್ಷ್ಯ ಸಿದ್ಧಿಯನ್ನು ಪ್ರೇಮ ಶಕ್ತಿಯಲ್ಲಿ ಅದ್ದುವಂತೆ.

"ನಿಧಾನವಾಗಿ ಹೋಗಿ." ಎಂದಳು ಕಾವೇರಿ.

"ಹ್ಞೂ...ಹ್ಞೂ." ಎನ್ನುತ್ತಲೇ ಚಂಗನೆ ಹಾರಿದರು ಅವರು.

ಪೂವಿ ಮಕ್ಕಳನ್ನು ಕಳುಹಿಸಿ ಬಸಿಬಟ್ಟಲುಗಳನ್ನು ತೆಗೆದುಕೊಂಡು ಒಳಹೋದಳು. ಕೈಕಾಲುಗಳು ಯಾಂತ್ರಿಕವಾಗಿ ಚಲಿಸಿದುವು. ಒಳಗಡೆ ಮಾಡೆನೆಂದರೂ ಬಿಡದ ಕೆಲಸ. ಬಯಸಿದರೂ ಸಿಗದ ವಿಶ್ರಾಂತಿ. ಮನೋ ಸಂಜನಿತ ದುಗುಡದ್ರವ್ಯ ಶಕ್ತಿಯ ಕಣಕಣವನ್ನೂ ಕಬಳಿಸುತಿತ್ತು. ಬಿಸಿ ನೆತ್ತರಿನ ಹನಿಹನಿಯನ್ನೂ ಹೀರುತಿತ್ತು. ಯಾವ ರೀತಿ ಸಮಸ್ಯೆಯನ್ನು ಬಗೆ ಹರಿಸಿಕೊಳ್ಳಬೇಕೆಂದು ಅರ್ಥವಾಗುತ್ತಿಲ್ಲ. ಮೇಲಾಗಿ, ಧುತ್ತೆಂದು ಎದುರು ನಿಂತ ಮಕ್ಕಳ ಭವಿಷ್ಯ....ಯೋಚಿಸಿದಷ್ಟೂ ಕದಡುವ ಬಗೆ...ಚಿಂತಿಸಿ ದಷ್ಟೂಚಿಮ್ಮುವ ಕಣ್ಣೀರು....ಶಾಂತಿಗಾಗಿ ಅರಸಿದಷ್ಟೂ ಮೂಡುವ ಅಶಾಂತಿ ...ಹೃದಯ ಧರಿತ್ರಿಯ ಅರಾಜಕತೆ....! ಏನೋ ಒಂದು ಬಗೆಯಲ್ಲಿ, ವಿಚಿತ್ರ ತರವಾಗಿ ತನ್ನ ಅಸ್ತಿತ್ವವೇ ಎಲ್ಲೀ ಮಾರಿ ಹರಿಯುತಿದ್ದಂತೆ ತೋರಿ ಶರೀರ ವೆಲ್ಲವೂ ರೋಮಾಂಚನಗೊಂಡು ಕಂಟಕಿತವಾಯಿತು.ಅಂತಃಸ್ಥಲದಲ್ಲಿ ಅತೀವ ಅಭಾವ ಪ್ರಾಪ್ತವಾಗಿತ್ತು.

ಪೂವಿಯ ಮಕ್ಕಳು ತಮ್ಮಲ್ಲೀ ಇರುವುದರಿಂದ ಪೂವಿಯೂ ಇಲ್ಲೀ ಇರಲಿ ಎಂದು ಅವಳ ತಾಯಿ ತಂದೆಗಳ ಅಭಿಪ್ರಾಯ. ಆದರೆ, ಅದೇ ನೇರಕ್ಕೆ ಬಾಗಂಡ ಮನೆಯ ಪರಿಸ್ಥಿತಿ ತನುಮನಗಳನ್ನು ಹಿಂಡಿ ಏನೂ ಹೇಳಲಾಗದೆ ಸುಮ್ಮನಾಗುವರು.

"ನಿನಗೆ ದೇವರು ಬುದ್ಧಿಕೊಟ್ಟಂತೆ ಮಾಡು ಪೂವಿ !" ಎಂದಳು ತಾಯಿ ಗದ್ಗದ ಕಂಠದಿಂದ.

ಪೂವಿಯ ಕಣ್ಣುಗಳಲ್ಲಿ ಫಳಫಳ ಮಿನುಗಿದ ಹನಿಯೇ ಉತ್ತರ

ವಾಯಿತು. ಬೆಂದೆದೆಯ ಬಿಸುಸುಯ್ಲು ಬೀಸುಗಾಳಿಯೊಂದಿಗೆ ತೇಲಿ ಹೋಯಿತು. ಪ್ರಥಮ ದುಃಖಯೋಗವನ್ನು ಮಡಿಕೇರಿಯಲ್ಲಿ ಕಳೆದ್ಬಾಗಂಡಕ್ಕೈತಂದಾಗ ಕಾವೇರಿಯೂ ಎದೆಗಪ್ಪಿಕೊಂಡು ಕಂಬನಿಗರೆದಿದ್ದಳು. ಮಾದು ನತ ಶಿರಸ್ಕನಾಗಿ ನಿಂತಿದ್ದ. ಬಹುಶಃ ಆವನು ಅನಂತರ ಆಕೆಯನ್ನು ತಲೆಯೆತ್ತಿ ನೋಡುವ ಸಾಹಸವನ್ನು ಮಾಡಲಿಲ್ಲವೇನೋ....ಆ ಅಖಂಡ ಸ್ತ್ರೀತ್ವದಲ್ಲಿ ಪಡೆದುಕೊಳ್ಳುತಿದ್ದ ಆತ್ಮಶಾಂತಿ ಅಂದಿಗೇ ಮುಗಿಯಿತು. ಮನದಲ್ಲಿ ಅಪಾರವಾದ ಪಶ್ಚಾತ್ತಾಪ–ದಯೆಗಳು ತುಂಬಿದ್ದುವು.

ಆದರೆ....

ದೇಶಕ್ಕಾಗಿ ದುಃಖ ಭೋಗವನ್ನೂ ದಂಡ ಭೋಗವನ್ನೂ ಆತ್ಮಾನಂದದಿಂದ ಅರಗಿಸಿಕೊಂಡ ವ್ಯಕ್ತಿ ಸಂಸಾರಿಕ ಸುಖ-ದುಃಖಗಳನ್ನು ಅರಗಿಸಿಕೊಳ್ಳಲಾರೆ ಎಂದುಕೊಳ್ಳುವುದು ಲಜ್ಜಾಸ್ಪದ....ಏನೇ ಮಾಡುವೆನೆಂದರೂ ಹೆಜ್ಜೆ ಹೆಜ್ಜೆಯಲ್ಲಿಯೂ ಏನೋ ಒಂದು ವಿಧವಾದ ವ್ಯಾಕುಲ ಆಶಂಕೆಯ ಭಾವ ಹೊಮ್ಮುವುದು. ಕಾತರ ದೃಷ್ಟಿ ಮೌನಭಾಷೆ ಜೀವನ ಪರಿಸ್ಥಿತಿಯ ಅಗಾಧ ಸೇತುವನ್ನು ಹಾರಲಾರೆನೆಂದು ಕೂಗಿ ಹೇಳುತ್ತದೆ. ದುರ್ಬಲವಾದ ಮನಸ್ಸನ್ನು ಹೊಕ್ಕ ಹಲವಾರು ವಿಚಾರಗಳು ರಕ್ತದೊಂದಿಗೆ ಪ್ರವಹಿಸುತ್ತವೆ ನಿಜ; ಆದರೆ, ಅವನ್ನು ಸಂಪೂರ್ಣ ನಂಬಿ ಕೇವಲ ಅವಿಚಾರಕರಂತೆ, ಮೂರ್ಖರಂತೆ ವ್ಯವಹರಿಸುವ ಮಂದಿಯನ್ನು ಅವಲೋಕಿಸುವಾಗ ಲಜ್ಜೆ ಪಟ್ಟುಕೊಳ್ಳುವುದೇನಿಲ್ಲ...ಆದರೂ, ಸಂಪ್ರದಾಯಕ್ಕೆ ಗೊಡ್ಡು ನಂಬಿಕೆಗಳಿಗೆ ಶರಣಾಗಿ ಪೂವಿಯಂತಹ ಹೆಣ್ಣು ವಿಧವಾವ್ರತ ಹಿಡಿದುದು ಸ್ವತಃ ತೇಜೋವಧೆಗೈದಂತಾಯಿತು. ಹಳೆಯದಾದ ಮಾತ್ರಕ್ಕೆ ಆಚಾರಗಳಿಗೆ ಏಕೆ ಬೆಲೆ ಕೊಡಬೇಕು? ಅವುಗಳಿಗೆ ಬೆಲೆಕೊಡುವುದಾದರೆ ಆಮೆ–ಮೊಸಳೆಗಳಿಗೂ ಬೆಲೆಕೊಡಬೇಕಾಗುತ್ತದೆ....!

ತರ್ಕವಿತರ್ಕಗಳ ಸಮುದಾಯದಲ್ಲಿ ಮಾದು ಸ್ತಬ್ಧನಾಗಿ ಬಿಡುವ.... ಆದರೆ...ಆದರೆ ನಿನ್ನ ವೈಯ್ಯಕ್ತಿಕ ವಿರೋಧವಿದ್ದ ಮಾತ್ರಕ್ಕೆ ಅದು ಶುದ್ಧ 'ತಪ್ಪು' ಎಂದಾಗಲೀ ಅಥವಾ ಇನ್ನೊಂದು 'ಆದರ್ಶ'ವೆಂದಾಗಲೀ ದೃಢವಾಗಿ ಹೇಳುವುದು ಹೇಗೆ? ಪ್ರಪಂಚ–ಜೀವನ–ಸಮಾಜ–ಸಂಪ್ರದಾಯ ಒಂದಕ್ಕೊಂದು ಭದ್ರವಾದ ಕೊಂಡಿಯನ್ನು ಹೊಂದಿಸಿಕೊಂಡಿವೆ. ಒಂದನ್ನು

ಕಿತ್ತರೆ ಮತ್ತೊಂದೂ ಇಲ್ಲ ಎಂಬುದನ್ನು ಅರಿತರೆ ಮಾತ್ರ ಸಮಾಜ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯ...ಎಂದು ಯಾವುದೋ ತೂರ್ಯವಾಣಿ ಕಿವಿಯ ಸನಿಹದಲ್ಲಿಯೇ ಕೂಗಿ ಹೇಳುತ್ತದೆ.

ಅಂದಮೇಲೆ...?

ಚಿದಾಕಾಶದಲ್ಲಿ ಭಾವವಿಭಾವಗಳ ಬಿರುಗಾಳಿ ಬೀಸಿ ತನು ತತ್ತರಿಸುವುದು....ದಿನಚರಿ ಸಂಪು ಹೂಡುವುದು. ಏನೋ ಒಂದು ರೀತಿಯಲ್ಲಿ ಭಾವಿಸಿದರೂ ಊಹಿಸಲಾಗದ ಜಡಿಮೆ, ತರ್ಕಿಸಿದರೂ ಸುಧಾರಿಸಲಾಗದ ಬವಣೆ, ಯೋಚಿಸಿದರೂ ನಿರಾಶಾಜನಕವಾದ ತಾತ್ಸಾರ. ಈಚೆಗೆ ಇನ್ನಿಷ್ಟು ಜವಾನು ಕಟ್ಟಿಕೊಂಡಿದ್ದರಿಂದ ಕೈತುಂಬ ಕೆಲಸ....ಹಗಲಿಡೀ ಯಾಂತ್ರಿಕವಾಗಿ ದುಡಿಯುವಾಗ ಸ್ತಬ್ಧವಾಗಿ ತರ್ಕಿಸುತ್ತದೆ ಚಿತ್ತ ಆದರೆ...ದುರ್ದಮನೀಯವಾದ ದಿನಗಳು ಹೇಗೆ ಬರುತ್ತವೆಯೋ ಹಾಗೆಯೇ ಉರುಳುತ್ತವೆ.

...ಆಕಾಶ ಸರೋವರದಲ್ಲಿ ಶ್ರೀ ಸಂಧ್ಯಾ ಪದ್ಮಿನಿ !

....ಪದ್ಮರಾಗರಸದಿಂದ ಮಿಂದು ಸ್ವರ್ಣಮಯವಾದ ಜಗತ್ತು !

ಭವನ-ವಲಭಿಗಳಿಗೆ ಪಾರಿವಾಳಗಳು ಹಿಂದಿರುಗುತ್ತಿದ್ದುವು. ಕೆಲಸಗಾರರು ಗೃಹಾಭಿಮುಖವಾಗಿ ಹೊರಟಿದ್ದಾರೆ. ಅವರಲ್ಲಿ ಮಾದಯ್ಯನೂ ಒಬ್ಬ. ಮೆಟ್ಟಿಲು ಹತ್ತುವ ಮೊದಲೇ ಚಂಗಪ್ಪನ ಧ್ವನಿ ಕೇಳಿಸಿತು. ಒಡನೆ ಎಲ್ಲೋ ಒಡಲ ಕಡಲಲ್ಲಿ ಸುಪ್ತವಾಗಿದ್ದ ಉತ್ಸಾಹ ತಟ್ಟನೆ ಹೆಡೆಯೆತ್ತಿತ್ತು. ತನುಮನಗಳು ಹಗುರವಾದವು............ಪ್ರಸನ್ನಮುಖಿಯಾಗಿ ಒಳಬಂದ. ಚಂಗಪ್ಪ ಐಮರದ ಮೇಲೆ ಕುಳಿತು ಕಾವೇರಿಯೊಂದಿಗೆ ಮಾತುಕತೆಯಲ್ಲಿ ನಿಮಗ್ನನಾಗಿದ್ದ. ಸೋದರಳಿಯನ ದರ್ಶನವಾಗುತ್ತಲೂ ಅವನು ಅಲ್ಲಿಂದಲೇ ಸ್ವಾಗತಿಸಿದ.

"ಬಾಪ್ಪಾ, ಸದಾ ದುಡಿಯುವುದೇ ಆದರೆ ಮನರಂಜನೆಗೆಲ್ಲಿ ಸಮಯ?"

"ಅಷ್ಟೆಲ್ಲಾ ನಮ್ಮ ಹಣೆಯಲ್ಲಿ ಬರೆಯಲಿಲ್ಲ ಬಿಡು."

"ಯಾರೆಲ್ಲಾ ಏಕೆ ಬರೆಯಬೇಕು ? ನೀನೇ ಇರುವಾಗ !"

"ನಾನಿರಬಹುದು ; ಆದರೆ ಪಡೆದುಕೊಂಡು ಬರಲಿಲ್ಲ."

"ನೋಡು, ಅದೆಲ್ಲಾ ಕಲ್ಪನೆ. ನೀನೀಗ ಮನರಂಜನೆಯನ್ನು ಬಯಸಿದರೆ ಯಾರಾದರೂ ಬೇಡವೆಂದಾರೆಯೆ ?"

ಹಾಗಂತಲ್ಲ..."

"ನಿನ್ನಂತಹ ವ್ಯಕ್ತಿ ಸೋತರೆ ಇನ್ನು ಸ್ವಶಕ್ತಿ ಇರುವುದಾದರೂ ಯಾರಿಗೆ ?"

"ಸ್ವಶಕ್ತಿ ಇಲ್ಲದೇನು ಮಾವಾ ? ಎಲ್ಲಾ ಉಂಟು....ಯಾವುದು ಅಗತ್ಯವೋ ಅದಿಲ್ಲ."

"ಯಾವುದಿಲ್ಲವೋ ಅದಕ್ಕೆ ಇನ್ನೊಂದು ಹೊಂದಿಸಿಕೊಂಡರಾಯಿತು. ಯಾವುದಾದರೊಂದು ಇಲ್ಲದ ಮಾತ್ರಕ್ಕೆ ಬದುಕೇಕೆ ಬರಿದಾಗಬೇಕು ? ಈ ಜಗತ್ತು ಇಲ್ಲಿಗೆ ಮುಗಿಯಲಿಲ್ಲ."

ಸ್ನೇಹಮೇದುರ ನಯನಗಳಿಂದ ನೋಡುತ್ತ ಕೈಹಿಡಿದು ಪಕ್ಕದಲ್ಲಿ ಕುಳ್ಳಿರಿಸಿಕೊಂಡು ನುಡಿದ ಚಂಗಪ್ಪ, ಹೃದಯದಾಳದಲ್ಲಿ ಸಂಪೂರ್ಣ ಅಸ್ತಿತ್ವ ಪಡೆದ ಕಾತರ ಸಲಹೆ ಅಕ್ಷರ ಅಕ್ಷರದಲ್ಲೂ ಪ್ರತಿಧ್ವನಿತವಾಯಿತು. ತುಟಿಗಳಂಚಿನಲ್ಲಿ ಎಳೆನಗು ಮಿನುಗುತಿತ್ತು.

"ಹೊಂದಿಸಿಕೊಳ್ಳುವುದು ಕಷ್ಟವಲ್ಲ; ಮನಸ್ಸಿಲ್ಲ ಅಷ್ಟೆ."

ದನಿ ಅತ್ಯಂತ ಉದಾಸೀನದಿಂದ ಹೊರಬಿತ್ತು.

"ಹಾಗೆಂದರೆ ಏನು ಸಾಧಿಸಿದ ಹಾಗಾಯಿತು ?"

"ಇದಕ್ಕೂ ಮಿಕ್ಕಿದ ಯಾವ ಸಾಧನೆಯೂ ನನಗೆ ಬೇಡ."

"ಆ ಕತೆಯೆಲ್ಲಾ ಆಮೇಲೆ...ಇದುವರೆಗೆ ನಿನ್ನ ನೈರಾಶ್ಯಪೂರ್ಣ ಜೀವನ ನೋಡಿದ್ದಾಯ್ತು. ಇನ್ನೇನಾದರೂ ಒಂದು ಮಾರ್ಪಾಡು ಮಾಡಲೇ ಬೇಕೆಂದು ನಾನು ಈಗ ಬಂದದ್ದು !"

ಚಂಗಪ್ಪ ದೃಢ ಕಂಠದಿಂದ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ.

ಮಾದು ನೀರಸ ನಗು ಬೀರಿದ.

"ನಮ್ಮ ಬಂಧುಜೀವ ವಲಯವೇನೂ ಚಿಕ್ಕದಲ್ಲ; ನಿನ್ನ ಯಾವ ಬಯಕೆಯೂ ಈಡೇರಲಾರದಷ್ಟು ಕೊರತೆಯಿಲ್ಲ. ಏನು ಮಾಡಬೇಕೋ ಅದನ್ನೇ ಮಾಡೋಣ."

"ಸಧ್ಯ, ನೀವೇನೂ ಮಾಡುವುದು ಬೇಡ."

ಮಾದು ನಗುಮುಖದಿಂದ ನುಡಿದ.

ಕಾವೇರಿ ನಡುವೆ ಬಾಯಿ ಹಾಕಿದಳು,

"ನನಗೆ ಕಣ್ಮುಚ್ಚಿದರೆ ಸಾಕಾಗಿದೆ. ಆದರೆ ಈ ಅಶಾಂತ ಸ್ಥಿತಿಯಲ್ಲಿ ಕಣ್ಣು ಮುಚ್ಚಲು ಮನಸ್ಸು ಬರುವುದಿಲ್ಲ."

"ಓ....! ಹಾಗಿದ್ದರೆ ಶಾಂತಿ ಲಭಿಸುವುದೇ ಬೇಡ !"

ಮೂವರ ಮುಖದಲ್ಲೂ ಎಳೆನಗು ತುಂಬಿ ಹರಿಯಿತು.

……ಮೂರು ವರ್ಷಗಳ ನಂತರ……

೩೯

...ಅದೊಂದು ಜೇಷ್ಠ ಕಾಲೀನ ಮಧ್ಯಾಹ್ನ.

...ಆವರ ಪ್ರಾಂತದಲ್ಲಿ ಕಾವೇರಿ ಮಧುರ ಸಲಿಲ ಧಾರೆ !

ನೇರ ಹಾದಿಯಲ್ಲಿ ಒಂದೆರಡು ಹೆಜ್ಜೆಗಳನ್ನು ಮುಂದಿಟ್ಟ ವ್ಯಕ್ತಿ ಹಾಗೇ ಹಿಂದಿರುಗಿ ಬಂದ. ವೇದಲಹರಿಯಂತೆ ಹೊಮ್ಮುವ ವಾರಿರಾಶಿಯ ಮಂಜುಳ ರವ ಎಡೆಬಿಡದೆ ಕಿವಿಯ ಮೇಲೊರೆಯುತಿತ್ತು. ಒಂದೆರಡು ಘಳಿಗೆ ನಿಂತು ಆಲೈಸಿದ. ನಿಮ್ನೋನ್ನತ ಪ್ರದೇಶಗಳಲ್ಲಿ ಕಾವೇರಿ ಸಂಭ್ರಮದುಂಬಿದ ರಭಸ ದಿಂದ ಮುನ್ನುಗ್ಗುತಿದ್ದಾಳೆ. ಅತ್ಯಂತ ಅಭಿಮಾನ ತುಂಬಿದ ಒಕ್ಕಣ್ಣು ದಿಗಂತದಿಂದ ದಿಗಂತಕ್ಕೆ ದೃಗ್ ವಲಯವನ್ನು ನಿರ್ಮಿಸಿತು. ಹಾ! ಸಮ್ಯಕ್ ದೃಷ್ಟಿಗೆ ಎಂತಹ ಪವಿತ್ರಶ್ರೀ ! ಭಕ್ತಿಯ ಮಾದಕತೆಯಿಂದ ಅಂತರ್ನಿಹಿತ ಪಾಪ ಭಾವನೆಗಳು ಭಸ್ಮೀಭೂತವಾದಂತೆ ಭಾಸವಾಯಿತು. ಕಣ್ತುಂಬ ನೋಡುತ್ತ ನಿಂತ. ಹೃದಯ ಉಕ್ಕೇರಿ ಬಂತು. ಹಸುರುಡೆಯುಟ್ಟ ವನ ದೇವಿಯ ತೊಟ್ಟಿಲ ಶಿಶುವಾದರೂ ಭೂವಲಯವನ್ನೇ ಇಬ್ಭಾಗವಾಗಿಸಿದ ಕಾವೇರಿ ಸುನೀಲವಸನೆ....

ಸೈಕತರಾಶಿಯ ಶ್ರೀತಡಿಯನ್ನು ದಾಟಿ, ನದೀ ತಟಾಕದಲ್ಲಿ ನಿಂತಾಗ ಚಿತ್ತಕ್ಷೋಭೆ–ಉದ್ವಿಗ್ನತೆಗಳು ಪಲಾಯನ ಬೆಳೆಸಿದುವು. ಮೈಬಾಗಿ ಎರಡೂ ಕೈಗಳಿಂದ ನಮಸ್ಕರಿಸಿ ಬೊಗಸೆ ಬೊಗಸೆ ನೀರೆತ್ತಿ ಮುಖಮಜ್ಜನ ಮಾಡಿ, ಹೊಟ್ಟೆ ಹಿಡಿಸುವಷ್ಟು ಕುಡಿದ. ತನು ತಂಪಾಯಿತು; ಮನಸ್ಸು ಉಲ್ಲಾಸ ಗೊಂಡಿತು. ನೀರಿಗೆ ಮೈಯ್ಯಾಂತ ಕಗ್ಗಲ್ಲಿನ ಮೇಲೆ ಕುಳಿತು ಕಾಲುಗಳನ್ನು ಚಾಚಿದ. ತಂಪೂರೆವ ನೀರಿನ ಮೃದು ಸ್ಪರ್ಶ ಪಾದ ಪದ್ಮಗಳಿಗೆ ಮುದ್ದಿಡು ವಂತೆ ತೋರಿತು. ಹಾಗೆ ಅದೆಷ್ಟು ಹೊತ್ತು ಉರುಳಿತೋ. ಏಕಾಂಗಿಯಾ ದರೂ ಆ ಮುಹೂರ್ತ ಅತ್ಯಂತ ಸುಖದಾಯಕವಾಗಿತ್ತು. ಆದರೆ...ಆದರೆ ಎಷ್ಟೇ ಪ್ರಯತ್ನಿಸಿದರೂ ನಿರ್ಯೋಚನೆಯಿಂದ ಇರಲಾರ.ಮ ನೋಭೂಮಿಕೆ

ಯಲ್ಲಿ ಹಳೆಯ ನೆನಹುಗಳು ಬೇಡ ಬೇಡವೆಂದರೂ ನರ್ತಿಸತೊಡಗಿದುವು– ನಿಶ್ಶಬ್ದ ಪ್ರಕೃತಿಯ ಅಂತರಾಳದಲ್ಲಿ ಕೋಲಾಹಲವೆಬ್ಬಿಸುವಂತೆ.

ಪರ್ ಶಾಂತಿಯ ಅಂತರಾಳದಲ್ಲಿ ಜುಳು....ಜುಳು....ಜುಳು...ಜುಳು.... ಮಂಜುಳಗಾನ.

ಹೃದಯ ಸಮುದ್ರದ ಅಲೆಗಳಲ್ಲಿ ಗುಳು....ಗುಳು...ಗುಳು....ಗುಳು... ವೀತಗಾನ.

ಸಸ್ಯ ಶ್ಯಾಮಲ ವನರಾಜಿ ವರ್ಣರಂಜಿತ ತಳಿರುಗಳನ್ನಾಂತು ಉತ್ಸವಕ್ಕೆ ಅಣಿಯಾದ ತೇರಿನಂತೆ ದರ್ಶಕರನ್ನು ಆಕರ್ಶಿಸುವಂತಿದೆ. ವ್ಯಕ್ತಿ ಆನಂದಾನುಭವದಲ್ಲಿ ಮೈಮರೆತು ಆ ಅದ್ಭುತ ಶಾಂತಿಯಲ್ಲಿ ಲೀಯಮಾನನಾದ. ಶೀಕರ ಸಿಕ್ತವಾಯು ಉದ್ವಿಗ್ನ ಚಿತ್ತವನ್ನು ಪರಿಷ್ಕೃತಗೊಳಿಸಿತು... ವ್ಯಕ್ತಿ ಎದ್ದುನಿಂತ, ತೊಟ್ಟ ಬಟ್ಟೆ ಕೊಳಕಾಗಿತ್ತು. ಒಮ್ಮೆ ಒಗೆದು ತೊಟ್ಟು ಕೊಳ್ಳುವ ಯೋಚನೆಯೂ ಬಂತು. ಆದರೆ ಮರುಕ್ಷಣದಲ್ಲಿಯೇ ಗುಡ್ಡದಂತಹ ಉದಾಸೀನ ...ಬೆಟ್ಟದಂತಹ ತಾತ್ಸಾರ.

ತಾಯಿ ಕಾವೇರಿಗೆ ಮೈಬಾಗಿ ನಮಸ್ಕರಿಸಿ ಹೊರಟ. ನದೀಪಾತ್ರದಿಂದ ರಸ್ತೆಗೆ ಕಾಲಿಟ್ಟಾಗ ಹಾದಿಗರನೇಕರು ಎದುರಾದರು. ಅದರಲ್ಲಿ ಕೆಲವರು ಹುಟ್ಟುಕೊಡವರು. ಒಬ್ಬಿಬ್ಬರಲ್ಲಿ ದೂರ ಪರಿಚಿತ ಮುಖಚರ್ಯೆಯ ಛಾಯೆ ಕಾಣಿಸುತಿತ್ತು. ಆದರೆ, ಖಚಿತವಾಗಿ ಊಹಿಸುವುದು ಕಷ್ಟ. ಅಷ್ಟು ಮಾತ್ರವಲ್ಲ; ಈಗ ಯಾರ ಸಹವಾಸವೂ ಬೇಡ, ಅವರು ನನ್ನನ್ನು ಗುರುತಿಸದಿದ್ದರೆ ಸಾಕು ಎಂಬ ಮನೋಭಾವನೆ....ಒಂದೆರಡು ಮಾರು ಹೋಗುವುದರೊಳಗಾಗಿ ಇನ್ನೂ ಕೆಲವರ ದರ್ಶನವಾಯಿತು. ಇಬ್ಬರು ಪ್ರೌಢ ಮಹಿಳೆಯರು, ಒಬ್ಬ ವೃದ್ಧೆ, ನಾಲ್ಕಾರು ಮಂದಿ ಗಂಡಸರು ಒಬ್ಬ ಬಾಲಕ. ಅವರಲ್ಲಿ ಯಾರಾದರೂ ಪರಿಚಿತರೋ ಕಾಲಾಂತರದಲ್ಲಿ ಆದ ಪರಿವರ್ತನೆಯಿಂದ ಗುರುತು ಹತ್ತದಿರಬಹುದು ಎಂಬ ಯೋಚನೆಯಿಂದ ಅತ್ಯಂತ ಸೂಕ್ಷ್ಮವಾಗಿ ಅವರನ್ನು ಗಮನಿಸಿದ. ಆದರೂ, ಯಾರ ಪರಿಚಯವೂ ಹತ್ತಲಿಲ್ಲ. ಆ ಮಂದಿ ನಗೆ ಮಾತುಗಳಲ್ಲಿ ಮೈಮರೆತು ಮುಂದೆ ಸಾಗಿಹೋದರು.

ಎದೆಯ ಬನದಲ್ಲಿ ಹೃದಯ ನಿಕುಂಜ ಬೆಂದು ಬೆಂಗಾಡಾಗಿತ್ತು,
ಅಕಳಂಕ ಚಿತ್ತ ಚಿಂತಾಬ್ಧಿಯಲ್ಲಿ ಮುಳುಗೇಳುತಿತ್ತು.

ಕೆಂಧೂಳೀಮಯವಾದ ರಸ್ತೆಯ ಇಕ್ಕೆಲಗಳಲ್ಲಿ ವನಶ್ರೀ ಕೆಂಧೂಳೀ ಧೂಸರಿತವಾಗಿತ್ತು. ಆ ಭಾಸಮಾನ ತಡಿಯು ದೃಶ್ಯಮಾನ ಸೌಂದರ್ಯ ಸ್ಮೃತಿಯನ್ನು ಗತಕಾಲಕ್ಕೊಯ್ದು ನೆಲೆ ನಿಲ್ಲಿಸಿತು. ಬಾಲ್ಯ, ಕೌಮಾರ್ಯ, ತಾರುಣ್ಯಗಳ ಕಾಲಮಾನವೆಲ್ಲ ಚಿತ್ರಭಿತ್ತಿಯಲ್ಲಿ ತೇಲಿ ನಲಿಯಿತು....ಹೃದಯಂಗಮವಾದ ಅನೇಕಾನೇಕ ಚಿತ್ರಗಳು ಮತ್ತೆ ಮತ್ತೆ ಸುಳಿದಳಿದುವು.

ವನಧಾತ್ರಿಯನ್ನು ಹಿಂದೆ ಬಿಟ್ಟು ತೋಟದ ಹಾದಿಯನ್ನು ಹಿಡಿಯುತ್ತಲೂ ಹಾದಿಗರು ಹೆಚ್ಚುಹೆಚ್ಚಾಗಿ ಅಕ್ಷಿ ಗೋಚರಿಸಹತ್ತಿದರು. ಮುಖ ಬಿಂಬದಲ್ಲಿ ಕಾಂತಿಯುಕ್ಕುವ ಚಿನ್ಮುಖಿ ಮಹಿಳೆಯರು, ಚೆಂಗುಲಾಬಿಗಳಂತಹ ಮನಮೋಹಕ ಮಕ್ಕಳು, ಚಿಗುರು ಮಿಾಸೆಯ ತರುಣರು, ಹಿರಿಯ ವಯಸ್ಸಿನ ಮಹನೀಯರು, ತೋಟದಾಳುಗಳು, ಊರೊಕ್ಕಲುಗಳು ಲಿಪಿಹೀನ ಸ್ವಭಾಷೆ, ಹಸುರು ಸೂಸುವ ಕಾಫಿ ಗಿಡಗಳು, ಮನಮೋಹಕ ತಂಪು ಎಲ್ಲವನ್ನೂ ನಿಡುಗಣ್ಣಿನಿಂದ ಬಗೆಗಣ್ಣಿನಿಂದ ನೋಡುತ್ತಾ ಆತ ಮುಂದುವರಿದ. ಎದುರು ಬದುರಾಗಿ ಬಂದ ಹಿರಿಯರನ್ನು ಸಾಂಪ್ರದಾಯಿಕವಾಗಿ ಕಿರಿಯರು ಕಾಲು ಮುಟ್ಟಿ ನಮಸ್ಕರಿಸಿದರು. ಅದನ್ನೋಡಿದಾಗ ತಾನೂ ಆ ಹಿರಿಯರಿಗೆ ನಮಸ್ಕರಿಸಲೇ ಎಂಬ ಭಾವನೆ ಮೂಡಿ ಸಂಪ್ರದಾಯ ಶರಣತೆ ದಮನಿಗಳಲ್ಲಿ ಧುಮುಧುಮಿಸಹತ್ತಿತು.

ಆದರೆ...ಆದರೆ ಎದೆಯಲ್ಲಿ ಏನೋ ಒಂದು ಬಗೆಯ ಅಳುಕು....ಅನುಭವಿಸಲಾಗದ ಸಂಕಟ...ತಾಳಲಾಗದ ಯಾತನೆ....ಸಹಿಸಲಾಗದ ನೋವು.

ಮುಂದೆ ಧವಳವಸನಧಾರೀ ಶವವಾಹಕರು ದೃಗ್ಗೋಚರಿಸಿದರು. ಬಹಳ ಮಂದಿ ಭಾಗವಹಿಸಿದ್ದುದರಿಂದ ಮೃತ ಮಹನೀಯ ಗಣ್ಯ ವ್ಯಕ್ತಿಯೇ ಇರಬೇಕು ಎನಿಸಿತು. ಶವವಾಹಕರು ಶೋಕರಾಗದಿಂದ ಹಾಡುತಿದ್ದರು.

ಕೆಟ್ಟಿರೋ ಅಜ್ಜಯ್ಯ ನಿಂಗ
ಕೆಟ್ಟನಕೆ ಕೆಟ್‌ಲೇ ಅಜ್ಜಯ್ಯ
ಚೋತಿರೋ ಅಜ್ಜಯ್ಯ ನಿಂಗ
ಚೋತನ್ನ ಕೆಚೋತಿಲೇ ಅಜ್ಜಯ್ಯ
....

ಅಂತರ್ವಾಣಿ ಮೆಲ್ಲನೆ ದನಿಗೂಡಿಸಿತು. ಕುತೂಹಲ ತೃಷಿತ ನೋಟ ಎಲ್ಲರ ಮೇಲೂ ಹರಿದಾಡಿತು. ಆ ಗುಂಪು ಶೋಕಗೀತವನ್ನು ಬಿತ್ತರಿಸುತ್ತ

ಮುಂದೆ ಸಾಗಿ ಹೋಗುವವರೆಗೂ ಗಮನಿಸಿದ. ಅವರಲ್ಲಿ ಯಾರ್ಯಾರೋ ಗುರುತಿನವರೆಂದು ಅಂತರಂಗ ಚಡಪಡಿಸಿತು. ಆದರೆ ಮರು ಕ್ಷಣದಲ್ಲಿ ಏನೋ ಒಂದು ಬಗೆಯ ಸಂಕೋಚ ಮೂಡಿ ಮೋಳಿತ ಭಾವನೆಗಳೆಲ್ಲ ಅಲ್ಲಿಂದಲ್ಲೇ ಸಮಾಧಿ ಹೊಂದಿದಂತೆ ಸ್ತಬ್ಧವಾಯಿತು ಅಶಾಂತ–ಆಕುಲಿತ ಚಿತ್ತ. ಗುಂಪನ್ನು ಹಿಂದೆ ಬಿಟ್ಟು ಅವನು ಮುಂದೆ ಹೋದ. ನಡೆದೂ ನಡೆದೂ ಕಾಲುಗಳು ಬಳಲಿವೆ, ಸ್ವಲ್ಪ ಹೊತ್ತು ಕುಳಿತು ವಿಶ್ರಮಿಸಿಕೊಳ್ಳೋಣ ಎಂಬ ಹಂಬಲ. ಆದರೆ ಸಂಜೆಯಾಗುವುದರೊಳಗೆ ಗಮ್ಯಸ್ಥಾನವನ್ನು ಸೇರಿಕೊಳ್ಳಬೇಕಾದುದೂ ಉಂಟು. ಕಾಫಿತೋಟದ ಸುಂದರ ಹಾದಿಯನ್ನು ಆತ್ಮವಿಸ್ಮೃತಿಯಲ್ಲಿ ಕಳೆದ. ಮುಂದೆ ಸ್ವಲ್ಪ ದೂರ ಬಿದಿರು ಮೆಳೆಗಳಿಂದ ಕೂಡಿದ ಬಯಲು ಪ್ರದೇಶ ; ಅಲ್ಲಲ್ಲಿ ಕೊರಳ ಗೆಜ್ಜೆ ಸರಗಳನ್ನು ಹೊಂದಿದ ಕರುಗಳು, ಎತ್ತು, ದನ, ಗೋವಳರು ಕಾಣುತಿದ್ದರು. ಹತ್ತಿರದಲ್ಲೆಲ್ಲೋ ಯಾರದೋ ಮನೆ ಇರಬಹುದು ಎನಿಸುವುದರೊಳಗಾಗಿ ತಗ್ಗು ಪ್ರದೇಶದಲ್ಲಿ ಬಾಳೆಯ ಮರಗಳು ಕಾಣಿಸಿಕೊಂಡುವು. ಜೀವನದ ಮೌಲ್ಯವನ್ನು ಗಮನಿಸಿದಾಗ ಎದೆಯಾಳದಿಂದ ನಿಟ್ಟುಸಿರೊಂದು ತಪ್ಪಿಸಿಕೊಂಡಿತು. ಪುನಃಪುನಃ ಅತ್ತಲೇ ದೃಷ್ಟಿಯನ್ನು ಹೊರಳಿಸುತ್ತ ಮುಂದುವರಿದ....ಯಾರ ಬಾಳಿನಲ್ಲೂ ಅದೃಷ್ಟ ದುರದೃಷ್ಟಗಳು ಶಾಶ್ವತವಲ್ಲ...ಅದನ್ನನುಭವಿಸಿದ ಅಪಾರವಾದ ಅನುಭವ ಶಾಶ್ವತವಾದುದು....ಎಂದು ಕೂಗಿ ಹೇಳಿತು ತಾಪದಗ್ಧ ಅಂತರಂಗ.

ವನವನಾಂತರಗಳ ದಟ್ಟವಾದ ಹಸುರಿನ ಆಟ್ಟಣೆಯಲ್ಲಿ ಅಲ್ಲಲ್ಲಿ ತೂರಿ ಇಳಿಬಿದ್ದ ಬಿಸಿಲ್ಕೋಲುಗಳು ದೀರ್ಘದೀರ್ಘಾಯುತ ಸ್ವರ್ಣ ಸಲಾಕೆಗಳಂತೆ ತೋರುತಿದ್ದುವು. ಅಶಕ್ತ ಶರೀರದಲ್ಲಿ ಮಮತೆಯ ಝರಿ ಹರಿದಾಡಿದಾಗ ಶರೀರ ಅತ್ತಿತ್ತ ತೇಲುತ್ತಿರುವಂತೆ ಉದ್ಭಾಸಿತವಾಯಿತು. ಮನಃಪ್ರಾಣಗಳಲ್ಲಿ ಮೆಲ್ಲನೆ ಮೂಡಿಬಂದ ಧಾರ್ಮಿಕ ಉತ್ತೇಜನ ಅಮೃತವಾರಿಯಂತೆ ತೊಟ್ಟಿಕ್ಕಿತು-ಅಪ್ರತ್ಯಾಶಿತ ಭಾವಶಕ್ತಿಗೆ ಪ್ರಮಾಣವಾಗುವಂತೆ.

"ಏನೇ ಇರಲಿ, ಭವ್ಯ ಭವಿತವ್ಯದ ವಿನಾಶಕ್ಕೆ ನೀನು ಕಾರಣವಾಗಬಾರದು ಮಗೂ!" ಅಂತರ್ವಾಣಿ ಎದೆಯಾಳದಲ್ಲಿ ಬಿತ್ತರಿಸಿತು.

"ಹಾಗಾದರೆ... ?" ಭುಗಿಲೆದ್ದಿತು ಚಿತ್ತ.

"ಈಗ ಹೆಚ್ಚಿನ ಆಸ್ತೆ ಸಲ್ಲ."

"ಈ ಪರ್ಯಂತ ಕಷ್ಟನಷ್ಟಕ್ಕೊಳಗಾದ ಜೀವಕ್ಕೆ ಒಂದಿಷ್ಟು ಶಾಂತಿ ಬೇಡವೆ ?"

ಆ ಪ್ರಶ್ನೆಯಿಂದ ಅನುತಪ್ತ ವಾಯುಮಂಡಲ ಸುಯ್ಯನೆ ಸುಯ್ಯಿತು.

"ಬೇಕು....ನಿಜ; ಆದರೆ ನಿನ್ನ ಪುನರ್ ಪ್ರವೇಶದಿಂದ ಕುಟುಂಬಿಗರ ಶಾಂತಿ ಕಳೆಯಬಾರದು ಮಗೂ !"

"ಅಂದರೆ....?"

"ದುಡುಕದೆ ಪ್ರಸ್ತುತ ಪರಿಸ್ಥಿತಿಗೆ ಹೊಂದಿಕೊ."

"......"

"ಈ ಕರ್ಮಾನುಬಂಧಕ್ಕೆ ಯಾರ್ಯಾರೂ ಕಾರಣರಲ್ಲ ಮಗೂ ... ! ಅರ್ಥಾತ್ ವಿಧಿ ನಿಯಾಮಕ."

ತಲೆ ಸಿಡಿದು ಸಹಸ್ರ ಸಹಸ್ರ ಹೋಳಾಗುತ್ತಿರುವಂತೆ ಭಾಸವಾಯಿತು. ಭ್ರಮಿತ ಚಿಂತಿತ ವ್ಯಕ್ತಿ ತಲೆಬಾಗಿ ಹೆಜ್ಜೆ ಹಾಕಿದ. ಹೆಜ್ಜೆಗಳು ಎಲ್ಲೂ ನಿಲ್ಲದೆ ತಂಗದೆ ಮುಂದುವರಿದುವು, ಬಯಲು ಪ್ರದೇಶವನ್ನು ದಾಟಿದ ನಂತರ ಪುನಃ ತೋಟದ ಪ್ರದೇಶ, ಕಾಫಿ ಗಿಡಗಳು ಹಸುರುಚೆಲ್ಲುತ್ತ ನಳನಳಿಸುತ್ತಿವೆ. ನೋಡಿದಷ್ಟೂ ಮುಗಿಯದ ಘನ ವಿಸ್ತಾರ. ವಿಧವಿಧ ವೃಕ್ಷರಾಜಿಯ ಸುಂದರ ವನಶ್ರೀ.

ರಸ್ತೆಯ ಪಕ್ಕದಲ್ಲಿ ತರುಣರಿಬ್ಬರು ಹಲಸಿನ ಹಣ್ಣನ್ನು ಮೆಲ್ಲುತಿದ್ದರು. ಆ ಹಣ್ಣನ್ನು ನೋಡುತ್ತಲೂ ಬಾಯಲ್ಲಿ ನೀರೂರಿತು ವ್ಯಕ್ತಿ ಅಂಗಲಾಚಿದ,

"ನನಗಿಷ್ಟು ಕೊಡುವಿರಾ ?

ತರುಣರಿಬ್ಬರೂ ಕೆಲವು ಕ್ಷಣ ಅಪರಿಚಿತ ವ್ಯಕ್ತಿಯನ್ನು ನಿಟ್ಟಿಸಿ ನೋಡಿದರು. ಒಕ್ಕಣ್ಣು, ಜಜ್ಜಿದ ಮೂಗು, ಹಳ್ಳ ಬಿದ್ದು ಗಂಟುಗಂಟಾದ ಕಪೋಲ, ವಕ್ರಭುಜ, ಬಚ್ಚಬಾಯಿ, ಅಲ್ಲಲ್ಲಿ ಕುರುಚಲು ಗಡ್ಡ, ವಿಕಾರವೇ ಮೈವೆತ್ತು ಬಂದಂತಿದ್ದ ವಿಕೃತ ರೂಪು, ತತ್ಫಲವಾಗಿ ನೋಡಿದೊಡನೆಯೇ ಅಸಹ್ಯಿಸಿಕೊಂಡರೂ ಅನಂತರ ಒಡಲು ಕರುಣೆಯಿಂದ ತುಂಬಿತು. ನಾಲ್ಕೈದು ತೊಳೆಗಳನ್ನು ಅವನ ಕೈಗಿಟ್ಟರು. ಬಹಳ ವರ್ಷಗಳ ನಂತರ ಕಂಡ ಅಮೋಘವಾದ ರುಚಿ ಹಸಿವನ್ನು ಇಮ್ಮಡಿಗೊಳಿಸಿತು.

"ತುಂಬ ಹಸಿವು. ಇನ್ನಿಷ್ಟು ಕೊಡುವಿರಾ ?"

"ಆಯಿತು, ತೆಗೆದುಕೊ...."

ಹಣ್ಣನ್ನು ಬಾಯಿತುಂಬ ಮೆಲ್ಲುತ್ತ ಒಡಕು ಸ್ವರವನ್ನು ಹೊರಹಾಕಿದ,

"ನಿಮಗೆ ಬಾಗಂಡ ಕಾರಿಯಪ್ಪ ಗೊತ್ತೇ ?"

"ಇಲ್ಲ."

"ಅವರ ಮಕ್ಕಳು ?"

ಒಂದು ಘಳಿಗೆ ಯೋಚಿಸಿ ತರುಣ ಕೇಳಿದ,

"ಅವರ ಹೆಸರೇನು ?"

"ಬಾಗಂಡ ಮುದ್ದಪ್ಪ–ಮಾದಯ್ಯ."

"ಮುದ್ದಪ್ಪ ಸತ್ತು ಬಹಳ ವರ್ಷಗಳಾದುವು; ಯುದ್ಧಕ್ಕೆ ಹೋದವನು ಹಿಂತಿರುಗಿ ಬರಲಿಲ್ಲ."

"ಓ...ಹೋ !" ಉದ್ಗಾರ ಹತೋತ್ಸಾಹದಿಂದ ಹೊರಬಿತ್ತು.

"ಅವನ ಕುಟುಂಬ ?"

ಆ ಪ್ರಶ್ನೆ ಹೊರ ಹಾಕಿದಾಗ ಏನೋ ಒಂದು ಬಗೆಯ ಅರ್ಥಭರಿತ ಉಷ್ಣೋಷ್ಣ ಶಂಕೆ-ಕಳವಳ ಮನವನ್ನು ಕ್ಷಣಮಾತ್ರದಲ್ಲಿ ವ್ಯಾಪಿಸಿ ಮೈಯ್ಯಲ್ಲಿ ನಸು ಕಂಪನದ ಅಲೆ ಹರಿದಾಡಿತು.

"ಅದು ನಮಗೆ ಅಷ್ಟಾಗಿ ತಿಳಿಯದು."

ಕುತೂಹಲ–ಕಾತರ ತೃಷಿತ ಮನಕ್ಕೆ ಉತ್ತರದಿಂದ ತೃಪ್ತಿ ಮೂಡ ಲಿಲ್ಲ. ಒಂದು ಘಳಿಗೆ ಯೋಚಿಸಿ ನಿರ್ವಿಣ್ಣನಾಗಿ ನಿಶ್ಶೇಷಭಾವದಿಂದ ಪುನಃ ಕೇಳಿದ "ಬಾಗಂಡ ಮಾದಯ್ಯ ?"

"ನಾವು ಆ ಕಡೆ ಹೋಗಿ ಯಾವ ಕಾಲವೋ....ಅಲ್ಲಿಯವರ ವಿಚಾರ ನಮಗೆ ಏನೇನೂ ತಿಳಿಯದು."

"ಏಕೆ ಅವರ ವಿಚಾರ ? ಅವರೇನಾದರೂ ನಿನಗೆ ಸಂಬಂಧಿಗಳೇ ?"

"ಇಲ್ಲ....ಇಲ್ಲ. ಒಂದಾನೊಂದು ಕಾಲದಲ್ಲಿ ಅವರ ಪರಿಚಯವಿತ್ತು ; ಸಿಕ್ಕಿದರೆ ನೋಡಿ ಹೋಗುವ ಮನಸ್ಸು, ಅಷ್ಟೆ."

ಹೊಟ್ಟೆ ಹಿಡಿಯುವಷ್ಟು ತಿಂದು ಅವನು ಅಲ್ಲಿಂದ ಹೊರಟ.

ಅದೇ ರಸ್ತೆ...ಅದೇದಾರಿ. ಅಂದು ಹೇಗಿತ್ತೋ ಇಂದೂ ಹಾಗೆಯೇ ಇವೆ. ಪ್ರಕೃತಿವಲಯದಲ್ಲಿ ಕಿಂಚಿತ್ತೂ ಬದಲಾವಣೆ ಕಾಣಿಸುತ್ತಿಲ್ಲ... ಅಂದಮೇಲೆ...?

ತೋಟದ ಪ್ರಶಾಂತ ವಾತಾವರಣ ಮೈಗೆ ಹುರುಪು ನೀಡಿತು: ಟಾರು ಬಳಿದ ಕರಿಯ ಹೆದ್ದಾರಿಗೆ ಕಾಲಿಟ್ಟಾಗ ಸೂರ್ಯ ತಂಗುವುದರಲ್ಲಿದ್ದ. ಸಾಂಧ್ಯ ಮೇಘಾಂತರಿತ ರಾಗಾರುಣ ದೀಪ್ತಿ ಭುವಿಯ ಮೇಲೆ ಪ್ರಭಾವರ್ಷಣಗೈಯ್ಯುತಿತ್ತು. ಗೂಡನ್ನರಸುತ್ತ ಗಿಡಮರಗಳನ್ನಾಶ್ರಯಿಸಿದ ಸಕಲ ಪಕ್ಷಿ ಸಂಕುಲದ ಮನಮೋಹಕ ಇಂಚರ ಕಿವಿಯಮೇಲೆ ಬೀಳುತಿತ್ತು. ಹೆದ್ದಾರಿಯಲ್ಲಿ ಒಂದೆರಡು ಫರ್ಲಾಂಗುಗಳಷ್ಟು ನಡೆದುಬಲಕ್ಕೆ ತಿರುಗಿ ಗದ್ದೆಯ ಕೋಗಿಗೆ ಕಾಲಿಟ್ಟಾಗ ಸ್ಥಳ ನಿರ್ಮಾನುಷವಾಗಿತ್ತು. ಅಂದಿಂದಿಗೂ ಆ ಪ್ರದೇಶದಲ್ಲಿ ಯಾವ ಬದಲಾವಣೆಯೂ ಕಾಣಿಸುತ್ತಿಲ್ಲ. ಎಡಬಲಗಳಲ್ಲಿ ನನೆ ಕೊನೆಯೇರಿದ ಬೇಸಗೆ ಬೆಳೆಯ ವಿಶಾಲವಾದ ಭೂಮಿ ದೃಷ್ಟಿಗೆ ಬೀಳುತ್ತಲೂ ಮೈಪುಳಕಿತವಾಯಿತು. ಏನೋ ಒಂದು ಬಗೆಯ ಉದ್ವಿಗ್ನತೆಯಿಂದ ಹೃದಯ ವ್ಯಾಪ್ತಿಗೆ ಮೀರಿ ಮಿಡಿಯಹತ್ತಿತು. ತಲೆಯ ತುಂಬ ಹಲವಾರು ಯೋಚನೆಗಳು ತುಂಬಿಕೊಂಡುವು. ಮನಸ್ಸು ಯಾವುದೋ ಅಜ್ಞಾತ ಭಯದಿಂದ ಕಲಕಿತವಾಯಿತು. ಕಾಲುಗಳು ಸೋತುಹೋದಂತೆ ಶರೀರ ಭಾರಾಕ್ರಾಂತವಾಯಿತು. ಗದ್ದೆಯಕೋಗನ್ನು ದಾಟಿ ಬಯಲು ಪ್ರದೇಶದ ಉಬ್ಬು ದಾರಿಯನ್ನು ಹತ್ತಲಾರದೆ ಹತ್ತಿ, ಮೇಲೆ–ಮೇಲೆ... ಇನ್ನೂ ಮೇಲೇರಿ ಹೋದ.

ಇಳೆಯನ್ನು ಮುಸ್ಸಂಜೆಯ ಎಳೆಗಪ್ಪು ಆವರಿಸಿತ್ತು.

ಏರು ದಾರಿಯನ್ನು ಕಳೆದು, ಕೆಳಮಟ್ಟಿಯ ಸಾಲು ಮೆಟ್ಟಿಲುಗಳನ್ನು ಹತ್ತಿ ಮೇಲಕ್ಕೆ ಬಂದು, ಬೇಲಿಯ ಸಾಲನ್ನು ದಾಟಿ ಮನೆಯ ಅಂಗಳಕ್ಕೆ ಕಾಲಿಟ್ಟಾಗ ಎಂಟೊಂಬತ್ತು ವರ್ಷಗಳ ಬಾಲಿಕೆಯರು ಕಣ್ಗೋಚರಿಸಿದರು. ಆಟದಲ್ಲಿ ನಿಮಗ್ನರಾಗಿದ್ದ ಅವರು ಹೆಜ್ಜೆಯ ಸಪ್ಪಳವನ್ನು ಕೇಳಿ ಇತ್ತಲೇ ನಿಟ್ಟಿಸಿದರು. ಅಪರಿಚಿತ ವ್ಯಕ್ತಿಯ ದರ್ಶನ ತುಸು ಅಚ್ಚರಿ ಮೂಡಿಸಿದರೂ ಒಂದು ಘಳಿಗೆ ತಡೆದು ಮುಂದೆ ಬಂದು ಇಬ್ಬರೂ ಕಾಲು ಮುಟ್ಟಿ ನಮಸ್ಕರಿಸಿದರು. ಚೆಂದಾವರೆಯ ಮೊಗ್ಗಿನಂತಹ ಮುದ್ದು ಮುದ್ದು ಮಕ್ಕಳನ್ನು ನೋಡಿ ಮುದ್ದಿಟ್ಟುಕೊಳ್ಳೋಣ ಎಂಬಷ್ಟು ಪ್ರೀತಿ ಮನದಲ್ಲಿ ಉದಿಸಿತು. ಆದರೆ ಆ ಎಳೆಯ ಮುಖದ ಮೇಲೆ ಮೂಡಿದ ಭಯ ಭೀತಿಯ ಛಾಯೆಯನ್ನು ನೋಡಿ ಮುಗುಳು ನಕ್ಕು ಕೇಳಿದ,

"ಮಾದಯ್ಯ ಮನೆಯಲ್ಲಿದ್ದಾನೇನು ?"

ಅಭಾಗ್ಯನೂ, ಅಪರಿಚಿತನೂ ಆದ ವಿಚಿತ್ರ ವ್ಯಕ್ತಿಯನ್ನು ಆಶ್ಚರ್ಯ ತೃಷಿತ ಲೋಚನಗಳಿಂದ ನೋಡುತ್ತ ಆತಂಕಿತ ಮನದಿಂದ ಯಂತ್ರಿತಳಂತೆ ಏನೋ ಒಂದು ಬಗೆಯಲ್ಲಿ ಉತ್ತರ ನೀಡಿದಳು ಗಂಗಾಬಾಲೆ "ಅವರಿಲ್ಲ; ನಾಮಕರಣಕ್ಕೆ ಹೋಗಿದ್ದಾರೆ."

ಆಗಂತುಕನನ್ನು ಒಂದೆರಡು ಕ್ಷಣ ನಿಟ್ಟಿಸಿ ಶಾಂತ ಗಂಭೀರ ಮುದ್ರೆಯಿಂದ "ಅಪ್ಪ ಇದ್ದಾರೆ." ಎಂದಳು ತಂಗಾ ಸೋದರಿ.

ಆಗ ವ್ಯಕ್ತಿ ಆನಂದಗದ್ಗದನಾಗಿ "ಓ....ಇದ್ದಾರೆಯೇ ? ಅವರಿದ್ದರೆ ಸಾಕಲ್ಲ; ಮಾದು ಬರುವುದೆಷ್ಟೊತ್ತಿಗೆ ?"

ಕತ್ತಲಾಗುವುದರೊಳಗಾಗಿ ಬಂದಾರು."

ಹಾಲು ಸಕ್ಕರೆಯ ಝರಿ ಹರಿದು ಬಂದಂತೆ ಮನಕ್ಕಾನಂದವನ್ನೂಡಿಸಿತು ಕಿಸಲಯ ಕೋಮಲ ದನಿ....ಒಂದಿಷ್ಟು ಮುಟ್ಟೋಣ ಎಂಬಷ್ಟು ಹುರುಪು ಮೈಯ್ಯಲ್ಲಿ.ಆದರೂ, ಪರಿಸ್ಥಿತಿಯ ಒತ್ತಡಕ್ಕೆ ಮಣಿದು, ಮನೋದಧಿಯ ಸುಖ-ದುಃಖಗಳ ಅಲೆಗಳನ್ನೆಲ್ಲ ಒಂದೆಡೆ ಕ್ರೋಢೀಕರಿಸಿ ಅದುಮಿಟ್ಟು ಮಂದಹಾಸವನ್ನು ಬೀರಿ ಕೇಳಿದ "ಪೂವಿ ಇದ್ದಾಳೆಯೆ ?"

"ಅವರೂ ಹೋಗಿದ್ದಾರೆ."

ಆಗಂತುಕನ ಮುಖದಲ್ಲಿ ಸಂತಸದ ಮುದ್ರೆಯೊತ್ತಿದಂತೆ, ಗಂಟು ಗಂಟಾಗಿ ಹಳ್ಳಬಿದ್ದಿದ್ದ ಕಪೋಲಪಾಲಿ ಮತ್ತು ಚಿತ್ರವಿಚಿತ್ರವಾಗಿದ್ದ ಗಡ್ಡ ವಿನ್ಯಾಸ ಸ್ವಲ್ಪ ಉಬ್ಬಿನಿಂತು ತುಟಿಗಳು ಬಿರಿದುವು. ಉಬ್ಬುಹಲ್ಲಿನ-ಹರುಕು ಬಾಯಿನ ಒಳ ಪ್ರಪಂಚ ಅನಿರೀಕ್ಷಿತವಾಗಿ ಪ್ರದರ್ಶಿತವಾಯಿತು. ಆತ ಮಂದಹಾಸ ಬೀರಿ ಕೇಳಿದ" ಎಲ್ಲಿ ನಾಮಕರಣ ?"

"ಜಂಬೂರಿನಲ್ಲಿ."

ಮಾತುಕತೆಯ ದನಿ ಕೇಳಿ ಕಾವೇರಿ ಹೊರಬಂದಳು. ಆ ಒಕ್ಕಣ್ಣಿನ ವಿಕಾರರೂಪೀ ಅತಿಥಿಯನ್ನು ನೋಡಿ ತುಸು ತಬ್ಬಿಬ್ಬಾದರೂ ಔಪಚಾರಿಕವಾಗಿ ನುಡಿ ಹೊರಬಿತ್ತು "ಬನ್ನಿ, ಒಳಗೆ."

ಧವಳಾಂಬರಧಾರಿಣೀ ಮಾತಾಮಯಿಯನ್ನು ನೋಡುತ್ತಲೂ ಹೃದಯ ಹಾಲ್ಗಡಲಂತೆ ಉಕ್ಕೇರಿ ಬಂತು. ವ್ಯಕ್ತಿ ನಾಲ್ಕು ಹೆಜ್ಜೆ ಮುಂದುವರಿದು ನಮ್ರತೆಯಿಂದ ನಮಸ್ಕರಿಸಿ ಚರಣ ಧೂಳಿ ಸ್ವೀಕರಿಸಿದ. ಒಂದೆರಡು ಕ್ಷಣ

ಯೋಚಿಸಿ ಬೆರಗು ಗಣ್ಣುಗಳಿಂದ ನಿಟ್ಟಿಸುತ್ತ ಕಾವೇರಿ,

"ಯಾರು... ನೀವು? ಈಚೆಗೆ ನನ್ನ ಕಣ್ಣುಗಳೂ ಮಂಜು ಮಂಜಾಗಿವೆ; ಗುರುತು ಸಿಗಲಿಲ್ಲ."

"ನಾ...ನಾ...."

"ಸಖೇದಾಶ್ಚರ್ಯತುಂಬಿದ ನೋಟದಿಂದ ನೋಡುತ್ತ ನಿಂತುಬಿಟ್ಟಳು ವೃದ್ಧ ಜನನಿ. ಮುಖಮುದ್ರೆಯಲ್ಲಿ ಭಾವವಿಭಾವದ ಅಲೆ ಸುಳಿಸುಳಿದಾಡಿ ಹೋಯಿತು, ಕಣ್ಣುಗಳಲ್ಲಿ ಆಚ್ಚರಿಯ ನೆರೆಯುಕ್ಕಿಬಂತು. ನೆಟ್ಟ ದಿಟ್ಟಿ ಅಲ್ಲಿಂದ ಚಲಿಸಲಿಲ್ಲ.

"ಯಾರು....ನೀವು...ನೀ...."

ವ್ಯಕ್ತಿ ಬಾಯ್ದೆರೆಯುವುದರೊಳಗಾಗಿ ಜನನಿ ನಡುವೆ ಬಾಯಿ ಹಾಕಿದಳು,

"ಅಯ್ಯೋ....ಮುದ್ದೂ !"

"ಹೌದು....ನಾನು ಮುದ್ದು !"

"ಅಯ್ಯೋ ಶಿವನೆ ! ಯಾವಸ್ಥಿತಿಯಾಗಿ ಬಂದಿದ್ದಿ ? ಯಾವ ತಪ್ಪಿಗಾಗಿ ಭಗವಂತ ನಿನಗೆ ಈ ಶಿಕ್ಷೆ ಕೊಟ್ಟ? ನೀನು ಸತ್ತುಹೋದೆ ಎಂದು ಸುದ್ದಿ ಕೊಟ್ಟಿತಲ್ಲ ಸರಕಾರ? ನಿನ್ನೀ ಸ್ಥಿತಿಯನ್ನು ನೋಡಲೆಂದೇ ನನ್ನ ಕಣ್ಣುಗಳು ಇಂಗಿಹೋಗದೆ ಉಳಿದುವೇ ?"

ದುಃಖ ಪೂರ್ಣವಾದ ಧ್ವನಿ ಕರುಳು ಕಿತ್ತು ಬರುವಂತೆ ಹರಿದುಬಂತು– ಸುತ್ತಮುತ್ತಿನ ಪ್ರಕೃತಿ ವೈಭವದಲ್ಲಿ ಕರುಣ ದ್ರವ ಒಸರುವಂತೆ. ಮುದ್ದಪ್ಪ ಮುಂದೆ ಬಂದು ಎರಡೂ ಕೈಗಳಿಂದ ಅಪ್ಪಿಕೊಂಡ. ಇಬ್ಬರ ಕಣ್ಣುಗಳಲ್ಲೂ ದುಃಖಾಶ್ರು ಧಾರೆಧಾರೆಯಾಗಿ ಇಳಿಯಿತು. ಜನನಿ ದೀರ್ಣವಿದೀರ್ಣವಾದ ಧ್ವನಿಯಲ್ಲಿ ನುಡಿದಳು "ನೀನಿಲ್ಲವೆಂದೇ ನಾವೆಲ್ಲ ತಿಳಿದೆವು. ನಿನಗೇಕೆ ಈ ದುರ್ಗತಿ ಬಂತು ಮಗನೆ ? ನಿನ್ನನ್ನು ಹೇಗೆ ನೋಡಲಿ ನಾನು ?"

ವೃದ್ಧ ಜನನಿಯ ಬತ್ತಿದ ಕಣ್ಣುಗಳಲ್ಲಿ ವಾರಿಧಾರೆ ಚಿಮ್ಮಿ ಬರುತ್ತಲೇ ಇತ್ತು. ಎರಡೂ ಕೈಗಳಿಂದ ಮುಖ ಮೈಗಳನ್ನು ನೇವರಿಸಿ ಮುದ್ದಿಟ್ಟು ಕೊಂಡಳು. ಏನಾದರೂ ಹೇಳೋಣವೆಂದರೂ ಸಂತೈಸೋಣವೆಂದರೂ ನಾಲಿಗೆ ಅಲುಗುತ್ತಲೇ ಇಲ್ಲ. ದೇಹದಾದ್ಯಂತ ಲಘು ಕಂಪನದ ಅಲೆ ಚಿಲ್ಲನೆ ಹರಿ

ದಾಡುತಿತ್ತು. ಬೆಂಕಿಯಲ್ಲಿ ಬಾಡಿಸಿದ ಎಲೆಯಂತೆ ಮುಖಮಂಡಲ ಬಾಡಿ ಹೋಯಿತು. ಶ್ರಮಬಿಂದುಗಳು ಹಣೆಯ ಮೇಲೆ ಮೂಡಿದವು.

ಮುದ್ದಪ್ಪ ಒಕ್ಕಣ್ಣನ್ನೂ ಮುಖವನ್ನೂ ತೀಡಿಕೊಂಡ. ಮುಖ ಕಣ್ಣು ಗಳಲ್ಲಿ ರಂಗೊರೆದಿತ್ತು. ಎದೆಯ ಬನದಲ್ಲಿ ಸುಖದುಃಖಗಳ ಅಲೆ ಉಕ್ಕೇರು ತಿತ್ತು. ಪ್ರಯತ್ನಪೂರ್ವಕವಾಗಿ ಒಂದೆರಡು ಘಳಿಗೆಯಲ್ಲಿ ತನ್ನನ್ನು ತಾನು ಹತೋಟಿಗೆ ತೆಗೆದುಕೊಳ್ಳುತ್ತ "ಏನೋ ಆಯಿತು. ಹೋಗಲಿಬಿಡಿ; ಬದುಕಿ ಬಂದಿದ್ದೇನೆ, ಮತ್ತೇಕೆ ಅಳು ?"

ಬಾಲಕಿಯರಿಬ್ಬರೂ ಬೆಕ್ಕಸ ಬೆರಗಾಗಿ ಮಂತ್ರಮುಗ್ಧರಂತೆ, ಅಭಿಭೂತ ರಂತೆ ಆ ವಿಚಿತ್ರವನ್ನು ಮೂರ್ತಿಮತ್ತಾಗಿ ನೋಡುತ್ತ ನಿಂತುಬಿಟ್ಟರು. ತನು ಮನಗಳು ಅಚ್ಚರಿಯ ಬೀಡಾಗಿದ್ದುವು, ಪರಸ್ಪರ ಮುಖ ನೋಡಿಕೊಂಡರು. ಕಣ್ಣುಗಳ ಭಾವ ಕೂಗಿ ಕೇಳಿತು "ಯಾರೇ ಅದು ?—ಯಾರೇ ಅದು ?"

"ಇವರ್ಯಾರು, ಮೂದೂ ಮಕ್ಕಳೇ ಅವ್ವಾ ?" ಮುದ್ದು ಕೇಳಿದ.

"ಹೌದು."

"ಚಿಟ್ಟೆ ಮನು ಎಲ್ಲಿ ?"

"ಮಡಿಕೇರಿಯಲ್ಲಿ ಓದುತಿದ್ದಾರೆ."

"ಪೂವಿ...?"

ಎದೆಯಾಳದಲ್ಲಿ ತುಂಬಿದ ಯಾವುದೋ ಅನಿರ್ವಚನೀಯ ಅಜ್ಞಾತ ಭಯ ಗಂಟಲನ್ನು ಅದುಮಿ ಹಿಡಿದು ನರನಾಡಿಗಳಲ್ಲಿ ವಿದ್ಯುಲ್ಲಹರಿಯಂತೆ ಹರಿದಾಡಿ ಮನಃಪ್ರಾಂತವನ್ನು ಸೀಳಿ ಧೀಂಕಿಡುತಿತ್ತು. ಅಡಿಯಿಂದ ಮುಡಿ ಯವರೆಗೆ ರೋಮ ರೋಮಗಳೂ ನಿಮಿರಿ ನಿಂತುವು.

"ಅವಳೂ ಹೋಗಿದ್ದಾಳೆ." ಅತ್ಯಂತ ವಿಜಾತೀಯವಾದ ದನಿಯಲ್ಲಿ ನುಡಿದು "ಒಳಗೆ ಬಾ ಮಗನೆ! ಬಹಳ ದಣಿದಿದ್ದಿ. ಈಗ ನಿನ್ನೊಂದಿಗೆ ಹೇಳುವುದು-ಮಾತಾಡುವುದು ಬಹಳವಿದೆ."

ಮುದ್ದಪ್ಪ ಮೆಟ್ಟಿಲು ಹತ್ತಿ ಜನನಿಯೊಂದಿಗೆ ಒಳಬಂದ.

ಸಂಧ್ಯಾಜ್ಯೋತಿ ಉರಿಯುತಿತ್ತು.

ಆ ಅನಿರ್ವಚನೀಯವಾದ ಶಾಂತ–ಪ್ರಶಾಂತ ವಾತಾವರಣ,ನಾಲ್ಕೈದು ತಲೆಮಾರಿನ ಮನೆ, ಸ್ವರ್ಗ ಸದೃಶ ಜನನಿ; ಕಷ್ಟನಷ್ಟಗಳಿಗೊಳಗಾಗಿ ಬದುಕಿ ಬಂದ ಅಪೂರ್ವ ಸುಯೋಗ...ಒಂದೊಂದೂ ಮಂತ್ರಾಕ್ಷತೆಯನ್ನೆರೆಚಿ

ದಂತೆ ಆತನನ್ನು ಮಂತ್ರಮುಗ್ಧನನ್ನಾಗಿಸಿದುವು-

ಹೊಸ ವ್ಯಕ್ತಿಯ ಜಾಡು ಹಿಡಿದು ಕಟ್ಟಿದ್ದ ಕಡೆಯೇ ಲಿಲ್ಲಿ ಬೊಗಳ ತೊಡಗಿತು.

ವೃದ್ಧ ಜನನಿ ಒಂದು ದೊಡ್ಡ ಲೋಟಿಯ ತುಂಬ ಪುಷ್ಕಳವಾದ ಹಾಲನ್ನು ತಂದು ಅವನ ಕೈಗಿತ್ತು ಕಂಪಿತಸ್ವರದಿಂದ "ಈ ಅಮೃತವನ್ನು ಕೈಯ್ಯಲಿಟ್ಟುಕೊಂಡು ಭಾಷೆ ಕೊಡು,ಮಗನೆ!...ಖಂಡಿತ ಇಲ್ಲಿನ ಯಾವುದೇ ವಿಚಾರವನ್ನು ನೀನು ಮನಸ್ಸಿಗೆ ಹಚ್ಚಿಕೊಳ್ಳಬಾರದು."

"ಹಾಗೆಂದರೆ....?"

"ಸಂಸಾರ ಎಂದರೆ ಕಷ್ಟಸುಖಗಳಿದ್ದೇ ಇರುತ್ತವೆ. ಏನೇ ಇರಲಿ, ಶಾಂತಿಯಿಂದ ಸ್ವೀಕರಿಸು...ತಲೆ ಕೆಡಿಸಿಕೊಳ್ಳಬೇಡ."

"ಏನು....ಹೇಳಿಬಿಡಿ."

"ನಾಲ್ಕು ಮಂದಿ ತಬ್ಬಲಿ ಮಕ್ಕಳಿಗಾಗಿ-ಈ ಮನೆಯ ಹಿತಕ್ಕಾಗಿ ಏನೇನೋ ನಡೆದು ಹೋಗಿದೆ....ಇದರಲ್ಲಿ ಯಾರ ತಪ್ಪೂ ಇಲ್ಲ....ಎಲ್ಲಾ ಮಾದೇವನ ಲೀಲೆ..." ಕಂಠಸ್ವನ ದುಃಖಗದ್ಗದವಾಯಿತು.

"ಹೇಳಿ...!"

"ನೀನು ಮರಣವನ್ನೈದ ಸುದ್ದಿ ಬಂದಮೇಲೆ ಬೇರೆ ದಾರಿಯೇ ಇರಲಿಲ್ಲ."

"ಹೇಳಿ...!"

ಒಂದು ಘಳಿಗೆಯ ಮುಂಚೆ ಕಾರುಣ್ಯವೇ ಮೈವೆತ್ತು ಬಂದಂತಿದ್ದ ಜನನಿ ಭಯಭೀತಿಯ ಊಟಿಯಾದಳು. ಗಂಟಲಾರಿ ಸ್ವರಸ್ಥಾನ ಅಲ್ಲಿಂದಲ್ಲೆ ಉಡುಗುತ್ತಿರುವಂತೆ ಭಾಸವಾಯಿತು. ಏನು ಹೇಳಬೇಕೋ ಹೊಳೆಯುತ್ತಿಲ್ಲ. ಶಕ್ತಿಯೆಲ್ಲಾ ಉಡುಗಿ ಹೋದಂತೆ, ಹೃದಯ ಸಂಪುಟ ಈಗಲೀಗ ಬಿರಿಯು ತ್ತಿರುವಂತೆ ವೃದ್ಧೆ ತೊದಲಿದಳು. ಆಕೆಯ ಮನಸ್ಥಿತಿಯನ್ನು ಗ್ರಹಿಸುತ್ತಲೂ ತನ್ನೊಳಗೇ ನಿತಾಂತ ವೇದನೆಯನ್ನನುಭವಿಸಿ ತನಗೆ ತಾನೇ ಅಂಕುಶವಾಗಿ ಆರ್ತಸ್ವರದಲ್ಲಿ ಮುದ್ದಪ್ಪ ಅಂದ "ವಿಧಿ....!"

"......."

"ಏನಾಯಿತು ಹೇಳಿಬಿಡಿ.ಇನ್ನೇಕೆ ಹುದುಗಿಟ್ಟು ನನ್ನನ್ನು ಕೊಲ್ಲುವಿರಿ?"

"ಏನೇ ಇರಲಿ, ದೇವರಿಗಾಗಿ-ಈ ಸಣ್ಣ ಸಣ್ಣ ಮಕ್ಕಳಿಗಾಗಿ ಸಹಿಸಿಕೊ

ಮಗೂ !" ದೈನ್ಯವಾಣಿ ಕ್ಷೀಣಗತಿಯಲ್ಲಿ ಮೊಳಗಿತು.

"ಹೇಳಿ !"

"ಯಾರಿಗೂ ನಿನ್ನ ಮೇಲೆ ದ್ವೇಷ...."

"ಹೇ...ಳಿ....!"

"ನಾಲ್ಕು ತಬ್ಬಲಿ ಮಕ್ಕಳ ಕ್ಷೇಮಕ್ಕಾಗಿ ಆಕೆ ಪರಸ್ತ್ರೀಯಾಗಲೇ ಬೇಕಾಯಿತು. ಪೂವಿ ಈಗ ನಿನ್ನ ತಮ್ಮನ ಮಡದಿ !"

ಮಾದೇವನ ಗುಡಿಯಿಂದ ಅದೇ ವೇಳೆಗೆ ಘಂಟಾರವ ಕೇಳಿ ಬಂತು.

ಢಣ್. ಢಣ್. ಢಣ್. ಢಣ್.

ಜನನಿ ಆರ್ತತೆಯಿಂದ ಮುದ್ದಪ್ಪನ ಕಡೆ ನಿಟ್ಟಿಸಿದಳು. ಅವನು ರುದ್ರ ಗಂಭೀರನಾಗಿದ್ದ; ಶೂನ್ಯ ದೃಷ್ಟಿ ನಿಶ್ಚಲವಾಗಿತ್ತು.

ಮುದ್ದಪ್ಪ ಸ್ವಲ್ಪ ಹೊತ್ತು ಚಿಂತಿಸಿದ. ಮುಖದಮೇಲೆ ಬೆವರು ಹುಚ್ಚೆದ್ದು ಬಸಿಯ ತೊಡಗಿತು. ದೇಹದಾದ್ಯಂತ ನಸುಕಂಪನದ ಅಲೆ ಹರಿದಾಡಿ ಹೋಯಿತು. ಏನೋ ಒಂದು ರೀತಿಯಲ್ಲಿ ಅತ್ಯಂತ ಪ್ರಯತ್ನ ಪೂರ್ವಕವಾಗಿ ಕಳೆದುಳಿದ ಶಕ್ತಿಯನ್ನೆಲ್ಲಾ ಕೇಂದ್ರೀಕರಿಸಿಕೊಳ್ಳುತ್ತ ದೃಢವಾದ ಸ್ವರದಲ್ಲಿ ಪ್ರಯತ್ನಿಸಿದ "ಚಂಗಪ್ಪ ಮಾಮ ಇದ್ದಾರೆಯೆ ?"

"ಇದ್ದಾನೆ."

ಮುದ್ದಪ್ಪ ಎದ್ದು ನಿಂತ. ಮನಃಪ್ರಾಣಗಳ ಉದ್ವೇಗದಿಂದ ತಲೆ ಛಿದ್ರ ಛಿದ್ರವಾಗುತ್ತಿರುವಂತೆ ಭಾಸವಾಯಿತು. ಎರಡೂ ಕೈಗಳಿಂದ ತಲೆಯನ್ನು ಅದುಮಿ ಹಿಡಿದುಕೊಂಡ. ಹೃದಯ ವ್ಯಾಪ್ತಿಗೆ ಮೀರಿ ಮಿಡಿಯತೊಡಗಿತು. ಆ ಮನೆ ನೀಡಿದ 'ಗೃಹ ಸೌಖ್ಯ' ಚಿತ್ರ ಭಿತ್ತಿಯಲ್ಲಿ ಸುಳಿದಳಿಯಿತು. ಧವಳಾಂಬರಧಾರಿಣಿ ವೃದ್ಧ ಜನನಿ ಕಿಂಕರ್ತವ್ಯವಿಮೂಢಳಾಗಿ ನಿಂತ ಭಂಗಿ ತೂಗು ದೀಪದ ಉಜ್ವಲ ಕಾಂತಿಯಲ್ಲಿ ಚಿತ್ರಿತ ಶೋಭೆಯಂತೆ ಕಂಗೊಳಿಸಿತು. ಭಾವೋದ್ವೇಗದಿಂದ ಆಕೆಯ ಚರಣಗಳಿಗೆ ನಮಸ್ಕರಿಸಿ ಆತ್ಮೀಯ ಆಲಿಂಗನ ನೀಡಿ "ದೈವೇಚ್ಛೆ ! ನೀವೇನೂ ಬೇಸರಪಟ್ಟುಕೊಳ್ಳಬೇಡಿ." ಎಂದವನೇ ಮೆಟ್ಟಿಲಿಳಿದ.

"ಒಬ್ಬನೇ ಹೋಗಬೇಡ. ನಾನೂ ಬರುವೆ." ಎಂದಳು ಜನನಿ.

ಶುಕ್ಲಪಕ್ಷದ ಚಂದ್ರಮ ಧವಳಕಾಂತಿಯನ್ನೆರಚುತ್ತ ಮೂಡಣದಂಚಿನಲ್ಲಿ

ಮೂಡಿ ಬಂದ.

ಬಾಳಿನ ಭವ್ಯ ಸಂಜೆಯಲ್ಲಿ ತನ್ನೊಂದಿಗೆ ಹೊರಟು ನಿಂತ ಜನನಿಯನ್ನು ಒಂದೆರಡು ಕ್ಷಣ ನಿಟ್ಟಿಸಿ ನೋಡಿದ ಮುದ್ದಪ್ಪ. ಶೀರ್ಣಿತ ಮುಖಮಂಡಲದಲ್ಲಿ ಕಳೆದುಳಿದ ಖಳೆ ಕ್ರೋಢೀಕರಿಸಿದಂತೆ ಬೆಳಗುತಿತ್ತು.

ಪೂರ್ವೀ ಆಕಾಶದಲ್ಲಿ ಆವಿರ್ಭೂತ ಪೂರ್ಣಚಂದ್ರಮ ಲೀಲಾಲೋಲುಪ್ತಿಯಲ್ಲಿ ಮುಗಿಲದಿಣ್ಣೆಯನ್ನು ಏರಿದ್ದ. ಧವಳಾಮೃತಧಾರೆ ವನವನಾಂತರದ ಮೇಲೆ ರಜತಜಾಲದಂತೆ ಮನೋರಮ ವೈಖರಿಯಲ್ಲಿ ತಂಬಿಹರಡಿತ್ತು.

ಅದೇ ಸಮಯದಲ್ಲಿ ಮಾದು ಮಡದಿಯೊಡನೆ ಒಳ ಬಂದ. ಪಚ್ಚಾಂಬರಧಾರಿಣಿ ಪೂವಿ ಪ್ರೌಢ ಗಂಭೀರ ಶೋಭೆಯಿಂದ ವನದೇವಿಯಂತೆ ಕಣ್ಗೆಸೆದಳು.

— ಸಂಪೂರ್ಣಂ —

ಮಲ್ಲಿಕಾ ಕೃತಿಗಳು

ಕಾದಂಬರಿಗಳು

೧) ಜೀವನಗಂಗಾ
೨) ಡಾ|| ಅಘೋರ
೩) ಡಾ|| ಕಮಲೇಶ್
೪) ವಂದೇ ಮಾತರಂ
೫) ಅನಂತಾನಂತದೆಡೆಗೆ
೬) ಮನೋನ್ಮಣಿ
೭) ಸಂತ್ರಾಸಿನಿ
೮) ಆಸೆಯ ಸುಳಿಯಲ್ಲಿ
೯) ಪದ್ಮಾಲಯ
೧೦) ಶ್ರದ್ಧಾಲಯ

(ಕಥಾ ಸಂಕಲನ)

೧೧) ಬಹುರತ್ನಾವಸುಂಧರಾ
೧೨) ರತ್ನಗರ್ಭಾವಸುಂಧರಾ
೧೩) ಸುಧಾಮಣಿ
೧೪) ರಮಣೀಮಣಿ
೧೫) ಲಿಯೋನಾ
೧೬) ಶ್ರೀಮುಖಿ
೧೭) ಶ್ರೀಹರ್ಷಲಾ
೧೮) ವೈಶಾಖೀ ಪರ್ವ
೧೯) ಫಾಲ್ಗುಣೀ ಪರ್ವ
೨೦) ಮಣಿಮೇಖಲಾ
೨೧) ಮಣಿಕರ್ಣಿಕಾ
೨೨) ಪೂಜಾವಸಾನ ಸಮಯೇ....!
೨೩) ಧ್ಯಾನಾವಸಾನ ಸಮಯೇ....!
೨೪) ಗಗನ ಕುಸುಮ
೨೫) ಜೀವನಕುಸುಮ
೨೬) ಚಂಪಕ ರಾಜಿ
೨೭) ಬಕುಳ ರಾಜಿ
೨೮) ಕಸ್ತೂರಿ ಮಾಲಿಕಾ
೨೯) ಮಂದಾರ ಮಾಲಿಕಾ

ಮಲ್ಲಿಕಾ ಕೃತಿಗಳು

(ಕವಿತಾ ಸಂಕಲನ)

೩೦) ವಿಜಯ ಗಾಥಾ
೩೧) ಗಾನ ತೀರ್ಥ
೩೨) ನಾದ ಬಿಂದು
೩೩) ಕಾವ್ಯಾನಂದ ನಂದಿನಿ
೩೪) ಭಾವಾನಂದ ನಂದಿನಿ
೩೫) ಸಂಗೀತ ಪುಷ್ಪಾಂಜಲಿ
೩೬) ಆತ್ಮ ಗೀತಾಂಜಲಿ

(ಸಂಜೀವನ ಕಾವ್ಯ)

೩೭) ಮಂಗಳ ಭಾರತಿ
೩೮) ಕಲ್ಯಾಣ ಭಾರತಿ
೩೯) ಉತ್ತರೋತ್ತರಣಿ
೪೦) ರಾಗಾನುರಾಗಿಣಿ
೪೧) ಪ್ರಫುಲ್ಲ ಭಾರತ

(ಪೌರಾಣಿಕ ನಾಟಕ)

೪೨) ಪುಣ್ಯಪಯೋನಿಧಿ
೪೩) ಪುಣ್ಯಾಭಿಸಾರ

(ಸಾನೆಟ್‌ಗಳು)

೪೪) ತರಂಗಿಣಿ

(ಗದ್ಯ ಕಾವ್ಯ)

೪೫) ಐಂದ್ರ ಕೀರ್ತಿ ಕೇತನಂ

(ಉಪನಿಷತ್ಕಥಾ)

೪೬) ಕೃತಂ ಸ್ಮರ ಕ್ರತುಂ ಸ್ಮರ

(ಶಿಶು ಸಾಹಿತ್ಯ)

೪೭) ದೂರ ದೇಶದಲ್ಲಿ
೪೮) ಬೆಳದಿಂಗಳ ರಾತ್ರಿ
೪೯) ರಂಗನ ಸಾಹಸ
೫೦) ಓಹಿಯೋಜ ಸರೋವರ
೫೧) ಕೌಶಿಕನ ಗೊಂಬೆ
೫೨) ವಿಶೇಷ ಸುದ್ದಿ
೫೩) ಕಲ್ಯಾಣಿ ರಾಗಿಣಿ

ಲಕ್ಷ್ಮೀ ಪ್ರಕಾಶನ

ನಂ. 359, 14ನೇ ಅಡ್ಡ ರಸ್ತೆ, ಸದಾಶಿವನಗರ, ಬೆಂಗಳೂರು—560 080